ಮಾನವಿಕ ಕರ್ಣಾಟಕ

ಸಂಪುಟ ೧೭ ಸಂಚಿಕೆ ೧-೨

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೮೬-೮೭

ಲೇಖಕರಿಗೆ ಸೂಚನೆಗಳು

೧ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಸ್ವತಂತ್ರ ಅಥವಾ ಅನುವಾದಿತ ಲೇಖನಗಳನ್ನು 'ಮಾನವಿಕ ಕರ್ಣಾಟಕ'ದಲ್ಲಿ ಪ್ರಕಟಿಸಲಾಗುವುದು. ಲೇಖನ ಅನುವಾದವಾಗಿದ್ದರೆ ಮೂಲ ಲೇಖಕರ ಮತ್ತು ಲೇಖನದ ಹೆಸರುಗಳನ್ನೂ ಲೇಖನದ ಆಕರವನ್ನೂ ಸೂಚಿಸಬೇಕಲ್ಲದೆ ಮೂಲ ಲೇಖಕರ ಅಥವಾ ಪ್ರಕಾಶಕರ ಸಮ್ಮತಿಯನ್ನೂ ಲೇಖನದೊಂದಿಗೆ ಕಳುಹಿಸಬೇಕು.

೨ ಲೇಖನವನ್ನು ಕಾಗದದ ಒಂದೇ ಬದಿಯಲ್ಲಿ ಸ್ಪಷ್ಟವಾಗಿ ಬರೆದಿರಬೇಕು; ಅಥವಾ ಟೈಪು ಮಾಡಿರಬೇಕು. ಲೇಖಕರು ತಮ್ಮ ಲೇಖನದೊಂದಿಗೆ ತಮ್ಮ ಸಂಕ್ಷಿಪ್ತ ಪರಿಚಯವನ್ನು ಕಳುಹಿಸಿಕೊಡಬೇಕು.

೩ ಲೇಖನಕ್ಕೆ ಅವಶ್ಯಕವಾದ ಚಿತ್ರಗಳಿದ್ದರೆ ಅದನ್ನು ಚಿತ್ರಕಾರರಿಂದ ಇಂಡಿಯನ್ ಇಂಕಿನಲ್ಲಿ ಬರೆಸಿ ಕಳುಹಿಸಿಕೊಡಬೇಕು. ಇದು ಸಾಧ್ಯವಾಗದಿದ್ದರೆ ಯಾವುದಾದರೂ ಪ್ರಕಟಿತ ಪುಸ್ತಕದಲ್ಲಿರುವ ಚಿತ್ರಗಳನ್ನು ಸೂಚಿಸಬಹುದು; ಅವುಗಳಲ್ಲಿ ಬದಲಾವಣೆಗಳೇನಾದರೂ ಅವಶ್ಯವಿದ್ದರೆ ಅವನನ್ನೂ ಸೂಚಿಸಬೇಕು.

೪ ಸ್ವೀಕೃತವಾಗದ ಲೇಖನವನ್ನು ಹಿಂದಕ್ಕೆ ಪಡೆಯಬಯಸುವವರು ಈ ಬಗ್ಗೆ ತಿಳಿಸಬೇಕಲ್ಲದೆ ಇದಕ್ಕೆ ಸಾಕಷ್ಟು ಅಂಚೆ ಚೀಟಿ ಕಳುಹಿಸಿಕೊಡಬೇಕು.

೫ ಅಚ್ಚಾದ ಲೇಖನದ ೨೫ ಪ್ರತಿಗಳನ್ನು ಅದರ ಲೇಖಕರಿಗೆ ಒದಗಿಸಲಾಗುವುದು. ಹೆಚ್ಚು ಪ್ರತಿಗಳು ಬೇಕಾಗಿದ್ದರೆ ಮೊದಲೇ ತಿಳಿಸಬೇಕು. ಅದಕ್ಕೆ ತಗಲುವ ವೆಚ್ಚವನ್ನು ಲೇಖಕರೇ ವಹಿಸಿಕೊಳ್ಳಬೇಕು.

೬ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಿಗೆ ಸಂಬಂಧಿಸಿದಂತೆ ವಾಚಕರಿಂದ ಬರುವ ವಿಚಾರಪ್ರಚೋದಕವಾದ ಪತ್ರಗಳಿಗೆ ಸ್ವಾಗತವುಂಟು. ಇವುಗಳನ್ನು ಪ್ರಕಟಿಸುವ, ಬಿಡುವ ಅಥವಾ ಸೂಕ್ತ ಬದಲಾವಣೆಯೊಂದಿಗೆ ಪ್ರಕಟಿಸುವ ಸ್ವಾತಂತ್ರ್ಯ ಸಂಪಾದಕರಿಗೆ ಸೇರಿದೆ.

೭ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಕನ್ನಡ ಅಥವಾ ಇಂಗ್ಲಿಷ್ ಪುಸ್ತಕಗಳನ್ನು ವಿಮರ್ಶೆಗಾಗಿ ಕಳುಹಿಸಬಯಸುವವರು ಅವುಗಳ ಎರಡೆರಡು ಪ್ರತಿ ಕಳುಹಿಸಿ ಕೊಡಬೇಕು.

೮ ಲೇಖನಗಳನ್ನೂ ವಿಮರ್ಶೆಗಾಗಿ ಪುಸ್ತಕಗಳನ್ನೂ ಕಳುಹಿಸುವವರು ಸಂಪಾದಕರು, ಮಾನವಿಕ ಕರ್ಣಾಟಕ, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು-೫೭೦ ೦೦೬ ಎಂಬ ವಿಳಾಸಕ್ಕೆ ಕಳುಹಿಸಬೇಕು.

ಮಾನವಿಕ ಕರ್ಣಾಟಕ

ಸಂಪುಟ ೧೭; ಸಂಚಿಕೆ ೧-೨

೭೫-೭೭

ನವಂಬರ್ ೮೬—ಫೆಬ್ರುವರಿ ೮೭ ಸಂಚಿಕೆ

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೮೬-೮೭

MANAVIKA KARNATAKA, Kannada Quarterly of the *University of Mysore*, Volume 17, Numbers 1-2 November 1986, and February 1987, Edited by Dr. B. K. Gururaja Rao.

ಪ್ರಧಾನ ಸಂಪಾದಕರು

ಡಾ॥ ಎಚ್. ತಿಪ್ಪೇರುದ್ರಸ್ವಾಮಿ

ಸಂಪಾದಕರು

ಡಾ॥ ಬಿ. ಕೆ. ಗುರುರಾಜ ರಾವ್

೨೧ ೧೦. ೧೯೮೭

ಪ್ರಕಾಶಕರು

ಕೆ. ಟಿ. ವೀರಪ್ಪ

ನಿರ್ದೇಶಕರು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು–೬

ಮುದ್ರಕರು

ಎನ್. ಹನುಮಯ್ಯ

ನಿರ್ದೇಶಕರು, ಮೈಸೂರು ವಿಶ್ವವಿದ್ಯಾನಿಲಯ ಮುದ್ರಣಾಲಯ

ಮೈಸೂರು–೫೭೦ ೦೦೬

ವಿಷಯ ಸೂಚಿಕೆ

ಈ ಸಂಚಿಕೆಯ ಲೇಖಕರು

೧ ಎಂ. ಬಿ. ಮಂಜುನಾಥಾಚಾರ್	S/o ಭದ್ರಾಚಾರ್, ಮಣಿಕುಪ್ಪೆ–೫೭೨೧೨೦ ಸಿಂಗೋನಹಳ್ಳಿ ಅಂಚೆ, ಹೆಬ್ಬೂರು ಮಾರ್ಗ, ತುಮಕೂರು ಜಿಲ್ಲೆ
೨ ಜಿ. ಪುರುಷೋತ್ತಮ	ಅಖಿಲ ಭಾರತ ವಾಕ್–ಶ್ರವಣ ಸಂಸ್ಥೆ, ಮೈಸೂರು–೫೭೦೦೦೬
೩ ಕೆ. ಕೆಂಪೇಗೌಡ	ಪ್ರವಾಚಕರು, ಭಾಷಾ ವಿಜ್ಞಾನ ವಿಭಾಗ, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ ಮೈಸೂರು–೬
೪ ಎಸ್. ಸಿ. ಪಾಟೀಲ	ಉಪನ್ಯಾಸಕ, ಎನ್. ಜಿ. ವ್ಹಿ. ಕಾಲೇಜು ಉಪ್ಪಿನಬೆಟಗೇರಿ, ಧಾರವಾಡ ಜಿಲ್ಲೆ
೫ ಪುರುಷೋತ್ತಮ ಬಿಳಿಮಲೆ	ಕನ್ನಡ ಉಪನ್ಯಾಸಕರು, ಮಂಗಳಗಂಗೋತ್ರಿ ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳೂರು–೫೭೪೧೯೯
೬ ಮಾವಿನಕುಳಿ ಶ್ರೀನಿವಾಸ	ಸಮಾಜಶಾಸ್ತ್ರ ಅಧ್ಯಾಪಕ, ಅಂಚೆ ಮತ್ತು ತೆರಪಿನ ಶಿಕ್ಷಣ ಸಂಸ್ಥೆ, ಮಾನಸಗಂಗೋತ್ರಿ ಮೈಸೂರು–೬
೭ ಎಲ್. ಎಸ್. ಕಪನಿಗೌಡ	ಸಹಾಯಕ ಸಂಶೋಧಕ, ಮಾನವಶಾಸ್ತ್ರ ವಿಭಾಗ, ಮಾನಸಗಂಗೋತ್ರಿ, ಮೈಸೂರು–೬
೮. ಪಿ. ಅಬ್ದುಲ್ ಸತ್ತಾರ್	೧೭೦/೩, ಎನ್. ಎಂ. ರಸ್ತೆ, ಪಾಂಡವಪುರ–೫೭೧೪೩೪
೯ ಆರ್. ರಾಮಕೃಷ್ಣ	ಸಹಾಯಕ ಸಂಪಾದಕ, ಕನ್ನಡ ವಿಶ್ವಕೋಶ ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ ಮೈಸೂರು–೬
೧೦ ಸಿ. ಪಿ. ರಾಮಶೇಷ್	ಸಹಾಯಕ ಗ್ರಂಥಪಾಲಕ, ಮೈಸೂರು ವಿಶ್ವ ವಿದ್ಯಾನಿಲಯ ಗ್ರಂಥಾಲಯ, ಮಾನಸ ಗಂಗೋತ್ರಿ, ಮೈಸೂರು–೬
೧೧ ಜಿ. ನಾಗರಾಜ	ರಾಜ್ಯಶಾಸ್ತ್ರ ಉಪನ್ಯಾಸಕ, ಭುವನೇಂದ್ರ ಕಾಲೇಜು, ಕಾರ್ಕಳ–೫೭೪೧೦೪
೧೨ ಜಿ. ಎನ್. ಕುಂದರಗಿ	ಪ್ರವಾಚಕರು, ತತ್ವಶಾಸ್ತ್ರ ವಿಭಾಗ, ಮಾನಸ ಗಂಗೋತ್ರಿ, ಮೈಸೂರು–೬

೧೩. ಸೋಮೇಗೌಡ ಬೆಣಗನಹಳ್ಳಿ	ಸಮಾಜಶಾಸ್ತ್ರ ವಿಭಾಗ, ಎಸ್. ಎ. ಸಿ. ಪ್ರಥಮ ದರ್ಜೆ ಕಾಲೇಜು, ಚನ್ನರಾಯಪಟ್ಟಣ–೫೭೩೧೧೬
೧೪ ಕೆ. ಎಸ್. ರಾಮಕೃಷ್ಣರಾವ್	ನಿವೃತ್ತ ತತ್ವಶಾಸ್ತ್ರ ಪ್ರಾಧ್ಯಾಪಕರು, ೩೯, ೧ನೇ ಮುಖ್ಯರಸ್ತೆ, ಜಯಲಕ್ಷ್ಮಿಪುರಂ ಮೈಸೂರು–೧೨
೧೫ ಬಾ. ರಾ. ಗೋಪಾಲ್	ಇತಿಹಾಸ ಪ್ರಾಧ್ಯಾಪಕರು, ಕೃಷ್ಣದೇವರಾಯ ವಿಶ್ವವಿದ್ಯಾನಿಲಯ, ಅನಂತಪುರ–೫೧೫೦೦೩ ಆಂಧ್ರಪ್ರದೇಶ್
೧೬ ಯಮುನಾಬಾಯಿ ಆರ್. ರಾವ್	'ಶ್ರೀ', ೪೮೯, ೧೨ನೇ ಮುಖ್ಯರಸ್ತೆ, ಸರಸ್ವತಿಪುರಂ, ಮೈಸೂರು–೬
೧೭ ವೈ. ಎಸ್. ಸಿದ್ಧೇಗೌಡ	ಅಧ್ಯಾಪಕರು, ಸಮಾಜಶಾಸ್ತ್ರ ವಿಭಾಗ, ಮಾನಸಗಂಗೋತ್ರಿ, ಮೈಸೂರು–೬
೧೮ ಎ. ವಿ. ನರಸಿಂಹಮೂರ್ತಿ	ಪ್ರಾಧ್ಯಾಪಕರು, ಪ್ರಾಚೀನ ಇತಿಹಾಸ ವಿಭಾಗ ಮಾನಸಗಂಗೋತ್ರಿ, ಮೈಸೂರು–೬

ಎಂ. ಬಿ. ಮಂಜುನಾಥಾಚಾರ್

ಬಿ. ಎಂ. ಶ್ರೀ—ಜೀವನ ಪರಿಚಯ

ಭಾರತದಲ್ಲಿ ಬ್ರಿಟಿಷ್ ಸಾಮ್ರಾಜ್ಯದ ಅಧಿಕಾರದ ಪರಿಣಾಮವಾಗಿ ಪ್ರಾಂತೀಯ ಭಾಷೆಗಳಿಗೆ ಯೋಗ್ಯ ಸ್ಥಾನವಿಲ್ಲದೆ ನರಳಾಡುತ್ತಿದ್ದವು. ಈ ಪ್ರಾಂತೀಯ ಭಾಷೆಗಳ ಸ್ಥಾನವನ್ನೆಲ್ಲಾ ಇಂಗ್ಲಿಷ್ ಭಾಷೆಯು ಆಕ್ರಮಿಸಿಕೊಂಡಿತ್ತು. ಆಗ ಆಳುತ್ತಿದ್ದ ರಾಜರು ಐಕಮತ್ಯವಿಲ್ಲದೆ ಪರಸ್ಪರ ಜಗಳವಾಡುತ್ತಿದ್ದರು. ಇವರು ಭಾಷೆಯ ಏಳಿಗೆಯ ಕಡೆಗೆ ಅಷ್ಟಾಗಿ ಗಮನವನ್ನು ಕೊಡುತ್ತಿರಲಿಲ್ಲ. ಆಂಗ್ಲರ ಭಾಷೆ ಮತ್ತು ಸಂಸ್ಕೃತಿಗಳಿಗೆ ಮಾರುಹೋಗಿ ತಮ್ಮ ಸ್ವಾಭಿಮಾನವನ್ನೇ ಕನ್ನಡಿಗ ಜನರು ಮಾರಿ ಕೊಂಡು ಬಿಟ್ಟಿದ್ದರು. ಶ್ರೀಸಾಮಾನ್ಯರು ಅಜ್ಞಾನದ ಅಂಧಕಾರದಲ್ಲಿ ಮುಳುಗಿದ್ದರು. 20ನೆಯ ಶತಮಾನದ ಪ್ರಾರಂಭದಲ್ಲಿ ಕನ್ನಡಿಗರು ಹಳಗನ್ನಡ ಸಾಹಿತ್ಯದಲ್ಲಿ ಅತೃಪ್ತಿಗೊಂಡಿದ್ದರು. ಅವರು ಯಾವುದೋ ಒಂದು ಹೊಸ ಬಗೆಯ ಸೌಂದರ್ಯ ವನ್ನು ಸವಿಯಲು ಕಾತರರಾಗಿದ್ದರು. ಇಂತಹ ಪರಿಸ್ಥಿತಿಯಲ್ಲಿ ಕನ್ನಡ ಸಾಹಿತ್ಯದ ಪರಿಸ್ಥಿತಿಯನ್ನು ಸಮಗ್ರವಾಗಿ ಪರಿಶೀಲಿಸಿ, ಇತರ ಸಾಹಿತ್ಯಗಳ ಅಧ್ಯಯನದಿಂದ ಹೊಸ ಚೈತನ್ಯವನ್ನು ಪಡೆದುಕೊಂಡು, ಹೊಸ ಸಾಹಿತ್ಯದ ರೂಪು ರೇಷೆಗಳನ್ನು ಸ್ಫುಟವಾಗಿ ಕಲ್ಪಿಸಿಕೊಂಡು, ಹೊಸ ಶಕ್ತಿಗಳೆಲ್ಲವನ್ನೂ ಒಂದುಗೂಡಿಸಿ, ವಿಜಯ ಯಾತ್ರೆಯ ದಾರಿಯೇನೆಂಬುದನ್ನು ನಿರ್ಧರಿಸಿ ನೇತಾರನಾಗುವ ಒಬ್ಬ ಮೇಧಾವಿಯ ಅವಶ್ಯಕತೆ ಯಿತ್ತು. ಇಂತಹ ಪರಿಸ್ಥಿತಿಯಲ್ಲಿ ಜನಿಸಿದ ಬಿ. ಎಂ. ಶ್ರೀಯವರು ಒಬ್ಬ ಮಹಾ ಪುರುಷರು. ಇವರು ಆಧುನಿಕ ಕನ್ನಡ ಸಾಹಿತ್ಯದ ಆಚಾರ್ಯಪುರುಷರು. ಅನಾಥ ಳಾಗಿದ್ದ ಶಕುಂತಲೆಯನ್ನು ಕಣ್ವರು ಸಾಕಿ ಬೆಳೆಸಿದಂತೆ, ನಿರ್ಲಕ್ಷಿಸಲ್ಪಟ್ಟಿದ್ದ ಕನ್ನಡ ವನ್ನು ಶ್ರೀಕಂಠಯ್ಯನವರು ಆದರದಿಂದ ಎತ್ತಿಕೊಂಡು ಪೋಷಿಸಿ ಬೆಳೆಸಿದರು. ಇವರು ಕನ್ನಡದ "ಕಣ್ವಋಷಿ." ಕನ್ನಡದ ಸೇವೆಯೇ ಬಿ. ಎಂ. ಶ್ರೀಯವರ ಜೀವನದ ಉಸಿರಾಗಿತ್ತು ಮತ್ತು ಅವರ ಕಣ್ಣ ಬೆಳಕಾಗಿತ್ತು. ಇವರು "ಶ್ರೀ" ಎಂಬ ಸಂಕ್ಷಿಪ್ತ ಕಾವ್ಯನಾಮದಿಂದಲೇ ಬಹಳ ಪ್ರಸಿದ್ಧಿಯನ್ನು ಪಡೆದಿದ್ದಾರೆ. ಇವರು ಇಂಗ್ಲಿಷ್ ಮತ್ತು ಗ್ರೀಕ್ ಭಾಷೆಗಳನ್ನು ಚೆನ್ನಾಗಿ ಬಲ್ಲವರಾಗಿದ್ದರು. ಇಂತಹ ಬಹುಭಾಷಾ

ಪಂಡಿತರ ಮತ್ತು ಮಹಾಮೇಧಾವಿಗಳ ಜೀವನ ಪರಿಚಯವನ್ನು ತಿಳಿದುಕೊಂಡು ಅವರಿಗೆ ಕೃತಜ್ಞರಾಗಬೇಕಾಗಿರುವುದು ಪ್ರತಿಯೊಬ್ಬ ಕನ್ನಡಿಗನ ಆದ್ಯಕರ್ತವ್ಯವಾಗಿದೆ.

ಬಿ.ಎಂ. ಶ್ರೀಕಂಠಯ್ಯನವರು 1884ನೇ ಇಸವಿ ಜನವರಿ ಮೂರನೆಯ ತಾರೀಖಿನಂದು ತನ್ನ ತಾಯಿಯ ತವರೂರಾದ 'ಸಂಪಿಗೆ' ಎಂಬ ಗ್ರಾಮದಲ್ಲಿ ಜನಿಸಿದರು. ಈ ಗ್ರಾಮವು ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕಿನಲ್ಲಿದೆ. ಇವರ ಮೂಲ ಸ್ಥಳವು ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನ ಬೆಳ್ಳೂರು. ಇವರ ತಂದೆ ಮೈಲಾರಯ್ಯನವರು. ಮೈಲಾರಯ್ಯನವರು ಪ್ರಸಿದ್ಧ ವಕೀಲರು. ಭಾಗೀರಥಮ್ಮನವರೇ ಇವರ ಜನ್ಮದಾತೆ. ಮೈಲಾರಯ್ಯನವರು ಎಷ್ಟು ಬುದ್ಧಿವಂತರೋ ಅಷ್ಟೇ ಶ್ರದ್ಧಾವಂತರು. ಬೇರೆ ಬೇರೆ ಕೆಲಸಗಳಲ್ಲಿದ್ದು ದುಡಿಯುತ್ತಿದ್ದರೂ ಸ್ವಂತ ಪ್ರಯತ್ನದಿಂದ ಕಾನೂನನ್ನು ಅಭ್ಯಾಸ ಮಾಡಿ ಅದಕ್ಕೆ ಸಂಬಂಧಿಸಿದ ಪರೀಕ್ಷೆಗಳಲ್ಲಿ ಉತ್ತೀರ್ಣರಾದರು. ಮೈಸೂರಿಗೆ 9 ಮೈಲು ದೂರವಿದ್ದ ಶ್ರೀರಂಗಪಟ್ಟಣದಲ್ಲಿ ವಕೀಲಿವೃತ್ತಿ ನಡೆಸುತ್ತಿದ್ದರು. ಇವರು ಮಧ್ಯಮ ವರ್ಗದ ಜೀವನವನ್ನು ನಡೆಸುತ್ತಿದ್ದರು ಹಾಗೂ ಅನುಕೂಲ ಸ್ಥಿತಿಯಲ್ಲಿದ್ದ ಸಂಸಾರ. ಅವರಿಗೆ ಐದು ಜನ ಮಕ್ಕಳಿದ್ದರು–ಮೂರು ಗಂಡು ಮತ್ತು ಎರಡು ಹೆಣ್ಣು. ತಂದೆಗೆ ಹಿರಿಯ ಮಗನೇ ಶ್ರೀಕಂಠಯ್ಯ.

ಸಾಮಾನ್ಯವಾಗಿ ದೊಡ್ಡವರಾದ ತರುವಾಯ ಪ್ರಸಿದ್ಧಿ ಪಡೆದಿರುವ ಅನೇಕ ಮಹಾಪುರುಷರ ಬಾಲ್ಯಜೀವನದಲ್ಲಿ ಅನೇಕ ಕತೆಗಳು ಇರುತ್ತವೆ. ಹಾಗೆಯೇ ಬಿ. ಎಂ. ಶ್ರೀಯವರ ಬಾಲ್ಯದ ಕೆಲವು ಕತೆಗಳು ಇವೆ. ಚಿಕ್ಕಂದಿನಲ್ಲಿ ಇವರು ಬಹಳ ತುಂಟರಾಗಿದ್ದರು. ಈಜಲು ಹೋಗುವುದು, ಮನಸ್ಸಿಗೆ ಬಂದಂತೆ ಎಲ್ಲಿ ಬೇಕಾದರೂ ಅಲೆಯುವುದು. ಬೇರೆಯವರ ತೋಟಗಳಿಗೆ ನುಗ್ಗಿ ಪರಂಗಿಹಣ್ಣು, ಸೀಬೆಹಣ್ಣು, ತೆಂಗಿನಕಾಯಿ ಮುಂತಾದವುಗಳನ್ನು ಕದ್ದು ಕೀಳುವುದು, ಹೊಲ ಮತ್ತು ಗದ್ದೆಗಳಿಗೆ ದನಗಳನ್ನು ನುಗ್ಗಿಸುವುದು ಇನ್ನೂ ಮುಂತಾದ ಪುಂಡಾಟಗಳ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದರಂತೆ! ಒಳ್ಳೆಯ ಮಾತಿಗೆ ಕೇಳದೆ ಇದ್ದುದರಿಂದ ಪೆಟ್ಟನ್ನು ತಿಂದಿರುವ ಸಂದರ್ಭವೂ ಉಂಟಂತೆ!

ಶ್ರೀಕಂಠಯ್ಯನವರು ತಮ್ಮ ತಾಯಿಯ ಮನೆಯಲ್ಲಿಯೇ ಬಾಲ್ಯವನ್ನು ಕಳೆದು ಮೊದಲ ಅಕ್ಷರಗಳನ್ನು ಕಲಿತರು. ಅನಂತರ ಬಾಲ್ಯದ ವಿದ್ಯಾಭ್ಯಾಸವು ಶ್ರೀರಂಗಪಟ್ಟಣದಲ್ಲಿ ನಡೆಯಿತು. ಪ್ರೌಢ ವಿದ್ಯಾಭ್ಯಾಸಕ್ಕೆ ಮೈಸೂರಿಗೆ ತೆರಳಿದರು. ಮೈಸೂರಿನಲ್ಲಿ ಮೆಟ್ರಿಕ್ಯುಲೇಷನ್ ಮತ್ತು ಎಫ್. ಎ. ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿದ ಬಳಿಕ ಬೆಂಗಳೂರಿನ ಸೆಂಟ್ರಲ್ ಕಾಲೇಜಿಗೆ ಹೆಚ್ಚಿನ ವಿದ್ಯಾಭ್ಯಾಸಕ್ಕೆ ತೆರಳಿದರು. ಬಿ. ಎ. ಓದುವಾಗ ಇವರು ಭೌತಶಾಸ್ತ್ರ ಮತ್ತು ಇಂಗ್ಲಿಷ್ ಸಾಹಿತ್ಯಗಳನ್ನು ಮುಖ್ಯ ವಿಷಯಗಳನ್ನಾಗಿ ಆರಿಸಿಕೊಂಡಿದ್ದರು. ತಮ್ಮಂತೆಯೇ ತಮ್ಮ ಮಗನೂ ವಕೀಲನಾಗಬೇಕೆಂಬುದು ಮೈಲಾರಯ್ಯನವರ ಆಕಾಂಕ್ಷೆಯಾಗಿತ್ತು. ಇದಕ್ಕೆ ಅನುಗುಣ

ವಾಗಿ ಮದರಾಸಿಗೆ ಹೋಗಿ ಕಾನೂನು ಶಾಸ್ತ್ರವನ್ನು ಅಭ್ಯಾಸ ಮಾಡಿ ಬಿ. ಎಲ್. ಪದವಿಯನ್ನು ಗಳಿಸಿದರು. ಆದರೆ ಇಂಗ್ಲಿಷ್ ಸಾಹಿತ್ಯದ ಕಡೆ ಒಲವಿದ್ದ ಇವರು ವಕೀಲಿ ವೃತ್ತಿಯಿಂದ ತಮ್ಮ ಪ್ರವೃತ್ತಿಯನ್ನು ಮುಂದುವರಿಸಲು ಸಾಧ್ಯವಿಲ್ಲವೆಂಬುದನ್ನು ಬಹಳ ಬೇಗ ಮನಗಂಡರು. ಇಂಗ್ಲಿಷ್ ಭಾಷೆ ಮತ್ತು ಸಾಹಿತ್ಯಗಳಲ್ಲಿ ಅಧ್ಯಯನ ಮಾಡಿ ಮದ್ರಾಸ್ ವಿಶ್ವವಿದ್ಯಾಲಯದಿಂದ ಎಂ. ಎ. ಪದವಿಯನ್ನು ಪಡೆದರು. ಅಂತೂ ಕನ್ನಡದ ಪುಣ್ಯವೋ ಎಂಬಂತೆ ಇವರು ವಕೀಲರಾಗದೆ 1909ರಲ್ಲಿ ಮೈಸೂರು ಮಹಾರಾಜಾ ಕಾಲೇಜಿನಲ್ಲಿ ಅಧ್ಯಾಪಕ ಸ್ಥಾನವನ್ನು ಅಲಂಕರಿಸಿದರು.

ಬಿ. ಎಂ. ಶ್ರೀಯವರು ಇಂಗ್ಲಿಷ್ ಪ್ರಾಧ್ಯಾಪಕರಾಗಿ ಕೆಲಸ ಮಾಡಲು ಒಪ್ಪಿಕೊಂಡರು. ಇದಕ್ಕೆ ಹಲವಾರು ಕಾರಣಗಳಿವೆ. ಆಗಿನ ಕಾಲದಲ್ಲಿ ಕೇವಲ ಕನ್ನಡ ಅಧ್ಯಾಪಕರಾದ ಜನರಿಗೆ ಹೆಚ್ಚು ಮರ್ಯಾದೆ ಇರಲಿಲ್ಲ! ಸಮಾಜದಲ್ಲೇ ಆಗಲಿ, ವಿಶ್ವವಿದ್ಯಾಲಯದಲ್ಲಾಗಲೀ ಅವರ ಅಂತಸ್ತು ಕಡಿಮೆ! ವಿದ್ಯಾರ್ಥಿಗಳಿಗೂ ಸಹ ಅಧ್ಯಾಪಕರನ್ನು ಕಂಡರೆ ಗೌರವವಿರುತ್ತಿರಲಿಲ್ಲ. ಇಂಗ್ಲಿಷ್ ಸಾಹಿತ್ಯದ ಪ್ರಸಿದ್ಧ ನಾಟಕಕಾರ ಶೇಕ್ಸ್‌ಪಿಯರ್ ಮುಂತಾದವರ ನಾಟಕಗಳನ್ನು ದೀರ್ಘವಾಗಿ ಅಭ್ಯಾಸ ಮಾಡಿ ಅವುಗಳನ್ನು ಕನ್ನಡಕ್ಕೆ ರೂಪಾಂತರ ಮಾಡಿದರೆ ಕನ್ನಡದ ಸಾಹಿತ್ಯವು ವಿಪುಲವಾಗಿ ಬೆಳೆಯುತ್ತದೆ–ಎಂಬ ಹಲವಾರು ಕಾರಣಗಳಿಂದ ಇವರು ಇಂಗ್ಲಿಷ್ ಅಧ್ಯಾಪಕರಾಗಿದ್ದರು. ಇವರು ಉನ್ನತ ಮಟ್ಟದ ಉಪಾಧ್ಯಾಯರು. ಇವರನ್ನು ಉಪನ್ಯಾಸ ಮಾಡಲೆಂದೇ ಸೃಷ್ಟಿಸಿದನೇನೋ ಭಗವಂತ! ಇವರು ಪದ್ಯಗಳನ್ನು ಓದಿ ಅದಕ್ಕೆ ಹೊಂದುವ ವ್ಯಾಖ್ಯಾನವನ್ನು ಕೊಡುತ್ತಿದ್ದುದು ಅವರ ವಾಕ್‌ಶಕ್ತಿಗೆ ಮಾದರಿಯಾಗಿದೆ. ಭಾಷಣ ಕಲೆಯು ಇವರಿಗೆ ದೇವರು ಕೊಟ್ಟ ವರವಾಗಿತ್ತು. ಜ್ಞಾನೋಪಾಸನೆಯನ್ನು ಅವರು ಪೂಜೆಯೆಂದೇ ಭಾವಿಸಿದ್ದರು. ಬೋಧನೆಯನ್ನು ಇವರು ಎಂದಿಗೂ ಸಹ ಯಾಂತ್ರಿಕ ರೀತಿಯಲ್ಲಿ ಮಾಡಲಿಲ್ಲ. ಬೋಧನೆಯ ಕ್ಷೇತ್ರದಲ್ಲಿ ಇವರು ಹೊಸ ಸಂಪ್ರದಾಯವನ್ನೇ ಸೃಷ್ಟಿಸಿದ್ದರು. ಇವರ ಮಾದರಿಯನ್ನು ಅನುಸರಿಸುವುದೇ ಇಂದಿನ ಉಪಾಧ್ಯಾಯರಾದ ನಮ್ಮೆಲ್ಲರ ಆದ್ಯ ಕರ್ತವ್ಯ ಹಾಗೂ ಹರ್ಷದಾಯಕವಾದ ಸಂಗತಿಯಾಗಿದೆ.

ಇವರ ವಿವಾಹವು ಶ್ರೀಮತಿ ದೇವಮ್ಮನವರೊಡನೆ ನಡೆಯಿತು. ಈ ದಂಪತಿಗಳಿಗೆ ಎರಡು ಹೆಣ್ಣು ಒಂದು ಗಂಡು ಮಕ್ಕಳಿದ್ದರು. ಮನಸ್ಸಿಗೆ ಹಿಡಿಸುವ ಉಪಾಧ್ಯಾಯ ವೃತ್ತಿ, ಆಗಲೇ ಅದರಲ್ಲಿ ಗಳಿಸಿದ್ದ ಖ್ಯಾತಿ– ಇನ್ನೇನು ಬೇಕು? ಆದರೆ ಇಂತಹ ಸುಖದ ಸಂಸಾರವನ್ನು ಕಂಡು ದೈವ ಸಹಿಸಲಿಲ್ಲ. ಮರೆಯಲಾಗದ ಎರಡು ದುರಂತಗಳು ಬಿ. ಎಂ. ಶ್ರೀಯವರ ಬಾಳಿನಲ್ಲಿ ನಡೆದುಹೋದವು! ಮಗನ ಕಣ್ಣುಗಳು ಹೋದವು! ಬಾಣಂತಿಯಾದ ಹೆಂಡತಿ ಹಾಗೂ ಮಗು ಉಳಿಯಲಿಲ್ಲ! ಇವರ ಅಳಿಯ ಮತ್ತು ತಾಯಿ ಇಬ್ಬರೂ

ಮೃತರಾದರು ! ಹೆಂಡತಿ ಮೃತರಾದಾಗ 'ಶ್ರೀ' ಯವರಿಗೆ ಕೇವಲ ಮೂವತ್ತು ವರ್ಷ ಮಾತ್ರ ವಯಸ್ಸಾಗಿತ್ತು ! ಆದರೂ ಮತ್ತೆ ವಿವಾಹವಾಗಲಿಲ್ಲ. ಆ ವೇಳೆ ಗಾಗಲೇ ಅವರಿಗೆ ತಮ್ಮ ಜೀವನದ ಗುರಿಯು ಏನೆಂಬುದು ಸ್ಪಷ್ಟವಾಗಿತ್ತು. ತಮ್ಮ ಮನಸ್ಸನ್ನು ಸಂಪೂರ್ಣವಾಗಿ ಕನ್ನಡತಾಯಿಯ ಸೇವೆಯ ಕಡೆ ತಿರುಗಿಸಿದರು. ಕನ್ನಡ ಸಾಹಿತ್ಯವು ಸಂಪ್ರದಾಯದ ಸಂಕೋಲೆಗಳಿಂದ ಸಿಕ್ಕಿ ಶಕ್ತಿಗುಂದಿತ್ತು. ಅದಕ್ಕೆ ಸ್ವಾತಂತ್ರ್ಯವನ್ನು ಕೊಟ್ಟು ನವೋದಯಕ್ಕೆ ಅವಕಾಶವನ್ನು ಒದಗಿಸಿಕೊಡಬೇಕೆಂದು ಹಗಲೂ ಇರುಳೂ ಶ್ರಮಿಸಿದರು. ಕನ್ನಡದ ಸೇವೆಗೆ ತಮ್ಮ ತನು, ಮನ, ಧನ ಗಳನ್ನೂ ಸಂಪೂರ್ಣವಾಗಿ ಸವೆಸಿದರು.

ಕನ್ನಡನಾಡು ಮತ್ತು ನುಡಿಯ ಮೇಲೆ 'ಶ್ರೀ' ಯವರ ಪ್ರೀತಿ ಕೇವಲ ಭಾವ ನಾತ್ಮಕವಾಗಿರಲಿಲ್ಲ. ಕನ್ನಡದ ಬಗ್ಗೆ 'ಶ್ರೀ'ಯವರಿಗೆ ಅಭಿಮಾನ ಎಷ್ಟಿತ್ತೆಂಬುದು ಅವರ ಮಾತುಗಳಿಂದಲೇ ಸ್ಪಷ್ಟವಾಗುತ್ತದೆ. "ಕನ್ನಡಿಗರೇ, ಏಳಿ, ಎಚ್ಚರ ಗೊಳ್ಳಿ, ಆರಂಭಮಾಡಿ. ಹಿಂದೆ ಯೂರೋಪಿನಲ್ಲಿ ರಿನೇಸಾನ್ಸ್ ಎಂಬ ಸಾಹಿತ್ಯದ ಪುನರ್ಜನ್ಮವುಂಟಾದಾಗ ಒಬ್ಬ ಮಹಾಪಂಡಿತನು 'ನಾವು ಸತ್ತವರನ್ನು ಎಬ್ಬಿಸು ವುದಕ್ಕೆ ಹೋಗುತ್ತೇವೆ' ಎಂದು ಘೋಷಿಸಿದನು. ನಾವು ಕನ್ನಡಿಗರು, ಇದು ಸತ್ತವರನ್ನು ಎಬ್ಬಿಸುವುದೇ ಅಲ್ಲ ! ಬದುಕಿರುವವರನ್ನು ಎಚ್ಚರಗೊಳಿಸಲಿಕ್ಕೆ ಹೊರಟಿರುವೆವು." ಕನ್ನಡ ಕಾವ್ಯಕ್ಕೆ ಹೊಸ ದಿಕ್ಕನ್ನು ತೋರಿ ಕನ್ನಡಮ್ಮನ ಸಿರಿ ಮುಡಿಯನ್ನು ನವೀನ ಪುಷ್ಪಗಳಿಂದ ಅಲಂಕಾರ ಮಾಡಿದ ಪ್ರತಿಭಾನ್ವಿತರು ಬಿ.ಎಂ. ಶ್ರೀಯವರು.

ಕನ್ನಡಿಗರಿಗೆ ಮತ್ತು ಕನ್ನಡೇತರರಿಗೆ ಅವರು ಸಂಕಲಿಸಿದ ಪುಸ್ತಕಗಳು ಮತ್ತು ರಚಿಸಿದ ಗ್ರಂಥಗಳು ಶತಮಾನ ಕಳೆದರೂ ತಮ್ಮ ಮೌಲ್ಯಗಳನ್ನು ಉಳಿಸಿಕೊಂಡಿವೆ. ಇವರು ರಚಿಸಿರುವ ಕನ್ನಡ ಸಾಹಿತ್ಯ ಚರಿತ್ರೆ ಮತ್ತು ಕನ್ನಡ ಭಾಷಾ ಚರಿತ್ರೆಯು ಅವರ ವಿದ್ವತ್ತಿಗೆ, ಪರಿಶ್ರಮಕ್ಕೆ, ಸಹೃದಯತೆಗೆ ದ್ಯೋತಕವಾಗಿದೆ. ಇವರು ರಚಿಸಿದ ರುದ್ರನಾಟಕಗಳು ಕನ್ನಡ ಸಾಹಿತ್ಯದ ಕೊರತೆಯನ್ನು ತುಂಬಿ ಜನರ ಮನಸ್ಸನ್ನು ತಣಿಸಿವೆ. ಬಹುಭಾಷಾಪಂಡಿತರಾದ ಇವರು ಇಂಗ್ಲಿಷ್ ಗೀತೆಗಳನ್ನು ಕನ್ನಡಕ್ಕೆ ರೂಪಾಂತರ ಮಾಡಿ 'ಇಂಗ್ಲಿಷ್ ಗೀತೆಗಳು 'ಎಂಬ ಸಂಕಲನ ಗ್ರಂಥವನ್ನು ಪ್ರಕಟಿಸಿದ್ದಾರೆ.

ಆಂಗ್ಲರಿಗೆ ಇಂಗ್ಲಿಷ್ ಮಾತೃ ಭಾಷೆ. ಇಂಗ್ಲಿಷ್ ಸಾಹಿತ್ಯದಲ್ಲಿ ಅವರನ್ನು ಅಂದರೆ ಆಂಗ್ಲರನ್ನು ಬಿಟ್ಟರೆ ಅವರನ್ನು ಮೀರಿಸುವವರು ಬೇರೆ ಯಾರೂ ಇಲ್ಲವೆಂಬ ಭಾವನೆ ಆಗಿನ ಕಾಲದಲ್ಲಿ ಇತ್ತು. 'ಶ್ರೀ' ಯವರು ಪ್ರತಿಸ್ಪರ್ಧಿಯಾಗಿ ನಿಂತು ವಿಜಯಿಯಾದರು. "ನಾನು ಕೀರ್ತಿಯನ್ನು ಗಳಿಸಿದರೆ ಇಂಗ್ಲಿಷ್ ಪ್ರೊಫೆಸರಾಗಿಯೇ ಗಳಿಸುತ್ತೇನೆ" ಎಂಬ ಅವರ ಮಾತು ಗೆದ್ದಿತು. "ಇವರಿಗಿಂತ ಯಾವ ಆಂಗ್ಲನೂ ಹೆಚ್ಚಲ್ಲ" ಎಂದು ಜನರು ಮಾತನಾಡಿಕೊಳ್ಳುತ್ತಿದ್ದರು. "ಶ್ರೀಕಂಠಯ್ಯನವರು

ಇಂಗ್ಲೆಂಡಿಗೆ ಹೋದರೆ ಅಲ್ಲಿಂದ ವಾಪಸ್ಸು ಬರುವುದು ಅಸಾಧ್ಯವಾಗುತ್ತದೆ. ಏಕೆಂದರೆ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯ ಅವರನ್ನು ಬಿಟ್ಟುಕೊಡುವುದಿಲ್ಲ" ಎಂದು ಒಬ್ಬ ಆಂಗ್ಲ ಪ್ರೊಫೆಸರ್ ಹೇಳಿದರಂತೆ! ಅಂದರೆ ಬಿ.ಎಂ. ಶ್ರೀಯವರಲ್ಲಿ ಆಂಗ್ಲ ಭಾಷೆಯ ಮೇಲೆ ಎಷ್ಟು ಪ್ರಭುತ್ವವಿತ್ತೆಂಬುದನ್ನು ನಾವು ಇಲ್ಲಿ ಗಮನಿಸಬಹುದಾಗಿದೆ. ಇವರು "ನಾನು ಇಂಗ್ಲಿಷ್ ಪ್ರಾಧ್ಯಾಪಕನಾದರೆ ಅದರಿಂದ ಕನ್ನಡಕ್ಕೆ ಹೆಚ್ಚಿನ ಪ್ರಯೋಜನವಾದೀತು" ಎಂದು ಅರಿತು ಮೈಸೂರು ವಿಶ್ವವಿದ್ಯಾನಿಲಯದ ರಿಜಿಸ್ಟ್ರಾರ್ ಪದವಿಯನ್ನು ಒಪ್ಪಿಕೊಂಡರು. ಶ್ರೀಯವರ ಪ್ರಯತ್ನದ ಫಲವಾಗಿ ಕನ್ನಡದಲ್ಲಿ ಎಂ.ಎ. ತರಗತಿಗಳನ್ನು ತೆರೆದರು. ಕನ್ನಡ ಪ್ರಾಧ್ಯಾಪಕರನ್ನು ನೇಮಿಸಲು ವ್ಯವಸ್ಥೆ ಮಾಡಿದರು. ಅದುವರೆಗೆ ಕನ್ನಡಕ್ಕೆ ಪ್ರಾಧ್ಯಾಪಕರೇ ಇರಲಿಲ್ಲ.

ಶ್ರೀಕಂಠಯ್ಯನವರು ರಿಜಿಸ್ಟ್ರಾರ್ ಕೆಲಸದ ಜೊತೆಗೆ ಕೆಲವು ಕಾಲ ಕನ್ನಡದ ಗೌರವ ಪ್ರಾಧ್ಯಾಪಕರಾಗಿ ಕೆಲಸ ಮಾಡಿದರು. ತರುಣ ಬರಹಗಾರರಿಗೆ ಉತ್ತೇಜನವನ್ನು ಕೊಡುವುದಕ್ಕೋಸ್ಕರ ಸ್ವತಃ ಒಂದು ದತ್ತಿಯನ್ನು ಕೊಟ್ಟರು. ದತ್ತಿಯ ಹಣದಿಂದ ಬಂದ ಬಡ್ಡಿಯಿಂದ ಪ್ರತಿವರ್ಷವೂ ಒಂದು ಚಿನ್ನದ ಪದಕವನ್ನು ಮಾಡಿಸಿ ಅದನ್ನು ಆ ವರ್ಷ ಅತ್ಯುತ್ತಮ ಕವನವನ್ನು ಬರೆದ ವಿದ್ಯಾರ್ಥಿಗೆ ಕೊಡಬೇಕೆಂದು ಸಲಹೆಕೊಟ್ಟರು. "ಮೈಸೂರು ವಿಶ್ವವಿದ್ಯಾನಿಲಯ ಕನ್ನಡ ಗ್ರಂಥಮಾಲೆ"ಗೆ ಸಿದ್ಧತೆಗಳನ್ನು ನಡೆಸಿದರು. ಈ ಗ್ರಂಥಮಾಲೆಯಲ್ಲಿ ಸಾಹಿತ್ಯ, ವಿಮರ್ಶೆ, ಸಮಾಜ ಶಾಸ್ತ್ರ, ತತ್ವಶಾಸ್ತ್ರ ಅರ್ಥಶಾಸ್ತ್ರ, ಚಿತ್ರಕಲೆ, ಸಂಗೀತ, ಶಿಲ್ಪಕಲೆ ಮುಂತಾದ ವಿಷಯಗಳ ಮೇಲೆ ಎಷ್ಟೋ ಪುಸ್ತಕಗಳು ಪ್ರಕಟವಾದವು. ಶ್ರೀಕಂಠಯ್ಯನವರ ಈ ಪ್ರಯತ್ನದಿಂದಾಗಿ ಕನ್ನಡದಲ್ಲಿ ಬರೆಯುವ ಅಭ್ಯಾಸವೇ ಇಲ್ಲದ ಎಷ್ಟೋ ಜನ ಬರೆಯಲು ತೊಡಗಿದರು. ಕನ್ನಡನಾಡಿನ ಮೂಲೆ ಮೂಲೆಗೂ ತಿರುಗಿ ಕನ್ನಡ ಜನತೆಯಲ್ಲಿ ಒಂದು ಹೊಸ ಕ್ರಾಂತಿಯನ್ನು ಎಬ್ಬಿಸಿದರು.

"ಒಂದು ಭಾಷೆಯಾಡುವವರೆಲ್ಲ ಒಂದು ಜಾತಿ. ಅವರು ಅಧಿಕ ಸಂಖ್ಯಾತರಾಗಿ ಎಷ್ಟು ಭೂಭಾಗದಲ್ಲಿ ವ್ಯಾಪಿಸಿಕೊಂಡಿರುವರೋ ಅದು ಅವರ ಪ್ರಾಂತ ಎಂಬ ಭಾವನೆ ನಮ್ಮ ಬಂಧುಗಳಾದ ಬಂಗಾಳ, ಆಂಧ್ರ ಮುಂತಾದ ಪ್ರಾಂತಗಳಲ್ಲಿ ಪ್ರಬಲವಾಗಿದೆ. ಆದರೆ ನಮ್ಮ ಕನ್ನಡಿಗರಲ್ಲಿ ಈ ಭಾವನೆ ಇನ್ನೂ ಚೆನ್ನಾಗಿ ಮೂಡಿಲ್ಲ." ಎಂದು ಹೇಳಿದರು. "ಕನ್ನಡಿಗರೆಲ್ಲ ಸುಸಂಘಟಿತರಾಗಬೇಕು. ನಮ್ಮ ನಾಡು–ನುಡಿಗಳ ಸೇವೆಗೆ ನಿಂತಾಗ ಜಾತೀಯ ಸಂಕುಚಿತ ಭಾವನೆ ತೊಲಗಬೇಕು. ಒಂದು ಭಾಷೆಯನ್ನು ಮಾತನಾಡುವವರೆಲ್ಲಾ ಒಂದು ಜಾತಿ. ಕನ್ನಡಿಗರಲ್ಲಿ ಈ ಭಾವನೆ ಇನ್ನೂ ಸರಿಯಾಗಿ ಮೂಡಿಲ್ಲ. ಇನ್ನಾದರೂ ಎಚ್ಚೆತ್ತುಕೊಳ್ಳೋಣ." ಎಂಬ ಶ್ರೀಯವರ ವಾಣಿಯು ಅಮರವಾದುದು. "ಕನ್ನಡದಲ್ಲಿ ಏನಿದೆ? ಏನಿಲ್ಲ? ಎಂಬುದೇ ನನ್ನ ಸವಾಲು. ಇಲ್ಲ ಎನ್ನುವವರ ಬಗೆಗೆ ನನಗೆ ಸದಾ ಮರುಕ. ಅವರ ಅಜ್ಞಾನಕ್ಕೆ ನನ್ನ ಸಹಾನುಭೂತಿ. ಕನ್ನಡವನ್ನು ಓದಲು, ಬರೆಯಲು, ಮಾತಾಡಲು

ಮನಸ್ಸಿಲ್ಲದ ಅಪವಾದ ಇದು. ಅವರೇನಾದರೂ ಹೇಳಿಕೊಳ್ಳಲಿ, ನೀವು ನೋಡಿ. ಕನ್ನಡದಲ್ಲಿ ಅಪಾರ ಸಾಹಿತ್ಯ ಸಂಪತ್ತಿದೆ. ಹೊಸ ಗ್ರಂಥಗಳ ರಚನೆಯಾಗುತ್ತಿದೆ. ನಾವು ಹೆಮ್ಮೆಪಡುವ ರೀತಿಯಲ್ಲಿ ಅದು ಬೆಳೆಯುತ್ತಿದೆ." ಎಂದು ಶ್ರೀಯವರು ತುಂಬು ಹೃದಯದಿಂದ ಹೇಳಿದ್ದಾರೆ. ಆ ಕಾಲಕ್ಕೆ ಅವರ ಇಂತಹ ಸಾಧನೆಯೇ ಮಹಾ ಸಾಧನೆ. "ಬೆಳೆಯೇನೋ ಯಥೇಚ್ಛವಾಗಿದೆ. ಆದರೆ ಕೊಯ್ಯುವವರು ಕಡಿಮೆ" ಎಂದು ಅವರು ಅಂದು ಹೇಳಿದ ಎಚ್ಚರಿಕೆಯ ಮಾತನ್ನೂ ಇಂದು ನಾವು ನೆನೆಸಿಕೊಳ್ಳಬೇಕಾಗಿದೆ.

ಅನಂತರ ಶ್ರೀಯವರು ರನ್ನನ 'ಸಾಹಸ ಭೀಮ ವಿಜಯಂ' ಕಾವ್ಯವಸ್ತುವನ್ನು ಆಧಾರವನ್ನಾಗಿಟ್ಟುಕೊಂಡು 'ಗದಾಯುದ್ಧ ನಾಟಕ' ವನ್ನು ರಚಿಸಿದರು. ಅನಂತರ ಗ್ರೀಕ್ ನಾಟಕಕಾರನಾದ ಸಾಪೋಕ್ಲೀಸನ ಸುಪ್ರಸಿದ್ಧ ದುರಂತನಾಟಕವಾದ 'ಏಜಾಕ್ಸ್' ನಾಟಕವನ್ನು ಆಧಾರವಾಗಿಟ್ಟುಕೊಂಡು ಮಹಾಭಾರತದ ಸೌಪ್ತಿಕ ಪರ್ವದ ಅಶ್ವತ್ಥಾಮನಿಗೆ ಹೋಲಿಸಿ 'ಅಶ್ವತ್ಥಾಮನ್' ಎಂಬ ರುದ್ರನಾಟಕವನ್ನು ರಚಿಸಿದರು. ನಾಟಕರಂಗದಲ್ಲಿಯೇ ಇದು ಒಂದು ಮೈಲಿಗಲ್ಲಾಗಿದೆ. ಇದರ ಮೂಲಕ ನಮ್ಮ ಪ್ರಾಚೀನ ಸಾಹಿತ್ಯದಿಂದ ವಸ್ತುಗಳನ್ನಾರಿಸಿಕೊಂಡು ಎಂತಹ ಒಳ್ಳೆಯ ನಾಟಕಗಳನ್ನು ರಚಿಸಬಹುದೆಂಬುದನ್ನು ತೋರಿಸಿಕೊಟ್ಟರು. ಅನಂತರ ಗ್ರೀಕ್ ನಾಟಕಕಾರ ಎಸ್ಕಿಲಸ್‌ನ ನಾಟಕವನ್ನು ಭಾಷಾಂತರ ಮಾಡಿ 'ಪಾರಸೀಕರು' ನಾಟಕವನ್ನು ರಚಿಸಿದರು. ಉತ್ತಮವಾದ ಭಾಷಾಂತರಕ್ಕೆ ಈ ನಾಟಕವು ಒಂದು ನಿದರ್ಶನವಾಗಿದೆ. ಈ ಮೂರು ನಾಟಕಗಳೂ ಸಹ ರಂಗಭೂಮಿಯ ಮೇಲೆ ಪ್ರದರ್ಶನಗೊಂಡು ಬಿ. ಎಂ. ಶ್ರೀಯವರ ಕೀರ್ತಿಯನ್ನು ದಿಗಂತಕ್ಕೇರಿಸಿದವು. ತಮ್ಮ ಸ್ವಂತ ಕವನಗಳನ್ನು ಸಂಗ್ರಹಿಸಿ 'ಹೊಂಗನಸುಗಳು' ಎಂಬ ಹೆಸರಿನಿಂದ ಪ್ರಕಟಿಸಿದರು. "ಕನ್ನಡ ಬಾವುಟ" ಎಂಬ ಕವನ ಸಂಕಲನವನ್ನು ಶ್ರೀಯವರು ಸಂಪಾದಿಸಿ ಪ್ರಕಟಿಸಿದ್ದಾರೆ. ಈ ಪುಸ್ತಕವು ಕನ್ನಡಿಗರಿಗೆ ಕನ್ನಡದ ಕಾವ್ಯದಲ್ಲಿ ಎಂತಹ ಸತ್ವವು ಅಡಗಿದೆ ಎಂಬುದನ್ನು ಪರಿಚಯ ಮಾಡಿಕೊಡುತ್ತದೆ. ಶ್ರೀಕಂಠಯ್ಯನವರ ಲೇಖನಗಳು ಮತ್ತು ಭಾಷಣಗಳು "ಕನ್ನಡಿಗರಿಗೆ ಒಳ್ಳೆಯ ಸಾಹಿತ್ಯ" ಎಂಬ ಹೆಸರಿನಲ್ಲಿ ಪುಸ್ತಕ ರೂಪದಲ್ಲಿ ಪ್ರಕಟವಾಗಿವೆ.

ಸುಮಾರು ಎರಡು ದಶಕಗಳ ಕಾಲ ಕನ್ನಡ ಸಾಹಿತ್ಯದ ಸಾಮ್ರಾಜ್ಯಕ್ಕೆ ಅವರೇ ಅಧಿಪತಿಗಳಾಗಿದ್ದರು. ಕೀರ್ತಿಯು ಅವರ ಬೆನ್ನು ಹತ್ತಿ ಬಂತು. ಅವರ ಮೇಲೆ ಗೌರವ ಪುರಸ್ಕಾರಗಳ ಮಳೆಯೇ ಕರೆಯಿತು. 1928ರಲ್ಲಿ ಬಿ. ಎಂ. ಶ್ರೀಯವರು ಕಲ್ಬುರ್ಗಿಯಲ್ಲಿ ನಡೆದ ಕರ್ನಾಟಕ ಸಾಹಿತ್ಯ ಪರಿಷತ್ತಿನ ಸಮ್ಮೇಳನದ ಅಧ್ಯಕ್ಷರಾಗಿ ಚುನಾಯಿತರಾದರು. 1938ನೆಯ ಇಸ್ವಿಯಲ್ಲಿ ಮೈಸೂರಿನ ಮಹಾರಾಜರು ಅವರಿಗೆ 'ರಾಜಸೇವಾಸಕ್ತ' ಎಂಬ ಬಿರುದು ಕೊಟ್ಟು ಗೌರವಿಸಿದರು. ಅದೇ ವರ್ಷ ಪರಿಷತ್ತಿನ ಉಪಾಧ್ಯಕ್ಷರಾಗಿ ಚುನಾಯಿತರಾದರು. ಆಗ ರಾಜ ಮನೆತನದವರಲ್ಲಿ ಒಬ್ಬರು

ಪರಿಷತ್ತಿನ ಗೌರವಾಧ್ಯಕ್ಷರಾಗಿರುತ್ತಿದ್ದರು. ಪರಿಷತ್ತಿನ ನಿಜವಾದ ಮುಖ್ಯಾಧಿಕಾರಿಗಳು ಉಪಾಧ್ಯಕ್ಷರೇ ಆಗಿರುತ್ತಿದ್ದರು. ಬಿ. ಎಂ. ಶ್ರೀಯವರು ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಾಗಿದ್ದುದು 1938–42ರ ಅವಧಿಯಲ್ಲಿ. ಈ ಅವಧಿಯಲ್ಲಿ ಕನ್ನಡ ನಾಡಿನ ಮೂಲೆ ಮೂಲೆಗಳಲ್ಲಿ ಸಂಚರಿಸಿ ಜನಜಾಗೃತಿಯನ್ನು ಉಂಟುಮಾಡಿದರು. ಸಂಸ್ಕೃತಿ ಸಾಹಿತ್ಯಗಳ ಬಗ್ಗೆ ಕನ್ನಡಿಗರಿಗೆ ಆಸಕ್ತಿಯನ್ನು ಉಂಟುಮಾಡಲು ಕನ್ನಡ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ಕನ್ನಡ ಅಣುಗ, ಕನ್ನಡ ಕಾವ, ಕನ್ನಡ ಜಾಣ ಪರೀಕ್ಷೆಗಳ ಯೋಜನೆಯನ್ನು ಕಾರ್ಯರೂಪಕ್ಕೆ ತಂದರು. ಈಗ ಅಣುಗ ಪರೀಕ್ಷೆಯನ್ನು ತೆಗೆದು ಹಾಕಿ ಕನ್ನಡ ರತ್ನ ಪರೀಕ್ಷೆಯನ್ನು ಪರಿಷತ್ತಿನಲ್ಲಿ ನಡೆಸಲಾಗುತ್ತಿದೆ. ಅವರಿಗೆ ಕನ್ನಡದ ಮೇಲೆ, ಕನ್ನಡ ನಾಡಿನ ಮೇಲೆ, ಕನ್ನಡ ಜನತೆಯ ಮೇಲೆ ಅಪಾರವಾದ ಪ್ರೇಮವಿತ್ತು. ಯಾರೇ ಆಗಿರಲಿ ಕನ್ನಡಿಗರಿಂದ ಬಂದ ಆಹ್ವಾನಗಳನ್ನು ತಿರಸ್ಕರಿಸುತ್ತಿರಲಿಲ್ಲ. ಅದರಲ್ಲಿಯೂ ಮೈಸೂರು ರಾಜ್ಯದ ಹೊರಗಿದ್ದ ಕನ್ನಡಿಗರಿಂದ ಬಂದ ಆಹ್ವಾನಗಳಿಗೆ ವಿಶೇಷ ಮನ್ನಣೆ ಕೊಡುತ್ತಿದ್ದರು. ಅವರ ದೃಷ್ಟಿಯಲ್ಲಿ ಇಂತಹ ಆಹ್ವಾನಗಳನ್ನು ಒಪ್ಪಿಕೊಳ್ಳುವುದು ಒಂದು ಕರ್ತವ್ಯವಾಗಿತ್ತು. ಶ್ರೀಕಂಠಯ್ಯನವರಿಗೆ ಕರ್ನಾಟಕದಲ್ಲಿ ಪ್ರಯಾಣ ಮಾಡುವುದು ಒಂದು ತೀರ್ಥಯಾತ್ರೆಯಿದ್ದಂತೆ; ಭಾಷಣ ಮಾಡುವುದೆಂದರೆ ಅರ್ಚನೆಯಿದ್ದಂತೆ. ಮೈಸೂರು ರಾಜ್ಯಕ್ಕೂ ಮತ್ತು ಇತರ ಭಾಗಗಳಿಗೂ ಸಂಪರ್ಕವೇ ಕಡಿಮೆಯಾಗಿದ್ದ ಕಾಲದಲ್ಲಿ ಶ್ರೀಕಂಠಯ್ಯನವರು ಎಲ್ಲ ಕಡೆಯಲ್ಲಿಯೂ ಸುತ್ತಾಡಿ, ಎಲ್ಲ ಕಡೆಯ ಜನರೊಡನೆಯೂ ಸ್ನೇಹವನ್ನು ಬೆಳೆಸಿ ಎಲ್ಲರ ಗೌರವಕ್ಕೂ ಪಾತ್ರರಾದರು.

ಕನ್ನಡ ಸಾಹಿತ್ಯ ಪರಿಷತ್ತಿಗೆ ತನ್ನದೇ ಆದ ಒಂದು ಅಚ್ಚುಕೂಟವು ಇರಬೇಕೆಂಬುದನ್ನು ಮನಗಂಡು ಅದಕ್ಕೋಸ್ಕರ 1,000 ರೂಪಾಯಿಗಳನ್ನು ಅನಂತರ 5,000 ರೂಪಾಯಿಗಳನ್ನು ದಾನಮಾಡಿದರು. ಪರಿಷತ್ತಿನ ಪರವಾಗಿ ಪ್ರವಾಸ ಮಾಡಿದರು, ಸದಸ್ಯರನ್ನು ಒಂದುಗೂಡಿಸಿದರು. ಉತ್ಸವಗಳನ್ನೂ ಸಮ್ಮೇಳನಗಳನ್ನೂ ನಡೆಸಿದರು. ಇಷ್ಟೆಲ್ಲಾ ಸೇವೆಗಳನ್ನು ಸಲ್ಲಿಸಿದರೂ ಸಹ ಶ್ರೀಕಂಠಯ್ಯನವರ ಕೊನೆಯ ದಿನಗಳು ಸುಖಕರವಾಗಿರಲಿಲ್ಲ. ಹಿಂದಿನ ಕಾಲದ ಕೆಲವರು ವಿದ್ವಾಂಸರು "ಶ್ರೀಕಂಠಯ್ಯನವರು ಕನ್ನಡವನ್ನು ಸರ್ವನಾಶದ ಕಡೆಗೆ ಒಯ್ಯುತ್ತಿದ್ದಾರೆ" ಎಂದೇ ಭಾವಿಸಿದ್ದರು. ಸಂಸ್ಕೃತದ ವಿಷಯದಲ್ಲಿ ಶ್ರೀಯವರು ಆಗಾಗ ಆಡುತ್ತಿದ್ದ ಕೆಲವು ಮಾತುಗಳು ಅನೇಕರಿಗೆ ಸರಿತೋರಲಿಲ್ಲ.

ಎರಡು ಸಂದರ್ಭಗಳಲ್ಲಿ ಬಿ. ಎಂ. ಶ್ರೀ ಅವರ ಮೇಲೆ ತೀವ್ರವಾದ ಆಕ್ಷೇಪಣೆಗಳು ಎರಗಿ ಬಂದವು. 'ಅಶ್ವತ್ಥಾಮನ್' ನಾಟಕದಲ್ಲಿ ನಾಯಕನಾದ ಅಶ್ವತ್ಥಾಮನ್ ಆತ್ಮಹತ್ಯೆ ಮಾಡಿಕೊಂಡು ಸಾಯುತ್ತಾನೆ. ಇದಕ್ಕೆ ಸಂಬಂಧಪಟ್ಟಂತೆ ದೊಡ್ಡ ಕೋಲಾಹಲವೇ ಎದ್ದಿತು. ಇನ್ನೊಂದು ಸಂದರ್ಭದಲ್ಲಿ 'ಕರ್ಣಾಟಕ ಸಾಹಿತ್ಯ ಪರಿಷತ್ತು' ಎಂಬ ಹೆಸರನ್ನು ನಿಯಾನ್ ಅಕ್ಷರಗಳಲ್ಲಿ ಪ್ರದರ್ಶಿಸುವ ಅನುಕೂಲಕ್ಕಾಗಿ

ಶ್ರೀಕಂಠಯ್ಯನವರು ‘ಕರ್ಣಾಟಕ’ ಎಂಬ ಪದದಲ್ಲಿರುವ ‘ಟ’ ವರ್ಗದ ಪಂಚಮಾಕ್ಷರಕ್ಕೆ ಬದಲಾಗಿ ‘ತ’ ವರ್ಗದ ಪಂಚಮಾಕ್ಷರವನ್ನು ಉಪಯೋಗಿಸಲು (‘ಣ’ ಕಾರಕ್ಕೆ ಬದಲಾಗಿ ‘ನ’ ಕಾರವನ್ನು ಉಪಯೋಗಿಸಲು) ಪ್ರಯತ್ನಿಸಿದ್ದು. ಇದಕ್ಕೆ ತೀವ್ರವಾದ ಆಕ್ಷೇಪಣೆಗಳು ಬಂದೆರಗಿದವು. “ಹೋಗಲಿ ಬಿಡಿ ಸ್ವಾಮಿ ನಿಮ್ಮ ‘ಣ’ ಕಾರವನ್ನೇ ಇಟ್ಟುಕೊಳ್ಳೋಣ” ಎನ್ನಬಹುದಾಗಿತ್ತು. ಆದರೆ ಸಮಾಧಾನದ ಮಾರ್ಗ ಎರಡು ಕಡೆಯವರಿಗೂ ರುಚಿಸಲಿಲ್ಲ. ಭಾಷಣಗಳು, ಲೇಖನಗಳು, ವಿಡಂಬನೆಗಳು ಒಂದರ ಮೇಲೊಂದು ಬಂದವು. ಕೊನೆಗೆ ‘ಕರ್ಣಾ(ರ್ನಾ)ಟಕ’ ಎಂಬ ಪದವನ್ನೇ ಬಿಟ್ಟು “ಕನ್ನಡ ಸಾಹಿತ್ಯ ಪರಿಷತ್ತು” ಎಂಬುದಾಗಿ ಪರಿಷತ್ತಿಗೆ ಹೊಸದಾಗಿ ನಾಮಕರಣ ಮಾಡಿದರು. ಶ್ರೀಯವರ ಮನಸ್ಸಿನಲ್ಲಿ “ನಾನು ಸ್ವಾರ್ಥವೇನೂ ಇಲ್ಲದೆ ಕನ್ನಡದ ಹಿತಕ್ಕಾಗಿ ಕಷ್ಟಪಟ್ಟಿದ್ದೇನೆ. ಆದರೂ ಟೀಕೆ ತಪ್ಪಲಿಲ್ಲವಲ್ಲ” ಎಂಬ ಅಸಮಾಧಾನವಿತ್ತು. ಶ್ರೀಕಂಠಯ್ಯನವರು 1942ರಲ್ಲಿ ಹೊಸದಾಗಿ ಚುನಾಯಿತರಾದ ಅಧ್ಯಕ್ಷರಿಗೆ ಅಧಿಕಾರ ವಹಿಸಿಕೊಟ್ಟರು. ಅದೇ ವರ್ಷವೇ ವಿಶ್ವವಿದ್ಯಾನಿಲಯದಿಂದಲೂ ನಿವೃತ್ತಿ ಹೊಂದಿದರು.

ಇದೇ ವರ್ಷ ಸರ್ಕಾರವು ಅವರನ್ನು ಮೈಸೂರು ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿಯ ಅಧ್ಯಕ್ಷರನ್ನಾಗಿ ನೇಮಿಸಿತು. ಆ ಸ್ಥಾನದಿಂದ 1944ರಲ್ಲಿ ನಿವೃತ್ತರಾದರು. ಕೆಲವು ವರ್ಷಗಳಿಂದಲೂ ಸಹ ಬಿ. ಎಂ. ಶ್ರೀಯವರ ಆರೋಗ್ಯವು ತೃಪ್ತಿಕರವಾಗಿರಲಿಲ್ಲ. ರಕ್ತದ ಒತ್ತಡ ಹೆಚ್ಚಿ, ಡಯಾಬಿಟೀಸ್ ರೋಗದಿಂದ ನರಳುತ್ತಿದ್ದರು. ಇವರು ವರ್ಷಗಟ್ಟಲೆ ತಮ್ಮ ಶರೀರವನ್ನು ತಡೆಯಲಾರದ ಶ್ರಮಕ್ಕೆ ಈಡು ಮಾಡಿದ್ದರು. 1946ನೆಯ ಇಸವಿ ಜನವರಿ 5ನೆಯ ದಿನಾಂಕದಂದು ಬಿ.ಎಂ. ಶ್ರೀಯವರು ಧಾರವಾಡದಲ್ಲಿ ಸ್ವರ್ಗಸ್ಥರಾದರು. ಇಡೀ ಕರ್ಣಾಟಕವು ಶೋಕಸಾಗರದಲ್ಲಿ ಮುಳುಗಿತು. ತಿಂಗಳುಗಟ್ಟಲೆ ಅವರ ಸೇವೆಯನ್ನು ಹೊಗಳುವ ಲೇಖನಗಳು ಪತ್ರಿಕೆಗಳಲ್ಲಿ ಪ್ರಕಟವಾದವು. ಏಕೀಕೃತ ಕರ್ಣಾಟಕವನ್ನು ನೋಡುವ ಭಾಗ್ಯವು ಶ್ರೀಯವರ ಪಾಲಿಗೆ ಒದಗಿ ಬರಲಿಲ್ಲ. ಸಾಹಿತ್ಯ ಕ್ಷೇತ್ರದಲ್ಲಿ ಮಾತ್ರವಲ್ಲದೆ, ಏಕೀಕರಣಕ್ಕಾಗಿಯೂ ದುಡಿದವರ ಪೈಕಿ ಅತ್ಯಂತ ಪ್ರಭಾವಶಾಲಿ ಎಂದು ಅವರನ್ನು ಕರ್ಣಾಟಕವು ಗೌರವಿಸುತ್ತಿದೆ. ಶ್ರೀಕಂಠಯ್ಯನವರು ಆರಂಭಿಸಿದ ಕೆಲಸ ಇನ್ನೂ ಪೂರ್ಣವಾಗಿಲ್ಲ. ಕನ್ನಡ ನಾಡಿನಲ್ಲಿ ಕನ್ನಡಕ್ಕೆ ಪ್ರಥಮವೂ, ಪ್ರಧಾನವೂ ಆದ ಸ್ಥಾನವನ್ನು ಗಳಿಸುವುದು ಇನ್ನೂ ಸಾಧ್ಯವಾಗಿಲ್ಲ. ಕನ್ನಡಿಗರಲ್ಲಿ ತಮ್ಮ ಭಾಷೆ, ಸಾಹಿತ್ಯ, ಸಂಸ್ಕೃತಿ, ಪರಂಪರೆಗಳ ಬಗ್ಗೆ ಸಾಕಾದಷ್ಟು ಅಭಿಮಾನವು ಇನ್ನೂ ಮೂಡಿಲ್ಲ. ಹೀಗೆ ಮಾಡುವಲ್ಲಿ ಶ್ರೀಕಂಠಯ್ಯನವರು ಕೈಗೊಂಡ ಕೆಲಸವನ್ನು ಮುಂದುವರಿಸಿ ಮುಗಿಸುವುದು ನಮ್ಮೆಲ್ಲರ ಹೊಣೆಯಾಗಿದೆ. ಶ್ರೀಕಂಠಯ್ಯನವರು ಇಂದು ನಮ್ಮ ಕಣ್ಣ ಮುಂದೆ ಜೀವಂತವಾಗಿಲ್ಲ. ಆದರೆ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಶ್ರೀಯವರ ಹೆಸರು ಸುವರ್ಣಾಕ್ಷರಗಳಲ್ಲಿ ಕಂಗೊಳಿಸುತ್ತಿದೆ.

ಸಿರಿಗನ್ನಡಂ ಗೆಲ್ಗೆ

ಜಿ. ಪುರುಷೋತ್ತಮ

ಕನ್ನಡ ಅಕ್ಷರಗಳ ಓದುವಿಕೆ

ಮಾನವನ ಇತಿಹಾಸದಲ್ಲಿ ಇತ್ತೀಚಿನ ಬೆಳವಣಿಗೆ ಓದು. ಅದು ಬೇರೆ ಬೆಳವಣಿಗೆಗೂ ಸಹಾಯಕ. ಓದುವ ಕೆಲಸ ಮನುಷ್ಯನ ತಲೆಯಲ್ಲಿ ಹೇಗೆ ನಡೆಯುತ್ತದೆ ಎನ್ನುವುದನ್ನು ಇನ್ನೂ ಚೆನ್ನಾಗಿ ಅರ್ಥಮಾಡಿಕೊಳ್ಳಬೇಕಾಗಿದೆ. ಓದು ಭಾಷೆಯಂತೆ ಕ್ಲಿಷ್ಟವಾದ ವಿಷಯ. ಓದಿಗೆ ಬುದ್ಧಿಶಕ್ತಿ, ನೆನಪಿನ ಶಕ್ತಿ, ಅಭ್ಯಾಸ ಹಾಗೂ ಕಣ್ಣು ಕಿವಿಗಳ ಕೆಲಸ ಭಾಷೆಯಷ್ಟೇ ಮುಖ್ಯ. ಓದಿ ಅರ್ಥೈಸಿ ಉಪಯೋಗಿಸುವುದಂತಿರಲಿ ಬರಿಯ ಓದಿನ ಬೆಳವಣಿಗೆಯೇ ಬಹಳ ಮಕ್ಕಳಿಗೆ ತೊಡಕಾಗುತ್ತದೆ. ಮೇಲಿನ ಅಂಶಗಳ ಜೊತೆಗೆ ಒಂದು ಭಾಷೆ ಉಪಯೋಗಿಸುವ ಲಿಪಿಯ ಪ್ರಭಾವ ಕೂಡ ಓದಿನ ಮೇಲಿರುತ್ತದೆ. ಇಂಗ್ಲೀಷಿನ ಬರವಣಿಗೆ ಓದಲು ಕಲಿಯಲು ಕಷ್ಟ. ಕನ್ನಡ, ಇತರ ಭಾರತೀಯ, ಹಾಗೂ ಜಪಾನೀ ಭಾಷೆಗಳ ಲಿಪಿಗಳು ಓದಿಗೆ ಬಹಳ ಅನುಕೂಲಕರವಾಗಿವೆ. ಇಂಗ್ಲಿಷ್ ಓದುವ ಸುಮಾರು ಶೇಕಡ ಇಪ್ಪತ್ತರಷ್ಟು ಮಕ್ಕಳಿಗೆ ಓದು ಕಲಿಯಲು ತೊಂದರೆ ಇದ್ದರೆ ಜಪಾನೀ ಮಕ್ಕಳಿಗೆ ಹೆಚ್ಚು ಕಡಿಮೆ ತೊಂದರೆ ಇಲ್ಲವೇ ಇಲ್ಲವಂತೆ; (ಇದ್ದರೂ ಶೇಕಡ ಒಂದಕ್ಕಿಂತ ಕಡಿಮೆ). ಅದಕ್ಕೆ ಲಿಪಿಯೇ ಮುಖ್ಯ ಕಾರಣವೆಂದು ಹೇಳುವುದೂ ಉಂಟು. ಕನ್ನಡ ಲಿಪಿ ಅನುಕೂಲಕರವಾಗಿದ್ದರೂ ಸುಮಾರು ಶೇಕಡ ಹತ್ತರಷ್ಟು ಮಕ್ಕಳಾದರೂ ಓದಲು ಕಲಿಯಲು ಕಷ್ಟವನ್ನು ಅನುಭವಿಸುತ್ತಾರೆ.

ಒಬ್ಬ ಓದುತ್ತಿರುವಾಗ ಆತನ ಕಣ್ಣು, ಕಿವಿ ಮತ್ತು ಮೆದುಳಿನಲ್ಲಿ ಆಗುವ ಕೆಲಸವನ್ನು ತಿಳಿಯಲು ಬಹಳ ಕಷ್ಟ. ಆದರೂ ವೈಜ್ಞಾನಿಕ ಆಧಾರಗಳ ಜೊತೆ ಓದಿನ ಕೆಲಸ ನಡೆಯಬಹುದಾದ ಒಂದು ಚಿತ್ರವನ್ನು ರೂಪಿಸಲು ಸಾಧ್ಯವಾಗಿದೆ. ಓದು ಕಣ್ಣಿನ ಕೆಲಸವಾದರೂ, ನೋಡುವುದು ಓದಿನ ಒಂದು ಅವಶ್ಯ ಭಾಗವೇ ಹೊರತು ಅದೇ ಮುಖ್ಯವಲ್ಲ. ಅಂದರೆ ಓದುವ ತೊಂದರೆ ಇರುವ ಮಕ್ಕಳಿಗೆ ಯಾವುದೇ ರೀತಿಯ ಕಣ್ಣಿನ ತೊಂದರೆ ಇರಬೇಕಾದ್ದಿಲ್ಲ, ಹಾಗೂ ನೋಡುವ ತೊಂದರೆ ಇರುವ ಮಕ್ಕಳು ಓದಿನಲ್ಲಿ ಹಿಂದುಳಿಯಬೇಕಾದ್ದಿಲ್ಲ. ಕಲಿಯುವಿಕೆ, ಭಾಷೆ ಹಾಗೂ ಇತರೆ ಅಂಶಗಳು ಓದಿಗೆ ಬಹಳ ಮುಖ್ಯ.

ಪ್ರಸ್ತುತ ಹೇಳಲು ಹೊರಟಿರುವುದು ಓದಿನ ಕಲಿಕೆಯ ತೊಂದರೆಗಳ ಬಗ್ಗೆ ಅಲ್ಲ. ಇದು ಕನ್ನಡ ಅಕ್ಷರಗಳ ಓದುವಿಕೆಯ ಬಗ್ಗೆ. ಒಂದು ಹೊಸ ಪದವನ್ನು ಓದುವಲ್ಲಿ ನಾವು ನಿಧಾನಿಸುತ್ತೇವೆ. ಪದದ ಒಂದೊಂದು ಅಕ್ಷರವನ್ನು (ಲಿಪಿಯ ಮೂಲಮಾನ) ಕೆಲವು ಸಾರಿ ಗಮನಿಸಬೇಕಾಗಬಹುದು. ತದನಂತರ ಆ ಪದವನ್ನು ಪೂರ್ತಿ ಹೇಳುತ್ತೇವೆ ಅಥವಾ ಅರ್ಥೈಸಿಕೊಳ್ಳುತ್ತೇವೆ. ಆದರೆ ಈ ರೀತಿಯಾಗುವುದು ಬಹಳ ಅಪರೂಪ. ನಮಗೆ ಅಪರಿಚಿತ ವಿಷಯದ ಬಗ್ಗೆ ಓದುವಾಗ ಅಥವಾ ಗಮನವಿಟ್ಟು ಓದಲೇ ಬೇಕಾದ ಸಮಯದಲ್ಲಿ (ಉದಾಹರಣೆಗೆ ಕರಾರುಗಳನ್ನು ಓದಬೇಕಾದಾಗ) ಈ ರೀತಿ ಆಗುತ್ತದೆ. ಆದರೆ ಕಾದಂಬರಿಗಳಂಥ (!) ಸುಲಭವಾದ ಬರವಣಿಗೆಗಳನ್ನು ಓದಲು ಬೇಗ ಹಾಗೂ ಸುಲಭಸಾಧ್ಯ. ಹಾಗೂ ಸುಲಭವಾಗಿ ಓದುವಾಗ ನಾವು ಒಂದೊಂದೇ ಅಕ್ಷರವನ್ನು ಗಮನಿಸುವ ಅವಶ್ಯಕತೆ ಇರುವುದಿಲ್ಲ. ಒಂದೊಂದು ಪದಗಳನ್ನು ಗಮನಿಸುವುದೂ ಕೂಡ ಬೇಕಾಗುವುದಿಲ್ಲ. ಹೀಗೆ ಸಮಯಾನುಸಾರ ಓದು ಬೇರೆ ಬೇರೆ ರೀತಿ ಸಾಗುತ್ತದೆ.

ಓದುವಾಗ ಮಿದುಳು ಒಂದೊಂದೂ ಅಕ್ಷರವನ್ನು ಕಂಡು ಅವನ್ನು ಅನಂತರ ಸೇರಿಸಿ ಪದಗಳನ್ನು ಅರ್ಥೈಸಿಕೊಳ್ಳುತ್ತದೋ, ಅಥವಾ ಒಂದು ಪದವನ್ನು (ಅಕ್ಷರ ಗುಚ್ಛವನ್ನು) ಒಂದೇ ಏಟಿಗೆ ಇಡಿಯಾಗಿ ಕಂಡು ಅರ್ಥೈಸಿಕೊಳ್ಳುತ್ತದೋ ಹೇಗೆ ಅನ್ನುವುದು ಇನ್ನೂ ಜಿಜ್ಞಾಸೆಯಾಗೇ ಉಳಿದಿದೆ. ಆದರೂ ಈ ಎರಡೂ ರೀತಿಯ ಕಾರ್ಯಗಳು ಸಮಯಾನುಸಾರ ನಡೆಯುತ್ತದೆ ಎಂದು ಕಂಡುಬರುತ್ತದೆ. ಹೀಗಾಗಿ ಯಾವುದೇ ಒಂದಕ್ಕೆ ಹೆಚ್ಚಿನ ಆಧಾರ ಕಂಡುಬರುತ್ತಿಲ್ಲ. ಓದಿನ ಬಗ್ಗೆ ನಡೆದಿರುವ ವೈಜ್ಞಾನಿಕ ಪ್ರಯೋಗಗಳಲ್ಲಿ ನಮಗೆ ಕುತೂಹಲ ಕೆರಳಿಸುವ ವಿಷಯವೆಂದರೆ ಓದು 'ಕಾಣುವುದಕ್ಕಿಂತ' ಹೆಚ್ಚಾಗಿ 'ಮಾತನ್ನು' ಅವಲಂಬಿಸಿರುವುದು. ಕಿವಿಗೆ ಸುಲಭವಾದ ಕಾರ್ಯ ಓದಿನ ವಿಷಯದಲ್ಲೂ ಸುಲಭವೆಂದು ಕಂಡುಬಂದಿದೆ. ಧ್ವನಿಮಾ (Phoneme) ವನ್ನು ಬಿಡಿಯಾಗಿ ಗುರುತಿಸಲು ನಮಗೆ ಕಷ್ಟ. ಆದರೆ ಉಚ್ಚಾರಾಂಶಗಳನ್ನು (Syllable) ಗುರುತಿಸಲು ಸುಲಭ ಸಾಧ್ಯ. ಇದು ಓದಿನ ವಿಷಯದಲ್ಲೂ ನಿಜ. ಇಂಗ್ಲೀಷಿನ ಬರವಣಿಗೆ ಮೂಲಮಾನ ಧ್ವನಿಮಾ ಆದರೂ ಓದುವಾಗ ಒಂದು ಪದವನ್ನು ಉಚ್ಚಾರಾಂಶಗಳನ್ನಾಗಿ ವಿಭಾಗಿಸಿ ನಂತರ ಓದುತ್ತೇವೆಂದು ತಿಳಿದು ಬಂದಿದೆ. ಜಪಾನೀ ಭಾಷೆಯನ್ನು ಉಚ್ಚಾರಾಂಶಗಳಲ್ಲಿ ಬರೆಯುವುದರಿಂದಲೇ ಆ ಭಾಷೆಯನ್ನು ಓದಲು ಕಲಿಯಲು ಆ ಮಕ್ಕಳಿಗೆ ಸುಲಭವಾಗಿದೆಯೆಂದು ಒಂದು ವಾದ.

ಒಂದು ಪದದ ಓದುವ ಸಮಯ ಆ ಪದದಲ್ಲಿ ಇರುವ ಅಕ್ಷರಗಳ ಸಂಖ್ಯೆಯನ್ನು ಅವಲಂಬಿಸಿರುತ್ತದೆ. ಅಲ್ಲದೇ ಒಂದು ಪದವನ್ನು ಓದುವ ಸಮಯ ಆ ಪದದಲ್ಲಿರುವ ಧ್ವನಿಮಾಗಳನ್ನು ಇನ್ನೂ ಹೆಚ್ಚಾಗಿ ಅವಲಂಬಿಸಿರುತ್ತದೆ. ಇಂಗ್ಲೀಷಿನಲ್ಲಿ ಪ್ರತಿಯೊಂದು ಅಕ್ಷರವೂ ಒಂದೊಂದು ಧ್ವನಿಮಾವನ್ನು ಪ್ರತಿನಿಧಿಸುತ್ತದೆ. ಆದರೆ ಕನ್ನಡದಲ್ಲೂ

ದರೋ ಪ್ರತಿಯೊಂದು ಅಕ್ಷರವೂ ಸಾಮಾನ್ಯವಾಗಿ ಒಂದಕ್ಕಿಂತ ಹೆಚ್ಚಿನ ಸಂಖ್ಯೆಯ ಧ್ವನಿಮಾಗಳನ್ನು ತನ್ನಲ್ಲಿ ಇರಿಸಿಕೊಂಡಿರುತ್ತದೆ. ಅಂದರೆ ಕನ್ನಡದ ಒಂದೇ ಅಕ್ಷರ ದಲ್ಲಿ ಬರೆಯುವುದನ್ನು ಇಂಗ್ಲೀಷಿನಲ್ಲಿ ಬರೆಯಲು ಹಲವು ಅಕ್ಷರಗಳು ಬೇಕಾಗುತ್ತದೆ. ಉದಾಹರಣೆಗೆ 'ಡ್ರಾ' (Draw) ನಾಲ್ಕು ಅಕ್ಷರಗಳಿಂದಾಗುತ್ತದೆ. ಹೀಗಿದ್ದಲ್ಲಿ ಕನ್ನಡದ ಒಂದು ಉಚ್ಚಾರಾಂಶವನ್ನು ಓದುವುದು ಇಂಗ್ಲೀಷಿನ ಒಂದು ಉಚ್ಚಾರಾಂಶ ವನ್ನು ಓದುವುದಕ್ಕಿಂತ ಸುಲಭವಾಗುತ್ತದೆಯೇ ? ಆಗಬೇಕೆಂದು ವಾದಿಸಲು ಸಾಧ್ಯ. ಏಕೆಂದರೆ ಕನ್ನಡ ಓದುವಾಗ ಉಚ್ಚಾರಾಂಶವನ್ನು ಬೇರೆ ಬೇರೆಯಾಗಿ ಓದುಗ ಪೇಪರಿನ ಮೇಲೆಯೇ ಕಾಣುತ್ತಾನೆ. ಇಂಗ್ಲೀಷಿನಲ್ಲಾದರೆ ಓದುವಾಗ ಒಟ್ಟಿಗೆ ಇರುವ ಅಕ್ಷರ ಗಳನ್ನು ಮೊದಲು ಉಚ್ಚಾರಾಂಶಗಳನ್ನಾಗಿ ವಿಭಾಗಿಸಬೇಕು. ಎರಡನೆಯದಾಗಿ, ಕನ್ನಡದಲ್ಲಿ ಒಂದು ಅಥವಾ ಕೆಲವು ಧ್ವನಿಮಾಗಳು ಒಂದೇ ಅಕ್ಷರದಲ್ಲಿ ಅಡಕವಾಗಿರು ವುದರಿಂದ ದೃಷ್ಟಿಯ ಕೆಲಸ ಸುಲಭವಾಗಲು ಸಾಧ್ಯ. ಮೂರನೆಯದಾಗಿ, ಕನ್ನಡ ಲಿಪಿಯಲ್ಲಿ ದ್ವಂದ್ವ ಶಬ್ದಗಳನ್ನು ಹೊಂದಿರುವ ಅಕ್ಷರಗಳಿಲ್ಲ, (ಇಂಗ್ಲೀಷಿನಲ್ಲಿ 'o' ಅನ್ನು ಹನ್ನೊಂದು ರೀತಿಯಲ್ಲಿ ಹೇಳಲು ಸಾಧ್ಯವಂತೆ) ಪ್ರತಿಯೊಂದು ಅಕ್ಷರವನ್ನು ಒಂದು ರೀತಿಯಲ್ಲಿ ಮಾತ್ರ ಹೇಳಲು ಸಾಧ್ಯ.

ಕನ್ನಡ ಓದಲು ಸುಲಭವೋ ಅಲ್ಲವೋ ಎನ್ನುವುದನ್ನು ಉತ್ತರಿಸುವ ಮೊದಲು ಕೆಲವು ಮೂಲಭೂತ ಪ್ರಶ್ನೆಗಳನ್ನು ಹಾಕಿಕೊಳ್ಳಬೇಕಾಗುತ್ತದೆ. 'ಅ' ಒಂದು ಅಕ್ಷರ ಅದು ಒಂದು ಧ್ವನಿಮಾವನ್ನು ಬರೆಯುವ ರೀತಿ. 'ರಿ' ಕೂಡ ಒಂದು ಅಕ್ಷರ ವಾದರೂ ಅದರಲ್ಲಿ 'ರ' ಮತ್ತು 'ಇ' ಹೀಗೆ ಎರಡು ಧ್ವನಿಮಾಗಳಿವೆ. ಇವೆರಡನ್ನೂ ಓದುವುದಕ್ಕೆ ಬೇಕಾಗುವ ಸಮಯದಲ್ಲಿ ವ್ಯತ್ಯಾಸ ಇದೆಯೇ ಹೇಗೆ ಇದಕ್ಕೆ ಮೊದಲು ನಮಗೆ ಉತ್ತರ ಸಿಗಬೇಕು. ಕನ್ನಡ ಅಕ್ಷರಗಳನ್ನು ಬರೆಯುವಲ್ಲಿ ಉಚ್ಚಾರ ಚಿಹ್ನೆಗೂ ಹಾಗೂ ಧ್ವನಿಮಾಗೂ ಒಂದಕ್ಕೊಂದು ನಿಕಟವಾದ ಸಂಬಂಧವಿಲ್ಲ. ಉದಾಹರಣೆಗೆ 'ಟ' ಅಕ್ಷರದಲ್ಲಿ ಒಂದೇ ಚಿಹ್ನೆ ಎರಡು ಧ್ವನಿಮಾಗಳನ್ನು ಪ್ರತಿನಿಧಿಸಿದರೆ 'ರೋಂ' ಅಕ್ಷರದಲ್ಲಿ ಆರು ಚಿಹ್ನೆಗಳು ಎರಡು ಧ್ವನಿಮಾಗಳನ್ನು ಪ್ರತಿನಿಧಿಸಿವೆ. ಹೀಗಾಗಿ ಒಂದು ಉಚ್ಚಾರಾಂಶವನ್ನು ಓದುವ ಸಮಯ ಅದರ ಧ್ವನಿಮಾಗಳನ್ನು ಅವಲಂಬಿಸಿ ರುತ್ತದೋ ಅಥವಾ ಅದನ್ನು ಬರೆದಿರುವ ಉಚ್ಚಾರ ಚಿಹ್ನೆಗಳನ್ನು ಅವಲಂಬಿರುತ್ತದೋ ತಿಳಿಯುವುದು ಮುಖ್ಯ. ಅದಕ್ಕಾಗಿ ಈ ಕೆಳಕಂಡ ಪ್ರಯೋಗವನ್ನು ಮಾಡ ಲಾಯಿತು.

ಈ ಪ್ರಯೋಗದಲ್ಲಿ ಚೆನ್ನಾಗಿ ಕನ್ನಡ ಓದಬಲ್ಲ ವಯಸ್ಕರು ಬೇರೆ ಬೇರೆ ಅಕ್ಷರ ಗಳನ್ನು ಗುರುತಿಸಿದರು. ಟೆಚಿಸ್ಟೋಸ್ಕೋಪ್ (Tachistoscope) ಉಪಕರಣವನ್ನು ಉಪಯೋಗಿಸಿ ಅಕ್ಷರಗಳನ್ನು ಒಂದು ಪರದೆಯ ಮೇಲೆ ತೋರಿಸಲಾಯಿತು. ಅಕ್ಷರ ವನ್ನು ತೋರಿಸುವ ಮೊದಲು ಯಾವ ಅಕ್ಷರ ಪರದೆಯ ಮೇಲೆ ಬರುತ್ತದೆಂದು ಅವರಿಗೆ ಹೇಳಲಾಗುತ್ತಿತ್ತು. ಆದರೆ ಪರದೆಯ ಮೇಲೆ ಅದೇ ಅಕ್ಷರ ಬರುತ್ತದೆಂದಿರ

ಲಿಲ್ಲ. ಶೇಕಡ 50 ಸಾರಿ ಮಾತ್ರ ಹೇಳಿದ ಅಕ್ಷರವೇ ಕಾಣುತ್ತಿತ್ತು. ಉದಾಹರಣೆಗೆ 'ಖ' ಎಂದು ಹೇಳಿದ ನಂತರ 'ಖಿ' ಅಕ್ಷರ ಕಂಡು ಬರಲು ಸಾಧ್ಯವಿತ್ತು. ಹೀಗಾಗಿ ಅವರು ಅಕ್ಷರಗಳನ್ನು ನಿಖರವಾಗಿ ಗುರುತಿಸುವ ಆವಶ್ಯಕತೆ ಇತ್ತು. ಓದುವವರ ಅನುಕೂಲಕ್ಕೋಸರ ಅಕ್ಷರಗಳು ಬರುವ ಸಂದರ್ಭವನ್ನು ಕೂಡ ಸೂಚಿಸಲಾಗುತ್ತಿತ್ತು (ಉದಾ: 'ಖಿ' ರಾಖಿ ಪದದಲ್ಲಿರುವಂತೆ). ಅಕ್ಷರವನ್ನು ಕಂಡ ಕೂಡಲೇ ಸರಿಯಾಗಿದ್ದರೆ ಒಂದು ಸ್ವಿಚ್ಚನ್ನೂ ಅಕ್ಷರ ಹೇಳಿದ ಶಬ್ದಕ್ಕೆ ಹೊಂದದಿದ್ದರೆ ಬೇರೊಂದು ಸ್ವಿಚ್ಚನ್ನೂ ತಕ್ಷಣ ಒತ್ತಲೂ ಅಭ್ಯಾಸ ಮಾಡಿಸಲಾಯಿತು.

ಕನ್ನಡ ಉಚ್ಚಾರಾಂಶಗಳನ್ನು ಬರೆಯಲು ಧ್ವನಿಮಾಗಳನ್ನು ಹಾಗೂ ಅಕ್ಷರ ಚಿಹ್ನೆಗಳ ಸಂಖ್ಯೆಯನ್ನು ಒಂದು ವ್ಯವಸ್ಥಿತ ರೀತಿಯಲ್ಲಿ ಹೆಚ್ಚು ಕಡಿಮೆ ಮಾಡಿ ಬರೆಯಲಾಯಿತು. ಅದನ್ನು ಚಿತ್ರ ಒಂದರಲ್ಲಿ ತೋರಿಸಲಾಗಿದೆ. ಈ ಪ್ರಯೋಗದಲ್ಲಿ ಕಂಡು ಬಂದ ವಿಷಯಗಳು ಇವು, ನೋಡಿದ ಅಕ್ಷರ ಹಾಗೂ ಕೇಳಿದ ಶಬ್ದ ಒಂದೇ ಆಗಿದ್ದಲ್ಲಿ ಅವನ್ನು ಹೊಂದಿಸಲು ಕಡಿಮೆ ಸಮಯ ಹಿಡಿಯುತ್ತಿತ್ತು. (ಸರಾಸರಿ 612 ಮಿ. ಸೆಕೆಂಡುಗಳು) ಅವು ಬೇರೆ ಆಗಿದ್ದ ಪಕ್ಷದಲ್ಲಿ ಸಮಯ ಹೆಚ್ಚು ಬೇಕಾಗುತ್ತಿತ್ತು. (ಸರಾಸರಿ 667 ಮಿ. ಸೆಕೆಂಡುಗಳು) ಒಂದು ಉಚ್ಚಾರಾಂಶದಲ್ಲಿನ ಧ್ವನಿಮಾಗಳು ಹೆಚ್ಚಾದಂತೆ ಅವುಗಳನ್ನು ಗುರುತಿಸಲು ಬೇಕಾದ ಸಮಯ ಕೂಡ ಹೆಚ್ಚು. ಅದರಲ್ಲೂ ಒಂದು ಅಕ್ಷರದಲ್ಲಿ ಮೂರಕ್ಕಿಂತ ಹೆಚ್ಚು ಧ್ವನಿಮಾಗಳಿದ್ದರೆ ಸರಾಸರಿಗಿಂತ ಹೆಚ್ಚು ಸಮಯ ಬೇಕಾಗುತ್ತದೆ. (ಚಿತ್ರ 2,3,4 ನೋಡಿ) ಎರಡು ಧ್ವನಿಮಾಗಳಿರುವ ಅಕ್ಷರಗಳನ್ನು ಬಹಳ ಬೇಗ ಗುರುತಿಸಲು ಸಾಧ್ಯವಾಗುತ್ತದೆ. ಇದಕ್ಕೆ ಕೊಡಬಹುದಾದ ಕಾರಣವೇನೆಂದರೆ ನಾವು ಬಹಳವಾಗಿ ಕಲಿತ ಹಾಗೂ ಬಹಳ ಕಾಣುವ ಅಕ್ಷರಗಳೆಂದರೆ ಎರಡು ಧ್ವನಿಮಾಗಳು ಇರುವಂಥವು. ಅದು ಕನ್ನಡ ಲಿಪಿಯ ಗುಣ. ಅದರಿಂದ ಒಂದು ಧ್ವನಿಮಾ ಇರುವ ಅಕ್ಷರಗಳನ್ನು ಗುರುತಿಸುವುದಕ್ಕಿಂತ ಎರಡೂ ಧ್ವನಿಮಾಗಳ ಅಕ್ಷರಗಳನ್ನು ಗುರುತಿಸುವುದು ಹೆಚ್ಚು ಸುಲಭ. ಧ್ವನಿಮಾಗಳಂತೆಯೇ ಅಕ್ಷರ ಚಿಹ್ನೆಗಳು ಕೂಡ ಅಕ್ಷರವನ್ನು ಗುರುತಿಸಲು ಬೇಕಾಗುವ ಸಮಯವನ್ನು ನಿರ್ಧರಿಸುತ್ತವೆ. ನಾಲ್ಕು ಅಕ್ಷರ ಚಿಹ್ನೆಗಳನ್ನು ಒಂದೇ ಅಕ್ಷರದಲ್ಲಿ ಗುರುತಿಸಲು ಸಮಯ ಸರಾಸರಿಗಿಂತ ಕಡಿಮೆ ಸಾಕು, ನಾಲ್ಕಕ್ಕಿಂತ ಹೆಚ್ಚಾದರೆ ಸಮಯ ಹೆಚ್ಚು ಬೇಕಾಗುತ್ತದೆ. ಧ್ವನಿಮಾಗಳ ವಿಷಯದಲ್ಲಿ ಆದಂತೆ ಎರಡು ಅಕ್ಷರ ಚಿಹ್ನೆಗಳನ್ನು ಗುರುತಿಸಲು ಬೇಕಾದ ಸಮಯ ಕನಿಷ್ಠ (ಚಿತ್ರ 2,5,6 ನೋಡಿ).

ಈ ಪ್ರಯೋಗದ ಪ್ರಕಾರ ಪ್ರತಿಯೊಂದು ಹೆಚ್ಚಿನ ಧ್ವನಿಮಾಗೆ 53 ಮಿಲಿ ಸೆಕೆಂಡುಗಳು ಬೇಕಾದರೆ ಅಕ್ಷರ ಚಿಹ್ನೆಗೆ (ಮೂಲಮಾನಕ್ಕೆ) ಬರಿ 36 ಮಿಲಿ ಸೆಕೆಂಡುಗಳು ಸಾಕು. ಅಂದರೆ 'ದ' ಗಿಂತ 'ದ್ರ' ಓದಲು 58 ಮಿಲಿಸೆಕೆಂಡು ಹೆಚ್ಚು

ಬೇಕಾದರೆ 'ದ'ಗಿಂತ 'ದು' ಓದಲು 36 ಮಿಲಿಸೆಕೆಂಡುಗಳು ಹೆಚ್ಚು ಬೇಕಾಗುತ್ತವೆ.

ಈ ಪ್ರಯೋಗದಿಂದ ಹೇಳಬಹುದಾಗಿದ್ದು ಇದು. 'ಅ' ಗಿಂತ 'ರಿ' ಓದಲು ಹೆಚ್ಚು ಸಮಯ ಬೇಕು. ಹಾಗೆಯೇ ತಾರ್ಕಿಕವಾಗಿ 'ರಿ' ಗಿಂತ 'ರ್'+ಇ ಓದಲು ಹೆಚ್ಚು ಸಮಯ ಬೇಕು. ಮಿದುಳಿಗೆ ಕೆಲಸ ಜಾಸ್ತಿ. ಧ್ವನಿಮಾಗಳಂತೆ ಅಕ್ಷರ ಚಿಹ್ನೆಗಳು ಹೆಚ್ಚಿದಂತೆಲ್ಲಾ ಓದಲು ಬೇಕಾದ ಸಮಯ ಹೆಚ್ಚಾಗುತ್ತದೆ.

ಒಟ್ಟಿನಲ್ಲಿ ಓದಿಗೆ ಅಕ್ಷರ ಚಿಹ್ನೆಗಳು ಅಂತೆಯೇ ಅವುಗಳು ಪ್ರತಿನಿಧಿಸುವ ಧ್ವನಿಮಾಗಳು ಎರಡೂ ಮುಖ್ಯ. ಧ್ವನಿಮಾಗಳು ಮಾತಿನ ಭಾಗಗಳು. ಹಾಗೆಯೇ ಭಾಷೆಯ ಭಾಗಗಳು ಕೂಡ, ಅವರ ಮೇಲೆ ಮನುಷ್ಯನ ಹತೋಟಿ ಅಸಾಧ್ಯ. ಧ್ವನಿಮಾಗಳನ್ನು ಬರೆಯುವ ರೀತಿಯನ್ನು ಬೇರೆ ಬೇರೆ ಲಿಪಿಗಳು ಬೇರೆ ಬೇರೆ ತರಹ ಮಾಡುತ್ತವೆ. ಕನ್ನಡ ಉಚ್ಚಾರಾಂಶಗಳನ್ನು ಬೇರೆ ಬೇರೆ ರೀತಿ ಬರೆಯಲು ಸಾಧ್ಯ. ಪೀಕ್ಲಾಟವನ್ನು ಪೀಕ್‌ಲಾಟವಾಗಿ ಬರೆಯುವುದು ಉಂಟು. ಇತ್ತೀಚಿನ ಯಂತ್ರೋಪಕರಣಗಳ ಉಪಯೋಗದಿಂದಾಗಿ ಅಕ್ಷರಗಳನ್ನು ಯಾವ ಯಾವ ರೀತಿಯಲ್ಲಿ ಸಾಧ್ಯವೋ ಆ ಎಲ್ಲ ರೀತಿಯೂ ಮುದ್ರಿಸಿ ನೋಡಲು ಹೊರಟಂತಿದೆ. ಬರೆಯುವ ರೀತಿ ಓದುವ ಕೆಲಸದ ಮೇಲೆ ಪ್ರಭಾವ ಬೀರುತ್ತದೆ ಎಂಬುದು ಪ್ರಾಯೋಗಿಕವಾಗಿ ಬೇರೆ ಭಾಷೆಗಳಲ್ಲೂ ಕಂಡು ಬಂದ ವಿಷಯವಾಗಿದೆ. ಕನ್ನಡ ಬರೆಯುವ ರೀತಿಯನ್ನು ಕುರಿತು ಈ ಸಮಯದಲ್ಲಿ ಯೋಚಿಸಬೇಕು.

ಅಭಿನಂದನೆ: ಈ ಕೆಲಸವನ್ನು ನಿರ್ದೇಶಿಸಿದ ರಾಚೆಸ್ಟರ್ ವಿಶ್ವವಿದ್ಯಾಲಯದ ಡಾ. ಚಾಪ್‌ಮನ್, ಸಹಾಯ ಮಾಡಿದ ಜಾನ್ ಚಾಪ್‌ಮನ್ ಹಾಗೂ ಪರೀಕ್ಷೆಗೊಳಗಾದ ಸ್ನೇಹಿತರಿಗೆ.

ಓದುಗಾರಿಕೆ ಲೋಕದ ಬಹುದೊಡ್ಡ ವ್ಯವಹಾರ; ಬೆಳಕನ್ನು ಪಡೆಯುವ ಸಾಧನ. ಅದು ನಾಗರಿಕ ಸಮಾಜದ ಒಂದು ಲಕ್ಷಣ; ಸುಶಿಕ್ಷಿತರ ಅವಿಭಾಜ್ಯ ಚರ್ಯೆ. ಓದು ಬರಹ ಬಲ್ಲವರ ದಿನಗಳು ತೊಡಗುವುದೇ ಓದುಗಾರಿಕೆಯಿಂದ. ಬೆಳಗ್ಗೆ ಎದ್ದು ಮಕ್ಕಳು ಶಾಲೆಯ ಪುಸ್ತಕ ಹಿಡಿಯುತ್ತಾರೆ; ದೊಡ್ಡವರು ಪತ್ರಿಕೆ ಹಿಡಿಯುತ್ತಾರೆ. ಕೆಲವರಿಗೆ ಓದು ಹವ್ಯಾಸ; ಇನ್ನು ಕೆಲವರಿಗೆ ಅದು ಉದ್ಯೋಗ.

* * *

ಓದುಗಾರಿಕೆಯಿಂದ ಸುಖಸಂತೋಷಗಳು ವರ್ಧಿಸುತ್ತವೆ; ಜ್ಞಾನ ದಿಗಂತ ವಿಸ್ತರಿಸುತ್ತದೆ. ಅರ್ಹತೆ ಯೋಗ್ಯತೆ ಹೆಚ್ಚುತ್ತವೆ. ಪುಸ್ತಕ ರಾಶಿಯನ್ನು ನೋಡಿದಾಗ ನಾವೆಷ್ಟು ಸಣ್ಣವರೆಂದು ಗೊತ್ತಾಗುತ್ತದೆ. ಪುಸ್ತಕ ಭಂಡಾರಗಳಿಗೋ, ಪುಸ್ತಕದಂಗಡಿಗಳಿಗೋ ಹೋದಾಗ ಅಲ್ಲಿ ಕಾಲದೇಶಗಳು ಸಂಸ್ಕೃತಿ—ನಾಗರಿಕತೆಗಳು ನಮ್ಮನ್ನು ಕರೆದು ಅಣಕಿಸುವ ಅನುಭವವಾಗುತ್ತದೆ. ಒಂದು ಪುಸ್ತಕವನ್ನು ಹಿಡಿದುಕೊಂಡಾಗಲೆಲ್ಲ ಒಂದು ಹೊಸ ಬದುಕಿಗೆ ಹತ್ತಿರವಾದ ಅರಿವಾಗುತ್ತದೆ. ಎಷ್ಟೊಂದು ಪುಸ್ತಕಗಳು! ಎಷ್ಟೊಂದು ವಿಷಯಗಳು! ನಮ್ಮ ನಮ್ಮ ಅಧ್ಯಯನ ಕ್ಷೇತ್ರವನ್ನು ಸೀಮಿತಗೊಳಿಸಿಕೊಂಡರೂ ಅದಕ್ಕೇ ಸಂಬಂಧಿಸಿದ ಪುಸ್ತಕಗಳನ್ನೆಲ್ಲ ಓದಲು ಎಷ್ಟೊಂದು ಸಲ ಜನ್ಮವೆತ್ತಿ ಬರಬೇಕಾಗುತ್ತದೋ.

—ಡಾ॥ ಹಾ. ಮಾ. ನಾಯಕ, ಸೂಲಂಗಿ, ಪು ೯೬–೯೭

ಧ್ವನಿಮಾಗಳು

ಬರವಣಿಗೆಯ ಮೂಲಮಾನಗಳು

	1	2	3	4	5
1	ಅ	ಲ			
2		ಕ	ಟಂ		
3		ಗು	ವ್ಮೃ	ಟ್ರಂ	
4		ಕೊ	ದ್ರು	ಕ್ಷ್ಮಿ	
5		ಧೊ	ನ್ಯೂ	ಕ್ರೀಂ	
6			ದ್ರೊ		ಸ್ಟೀಂ
7				ಡ್ರೋಂ	

ಚಿತ್ರ : 1 — ಅಕ್ಷರ ಚಿಹ್ನೆ ಹಾಗೂ ಧ್ವನಿಮಾಗಳನ್ನು ಅಳವಡಿಸಿದ ವ್ಯವಸ್ಥಿತ ರೀತಿ.
(ಉದಾಹರಣೆಗಳೊಡನೆ)

ಬರವಣಿಗೆಯ ಮೂಲಮಾನಗಳು	ಧ್ವನಿಮಾಗಳು					
	1	2	3	4	5	6
1	— 75	— 144				— 109
2		— 138	— 143			— 140
3		— 100	— 90	89		— 33
4		— 44	2	— 2		— 14
5		— 9	116	69		+ 58
6			2		118	+ 60
7				63		+ 63
ಸರಾಸರಿ	— 75	— 87	— 22	+ 54	+ 118	

ಚಿತ್ರ : 2 — ಬರವಣಿಗೆಯ ಮೂಲಮಾನಗಳು ಹಾಗೂ ಧ್ವನಿಮಾಗಳನ್ನು ಓದಲು ತೆಗೆದುಕೊಂಡ ಸಮಯ. (ಸರಾಸರಿಯಿಂದ ಮಿಲಿ ಸೆಕೆಂಡುಗಳ ವ್ಯತ್ಯಾಸವನ್ನು ಮಾತ್ರ ಇಲ್ಲಿ ತೋರಿಸಲಾಗಿದೆ).

ಬರವಣಿಗೆಯ ಮೂಲಮಾನಗಳು	ಧ್ವನಿಮಾಗಳು	ಮಿ.ಸೆಕೆಂಡುಗಳು
1 ಮೂಲಮಾನ	1 ಧ್ವನಿಮಾ	— 75
	2 ಧ್ವನಿಮಾಗಳು	— 144
2 ಮೂಲಮಾನ	2 ಧ್ವನಿಮಾಗಳು	— 138
	3 ಧ್ವನಿಮಾಗಳು	— 43
3 ಮೂಲಮಾನ	2 ಧ್ವನಿಮಾಗಳು	— 100
	3 ಧ್ವನಿಮಾಗಳು	— 90
	4 ಧ್ವನಿಮಾಗಳು	— 89
4 ಮೂಲಮಾನ	2 ಧ್ವನಿಮಾಗಳು	— 44
	3 ಧ್ವನಿಮಾಗಳು	+ 2
	4 ಧ್ವನಿಮಾಗಳು	— 2
5 ಮೂಲಮಾನ	2 ಧ್ವನಿಮಾಗಳು	— 9
	3 ಧ್ವನಿಮಾಗಳು	+ 116
	4 ಧ್ವನಿಮಾಗಳು	+ 69
6 ಮೂಲಮಾನ	3 ಧ್ವನಿಮಾಗಳು	+ 2
	5 ಧ್ವನಿಮಾಗಳು	+ 118

ಚಿತ್ರ : 3 — ಬರವಣಿಗೆಯ ಮೂಲಮಾನಗಳನ್ನು ಬದಲಾಯಿಸದೆ ಬರಿಯ ಧ್ವನಿಮಾಗಳ ಸಂಖ್ಯೆ ಹೆಚ್ಚಿಸಿದಾಗ ಅವನ್ನು ಓದಲು ಬೇಕಾಗುವ ಸಮಯದ ವ್ಯತ್ಯಾಸಗಳು.

ಧ್ವನಿಮಾಗಳು	ಬರವಣಿಗೆಯ ಮೂಲಮಾನಗಳು	ಮಿಲಿ ಸೆಕೆಂಡುಗಳು
1 ಧ್ವನಿಮಾ	1 ಮೂಲಮಾನ	— 75
2 ಧ್ವನಿಮಾಗಳು	1 ಮೂಲಮಾನ	— 144
	2 ಮೂಲಮಾನಗಳು	— 138
	3 ಮೂಲಮಾನಗಳು	— 100
	4 ಮೂಲಮಾನಗಳು	— 44
	5 ಮೂಲಮಾನಗಳು	— 9
3 ಧ್ವನಿಮಾಗಳು	2 ಮೂಲಮಾನಗಳು	— 43
	3 ಮೂಲಮಾನಗಳು	— 90
	4 ಮೂಲಮಾನಗಳು	+ 2
	5 ಮೂಲಮಾನಗಳು	+ 116
	6 ಮೂಲಮಾನಗಳು	+ 2
4 ಧ್ವನಿಮಾಗಳು	3 ಮೂಲಮಾನಗಳು	+ 89
	4 ಮೂಲಮಾನಗಳು	— 2
	5 ಮೂಲಮಾನಗಳು	+ 69
	6 ಮೂಲಮಾನಗಳು	+ 63
5 ಧ್ವನಿಮಾಗಳು	6 ಮೂಲಮಾನಗಳು	+ 118

ಚಿತ್ರ : 4 — ಧ್ವನಿಮಾಗಳನ್ನು ಬದಲಾಯಿಸದೆ ಮೂಲಮಾನಗಳ ಸಂಖ್ಯೆಯನ್ನು ಹೆಚ್ಚಿಸಿದಾಗ ಆ ಅಕ್ಷರಗಳನ್ನು ಓದಲು ಬೇಕಾದ ಸಮಯದ ವ್ಯತ್ಯಾಸಗಳು.

ಡಾ. ಕೆ. ಕೆಂಪೇಗೌಡ

ದ್ರಾವಿಡ ಸಂಖ್ಯಾವಾಚಕಗಳು
(ಮುಂದುವರೆದುದು)

ಮೂರು ಎಂಬುದಕ್ಕೆ ದ್ರಾವಿಡಭಾಷೆಗಳಲ್ಲಿ ಬೇರೆ ಬೇರೆ ಸ್ವತಂತ್ರ ಹಾಗೂ ವಿಶೇಷಣ ರೂಪಗಳು ಬಳಕೆಯಲ್ಲಿರುವುದು ಕಂಡುಬರುತ್ತವೆ. ತಮಿಳಿನ ಮೂನ್ಱು, ಮೂಣ್ಣು ಮಲೆಯಾಳಂನ ಮೂನ್ನು, ಕೋತದ ಮೂನ್ದ್, ತೊದದ ಮೂದ್, ಕನ್ನಡದ ಮೂಱು, ಮೂರು, ಕೊಡಗಿನ ಮೂನ್ದ್, ಮೂಣ್ಡ್, ತುಳುವಿನ ಮೂಜಿ, ತೆಲುಗಿನ ಮೂನ್ಱು, ಮೂಡು, ಕೊಲಾಮಿ, ನಾಯ್ಕಿಗಳ ಮೂನ್ದಿಙ್, ಪರ್ಜಿಯ ಮೂದುಕ್, ಗದಬದ ಮೂನ್ದ್, ಮೂನ್ಡ್, ಗೋಂಡಿಯ ಮೂಣ್ಡ್, ಮೂನ್ದ್, ಮುಣ್ಡ್, ಮುಡು, ಕೊಂಡದ ಮುಂಡರಿ, ಮುಂದರಿ, ಮುನ್ದ್ರು, ಕುಯಿ, ಕುವಿಗಳ ಮೂಂಜಿ, ಮುಂಜಿ, ಬ್ರಾಹುಈಯ ಮುಸಿಟ್, ಎಂಬಿತ್ಯಾದಿ ಸ್ವತಂತ್ರ ಸಂಖ್ಯಾ ವಾಚಕ ರೂಪಗಳು, ಮೂ ಮತ್ತು ಮು-ಎಂಬ ವಿಶೇಷಣ ರೂಪಗಳು ಅವುಗಳಲ್ಲಿ ಬಹಳ ಮುಖ್ಯವಾಗಿವೆ. ಮೂನ್ಱು, ಮೂಣ್ಣು, ಮೂನ್ನು, ಮೂನ್ದ್, ಮೂನ್ದ್, ಮೂಣ್ಡ್, ಮೂನ್ದಿಙ್, ಮೂನ್ಡ್, ಮೂಣ್ಡ್, ಮುಣ್ಡ್, ಮುಂಡರಿ, ಮುಂದರಿ, ಮೂಂಜಿ, ಮುಂಜಿ, ಎಂಬಿತ್ಯಾದಿ ರೂಪಗಳ ನಡುವೆ ಅನುನಾಸಿಕ ವ್ಯಂಜನವು ಕಾಣಿಸಿಕೊಂಡರೆ, ಮೂದ್, ಮೂಱು, ಮೂರು, ಮೂಡು, ಮೂದುಕ್, ಮೂಜಿ, ಮುಡು, ಮುಸಿಟ್ ಮುಂತಾದ ರೂಪಗಳಲ್ಲಿ ಅವುಗಳ ಅನುನಾಸಿಕದ ಲೋಪವಾಗಿ ಹೋಗಿದೆ. ಈ ಎಲ್ಲಾ ರೂಪಗಳನ್ನು ಪರಸ್ಪರ ಹೋಲಿಸಿ ಪರಿಶೀಲಿಸಿದಾಗ ಅವು ಗಳಲ್ಲಿ ಹೆಚ್ಚಿನ ಸಾಮ್ಯವು ಕಂಡುಬರುವುದು. ಇವು ಮೂಲತಃ ಒಂದೇ ಮೂಲದಿಂದ ಹುಟ್ಟಿಬೆಳೆದು ಬಂದ ರೂಪಗಳಾಗಿ ಗೋಚರಿಸುತ್ತವೆ. ಈ ಎಲ್ಲಾ ದ್ರಾವಿಡ ಸಂಖ್ಯಾ ವಾಚಕ ರೂಪಗಳಲ್ಲೆಲ್ಲಾ ತಮಿಳಿನ ಮೂನ್ಱು ಎಂಬ ರೂಪವು ಅತಿ ಹೆಚ್ಚು ಪ್ರಾಚೀನ ರೂಪವಾಗಿ ಕಾಣಿಸಿಕೊಳ್ಳುವುದೆಂದು ಎಂ. ಬಿ. ಎಮೆನೊ ಅಭಿಪ್ರಾಯ ವ್ಯಕ್ತಪಡಿಸಿದರೆ, ಕಾಲ್ಡ್‌ವೆಲ್ ಮಹಾಶಯನು ಕನ್ನಡದ ಮೂಱು ಎಂಬ ರೂಪವೇ ಹೆಚ್ಚು ಪ್ರಾಚೀನವಿರಬಹುದೆಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾನೆ. ಆದುದರಿಂದ

ಕೆಲವರು *ಮೂನ್ಱು ಎಂಬುದನ್ನು ಮತ್ತೆ ಕೆಲವರು *ಮೂಱು ಎಂಬುದನ್ನು ಮೂಲದ್ರಾವಿಡಕ್ಕೆ ಪುನರ್ರಚಿಸಿಕೊಳ್ಳಲು ಪ್ರಯತ್ನಿಸಿದ್ದಾರೆ. ಇನ್ನೂ ಕೆಲವರು *ಮೂನ್ ಎಂಬರೂಪವನ್ನು ಮೂಲದ್ರಾವಿಡಕ್ಕೆ ಪುನರ್ರಚಿಸಿಕೊಳ್ಳಲು ಪ್ರಯತ್ನಿಸಿದ್ದಾರೆ. *ಮೂಱು ಎಂಬ ರೂಪದ ನಡುವೆ ಅನುನಾಸಿಕವು ಕಾಣಿಸಿಕೊಂಡು ಆ ಬೇರೆ ಬೇರೆ ಸಂಖ್ಯಾವಾಚಕಗಳು ರೂಪುಗೊಂಡಿರಬಹುದೆಂದು ಕೆಲವರು ಭಾವಿಸಿದರೆ ಮತ್ತೆ ಕೆಲವರು *ಮೂನ್ಱು, ಎಂಬ ರೂಪದಿಂದ ಆ ಬೇರೆ ಬೇರೆ ಸಂಖ್ಯಾವಾಚಕಗಳು ವಿಕಾಸಗೊಂಡು ಬೆಳೆದು ಬಂದಿರಬಹುದೆಂದು ಕೆಲವರು ಊಹಿಸಿದ್ದಾರೆ. ತೊದ, ಕನ್ನಡ, ತುಳು, ಪರ್ಜಿ, ಬ್ರಾಹು ಈ ಭಾಷೆಗಳಲ್ಲಿ ಎರಡು ಎಂಬುದಕ್ಕೆ ಕಂಡುಬರುವ ರೂಪಗಳಲ್ಲಿ ಅನುನಾಸಿಕವು ಕಣ್ಮರೆಯಾಗಿ ಹೋಗಿರುವಂತೆ ಆ ಬೇರೆ ಬೇರೆ ರೂಪಗಳ ನಡುವಿನ ಅನುನಾಸಿಕವು ಲೋಪವಾಗಿ ಹೋದಾಗ ಅವುಗಳ ಮೂಲದಲ್ಲಿ ಮೂ–ಅಥವಾ ಮು–ಎಂಬ ರೂಪಗಳು ಕಾಣಿಸಿಕೊಳ್ಳುತ್ತವೆ. ಆಮೇಲಿನ ಎಲ್ಲಾ ಸಂಖ್ಯಾವಾಚಕ ರೂಪಗಳ ವಿಕಾಸಕ್ಕೆ ಈ ಮೂ–ಅಥವಾ ಮು–ಎಂಬ ವಿಶೇಷಣ ಮುಖ್ಯಕಾರಣವಿದ್ದರೂ ಇರಬಹುದೆಂದು ಕೆಲವರು ಊಹಿಸಿದ್ದಾರೆ. ಮೂನ್ಱು ಎಂಬುದರ ನಡುವೆ ಅನುನಾಸಿಕವು ಕಾಣಿಸಿಕೊಂಡಿದ್ದು ಇತ್ತೀಚೆಗೆ ಎಂದು ಕೆಲವರ ಭಾವನೆ. ಆ ಎಲ್ಲಾ ಸಂಖ್ಯಾವಾಚಕಗಳ ವಿಕಾಸಕ್ಕೆ ಆ ವಿಶೇಷಣ ರೂಪವೇ ಮೂಲವಿದ್ದರೂ ಇರಬಹುದೆಂದು ಇದರಿಂದ ಸುಲಭವಾಗಿ ಊಹಿಸಬಹುದಾಗಿದೆ.

ಮೂರು ಎಂಬುದನ್ನು ನಿರ್ದೇಶಿಸುವ ಮೂ–ಎಂಬ ವಿಶೇಷಣ ರೂಪಕ್ಕೆ ಬೇರೆ ಬೇರೆ ಸಾಧಿತ ಪ್ರತ್ಯಯಗಳನ್ನು ಹಚ್ಚಿದಾಗ ಬೇರೆ ಬೇರೆ ಬಗೆಯ ಸಂಖ್ಯಾವಾಚಕ ರೂಪಗಳು ರೂಪುಗೊಳ್ಳುತ್ತವೆ. ಮು–ಎಂಬುದು ವ್ಯಂಜನಗಳ ಮುಂದೆ ಬಂದರೆ, ಮೂ–ಎಂಬುದು ಸ್ವರಗಳ ಮುಂದೆ ಬರುವುದು. ಮೂ–ಅಥವಾ ಮು–ಎಂಬ ವಿಶೇಷಣ ರೂಪವು ಅದು ತೆಗೆದುಕೊಳ್ಳುವ ಸ್ವರ ಅಥವಾ ವ್ಯಂಜನಗಳಿಗೆ ಅನುಗುಣವಾಗಿ ಅವುಗಳ ಮೂಲ ರೂಪವು ಪರಿವರ್ತನೆಗೊಳ್ಳುವುದು. ಮೂ–ಎಂಬ ಮೂಲ ರೂಪಕ್ಕೆ ಬೇರೆ ಬೇರೆ ಸಾಧಿತ ಪ್ರತ್ಯಯಗಳನ್ನು ಹಚ್ಚಿದಾಗ ಮೂವ್–, ಮುವ್–, ಮೂವರ್–, ಮುವರ್–, ಮೂಯರ್–, ಮುಯರ್–, ಮೂಗ್–, ಮುಗ್ಗ್–, ಮುಪ್–, ಮುಕ್–, ಮುನ್ನ್–, ಮನ್–, ಮುತ್ತ್–, ಮುಡ್–, ಮುಸಿ ಎಂಬಿತ್ಯಾದಿಗಳಲ್ಲಿ ಅವುಗಳ ಮೂಲ ರೂಪ ಪರಿವರ್ತನೆಗೊಳ್ಳುವುದು. ಮಲೆಯಾಳಂ, ಕೊಡಗು ಮತ್ತು ಕುರುಖ್ ಭಾಷೆಗಳಲ್ಲಿ ನುಪ್–, ನುಬ್ಬ್–ಎಂಬ ರೂಪಗಳು ಬಳಕೆಯಲ್ಲಿವೆ. ಮೂ–ಅಥವಾ ಮು–ಎಂಬ ರೂಪವು ಹೇಗೆ ನು–ಆಗಿ ಪರಿವರ್ತನೆಗೊಂಡಿದೆ ಎಂಬುದರ ಬಗ್ಗೆ ಯಾವುದನ್ನೂ ಖಚಿತವಾಗಿ ಹೇಳಲು ಬರುವುದಿಲ್ಲ. ನುಪ್–, ನುಬ್ಬ್–ಎಂಬ ರೂಪಗಳ ಆದಿಯಲ್ಲಿ ಕಂಡುಬರುವ ನಕಾರವು ಮೂಲತಃ ಮೂ–ಅಥವಾ ಮು–ಎಂಬುದರಿಂದ ಪರಿವರ್ತನೆಗೊಂಡು ಬೆಳೆದು ಬಂದಿದೆಯೋ

ಎನ್ನುವುದಕ್ಕೆ ಯಾವ ಆಧಾರಗಳೂ ದೊರೆಯುವುದಿಲ್ಲ. ಮೂನ್ಱು, ಎಂಬ ರೂಪದ ಆದಿಯ ಮಕಾರವು ಅಂತ್ಯದ ಱ್‌ಕಾರವು ಲೋಪಗೊಂಡು ಅವುಗಳ ನಡುವಿನ ನಕಾರ ಉಳಿದುಕೊಂಡು ಆ ಬೇರೆ ಬೇರೆ ರೂಪಗಳು ವಿಕಾಸಗೊಂಡಿವೆಯೆ ಎಂಬುದನ್ನು ಪರಿಶೀಲಿಸಿ ತಿಳಿಯಬೇಕಾಗಿದೆ. ನುಪ್ಪ್>ನುಬ್ಬ್ ಎಂದಾಗಿ ಪರಿವರ್ತನೆಗೊಳ್ಳಬಹುದು. ಅಂತೆಯೇ ಮುಕಾರವು>ಮೂಕಾರವಾಗಿಯೂ, ಮೂಕಾರವು> ಮುಕಾರವಾಗಿಯೂ ಪರಿವರ್ತನೆಗೊಳ್ಳಬಹುದು. ಮ ಅಥವಾ ಮೂಕಾರ>ನುಕಾರವಾಗಿ ಪರಿವರ್ತನೆಗೊಳ್ಳುವುದು ದ್ರಾವಿಡ ಭಾಷೆಗಳಲ್ಲಿ ಬಹಳ ಅಪರೂಪ.

ದಕ್ಷಿಣ ದ್ರಾವಿಡ ಭಾಷೆಗಳನ್ನು ಪೂರ್ಣವಾಗಿ ಪರಿಶೀಲಿಸಿದಾಗ ಮೂನ್ಱು ಎಂಬುದಕ್ಕಿಂತಲೂ ಮೂಱು ಎಂಬ ರೂಪವೇ ಹೆಚ್ಚು ಪ್ರಾಚೀನವಾಗಿ ಕಾಣಿಸಿಕೊಳ್ಳುವುದು (ಮೂಱು>ಮೂರು>ಮೂಡು). ಮೂಱು ಎಂಬುದರ ನಡುವೆ ಅನುನಾಸಿಕ ವ್ಯಂಜನವು ಕಾಣಿಸಿಕೊಂಡು ಮೂನ್ಱು ಆಗಿ ರೂಪುಗೊಂಡಿರಬಹುದು. ಮೂಲ ದ್ರಾವಿಡಕ್ಕೆ *ಮೂಱು, *ಮೂನ್ಱು, ಎಂಬ ರೂಪಗಳನ್ನು ಪುನರ‍್ರಚಿಸಿಕೊಂಡರೆ, ಮೂಲ ದಕ್ಷಿಣ ದ್ರಾವಿಡಕ್ಕೆ *ಮೂನ್ತ್ರು ಅಥವಾ *ಮೂನು ಎಂಬುದನ್ನು ಪುನರ‍್ರಚಿಸಿಕೊಳ್ಳಬಹುದಾದ ಅವಕಾಶಗಳು ಇಲ್ಲದೆ ಇಲ್ಲ.

1: 4 ನಾಲ್ಕು;

ತ; ನಾಲ್ಕು, ನಾಂಕು, ನಾಂಗು, ನಾಲು (ನಾಲ್ಕು)
ನಾಲ್ವರ್ (ನಾಲ್ವರು) (ಪುಂ. ಸ್ತ್ರೀ.)
ನಾನ್‌ಗಾವತ್ (ನಾಲ್ಕನೇ)
ನಾಱ್ಱು (ನಾಲ್ಕು ಸಾರಿ)
ನಾಪತ್ತು (ನಲವತ್ತು)
ನಾಪದು (ನಲವತ್ತು)
ನಾರ್‌ಪತ್ತು (ನಲವತ್ತು)
ನಾರ್‌ಬದು (ನಲವತ್ತು)
ನಾನೂಱು (ನಾನೂರು)
ನಾನ್ನೂಱು (ನಾನೂರು)
ನಾಲ್ ಆಯಿರವತ್ (ನಾಲ್ಕು ಸಾವಿರ)
ನನ್ನಾಂಗ್ಸ (ನಾಲ್ಕರಂತೆ)
ನನ್ನಾಂಕು (ನಾಲ್ಕರಂತೆ)
ನಾನಾಟು (ನಾಲ್ಕು ದೇಶಗಳು)
ನಾಲ್ ಊರು (ನಾಲ್ಕು ಊರುಗಳು)
ನಾಲ್ ಕಾಲ್ (ನಾಲ್ಕು ಕಾಲುಗಳು)

(ನಾಲ್ಕು, ನಾಂಕು, ನಾಂಗು, ನಾಲು, ನಾಸ್ಗ್, ನಾಲ್–, ನಾ–, ನ-)
ಮ; ನಾಲು, ನಾಂಕು, (ನಾಲ್ಕು)
ನಾಲ್ವರ್ (ನಾಲ್ವರು) (ಪುಂ, ಸ್ತ್ರೀ.)
ನಾಲರ್ (ನಾಲ್ವರು) (ಪುಂ. ಸ್ತ್ರೀ.)
ನಾಲುವರ್ (ನಾಲ್ವರು) (ಪುಂ. ಸ್ತ್ರೀ.)
ನಾಲಾವ್ (ನಾಲ್ಕನೇ)
ನನ್ನಾಲ್ (ನಾಲ್ಕರಂತೆ)
ನನ್ನಾಲು (ನಾಲ್ಕರಂತೆ)
ನನ್ನಾಂಕು (ನಾಲ್ಕುಸಾರಿ)
ನಾಲ್ವದು (ನಲವತ್ತು)
ನಾಲ್ಪತು (ನಲವತ್ತು)
ನಾಜ್ಪತು (ನಲವತ್ತು)
ನಾನೂಋ (ನಾನೂರು)
ನಾನ್ನೂಋ (ನಾನೂರು)
(ನಾಲು, ನಾಂಕು, ನಾಲ್–, ನಾ–, ನ–)
ಕೋ; ನಾನ್ಗ್, ನಾಂಗ್ (ನಾಲ್ಕು)
ನಾನ್ಗ್ನೂಋ (ನಾನೂರು)
ನಾಂಗ್ನೂಋ (ನಾನೂರು)
ನಾನೂಋ (ನಾನೂರು)
ನಾಲ್ವತ್ (ನಲವತ್ತು)
ನಾಲತ್ (ನಲವತ್ತು)
ನಾರ್ಪಾಣ್ಯ (ನಾಲ್ಕು ಪಾವುಗಳು)
ನಾರ್ಪಾದ್ (ನಲವತ್ತು ದಿವಸಗಳು)
ನಾನ್ ದಿಗ್ಲ್ (ನಾಲ್ಕು ತಿಂಗಳುಗಳು)
ನಾನ್ ಮಯ್ಲ್ (ನಾಲ್ಕು ಗಂಟೆಗಳು)
ನಾನ್ ಮೂಲ್ (ನಾಲ್ಕು ಮೂಲೆ)
ನಾನ್ ಜನವ್ (ನಾಲ್ಕು ಜಾತಿ)
ನಾನಾಂಗ್ (ನಾಲ್ಕರಂತೆ)
ನಾಚಲ್ಗ್ (ನಾಲ್ಕು ಸೊಲಿಗೆ)
ನಾನಾಳ್ (ನಾಲ್ಕು ದಿವಸಗಳು)
(ನಾನ್ಗ್, ನಾಂಗ್, ನಾಲ್–, ನಾ–)
ತೊ; ನೋಇಂಗ್, ನೊಂಗ್, ನೋಇನ್ಗ್ (ನಾಲ್ಕು)

ನೋನೂಱು (ನಾನೂರು)
ನಾನೂಱ್ (ನಾನೂರು)
ನಲಫೊಥ್ (ನಲವತ್ತು)
ನೋಕ್ವಾವ್ (ನಾಲ್ಕು ಕ್ವಾಖ್ ಅಳತೆ)

(ನೋಂಗ್, ನೊಂಗ್, ನೋನ್ಗ್, ನೊ,-, ನಾ-, ನಲ್-)

ಕನ್ನಡ; ನಾಲ್ಕು, ನಾಕು, (ನಾಲ್ಕು)
ನಾಲ್ವರ್ (ನಾಲ್ವರು) (ಪುಂ. ಸ್ತ್ರೀ.)
ನಾಲ್ವರು (ನಾಲ್ವರು) (ಪುಂ. ಸ್ತ್ರೀ.)
ನಾಲ್ಕನೇ (ನಾಲ್ಕನೇ)
ನಲವತ್ತು (ನಲವತ್ತು)
ನಲ್ವತ್ತು (ನಲವತ್ತು)
ನಾನೂಱು (ನಾನೂರು)
ನಾನೂರು (ನಾನೂರು)

(ನಾಲ್ಕು, ನಾಕು, ನಾಲ್-, ನಲ್- ನಾ-)

ಕೊಡ್; ನಾಲು (ನಾಲ್ಕು)
ನಾವೇ (ನಾಲ್ವರು) (ಪುಂ. ಸ್ತ್ರೀ.)
ನಾಪದು (ನಲವತ್ತು)
ನಾನೂಱು (ನಾನೂರು)
ನಾಲ್ ವಿರಲ್ (ನಾಲ್ಕು ಬೆರಳುಗಳು)
ನನ್ನಾಲು (ನಾಲ್ಕರಂತೆ)
ನಾಲನೇ (ನಾಲ್ಕನೇ)

(ನಾಲು, ನಾಲ್-, ನಾ-, ನ-)

ತು; ನಾಲು (ನಾಲ್ಕು)
ನಾಲನೆ (ನಾಲ್ಕನೇ)
ನಾಲ್ವೆರು (ನಾಲ್ವರು) (ಪುಂ. ಸ್ತ್ರೀ.)
ನಾಲ್ಪ (ನಲವತ್ತು)
ನಾನೂದು (ನಾನೂರು)
ನಾಲ್ನೂರು (ನಾನೂರು)
ನಾವೊಳ (ನಾಲ್ಕು ಸೇರು)
ನಾಲ್ಕೊಳು (ನಾಲ್ಕು ಸಾರಿ)
ನಲ್‌ಕೊಳು (ನಾಲ್ಕು ಸಾರಿ)

(ನಾಲು, ನಾಲ್–, ನಾ–, ನಲ್–,

ತೆ; ನಾಲುಗು, ನಾಲುವು, ನಾಲ್ಗ (ನಾಲ್ಕು) (ಕ್ > ಗ್)

ನಲುಗುರು (ನಾಲ್ವರು), (ಪುಂ.)

ನಲಗುರು (ನಾಲ್ವರು), (ಪುಂ.)

ನಲುವುರು (ನಾಲ್ವರು) (ಪುಂ.)

ನಲಭೈ (ನಲವತ್ತು)

ನಲುವದಿ (ನಲವತ್ತು) (ನಾಲ್ಕು > ನಾಲ್ಗು)

ನಲುಬದಿ (ನಲವತ್ತು)

ನಲುಭೈ (ನಲವತ್ತು)

ನನ್ನೂಱು (ನಾನೂರು)

ನಾನೂದು (ನಾನೂರು)

ನಲ್ ದಿಕ್ಕು (ನಾಲ್ಕು ದಿಕ್ಕು)

ನಲುವಣ್ಡ್ರು (ನಲವತ್ತು ಜನರು)

(ನಾಲುಗು, ನಾಲುವು, ನಾಲ್ಗು, ನಲು–ನಲ್–, ನಲ–)

ಕೊಲಾ; ನಾಲಿಂಗ್, ನಾಲಿಜ್ (ನಾಲ್ಕು)

ನಾಲಿಂಗ್ (ನಾಲ್ಕು ವಸ್ತುಗಳು) (ನಪುಂ.)

ನಲ್ಗುರು (ನಾಲ್ವರು), (ಪುಂ.)

ನಾಲ್ಗುರ್ (ನಾಲ್ವರು), (ಪುಂ.)

ನಲ್ಲವ್ (ನಾಲ್ವರು), (ಸ್ತ್ರೀ.)

ನಾಲ್ ಉದುಲ್ (ನಾಲ್ಕು ದಿನಗಳು)

(ನಾಲಿಂಗ್, ನಾಲಿಜ್, ನಾಲ್–, ನಲ್–,)

ನಾ; ನಾಲಿ, ನಾಲಿಂಗ್, ನಾಲಿಜ್ (ನಾಲ್ಕು)

ನಾಲಿಂಗ್ (ನಾಲ್ಕು ವಸ್ತುಗಳು), (ನಪುಂ.)

ನಲ್ಗುರ್ (ನಾಲ್ವರು), (ಪುಂ.)

ನಲ್ಲಳ್ (ನಾಲ್ವರು), (ಸ್ತ್ರೀ)

(ನಾಲಿ, ನಾಲಿಂಗ್, ನಾಲಿಜ್, ನಲ್–)

ಪ; ನಾಲು (ಕ್) (ನಾಲ್ಕು)

ನಾಲು (ಕ್) (ನಾಲ್ಕು ವಸ್ತುಗಳು), (ನಪುಂ.)

ನೆಲ್ವಿರ್ (ನಾಲ್ವರು), (ಪುಂ.)

ನೆಲ್ಲಲ್ (ನಾಲ್ವರು), (ಸ್ತ್ರೀ.)

ನೆಲ್ಗಲ್ (ನಾಲ್ವರು) (ಸ್ತ್ರೀ.)

ನೆಲ್ ಚಿಚ್ (ನಾಲ್ಕು ದಿವಸಗಳು)

(ನಾಲು (ರ್), ನೆಲ್–)
ಗ; ನಾಲಿಂಗ್, ನಾಲಿಜ್, ನಾಲಿಗ್ (ನಾಲ್ಕು)
ನಾಲಿಂಗ್ (ನಾಲ್ಕು ವಸ್ತುಗಳು), (ನಪುಂ.)
ನಲ್‌ಗುರ್ (ನಾಲ್ವರು), (ಪುಂ.)
ನಲ್ಗುರು (ನಾಲ್ವರು), (ಪುಂ.)
ನಲ್ಗುರ್ (ನಾಲ್ವರು), (ಪುಂ.)
ನಾಲಿಂಗ್ (ನಾಲ್ವರು), (ಸ್ತ್ರೀ. ನಪುಂ.)
ನಾಲಿಗ್ (ನಾಲ್ವರು), (ಸ್ತ್ರೀ. ನಪುಂ.)
(ನಾಲಿಂಗ್, ನಾಲಿಗ್, ನಾಲ್–, ನಲ್–,)
ಗೋಂ ; ನಾಲುಂಗ್ ನಾಲೂ(ರ್) ನಲುಂಗ್(ನಾಲ್ಕು)
ನಾಲ್ಕು (ನಾಲ್ಕು ವಸ್ತುಗಳು), (ನಪುಂ.)
ನಾಲ್ವಿರ್ (ನಾಲ್ವರು), (ಪುಂ.)
ನಾಲ್ಕ್ (ಸ್ತ್ರೀ.) (ಪುಂ.)
(ನಾಲುಂಗ್, ನಾಲೂ(ರ್), ನಲುಂಗ್, ನಾಲ್ಕ್, ನಾಲ್–)
ಕೊಂಡ್ ; ನಾಲ್ಗಿ (ನಾಲ್ಕು) (ನಪುಂ.)
ನಾಲೇರ್ (ನಾಲ್ವರು) (ಪುಂ.)
ನಾಲ್ಗಿ (ನಾಲ್ವರು) (ಸ್ತ್ರೀ. ನಪುಂ.)
(ನಾಲ್ಗಿ, ನಾಲ್–)
ಕು ; ನಾಲ್ಲಿ, ನಲ್ಲಿ (ನಾಲ್ಕು)
ನಲ್ಗಿ (ನಾಲ್ಕುವಸ್ತುಗಳು) (ನಪುಂ.)
ನಾಲ್‌ಪತ್ತು (ನಲವತ್ತು ಸಾರಿ)
(ನಾಲ್ಗಿ, ನಲ್ಗಿ, ನಾಲ್–, ನಲ್–)
ಕುರುಖ್ ; ನಾಖ್ (ನಾಲ್ಕು) (ನಪುಂ.)
ನೈಬ್ (ನಾಲ್ಕು ವಸ್ತುಗಳು) (ನಪುಂ)
(ನಾಖ್, ನೈಬ್,)
1 : 4 : 1 ಒಂದನೇವರ್ಗ ;
ತ ; ನಾಲ್ಕು, ನಾಂಕು, ನಾಲು, ನಾನ್ಗು, (ನಾಲ್ಕು)
ಮ ; ನಾಂಕು, ನಾಲು,
ಕೋ ; ನಾಂಗ್, ನಾನ್ಗ್,
ತೊ ; ನೋಂಗ್, ನೋನ್ಗ್,
ಕ ; ನಾಲ್ಕು, ನಾಕು,
ಕೊಡ್ ; ನಾಲು,

ತು ; ನಾಲು

ತೆ ; ನಾಲುಗು, ನಾಲ್ಗು, ನಾಲುವು,

ಕೊಲಾ ; ನಾಲಿಂಗ್, ನಾಲಿಙ್,

ನಾ ; ನಾಲಿಂಗ್, ನಾಲಿಙ್, ನಾಲಿ,

ಪ ; ನಾಲು (ಕ್),

ಗ ; ನಾಲಿಂಗ್, ನಾಲಿಙ್, ನಾಲಿಗ್,

ಗೋಂ ; ನಾಲುಂಗ್, ನಾಲುಙ್, ನಾಲೂ (ರ್)

ಕೊಂ ; ನಾಲ್ಗಿ,

ಕು ; ನಾಲ್ಗಿ, ನಲ್ಗಿ,

ಕುರುಖ್ ; ನಾಖ್, ನೈಬ್,

ಮೂಲ. ದ್ರಾ ; * ನಾಲ್ಕು (*na : lku)

* ನಲಪತು (ನಲವತ್ತು)

* ನಾನೂತು (ನಾನೂರು)

1 :4 : 2 ಎರಡನೇ ವರ್ಗ ;

ತ ; ನಾಲ್–, ನಾ–, ನ–,

ಮ ; ನಾಲ್–, ನಾ-, ನ-,

ಕೋ ; ನಾಲ್–, ನಾ–,

ತೊ ; ನೋ–, ನಾ–, ನ-,

ಕ ; ನಾಲ್–, ನಾ–, ನಲ್–,

ಕೊಡ್ ; ನಾಲ್-ನಾ-, ನ–,

ತು ; ನಾಲ್–, ನಾ–, ನಲ್–,

ತೆ ; ನಲ್–, ನ–,

ಕೊಲಾ ; ನಾಲ್–, ನಲ್–,

ನಾ ; ನಾಲ್-, ನಲ್–,

ಗೋಂ ; ನಾಲ್–,

ಕೊಂ ; ನಾಲ್–,

ಕು ; ನಾಲ್–, ನಲ್–,

ಮೂಲ ದ್ರಾ ; * ನಾಲ್ (*na : l)*ನಲ್– (*nal–)

*ನಾಲ್ವರ್ (ನಾಲ್ವರು) (*ನಾಲ್ > * ನಲ್)

(ಪುಂ. ಸ್ತ್ರೀ.) (* ನಾ > * ನ–)

* ನಾಲ್– ಸ್ವರಗಳ ಮುಂದೆ ಬಂದರೆ

* ನಾಲ್– ವ್ಯಂಜನಗಳ ಮುಂದೆ ಬರುವುದು.

ನಾಲ್ಕು ಎಂಬುದಕ್ಕೆ ದ್ರಾವಿಡ ಭಾಷೆಗಳಲ್ಲಿ ಬೇರೆ ಬೇರೆ ಸ್ವತಂತ್ರ ಸಂಖ್ಯಾವಾಚಕ ರೂಪಗಳು, ಬೇರೆ ಬೇರೆ ವಿಶೇಷಣ ರೂಪಗಳು ಬಳಕೆಯಲ್ಲಿರುವುದು ಕಂಡು ಬರುತ್ತವೆ. ಇವುಗಳಲ್ಲಿ ತಮಿಳಿನ ನಾಂಕು, ನಾಲ್ಕು, ನಾಲು, ನಾನ್ಗ್, ಮಲೆಯಾಳಂನ ನಾಂಕು, ನಾಲು, ನಾನ್ಗ್, ಕೋತದ ನಾಂಗ್, ನಾನ್ಗ್, ತೊದದ ನೋಂಗ್, ನೋನ್ಗ್, ಕನ್ನಡದ ನಾಲ್ಕು, ನಾಕು, ಕೊಡಗು ತುಳುಗಳ ನಾಲು, ತೆಲುಗಿನ ನಾಲ್ಗು, ನಾಲುಗು, ನಾಲುವು, ಕೊಲಾಮಿ, ನಾಯ್ಕಿ, ಮತ್ತು ನದಬಗಳ ನಾಲಿಂಗ್, ನಾಲಿಜ್, ಪರ್ಜಿಯ ನಾಲು (ರ್), ಗೋಂಡಿಯ ನಾಲುಂಗ್, ನಾಲುಜ್, ನಾಲೂ (ರ್), ಕೊಂಡ ಮತ್ತು ಕುಯಿಭಾಷೆಗಳಲ್ಲಿ ನಾಲ್ಗಿ, ನಲ್ಗಿ, ಕುರುಖ್ ಭಾಷೆಯಲ್ಲಿ ನಾಖ್ ಎಂಬಿತ್ಯಾದಿ ಸಂಖ್ಯಾವಾಚಕ ರೂಪಗಳೂ, ನಾಲ್- ಮತ್ತು ನಲ್- ಎಂಬ ವಿಶೇಷಣ ರೂಪಗಳು ಮುಖ್ಯವಾಗಿವೆ. ಇವುಗಳನ್ನು ಪರಸ್ಪರ ಹೋಲಿಸಿ ಪರಿಶೀಲಿಸಿದಾಗ ಅವುಗಳಲ್ಲಿ ಹೆಚ್ಚಿನ ಸಾಮ್ಯ ಇರುವುದು ಕಂಡು ಬರುವುದು. ಇವು ಮೂಲತಃ ಒಂದೇ ಮೂಲದಿಂದ ಹುಟ್ಟಿ ಬೇರೆ ಬೇರೆಯಾಗಿ ಬೆಳೆದು ಬಂದಂತಹ ರೂಪಗಳು. ನಾಲ್ಕು ಎಂಬುದರ ಎಲ್ಲಾ ಸಂಖ್ಯಾವಾಚಕ ರೂಪಗಳಲ್ಲೆಲ್ಲಾ ಕನ್ನಡದ ನಾಲ್ಕು ಎಂಬ ರೂಪವೇ ಅತಿ ಹೆಚ್ಚು ಪ್ರಾಚೀನ ರೂಪವಾಗಿ ಕಾಣಿಸಿಕೊಳ್ಳುವುದು. ಇದನ್ನು ಗಮನಿಸಿದ ಕೆಲವು ವಿದ್ವಾಂಸರು ಮೂಲ ದ್ರಾವಿಡಕ್ಕೆ * ನಾಲ್ಕು ಎಂಬುದನ್ನು ಪುನರ್ರಚಿಸಿಕೊಳ್ಳಲು ಪ್ರಯತ್ನಿಸಿದ್ದಾರೆ ಕನ್ನಡದ ನಾಲ್ಕು ಆಡುಕನ್ನಡದಲ್ಲಿ ನಾಕು ಎಂದಾಗಿದ್ದರೇ ಇದು ತಮಿಳು ಮತ್ತು ಮಲೆಯಾಳಂ ಭಾಷೆಗಳಲ್ಲಿ ನಾಂಕು ಎಂದಾಗಿದೆ. ಆಡು ಕನ್ನಡದ ನಾಕು ಎಂಬುದ. ರಲ್ಲಿ ಲಕಾರವು ಕಣ್ಮರೆಯಾಗಿ ಹೋಗಿದ್ದರೆ ತಮಿಳು ಮತ್ತು ಮಲೆಯಾಳಂನ ನಾಂಕು ಎಂಬುದರಲ್ಲಿ ಲಕಾರವು ನಕಾರವಾಗಿ ಪರಿವರ್ತನೆಗೊಂಡಿದೆ. ತಮಿಳು, ಮಲೆಯಾಳಂ, ಕೊಡಗು, ತುಳು, ನಾಯ್ಕಿ ಮುಂತಾದ ಭಾಷೆಗಳಲ್ಲಿ ನಾಲ್ಕು ಎಂಬುದಕ್ಕೆ ನಾಲು ಎಂಬ ರೂಪ ಒಳಕೆಯಲ್ಲಿದೆ. ನಾಲ್ಕು ಎಂಬುದರ ಅಂತ್ಯದ ಕು ಪ್ರತ್ಯಯವು ಇದರಲ್ಲಿ ಲೋಪವಾಗಿ ಹೋಗಿದೆ.

ನಾಲ್ಕು ಎಂಬುದಕ್ಕೆ ಹೆಚ್ಚು ಕಡಿಮೆ ಎಲ್ಲಾ ದ್ರಾವಿಡ ಭಾಷೆಗಳಲ್ಲಿ ನಾಲ್- ಮತ್ತು ನಲ್-ಎಂಬ ವಿಶೇಷಣ ರೂಪಗಳಿರುವುದು ಕಂಡುಬರುತ್ತವೆ. ಇವುಗಳಲ್ಲಿ ನಾಲ್-ಎಂಬುದು ಸ್ವರಗಳ ಮುಂದೆ ಬಂದರೆ, ನಲ್-ಎಂಬುದು ವ್ಯಂಜನಗಳ ಮುಂದೆ ಬರುವುದು. ಈ ಮೂಲ ರೂಪಗಳಿಗೆ ಬೇರೆ ಬೇರೆ ಸಾಧಿತ ಪ್ರತ್ಯಯಗಳನ್ನು ಹಚ್ಚಿದಾಗ ಅವುಗಳ ಮೂಲರೂಪವು ಅವು ತೆಗೆದುಕೊಳ್ಳುವ ವ್ಯಂಜನ ಮತ್ತು ಸ್ವರಗಳಿಗೆ ಅನುಗುಣವಾಗಿ ನಾನ್-, ನನ್-, ನೋನ್-. ನಾಜ್-, ನಾರ್-, ನರ್-, ನಾಲ್-, ನಲ್-, ಎಂಬಿತ್ಯಾದಿಗಳಲ್ಲಿ ಪರಿವರ್ತನೆಗೊಳ್ಳುವುದನ್ನು ಕಾಣಬಹುದಾಗಿದೆ. ನಾಲ್ ಅಥವಾ ನಲ್-ಎಂಬುದರ ಮುಂದೆ ನಕಾರ ಬಂದಾಗ ಅವುಗಳ ಮೂಲ ರೂಪವು ನಾನ್-, ನನ್-, ನೋನ್-ಎಂದಾಗಿಯೂ,

ಲಕಾರದ ಮುಂದೆ ಜ್‌ ಅಥವಾ ರ್‌ಕಾರ ಬಂದಾಗ ಅವುಗಳ ಮೂಲ ರೂಪವು ನಾಜ್‌–, ನಾರ್‌–ನರ್‌–ಎಂಬುದಾಗಿಯೂ, ನಾಲ್‌ ಎಂಬುದರ ದೀರ್ಘ ಸ್ವರವು ಹ್ರಸ್ವಸ್ವರವಾಗಿ ಪರಿವರ್ತನೆಗೊಂಡು ಅದರ ಮೂಲ ರೂಪವು ನಲ್‌–ಎಂದಾಗಿಯೂ ಪರಿವರ್ತನೆಗೊಳ್ಳಬಹುದು. ಅದೇ ರೀತಿ ತೊದ ಭಾಷೆಯಲ್ಲಿ ನಾಲ್‌–ಎಂಬುದು ನೋನ್‌–ಆಗಿ ಪರಿವರ್ತನೆಗೊಳ್ಳಬಹುದಾದ ಅವಕಾಶಗಳಿವೆ. ನಾಲ್‌–>ನಲ್‌ ಎಂಬ ರೂಪಪರಿವರ್ತನೆ ಒಂದು ಎಂಬುದರ ಓರ್‌–>ಒರ್‌–, ಎರಡು ಎಂಬುವರ ಈರ್‌–>ಇರ್‌–ಎಂಬ ರೂಪಪರಿವರ್ತನೆಯನ್ನು ಹೋಲುವುದೆಂದು ಕೆಲವು ವಿದ್ವಾಂಸರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಇದೇ ರೀತಿ ಮೂರು ಎಂಬುದರ ಮೂ–>ಮು–ಆಗಿ ಪರಿವರ್ತನೆಗೊಂಡಿದೆ. ಕೋತ, ಕೊಡಗು ಮುಂತಾದ ಭಾಷೆಗಳಲ್ಲಿ ನಾಲ್ಕು ಎಂಬುದು ನಾಲು ಆಗಿ ಪರಿವರ್ತನೆಗೊಂಡರೆ ಇದು ತೊದದಲ್ಲಿ ನೋನ್ಗ್‌ ಎಂದಾಗಿದೆ. ಮತ್ತೆ ಕೆಲವು ಭಾಷೆಗಳಲ್ಲಿ ಅದು ನಾನ್ಗ್‌ ಆಗಿ ಪರಿವರ್ತನೆಗೊಳ್ಳುವುದು. ಲಕಾರವು ಜ್‌ಕಾರವಾಗಿಯೂ, >ರಕಾರವಾಗಿಯೂ, ಇನ್ನೂ ಕೆಲವು ಕಡೆ ನಕಾರವಾಗಿಯೂ ಪರಿವರ್ತನೆಗೊಂಡಿರುವುದನ್ನು ಆ ಬೇರೆ ಬೇರೆ ದ್ರಾವಿಡ ಭಾಷೆಗಳಲ್ಲಿ ಸ್ಪಷ್ಟವಾಗಿ ಗುರುತಿಸಿಕೊಳ್ಳಬಹುದಾಗಿದೆ. ದ್ರಾವಿಡ ಭಾಷೆಗಳಲ್ಲಿ ಈ ವಿಶೇಷಣ ರೂಪಗಳ ಅಂತ್ಯದಲ್ಲಿ ಕಂಡುಬರುವ (ನಾಲ್‌–, ನಲ್‌–) ಲಕಾರವು ಪೂರ್ಣವಾಗಿ ಪರಿವರ್ತನೆಗೊಂಡು ಅವುಗಳ ಮೂಲದಲ್ಲಿ ನಾ–ಮತ್ತು ನ–ಎಂಬ ವಿಶೇಷಣ ರೂಪಗಳು ಉಳಿದುಕೊಂಡಿರುವುದನ್ನು ಅಲ್ಲಲ್ಲಿ ಕಾಣಬಹುದಾಗಿದೆ. ನಾಲ್‌–, ನಾ–, ನಲ್‌–, ನ–, ಎಂಬ ವಿಶೇಷಣ ರೂಪಗಳು ಸಾಮಾನ್ಯವಾಗಿ ಎಲ್ಲಾ ದ್ರಾವಿಡ ಭಾಷೆಗಳಲ್ಲಿ ಕಂಡು ಬರುವುದರಿಂದ ಇವು ಮೂಲ ದ್ರಾವಿಡದಲ್ಲಿಯೂ ಇದ್ದಿರಬಹುದೆಂದು ಭಾವಿಸಿದ ಕೆಲವರು *ನಾಲ್‌–, (*ನಾ–) *ನಲ್‌–(*ನ್‌-) ಎಂಬ ರೂಪಗಳನ್ನು ಮೂಲ ದ್ರಾವಿಡಕ್ಕೆ ಪುನರ್ರಚಿಸಿಕೊಳ್ಳಲು ಪ್ರಯತ್ನಿಸಿದ್ದಾರೆ.

ನಾಲ್ಕು ಅಥವಾ ನಾಲ್‌–ಎಂಬ ರೂಪಗಳಿಗೆ ಬೇರೆ ಬೇರೆ ಲಿಂಗ ಮತ್ತು (ಬಹು)ವಚನ ಪ್ರತ್ಯಯಗಳನ್ನು ಹಚ್ಚಿದಾಗ ಅವುಗಳ ಮೂಲ ರೂಪವು ನಾನಾ ರೀತಿಯಲ್ಲಿ ಪರಿವರ್ತನೆಗೊಂಡು ನಾನಾ ಬಗೆಯ ಸಾಧಿತ ರೂಪಗಳು ರೂಪುಗೊಳ್ಳುತ್ತವೆ. ಈ ಲಿಂಗ ಮತ್ತು ವಚನಸೂಚಕ ಸಂಖ್ಯಾವಾಚಕ ರೂಪಗಳು ಮೂಲ ದ್ರಾವಿಡದಲ್ಲಿಯೂ ಇದ್ದಿರಬಹುದೆಂದು ಭಾವಿಸಿದ ಕೆಲವರು *ನಾಲ್ವರ್‌ (ಪುಂ. ಸ್ತ್ರೀ) ಎಂಬ ರೂಪವನ್ನು ಮೂಲ ದ್ರಾವಿಡಕ್ಕೆ ಪುನರ್ರಚಿಸಿಕೊಳ್ಳಲು ಪ್ರಯತ್ನಿಸಿದ್ದಾರೆ. ಮಧ್ಯದ್ರಾವಿಡ ಭಾಷೆಗಳಲ್ಲಿ ಈ ರೂಪವು ತನ್ನದೇ ಆದ ರೀತಿಯಲ್ಲಿ ಬಳಕೆಯಲ್ಲಿದೆ. ಈ ಭಾಷೆಗಳಲ್ಲಿ ಅದು ಪುಲ್ಲಿಂಗ ಮತ್ತು ಪುಲ್ಲಿಂಗೇತರ ಎಂಬ ಅರ್ಥವನ್ನು ಸೂಚಿಸುವುದು. ಇದೇ ರೀತಿ ಮೂಲ ದ್ರಾವಿಡದಲ್ಲಿ ನಲವತ್ತು ಮತ್ತು ನಾನೂರು ಎಂಬುದನ್ನು ಸೂಚಿಸುವ ಬೇರೆ ಬೇರೆ ಸಂಖ್ಯಾವಾಚಕ ರೂಪಗಳು ಇದ್ದಿರಬಹುದೆಂದು ಭಾವಿಸಿದ ಕೆಲವರು *ನಲಪತು (ನಲವತ್ತು) *ನಾನೂತು (ನಾನೂರು) ಎಂಬ ರೂಪಗಳನ್ನು

ಮೂಲ ದ್ರಾವಿಡಕ್ಕೆ ಪುನರ್ರಚಿಸಿಕೊಳ್ಳಲು ಪ್ರಯತ್ನಿಸಿದ್ದಾರೆ. ನಾಲ್ಕು ಎಂಬುದಕ್ಕೆ ಕುರುಖ್ ಭಾಷೆಯಲ್ಲಿ ನೈಬ್ ಎಂಬ ಮತ್ತೊಂದು ರೂಪ ಬಳಕೆಯಲ್ಲಿದೆ. ನಾಲ್– ಅಥವಾ ನಾಲ್ಕು ಎಂಬ ರೂಪ>ನೈಬ್ ಎಂದಾಗಿ ಹೇಗೆ ಪರಿವರ್ತನೆಗೊಂಡಿದೆ ಎಂಬುದರ ಬಗ್ಗೆ ಯಾವುದನ್ನೂ ಖಚಿತವಾಗಿ ಹೇಳಲು ಬರುವುದಿಲ್ಲ. ಆದರೆ ನಾಖ್ ಎಂಬುದರಲ್ಲಿ 'ಕ'ಕಾರವು 'ಖ್' ಆಗಿ ಪರಿವರ್ತನೆಗೊಂಡು (ನಾಲ್ಕು—ನಾಖ್) ಬಳಕೆಯಲ್ಲಿದೆ ಎನ್ನಬಹುದು.

1 : 5 ಅಯ್ದು ;

ತ ; ಐಂತು, ಐಂದು, ಅಂಜಿ, ಅಂಜು (ಅನ್ಜು), (ಐದು)
ಐಂಪತು, ಐಂಬದು, ಅಂಪತು, ಅಂಬದು (ಐವತ್ತು)
ಐನೂಱು, ಐನ್ನೂಱು (ಐನೂರು)
ಐವರ್ (ಐವರು) (ಪುಂ. ಸ್ತ್ರೀ.)
ಅಯ್ ಅಯ್ಂತು, ಐಐಂತು (ಐದೈದು)
ಐವೆಂತು (ಐದರಂತೆ)
ಐನ್‌ತಲೈ (ಐದು ತಲೆಗಳು)
ಐವೇರು ಉರು (ಐದು ತರಹ)
(ಐಂತು, ಐಂದು, ಅಂಜಿ, ಅಂಜು (ಅನ್ಜು), ಅಯ್ನ್ದು,
ಅಮ್–, ಐಮ್–, ಐ–, ಅಯ್–, ಐವ್–, ಐನ್–)

ಮ ; ಅಂಜು, ಅಂಜಿ, ಅಂಚು (ಐದು)
ಅಂಪತು, ಅಂಬದು, (ಅಮ್ಬದು), (ಐವತ್ತು)
ಅಞ್ಞೂಱು (ಐನೂರು), (ಅಞ್ಞೂಱು)
ಐ ಆಯಿರಮ್ (ಐದು ಸಾವಿರ), (ಐ ಆಯಿರಂ.)
ಐ ಆಂಡು, (ಐ ಆಣ್ಡು), (ಐದು ವರ್ಷ)
ಐವರ್ (ಐವರು) (ಪುಂ. ಸ್ತ್ರೀ.)
ಐ ಅಂಜು (ಐದರಂತೆ)
(ಅಂಜು, ಅಂಜಿ, ಅಂಚು, ಅಮ್–, ಅಞ್ಞಾ–, ಐ–, ಐವ್–,)

ಕೋ ; ಅಂಜ್ (ಅನ್ಜ್) (ಐದು)
ಅಯ್ವ್ಬತ್ (ಐವತ್ತು)
ಅಯ್‌ಬಳ್ಕ್ (ಐದು ಬಳ್ಳ)
ಅಂಬಾಣ್ಯ (ಐದು ಪಾಣ್ಯ ಅಳತೆ)
ಅಚಲ್ಗ (ಐದು ಸೊಲಿಗೆ)
(ಅಂಜ್, ಅಯ್–, ಅಮ್–, ಅ–)

ತೊ; ಉಜ್, ಊಜ್, ಉಜೊ (ಐದು)
ಎಬೊತ್ (ಐವತ್ತು)
ಒಯ್‌ನೂಜ್ (ಐನೂರು)
ಒಯ್‌ಅಕ್ (ಐದು ಅಕ್ ಅಳತೆ)
ಒಯ್‌ಖ್ವಾವ್ (ಐದು ಕ್ವಾಖ್ ಅಳತೆ)
(ಉಜ್, ಉಜೊ, ಎ–, ಒಯ್)
ಕ; ಅಯ್ದು, ಐದು,
ಅಯ್ವತ್ತು, ಐವತ್ತು,
ಅಯ್‌ನೂಱು, ಐನೂಱು (ಐನೂರು)
ಅಯ್ವರು, ಐವರು (ಪುಂ. ಸ್ತ್ರೀ.)
ಅಯ್ದನೇ, ಐದನೇ
(ಅಯ್ದು, ಐದು, ಅಯ್–, ಐ–, ಅಯ್ದ್–)
ಕೊಡ್; ಅಂಜಿ, ಅನ್ಜಿ, ಅಂಜು, (ಐದು)
ಐವತ್ತು, ಅಯ್‌ಬತ್ತು (ಐವತ್ತು)
ಅನ್ನೂಱು (ಐನೂರು)
ಅಂಜನೆ, ಅಯ್ದನೆ (ಐದನೇ)
ಅಯ್ವೆ (ಐವರು) (ಪುಂ.ಸ್ತ್ರೀ.)
ಅಯ್ಯ ಅಂಡು, ಅಯ್ ಅಣ್ಡು (ಐದು ವರ್ಷಗಳು)
ಅಯ್ಯಕ್ ಎತ್ತು (ಐದು ಎತ್ತುಗಳು)
ಅಯ್ಯ ಅಂಜಿ (ಐದೈದು)
(ಅಂಜಿ, ಅಂಜು, ಅಯ್–, ಅಯ್ಯ–, ಅಂಜ್–, ಅನ್ಞ್–, ಐ–)
ತು; ಐನು, ಐನ್ (ಐದು)
ಐವ (ಐವತ್ತು)
ಐನೂದು (ಐನೂರು)
ಐನನೆ (ಐದನೇ)
ಐವೆರು, ಐಯೆರು, (ಐವರು) (ಪುಂ. ಸ್ತ್ರೀ.)
ಐಕೊಳು, ಐವೊಳು (ಐದುಸಲ)
(ಐನು, ಐನ್, ಐವ್–, ಐನ್–, ಐ–)
ತೆ; ಏನು, ಅಯ್ದು, ಅಯಿದು, (ಐದು) ಐದು
ಅಯಿದುಗುರು (ಐವರು)
ಏಗುರು (ಐವರು)

ಏವುರು (ಐವರು)
ಏಬದಿ, ಯಾಭ್ಯೆ (ಐವತ್ತು)
ಏನೂಜು (ಐನೂರು)
ಏಬಂಡ್ರಿ (ಐವತ್ತು ಜನರು)
(ಏನು, ಆಯಿುದು, ಏವ್–, ಏ–, ಯಾ–)
ಕೊಲಾ ; ಅಯ್ದ್, ಐದ್ (ಐದು)
ಸೇಗುರು (ಐವರು)
(ಅಯ್ದ್ ಐದ್, ಸೇ–)
ನಾ ; ಸೇಂದಿ (ಐದು)
ಪ ; ಚೇದುಕ್ (ಐದು), (ನಪುಂ.)
ಚೇವಿರ್ (ಐವರು) (ಪುಂ.)
ಚೆಯಲ್, ಚೇಯಲ್ (ಐವರು) (ಸ್ತ್ರೀ.)
ಚೆಂ ಬೋಕಲ್ (ಐದು ವರ್ಷ)
(ಚೇದುಕ್, ಚೇವ್–, ಚೇಯ್–, ಚೆಯ್–, ಚೆವ್–)
ಗ ; ಸೈಯುಂಗ್, (ಐದು)
ಗೋಂ ; ಸೈಯುಂಗ್, (ಐದು)
ಸೈಕ್ (ಐದರಂತೆ)
ಸೈಯುಃಜ್ಗ್, ಹಯ್ಯ್ಯುಂಗ್, ಅವ್‌ಯೂವ್,
ಯೆ ಈಂಗ್, ಹೆಲೂಂಗ್, ಹೆಲುಂಗ್
(ಸೈಯುಂಗ್, ಸೈಯುಃಜ್ಗ್, ಹಯ್ಯ್ಯುಂಗ್, ಹೆಲುಂಗ್, ಹೆಲೂಂಗ್, ಸೈ–,
ಸೈಯ್–, ಹಯ್ಯ್–, ಯೆ–, ಹೆ–)
ಕು ; ಸಿಂಗಿ, ಸಿಂಗ್, (ಐದು)
ಸೇ ಅಗಿ (ಐದು) (ನಪುಂ.), (ಐವರು)
ಮೂ.ದ್ರಾ., * ಚಯ್‌ನ್ತು, ಚಯಂತು, (ಚಯ್‌ನ್‌ತು)
1 : 5 : 1 ವರ್ಗ ;
ತ ; ಐಂತು, ಐಂದು, ಅಂಜಿ, ಅಂಜು (ಅನ್ಜು), ಐನ್ದು,
ಮ ; ಅಂಜ್, ಅಂಜು, ಅಂಜಿ, ಐಂತು, ಐಂದು,
ಕೋ ; ಅಂಜ್ (ಅನ್ಜ್),
ತೊ ; ಉಜ್, ಉಜೊ,
ಕ ; ಅಯ್ದು, ಐದು,
ಕೊಡ್ ; ಅಂಜು, ಅಂಜಿ, (ಅನ್ಜಿ)
ತು ; ಐನು, ಐನ್,

ತೆ; ಅಯಿದು, ಏನು, ಐದು,
ಕೊಲಾ; ಅಯ್ದ್, ಐದ್,
ನಾ; ಸೇಂದಿ,
ಪ; ಚೇದುಕ್,
ಗ; ಸೈಯುಂಗ್,
ಗೋಂ; ಸೈಯುಂಗ್, ಹಯ್ಯುಂಗ್, ಹೆಉಂಗ್,
ಕು; ಸಿಂಗ್, ಸಿಂಗಿ,
ಮೂ. ದ್ರಾ; ಚಯ್‌ನ್‌ತು, ಚಯಂತು, (ಚಯ್‌ನ್ತ್ತು)
1 : 5 : 2 ವರ್ಗ;
ತ; ಅಯ್-, ಅವ್-, ಐವ್-, ಐವ್-, ಐನ್-, ಐ-,
ಮ; ಅವ್-, ಅಞ್ಞ್-, ಐವ್-, ಐ-,
ಕೋ; ಅಯ್-, ಅವ್-, ಅ-,
ತೊ; ಒಯ್-, ಎ-,
ಕ; ಅಯ್-, ಐ-,
ಕೊಡ್; ಅಯ್-, ಅಂಜ್-, ಅನ್-, ಐ-,
ತು; ಐನ್-, ಐವ್-, ಐ-,
ತೆ; ಏನ್-, ಏವ್-, ಏ-, ಯಾ-, ಅಯ್ದ್-,
ಕೊಲಾ; ಅಯ್ದ್-, ಐದ್-, ಸೇ-,
ಪ; ಚೆಯ್-, ಚೆವ್-, ಚೇಯ್-, ಚೇವ್-, ಚೆವ್-,
ಗೋಂ; ಸೈಯ್-, ಹಯ್ಯ್-, ಹಯ್-, ಅವ್-,
ಅಯ್-, ಯೆ-, ಹೆ-,
ಕು; ಸೇ-,
ಮೂ. ದ್ರಾ; * ಚಯ್-, * ಚೆವ್-, > ಅಯ್-*, ಅಯ್‌ವ್- * ಚಯುವ್-, * ಅಯ್‌ನ್ತ್-,

ದ್ರಾವಿಡ ಭಾಷೆಗಳಲ್ಲಿ ಐದು ಎಂಬುದಕ್ಕೆ ಬೇರೆ ಬೇರೆ ಸ್ವತಂತ್ರ ಸಂಖ್ಯಾವಾಚಕ ರೂಪಗಳು, ಬೇರೆ ಬೇರೆ ವಿಶೇಷಣ ರೂಪಗಳು ಬಳಕೆಯಲ್ಲಿರುವುದು ಕಂಡು ಬರುತ್ತವೆ. ಇವುಗಳಲ್ಲಿ ತಮಿಳಿನ ಅಂಜು, ಐಂತು, ಐಂದು, ಅಂಜ್, ಮಲೆಯಾಳಂನ ಅಂಜು, ಅಞ್ಞು, ಐನ್ದು, ಕೋತದ ಅಂಜ್, ಅನ್ಜ್, ತೊದದ ಉಜ್, ಉಜೊ, ಕೊಡಗಿನ ಅಂಜಿ, ಅಂಜು, ತುಳುವಿನ ಐನು, ಐನ್, ಕನ್ನಡದ ಅಯ್ದು, ಐದು, ತೆಲುಗಿನ ಏನು, ಐದು, ಕೊಲಾಮಿಯ ಐದ್, ಅಯ್ದ್, ಮುಂತಾದ ರೂಪಗಳೂ, ನಾಯ್ಕಿಯ ಸೇಂದಿ, ಪರ್ಜಿಯ ಚೇದುಕ್, ಗದಬದ ಸೈಯುಂಗ್, ಗೋಂಡಿಯ

ಸೈಯುಂಗ್, ಪಯ್ಯುಂಗ್, ಹೆಉಂಗ್, ಕುಯಿಯು ಸಿಂಗಿ, ಸಿಂಗ್, ಮುಂತಾದ ರೂಪಗಳು ಮುಖ್ಯವಾಗಿವೆ. ಈ ಸಂಖ್ಯಾವಾಚಕ ರೂಪಗಳನ್ನು ಪರಸ್ಪರ ಹೋಲಿಸಿ ಪರಿಶೀಲಿಸಿದಾಗ ಅವು ಮೂಲತಃ ಒಂದೇ ಮೂಲ ರೂಪದಿಂದ ಹುಟ್ಟಿ ಬೆಳೆದು ಬಂದ ರೂಪಗಳಂತೆ ಗೋಚರಿಸುತ್ತವೆ. ದಕ್ಷಿಣ ದ್ರಾವಿಡ ಭಾಷೆಗಳು ಐದು ಎಂಬುದಕ್ಕೆ ತಮ್ಮದೇ ಆದ ರೂಪಗಳನ್ನು ಸಂಪಾದಿಸಿಕೊಂಡಿದ್ದರೆ, ಮಧ್ಯ ದ್ರಾವಿಡ ಭಾಷೆಗಳು ಇವುಗಳಿಗೆ ಭಿನ್ನವಾಗಿರುವ ತಮ್ಮದೇ ಆದ ಬೇರೆ ಬೇರೆ ರೂಪಗಳನ್ನು ಸಂಪಾದಿಸಿಕೊಂಡಿರುವಂತೆ ಕಂಡುಬರುತ್ತದೆ. ಉತ್ತರ ದ್ರಾವಿಡ ಭಾಷೆಗಳಾದ ಕುರುಖ್, ಮಲ್ತೊ, ಮತ್ತು ಬ್ರಾಹುಈ ಭಾಷೆಗಳಲ್ಲಿ ಐದು ಎಂಬ ದ್ರಾವಿಡ ಸಂಖ್ಯಾವಾಚಕ ರೂಪವು ಪೂರ್ಣವಾಗಿ ಕಣ್ಮರೆಯಾಗಿ ಹೋಗಿದೆ. ಇವುಗಳಲ್ಲಿ ಐದು ಎಂಬುದಕ್ಕೆ ಬೇರೆ ಬೇರೆ ಭಾಷೆಗಳಿಂದ ಬಂದ ಸ್ವೀಕೃತ ರೂಪಗಳು ಬಳಕೆಯಲ್ಲಿವೆ. ಇವು ಇಲ್ಲಿ ಯಾವುವೂ ದ್ರಾವಿಡವಲ್ಲ.

ತಮಿಳು, ಮಲೆಯಾಳಂ, ಕನ್ನಡ, ತುಳು, ತೆಲುಗು ಮುಂತಾದ ದಕ್ಷಿಣ ದ್ರಾವಿಡ ಭಾಷೆಗಳಲ್ಲಿ ಐದು ಎಂಬುದಕ್ಕೆ ಬಳಕೆಯಲ್ಲಿರುವ ಸಂಖ್ಯಾವಾಚಕ ರೂಪಗಳ ಆದಿಯಲ್ಲಿ 'ಐ' ಎಂಬ ಗುಣವಾಚಕ ರೂಪವಿರುವುದು ಕಂಡುಬರುವುದು. ಇದನ್ನು ಕನ್ನಡ, ಕೊಡಗು, ಕೊಲಾಮಿ, ತೆಲುಗು ಮತ್ತು ತುಳು ಮುಂತಾದ ಭಾಷೆಗಳಲ್ಲಿ 'ಅಯ್' ಎಂದು ಉಚ್ಚರಿಸಲಾಗುತ್ತಿದೆ. ಇವುಗಳಲ್ಲಿ ಅಯ್‌ಗಿಂತಲೂ ಐ ಎಂಬುದೇ ಅವುಗಳ ಮೂಲ ರೂಪವಿರಬಹುದೆಂದು ಕೆಲವರು ಭಾವಿಸಿದರೆ, ಮತ್ತೆ ಕೆಲವರು ಐಗಿಂತಲೂ ಅಯ್ ಎಂಬುದೇ ಅವುಗಳ ಮೂಲ ರೂಪವಿದ್ದರೂ ಇರಬಹುದೆಂದು ಊಹಿಸಿದ್ದಾರೆ. ಐ ಎಂಬುದನ್ನು ಅಯ್ ಎಂತಲೂ, ಅಯ್ ಎಂಬುದನ್ನು ಐ ಎಂತಲೂ ಉಚ್ಚಾರದಲ್ಲಿ ಬಳಸಲಾಗುತ್ತಿದೆ. ಇದು ಪರಿಸರಕ್ಕೆ ತಕ್ಕಂತೆ ಏನು, ಐನು, ಐನ್, ಐದು, ಎಯ್ ಎಂಬುದಾಗಿ ಪರಿವರ್ತನೆಗೊಳ್ಳಬಹುದಾದ ಅವಕಾಶಗಳಿವೆ. ಇಷ್ಟೇ ಅಲ್ಲ ಅಯ್–ಎಂಬುದು ತೊದ ಭಾಷೆಯಲ್ಲಿ ಒಯ್–ಎಂಬುದಾಗಿಯೂ ಪರಿಸರಕ್ಕೆ ಅನುಗುಣವಾಗಿ ಪರಿವರ್ತನೆಗೊಳ್ಳಬಹುದು. ತಮಿಳು, ಮಲೆಯಾಳಂ, ಕನ್ನಡ, ತುಳು, ತೆಲುಗು ಮುಂತಾದ ಭಾಷೆಗಳಲ್ಲಿ ಕಂಡುಬರುವ ಆ ಬೇರೆ ಬೇರೆ ಐದು ಎಂಬುದರ ಸಂಖ್ಯಾವಾಚಕ ರೂಪಗಳು ಮೂಲತಃ ಐದು ಎಂಬುದರಿಂದ (ಐದು > ಐನ್ದು > ಐನ್ನು, (ಐನ್) > ಅನ್ನು, ಎಂಬುದಾಗಿ) ಬೆಳೆದುಬಂದಿರಬಹುದೆಂದು ಕೆಲವರು ಊಹಿಸಿದ್ದಾರೆಯಾದರೂ ದ್ರಾವಿಡ ಭಾಷೆಗಳಲ್ಲಿ ಅಯ್ > ಐ > ಏ > ಎ > ಯೆ > (ಹೆ) ಎಂದಾಗಬಹುದಾದ ಅವಕಾಶಗಳು ಇಲ್ಲದೆ ಇಲ್ಲ. ಈ ದೃಷ್ಟಿಯಿಂದ ಅವುಗಳ ಮೂಲರೂಪದ ಬಗ್ಗೆ ಯಾವುದನ್ನು ಖಚಿತವಾಗಿ ಹೇಳಲು ಬರುವುದಿಲ್ಲ. ಐದು ಎಂಬ ಸಂಖ್ಯಾವಾಚಕ ರೂಪವು ಕೆಲವು ದ್ರಾವಿಡ ಭಾಷೆಗಳಲ್ಲಿ ಕೈಯಲ್ಲಿರುವ ಐದು ಬೆರಳುಗಳನ್ನು ಅವಲಂಬಿಸಿ ಸೃಷ್ಟಿಯಾಗಿರಬಹುದೆಂದು ಕೆಲವರು ಊಹಿಸಿದ್ದಾರೆ. ಕನ್ನಡ ಭಾಷೆಯ ಕೈ (ಕಯ್) ಎಂಬ ರೂಪ ತಮಿಳು, ತೆಲುಗು

ಮತ್ತು ಮಲೆಯಾಳಂ ಭಾಷೆಗಳಲ್ಲಿ ಚೈ (ಚಯ್) ಎಂಬ ರೂಪವಾಗಿ ಬೆಳೆದುಬಂದಿರ ಬಹುದಾದ ಸಾಧ್ಯತೆಗಳಿವೆ. ಆದರೆ ಐದು ಎಂಬುದಕ್ಕೆ ದ್ರಾವಿಡ ಸಂಖ್ಯಾವಾಚಕಗಳಲ್ಲಿ ಯಾವ ಕಾಲದಲ್ಲಿಯೂ ಕಕಾರ ಆದಿಯಾದ ಶಬ್ದಗಳು ಬಳಕೆಯಲ್ಲಿದ್ದ ಯಾವ ನಿದರ್ಶನಗಳೂ ದೊರೆಯುವುದಿಲ್ಲ. ಆದಕಾರಣ ಐದು ಎಂಬುದರ ಮೂಲವನ್ನು ದ್ರಾವಿಡ ಭಾಷೆಗಳಲ್ಲಿ ಅದಕ್ಕೆ ಸಂವಾದಿಯಾಗಿ ಬಳಕೆಯಲ್ಲಿರುವ ಶಬ್ದಗಳಲ್ಲಿಯೇ ಕಂಡುಕೊಳ್ಳಬೇಕೆ ವಿನಹ ಇದರ ಮೂಲವನ್ನು ಅನ್ಯ ಭಾಷೆಗಳ ಶಬ್ದಗಳನ್ನು ಅವಲಂಬಿಸಿ ಹುಡುಕಲು ಹೋಗಬಾರದು ಎನ್ನುವರು.

ದಕ್ಷಿಣ ದ್ರಾವಿಡ ಭಾಷೆಗಳ ಐದು ಎಂಬುದರ ಸಂಖ್ಯಾವಾಚಕ ಶಬ್ದಗಳ ಆದಿಯಲ್ಲಿ ಹೆಚ್ಚು ಕಡಿಮೆ ಎಲ್ಲಾ ಭಾಷೆಗಳಲ್ಲಿಯೂ ಐ ಅಥವಾ ಅಯ್ ಎಂಬ ರೂಪವಿದ್ದರೆ, ಮಧ್ಯ ದ್ರಾವಿಡ ಭಾಷೆಗಳ ಸಂಖ್ಯಾವಾಚಕ ರೂಪಗಳ ಆದಿಯಲ್ಲಿ ಚ್, ಸ್, ಹ್ ಎಂಬ ಧ್ವನಿಗಳಿವೆ. ಈ ಧ್ವನಿಗಳು ದಕ್ಷಿಣದ್ರಾವಿಡ ಭಾಷೆಗಳ ಯಾವ ಶಬ್ದಗಳಲ್ಲಿಯೂ ದೊರೆಯುವುದಿಲ್ಲ. ಇವು ಈ ಭಾಷೆಗಳ ಶಬ್ದಗಳ ಆದಿಯಲ್ಲಿ ಲೋಪವಾಗಿ ಹೋಗಿರಬಹುದೆಂದು ಕೆಲವರ ವಾದ. ಈ ಕಾರಣದಿಂದಲೇ ಕೆಲವರು ಮಧ್ಯದ್ರಾವಿಡ ಭಾಷೆಗಳ ರೂಪಗಳನ್ನು ಆಧರಿಸಿ ಮೂಲದ್ರಾವಿಡಕ್ಕೆ *ಚಯ್‌ನ್ತು, (ಚಯಂತು) ಚಯ್‌ನ್‌ತು ಎಂಬುದಾಗಿ ಪುನರ್ರಚಿಸಿಕೊಳ್ಳಲು ಪ್ರಯತ್ನಿಸಿದ್ದಾರೆ. ಐದು ಎಂಬ ಸಂಖ್ಯಾವಾಚಕ ರೂಪಗಳ ಮೂಲದ್ರಾವಿಡ ರೂಪದಬಗ್ಗೆ ವಿದ್ವಾಂಸರಲ್ಲಿ ಸಾಕಷ್ಟು ಚರ್ಚೆಗಳು ನಡೆದಿವೆಯಾದರೂ ಈ ದಿಕ್ಕಿನಲ್ಲಿ ಒಮ್ಮತವನ್ನು ಇನ್ನೂ ಕಾಣಲು ಸಾಧ್ಯವಾಗಿಲ್ಲ. ಈ ದಿಕ್ಕಿನಲ್ಲಿ ಅಭಿಪ್ರಾಯ ಭೇದಗಳಿವೆ. ಪಿ. ಎಸ್. ಸುಬ್ರಹ್ಮಣ್ಯಂ, ಮತ್ತು ಎಸ್.ವಿ. ಷಣ್ಮುಗಂ ಎಂಬುವವರು *ಅಯ್‌ನ್, (ಅಯನ್) ಎಂಬ ರೂಪವೇ ಮೂಲದಕ್ಷಿಣ ದ್ರಾವಿಡವಿರಬಹುದೆಂದು ಊಹಿಸಿ ಅದನ್ನು ಪುನರ್ರಚಿಸಿಕೊಳ್ಳಲು ಪ್ರಯತ್ನಿಸಿದ್ದಾರೆಯಾದರೂ ಇವರು ಮೂಲ ದ್ರಾವಿಡಕ್ಕೆ *ಚಯುನ್ತು, ಚಯ್‌ನ್ತು, (ಚಯಂತು) ಎಂಬುದನ್ನು ಪುನರ್ರಚಿಸಿ ಕೊಳ್ಳಲು ಪ್ರಯತ್ನಿಸಿದ್ದಾರೆ. ಆದರೆ, ಕಾಲ್ಡ್‌ವೆಲ್ ಮಹಾಶಯನು *ಇ*ಎ ಅಥವಾ*ಏ ಎಂಬ ಸ್ವರಗಳನ್ನು ಅವುಗಳ ಮೂಲವಿರಬಹುದೆಂದು ಅನುಮಾನಿಸಿ ದ್ದಾನೆ.

ಕುಯಿ, ಗೋಂಡಿ, ನಾಯ್ಕಿ, ಪರ್ಜಿ, ಗದಬ ಮುಂತಾದ ಮಧ್ಯದ್ರಾವಿಡ ಭಾಷೆಗಳಲ್ಲಿ ಐದು ಎಂಬುದಕ್ಕೆ ಬಳಕೆಯಲ್ಲಿರುವ ಶಬ್ದಗಳ ಆದಿಯಲ್ಲಿ ಕೆಲವುಕಡೆ ಚ್ ಕಾರವೂ, ಕೆಲವುಕಡೆ ಸ್ ಕಾರವೂ ಮತ್ತೆ ಕೆಲವುಕಡೆ ಹ್ ಕಾರವೂ ಇರುವುದು ಗೋಚರಿಸುವುವು. ಪರ್ಜಿ ಭಾಷೆಯ ಚೇದುಕ್ ಎಂಬ ರೂಪದ ಆದಿಯ ಚಕಾರವು ದಕ್ಷಿಣ ದ್ರಾವಿಡ ಭಾಷೆಗಳಲ್ಲಿ ಪೂರ್ಣವಾಗಿ ಲೋಪವಾಗಿ ಹೋಗಿದೆ. ಇದು ಕುಯಿ, ಗೋಂಡಿ, ನಾಯ್ಕಿ, ಗದಬ ಮುಂತಾದ ಭಾಷೆಗಳಲ್ಲಿ ಸ್ ಕಾರವಾಗಿಯೂ, ಹ್ ಕಾರವಾಗಿಯೂ ಪರಿವರ್ತನೆಗೊಂಡಿದೆ. ದ್ರಾವಿಡಭಾಷೆಗಳಲ್ಲಿ ಚ್ > ಸ್ >

ಹ್>ವಾಗಿ ಪರಿವರ್ತನೆಗೊಳ್ಳುವುದು ಸರ್ವೇಸಾಮಾನ್ಯ. ಈ ದೃಷ್ಟಿಯಿಂದಲೇ ಕೆಲವು ವಿದ್ವಾಂಸರು *ಚಯನ್ತು ಎಂಬುದನ್ನು ಮೂಲದ್ರಾವಿಡಕ್ಕೆ ಪುನರ್ರಚಿಸಿಕೊಳ್ಳಬಹುದೆಂದು ಸೂಚಿಸಿದ್ದಾರೆ. ಮೂಲ ದಕ್ಷಿಣದ್ರಾವಿಡಕ್ಕೆ ಅಯನ್ತು ಎಂಬುದನ್ನು ಪುನರ್ರಚಿಸಿಕೊಳ್ಳಲು ಅವಕಾಶವಿದೆಯಾದರೂ ಹೆಚ್ಚು ಜನ ವಿದ್ವಾಂಸರು *ಅಯ್‌ನ್ ಎಂಬ ರೂಪವನ್ನೇ ಮೂಲ ದಕ್ಷಿಣದ್ರಾವಿಡಕ್ಕೆ ಪುನರ್ರಚಿಸಿಕೊಳ್ಳಲು ಪ್ರಯತ್ನಿಸಿದ್ದಾರೆ. ಚಯ್‌ನ್ತು ಎಂಬುದರ ಮೂಲರೂಪ ಚಯ್-ಅಥವಾ ಚಯ್‌ವ್ ಎಂಬುದಾಗಿ ಪುನರ್ರಚಿಸಿಕೊಳ್ಳುವರು. ಚಯ್-ಅಥವಾ ಚಯ್‌ವ್ ಎಂಬ ವಿಶೇಷಣ ರೂಪದ ಆದಿಯ ಚಕಾರವು ಕಣ್ಮರೆಯಾಗಿ ಹೋದಾಗ ಅದರಲ್ಲಿ ಅಯ್-ಅಥವಾ ಅಯ್‌ವ್ ಎಂಬ ರೂಪವು ಕಾಣಿಸಿಕೊಳ್ಳುವುದು. ಇದು ದಕ್ಷಿಣದ್ರಾವಿಡಭಾಷೆಗಳಲ್ಲಿ ವಿಶೇಷವಾಗಿ ಕಂಡುಬರುತ್ತದೆಯಾದರೂ ಇದು ಪರಿಸರಕ್ಕೆ ತಕ್ಕಂತೆ ಬೇರೆ ಬೇರೆಯಾಗಿ ಪರಿವರ್ತನೆಗೊಳ್ಳುವುದು. ಬಹಳಷ್ಟು ದಕ್ಷಿಣದ್ರಾವಿಡ ಭಾಷೆಗಳಲ್ಲಿ ಈ ಬಗೆಯ ವ್ಯತ್ಯಾಸವನ್ನು ಸ್ಪಷ್ಟವಾಗಿ ಗುರುತಿಸಿಕೊಳ್ಳಬಹುದಾಗಿದೆ. ಈ ಅಯ್ ಎಂಬ ರೂಪವೇ ಕೆಲವು ವೇಳೆ ಐ ಯಾಗಿಯೂ ಇಲ್ಲವೇ ಉಚ್ಚಾರದಲ್ಲಿ ಐ ಎಂಬುದೇ ಅಯ್ ಆಗಿಯೂ ಕಾಣಿಸಿಕೊಳ್ಳಬಹುದಾದ ಅವಕಾಶಗಳಿವೆ.

ಕಾಲ್ಡ್‌ವೆಲ್‌ನ ಅನಂತರ ಈ ದಿಕ್ಕಿನಲ್ಲಿ ಆಲೋಚಿಸಲು ಹೊರಟ ಕೆಲವು ಆಧುನಿಕ ಭಾಷಾವಿಜ್ಞಾನಿಗಳು ತುಳು ಭಾಷೆಯಲ್ಲಿ ಬಳಕೆಯಲ್ಲಿರುವ ಐನ್ ಅಥವಾ ಅಯ್‌ನ್ ಎಂಬರೂಪವೇ ಹೆಚ್ಚು ಪ್ರಾಚೀನವಿದ್ದರೂ ಇರಬಹುದೆಂದು ಭಾವಿಸಿ ಅಯ್‌ನ್ತು ಎಂಬುದನ್ನು ಪುನರ್ರಚಿಸಿಕೊಳ್ಳಲು ಪ್ರಯತ್ನಿಸಿದ್ದಾರೆ. ಈ ಅಯ್‌ನ್‌ತ್ ಎಂಬ ರೂಪದ ಅಂತ್ಯದ ತ್ ವು ಸಾಧಿತ ಪ್ರತ್ಯಯವಿರಬಹುದೆಂದು ಭಾವಿಸಿದ್ದಾರೆ. ತಮಿಳು, ಮಲೆಯಾಳಂ, ಮುಂತಾದ ಭಾಷೆಗಳಲ್ಲಿ ಆ ಸಾಧಿತ ಪ್ರತ್ಯಯವು ಅಯ್‌ನ್ ಎಂಬ ರೂಪಕ್ಕೆ ಸೇರಿಕೊಂಡು ಅಯ್‌ನ್ತ್ ಎಂಬುದಾಗಿ ಬೆಳೆದುಬಂದಿರಬಹುದೆಂದು ಕೆಲವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಹಾಗೆಯೇ ಅಯ್‌ನ್ತ್ > ಅಯ್‌ನ್ದ್ > ಐಂದು > (ಐನು) ಐದು ಎಂದಾಗಿ ಪರಿವರ್ತನೆಗೊಂಡಿರಬಹುದೆಂದು ಕೆಲವರ ಊಹೆ. ಟಿ. ಬರೊ, ಎಂ. ಬಿ ಎಮೆನೊ, ಸುಬ್ರಹ್ಮಣ್ಯಂ ಮತ್ತು ಎಸ್. ವಿ. ಷಣ್ಮುಗಂ ಎಂಬುವವರು ಮೂಲದ್ರಾವಿಡ ರೂಪ ಚಯ್‌ನ್ತು ಎಂಬ ರೂಪದ ಆದಿಯ ಚಕಾರವು ಲೋಪಗೊಂಡು ಅದು ಮುಂದೆ ಅಯ್‌ನ್ತು ಆಗಿ ಅದೇ ಅಯ್‌ನ್ತ್ ಎಂದಾಗಿರಬಹುದೆಂದು ಊಹಿಸಿದ್ದಾರೆ. ಹಾಗೆಯೇ ಅಯ್‌ವ್ಪತು, ಅಮ್‌ಬದು (ಅಂಬದು) ಅಯ್‌ನೂಱು, ಅಯ್ನೂಱು, ಎಂಬತ್ಯಾದಿ ರೂಪಗಳನ್ನು ಗಮನಿಸಿದ ಅವರು ಅವುಗಳ ನಡುವಿನ ಅನುನಾಸಿಕ ವ್ಯಂಜನವು ಅವುಗಳಲ್ಲಿ ಆಗಮವಾಗಿ ಬಂದು ಅಯ್‌ವ್ ಎಂಬ ರೂಪ ಪರಿವರ್ತನೆಗೊಂಡಿದ್ದರೂ ಇರಬಹುದೆಂದು ಭಾವಿಸಿದ್ದಾರೆ. ಈ ರೂಪವೇ ಅವುಗಳಲ್ಲಿ ಹೆಚ್ಚು ಪ್ರಾಚೀನವಿರಬಹುದೆಂದು ಕೆಲವರ ಊಹೆ. ಈ ರೂಪದ ನಡುವಿನ ಅನುನಾಸಿಕ ವ್ಯಂಜನವು ಕಾಲಕ್ರಮೇಣ ಕೆಲವು ಕಡೆ ಲೋಪಗೊಂಡು

ಅದು ಅಯ್ ಆಗಿರಲುಬಹುದು. ಅಯ್‌ವ್ ಎಂಬ ರೂಪವು ಮಧ್ಯದ್ರಾವಿಡ ಭಾಷೆಗಳಲ್ಲಿ ಚಯ್‌ವ್ ಎಂಬುದಾಗಿ ರೂಪಾಂತರ ಹೊಂದಲೂಬಹುದು. ಇಲ್ಲವೇ ಚಯ್‌ವ್ ಎಂಬುದು ಅಯ್‌ವ್ ಎಂಬುದಾಗಿ ಪರಿವರ್ತನೆಗೊಳ್ಳಬಹುದು. ಚಯ್‌ವ್ > ಚಯ್ಕ್ > ಚಯ್ > ಅಯ್ಕ್ > ಅಯ್ ಎಂದಾಗಿಯೂ ಪರಿವರ್ತನೆಗೊಳ್ಳಬಹುದಾದ ಅವಕಾಶಗಳು ದ್ರಾವಿಡ ಭಾಷೆಗಳಲ್ಲಿ ಇಲ್ಲದೇ ಇಲ್ಲ. ಇದನ್ನು ಗಮನಿಸಿದ ಎಂ.ಎಸ್. ಆಂಡ್ರೊನೋವ್ ಮತ್ತು ಕಾಲ್ಡ್‌ವೆಲ್ ಎಂಬುವವರು ಚಯ್‌ವ್ ಗಿಂತಲೂ ಚಯ್–ಅಥವಾ ಅಯ್–ಎಂಬ ರೂಪವೇ ಹೆಚ್ಚು ಪ್ರಾಚೀನವಿರಬಹುದೆಂದು ಭಾವಿಸಿ ಅವರು ಚಯ್–ಅಥವಾ ಅಯ್–ಎಂಬ ರೂಪವನ್ನೇ ಮೂಲದ್ರಾವಿಡ (ವಿಶೇಷಣ)ವಾಗಿ ಪುನರ್ರಚಿಸಿಕೊಳ್ಳಲು ಪ್ರಯತ್ನಿಸಿದ್ದಾರೆ. ಚಯ್–ಎಂಬ ರೂಪದ ಆದಿಯ ಚಕಾರವು ಕಣ್ಮರೆಯಾದಾಗ ಅಯ್ ಎಂಬ ರೂಪವು ದೊರೆಯುವುದು. ಇದು ಹೆಚ್ಚು ದಕ್ಷಿಣ ದ್ರಾವಿಡ ಭಾಷೆಗಳಲ್ಲಿ ಈಗಲೂ ಬಳಕೆಯಲ್ಲಿರುವುದನ್ನು ಗುರುತಿಸಿಕೊಳ್ಳಬಹುದಾಗಿದೆ. ಚಯ್–ಅಯ್, –ಚಯ್‌ವ್–ಅಯ್‌ವ್–ಎಂಬ ರೂಪಗಳಲ್ಲಿ ಯಾವುದು ಹೆಚ್ಚು ಪ್ರಾಚೀನ ಎಂಬುದರ ಬಗ್ಗೆ ಯಾವುದನ್ನೂ ಇಲ್ಲಿ ಖಚಿತವಾಗಿ ಹೇಳಲು ಬರುವುದಿಲ್ಲ. ಇಷ್ಟಾದರೂ ಕೆಲವು ವಿದ್ವಾಂಸರು ಅಯ್ ಎಂಬ ರೂಪವೇ ಅವುಗಳಲ್ಲಿ ಹೆಚ್ಚು ಪ್ರಾಚೀನವಿದ್ದರೂ ಇರಬಹುದೆಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಎಸ್. ಸಿ. ಪಾಟೀಲ

ಬಾರೋಕ್ ಕಲೆಯ ಜನಕ : ಮೈಕೆಲ್ ಎಂಜಿಲೊ

ಯುರೋಪಿನ ಸಾಂಸ್ಕೃತಿಕ ಪುನರುಜ್ಜೀವನ ಯುಗದ ಪ್ರಧಾನ ಪ್ರತಿನಿಧಿಯೆಂದು ಶಿಲ್ಪಿ ಮೈಕೆಲೊನನ್ನು ಕರೆಯುವದು ರೂಢಿ. ನಾಲ್ಕು ಶತಮಾನಗಳಿಗೂ ಹೆಚ್ಚು ಕಾಲ ಕಲಾವಿಶ್ವದಲ್ಲಿ ಅವಿಚಲಿತವಾಗಿರುವ ಆತನ ಕೀರ್ತಿ ಜಗತ್ತಿನ ಇತಿಹಾಸದಲ್ಲಿಯೇ ಅತ್ಯುದ್ದಂಡ ಶಿಲ್ಪಕಾರನೆಂಬ[1] ಸ್ಥಾನವನ್ನು ಆತನಿಗೆ ತಂದುಕೊಟ್ಟಿದೆ. ಇಟಲಿಯ ಬಾರೋಕ್ ಕಲಾಸಂಪ್ರದಾಯದ ಶಿಲ್ಪರಚನೆಯ ರೂವಾರಿಯಾಗಿ ಮೈಕೆಲ್ ಎಂಜಿಲೊ ಪ್ರಥಮವಾಗಿ ಕಾರ್ಯನಿರ್ವಹಿಸಿದ್ದಾನೆ.[2] ಅವನೊಬ್ಬ ವಾಸ್ತುಕಾರ, ಶಿಲ್ಪಕಾರ, ಚಿತ್ರಕಾರ, ಕವಿ. ಇವನು ಕೈಯಾಡಿಸಿದಲ್ಲೆಲ್ಲ ಕಲೆ ಚಲ್ಲುವರಿದಿದೆ.

ಎಲ್ಲ ಕಾಲಕ್ಕೂ ಉಳಿಯುವ ವಿಶ್ವವಿಖ್ಯಾತಿ ಮೈಕೆಲ್‌ನದು. ಆತನು ಆಜನ್ಮ ಪ್ರಭಾವಶಾಲಿ. ತನ್ನ ಕಾಲದ ದಾರ್ಶನಿಕ ಸಂಪ್ರದಾಯಗಳನ್ನು ಚೆನ್ನಾಗಿ ತಿಳಿದುಕೊಂಡ, ಆತ ತನ್ನ ಕಲಾಸೃಷ್ಟಿಗಳಲ್ಲಿ ಯಾವೊಂದು ಸಂಪ್ರದಾಯಕ್ಕೂ ಕಟ್ಟು ಬಿದ್ದವನಲ್ಲ. ಅವನು ಆರಿಸಿಕೊಂಡ ಸೃಷ್ಟಿಕಾರಿ ಮಾಧ್ಯಮಗಳಲ್ಲಿ ಶಿಲ್ಪಕ್ಕೆ ಮೊದಲನೆಯ ಸ್ಥಾನ ದೊರೆಯುವದಾದರೆ, ಚಿತ್ರಕಲೆ ಮತ್ತು ವಾಸ್ತುಶಿಲ್ಪಗಳಿಗೆ ಅನಂತರದ ಸ್ಥಾನ ಸಲ್ಲುತ್ತದೆ[3] ಎಂಬ ಮಾತಿನಲ್ಲಿ ಅತಿಶಯೋಕ್ತಿಯಿಲ್ಲ.

ಜನನ

"ಇಂದು ನನಗೆ ಒಂದು ಗಂಡುಮಗು ಹುಟ್ಟಿತು. ಅದಕ್ಕೆ ಮೈಕೆಲ್ ಎಂಜಿಲೊ ಎಂದು ನಾಮಕರಣಮಾಡಿದೆ" ಎಂದು ಮೈಕೆಲ್‌ನ ತಂದೆ ತನ್ನ ದಿನಚರಿಯೊಂದರಲ್ಲಿ ಬರೆದಿದ್ದಾನಂತೆ. ಈ ಚಿತ್ರಕಾರನು ಹುಟ್ಟಿದ್ದು 1475ನೆಯ ಮಾರ್ಚ್ 5ನೆಯ

---

1 ಎಸ್. ಆರ್. ರಾಮಸ್ವಾಮಿ 'ಕಲಾವಿಶ್ವದ ಧ್ರುವತಾರೆ ಯುಗಪುರುಷ ಮೈಕೆಲ್ ಎಂಜಲೊ', "ಸುಧಾ ವಾರಪತ್ರಿಕೆ", 22 ಜೂನ್ 1975, ಪುಟ 36.

2 Encyclopaedia of World Art, Vol. VIII, 1963. Page 505.

3 ಡಾ. ಶಿವರಾಮಕಾರಂತ "ಕಲಾಪ್ರಪಂಚ", ಪುಟ 264.

ದಿನಾಂಕದಂದು. ಇವನ ತಂದೆ ಲುಡೋಂಕೋ ಚಾನಾರವಿ ಇಟಲಿಯ ಅರಾಶ್ಕೋದ ಬಳಿ ಇರುವ ಕಾಪ್ರೆಸ್ ಎಂಬ ಸಣ್ಣ ಪಟ್ಟಣದ ಗವರ್ನರನಾಗಿದ್ದನಂತೆ.[4] ಕಲ್ಲುಕುಟಿಗ ಕುಟುಂಬದ ಪರಿಸರದಲ್ಲಿ ಈತನ ಜನನವಾದುದರಿಂದ ಬಾಲ್ಯದಲ್ಲಿಯೇ ಉಳಿಸುತ್ತಿಗೆಗಳ ನಂಟುತನವಿತ್ತಂತೆ.

ಕಲಾಧ್ಯಯನ

ಚಿಕ್ಕವನಿದ್ದಾಗಲೇ ಈತನ ಕಲಾಭಿರುಚಿಯ ಪರಿಚಯ ಎಲ್ಲರಿಗೂ ಆಗಿತ್ತು. ಮೈಕೆಲ್ ಎಂಜಿಲೊನ ತಂದೆಯು ಗಿರ್ಲಾಂಡೋ ಎಂಬಾತನ ಕಲಾಶಾಲೆಯಲ್ಲಿ ಚಿತ್ರಕಲೆಯ ಅಭ್ಯಾಸಕ್ಕೆ ಮೈಕೆಲ್‌ನನ್ನು ಸೇರಿಸಿದನಂತೆ. ಆದರೆ ಮೈಕೆಲ್ ಎಂಜಿಲೊನಿಗೆ ಚಿತ್ರಕಲೆಗಿಂತ ಶಿಲ್ಪಕಲೆಯ ಕಡೆಗೇ ವಿಶೇಷವಾದ ಆಸಕ್ತಿಯಿದ್ದುದರಿಂದ ಚಿತ್ರಶಾಲೆಯನ್ನು ಬಿಟ್ಟು ಶಿಲ್ಪಕಲೆಯ ಶಾಸ್ತ್ರೀಯ ಅಧ್ಯಯನಕ್ಕಾಗಿ ಪ್ಯಾರಿಸ್ಸಿನ ಶ್ರೀಮಂತ ಲೋರೆಂಜೋ ಡ. ಮೆಡಿಸಿಯಾ ಶಿಲ್ಪಾಗಾರವೊಂದರಲ್ಲಿ ಬರ್ಟಾಲ್ಡೊ ಎಂಬ ಪ್ರಖ್ಯಾತ ಶಿಲ್ಪಿಯ ಕೈಯಲ್ಲಿ, ಶಿಲ್ಪಗಳ ಕೆತ್ತನೆಯ ಕಾರ್ಯದಲ್ಲಿ ತರಬೇತಿಯನ್ನೂ ಹೊಂದಿದ, ಇವನಿಗೆ ಲೊರೆಂಜೋನ ಆಶ್ರಯವಲ್ಲದೆ ಬರ್ಟಾಲ್ಡೊನಂತಹ ಶಿಲ್ಪಿಯ ಮಾರ್ಗದರ್ಶನವು ಸಿಕ್ಕಿತು.

ಮೇಲಾಗಿ ಪ್ಲೇಟೊ ಅಕ್ಯಾಡೆಮಿಯ ಸಾಮಿಪ್ಯವೂ ದೊರೆಯಿತು. ಹೀಗಾಗಿ ಈತನ ಕಲಾಅಧ್ಯಯನ ತುಂಬಾ ಪ್ರೋತ್ಸಾಹಕರವಾಗಿ ಬೆಳವಣಿಗೆಯಾಯಿತು.

ಕಲಾಕೃತಿಗಳ ನಿರ್ಮಾಣ

ಮೈಕೆಲ್ ಎಂಜಿಲೊ ಚಿಕ್ಕವನಿದ್ದಾಗಲೇ ಶಿಲ್ಪಗಳನ್ನು ರಚಿಸುತ್ತಿದ್ದನಂತೆ. ಈತನ ಬಾಲ್ಯದ ಶಿಲ್ಪಗಳು ಕಲೆಯ ಇತಿಹಾಸದಲ್ಲಿ ಅಭೂತಪೂರ್ವವೆನಿಸಿದವುಗಳಾಗಿವೆ. ಸೋಪಾನವೊಂದರ ಅಡಿಯಲ್ಲಿ ಶಿಶು ಯೇಸುವನ್ನು ತೆಕ್ಕೆಯಲ್ಲಿ ಹಿಡಿದಿರುವ 'ಮೆಡೋನಾ'ಕೃತಿ, ಸೆನಿಟಾರ್ ತಂಡದ ಆಕ್ರಮಣದಿಂದ ಕನ್ಯೆಯೊಬ್ಬಳನ್ನು ಪಾರು ಮಾಡುವ ಪ್ರಸಂಗದ ಶಿಲ್ಪ ಮುಂತಾದವುಗಳನ್ನು ಹೆಸರಿಸಬಹುದು. ಕಿರಿಯ ವಯಸ್ಸಿನಲ್ಲಿ ರಚಿಸಿದ ಶಿಲ್ಪಕಲಾಕೃತಿಗಳನ್ನು ರಾಷ್ಟ್ರೀಯ ವಸ್ತುಸಂಗ್ರಹಾಲಯದಲ್ಲಿ ಸಂಗ್ರಹಿಸಿಡಲಾಗಿದೆ.

ಕೆಲವು ಶಿಲ್ಪಕಲಾಕೃತಿಗಳು

1. ಮೆಡೋನಾ ಆಫ್ ದಿ ಸ್ಟೇರ್ಸ್ (1491)
2. ಸೇಟಾರ್ಸ್ (1492)

[4] ಕಮಲದಾಸಿ ಗುರುರಾಯ, "ಪಾಶ್ಚಾತ್ಯ ಕಲಾವಿದರು", ಪುಟ 18.

3. ನಿದ್ರಿಸುತ್ತಿರುವ ನಾರಿ
4. ಮನ್ಮಥ, (ಕ್ಯೂಪಿಡ್) ಶಿಲ್ಪ
5. ಬ್ಯಾಕಸ್ (ಗ್ರೀಕರ ಪಾನಾಧಿ ದೇವತೆ)
6. ಮೋಸೆಸ್ ಶಿಲ್ಪ
7. ಡೇವಿಡ್
8. ಪಿಯೆಟಾ (ಅನುಕಂಪ)

ಮಾದರಿಗಾಗಿ ಕೆಲವು ಶಿಲ್ಪಗಳ ಪರಿಚಯವನ್ನು ಇಲ್ಲಿ ಮಾಡಲಾಗಿದೆ. ಮೋಸೆಸ್ ಶಿಲ್ಪ : ಮೈಕೆಲ್ ಎಂಜಲೊನ ಉದ್ದಾಮಶಿಲ್ಪ, ರೋಮ್‌ನಗರದ ಸೇಂಟ್ ಪೀಟರ್ಸ್ ಕೆಥೆಡ್ರೆಲಿನಲ್ಲಿರುವ ಈ ಆಸೀನ ವಿಗ್ರಹ ಎಂಟು ಅಡಿಗಿಂತ ದೊಡ್ಡದು. ಅದರಲ್ಲಿ ಒಂದು ಪೀಠದ ಮೇಲೆ ಮೋಸೆಸ್ ಮುಖ ತಿರುಗಿಸಿ ಕುಳಿತಿದ್ದಾನೆ. ಅವನ ತುಂಬುದೇಹ ನಾಭಿಯ ತನಕ ಹರಿಯುವ ದಾಡಿ-ಮೀಸೆಗಳು, ಗಂಭೀರ ಮುಖಭಾವ ಇವೆಲ್ಲವೂ ತನ್ನ ಮುಪ್ಪನ್ನು ದಮನಿಸಿ ಕುಳಿತ ಒಬ್ಬ ವ್ಯಕ್ತಿಯ ಕಲ್ಪನೆಯನ್ನು ಕೊಡುತ್ತದೆ.[5] ಈ ಶಿಲ್ಪದಲ್ಲಿ ಮೊಸೆಸ್‌ನ ಅಪಾರ ಬುದ್ಧಿವಂತಿಕೆ, ಕೋಪದ ಭಾವನೆ, ಗಂಭೀರವಾದ ತೀಕ್ಷ್ಣನೋಟ, ಸಹೃದಯನನ್ನು ಕ್ಷಣದಲ್ಲೇ ತನ್ನೆಡೆಗೆ ಆಕರ್ಷಿಸಿಕೊಳ್ಳುವ ಮೋಹಕ ಶಿಲ್ಪವಿದಾಗಿದೆ. ಮೈಕೆಲ್ ಎಂಜಲೊನ ಅನೇಕ ಒಳ್ಳೆಯ ಶಿಲ್ಪಗಳಲ್ಲಿ ಈ ಶಿಲ್ಪಕ್ಕೂ ಒಂದು ಸ್ಥಾನವಿದೆ.

ಡೇವಿಡ್ ಶಿಲ್ಪ

ಹದಿನೈದುನೂರಾ ಒಂದರಲ್ಲಿ ಬೆಲ್ಜಿಯಮ್‌ದ ಇಬ್ಬರು ವರ್ತಕರಿಗಾಗಿ ರಚಿಸಿದ ನಗ್ನ ಶಿಲ್ಪವಿದಾಗಿದೆ. ಈ ಶಿಲ್ಪದಲ್ಲಿ ಮೈಕೆಲ್ ಎಂಜಲೊ ಆತನ ವೈಯಕ್ತಿಕ ದರ್ಶನ, ಹಸ್ತಕೌಶಲ, ರಸದೃಷ್ಟಿಭಾವ ಪ್ರತಿಪಾದನ ನೈಪುಣ್ಯ ಕಲಾದೃಷ್ಟಿ, ತಾಂತ್ರಿಕ ಪರಿಣತಿಗಳೆಲ್ಲ ಏಕೀಭವಿಸಿ ಮೈತಳೆದವು ಪ್ರಸಿದ್ಧ ಡೇವಿಡ್ ಕೃತಿಯಲ್ಲಿ (ಹದಿನೇಳು ಅಡಿ ಎತ್ತರ). ಗುಣದಲ್ಲಿಯೂ ಇದಕ್ಕೆ ಸಮಾನವಾದ ಶಿಲಾಶಿಲ್ಪಗಳು ವಿರಳವೆಂದೇ ಹೇಳಬೇಕು. ಫಿಲಿಸ್ಟೈನ್ ದೈತ್ಯ ಗೋಲಿಯತನನ್ನು ಸಂಹರಿಸಿದ ಡೇವಿಡನು ನಿಂತಿರುವ ಧೀರೋದಾತ್ತ, ಸಹಜಭಂಗಿ, ಮುಖದಲ್ಲಿ ಹೊಮ್ಮುವ ಘೋರಣೆ, ಆತ್ಮ ವಿಶ್ವಾಸಗಳು ಅಂತರಂಗದ ತುಮುಲದ ಅಭಿವ್ಯಂಜನೆಯೂ, ಶಿಲ್ಪಗಳಿಗಿರಲಿ ಕವಿಗಳಿಗೂ ವರ್ಣನೆಗೆ ನಿಲುಕದಷ್ಟು ಪರಿಸ್ಫುಟದಿಂದ[6] ಕೂಡಿದ ಡೇವಿಡ್‌ನ ಶಿಲ್ಪ ಜಗತ್‌ಪ್ರಸಿದ್ಧಿ

---

5 ಡಾ. ಶಿವರಾಮಕಾರಂತ, "ಕಲಾಪ್ರಪಂಚ", ಪುಟ 281.

6 ಎಸ್. ಆರ್. ರಾಮಸ್ವಾಮಿ, 'ಕಲಾವಿಶ್ವದ ಧ್ರುವತಾರೆ ಯುಗಪುರುಷ ಮೈಕೆಲ್ ಎಂಜಲೊ', ಸುಧಾ ವಾರಪತ್ರಿಕೆ, 22 ಜೂನ 1975, ಪುಟ 36.

ಯನ್ನು ಪಡೆದಿದೆ. ಈಗ ಇದನ್ನು ಬೆಲ್ಜಿಯಮ್‌ದ ಬ್ರೂಜ್‌ದಲ್ಲಿ ಸಂಗ್ರಹಿಸಿಡಲಾಗಿದೆಯಂತೆ.

ಪಿಯೇಟಾ (ಅನುಕಂಪ) ಶಿಲ್ಪ

ಮೈಕೆಲ್ ಎಂಜೆಲೊನ ಶಿಲ್ಪಗಳೆಲ್ಲಿಲ್ಲಾ ಹೆಚ್ಚು ಚರ್ಜೆ ಹಾಗೂ ವಿಮರ್ಶೆಗೊಳಗಾದ ಶಿಲ್ಪವಿದು. ಮೈಕೆಲ್ ಎಂಜೆಲೊನನ್ನು ಕಲಾ ಇತಿಹಾಸದ ವ್ಯಕ್ತಿಯನ್ನಾಗಿ ದಾಖಲುಮಾಡಿದ ಕಲಾಕೃತಿಗಳಲ್ಲಿ ಈ ಶಿಲ್ಪಕ್ಕೊಂದು ವಿಶಿಷ್ಟ ಸ್ಥಾನವಿದೆ. ತನ್ನ ಪರಿಸರದಲ್ಲಿ ಅತ್ಯಂತ ಪರಿಚಿತವಿರುವ ಸನ್ನಿವೇಶದ ವಸ್ತುವೊಂದನ್ನು ಆಯ್ಕೆಮಾಡಿಕೊಂಡು ಸ್ಪರ್ಧಾತ್ಮಕವಾಗಿ ಕೆತ್ತನೆಗೈದ ಕೃತಿ ಇದಾಗಿದೆ. ಈಗಾಗಲೇ ಅನೇಕ ಜನ ಕಲಾವಿದರು ಈ ವಿಷಯದ ಶಿಲ್ಪ ರಚಿಸಿ ಪ್ರಸಿದ್ಧಿಗಳಿಸಿದ್ದರೂ ಮತ್ತೆ ಪ್ರತಿಸ್ಪರ್ಧಿಯಾಗಿ ಬಂದ ಈ ಕೃತಿಯ ಬಗೆಗೆ ಸಹಜವಾದ ಕುತೂಹಲ ಕಲಾವಿದರಲ್ಲಿ, ವಿಮರ್ಶಕರಲ್ಲಿ, ಬೆಳೆದಿರಲಿಕ್ಕೆ ಸಾಕು. ಉಳಿದ ಕಲಾವಿದರ ಕೃತಿಗಳಿಗಿಂತ ತೀರ ಭಿನ್ನವಾದ ಕಲಾತ್ಮಕತೆಯಿಂದ ಕೂಡಿರುವ ಈ ಶಿಲ್ಪ ದಾಖಲೆಯ ಶಿಲ್ಪವಾಗಿ ಕಂಗೊಳಿಸಿದೆ.

"ಅಮೃತ ಶಿಲೆಯ ಈ ಬೃಹತ್ ಶಿಲ್ಪ 'ಕರುಣೆ' (ಅನುಕಂಪ) ಎಂಬುದು ರೋಮನಗರದ ಸೇಂಟ್ ಪೀಟರ್ಸ ಕಥೆಡ್ರಿಲಿನಲ್ಲಿದೆ. ಮೇರಿ ತನ್ನ ಮಗುವನ್ನು ತೊಡೆಯ ಮೇಲಿರಿಸಿಕೊಂಡ ಈ ಅನುಪಮ ಶಿಲ್ಪದಲ್ಲಿ ಆಕೆ ತನ್ನ ಪ್ರಾಯಕ್ಕಿಂತ ಚಿಕ್ಕವನಿತೆಯಾಗಿ ಕಾಣುತ್ತಾಳೆ. ಅವಳ ತೊಡೆಯ ಮೇಲೆ ವಿರಮಿಸಿರುವ ಯೇಸು ಮೃತನಾಗಿದ್ದರೂ ಅವನ ದೇಹ ಸತ್ತಿಲ್ಲ. ಅದರಲ್ಲಿ ಇನ್ನೂ ರಕ್ತಸಂಚಾರವಿದೆ. ಆತ ತಾಯಿಯ ತೊಡೆಯ ಮೇಲೆ ನಿದ್ರಿಸುತ್ತಿದ್ದಾನೆನಿಸುವಂತಿದೆ. ಇಲ್ಲಿ ಕನ್ಯೆ ಮೇರಿಯ ಚಿರಪಾವಿತ್ರ್ಯವನ್ನು ಶಿಲ್ಪಿ ಅವಳ ಭಂಗಿಯಲ್ಲಿಯೂ, ಮುಖದಲ್ಲಿಯೂ ತೋರಿಸಿದ್ದಾನಲ್ಲದೆ ಅವಳು ಮಗನ ಸಲುವಾಗಿ ಪಡುತ್ತಿರುವ ಯಾತನೆಯನ್ನು ಚಾಚಿದ ಒಂದು ಹಸ್ತದಲ್ಲಿ ಬಿಂಬಿಸಿದ್ದಾನೆ."[7] ಶರೀರ ರಚನಾಶಾಸ್ತ್ರದ (ಅನಾಟಮಿಯ) ಜ್ಞಾನವಿರುವ ಯಾರಿಗಾದರೂ ಇದು ತಾಯಿ ಮಗನ ಶಿಲ್ಪವೆಂದು ಅನಿಸುವುದಿಲ್ಲ. ಇಲ್ಲಿ ತಾಯಿ ಹಾಗೂ ಮಗನ ವಯಸ್ಸಿನ ಕಲ್ಪನೆ ಮಾಡಿಕೊಂಡರೆ ಮಗನಿಗಿಂತ ತಾಯಿಯೇ ಚಿಕ್ಕವಳಂತೆ ಕಾಣಿಸುತ್ತಾಳೆ. ಈ ಅಸಮತೋಲನದಿಂದಾಗಿ ಪಿಯೇಟಾ ಶಿಲ್ಪ ಕಳಾಹೀನವಾಗಿ ಕಂಡುಬರುತ್ತದೆ. ಈತ ದೊಡ್ಡ ಕಲಾವಿದನೆನ್ನುವ ಅಗ್ಗಳಿಕೆಯಲ್ಲಿ ಕಲಾವಿಮರ್ಶಕರು ಈ ಕೊರತೆಯನ್ನು ತೋಲಿಸಿಕೊಂಡು ಹೋಗಿರಲಿಕ್ಕೂ ಸಾಧ್ಯಗಳಿವೆ. 'ಪಿಯೇಟಾ' ಶಿಲ್ಪದ ಬಗೆಗಿನ ಹಿಂದಿನ ಸಾಹಿತ್ಯವನ್ನು ತಿಳಿದಾಗ, ಮೇಲಾಗಿ ಶಿಲ್ಪದ ನಯ–ನಾಜೂಕತೆಗಳಿಂದ ಈ ಅಸಮತೋಲನದ ಪರಿಣಾಮ ಹಿಂದೆ ಸರಿದು ಕಲಾತ್ಮಕತೆಯ ವಿನ್ಯಾಸದಿಂದ ಆಕರ್ಷಣೀಯವೆನಿಸುತ್ತದೆ. ವಿಮರ್ಶಕರು ಮೈಕೆಲ್

---

[7] ಡಾ. ಶಿವರಾಮಕಾರಂತ 'ಕಲಾಪ್ರಪಂಚ' ಪುಟ 281.

ಎಂಜಿಲೊನ ಕಲಾತ್ಮಕತೆಯನ್ನು, ಅಭೂತಪೂರ್ವ ರಮ್ಯತೆಯನ್ನು ಶಿಲ್ಪದ ಕೆತ್ತುವಿಕೆಯಲ್ಲಿ ಕಂಡುಬರುವ ಅಸಮಾನ್ಯವಾದ ನೈಪುಣ್ಯತೆಯನ್ನು ಸ್ಪಷ್ಟವಾಗಿ ಇಲ್ಲಿ ಗುರುತಿಸಿರುತ್ತಾರೆ. ಒಟ್ಟಾರೆ ಮಾತೃವಾತ್ಸಲ್ಯದ ದುಃಖ, ಅನುಕಂಪ ಇಲ್ಲಿ ಧ್ವನಿತವಾಗುತ್ತದೆಯೆಂಬುದರಲ್ಲಿ ಯಾವ ಸಂದೇಹವೂ ಇಲ್ಲ. He was working on this 'pieta' within a few days of his death in his 90th year, on 18 February 1564.[8] ಬಹುಶಃ ಮೈಕೆಲ್ ಎಂಜಿಲೊನ ಕೊನೆಯ ಪ್ರಖ್ಯಾತ ಶಿಲ್ಪ 'ಪಿಯೇಟಾ' ಆಗಿರಬೇಕು ಎನಿಸುತ್ತದೆ.

ಮೈಕೆಲ್ ಎಂಜಿಲೊನ ಅನೇಕ ಉತ್ತಮ ಶಿಲ್ಪಗಳಲ್ಲಿ ಸ್ಮಾರಕ ಶಿಲ್ಪಗಳಿಗೂ ಒಂದು ವಿಶಿಷ್ಟ ಸ್ಥಾನವಿದೆ. ಫ್ಲಾರೆನ್ಸಿನ ಲೊರೆಂಜೊ ಮತ್ತು ಗ್ವಿಲಿಯಾನೊ ಶ್ರೀಮಂತರ ಸ್ಮಾರಕಗಳಲ್ಲಿಯ ಲೊರೆಂಜೊದ ಮೆಡಿಸಿ ಅರಸು ಕುಳಿತುಕೊಂಡಿರುವ ಶಿಲ್ಪ, ಅಡಿಯಾಳುಗಳ ಮೋಸೆಸ್ ಶಿಲ್ಪಗಳು ಕೂಡ ಅಷ್ಟೇ ಎತ್ತರದ ನಿಲುವಿನ ಮಾದರಿಗೆ ಸೇರುತ್ತವೆ ಎಂಬುದು ಗಮನಾರ್ಹವಾಗಿದೆ. "The development of the baraige was heralded by Michelangelo, who, with the Biblioteca Laurenziana (Florence) the statue of Moses (Rome Pietro in Vicoli) and the dome of St. Peter's created a new vision of plastic space articulated and set in motion by alternating volumes and voids parallel to the counter Reformation, the new style monumentally affirmed the renovated life and authority of the Church."[9] ಹೀಗೆ ಚರ್ಚುಗಳಲ್ಲಿ ಹಾಗೂ ಇನ್ನಿತರ ಪ್ರಮುಖ ಸ್ಥಳಗಳಲ್ಲೆಲ್ಲ ಈತನ ಶಿಲ್ಪಕಲಾಕೃತಿಗಳು ಕಂಗೊಳಿಸಿವೆ.

ಮೈಕೆಲ್ ಎಂಜಿಲೊನ ಚಿತ್ರಗಳು

ಈತನು 1508ರಲ್ಲಿ ಪೋಪ್ ಗುರುವಿನಿಂದ ಉತ್ತೇಜಿತನಾಗಿ ಆದೇಶ ಪಡೆದು ವ್ಯಾಟಿಕನ್ ಖಾಸಗಿ ನಿವಾಸದಲ್ಲಿ (ಸಿಸ್ಟೈನ್ ಚ್ಯಾಪಲ್) ಚಾವಣಿಯ ಒಳಮೈಯಲ್ಲಿ ಸೃಷ್ಟಿಯ ಬಗ್ಗೆ ಹಲವಾರು ವಿಷಯದ ವರ್ಣಚಿತ್ರಗಳನ್ನು ರಚಿಸಿದ್ದಾನೆ. ಈ ಸಿಸ್ಟೈನ್ ಚ್ಯಾಪಲ್‌ನ ಇಗರ್ಜಿಯನ್ನು ಹಲವಾರು ರೀತಿಯಲ್ಲಿ ಅಂಕಣಗಳಾಗಿ ವಿಂಗಡಿಸಿಕೊಂಡು ಕ್ರಿಸ್ತ ಧರ್ಮದ ಹಿನ್ನೆಲೆಯಲ್ಲಿ ವೈವಿಧ್ಯಪೂರ್ಣವಾದ ದೃಶ್ಯಗಳನ್ನು ಕಲಾತ್ಮಕವಾಗಿ ರಚನೆ ಗೈದಿದ್ದಾನೆ. ಇಲ್ಲಿರುವ ಚಿತ್ರಗಳು ಶಿಲ್ಪಗಳೇನೋ, ಶಿಲ್ಪಗಳೇ ಚಿತ್ರಗಳೇನೋ ಎಂಬ ಭ್ರಮೆ ನೋಡುವವನಲ್ಲಿ ಉಂಟಾಗುತ್ತದೆ. ಉದಾಹರಣೆಗಾಗಿ;

---

[8] Peter and Linda Murray, "A Dictionary of Art and Artists" page 210.

[9] Encyclopaedia of World Art, Vol. VIII, 1963, page. 505.

“ಆದಮನ ಸೃಷ್ಟಿಯು ಕಥಾಭಾಗವೆನ್ನಿ, ದೇವರು ಆದಮ್‌ನನ್ನು ಸೃಷ್ಟಿಸಿದ್ದಾನೆ. ಬಲಿಷ್ಠ ದೇಹಿಯಾದ ಮುಗ್ಧಮನಸ್ಸಿನ ಆದಮ್‌ನ ಬೆರಳನ್ನು ಗಗನಸಂಚಾರಿಯಾದ ಆ ದೇವರು ತನ್ನೊಂದು ಬೆರಳಿನಿಂದ ಸ್ಪರ್ಶಿಸುತ್ತಿದ್ದಾನೆ. ಆ ದೇವರು ಇನ್ನೊಂದು ತೋಳಿನ ಆಸರೆಯಲ್ಲಿ ನಾಳೆ ಅವನ ಸಲುವಾಗಿ ಹುಟ್ಟಬೇಕಾದ ‘ಈವ್’ ಕಾಣಿಸುತ್ತಾಳೆ. ಆದಮ್‌ನ ದೃಷ್ಟಿದೇವರ ಕಡೆಗಿರುವಂತೆಯೇ ತನ್ನ ಭಾವೀ ಪ್ರೇಯಸಿಯ ಕಡೆಗೂ ಹರಿದಂತೆ ಚಿತ್ರಿತವಾಗಿದೆ. ಇದೇ ರೀತಿ ಈಡನ್ ಉದ್ಯಾನದಿಂದ ಪತಿತನಾದ ಆದಮ್ ಮತ್ತು ‘ಈವ್’ರನ್ನು ಜೋಡಿಸುವ ಚಿತ್ರವಿದೆ. ಈ ಚಿತ್ರಗಳಲ್ಲೆಲ್ಲಾ ಅಂಗ ವಿನ್ಯಾಸಗಳನ್ನು ಮಾನವ ಕಾರ್ಯಗಳನ್ನು ಶಕ್ತಿಯುತವಾಗಿ ಸುಂದರವಾಗಿ ಚಿತ್ರಿಸಿದ ಅವನ ಬಗೆಯನ್ನು ಮುಂದೆ ಯಾರಲ್ಲಿಯೂ ನಾವು ಕಾಣುವುದಿಲ್ಲ.[10] ಅಲ್ಲದೆ ಜೂಲಿಯಸ್‌ನ ನಂತರ ಬಂದ ಪೀಠಾಧಿಕಾರಿ ಎರಡನೆಯ ಪೋಪನ ಒತ್ತಾಯಕ್ಕಾಗಿ ಒಂದು 1534ರಲ್ಲಿ ‘ಲಾಸ್ಟ ಜಡ್ಜಮೆಂಟ’ ಎಂಬ ಮಾನವತೆಯ ಕೃತಕೃತ್ಯಗಳನ್ನು ಕುರಿತಾಗಿ ಚಿತ್ರಿತಗೊಂಡಿರುವ ಕ್ರೈಸ್ತನ ಅಂತಿಮ ತೀರ್ಪು ಜಗತ್‌ವಿಖ್ಯಾತಿಯನ್ನು ಪಡೆದ ಶ್ರೇಷ್ಠ ಚಿತ್ರವಾಗಿದೆ. ಈ ‘ಅಂತಿಮ ತೀರ್ಪು’ ಚಿತ್ರ ಸಿಸ್ಟೈನ್ ಚ್ಯಾಪಲ್‌ದ ಕಡೆಯ ಗೋಡೆಯಲ್ಲಿ ರಚನೆಗೊಂಡಿದೆ. ತನ್ನ ಇಳಿವಯಸ್ಸಿನಲ್ಲಿ ರಚಿಸಿದ ಚಿತ್ರಗಳು ಸಂತ್‌ಪೀಟರ್‌ನ ಉತ್ಕ್ರಮಣ, ಸಂತಪಾಲನ ಮನಪರಿವರ್ತನ, ಹೀಗೆ ಹಲವಾರು ಚಿತ್ರಗಳನ್ನು ಅಲ್ಲದೆ ರೋಮಿನ ಸೇಂಟ್‌ಪೀಟರ್ ಬೆಸಿಲಿಕಾದ ವಾಸ್ತುವಿನ್ಯಾಸವನ್ನು ಸೃಷ್ಟಿಸಿದ್ದಾನೆ. ಕ್ರೈಸ್ತಧರ್ಮಗಳಿಗನುಸಾರವಾಗಿ ಹಗಲು ರಾತ್ರಿಗಳು, ಸೂರ್ಯ, ಚಂದ್ರ, ನಕ್ಷತ್ರಗಳು ನೀರು, ಮಾನವ ರಾತ್ರಿಗಳು, ಪ್ರಳಯ, ಕ್ರೈಸ್ತನ ಆಗಮನದ ಮುನ್ಸೂಚನೆ ಮುಂತಾದ ವಿಸ್ತಾರವಾದ ಸೃಷ್ಟಿ ಪುರಾಣವನ್ನು ವರ್ಣಗಳಲ್ಲಿ ಚಿತ್ರಿಸಿದ ಮೈಕೆಲ್ ಎಂಜಿಲೊನಿಗೆ ಜಗತ್ ವಿಖ್ಯಾತವಾಗಿರುವ ಈ ವರ್ಣಚಿತ್ರಸಮೂಹವನ್ನು ರೂಪಿಸಲು ನಾಲ್ಕು ವರ್ಷ ಹಿಡಿಯಿತಂತೆ. ಮೈಕೆಲ್ ಎಂಜಿಲೊನ ಅಭೂತಪೂರ್ವ ಕಲಾಸಿದ್ಧಿಯಾಗಿರುವಂತೆ ಸಿಸ್ಟೈನ್ ಚ್ಯಾಪಲ್ ಚಿತ್ರಸಮೂಹ ಆತನ ಆಧ್ಯಾತ್ಮಿಕ ಪರಿಪಕ್ವತೆಯು ಡಾಂಟೆಯಂತಹ ಕವಿಗಳ ಹಾಗೂ ಪ್ಲೇಟೋ ಮುಂತಾದ ತಾತ್ವಿಕರ ವಾಙ್ಮಯವನ್ನು ಆತ ಮೈಗೂಡಿಸಿಕೊಂಡಿದುದಕ್ಕೆ ಸಾಕ್ಷಿಯಾಗಿದೆ.”[11] ಮೈಕೆಲ್ ಎಂಜಿಲೊನ ಚಿತ್ರಗಳಲ್ಲಿ ಅವು ಚಿತ್ರವೇ ಆಗಿರಲಿ ಶಿಲ್ಪವೇ ಆಗಿರಲಿ ಜೀವಕಳೆಯನ್ನು ಕಾಣಬಹುದು. ತನ್ನ ಜೀವನದ ಸುಖದುಃಖಗಳ ಅನುಭವಗಳನ್ನು ಮೈಕೆಲ್ ಎಂಜಿಲೊ ತಾನು ರಚಿಸಿದ ವ್ಯಕ್ತಿಗಳಲ್ಲಿ ತುಂಬಿದ್ದಾನೇನೋ ಎನಿಸುವಷ್ಟು ಸಹಜ ಸುಂದರ ಭಾವ, ಅವುಗಳಲ್ಲಿ ಮೂಡಿದ ಭಾವಭಂಗಿ ಎರಡರಲ್ಲೂ ಅವು ಅದ್ವಿತೀಯ, ಕಲಾ

10 ಡಾ. ಶಿವರಾಮಕಾರಂತ, ‘ಕಲಾಪ್ರಪಂಚ’, ಪುಟ 281.

11 ಎಸ್. ಆರ್. ರಾಮಸ್ವಾಮಿ, ‘ಮೈಕೆಲ್ ಎಂಜಿಲೊ’. ಸುಧಾ ವಾರಪತ್ರಿಕೆ. 22 ಜೂನ 1975, ಪುಟ 36.

ಪ್ರಪಂಚಕ್ಕೆ ಅವು ಅಮೂಲ್ಯ ಕಾಣಿಕೆಗಳು.[12] ಮೈಕೆಲ್ ಎಂಜಿಲೊನಿಗೆ ಪರಂಪರಾಗತವಾದ ಶಾಸ್ತ್ರೀಯ ಅಧ್ಯಯನದ ಕೂಡ ಆಧುನಿಕ ಕಲೆಯ ಜ್ಞಾನವೂ ಇತ್ತು. ಅವನ ಕೃತಿಯಲ್ಲಿ ಶರೀರ ರಚನಾಶಾಸ್ತ್ರದ (Anatomy), ಸ್ಪಷ್ಟವಾದ ರೇಖಾವಿನ್ಯಾಸ, ಶಾರೀರಿಕಭಂಗಿ, ಮುಂತಾದವುಗಳನ್ನು ಕಾಣಬಹುದಾಗಿದೆ. ಮನುಷ್ಯ ಶರೀರದ ಅಂಗ ರಚನೆಯ ಸೂಕ್ಷ್ಮ ಪರಿಜ್ಞಾನ ಸಂಪಾದಿಸಲು ಮೈಕೆಲ್ ಎಂಜಿಲೊ ಶವಗಳ ವಿಚ್ಛೇದನ ಮಾಡಬೇಕಾಯಿತು. ಆದರೆ ಪ್ಯಾಕಿಸ್ಸನ ಕಾನೂನಿನಂತೆ ದೇಹವಿಚ್ಛೇದನ, ದಂಡನಾರ್ಹ. ಆದ್ದರಿಂದ ಮೈಕೆಲ್ ಎಂಜಿಲೊ ನಡುರಾತ್ರಿಯಲ್ಲಿ ಕಳ್ಳತನದಲ್ಲಿ ಆಸ್ಪತ್ರೆಯ ಶವಸಂಗ್ರಹಾಲಕ್ಕೆ ಹೋಗಿ ಮೋಂಬತ್ತಿಯ ಮಿಣುಕು ದೀಪದಲ್ಲಿ ಅಭ್ಯಾಸ ನಡೆಸಿದ. ಈ ವ್ಯಾಸಂಗದಿಂದ ಮೈಕೆಲ್ ಎಂಜಿಲೊನಿಗಾದ ಲಾಭ ಅದ್ವಿತೀಯ ಶರೀರವಿನ್ಯಾಸ ಜ್ಞಾನ.[13] ಇದರ ಪರಿಣಾಮವಾಗಿ ಕೃತಿಗಳಲ್ಲಿ ಸ್ನಾಯುಗಳು, ಪರಿಪುಷ್ಟವಾಗಿ ಅವನ ನಗ್ನ ಚಿತ್ರಗಳಲ್ಲೆಲ್ಲಾ ಶರೀದ ಪ್ರಮಾಣಕ್ಕನುಗುಣವಾಗಿ ಸಧೃಡವಾದ ಅಂಗರಚನೆಗಳಿಂದ ಸ್ತ್ರೀ, ಪುರುಷ ಶಿಲ್ಪಗಳಾಗಲೀ, ಮಕ್ಕಳಾಗಲೀ ಇಲ್ಲವೆ ಚಿತ್ರಗಳಲ್ಲಿಯ ವ್ಯಕ್ತಿಗಳಾಗಲೀ ಪ್ರಾಣಿ ಪಶು, ಪಕ್ಷಿಗಳಾಗಲೀ ಜೀವಂತಿಕೆಯಿಂದ ಕಂಗೊಳಿಸುತ್ತವೆ.

" His thoughtful, passinate force of character was reflected in his work, with its love for contorted nudes to express emotion through the device of turning one part of the body in a different direction from another, and yet balancing the part of the body called contrupposto, in Italian, this and other aspects of his grandiose production made a profound impression on his contemporaries."[14] ಹೀಗೆ ಮೈಕೆಲ್ ಎಂಜಿಲೊನದು ತನ್ನ ಸಮಕಾಲೀನ ಕಲಾವಿದರಲ್ಲಿ ಎದ್ದು ಕಾಣುವ ಬಹುದೊಡ್ಡ ವ್ಯಕ್ತಿತ್ವವಾಗಿದೆ ಎಂದರೆ ಅತಿಶಯೋಕ್ತಿಯಾಗಲಾರದು. ಮೈಕೆಲ್ ಎಂಜಿಲೊ ಬದುಕಿರುವಾಗಲೇ ಅವನ ಕಲಾಸಾಧನೆಯನ್ನು ಕುರಿತು ಬರೆದ ವ್ಯಕ್ತಿ ' ವಸಾರಿ ' ಎಂಬ ಇತಿಹಾಸಕಾರ ಮೈಕಲ್ಎಂಜಿಲೊನನ್ನು ತೀರ ಸನಿಹದಿಂದ ಕಂಡು ಹೀಗೆ ಬರೆಯುತ್ತಾನೆ; " ಮೈಕಲ್‌ನು ಅತ್ಯಂತ ಬಡವನಂತೆ ಜೀವಿಸುತ್ತಾನೆ. ಒಂದು ತುಂಡು ಬ್ರೆಡ್ಡು, ಸ್ವಲ್ಪ ದ್ರಾಕ್ಷಾರಸ,

---

12 " ಜ್ಞಾನ ಗಂಗೋತ್ರಿ " (ಕಲೆ ಸಾಹಿತ್ಯ) ಸಂಪುಟ 5, ಪುಟ 498.

13 ಎಸ್. ಆರ್. ರಾಮಸ್ವಾಮಿ, ' ಮೈಕೆಲ್ ಎಂಜಿಲೊ ', " ಸುಧಾ " ವಾರಪತ್ರಿಕೆ, 22 ಜೂನ 1975, ಪುಟ 35.

14 Paul J. Sachs, " The Pocket Book of Great Drawings ", page 29.

ಇವನ್ನಷ್ಟು ಮಾತ್ರ ಸೇವಿಸುತ್ತಾನೆ, ಆತನಿಗೆ ನಿದ್ರೆ ಬೀಳುವದಿಲ್ಲ. ಆದುದರಿಂದ ರಾತ್ರಿಕೂಡ ಎದ್ದು ಕೆಲಸಮಾಡುತ್ತಾನೆ. ಆ ಸಮಯದಲ್ಲಿ ಮೇಣದ ಬತ್ತಿ ತಗಲಿಸಿದ ಕಾಗದದ ಟೋಪಿಯೊಂದನ್ನು ತಲೆಗೆ ಇಟ್ಟುಕೊಳ್ಳುತ್ತಾನೆ. ಅದರಿಂದ ಚಾಣವನ್ನು ಹಿಡಿದು ಶಿಲ್ಪ ಕೆತ್ತಲು ಆತನಿಗೆ ಎರಡೂ ಕೈಗಳು ಬಿಡುವಾಗಿರುತ್ತವೆ[15] ಎಂಬುದಾಗಿ ವಿವರಿಸಿದ್ದಾನೆ. ಇಲ್ಲಿ ಮೈಕೆಲ್ ಎಂಜಿಲೊನ ಕಲಾಸಿದ್ಧಿಯ ಹಿಂದಿನ ಅವನ ಪರಿಶ್ರಮದ ಚಿತ್ರ ನಮ್ಮ ಕಣ್ಮುಂದೆ ಬರುತ್ತದೆ. ಕಲೆಗಾಗಿಯೇ ಬದುಕಿದ, ಕಲೆಗಾಗಿಯೇ ತನ್ನನ್ನು ಅರ್ಪಿಸಿಕೊಂಡ ಸಾಧಕ." The turbulent spirit of Michelangelo expressed itself in an unceasing lifelong production of Great sculptures and paintings. But inspite of the vast force and violent movement expressed in his gigantic forms, he maintained the typical High Renaissance balance of power and control and he preserved his own quality of thoughtfulness.[16] ಮೈಕೆಲ್ ಎಂಜಿಲೊನ ವಾಸ್ತುವಿನ್ಯಾಸವಾಗಲೀ, ಚಿತ್ರಗಳಾಗಲೀ, ಶಿಲ್ಪಗಳಾಗಲೀ ಅವುಗಳಲ್ಲಿ ಜೀವಂತಿಕೆಯ ಲಕ್ಷಣಗಳನ್ನು ಕಾಣುವುದರ ಜೊತೆಗೆ ಚಲನಶೀಲವಾದ ವೇಗ, ಭವ್ಯತೆಯಿಂದ ಸಹೃದಯನನ್ನು ಚಿಂತನೆಯತ್ತ ಕರೆದೊಯ್ಯುತ್ತವೆ. ಮೈಕೆಲ್ ಎಂಜಿಲೊನನ್ನು ಬಾರೋಕ್ ಕಲೆಯ ಜನಕನೆಂದು ಕರೆಯುತ್ತಾರೆ.[17] (ಬಾರೋಕ ಕಲೆ ಇಟಲಿಯಲ್ಲಿ ಹದಿನಾರನೆಯ ಶತಮಾನದಲ್ಲಿ ಕಾಣಿಸಿಕೊಂಡ ಒಂದು ಕಲಾ ಚಳುವಳಿಯ ಕೊಡುಗೆ, ಇವರಲ್ಲಿ ಚಿತ್ರ, ಶಿಲ್ಪ, ವಾಸ್ತುಕಲೆ ಇವು ಮೂರರಲ್ಲಿಯೂ ಮೂಡಿದ ಹೊಸತನದ ರೂಪವಾಗಿದೆ.) ಹೀಗೆ ಯುಗಯುಗಗಳು ಕಳೆದಂತೆಲ್ಲ, ತಲೆಮಾರುಗಳು ಸರಿದಂತೆಲ್ಲ ಅವನ ಬಗ್ಗೆ ಅವನ ಕಲಾ ಸೃಷ್ಟಿಗಳ ಕುರಿತು ರಸಿಕರ, ಕಲಾವಿದರ, ವಿಮರ್ಶಕರ, ಸಹೃದಯರ ಕುತೂಹಲ ಹೆಚ್ಚುತ್ತಲಿದೆಯೇ ಹೊರತು ಕುಗ್ಗುತ್ತಿಲ್ಲ. ಅವಿವಾಹಿತನಾಗಿಯೇ ಅಮರನಾದ ಮೈಕೆಲ್ಎಂಜಿಲೊ ತನ್ನ ಬೆಲೆಯುಳ್ಳ ಕಲಾಕೃತಿಗಳಿಂದ ಇನ್ನೂ ಜೀವಂತನಾಗಿದ್ದಾನೆ. (-ಇಲ್ಲಿನ ಬರಹ ಮೈಕೆಲ್ಎಂಜಿಲೊನ ಬಗ್ಗೆ ತೀರ ಸ್ಥೂಲ ಪರಿಚಯ ಜಗತ್‌ಪ್ರಸಿದ್ಧ ಈ ಕಲಾಕಾರನ ಕುರಿತು ಬಂದ ಸಾಹಿತ್ಯ ಬೇಕಾದಷ್ಟಿದೆ. ಅವನ ಬಗ್ಗೆ ಹೇಳಿದುದಕ್ಕಿಂತ ಹೇಳದೆ ಇರುವ ಅಂಶಗಳು ಇನ್ನೂ ಇವೆ, ಎಂಬ ಪ್ರಜ್ಞೆ ನನಗಿದೆ ಎಂಬುದನ್ನು ವಿನಮ್ರವಾಗಿ ತಿಳಿಯಬಯಸುತ್ತೇನೆ.)

---

15. ಬಿ.ಪಿ. ಬಯರಿ, "ಕಲೆಗಾರರ ಕಲೆಗಳು", ಪುಟ 24.

16. Bernard Myers, "50 Great Artists", page 37.

17. Erwin O. Christensen, "The History of Western Art", page 224.

ಪುರುಷೋತ್ತಮ ಬಿಳಿಮಲೆ

ಸಿದ್ಧವೇಶ : ಒಂದು ಅಧ್ಯಯನ

ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ, ಪುತ್ತೂರು ಮತ್ತು ಬೆಳ್ತಂಗಡಿ ತಾಲೂಕುಗಳಲ್ಲಿ ವಾಸವಾಗುತ್ತಿರುವ ಗೌಡ ಜನಾಂಗದವರು ಸುಗ್ಗಿ ಹುಣ್ಣಿಮೆಯ ಸಂದರ್ಭದಲ್ಲಿ 'ಸಿದ್ಧವೇಶ' ಕುಣಿಯುತ್ತಾರೆ. ನಿಗದಿಪಡಿಸಿದ ದಿನ ಹಳ್ಳಿಯ ಹಿರಿಯ ಗೌಡನೊಬ್ಬನ ನೇತೃತ್ವದಲ್ಲಿ ಆಸಕ್ತ ಗೌಡ ಯುವಕರು ಊರಿನ ಭೂತನ ಚಾವಡಿಯಲ್ಲೋ, ಪ್ರತಿಷ್ಠಿತ ಗೌಡನೊಬ್ಬನ ಮನೆಯಂಗಳದಲ್ಲೋ ಒಟ್ಟು ಸೇರುತ್ತಾರೆ; ಸಿದ್ಧವೇಶ ಕುಣಿಯುವ ದಿನಗಳನ್ನು ನಿರ್ಧರಿಸುತ್ತಾರೆ. ಉತ್ಸಾಹಿಗಳಾದ ಆರು ಅಥವಾ ಏಳು ಗೌಡ ಯುವಕರು ಕುಣಿತಕ್ಕೆ ನಿಲ್ಲುತ್ತಾರೆ. ಅತ್ಯಂತ ಹಾಸ್ಯ ಪ್ರಜ್ಞೆ ಇರುವ ಒಬ್ಬಾತನು 'ಬ್ರಾಹ್ಮಣ'ನ ವೇಷ ಹಾಕಲು ಸಿದ್ಧನಾಗುತ್ತಾನೆ. ವೃದ್ಧರಾದವರಲ್ಲೊಬ್ಬ 'ದಾಸಯ್ಯ'ನ ವೇಷವನ್ನೂ ಅತ್ಯಂತ ಉತ್ಸಾಹಿಯೂ ಕ್ರಿಯಾಶೀಲನೂ ಆಗಿರುವಾತನು 'ಸನ್ಯಾಸಿ'ಯ ವೇಷ ಹಾಕಲೂ ತಯಾರಾಗುತ್ತಾನೆ. ಇದಿಷ್ಟೂ ಪಾತ್ರಗಳು ಸಿದ್ಧವೇಶಕ್ಕೆ ಅಗತ್ಯವಾದುವುಗಳು.

ಸಿದ್ಧವೇಶ ಕುಣಿವ ಯುವಕರು, ಕುಣಿತದ ದಿನ ಬಂದಾಗ ತಲೆಗೆ ಕೆಂಪು ಬಣ್ಣದ ಮುಂಡಾಸನ್ನು ಕಟ್ಟಿ, ಅದರ ಒಂದು ತುದಿಯನ್ನು ಬಲಗಿವಿಯ ಮೇಲಿನಿಂದ ಭುಜಕ್ಕೆ ಇಳಿಬಿಡುವರು. ತುಂಬಾ ದೊಗಳೆ ಆಗಿರುವ ಅಂಗಿಯೊಂದನ್ನು ಧರಿಸಿ, ಸೊಂಟಕ್ಕೆ ಕಚ್ಚೆಹಾಕುತ್ತಾರೆ. ಅಂಗಿಯ ಮೇಲಿನಿಂದ ಸೊಂಟಕ್ಕೆ ಗಟ್ಟಿಯಾಗಿ 'ದಟ್ಟಿ' ಯೊಂದನ್ನು ಕಟ್ಟುತ್ತಾರೆ. ಈ 'ದಟ್ಟಿ' ದೇಹಕ್ಕೆ ಬಿಗುವನ್ನು ಒದಗಿಸಿದರೆ, ಬಲಗಡೆಗೆ ಇಳಿಬಿಟ್ಟ ಮುಂಡಾಸು ಕುಣಿತಕ್ಕೆ ಸೊಗಸಾದ ಲಯವನ್ನು ಸಿದ್ಧಿಸಿಕೊಡುತ್ತದೆ. ದಾಸಯ್ಯನು ಕೆಂಪು ಶಾಲು ಹೊದ್ದು, ಕೈಯ್ಯಲ್ಲಿ ಶಂಖ ಮತ್ತು ಜಾಗಟೆಯನ್ನು ಹಿಡಿಯುತ್ತಾನೆ; ಬಿಳಿ ಪಂಚೆ ತಂದು ಕಚ್ಚೆ ಹಾಕಿಕೊಳ್ಳುತ್ತಾನೆ. ಬ್ರಾಹ್ಮಣ ವೇಷಧಾರಿ ಕೂಡಾ ಬಿಳಿ ಪಂಚೆಯಲ್ಲಿ ಕಚ್ಚೆಹಾಕಿ, ತಲೆಗೆ ಜುಟ್ಟು ಕಟ್ಟಿ, ಗೋಣಿ ನಾರಿನ ಹಗ್ಗದಿಂದ ದೊಡ್ಡದಾದ ಜನಿವಾರಮಾಡಿ ಧರಿಸಿಕೊಳ್ಳುತ್ತಾನೆ. ಆ ಜನಿವಾರಕ್ಕೆ ಬಲವಾದ ಗಂಟೊಂದನ್ನು ಹಾಕಿರುತ್ತಾನೆ. ಮೈಗೆ ಗಂಧ, ಹಣೆಗೆ


ನಾಮ, ಹಾಕಿ ಬ್ರಾಹ್ಮಣ ವೇಷಧಾರಿಯು ತಯಾರಾಗುತ್ತಾನೆ. ಇದರಲ್ಲಿ ಅತಿ ಮುಖ್ಯವಾದ ವೇಷ ಸನ್ಯಾಸಿಯದ್ದು. ಒಣಗಿದ ಬಾಳೆ ಎಲೆಗಳನ್ನು ತಂದು ಇಡೀ ದೇಹಕ್ಕೆ ಕಟ್ಟಿ, ದೇಹ ಮರೆಯಾಗುವಂತೆ ಮಾಡುತ್ತಾರೆ. ಕಂಗಿನ ಹಾಳೆಯನ್ನು ಶಂಕುವಿನಾಕಾರದಲ್ಲಿ ಮಡಿಸಿ, ತಲೆಗೆ ಜೋರಲಾಗಿ ಇಟ್ಟುಕೊಂಡು, ತಲೆಯನ್ನು ಮರೆಸುತ್ತಾರೆ. ಹಸಿ ಬಾಳೆ ಎಲೆಯನ್ನು ತಂದು ಗರಗಸದಂತೆ ಕತ್ತರಿಸಿ ಮುಖಕ್ಕೆ ಅಡ್ಡವಾಗಿ ಕಟ್ಟಿ, ಇಡೀ ಮುಖವನ್ನು ಮರೆಮಾಚುತ್ತಾರೆ. ತೆಳ್ಳಗಿನ ನಾಲ್ಕಾರು ಬೆತ್ತಗಳನ್ನು ಜೋಡಿಸಿ ಹಗ್ಗದಿಂದ ಸುತ್ತಿ ಸೊಂಟದ ಮುಂಭಾಗದಲ್ಲಿ ಕಟ್ಟಿ, ನಿಗುರಿ ನಿಂತ ಶಿಶ್ನವನ್ನು ಸೃಷ್ಟಿಸುತ್ತಾರೆ. ಊರೊಳಗೆ ಓಡಾಡುವಾಗ ಪೋಕರಿಗಳು ಶಿಶ್ನಕ್ಕೆ ಕೈ ಹಾಕುವರೆಂಬ ಕಾರಣಕ್ಕೆ ಶಿಶ್ನದ ತುದಿಗೆ ಮುಳ್ಳನ್ನು ಕಟ್ಟುತ್ತಾರೆ. ಅನಂತರ ಸನ್ಯಾಸಿಯ ಕೈಗೆ ಒಂದು ದೊಣ್ಣೆ ಕೊಡುತ್ತಾರೆ. ಕೆಲವು ಬಾರಿ ಭಸ್ಮದ ಪಾತ್ರೆಯನ್ನು ಸನ್ಯಾಸಿ ಹಿಡಿಯುತ್ತಾನೆ. ಇವಿಷ್ಟು ವೇಷಭೂಷಣಗಳು, ಅತ್ಯಂತ ಸರಳವಾದುವು.

ಎಲ್ಲ ಸಿದ್ಧವಾದ ಮೇಲೆ ಈ ಸನ್ಯಾಸಿಯನ್ನು ಸಾಲಿನ ಮಧ್ಯದಲ್ಲಿ ನಿಲ್ಲಿಸಿಕೊಂಡು, ರಾತ್ರಿಯಾಗುತ್ತಲೇ, ಊರು ಸುತ್ತಲು ಹೊರಡುತ್ತಾರೆ. ಎಲ್ಲರೂ 'ಡಿಂಬಿಸಾಲೆ' ಎಂಬ ಸೊಲ್ಲನ್ನು ಹೇಳುತ್ತಾ ನಡೆಯುತ್ತಾರೆ. ತಾವು ಕುಣಿತ ಆರಂಭಮಾಡಲಿರುವ ಮನೆ ಹತ್ತಿರ ಬಂದಾಗ, ಸನ್ಯಾಸಿಯನ್ನು ಮನೆಯ ಪಕ್ಕದಲ್ಲಿ ಅಡಗಲು ಹೇಳುತ್ತಾರೆ. ಉಳಿದವರೆಲ್ಲ ಅಂಗಳಕ್ಕೆ ಹೋಗಿ, ಶಬ್ದ ಮಾಡಿ, ಮನೆಯವರನ್ನು ಎಬ್ಬಿಸುತ್ತಾರೆ. ಬೆಳಕಿಗಾಗಿ ದೀಪವೊಂದನ್ನು ಅಂಗಳದ ಮಧ್ಯದಲ್ಲಿ ಇಟ್ಟು ಕುಣಿಯುವ ಮಂದಿ, ವೃತ್ತಾಕಾರದಲ್ಲಿ ಅದರ ಸುತ್ತ ನಿಲ್ಲುವರು. ಒಬ್ಬಾತ ಸೊಲ್ಲನ್ನು ಆರಂಭಿಸುತ್ತಾನೆ.

ಸಿದ್ದಲಿಂಗ ಮುದ್ದುಲಿಂಗ । ಸಿದ್ದವೇಸೋ ॥
ನಾವು ಯಾವೂರು ಯಾವ ತಳ । ಸಿದ್ದವೇಸೋ ॥
ನಾವು ಕಾಶೀಯ ತಳದವ್ರು । ಸಿದ್ದವೇಸೋ ॥

ಎಂದು ಹಾಡುವಾಗ, ಕುಣಿಯುವ ಗುಂಪು 'ಸಿದ್ದವೇಸೊ' ಎಂಬ ಸೊಲ್ಲನ್ನು ಪುನರಾವರ್ತಿಸುತ್ತ 4 ಹೆಜ್ಜೆಗಳಲ್ಲಿ ವೃತ್ತಾಕಾರವಾಗಿ ಸುತ್ತುತ್ತಿರುತ್ತಾರೆ. ಪ್ರತಿ ನಾಲ್ಕನೇ ಹೆಜ್ಜೆಗೆ ಕುಣಿತದವರು ವೃತ್ತದ ಮಧ್ಯಕ್ಕೆ ಚಾಚಿಕೊಂಡು ಕೇಂದ್ರೀಕೃತವಾಗುತ್ತಾರೆ. ಅದೇ ಸಂದರ್ಭದಲ್ಲಿ ಎರಡೂ ಕೈಗಳನ್ನು ಬಲವಾಗಿ ತಾಡಿಸಿ ಚಪ್ಪಾಳೆಯ ಸ್ವರ ಹೊರಡಿಸುತ್ತಾರೆ. ಹೀಗೆ ಹಾಡು ಕುಣಿತ ಮುಂದುವರಿಯುತ್ತಿದ್ದಾಗ, 22ನೇ ಸೊಲ್ಲಿನಲ್ಲಿ ನಾವು 'ಶೃಂಗೇರಿ ಮಠದಿಂದ' ಎಂಬ ಸಾಲು ಬರುತ್ತದೆ. ಇದಕ್ಕೆ ಗುಂಪು 'ಸಿದ್ದವೇಸೋ' ಎಂಬ ಸೊಲ್ಲನ್ನು ಸೇರಿಸುತ್ತಿದ್ದಂತೆ ಅದುವರೆಗೆ ಅಡಗಿ ಕುಳಿತಿದ್ದ ಸನ್ಯಾಸಿ ಥಟ್ಟನೆ ಅಂಗಳದಲ್ಲಿ ಪ್ರತ್ಯಕ್ಷವಾಗುತ್ತಾನೆ. ದೊಣ್ಣೆಯನ್ನು ನೆಲಕ್ಕೆ ಊರುತ್ತಾ ಕುಂಟನಂತೆ ಹೆಜ್ಜೆ ಹಾಕಿ, ಲಂಘಿಸಿಕೊಂಡು ಬರುವ ಸನ್ಯಾಸಿಯು ಕುಣಿತದವರ ವೃತ್ತವನ್ನು ಭೇದಿಸಿ, ಒಳಕ್ಕೆ ಸರಿಯುತ್ತಾನೆ. ಅದೇ ಸಂದರ್ಭದಲ್ಲಿ

ಬ್ರಾಹ್ಮಣನು ಅಂಗಳದ ಬಲಬದಿಗೂ, ದಾಸಯ್ಯನು ಅಂಗಳದ ಎಡಬದಿಗೂ ಬಂದು ಕುಳಿತುಕೊಳ್ಳುತ್ತಾರೆ. ಈಗ ಏರ್ಪಡುವ ರಂಗ ಈ ಕೆಳಗಿನಂತಿದೆ:—



ಸಿದ್ಧವೇಶದ ರಂಗವ್ಯವಸ್ಥೆ

ಇಡೀ ಅಂಗಳ ಇಲ್ಲಿನ ಕಲಾವಿದರಿಂದ ತುಂಬುತ್ತದೆ. ಹಾಗೆ ತುಂಬಿದಾಗಲೂ ತುಂಬ Balance ಆದಿಯೇ ಕುಣಿತ ಮುಂದುವರಿಯುತ್ತದೆ.

ಸನ್ಯಾಸಿ ವೃತ್ತದೊಳಗೆ ಪ್ರವೇಶಿಸುತ್ತಿದ್ದಂತೆ ಕುಣಿತದವರು ತಮ್ಮ ಗಾತ್ರವನ್ನು ಕುಗ್ಗಿಸಿ, ದೇಹವನ್ನು ಬಗ್ಗಿಸಿ, ಕುಣಿತದ ವೇಗವನ್ನು ಹೆಚ್ಚಿಸುತ್ತಾರೆ. ಅದೇ ಪ್ರಮಾಣದಲ್ಲಿ ತನ್ನ ವೇಗವನ್ನು ಹೆಚ್ಚಿಸಿಕೊಂಡ ಸನ್ಯಾಸಿಯು ವೃತ್ತದೊಳಗೇ ಕುಂಟುತ್ತಾ ಅಹಹಾ... ಕುಹೂ....ಎಂದು ಅಸಂಬದ್ಧ ಪ್ರಲಾಪ ಮಾಡುತ್ತಾ ಅಡ್ಡಾದಿಡ್ಡಿಯಾಗಿ ಸುತ್ತುತ್ತಿರುತ್ತಾನೆ. ಕುಣಿತದವರ ಹಾಡಿನ 43 ನೇ ಸೊಲ್ಲಿನಲ್ಲಿ ಬರುವ "ನಮ್ಮ ಕೈಯಸ್ನಾದ್ರೂ ತುಂಬಿಕಳುಹಿ" ಎಂಬಲ್ಲಿಗೆ ಮುಕ್ತಾಯವಾಗುತ್ತದೆ. ಕುಣಿತವೂ ನಿಲ್ಲುತ್ತದೆ. ಕುಣಿಯುವ ಮಂದಿ ಗುಂಪಾಗಿ ನಿಂತು ಕೊನೆಗೆ ಅಂಗಳದ ಬದಿಗೆ ಸರಿದು ಮುಖ್ಯ ಸ್ಥಳವನ್ನು ಸನ್ಯಾಸಿಗೆ ಬಿಟ್ಟುಕೊಡುತ್ತಾರೆ.

ಇಷ್ಟರಲ್ಲಿ ದಾಸಯ್ಯನು ಶಂಖವನ್ನು ಊದುತ್ತ, ಜಾಗಟೆ ಬಡಿಯುತ್ತ ಸದ್ದು ಮಾಡುತ್ತಿರುತ್ತಾನೆ. ಬ್ರಾಹ್ಮಣನು ಜನಿವಾರದ ಗಂಟನ್ನು ಹಿಡಿದುಕೊಂಡು, ಅದನ್ನು ನೀವುತ್ತಾ, ಪೂಜೆ ಮಾಡುವವನಂತೆ ನಟಿಸುತ್ತಾನೆ. ಬಾಯಲ್ಲಿ ಮಂತ್ರ ಹೇಳುವವನ ರೀತಿಯಲ್ಲಿ ವಟಗುಟ್ಟುತ್ತಿರುತ್ತಾನೆ. ಇವರಿಬ್ಬರ ಮಧ್ಯೆ ನಿಲ್ಲುವ

ಸನ್ಯಾಸಿಯು ಬ್ರಾಹ್ಮಣ ಮತ್ತು ದಾಸಯ್ಯನ ಕಡೆ ತಿರುಗಿ ಅವರಿಬ್ಬರನ್ನು ಲೇವಡಿ ಮಾಡಲು ಆರಂಭಿಸುತ್ತಾನೆ. ಬ್ರಾಹ್ಮಣನ ಮಂತ್ರವನ್ನು ತಾನೂ ಅನುಕರಿಸುವ, ದಾಸಯ್ಯನ ಶಂಖದ ಧ್ವನಿಯನ್ನು ತನ್ನ ಕಂಠದಿಂದ ಹೊರಡಿಸುವ ಸನ್ಯಾಸಿ ಅವರನ್ನು ಅಣಕಿಸುವುದು ಸ್ಪಷ್ಟವಾಗಿದೆ. ಕೊನೆಗೆ ಬ್ರಾಹ್ಮಣ ಮತ್ತು ದಾಸಯ್ಯರನ್ನು ಅಂಗಳದ ಸುತ್ತ ಓಡಿಸುತ್ತಾನೆ. ನಿಗುರಿ ನಿಂತಂತಿದ್ದ ತನ್ನ ಶಿಶ್ನವನ್ನು ಅವರಿಬ್ಬರಿಗೂ ಮುಟ್ಟಿಸಲು ಯತ್ನಿಸುತ್ತಾ, ಅವರನ್ನು ಅವಮಾನಿಸುತ್ತಾನೆ. ಸ್ವಲ್ಪ ಹೊತ್ತು ಹೀಗೆ ನಡೆದ ಅನಂತರ ಬ್ರಾಹ್ಮಣ ಮತ್ತು ದಾಸಯ್ಯ ಅಂಗಳದ ಬದಿಗೆ ಸರಿದು ರಂಗ ದಿಂದ ಮರೆಯಾಗುತ್ತಾರೆ.

ಈಗ ಅಂಗಳದಲ್ಲಿ ಸನ್ಯಾಸಿ ಒಬ್ಬನೇ ಇರುತ್ತಾನೆ. ಆತ ತನ್ನ ಹಿಂದಿನ ಚೇಷ್ಟೆಗಳನ್ನೆಲ್ಲ ಪುನರಾವರ್ತಿಸುತ್ತಾನೆ. ಅಹಹಾ....ಉಹೂಹೂ.... ಎಂದು ಕೂಗುವುದು, ಕುಂಟುವುದು, ಬಾಯಿ ತೆರೆದು ಅರ್ಭಟಿಸುವುದು, ಅತ್ತಂತೆ ಮಾಡು ವುದು, ಭಿಕ್ಷೆ ಬೇಡುವುದು ಇತ್ಯಾದಿ ಅಭಿನಯಗಳನ್ನು ಮಾಡುತ್ತಾನೆ. ಶಿಶ್ನವನ್ನು ಕೈಯಲ್ಲಿ ಹಿಡಿದುಕೊಂಡು "ಎದ್ದು ನಿಂತಿದೆ.... ಸಾಟಿ ಇಲ್ಲ.... ಒಂದೇ ಕುತ್ತಿಗೆ ಒಂಬತ್ತು ಮಕ್ಕಳಾಗಬೇಕು" ಎಂದು ಹೇಳುತ್ತಾನೆ. ಮತ್ತೆ ಸ್ವಲ್ಪ ಕುಣಿದು "ಹೊಳೆ ಬದಿಗೆ ಹೋಗಬೇಕು.... ಲಕ್ಕಿ (ಶಿಶ್ನ) ಪೂಜೆ ಮಾಡಬೇಕು" ಎನ್ನುವನು. ಪ್ರೇಕ್ಷಕರಾಗಿರುವ ಮನೆ ಹೆಂಗಸರೆಲ್ಲ ನಾಚುವಂತೆ ಶಿಶ್ನವನ್ನು ಆಡಿಸುತ್ತಾನೆ. ಇಷ್ಟರಲ್ಲಿ ಅಂಗಳದಿಂದ ಮರೆಯಾಗಿದ್ದ ಬ್ರಾಹ್ಮಣ, ದಾಸಯ್ಯ ಮತ್ತು ಕುಣಿತದವರು ಅಂಗಳಕ್ಕೆ ಬರುತ್ತಾರೆ. ಇವರ ಕೆಲಸಗಳಿಂದ ಸಂಪ್ರೀತರಾದ ಮನೆಮಂದಿ ಏನನ್ನಾದರೂ (ಹೆಚ್ಚಾಗಿ ಭತ್ತ) ಕೊಟ್ಟರೆ ಅದನ್ನು ಬಗಲಿಗೇರಿಸಿಕೊಂಡು ಮುಂದಿನ ಮನೆಗೆ ನಡೆಯುತ್ತಾರೆ. ಹೀಗೆ ದಾರಿ ನಡೆಯುವಾಗ ಸಿದ್ಧವೇಶದ ಇನ್ನೊಂದು ತಂಡ ಎದುರಾಗಬಾರದು. ಎದುರಾದರೆ ಸಿದ್ಧರ ಬಗೆಗೆ, ಮಠಗಳ ಬಗೆಗೆ ಪ್ರಶ್ನೋತ್ತರಗಳಾ ಗುತ್ತವೆ. ಸರಿಯಾದ ಉತ್ತರಗಳು ಬಾರದಿದ್ದರೆ ಹೊಡೆದಾಟವಾಗುತ್ತದೆ. ಹಾಗಾಗಿ ಎರಡೂ ತಂಡಗಳು ಮುಖಾಮುಖಿಯಾಗುವುದನ್ನು ತಪ್ಪಿಸಿಕೊಳ್ಳುತ್ತವೆ. ಸುಗ್ಗಿ ಹುಣ್ಣಿಮೆಯ ದಿನದಂದು ಈ ಕುಣಿತ ನಿಲ್ಲುತ್ತದೆ. ಆ ದಿನ ತಂಡದವರೆಲ್ಲ ಒಟ್ಟು ಸೇರಿ ಮೊದಲು ಒಟ್ಟು ಸೇರಿದ ಜಾಗದಲ್ಲಿ 'ಪುರುಷರ ಪೂಜೆ' ಮಾಡುತ್ತಾರೆ. ಕೋಳಿ ಕೊಯ್ದು, ರೊಟ್ಟಿ, ಹೆಂಡ ಕೊಟ್ಟು, ತಾವೂ ಉಂಡೂ ಆ ದಿನವನ್ನು ಸಂಭ್ರಮದಿಂದ ಕಳೆಯುತ್ತಾರೆ.

ಇಲ್ಲಿನ ವಿವರಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಇಡೀ ಸಿದ್ಧವೇಶದಲ್ಲಿ 'ಸನ್ಯಾಸಿ' ಗೇ ಪ್ರಮುಖ ಸ್ಥಾನ ಸಂದಾಯವಾಗಿದೆ. ಈ ಸನ್ಯಾಸಿ ಸಿದ್ಧವೇಶ ಕುಣಿವ 'ಸಿದ್ಧರ' ಇಲ್ಲವೇ 'ಪುರುಷರ ಮಕ್ಕಳ' ವೃತ್ತವನ್ನು ಭೇದಿಸಿ ಒಳಹೊಗಬಲ್ಲ, ಆತನಿಗೆ ಸಿದ್ಧರೆಲ್ಲರೂ ತಲೆಬಾಗುತ್ತಾರೆ. ಬ್ರಾಹ್ಮಣ ಮತ್ತು ದಾಸಯ್ಯನನ್ನು ಅಂಗಳದಲ್ಲಿ 'ಓಡಾಡಿಸುವುದಲ್ಲದೆ ಅವರನ್ನು ಅವಮಾನಿಸುವ ಕೆಲಸವನ್ನು ಸನ್ಯಾಸಿ

ಮಾಡುತ್ತಾನೆ. ಅಂಗಳದಲ್ಲಿ ಬೇಕಾದಂತೆ ಕುಣಿಯುವ, ಮಾತನಾಡುವ, 'ಓಡಾಡುವ, ಕಿರುಚುವ, ಕುಂಟುವ ಅವಕಾಶ ಇರುವುದು ಸನ್ಯಾಸಿಗೆ ಮಾತ್ರ. ಅಂಗಳದ ಮೇಲೆ ಅವನ ಹಿಡಿತ ಪೂರ್ಣ ಪ್ರಮಾಣದ್ದು. ಇದು ಅಭ್ಯಾಸಯೋಗ್ಯ ವಿಚಾರವಾಗಿದೆ.

ಸಿದ್ಧವೇಶದ ಸನ್ಯಾಸಿಯ ಬಾಹ್ಯ ವಿವರಗಳು, ಚಲನವಲನಗಳು, ಮಾತು ಗಾರಿಕೆಯ ಶೈಲಿ ಮತ್ತು ಆ ಪಾತ್ರದ ಗುಣಧರ್ಮವನ್ನು ಪರೀಕ್ಷಿಸಿದರೆ, ಅದು ಮಧ್ಯ ಕಾಲೀನ ಕರ್ನಾಟಕದಲ್ಲಿ ಅತ್ಯಂತ ಜನಪ್ರಿಯವಾಗಿರುವ ಲಕುಲೀಶ ಪಾಶುಪತ ಸನ್ಯಾಸಿಗಳನ್ನೇ ಪೂರ್ತಿಯಾಗಿ ಹೋಲುತ್ತದೆ.[1] 'ಲಕುಲ' ಕ್ಕೆ 'ದೊಣ್ಣೆ' ಎಂಬ ಅರ್ಥವಿದೆ (ಕಿಟ್ಟೆಲ್, 1973; 1431). ಸಿದ್ಧವೇಶದ ಸನ್ಯಾಸಿಯು ಕೈಯಲ್ಲಿ ದೊಣ್ಣೆ ಇಲ್ಲದೆ ಹೊರಗೆ ಹೊರಡಲಾರ. ಮೇಲಾಗಿ ಲಾಕುಳ ಶೈವರು ನಗ್ನರಾಗಿದ್ದು ಕೊಂಡು ಕಾಮುಕರಂತೆ ವರ್ತಿಸುತ್ತಿದ್ದರೆಂಬುದನ್ನು ಹ್ಯೂಯೆನ್‌ತ್ಸಾಂಗನು ತನ್ನ ಬರಹದಲ್ಲಿ ದಾಖಲು ಮಾಡಿದ್ದಾನೆ (Watters, 1904, 296–331). ಲಾಕುಳ ಶೈವರ ಬಗೆಗೆ ಉಪಯುಕ್ತ ಅಧ್ಯಯನ ನಡೆಸಿರುವ ಕಾವೆಲ್ಲರ ಅಭಿಪ್ರಾಯವೂ ಇದೇ ಆಗಿದೆ. (Cowel and Gough, 1882) 'ಲಾಕುಳ ಪರಂಪರೆಗೆ ಇನ್ನೊಂದು ಹೆಸರಾದ ಕಾಳಾಮುಖರಲ್ಲಿ ಅತಿಮಾರ್ಗಿಗಳಿದ್ದರು. ಅವರು ಸುಂದರ ಸ್ತ್ರೀಯರ ಮುಂದೆ ಕಾಮಚೇಷ್ಟೆಗಳನ್ನು ಮಾಡುವುದಲ್ಲದೆ, ಬ್ರಾಹ್ಮಣರನ್ನು ಅವಮಾನಿಸು ತ್ತಿದ್ದರು, ಎಂದು ಬ್ರಿಗ್ಸ್ ಹೇಳಿರುವುದೂ ಮೇಲಿನದಕ್ಕೆ ಪೂರಕವಾಗಿದೆ. (Briggs 1938). ಕಾಳಾಮುಖ ಪರಂಪರೆಯ ಗುರುಗಳನ್ನು 'ಗೊರವ' ರೆಂದೂ ಕರೆಯುತ್ತಾರೆ. (ಚಿದಾನಂದ ಮೂರ್ತಿ : 1979 ; 136). ಸಿದ್ಧವೇಶ ಕುಣಿಯುವ ಗೌಡ ಜನಾಂಗದವರು ಗೊರವನ ಪೂಜೆಯನ್ನೂ ಮಾಡುತ್ತಾರೆ. ಇದು ಶೈವ ಪರಂಪರೆಗೂ ಸಿದ್ಧವೇಶಕ್ಕೂ, ಗೌಡರಿಗೂ ಇರುವ ಸಂಬಂಧವನ್ನು ಗುರುತಿಸಲು ಸಹಾಯ ಮಾಡುವ ಇನ್ನೊಂದು ಅಂಶ. ವಾಸ್ತವವಾಗಿ ಒಕ್ಕಲಿಗರು ಲಾಕುಳ ಶೈವರ ಗಾಢ ವಾದ ಪ್ರಭಾವಕ್ಕೆ ಒಳಗಾಗಿದ್ದಾರೆ.[2] ಕದರಿ ಬೆಟ್ಟದಲ್ಲಿರುವ ಲಕುಲೀಶನು ಕೈಯಲ್ಲಿ ದೊಣ್ಣೆ ಹಿಡಿದಿದ್ದು, ಸಿದ್ಧರ ಆರಾಧ್ಯ ದೈವವಾಗಿದ್ದಾನೆ. ಗೌಡರು ಕದಿರಿಗೂ ವಿಶೇಷ ಗೌರವ ಸಲ್ಲಿಸುತ್ತಾರೆ. ಬಯಲು ಸೀಮೆಯ ಒಕ್ಕಲಿಗರು ಆದಿಚುಂಚನಗಿರಿಗೆ ಗೌರವ ಸಲ್ಲಿಸುವುದೂ ಇದಕ್ಕೆ ಪೂರಕವಾದ ಅಂಶ.

ಹೀಗೆ ಸಿದ್ಧವೇಶದ ಸನ್ಯಾಸಿಯನ್ನು ಸುಲಭವಾಗಿ ಲಾಕುಳಶೈವ ಪರಂಪರೆಯ ಸನ್ಯಾಸಿಯೆಂದು ಹೇಳಿಬಿಡಬಹುದು. ಆದರೆ ಸಿದ್ಧವೇಶದಲ್ಲಿನ 'ಸಿದ್ಧ' ಪದಕ್ಕೂ, ಸಿದ್ಧವೇಶಕ್ಕಿರುವ ಇನ್ನೊಂದು ಹೆಸರಾದ 'ಪುರುಷರ ಮಕ್ಕಳ ಕುಣಿತ' ದ 'ಪುರುಷ' ಪದಕ್ಕೂ ಈ ಲಾಕುಳ ಸನ್ಯಾಸಿಗೂ ಇರುವ ಸಂಬಂಧವನ್ನು ಅಷ್ಟು ಸುಲಭವಾಗಿ ಹೇಳಲಾಗದು. 'ಸಿದ್ಧ' ಪದಕ್ಕೆ 'Prooved, substantiated' ಎಂಬ ಅರ್ಥವಿದೆ. (Moniar, 1956, 1215) ಇದು 'ಸಿದ್ಧಿ'—ಸಿದ್ಧಾಂತ: ಎಂಬ ಪದಗಳೊಡನೆ

ಸಂಬಂಧಹೊಂದಿದೆ. ಇದಕ್ಕೆ 'Established end' ಎಂಬುದು ಮೊನಿಯರ್‌ನ ವ್ಯಾಖ್ಯಾನ (Moniar, 1956, 1216) 'ಪರಿಪೂರ್ಣ', 'ಪಕ್ವವಾದ', 'ಸಾಧನೆಯು' ಗುರಿಮುಟ್ಟಿದೆ, ಎಂಬ ಅರ್ಥದಲ್ಲಿ 'ಸಿದ್ಧ' ಪದವು ಪ್ರಯೋಗವಾಗಿದೆ. ಈ ಹಿನ್ನೆಲೆಯಲ್ಲಿ ತಮಿಳುನಾಡಿನ ಸಿದ್ಧರ ಬಗೆಗೆ ಸುಬ್ರಹ್ಮಣ್ಯ ಅಯ್ಯರ್ ಹೇಳಿರುವ ಮಾತು ಗಮನಾರ್ಹ.

> "Who live in Yoga see the devine power and light through such yoga are Siddhar" (Subramanya Ayyar, 1950; 7–8).

ಇಂಥ ಯೋಗಾಭ್ಯಾಸಾದಲ್ಲಿ ನಿರತರಾಗಿರುವ 'ಜೋಗಿಗಳು ಅಥವಾ ಸಿದ್ಧರನ್ನು ಕರ್ನಾಟಕದಲ್ಲಿ ನಾವಿಂದೂ ಕಾಣುತ್ತೇವೆ. ಅವರು ಅನೇಕ ಮಠಗಳನ್ನು ಕಟ್ಟಿ ಸಿದ್ದು, ಅವು 'ಸಿದ್ಧರಮಠ' ಇಲ್ಲವೇ 'ಜೋಗಿಮಠ' ಎಂದು ಜನಪ್ರಿಯವಾಗಿವೆ. ಕದರಿಮಠ, ವಿಟ್ಲದ ಮಠ, ಮರ್ಕಂಜ ಮಠ, ಆದಿಚುಂಚನಗಿರಿ ಮಠ—ಇವಕ್ಕೆ ಕೆಲವು ಉದಾಹರಣೆಗಳು. ಸಿದ್ಧವೇಶದ ಹಾಡಿನಲ್ಲಿ ಬರುವ 14 ಮಠಗಳ ಹೆಸರಿನಲ್ಲಿ ಕನಿಷ್ಠ ಹತ್ತಾದರೂ ಸಿದ್ಧರ ಮಠಗಳೇ ಆಗಿವೆ.

ಈ ಸಿದ್ಧರ ಮಠದ ಶಿಷ್ಯರಾದ ಜೋಗಿಗಳು ಪಾಶುಪತ ಶೈವರೆಂಬುದು ಈಗಾಗಲೇ ಒಪ್ಪಿತವಾದ ವಿಚಾರ.[3] ಕಾಲಭೈರವ ಇವರ ಕುಲದೇವರು. ಡಾ. ಚಿದಾನಂದ ಮೂರ್ತಿಯವರ ಪ್ರಕಾರ ಕಾಲಭೈರವ ಆರಾಧನೆ ಮೂಲತಃ ಕಾಪಾಲಿಕರದ್ದು (ಚಿದಾನಂದಮೂರ್ತಿ : 1970 ; 259). ಮಧ್ಯಕಾಲೀನ ಕರ್ನಾಟಕದ ರಾಜಕೀಯ ಧಾರ್ಮಿಕ ಬೆಳವಣಿಗೆಯ ಪರಿಣಾಮವಾಗಿ ಕಾಪಾಲಿಕರು ಮತ್ತು ಕಾಳಾಮುಖರು ಪರಸ್ಪರ ಪ್ರಭಾವಕ್ಕೆ ಒಳಗಾಗಿರಬೇಕು. ಕಾಪಾಲಿಕರ ಕಾಲಭೈರವನು ಪಾಶುಪತರ ಆರಾಧನೆಯನ್ನು ಪಡೆಯುತ್ತಾ ಬಂದದ್ದಕ್ಕೆ ಅನೇಕ ಶಾಸನಗಳು ಸಾಕ್ಷಿ ಹೇಳುತ್ತವೆ. ಕ್ರಿ.ಶ. 1122 ರ ಕರ್ನೂಲಿನ ಶಾಸನ ಮತ್ತು ಕ್ರಿ.ಶ. 1062 ರ ಹುಂಚದ ಶಾಸನಗಳು ಇದಕ್ಕೆ ಒಳ್ಳೆಯ ಉದಾಹರಣೆಗಳು. (South Indian Inscriptions–IX, 1–204 & Ephigraphia Carnatica VIII ; Nr)[63]. ಗೌಡರೂ ಕಾಲಭೈರವನನ್ನು ಕೆಂಚಿರಾಯನೆಂಬ ಹೆಸರಿನಲ್ಲಿ ಆರಾಧಿಸಿಕೊಂಡು ಬರುತ್ತಿದ್ದಾರೆ. 'ಕಾಶಿಗೆ ಹೋದರೆ ವಿಶ್ವನಾಥನನ್ನು ನೋಡದಿದ್ದರೂ ಕಾಲಭೈರವನನ್ನು ನೋಡಬೇಕು' ಎಂಬ ಹೇಳಿಕೆಯೊಂದು ಗೌಡರಲ್ಲಿ ಬಳಕೆಯಲ್ಲಿದೆ.

ಇದರೊಂದಿಗೆ ಸಿದ್ಧವೇಶದವರನ್ನು 'ಪುರುಷರ ಮಕ್ಕಳು' ಎಂದು ಕರೆಯುವುದನ್ನು ಲಕ್ಷಿಸಬೇಕು. ಜೋಗಿಗಳನ್ನು ಪುರುಷರೆಂದೇ ಕರೆಯುವ ಸಂಪ್ರದಾಯ ವಾಡಿಕೆಯಲ್ಲಿದೆ. ಜೊತೆಗೆ ಸುಳ್ಯದ ಪರಿಸರದಲ್ಲಿ ಗೌಡರಿಂದ ಆರಾಧನೆಗೆ ಒಳಪಡುವ ಪುರುಷ ಭೂತವು ಕೂಡಾ ಇಲ್ಲಿ ಉಲ್ಲೇಖಾರ್ಹ. ಈ ಭೂತವು ತಾನು ಕಾಶಿಗೆ

ಹೋಗಿ ಕಾಲಭೈರವನನ್ನು ಪೂಜಿಸಿ ಬರುತ್ತೇನೆಂದು ಹೇಳುತ್ತದೆ. ಜೊತೆಗೆ ಭಾಗ ಮಂಡಲದಲ್ಲಿ ಸೂಳೆಯರ ಮೇಳ ಮಾಡಿಸಿದೆನೆಂದೂ ಹೇಳಿಕೊಳ್ಳುತ್ತದೆ. ಪಾಡ್ದನದಲ್ಲಿ 'ಕಾಶಿಮಠ, ಕದ್ರಿಮಠ, ವಿಟ್ಲೇಲಮಠ'ದ ಉಲ್ಲೇಖವೂ ಬರುತ್ತದೆ. ಮ್ಯಾನರ್ ಸಂಗ್ರಹಿಸಿದ 'ಮುಡದೇರ್ ಕಾಲಭೈರವ' ಪಾದ್ದನದಲ್ಲಿ ನಾಲ್ವರು ಪುರುಷರೊಂದಿಗೆ ಅವರ ಕುಲದೈವ ಕಾಲಭೈರವನೂ ಬಂದದ್ದರ ವರ್ಣನೆಯಿದೆ (ಮ್ಯಾನರ್ 1896 ; 27)–ಇವಿಷ್ಟೂ ವಿವರಗಳೂ 'ಜೋಗಿಗಳ–ಪುರುಷರ–ಕಾಲಭೈರವರ' ಸಂಬಂಧದ ಬಗೆಗೆ ಖಚಿತವಾದ ಸುಳುಹು ನೀಡುತ್ತದೆ.

ಮಧ್ಯಕಾಲೀನ ಕರ್ನಾಟಕದಲ್ಲಿ ನಾಥಸಿದ್ಧ ಪರಂಪರೆಗೆ 'ಸಿದ್ಧಮತ ಸಿದ್ಧಮಾರ್ಗ' ಎಂಬ ಹೆಸರಿತ್ತು (ಕೃಷ್ಣಮೂರ್ತಿ ಮ. ಸು. 1976 ; 212–269) ಈ ನಾಥಸಿದ್ಧರು ಕರ್ನಾಟಕದ ಎಲ್ಲ ಜಾತಿ ಜನಾಂಗದವರನ್ನು ತನ್ನ ತೆಕ್ಕೆಗೆ ಒಗ್ಗಿಸಿ ಕೊಂಡಿದ್ದರು. ಸಿದ್ಧವೇಶದಲ್ಲಿನ 'ಸಿದ್ಧ' ಪದವು ಈ ನಾಥಸಿದ್ಧವನ್ನೇ ಸಂಕೇತಿಸು ವುದು ಸ್ಪಷ್ಟವಾಗಿದೆ. ಪುರುಷಭೂತ, ಮುಡದೇರ್ ಕಾಳಭೈರವರಲ್ಲಿನ ಉಲ್ಲೇಖವು ಈ ನಾಥಸಿದ್ಧರ ಪರಂಪರೆಗೆ ಸಾಕ್ಷಿಯಾಗಿದೆ. ಹಾಗಾಗಿ ಸಿದ್ಧವೇಶ ಕುಣಿಯುವವರನ್ನು 'ಪುರುಷರ ಮಕ್ಕಳು' ಎಂದು ಕರೆಯುವುದು ಸಹಜವೇ ಆಗಿದೆ. ಆದರೆ 'ಪುರುಷರ ಮಕ್ಕಳೂ' 'ಲಾಕುಳ ಶೈವರು' ಬೇರೆ ಬೇರೆ ಎಂಬುದನ್ನು ಮರೆಯುವಂತಿಲ್ಲ. ಸಿದ್ಧ ವೇಶದಲ್ಲಿ ಅವು ಒಂದೆಂಬಂತೆ ಕಂಡರೂ ಪುರುಷ ಭೂತವನ್ನು ಗಮನಿಸಿ ಈ ಕೆಳಗಿನ ವ್ಯತ್ಯಾಸವನ್ನು ಗುರುತಿಸಬಹುದು:–ಈ ವ್ಯತ್ಯಾಸಗಳು ನಾಥಸಿದ್ಧರಿಗೂ ಕಾಳಾಮುಖ ಇಲ್ಲವೇ ಲಾಕುಳ ಶೈವರಿಗೂ ಇರುವ ವ್ಯತ್ಯಾಸಗಳಿಗೆ ಸೂಚನೆಯಾಗಬಹುದು :–

1. ಲಾಕುಳ ಶೈವ ಅಥವಾ ಕಾಳಾಮುಖ ಸನ್ಯಾಸಿಗಳು ದಿಗಂಬರರು. ಸಿದ್ಧವೇಶದ ಸನ್ಯಾಸಿಯಲ್ಲಿ ಇದುಸ್ಪಷ್ಟ. ನಾಥಸಿದ್ಧರ ಪ್ರತಿನಿಧಿ ಎಂಬಂತೆ ತೋರುವ ಪುರುಷಭೂತವು ಲಂಗೋಟಿ ಧರಿಸುತ್ತದೆ.

2. ಲಾಕುಳ ಶೈವ ಸನ್ಯಾಸಿಗಳು ಮಾಂಸಾಹಾರಿಗಳು. ಆದರೆ ನಾಥಸಿದ್ಧರು ಸಸ್ಯಾಹಾರಿಗಳು. ಇದು ಕೂಡ ಅನಂತರದ ಕಾಲಘಟ್ಟದಲ್ಲಿ ಬರುವಂಥದ್ದು. ಏಕೆಂದರೆ ಪುರುಷಭೂತವು ಭಂಗಿ ಸೇದುತ್ತದೆ. ಮಿಗಿಲಾಗಿ ಈ ಸಿದ್ಧರು ಕೂಡಾ ಪುರೋಹಿತಶಾಹಿಯನ್ನು ಪ್ರತಿಭಟಿಸಿದ ನಿಮ್ನ ಜಾತಿಯವರೇ ಆಗಿದ್ದಾರೆ. ಆದರೆ ಕಾಲಾಂತರದಲ್ಲಿ ಅದು ಮತ್ತೆ ಮಾಂಸಾಹಾರವನ್ನು ಬಿಟ್ಟುಕೊಟ್ಟು ಹೆಚ್ಚು ಶಿಷ್ಟ ವಾಗಿದೆ. "Some yogis would not eat fish even"………ಎಂದು ಬ್ರಿಗ್ಸನು ಹೇಳಿದ್ದು ಇಲ್ಲಿ ಸ್ಮರಣಾರ್ಹ. (Briggs, 1938 ; 106)

3. ಲಾಕುಳಶೈವರು ಕಾಮವನ್ನೇ ಭಗವದಾರಾಧನೆಯ ಮಾರ್ಗಕ್ಕೆ ಮಾಧ್ಯಮವನ್ನಾಗಿ ಬಳಸಿದ್ದರು. ನಾಥಸಿದ್ಧರ ತಾತ್ತ್ವಿಕತೆ ಈ ರೀತಿಯದಲ್ಲ ವಾದರೂ, ಇವರೂ ಲಾಕುಳಶೈವರ ಪ್ರಭಾವಕ್ಕೆ ಬಿದ್ದಂತಿದೆ. ಪುರುಷ ಭೂತವು ಭಾಗಮಂಡಲದಲ್ಲಿ ಸೂಳೆಯರ ಮೇಳ ಮಾಡಿಸಿದ್ದೇ ಇದಕ್ಕೆ ಸಾಕ್ಷಿ.

4. ನಾಥಸಿದ್ಧರಲ್ಲಿ ಸ್ತ್ರೀಯರಿಗೆ ಕೂಡಾ ಸಮಾನವಾದ ಸ್ಥಾನವಿತ್ತು.

ಪುರುಷ ಭೂತಕ್ಕೆ 'ಜವುಳಿಜಂಗಮ'ವೆಂಬ ತಂಗಿ ಇರುವ ಉಲ್ಲೇಖವೂ ಆ ಭೂತದ ಪಾಡ್ದನದಲ್ಲಿದೆ. ನಾಥಸಿದ್ಧರಲ್ಲಿ ಜೋಗಿಣಿಯರಿದ್ದುದನ್ನು ವಿದ್ವಾಂಸರು ಗುರುತಿಸಿದ್ದಾರೆ. ಕಾಳಾಮುಖರಲ್ಲಿ ಸ್ತ್ರೀಯರಿದ್ದುದಕ್ಕೆ ಶಾಸನಾಧಾರಗಳಿದ್ದರೂ ಸಿದ್ಧವೇಶದಲ್ಲಿ ಅದಕ್ಕೆ ಆಧಾರಗಳಿಲ್ಲ.[4] ಹೀಗೆ ಸಿದ್ಧವೇಶದ ಕುಣಿತದಲ್ಲಿ ನಾಥಸಿದ್ಧರೂ ಮತ್ತು ಲಾಕುಳ ಶೈವರು ಒಟ್ಟು ಸೇರಿರುವುದನ್ನು ಕಾಣುತ್ತೇವೆ. ಹೀಗೆ ಒಟ್ಟು ಸೇರಿದ್ದು ಯಾವಾಗ ಮತ್ತು ಅದಕ್ಕೆ ಕಾರಣಗಳೇನೆಂಬುದನ್ನು ವಿವರಿಸಲು ಬೇಕಾದಷ್ಟು ಮಾಹಿತಿಗಳು ಲಭ್ಯವಿಲ್ಲ. 10 ರಿಂದ 14 ನೇ ಶತಮಾನದ ಮಧ್ಯೆ ಕರ್ನಾಟಕದಲ್ಲಿ ನಡೆದ ಧಾರ್ಮಿಕ ಕ್ರಾಂತಿಯ ಯಾವುದೋ ಹಂತದಲ್ಲಿ ಇದು ನಡೆದಿರಬಹುದು.

ಸಿದ್ಧವೇಶದಲ್ಲಿ ದಾಸಯ್ಯ ಮತ್ತು ಬ್ರಾಹ್ಮಣ್ಯದ ನಿರಾಕರಣೆಯಿದೆ. ಇದು ವೈಷ್ಣವ ಮತ್ತು ಪುರೋಹಿತಶಾಹಿ ಪರಂಪರೆಯ ನಿರಾಕರಣೆಯೂ ಹೌದು. ಉಚ್ಚವರ್ಗದ ಪಾಂಡಿತ್ಯ ಪೂರ್ಣ ವಿಚಾರಪರಂಪರೆಗೆ ವಿರುದ್ಧವಾಗಿ ಬಂದದ್ದು ವಿಜೃಂಭಿಸಿದ ವೈದಿಕೇತರ ಸಂಪ್ರದಾಯದ ಪಳೆಯುಳಿಕೆಯಾಗಿ ಇಂದು ಸಿದ್ಧವೇಶ ಉಳಿದಿದೆ. ಇಂದಿಗೂ ಬ್ರಾಹ್ಮಣರಿಂದ ತಿರಸ್ಕೃತವಾದ ಜಾತಿಯ ಜನಗಳೇ ಲಾಕುಳ, ಭೈರವ, ಕಾಳಾಮುಖ, ಕಾಪಾಲಿಕ ಮತ್ತು ಪಾಶುಪತ ಮತಗಳಲ್ಲಿರುವುದನ್ನು ನಾವು ಕಾಣುತ್ತೇವೆ. ಇದನ್ನು ಕೂರ್ಮಪುರಾಣವೂ ಸಾರಿ ಹೇಳಿದೆ. (ಕೂರ್ಮ ಪುರಾಣ, ಭೂಮಿಕೆ ; 181–185). 'ಗೀರ್ವಾಣ ಭಾಷೆಗಳ್ ಏಕೆ ಗೊರವೆಗೆ ?' 'ಅದೇಂ ಗೊರವರ ದುಂದುಡಿಯೇ' ಎಂಬಂಥ ಮಾತುಗಳಲ್ಲಿನ ತಿರಸ್ಕಾರದ ಧ್ವನಿ ಕೂಡಾ ಆ ಕಾಲದ ಸಾಮಾಜಿಕ ಜೀವನದ ವಿಷಮತೆಯನ್ನು ಹೇಳುತ್ತದೆ.

ಆಳುವರ್ಗದ ವಿರುದ್ಧ ಸಿಡಿದೆದ್ದು ನಿಂತ ಸಾಮಾನ್ಯ ಜನರ ಧರ್ಮವದು. ಜನಪದದಲ್ಲಿ ಉಳಿದುಬಂದಿರುವ ಈ ತಾತ್ತ್ವಿಕತೆಯು ಮಧ್ಯಕಾಲೀನ ರಹಸ್ಯ ತಾಂತ್ರಿಕ ಪಂಥಗಳ ಬಗೆಗೆ ವಿಶೇಷ ಬೆಳಕು ಚೆಲ್ಲುತ್ತದೆ.*

ಅಡಿ ಟಿಪ್ಪಣಿಗಳು

1. ಲಕುಲೀಶ ಪಾಶುಪತ ಸನ್ಯಾಸಿಗಳ ಬಗೆಗಣ ಎಲ್ಲ ವಿವರಗಳಿಗೆ ನೋಡಿರಿ : Gopinatha Rao ; 1944 ; Page 21.
2. ಒಕ್ಕಲಿಗರು ಲಾಕುಳಶೈವರ ಪ್ರಭಾವಕ್ಕೆ ಒಳಗಾದ ಬಗೆಗಣ ಹೆಚ್ಚಿನ ವಿವರಗಳಿಗೆ ನೋಡಿರಿ: ಪುರುಷೋತ್ತಮ, ಬಿ., 1985 ; 266—330.
3. ಇದರ ಬಗೆಗೆ ಹೆಚ್ಚಿನ ವಿವರಗಳಿಗೆ: ರಾಮಣ್ಣ ಕ್ಯಾತನಹಳ್ಳಿ, 1976 ; 37.
4. ಕಾಳಾಮುಖರಲ್ಲಿ ಸ್ತ್ರೀಯರಿದ್ದರೆಂಬುದಕ್ಕೆ ಶಾಸನಾಧಾರಗಳಿವೆ. ನೋಡಿರಿ : Bombay Karnataka Inscriptions (1) 50 and Ephigraphica Indica XVI–Page 80

* ಈ ಲೇಖನವನ್ನು ಸಿದ್ಧಪಡಿಸುವಲ್ಲಿ ನನಗೆ ಉಪಯುಕ್ತ ಮಾರ್ಗದರ್ಶನ ನೀಡಿದ ಪ್ರೊ. ಬಿ. ಎ. ವಿವೇಕ ರೈ ಮತ್ತು ಡಾ. ಡಿ'ಸಿಲ್ವ ಅವರಿಗೆ ನಾನು ಕೃತಜ್ಞನಾಗಿದ್ದೇನೆ.

ಸಹಾಯಕ ಗ್ರಂಥಗಳು

1. ಕೃಷ್ಣಮೂರ್ತಿ, ಮ. ಸ.—ಸಿದ್ಧಸಾಹಿತ್ಯ.–ಮೈಸೂರು : ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, 1982.

2. ಚಿದಾನಂದ ಮೂರ್ತಿ, ಎಂ.–ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ.–ಮೈಸೂರು: ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, 1979.

3. ಚಿದಾನಂದ ಮೂರ್ತಿ, ಎಂ.–ಸಂಶೋಧನಾ ತರಂಗ ಸಂಪುಟ 2.—ಬೆಂಗಳೂರು: ಪ್ರಸಾರಾಂಗ ಬೆಂಗಳೂರು ವಿಶ್ವವಿದ್ಯಾನಿಲಯ, 1970.

4. ಪುರುಶೋತ್ತಮ, ಬಿ.–ಸುಳ್ಯ ಪರಿಸರದ ಗೌಡ ಜನಾಂಗ, ಒಂದು ಸಾಂಸ್ಕೃತಿಕ ಅಧ್ಯಯನ.–ಮಂಗಳಗಂಗೋತ್ರಿ (ಅಪ್ರಕಟಿತ ಪಿಹೆಚ್.ಡಿ. ನಿಬಂಧ), 1985.

5. ಮ್ಯಾನರ್, ಎ.–ಪಡ್ದನೊಳು.—ಮಂಗಳೂರು : ಬಾಸೆಲ್ ಮಿಷನ್ ಪ್ರೆಸ್, 1886.

6. Briggs. G.W.–Goraknatha and the Konphata Yogis.–Culcutta : YMCA Publishing House, 1938.

7. COWELL and GOUGH, A.E. (Tr.)–Sarva Darshana Sangraha.–London, 1882,

8. GOPINATHA RAO, T. A. – Elements of Hindu Iconography.– Madras : 1914

9. KITTEL, F. Rev.–A Kannada English Dictionary. Mangalore : Basel Mission Book and Tract Depository, 1984.

10. MONIER WILLIAMS.–A Sanskrit–English Dictionary.–Delhi : Motilal Banarasidas, 1956,

11. Subramanya Ayyar.–The poetry and the Philosophy of the Tamil Sidars.–Madras : 1950.

12. WATTERS THOMAS.–Ou Yean Chawang's travels in India (Volume I and II). London, 1904.

ಸಿದ್ಧವೇಶದ ಹಾಡು

ಪುರುಷರ ಮಕ್ಕಳ ಹಾಡು

ಪೂರ್ಣಪಾಠ

ದುಂಬಿಸಾಲೆ[1] ದುಂಬಿಸಾಲೆ
ಸಿದ್ದುಲಿಂಗ ಮುದ್ದುಲಿಂಗ   ಸುದ್ದ ಬೇಸೋ
ನಾವು ಯಾವ ಊರು ಯಾವ ತಳ   ,,
ನಾವು ಕಾಶೀಯ ತಳದವರು   ,,
ನಾವು ಕಾಶೀಯ ತಳದಿಂದ   ,,
ನಾವು ಕದಿರೆಯ ಮಠಕ್ಕಾಗಿ   ,,
ನಾವು ಕದಿರೆಯ ಮಠದಿಂದ   ,,
ನಾವು ಬಿದಿರೆಯ ಮಠಕ್ಕಾಗಿ   ,,
ನಾವು ಬಿದಿರೆಯ ಮಠದಿಂದ   ,,
ನಾವು ಗಾಳಿಯ ಮಠಕ್ಕಾಗಿ   ,,
ನಾವು ಗಾಳಿಯ ಮಠದಿಂದ   ,,
ನಾವು ಗೋಳಿಯ ಮಠಕ್ಕಾಗಿ   ,,
ನಾವು ಗೋಳಿಯ ಮಠದಿಂದ   ,,
ನಾವು ವಿಟ್ಟೇಲ ಮಠಕ್ಕಾಗಿ   ,,
ನಾವು ವಿಟ್ಟೇಲ ಮಠದಿಂದ   ,,
ನಾವು ಐಗೂರ ಮಠಕ್ಕಾಗಿ   ,,
ನಾವು ಐಗೂರ ಮಠದಿಂದ   ,,
ನಾವು ಅಂಬೆಯ ಮಠಕ್ಕಾಗಿ   ,,
ನಾವು ಅಂಬೆಯ ಮಠದಿಂದ   ,,
ನಾವು ತುಂಬೆಯ ಮಠಕ್ಕಾಗಿ   ,,
ನಾವು ತುಂಬೆಯ ಮಠದಿಂದ   ,,
ನಾವು ನೆಕ್ಕಿಯ ಮಠಕ್ಕಾಗಿ   ,,
ನಾವು ನೆಕ್ಕಿಯ ಮಠದಿಂದ   ,,
ನಾವು ನೇರಳೆ ಮಠಕ್ಕಾಗಿ   ,,
ನಾವು ನೇರಳೆ ಮಠದಿಂದ   ,,
ನಾವು ಶೃಂಗೇರಿ ಮಠಕ್ಕಾಗಿ   ,,
ನಾವು ಶೃಂಗೇರಿ ಮಠದಿಂದ

——————ಸನ್ಯಾಸಿ ಪ್ರವೇಶ ——————

ನಾವು ಹೂವೆಂಗಿ ಮಠಕ್ಕಾಗಿ ,,
ನಾವು ಹೂವೆಂಗಿ ಮಠದಿಂದ ,,
ನಾವು ಗುರುಪುರ ಮಠಕ್ಕಾಗಿ ,,
ನಾವು ಗುರುಪುರ ಮಠದಿಂದ ಸುದ್ದ ಬೇಸೋ
ನಾವು ಹಳ್ಳಿಗೆ ಬಿದ್ದೆವಮ್ಮ ,,
ನಾವು ಪುರ್ಸರಾಯರ ಹೆಸರು ಹೇಳಿ ,,
ನಾವು ಹತ್ತು ತಾಯಿ ಮಕ್ಕಳಯ್ಯ ,,
ನಾವು ಒಂದೇ ತಾಯಿ ಮಕ್ಕಳಂತೆ ,,
ನಾವು ದೇವ್ರ ಮುಂದೆ ಅಡಿಕೊಂಡು ,,
ನಾವು ಬಟ್ಟಬಳಲಿ ಬಂದೆವಮ್ಮ ,,
ನಮ್ಮ ಹುಲ್ಲು ಕತ್ತಿ ಹನುಮಪ್ಪಯ್ಯ ,,
ನಮ್ಮ ಗುಂಡುಕಲ್ಲು ಗುರುವಪ್ಪಯ್ಯ ,,
ನಮ್ಮ ಚಟ್ಟಿ ಬತ್ತ ಪಿಟ್ಟಿ ಸಂಕರ ,,
ನಮ್ಮ ಬಾರುಕೋಲು ಬಸವಯ್ಯ ,,
ನಾವು ಇನ್ನೊಂದೆಡೆ ಹೋಗಬೇಕು ,,
ನಮ್ಮ ಕೈಯ್ಯನ್ನಾದ್ರೂ ತುಂಬಿ ಕಳಿಸಿ ,,
ನಾವು ವರುಷಕೊಮ್ಮೆ ಬರುವರಯ್ಯ ,,
ನಾವು ತಾರಾವು ಮಾರಾವಲ್ಲ ,,
ನಾವು ಹತ್ತಕ್ಕೊಂದು ತಾರಪೂರ ,,
ನಮ್ಮ ಎಂಟಕ್ಕೊಂದು ಘಂಟೆಸರ ,,

ಶೈವ ಧರ್ಮಕ್ಕೆ ಲಾಕುಳ ಸಮಯ ಎಂಬ ಮತ್ತೊಂದು ಹೆಸರೂ ಇದೆ.... ಮಹೇಶ್ವರನು ಸ್ಮಶಾನದಲ್ಲಿ ಬಿದ್ದಿದ್ದ ದೇಹವೊಂದನ್ನು ಹೊಕ್ಕು ಲಕುಲಿನ್ ಎಂಬ ಬ್ರಹ್ಮಚಾರಿಯಾಗಿ ಅವತರಿಸಿದುದಾಗಿಯೂ, ಹಾಗೆ ಅವತರಿಸಿದ ಸ್ಥಳಕ್ಕೆ ಕಾಯಾವತಾರ ಅಥವ ಕಾಯಾವರೋಹಣ ಎಂದು ಹೆಸರಾಗಿರುವುದಾಗಿಯೂ, ಅವನಿಗೆ ಕುಶಿಕ, ಗರ್ಗ, ಮಿತ್ರ, ಕೌರುಷ್ಯರೆಂಬ ನಾಲ್ವರು ಶಿಷ್ಯರು ಇರುವರೆಂದೂ, ಇವರ ಅನುಯಾಯಿಗಳಾದ ಪಾಶುಪತರು ಭಸ್ಮಧಾರಣೆ ಮಾಡಿಕೊಂಡು ಮಾಹೇಶ್ವರ ಯೋಗವನ್ನು ಅನುಸರಿಸಿ ಕೊನೆಯಲ್ಲಿ ರುದ್ರಲೋಕಕ್ಕೆ ಹೋಗುವರೆಂದೂ ವಾಯು ಪುರಾಣ (ಅಧ್ಯಾಯ, 23) ಮತ್ತು ಲಿಂಗಪುರಾಣ (ಅಧ್ಯಾಯ, 24)ಗಳಲ್ಲಿ ಹೇಳಿದೆ. ಹತ್ತನೆಯ ಶತಮಾನದ ಏಕಲಿಂಗಜೀಯ ಶಾಸನವೊಂದರಲ್ಲಿ ಲಕುಲಧಾರಿಯಾದ (ಲಕುಲ→ಲಗುಡ→ಕೋಲು) ಶಿವನು ಭೃಗುಕಚ್ಛದಲ್ಲಿ ಅವತಾರ ಮಾಡಿದನೆಂದು ಹೇಳಿದೆ. ಇದೇ ವಿಷಯ 13ನೆಯ ಶತಮಾನದ ಚಿಂತ್ರ ಪ್ರಶಸ್ತಿಯಲ್ಲಿಯೂ ಬಂದಿದೆ. ಶಿವನು ಲಕುಲೀಶನಾಗಿ ಅವತರಿಸಿದ ಕಾಯಾವರೋಹಣವು ಹಿಂದಿನ ಬರೋಡ ಸಂಸ್ಥಾನದ (ಈಗಿನ ಗುಜರಾತ್) ಕಾರ್‍ವಾನ್ ಎಂಬ, ಹಳ್ಳಿಯೆಂದು ಗುರುತಿಸಲಾಗಿದೆ. ಆ ಹಳ್ಳಿಯಲ್ಲಿರುವ 'ಕಾರ್‍ವಾನ್ ಮಹಾತ್ಮ್ಯೆ' ಎಂಬ ಗ್ರಂಥವಲ್ಲಿ ಶಿವನು ಲಕುಲೀಶನಾಗಿ ಅವತರಿಸಿದ ಕಥೆಯನ್ನು ಹೇಳಿದೆ. ಆ ಊರಲ್ಲಿ 'ನಕ್ಲೇಶ್ವರ' (=ಲಕುಲೀಶ್ವರ)ನ ದೇವಸ್ಥಾನವಿದೆ. ಆ ಊರಿನ ಎರಡು ಲಿಂಗಗಳಲ್ಲಿಯ ಲಕುಲೀಶನ ಮೂರ್ತಿಯನ್ನು ಕೆತ್ತಲಾಗಿದೆ. ಲಕುಲೀಶನ ವಿಗ್ರಹಗಳು ಸಾಮಾನ್ಯವಾಗಿ ಬಲಗೈಯಲ್ಲಿ ಮಾದಲದ ಹಣ್ಣನ್ನು ಎಡಗೈಯ್ಯಲ್ಲಿ ದಂಡ (=ಲಕುಲ)ವನ್ನೂ ಹಿಡಿದಿರುತ್ತವೆ....ಲಕುಲೀಶನ ದೇವಸ್ಥಾನಗಳು ರಾಜಪುತಾಣದಿಂದ ದಕ್ಷಿಣದಲ್ಲಿ ಮೈಸೂರಿನವರೆಗೆ,...ಹಬ್ಬಿರುವುದು ಕಂಡುಬರುತ್ತದೆ. ಲಕುಲೀಶ ಮತವು ಕರ್ನಾಟಕಕ್ಕೆ ಗುಜರಾತಿನಿಂದ ಬಂದಿರಬೇಕು.

ಎಂ. ಚಿದಾನಂದಮೂರ್ತಿ

'ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ'. ಪುಟ ೧೩೦.



ಮಾವಿನಕುಳಿ ಶ್ರೀನಿವಾಸ

ಮಾದಕ ಔಷಧಗಳು : ಒಂದು ಸಾಮಾಜಿಕ— ವೈದ್ಯಕೀಯ ಚಿಂತನೆ.

ಪರಿಚಯ ಮತ್ತು ಹಿನ್ನೆಲೆ :

ಮಾದಕ ಔಷಧವಸ್ತು ಸೇವನೆಯು ಕೇವಲ ವ್ಯಕ್ತಿಗೆ ಮಾತ್ರವಲ್ಲದೆ ತನ್ಮೂಲಕ ಆತನ ಕುಟುಂಬಕ್ಕೂ ಹಾಗೂ ಸಮಾಜಕ್ಕೂ ಹಾನಿಕಾರಕವಾದದ್ದು. ಶತಮಾನದುದ್ದಕ್ಕೂ ದೇಶದ ಎಲ್ಲೆಡೆಗಳಲ್ಲಿ ಇರುವ ಔಷಧ ಅಂಗಡಿಗಳಲ್ಲಿ ಅಮಲು ಪದಾರ್ಥಗಳನ್ನು ಒಳಗೊಂಡಿರುವ ಸ್ವಾಮ್ಯಕ್ಕೊಳಪಟ್ಟ ಔಷಧಿಗಳು ದೊರಕುತ್ತಿದ್ದಾಗ್ಯೂ ಮತ್ತು ಅನೇಕ ಪಟ್ಟಣಗಳಲ್ಲಿ ಅಫೀಮು ನೆಲೆಗಳು ಕಂಡುಬಂದಿದ್ದರೂ, ಇತ್ತೀಚಿನ ವರುಷಗಳವರೆಗೂ ಈ ಬಗೆಯ ಔಷಧ ಅವಲಂಬನೆಯನ್ನು ಒಂದು ಗಂಭೀರ ಸಾಮಾಜಿಕ ಸಮಸ್ಯೆಯೆಂಬುದಾಗಿ ಪರಿಗಣಿಸಿರಲಿಲ್ಲ. ಕೊಳೆಗೇರಿಗಳಲ್ಲಿ ವಾಸಿಸುತ್ತಿದ್ದ ಕಪ್ಪು ನಿವಾಸಿಗಳು ಈ ಔಷಧ ಸಮಸ್ಯೆ ಅಸ್ತಿತ್ವದಲ್ಲಿದ್ದುದನ್ನು ಹಲವಾರು ವರುಷಗಳ ಹಿಂದೆ ತಿಳಿದಿದ್ದರಾದರೂ ಯಾವಾಗ ಔಷಧ ಉಪಯೋಗವು ಬಿಳಿಯರ ಕ್ಷೇತ್ರಗಳಿಗೆ ಹರಡಿತೋ ಆಗ ಈ ಸಮಸ್ಯೆಯು ಒಟ್ಟು ಸಮಾಜಕ್ಕೆ ಸಂಬಂಧಿಸಿದ್ದೆಂಬ ಅರಿವು ಮೂಡಿತೆಂದು ಕೆಲವು ಲೇಖಕರು ವಾದಿಸುತ್ತಾರೆ. ಜವಾಬ್ದಾರಿ ಸ್ಥಾನಗಳಲ್ಲಿ ಇರುವವರು ಒಂದು ಸಮಸ್ಯೆಯ ವಾಸ್ತವತೆಯನ್ನು ಮಾನ್ಯ ಮಾಡಿದಾಗ ಮಾತ್ರವೇ ಆ ಸಮಸ್ಯೆಯು ಒಂದು 'ಸಾಮಾಜಿಕ ಸಮಸ್ಯೆ' ಯಾಗಿ ಮಾರ್ಪಾಡು ಹೊಂದುತ್ತದೆ. ಔಷಧಿಗಳಿಗೆ ಸಂಬಂಧಿಸಿದ ಆದರ್ಶಾತ್ಮಕ ಪ್ರತಿಕ್ರಿಯೆಯ ಫಲಿತಾಂಶವು ವೈದ್ಯಕೀಯ ಹಾಗೂ ಕಾನೂನು ಸಮ್ಮತ ಮಾರ್ಗಗಳಲ್ಲಿ ವಿಭಜಿತಗೊಂಡು ಹೊರಬೀಳುತ್ತದೆ. ಔಷಧ ದುರುಪಯೋಗವು ಒಂದು ರೋಗಕಾರಕ ಲಕ್ಷಣವಾಗಿಯೋ ಅಥವಾ ಒಂದು ಅಪರಾಧಿ ನಡವಳಿಕೆ ಲಕ್ಷಣವಾಗಿಯೋ ಕಂಡುಬರುತ್ತದೆ. ಈ ಎರಡೂ ಸಮೀಚೀನ ದೃಷ್ಟಿಗಳು ಔಷಧ ಸಮಸ್ಯೆಗೆ ಸಂಬಂಧಿಸಿದಂತೆ ವ್ಯತಿರಿಕ್ತ ವ್ಯೂಹಗಳಲ್ಲಿ ಫಲಿತಾಂಶಗಳನ್ನು ಒದಗಿಸುತ್ತವೆ. ಯಾರು ಔಷಧ ದುರುಪಯೋಗವನ್ನು ಒಂದು ವೈದ್ಯಕೀಯ

ಸಮಸ್ಯೆಯೆಂಬಂತೆ ಗಮನಿಸ ಪರೋ ಅವರು ಔಷಧೋಪಯೋಗಿಯ ಚಿಕಿತ್ಸೆ ಹಾಗೂ ಪುನರ್‌ವ್ಯವಸ್ಥೆಯನ್ನು ಬೆಂಬಲಿಸುತ್ತಾರೆ. ಆದರೆ ಇದನ್ನು ಅಪರಾಧಿ ನಡವಳಿಕೆಯೆಂದು ಪ್ರತಿಪಾದಿಸುವವರು ಇವರಿಗೆ ಕಾನೂನು ಬಲವಂತವನ್ನು ಅದು ಶಿಕ್ಷಾತ್ಮಕವಾಗಿರಲಿ ಪ್ರತಿಬಂಧಕವಾಗಿರಲಿ ಅಥವಾ ಎರಡೂ ಆಗಿರಲಿ ಔಷಧೋಪಯೋಗಿಯ ಮೇಲೆ ಹೇರಬೇಕೆನ್ನುತ್ತಾರೆ. ಈ ಎರಡು ಸಮೀಚೀನ ದೃಷ್ಟಿಕೋನಗಳು ಪ್ರಾಥಮಿಕವಾಗಿ ಔಷಧೋಪಯೋಗದ ಕಾರಣಗಳನ್ನು ವಿವರಿಸುವ ಪ್ರಯತ್ನಗಳು ಮಾತ್ರವಾಗಿರದೆ ಔಷಧೋಪಯೋಗದ ಪ್ರತಿಬಂಧನೆ ಅಥವಾ ನಿವಾರಣೆ ದಾರಿಗಳನ್ನು ತೋರುತ್ತವೆ. ಸಮಾಜಶಾಸ್ತ್ರೀಯವಾಗಿ ಔಷಧೋಪಯೋಗವನ್ನು ವಿವರಿಸುವ ಒಂದು ಪ್ರಯತ್ನ ಮರ್ಟನ್ ಮತ್ತು ಇವನಿಂದ ಪ್ರಭಾವಿತರಾದ ವ್ಯಕ್ತಿಗಳಿಂದ ಮಾಡಲ್ಪಟ್ಟಿತ್ತು. ಮರ್ಟನ್ನನ ವ್ಯತಿಕ್ರಮಣತೆ ಸಿದ್ಧಾಂತವು ಅಸ್ತಿತ್ವದಲ್ಲಿರುವ ಒಂದು ಸಾಮಾಜಿಕ ಸಂರಚನಾತ್ಮಕ ಸ್ಥಿತಿಯಾಗಿದ್ದು, ಯಾವಾಗ ಒಂದು ಸಮಾಜದಲ್ಲಿನ ಸಂಸ್ಥೆಗಳು ವ್ಯಕ್ತಿಗಳಿಗೆ ಬೋಧಿಸಿದ ನಿರೀಕ್ಷೆಗಳು ಹಾಗೂ ಮೌಲ್ಯಗಳನ್ನು ಈಡೇರಿಸಲು ಅವಕಾಶಗಳನ್ನು ಕೊಡುವುದಿಲ್ಲವೋ ಆಗ ಮೇಲ್ಕಂಡ ಸ್ಥಿತಿ ಉದ್ಭವಿಸುತ್ತದೆ. ಹಾಗೆಯೇ, ಮರ್ಟನ್ನನ ಸಿದ್ಧಾಂತವು ಪ್ರತ್ಯೇಕತೆಯುಳ್ಳ ವ್ಯಕ್ತಿಯ ಮೇಲೆ ಕೇಂದ್ರೀಕೃತವಾಗುವುದಿಲ್ಲ. ಮರ್ಟನ್ನನ ಪ್ರತಿಪಾದನೆ ಪ್ರಕಾರ, ತಮ್ಮ ಸಾಮಾಜಿಕ ಸಮೂಹಗಳು ಅಥವಾ ವರ್ಗಗಳ ಮೇಲೆ ವಿಭಿನ್ನ ರೀತಿಯಲ್ಲಿ ಅವಲಂಬಿತವಾಗಿರುವ ವ್ಯಕ್ತಿಗಳನ್ನು ಬಾಧಿಸುವುದಿಲ್ಲ. ಈ ಸಿದ್ಧಾಂತವು ನಿಜವಾಗಿದ್ದಲ್ಲಿ ಮಧ್ಯಮ ವರ್ಗದ ಯುವಜನತೆಯಂತಹ ಒಂದು ಸಾಮಾಜಿಕ ಗುಂಪಿನ ಸದಸ್ಯರು ಒಂದು ಬಗೆಯಲ್ಲಿ ವ್ಯತಿಕ್ರಮಣ ಸನ್ನಿವೇಶಗಳನ್ನು ಅಳವಡಿಸಿಕೊಂಡರೆ, ಅದೇ ರೀತಿ ಕೆಳವರ್ಗಕ್ಕೆ ಸೇರಿದ ಕಪ್ಪು ನಿವಾಸಿಗಳ ಇನ್ನೊಂದು ಗುಂಪಿನ ಜನರು ಬೇರೆ ಬೇರೆ ದಾರಿಗಳಲ್ಲಿ ಈ ಸಿದ್ಧಾಂತವನ್ನು ಅಳವಡಿಸಿಕೊಳ್ಳುತ್ತಾರೆ.

ಐವತ್ತರ ದಶಕಕ್ಕೂ ಮುಂಚಿತವಾಗಿಯೇ ಔಷಧಗಳ ಸರಾಸರಿ ಬಳಕೆಯ ಪ್ರಮಾಣವು ನಾಜೂಕಾಗಿ ಏರುತ್ತ ಬಂದಿದೆ. ಕಳೆದ ಕೆಲವು ವರ್ಷಗಳ ಕಾಲಾವಧಿಯಲ್ಲಿ ಮನೋಪ್ರಚೋದಕ ಕಾರ್ಯವಸ್ತುಗಳ ಉತ್ಪಾದನೆ ಮತ್ತು ವಿತರಣೆ ಎರಡರಷ್ಟು ಪ್ರಮಾಣದಲ್ಲಿ ಅಧಿಕಗೊಂಡಿವೆ. 1971ರಲ್ಲಿ ವೈದ್ಯರು ಈ ರಾಸಾಯನಿಕ ಕಾರ್ಯ ವಸ್ತುಗಳಿಗೆ ಸಂಬಂಧಿಸಿದ 230 ದಶ ಲಕ್ಷಕ್ಕೂ ಮಿಕ್ಕಿ ಔಷಧ ಚೀಟಿಗಳನ್ನು ಬರೆದಿದ್ದರಲ್ಲದೆ, ಇವುಗಳಲ್ಲಿ ಶೇಕಡಾ 30ಕ್ಕಿಂತಲೂ ಕಡಿಮೆ ಔಷಧ ಚೀಟಿಗಳನ್ನು ಮನೋಚಿಕಿತ್ಸಕರು ಬರೆದಿದ್ದರು. ಇದೇ ಕಾಲಾವಧಿಯಲ್ಲಿ ಅವಕಾಶವಿರದಿದ್ದರೂ ಕಾನೂನುಬದ್ಧವಲ್ಲದ ಔಷಧಗಳ ಬಳಕೆ ವರುಷದಿಂದ ವರುಷಕ್ಕೆ ಅಧಿಕವಾಗುತ್ತಾ ಬಂದುದಲ್ಲದೆ, ಇದರಿಂದ ನಾವೀಗ ಸಾಂಕ್ರಾಮಿಕವಾಗಿರುವ ಕಾನೂನು ರಹಿತ ಔಷಧಗಳ ಬಳಕೆಯನ್ನು ಎದುರಿಸಬೇಕಾಗಿದೆ. 1970ರಲ್ಲಿ ಸಂಯುಕ್ತ ಸಂಸ್ಥಾನಗಳಲ್ಲಿ 5 ಶತಕೋಟಿ ಟ್ರಾಂಕ್ವಿಲೈಸರ್ ಪ್ರಮಾಣಗಳು 3 ಶತಕೋಟಿ ಆಂಫೇಟಮೈನ್

ಪ್ರಮಾಣಗಳು ಹಾಗೂ 5 ಶತಕೋಟಿ ಬಾರ್ಬಿಟುರೇಟ್ಸ್ ಪ್ರಮಾಣಗಳ ಔಷಧಗಳು ಉತ್ಪಾದನೆಗೊಂಡವು. 18 ಮತ್ತು 74ರ ವಯಸ್ಸಿನೊಳಗಣ ಎಲ್ಲಾ ಅಮೇರಿಕನ್ನರ ಮೂರನೇ ಒಂದು ಭಾಗದಷ್ಟು ಜನರು ಕೆಲಬಗೆಯ ಮನೋಪ್ರಚೋದಕ ಔಷಧಗಳನ್ನು ಉಪಯೋಗಿಸುತ್ತಾ ಬಂದಿದ್ದಾರೆ. ಇದೇ ರೀತಿಯ ಸಾದೃಶ್ಯ ಪ್ರವೃತ್ತಿಗಳು ಇತರ ರಾಷ್ಟ್ರಗಳಿಂದಲೂ ವರದಿಯಾಗಿವೆ.

ಮನೋಪ್ರಚೋದಕ ಚೋದಕ ಔಷಧವಸ್ತುಗಳನ್ನು ಹುಚ್ಚಾಸ್ಪತ್ರೆಗಳಲ್ಲಿರುವ ಹೆಚ್ಚಿನ ರೋಗಿಗಳಿಗೆ, ಹೊರರೋಗ ಮನೋಚಿಕಿತ್ಸಕ ಸವಲತ್ತುಗಳಲ್ಲಿ ಭಾಗಿಯಾಗುವ ಹೆಚ್ಚಿನ ರೋಗಿಗಳಿಗೆ, ನಡವಳಿಕೆ ಸಮಸ್ಯೆಗಳನ್ನು ಹೊಂದಿರುವ ಶಾಲಾ ಮಕ್ಕಳಿಗೆ, ಶುಶ್ರೂಷೆ ಗೃಹಗಳಲ್ಲಿರುವ ಹಿರಿಯ ವ್ಯಕ್ತಿಗಳಿಗಾಗಿ, ತಿದ್ದುಪಾಟು ಸಂಸ್ಥೆಗಳಲ್ಲಿನ ಕೈದಿಗಳಿಗಾಗಿ ಹಾಗೂ ಈಗಾಗಲೇ ಔಷಧಗಳ ಚಟಕ್ಕೆ ಬಲಿಬಿದ್ದ ವ್ಯಕ್ತಿಗಳಿಗಾಗಿಯೂ ಬರೆದು ಕೊಡಲಾಗುತ್ತಿತ್ತು. ಪ್ರತಿ ವರುಷವೂ ಕಾನೂನುಬದ್ಧ ಹಾಗೂ ಕಾನೂನುರಹಿತ ಮಾರ್ಗಗಳ ಮೂಲಕ ಹೆಚ್ಚು ಹೆಚ್ಚು ಜನರಿಂದ ಅನೇಕಾನೇಕ ಕಾರಣಗಳಿಗಾಗಿ ಹೆಚ್ಚು ಹೆಚ್ಚು ಔಷಧವಸ್ತುಗಳು ಬಳಕೆಯಾಗುತ್ತಿರುವುದಲ್ಲದೆ ಇವುಗಳ ಉಪಯೋಗವನ್ನು ಅಧಿಕಗೊಳಿಸಲು ಹೆಚ್ಚು ಹೆಚ್ಚು ಮೂಲಗಳಿಂದ ಒತ್ತಡವೂ ಆರಂಭವಾಗಿದೆ. ಒಂದು ಹೊಸ ಶಾರೀರಿಕ ರಸಾಯನಿಕ ತಂತ್ರಶಾಸ್ತ್ರದ ತೀವ್ರ ಬೆಳವಣಿಗೆ ಹಾಗೂ ಶೋಷಕತೆಯು ಮಾನವೀಯತ್ವಕ್ಕೆ ಉಚಿತವಲ್ಲದ ಹಾರೈಕೆಯನ್ನು ಅವಿಷ್ಕಾರಗೊಳಿಸುವುದೆ ಎಂದು ಹೇಳುವುದು ಕಷ್ಟ. ಪ್ರತಿಯೊಂದು ರಾಸಾಯನಿಕ ಕಾರ್ಯವಸ್ತುವು ಶರೀರದೊಳಕ್ಕೆ ಪರಿಚಯಿಸಲ್ಪಟ್ಟು, ಅದರ ಪರಿಣಾಮಗಳ ನಿರ್ದಿಷ್ಟತೆಗೆ ಹೊರತಾದ, ಶರೀರದ ಇತರ ಭಾಗಗಳಲ್ಲಿ ಉಂಟು ಮಾಡುವ ಪರಿಣಾಮಗಳ ಅಂತರವನ್ನು ಪಡೆಯುತ್ತದೆ. ಮನೋಪ್ರಚೋದಕ ಕಾರ್ಯವಸ್ತುಗಳು ಈ ನಿಯಮಕ್ಕೆ ಹೊರತಾಗಿರದೆ, ಅವುಗಳ ಇತರ ಪರಿಣಾಮಗಳು ಹಬ್ಬುವಿಕೆ ಹಾಗೂ ಅಂಜಿಕೆಯ ಹಂತವನ್ನು ತಲುಪುವಿಕೆ ಅವುಗಳನ್ನು ತೆಗೆದುಕೊಳ್ಳುವ ವ್ಯಕ್ತಿಯಿಂದ ಆತನ ಸಾಮಾಜಿಕ ಪರಿಸರದಲ್ಲಿರುವ ಆತನ ಕುಟುಂಬ ಹಾಗೂ ಇತರರಿಗೆ ತನ್ಮೂಲಕ ಸಮುದಾಯಕ್ಕೂ ದೊಡ್ಡ ಪ್ರಮಾಣದಲ್ಲಿ ಪ್ರಸರಿಸುತ್ತವೆ.

ಕಾನೂನಿನ ಚೌಕಟ್ಟಿನ ಒಳಹೊರಗಿನ ಔಷಧ ಬಳಕೆಗೆ ಸಂಬಂಧಿಸಿದ ವಿಚಾರಗಳು ಶಕ್ತಿಯುತವಾದ ವೈಯಕ್ತಿಕ, ಆರ್ಥಿಕ ಹಾಗೂ ರಾಜಕೀಯ ಹಿತಾಸಕ್ತಿಗಳಿಗೆ ಒಂದಕ್ಕೊಂದು ಡಿಕ್ಕಿಹೊಡೆಯುತ್ತವೆ. ಇದರ ಪರಿಣಾಮವಾಗಿ ಸಣ್ಣ ಪ್ರಮಾಣದಲ್ಲಿ ಉಪಯುಕ್ತ ಮಾಹಿತಿಯು ದೊರಕುವುದಲ್ಲದೆ ಉಳಿದ ಅರ್ಥ ವಿವರಣೆಗಳು ಮಸುಕಾಗಿ ಬಿಡುತ್ತವೆ. ಇದರಿಂದಾಗಿಯೇ ದೊಡ್ಡ ಪ್ರಮಾಣಗಳಲ್ಲಿ ಶಕ್ಯವುಳ್ಳ ಅಮಲು ರಾಸಾಯನಿಕ ವಸ್ತುಗಳು ಸಯುಕ್ತ ಸಂಸ್ಥಾನಗಳ ಜನಸಂಖ್ಯೆಗೆ ಪರಿಚಿತವಾಗಿಬಿಟ್ಟಿವೆ. ಈ ಪ್ರವೃತ್ತಿಯು ಇನ್ನಷ್ಟು ಉತ್ತೇಜನಗೊಳ್ಳುತ್ತಿರುವುದಲ್ಲದೆ ಸಂಕೀರ್ಣತೆ

ಯುಳ್ಳ ಸಾಮಾಜಿಕ ಶಕ್ತಿಗಳು, ಆರ್ಥಿಕ ಹಿತಾಸಕ್ತಿಗಳು ಹಾಗೂ ಸಾರ್ವಜನಿಕ ನೀತಿಗಳು ಈ ಪ್ರವೃತ್ತಿಯನ್ನು ಬೆಂಬಲಿಸುತ್ತಿವೆ. ಈ ಬೆಳವಣಿಗೆಗೆ ಕಾರಣವಾಗಿರುವ ಕೊಡುಗೆಯು ಮಾನವ ಜೀವಿಯ ಪರಿಸ್ಥಿತಿಯನ್ನು ವೈದ್ಯಕೀಕರಣಗೊಳಿಸುವ ಪ್ರವೃತ್ತಿಯನ್ನು ಉಲ್ಬಣಗೊಳಿಸುತ್ತಿದ್ದು ಮರಣದ ಬಗೆಗಿನ ಕಲ್ಪನೆಗಳು ಶರೀರವನ್ನು ಒಂದು ಯಂತ್ರವನ್ನಾಗಿಸಿರುವುದು, ಸಮುದಾಯದ ಮೇಲೆ ಕಸರತ್ತು ನಡೆಸಿರುವುದು ಹಾಗೂ ನಮ್ಮ ಸಾಮಾಜಿಕ ಸಂಸ್ಥೆಗಳ ಮೇಲೆ ತಳವೂರಿದ ಸಾಮಾಜಿಕ ಸಮಸ್ಯೆಗಳನ್ನು ಇನ್ನಷ್ಟು ಅಸ್ತವ್ಯಸ್ತಗೊಳಿಸುತ್ತಿರುವುದು ವಿಪರ್ಯಾಸಕರ.

ನಾರ್ಮನ್ ಜಿನ್‌ಬರ್ಗ್‌ರವರು ತಮ್ಮ ಇತ್ತೀಚಿನ ಲೇಖನವೊಂದರಲ್ಲಿ ಕೆಳ ಆದಾಯ ಗುಂಪುಗಳು ಹಾಗೂ ಐಶ್ವರ್ಯವಂತ ಯುವಕರು ಔಷಧ ವಸ್ತುಗಳ ಉಪಯೋಗದ ನಡುವಣ ವ್ಯತ್ಯಾಸವನ್ನು ಸ್ಪಷ್ಟೀಕರಿಸಿದ್ದಾರೆ. ಔಷಧ ಸಮಸ್ಯೆ ಬಗೆಗಿನ ಚರ್ಚೆಗಳು ಕೆಲವು ಗಂಭೀರ ಮಿಥ್ಯ ಕಲ್ಪನೆಗಳಿಂದಾಗಿ ನಿಸ್ಸಾರಗೊಂಡಿವೆಯೆಂದು ಅವರು ಸೂಚಿಸಿದ್ದಾರೆ. ಲೌಕಿಕ ಅಥವಾ ಅಲೌಕಿಕ ವಾದಿಗಳಲ್ಲಿ ಹೆಚ್ಚಿನ ಜನರು, ಮಾದಕೌಷಧ ಚಟವಾಗಿರುವ ವ್ಯಕ್ತಿಗಳನ್ನು "ಹೆರಾಯಿನ್ ಉಪಯೋಗಿಸುವ ಅತಿ ದುಷ್ಟ ಅಪರಾಧಿಗಳ ಒಂದು ಗುಂಪು" ಎಂಬಂತೆ ನೋಡುತ್ತಾರೆ. ಔಷಧ ಸಮಸ್ಯೆಯು ಆಗಿಂದಾಗ್ಗೆ ಬರುವ ರೋಗದ ಬಗ್ಗೆ ಹೆಚ್ಚಿನ ವರ್ತಮಾನ ನೀಡಬಲ್ಲುದೆ ಎಂಬುದನ್ನು ಅರಿಯುವಲ್ಲಿ ಅಯಶಸ್ವಿಯಾಗಿದೆ. ಒಂದೇ ಬಗೆಯ ಔಷಧ ಸಮಸ್ಯೆ ಹಾಗೂ ಒಂದೇ ಬಗೆಯ ಔಷಧೋಪಯೋಗಿ ಇವೆಯೆಂಬುದು ಇನ್ನೊಂದು ಮಿಥ್ಯ ಕಲ್ಪನೆಯಾಗಿದೆ. ವಾಸ್ತವವಾಗಿ ಇಲ್ಲಿ ಕನಿಷ್ಠವೆಂದರೆ ಎರಡು ಸಾಮಾನ್ಯ ಬಗೆಗಳ ಔಷಧೋಪಯೋಗಿಗಳು ಹಾಗೂ ಎರಡು ಔಷಧ ಸಮಸ್ಯೆಗಳು ಕಂಡು ಬರುತ್ತವೆ. "ವಿಸ್ಮೃತಿ ಅನ್ವೇಷಣೆಕಾರರು" ಮತ್ತು "ಅನುಭೋಗ—ಅನ್ವೇಷಣೆಕಾರರು" ಎಂದು ಔಷಧ ದುರುಪಯೋಗಿಗಳಲ್ಲಿ ಎರಡು ಬಗೆಗಳಿವೆ. ಕೊನೆಯವರು ಸಾಮಾನ್ಯವಾಗಿ ಯುವಕರಾಗಿದ್ದು ಮಧ್ಯಮ ಹಾಗೂ ಮೇಲ್ವರ್ಗದ ಗುಂಪುಗಳಿಂದ ಬಂದಿರುತ್ತಾರಲ್ಲದೆ ತಮ್ಮ ಸಂಸ್ಕೃತಿಯ ವಿರುದ್ಧ ಬಂಡೇಳುವ ಪ್ರವೃತ್ತಿಯುವರಾಗಿರುತ್ತಾರೆ. ಮೊದಲನೆಯ ವರ್ಗದವರು ಹೆಚ್ಚು ಪ್ರಮಾಣದಲ್ಲಿ ಬಡಜನರಾಗಿದ್ದು ಇವರ ಔಷಧ ಉಪಯೋಗವು ಸಾಮಾಜಿಕ ಪದಚ್ಯುತಿಗೆ ಒಂದು ಪ್ರತಿಕ್ರಿಯೆಯಾಗಿರುತ್ತದೆ. ಮರ್ಟನ್ನನ ಪದಗಳಲ್ಲಿ ಹೇಳುವುದಾದರೆ ಒಂದು ವರ್ಗ ಬಂಡುಕೋರರಾಗಿದ್ದರೆ ಇನ್ನೊಂದು ವರ್ಗದ ಜನರು ಹಿಮ್ಮೆಟ್ಟುವವರಾಗಿರುತ್ತಾರೆ.

ಈ ಕ್ಷೇತ್ರದಲ್ಲಿ ಪದೇ ಪದೇ ಚರ್ಚೆಗೊಳಗಾಗುವ ಒಂದು ವಿಚಾರವೆಂದರೆ ಅಪರಾಧ ಮತ್ತು ಔಷಧಗಳ ನಡುವಣ ಅನ್ಯೋನ್ಯತೆ. ಮಾದಕವಸ್ತುಗಳ ಚಟಕ್ಕೆ ಬಲಿಬಿದ್ದ ವ್ಯಕ್ತಿಯು ತನ್ನ ಹವ್ಯಾಸವನ್ನು ಮುಂದುವರಿಸಲು ವೆಚ್ಚದ ಪ್ರಸಂಗ ಉದ್ಭವಿಸುವುದರಿಂದ ಆತನು ಆಸ್ತಿ ದರೋಡೆ ಅಥವಾ ಹಣ ಕದಿಯುವಿಕೆಯಲ್ಲಿ ತೊಡಗುವುದು ಅನಿವಾರ್ಯ ಎಂದು ಊಹಿಸಲಾಗಿದೆ. ಆದರೆ ಇಲ್ಲಿ ಯಾವುದು

ಮೊದಲು ಬರುತ್ತದೆ—ಔಷಧ ಉಪಯೋಗಿಗಳು ಅಪರಾಧ ಚಟುವಟಿಕೆಗಳಿಗೆ ಮರಳುತ್ತಾರೆಯೇ ? ಅಥವಾ ಅಪರಾಧಿಗಳು ಔಷಧಗಳ ಮೊರೆ ಹೋಗುತ್ತಾರೆಯೇ? ಔಷಧ ದುರುಪಯೋಗ ಮಾಡಿದ ವ್ಯಕ್ತಿಗಳಲ್ಲಿ ಶೇಕಡಾ 70ಕ್ಕಿಂತ ಹೆಚ್ಚು ಮಂದಿ, ಅವರು ಔಷಧಗಳ ಮೊರೆ ಹೋಗುವುದಕ್ಕೆ ಮೊದಲೇ ಅಪರಾಧ ದಾಖಲೆಗಳನ್ನು ಹೊಂದಿದ್ದರೆಂದು ಕಂಡುಬಂದಿದೆ.

ಮೂರು ದೃಷ್ಟಿಕೋನಗಳು

ಔಷಧ ಸಮಸ್ಯೆಯ ಮೂರು ದೃಷ್ಟಿಕೋನಗಳನ್ನು ಇಲ್ಲಿ ಮಂಡಿಸಲಾಗಿದೆ. ಪ್ರತಿ ಲೇಖಕನೂ ಸಮಸ್ಯೆಯನ್ನು ವಿಭಿನ್ನ ಮಾರ್ಗದಲ್ಲಿ ವ್ಯಾಖ್ಯಾನ ಮಾಡಿರುವುದಲ್ಲದೆ, ಪ್ರತಿಯೊಬ್ಬನೂ ವಿಭಿನ್ನ ಕಾರಣಗಳನ್ನೂ ಇತರ ಪರ್ಯಾಯ ಪರಿಹಾರಗಳನ್ನೂ ಸೂಚಿಸುತ್ತಾನೆ. ವಿಲ್ಸನ್ ಮತ್ತು ಅವರ ಅನುಯಾಯಿಗಳು ಹೆರಾಯಿನ್ ಉಪಯೋಗಿಸುವ ಕೆಳವರ್ಗದ ಪ್ರಕರಣದಲ್ಲಿ ವ್ಯಕ್ತಿಯ ವೈಯುಕ್ತಿಕ ಔಷಧ ಬಳಕೆಯ ಬಗ್ಗೆ ತಮ್ಮ ಗಮನ ಕೇಂದ್ರೀಕರಿಸಿದರು. ಡ್ಯುಮೂಂಟ್‌ರವರು ಮಾರಿಜುಆನ, ಬಾರ್ಬಿಟುರೇಟ್ಸ್ ಹಾಗೂ ಎಲ್. ಎಸ್. ಡಿ. ಯನ್ನು ಉಪಯೋಗಿಸುವ ತರುಣ ಪೀಳಿಗೆಯ ಅನುಭೋಗ ಮತ್ತು ಅನ್ವೇಷಣೆಕಾರರನ್ನು ಪರೀಕ್ಷಿಸಿದರು. ಬರ್ನ್‌ಸ್ಟೈಯಿನ್ ಮತ್ತು ಲೆನ್ನಾರ್ಡ್‌ರವರು ವೈದ್ಯರುಗಳು ಹಾಗೂ ವೈದ್ಯಕೀಯ ಮತ್ತು ಔಷಧ ಸಂಗ್ರಹಾಲಯ ಉದ್ಯಮಗಳ ಬಗ್ಗೆ ತಮ್ಮ ಗಮನ ಕೇಂದ್ರೀಕರಿಸಿದರು.

ವಿಲ್ಸನ್ ಮೂರ್ ಮತ್ತು ವೀಟ್‌ರವರು ಹೆರಾಯಿನ್, ಹೆರಾಯಿನ್ ಚಟಕ್ಕೆ ಬಲಿಬಿದ್ದ ವ್ಯಕ್ತಿ ಮತ್ತು ಹೆರಾಯಿನ್ ಸಮಸ್ಯೆಯೊಂದಿಗೆ ಮಿಳಿತವಾಗಿರುವ ಚತುರೋಪಾಯಗಳನ್ನು ಕುರಿತು ಚರ್ಚಿಸಿದರು. ಇವರುಗಳ ಪ್ರಮುಖ ಶಿಫಾರಸು ಎಂದರೆ ಬಲವಂತ ಶಾಸನ ನೀತಿಯ ಜಾರಿ. ಇವರು ವೈದ್ಯಕೀಯ ಮಾರ್ಗಗಳನ್ನು ಖಂಡಿಸದಿದ್ದರೂ ಕೂಡ, ಪರಿಣಾಮಕಾರಿ ಕಾನೂನನ್ನು ಒತ್ತಾಯಪೂರ್ವಕವಾಗಿ ಜಾರಿಮಾಡಿದ ಹೊರತು ಹೆರಾಯಿನ್ ಬಳಕೆಯ ನೈಜಸಮಸ್ಯೆಯು ಪರಿಣಾಮಕಾರಿಯಾಗಿ ಪರಿಣಮಿಸುವುದಿಲ್ಲವೆಂದು ಅವರು ಭಾವಿಸಿದ್ದರು. ಇವರುಗಳಿಗೆ ಶಿಕ್ಷೆಯ ಮೂಲಕ ವಿಧಿಸುವ ಪರಿಹಾರದ ಯಾವುದೇ ಸಲಹೆಯನ್ನು ಅವರು ತಿರಸ್ಕರಿಸಿದ್ದರು. ಹೆರಾಯಿನ್ ಬಳಕೆ ಮತ್ತು ಚಟಕ್ಕೆ ಒಳಗಾದ ವ್ಯಕ್ತಿಗಳ ದರ ಪ್ರಮಾಣಗಳು ಬಂಧನ ಮತ್ತು ಶಿಕ್ಷೆಯ ನಿರ್ದಿಷ್ಟತೆ ಮತ್ತು ಪರಮಾಧಿಕಾರಕ್ಕೆ ನೇರವಾಗಿ ಸಂಬಂಧಿಸಿದ್ದವೆಂಬುದನ್ನು ತಾವು ಪಡೆದುಕೊಂಡ ವಾಸ್ತವಾಶಂಗಳನ್ನು ಆಧರಿಸಿದ ಪ್ರದರ್ಶನಗಳಿಂದ ಮನಗಂಡಿದ್ದರು. ಮಾದಕವಸ್ತು ಸೇವನೆಯನ್ನು ವಿವರಿಸಲು ತಾವು ಯಾವುದೇ ನಿಖರ ಸಿದ್ಧಾಂತವನ್ನು ಹೊಂದಿರುವುದಿಲ್ಲವೆಂದೂ, ಆದರೆ ಹೆರಾಯಿನ್ ಬಳಕೆಯನ್ನು ವಿವರಿಸಬಲ್ಲ ಒಂದು 'ನೆರೆಹೊರೆ- ಗುಂಪಿನ ಅಂಟು

ಜಾಡ್ಯ' ಮಾದರಿಯನ್ನು ಬಯಸುವುದಾಗಿಯೂ ಅವರು ವಾದಿಸಿದ್ದಾರೆ. ಒಬ್ಬ ವ್ಯಕ್ತಿಯು ಹೆರಾಯಿನ್ನನ್ನು ಬಳಸಿದಾಗ ಅದರ ತೀವ್ರತೆಯು ಆತನ ಮನಸ್ಸು ಮತ್ತು ಶರೀರವನ್ನು ಉದ್ರೇಕಗೊಳಿಸುವುದರಿಂದ ಆತನು ಈ ಹೊಸ ಅನುಭವ ಹೊಂದಲು ತನ್ನ ಸ್ನೇಹಿತರನ್ನು ಸೆಳೆಯುವ ಪ್ರಯತ್ನಗಳನ್ನು ಮಾಡುವುದರಿಂದ ಹೆರಾಯಿನ್ ಬಳಕೆಯು ಅತ್ಯಂತ ಸುಖಾನುಭವವನ್ನು ತಂದುಕೊಡುವುದು. ಹೀಗೆ ಆತನು ತನ್ನ ನೆರೆಹೊರೆಯವರಿಗೆ ಅಂಟಿಸುವುದು ಮಾತ್ರವಲ್ಲದೇ ಅವರೂ ಸಹ ಸಾಂಕ್ರಾಮಿಕವಾಗುವ ಪ್ರಮಾಣಗಳನ್ನು ಮುಟ್ಟುವ ತನಕ ಹೆರಾಯಿನ್ ಬಳಕೆಯ ಪ್ರತಿಕ್ರಿಯೆಯನ್ನು ಮುಂದುವರಿಸುತ್ತಾರೆ. ಔಷಧವಸ್ತುಗಳ ದುರುಪಯೋಗವು ಒಂದು ರೀತಿಯಲ್ಲಿ ಅಪರಾಧವೂ ಇನ್ನೊಂದು ರೀತಿಯಲ್ಲಿ ವೈದ್ಯಕೀಯ ಸಮಸ್ಯೆಯೂ ಆಗಿರುತ್ತದೆ.

ಡ್ಯೂಮಾಂಟ್‌ರವರು ತರುಣ ಪೀಳಿಗೆಯ ಔಷಧ ವಸ್ತುಗಳನ್ನು ಬಳಸುವ ಬಗ್ಗೆ ಇರುವ ನಾಲ್ಕು ಕಾರಣಗಳನ್ನು ಸೂಚಿಸಿದ್ದಾರೆ. ಸುಖಾನುಭವ, ತಮ್ಮ ಪರಿಸರದಲ್ಲಿನ ಜಡತನ, ತಮ್ಮ ಹಿರಿಯರ ಪ್ರಭಾವ, ಶ್ರೀಮಂತ ಗುಂಪಿನ ಒತ್ತಡ–ಇವೇ ಆ ನಾಲ್ಕು ಕಾರಣಗಳು. ಅವರು ವ್ಯಕ್ತಿಯಲ್ಲಿ ಕಂಡುಬರುವ ಚಿಹ್ನೆಗಳು ಆತನು, ಔಷಧ ವಸ್ತುಗಳನ್ನು ಬಳಸಲು ಒಲವನ್ನು ತೋರುತ್ತವೆ ಅಥವಾ ಕಾರಣವಾಗುತ್ತವೆ ಎಂಬುದಾಗಿ ಸಲಹೆಮಾಡಿರಲಿಲ್ಲ. ಅವರು ನಿಯೋಜಿಸಿರುವಂತೆ, ತನ್ನ ಬದುಕನ್ನು ಉತ್ತೇಜನಗೊಳಿಸಲು, ಆಸಕ್ತಿಯುತವನ್ನಾಗಿ ಮಾಡಲು ಇತರೆ ಯಾವ ಸವಲತ್ತುಗಳೂ ಲಭ್ಯವಾಗಿರುವುದಿಲ್ಲದೆ ಬುದ್ಧಿ ವಿಕಲ್ಪಗೊಂಡ ತರುಣ, ಔಷಧೋಪಯೋಗಿಯ ಪ್ರತೀಕವಾಗಿರುತ್ತಾನೆ. ಇಂತಹ ವ್ಯಕ್ತಿಗಳು ಬದುಕಿನಲ್ಲಿ ಬೋರು ಹೊಡೆಸಿಕೊಂಡವರೂ, ನಿರ್ಲಕ್ಷ್ಯಕ್ಕೊಳಗಾದವರೂ, ವಾತಾವರಣ ಪ್ರಭಾವಗಳಿಂದ ಬೇಸತ್ತವರೂ ಆಗಿರುತ್ತಾರೆ. ಕಾನೂನು ಕ್ರಮ ಅಥವಾ ವೈದ್ಯಕೀಯ ಚಿಕಿತ್ಸೆಯು ಕೆಲವು ಔಷಧೋಪಯೋಗಿಗಳನ್ನು ಬೇರ್ಪಡಿಸಬಹುದು ಅಥವಾ ಗುಣಪಡಿಸಬಹುದಾದರೂ ಸಮಸ್ಯೆಯನ್ನು ಬೇರುಸಹಿತ ಕಿತ್ತು ಹಾಕಲು ಸಾಧ್ಯವಾಗದಿರುವುದು ನಮ್ಮ ಸಮಾಜದ ವಿಫಲತೆಗಳಲ್ಲಿ ಒಂದಾಗಿದೆ. ಈ ವಿಫಲತೆಯು ನಾವು ಏನು ಮಾಡಿದ್ದೇವೆ ಮತ್ತು ನಾವು ಏನು ಮಾಡಿಲ್ಲ ಈ ಎರಡೂ ಅಂಶಗಳನ್ನು ಒಳಗೊಳ್ಳುತ್ತದೆ. ಔಷಧ ಉಪಯೋಗವು ಒಳ್ಳೆಯ ಬದುಕಿಗೆ ಒಂದು ಸಹಜವಾದ ಹಾಗೂ ನೈಜಮಾರ್ಗವೆಂದು ಹೇಳುವಂತಹ ಒಂದು ಸಾಂಸ್ಕೃತಿಕ ವ್ಯಾಖ್ಯೆಯನ್ನು ನಾವು ಯುವಜನರಿಗೆ ನೀಡುತ್ತೇವೆ. ಇವರ ಶರೀರಗಳಲ್ಲಾಗುವ ಅನುಭವ ಮತ್ತು ಇವರ ಭಾವನೆಗಳಲ್ಲಾಗುವ ತಾಕಲಾಟವನ್ನು ಪ್ರದರ್ಶಿಸಲು ಪರ್ಯಾಯ ಸೌಲಭ್ಯಗಳನ್ನು ನಾವು ಅವರಿಗೆ ಒದಗಿಸುವುದಿಲ್ಲ ಮಾತ್ರವಲ್ಲ; ಇದರಿಂದ ಅವರ ಸುತ್ತಲಿನ ಸ್ವಾಭಾವಿಕ ಹಾಗೂ ಸಾಮಾಜಿಕ ಪ್ರಪಂಚಗಳೊಂದಿಗೆ ಒಡನಾಟಕ್ಕೂ ಆಸ್ಪದವಿರುವುದಿಲ್ಲ. ಆಗ, ತರುಣ ಪೀಳಿಗೆಯ ಔಷಧ ಸೇವನೆಯು ಅವಶ್ಯವಾಗಿಯೂ ಸ್ವಾಭಾವಿಕ

ಪ್ರಪಂಚ ಹಾಗೂ ಆಧುನಿಕ ಸಮಾಜಗಳಿಂದ ಬೇರ್ಪಟ್ಟು ಪರಾಧೀನತೆಯು ಒಂದು ಚಿಹ್ನೆಯಾಗಿ ಪರಿಣಮಿಸುತ್ತದೆ.

ಬರ್ನ್‌ಸ್ಟೈಯಿನ್ ಮತ್ತು ಲೆನ್ನಾರ್ಡ್‌ರವರು 'ಔಷಧ ಉತ್ಪಾದಕರುಗಳು ಹಾಗೂ ಸಾಂಸ್ಥಿಕ ಔಷಧವಸ್ತುಗಳ' ಪ್ರಚೋದಕರು, ಅಂದರೆ ಔಷಧ ಸಂಗ್ರಹಾಲಯುಗಳು ಮತ್ತು ವೈದ್ಯಕೀಯ ವ್ಯವಸ್ಥೆಗಳ ಬಗ್ಗೆ ಇರಿಸಿಕೊಂಡಷ್ಟು ಆಸಕ್ತಿಯನ್ನು ಔಷಧೋಪಯೋಗಿಯು ಮೇಲೆ ಇರಿಸಿಕೊಂಡಿರಲಿಲ್ಲ. ಔಷಧ ಸಮಸ್ಯೆಯು ಕೇವಲ ಕಾನೂನು ಬಾಹಿರ ಔಷಧಗಳ ಒಂದು ಸಮಸ್ಯೆ ಮಾತ್ರವಾಗಿರದೆ ಕಾನೂನುಬದ್ಧ ಔಷಧಗಳ ಸಮಸ್ಯೆಯೂ ಆಗಿರುತ್ತದೆ. ಇಂದು ನಮ್ಮ ಇಡೀ ಸಮಾಜವೇ ಔಷಧೋಲ್ಲಾಸಮಯವಾಗಿದೆ. ದೃಢೀಕರಣಕ್ಕೆ ಔಷಧ ಬಳಕೆ ಒಂದು ಉದಾಹರಣೆ ಮಾತ್ರ. ಹೆಚ್ಚಿನ ಉಪಯೋಗಿಗಳು ವೈದ್ಯರು ಬರೆದು ಕೊಡುವ ಚೀಟಿಗಳಿಂದಲೋ ಅಥವಾ ಯಾವುದೇ ಒಂದು ಔಷಧ ಅಂಗಡಿಯಲ್ಲಿ ಕೊಳ್ಳುವ ಮೂಲಕವೋ ಔಷಧಗಳ ಗಾಳಕ್ಕೆ ಸಿಲುಕಿಕೊಳ್ಳುತ್ತಾರೆ. ಒಂದು ದ್ರಾವಣದ ಮೂಲಕವಾಗಲಿ ಅಥವಾ ಒಂದು ಸರಿಯಾದ ಮಾತ್ರೆಯ ಮೂಲಕವಾಗಲಿ ಒಂದು ಮಾನವ ಜೀವಿಯಲ್ಲಿ ಕಂಡು ಬರುವ ತೊಂದರೆಯೂ ಕಡಿಮೆಯಾಗುವಂತಿರುವಾಗ ಅಥವಾ ಪೂರ್ತಿ ನಿವಾರಣೆಯಾಗುವಂತಿರುವಾಗ ಆ ಸಲಹೆಯ ಅನ್ವಯವಾಗಿ ವಾಸ್ತವಿಕತೆಯ ಒಂದು ಸಾಂಸ್ಕೃತಿಕ ವ್ಯಾಖ್ಯೆಯನ್ನು ಅವರು ಸಹಜವಾಗಿಯೇ ಅನುಸರಿಸುತ್ತಾರೆ. ಹೀಗಾಗಿ ದೈನಂದಿನ ಜೀವನವೇ ಒಂದು ವೈದ್ಯಕೀಯ ಸಮಸ್ಯೆಯಾಗಿ ಪರಿಣಮಿಸಿದೆ. ಆಗ ಪ್ರಮುಖ ಔಷಧ ಸಮಸ್ಯೆಯು ಅಸಂಗತ ನಡವಳಿಕೆ ಮಾತ್ರವಾಗಿರದೆ ಸುಸಂಗತ ನಡವಳಿಕೆಯಾಗಿರಲಿಕ್ಕೂ ಸಾಧ್ಯವಿದೆ. ಸಾಮಾಜಿಕವಾಗಿ ಗುಂಪುಗಳ ನಡುವೆ ಪ್ರಸರಿಸಿರುವ ಔಷಧ ಸಮಸ್ಯೆಯು ಅಮೆರಿಕನ್ ಜೀವನ ಮಾರ್ಗವನ್ನು ಹೆಚ್ಚು ನಿಕಟವಾಗಿ ಅನುಸರಿಸುವುದಲ್ಲದೇ ಅಮೆರಿಕನ್ನರ ಕನಸುಗಳ ಈಡೇರುವಿಕೆಯನ್ನು ಉತ್ತೇಜಿಸುತ್ತದೆ. ಇದರಿಂದ ಅಮೆರಿಕನ್ ಅನುಭವದ ಅತ್ಯಂತ ಮಧ್ಯಭಾಗದಿಂದ ಹೊರಟಿರುವ ಔಷಧ ಸಮಸ್ಯೆಯು ನಮ್ಮ ಪ್ರೇರಣೆಗಳನ್ನು ನಡೆಸಿಕೊಂಡು ಹೋಗುವ ಮಾರ್ಗದಲ್ಲಿ ಅಂತರ್ಭೂತವಾಗಿರುತ್ತದೆ ಎಂಬುದರ ಅರಿವಾಗುತ್ತದೆ.

ಬರ್ನ್‌ಸ್ಟೈಯಿನ್ ಮತ್ತು ಲೆನ್ನಾರ್ಡ್‌ರವರು, ಕಾನೂನುಬದ್ಧ ಔಷಧವಸ್ತುಗಳು ಕೆಟ್ಟದಾಗಿರುವ ವ್ಯಕ್ತಿಗತವಾದ ಪ್ರತಿಫಲಿತ ಪರಿಣಾಮಗಳನ್ನು ಹೊಂದಿದ್ದಾಗ್ಯೂ ಸಹ, ಅವುಗಳ ಸಾಮಾಜಿಕ ಪ್ರತಿಫಲಿತ ಪರಿಣಾಮಗಳು ಕ್ವಚಿತ್ತಾಗಿಯಾದರೂ ಮಾನ್ಯತೆಗಳಿಸುತ್ತವೆಂದು ಹೇಳುತ್ತಾರೆ. ಮನೆಯಲ್ಲಾಗಲಿ, ಒಂದು ಆಸ್ಪತ್ರೆಯಲ್ಲಾಗಲಿ, ವೈದ್ಯರ ಕಛೇರಿಯಲ್ಲಾಗಲಿ ಅಥವಾ ಒಂದು ಸೆರೆಮನೆಯಲ್ಲೇ ಆಗಲಿ ಬಳಕೆಯಾದರೂ, ಕಾನೂನುಬದ್ಧ ಔಷಧವಸ್ತುಗಳು ಮತ್ತೆ ಸಾಮಾಜಿಕ ನಿಯಂತ್ರಣದ ಮಾಧ್ಯಮಗಳಾಗಿರುತ್ತವೆ. ಇವು ವ್ಯಕ್ತಿಗಳು ಸಾಮಾಜಿಕ ವ್ಯವಸ್ಥೆಯಿಂದ ಸಿಡಿದು ಹೊರಬರುವುದನ್ನು ತಪ್ಪಿಸುತ್ತವೆ. ಈ ಪ್ರತಿಕ್ರಿಯೆಯಲ್ಲಿ ಔಷಧ ವಸ್ತುಗಳು ಗುಂಪು

ಗಳು ಮತ್ತು ಸಂಸ್ಥೆಗಳು ಆರೋಗ್ಯಕರವಾಗಿರುವ ದೃಷ್ಟಿಯಿಂದ ಪರಿವರ್ತನೆಗಳನ್ನು ತಪ್ಪಿಸುವ ಮೂಲಕ ಅವುಗಳನ್ನು ಬಲಪಡಿಸಬಹುದು. ಕಾನೂನುಬದ್ಧ ಔಷಧ ವಸ್ತುಗಳು ಸಾಮಾಜಿಕ ಸಮಸ್ಯೆಗಳಿಗೆ ಒಂದು ಸರಳ ಪರಿಹಾರವೆಂಬಂತೆ ಕೆಲವು ವೃತ್ತಿನಿರತರು ಅವಲೋಕಿಸಿದ್ದಾರೆ. ಲೇಖಕರು, ತಾವು ಕರೆದಿರುವ 'ಮಾನವ ಪರಿಸ್ಥಿತಿಯ ವೈದ್ಯಕೀಕರಣ'ವನ್ನು ಪ್ರೋತ್ಸಾಹಿಸುವ ಮಾಧ್ಯಮವಾಗಿರುವ ಚಿಕಿತ್ಸಾ ಕ್ರಮ ಹಾಗೂ ಔಷಧ ವೈದ್ಯಶಾಸ್ತ್ರ ಕ್ಷೇತ್ರಗಳನ್ನು ಕಟುವಾಗಿ ಟೀಕಿಸುತ್ತಾರೆ. ಎಲ್ಲಾ ವೈಯಕ್ತಿಕ ಮತ್ತು ಸಾಮಾಜಿಕ ಸಮಸ್ಯೆಗಳನ್ನು ವೈದ್ಯಕೀಯ ಸಮಸ್ಯೆಗಳೆಂಬಂತೆ ನಡೆಸಿಕೊಳ್ಳಬೇಕೆನ್ನುವ ನಂಬಿಕೆ ಹಾಸ್ಯಾಸ್ಪದವೆಂದು ಇವರು ವಾದಿಸುತ್ತಾರೆ. ಸಮಸ್ಯೆಗಳನ್ನು ಪರಿಹರಿಸಬೇಕೆನ್ನುವುದಕ್ಕಿಂತ ಹೆಚ್ಚಾಗಿ ವೈದ್ಯರು ಅವುಗಳನ್ನು ಸ್ಪಷ್ಟವಾಗಿ ಗ್ರಹಿಸಿರುವುದಿಲ್ಲವಾದ್ದರಿಂದ, ಔಷಧವಸ್ತುಗಳು ಸಾಮಾಜಿಕ ಸಮಸ್ಯೆಗಳನ್ನು ಹುಟ್ಟುಹಾಕುವ ಸಂಸ್ಥೆಗಳನ್ನು ಶಾಶ್ವತಗೊಳಿಸುತ್ತವೆ. ಪ್ರಸ್ತುತ ವ್ಯವಸ್ಥೆಯು ಔಷಧಗಳನ್ನು ಸೃಷ್ಟಿಸುವ ಮತ್ತು ಅವುಗಳನ್ನು ಸಮಾಜ ಶರೀರದುದ್ದಕ್ಕೂ ಚಲಿಸುವಂತೆ ಮಾಡುವುದಲ್ಲದೆ ಈ ವ್ಯವಸ್ಥೆಯನ್ನು ಮಾನವೀಯ ಸಮಸ್ಯೆಗಳನ್ನು ವೈದ್ಯಕೀಯ ಹಾಗೂ ತಂತ್ರಜ್ಞಾನ ಬದ್ಧ ಕಲ್ಪನೆಯೊಂದಿಗೆ ಸಜ್ಜುಗೊಳಿಸುವ ವ್ಯಕ್ತಿಗಳೇ ವ್ಯಾಖ್ಯಾನಮಾಡಬಲ್ಲರು ಹಾಗೂ ನಿಯಂತ್ರಿಸಬಲ್ಲರೆಂದು ಬರ್ನ್‌ಸ್ಟೈಯಿನ್ ಮತ್ತು ಲೆನ್ನಾರ್ಡ್‌ರವರು ನಂಬಿದ್ದಾರೆ. ಅವರು ವ್ಯಕ್ತಿ ಮತ್ತು ಸಮಾಜದ ಆಸಕ್ತಿಗಳಷ್ಟೇ ಸ್ವಹಿತಾಸಕ್ತಿಯಿಂದಲೂ ಪ್ರೇರಿತರಾಗಿರುತ್ತಾರೆ. ಆದ್ದರಿಂದ ಅಲ್ಲಿ ಔಷಧ ಸಮಸ್ಯೆಯು ಏಕಮಾತ್ರ ಪ್ರತೀಕವೆಂದು ಹೇಳಲಾಗುವುದಿಲ್ಲ. ಇದರ ಮಹತ್ವವು ಔಷಧೋಪಯೋಗಿ (ವೈದ್ಯನ ರೋಗಿ ಅಥವಾ ಮತ್ತಿಗೊಳಗಾದ ವ್ಯಕ್ತಿಯಿರಬಹುದು), ಪ್ರಚೋದಕ (ಕೈಚೀಲ ಪ್ರತಿನಿಧಿ ಅಥವಾ ವೈದ್ಯ ಇರಬಹುದು), ವಿತರಕ (ವ್ಯವಸ್ಥಿತ ಅಪರಾಧಿ ಮತ್ತು ಔಷಧ ಅಂಗಡಿ ಮಾಲೀಕ ಇರಬಹುದು), ಉತ್ಪಾದಕ (ವಿದೇಶಿ ರಾಷ್ಟ್ರಗಳು ಅಥವಾ ಔಷಧ ಸಂಗ್ರಹಾಲಯ ಕಂಪನಿಗಳು ಇರಬಹುದು), ಅಥವಾ ಸಾಮಾಜಿಕ ಸಾಂಸ್ಕೃತಿಕ ಆಯಾಮಗಳ ಮೇಲೆ (ಸಾಂಸ್ಕೃತಿಕ ವಾಖ್ಯೆಗಳು ಮತ್ತು ಸಾಮಾಜಿಕ ಸಂಸ್ಥೆಗಳು) ಅವಲಂಬಿತವಾಗಿರುವುದರಿಂದ ಇವೆಲ್ಲವೂ ಔಷಧಗಳ ಉಪಯೋಗ ಮತ್ತು ದುರುಪಯೋಗಗಳಿಗೆ ದೊರಕುವ ಪ್ರೋತ್ಸಾಹದ ವ್ಯಾಪ್ತಿಯಲ್ಲಿ ಅಡಗಿರುತ್ತದೆ.

ಭಾರತದಲ್ಲಿ :

ಪ್ರಾಚೀನ ಸಮಾಜಗಳು ಮಾದಕ ಪಾನೀಯಗಳೊಂದಿಗೆ ನಿಕಟವಾಗಿ ವಿಳಿತಗೊಂಡಿದ್ದವಲ್ಲದೆ ಧಾನ್ಯಗಳಿಂದ ತಯಾರು ಮಾಡಿದ ಮತ್ತು ಬರುವ ಸಾರಾಯಿಯನ್ನು ಗೃಹ ಬಳಕೆ ಪಾನೀಯವಾಗಿ ಬಳಸುವ ಪ್ರಕ್ರಿಯೆ ಇತ್ತು ಎಂಬುದು ಬೆಬಿಲೋನಿಯನ್ ದಾಖಲೆಗಳಿಂದ ಸಂಗ್ರಹಗೊಂಡ ವರದಿಗಳಿಂದ ತಿಳಿದುಬರುತ್ತವೆ.

ಎಂಟು ಅಥವಾ ಒಂಬತ್ತನೆಯ ಶತಮಾನದವರೆಗೆ ಮಾದಕ ಪಾನೀಯಗಳ ಬಳಕೆ ಒಂದು ಬಗೆಯ ಅನಿಶ್ಚಿತ ಪರಿಸ್ಥಿತಿಯಲ್ಲಿದ್ದಿತು. ಈ ಕಂದು ಎಲೆಗಳ ಔಷಧವು ಒಂದು ಬಗೆಯ ಉಪಶಾಮಕ ಪರಿಣಾಮವನ್ನು ಉತ್ಪತ್ತಿ ಮಾಡುತ್ತಿತ್ತಲ್ಲದೆ ಸುಂದರ ಕನಸುಗಳು ಹಾಗೂ ವಿಸ್ಮೃತಿ ರೂಪದಲ್ಲಿ ಬೇರೊಂದು ಲೋಕಕ್ಕೆ ಕೊಂಡೊಯ್ಯುತ್ತಿದ್ದಿತು. ಭಾರತದಲ್ಲಿ 9ನೇ ಶತಮಾನದ ಮಧ್ಯಭಾಗದಲ್ಲಿ ಅಫೀಮು ಬಹುಶಃ ಮುಸ್ಲಿಂ ವರ್ತಕರಿಂದ ಪರಿಚಯಿಸಲ್ಪಟ್ಟಿತೆಂದು ತಿಳಿದುಬರುತ್ತದೆ. ಮೊಘಲರ ಆಳ್ವಿಕೆಯ ಕಾಲಾವಧಿಯಲ್ಲಿ ಮಾದಕ ಪಾನೀಯಗಳು, ಅಫೀಮು ಪದಾರ್ಥಗಳು ಮತ್ತು ಕಂದು ಎಲೆಗಳ ಔಷಧಗಳು ಸ್ವತಂತ್ರ ರೀತಿಯಲ್ಲಿ ಕಾರ್ಯನಿರತವಾಗಿದ್ದವು. ಅಕ್ಬರನ ಕಾಲದಲ್ಲಿ ಮದ್ಯ, ಅಫೀಮು ಭಾರತೀಯ ಕಂದು ಎಲೆಗಳು ಮತ್ತು ಗಸಗಸೆ ಸಸ್ಯಜಾತಿಯ ಬೀಜಕೋಶಗಳನ್ನೊಳಗೊಂಡ ಪಾನೀಯವನ್ನು ಶ್ರೀಮಂತ ವರ್ಗದ ಜನರು ಸೇವಿಸುತ್ತಿದ್ದರೆಂದು ದಾಖಲೆಗಳಿಂದ ತಿಳಿದು ಬರುತ್ತದೆ. ಅಫೀಮು ತನ್ನ ತೀವ್ರ ರೀತಿಯ ಪರಿಣಾಮವನ್ನು ಉಂಟುಮಾಡಿದುದರ ಫಲವಾಗಿ ಬಹುಬೇಗನೆ ಜನಪ್ರಿಯಗೊಂಡಿತಲ್ಲದೆ, ಗಸಗಸೆ ಸಸ್ಯಜಾತಿಗಳ ವ್ಯವಸಾಯ ಅಭ್ಯಾಸವು ತ್ವರಿತಗತಿಯಲ್ಲಿ ಮುಂದುವರೆಯಿತು. ಜಹಾಂಗೀರ್ ಚಕ್ರವರ್ತಿಯು ಬ್ರೆಡ್ ಮತ್ತು ಅಕ್ಕಿಯಿಂದ ತಯಾರುಮಾಡಿದ ದೇಶೀಯ ಮಾದರಿಯ ವಿಶೇಷ ಅಮಲು ಪದಾರ್ಥವನ್ನು ಭಂಗಿ ಸೊಪ್ಪಿನಿಂದ ಮಿಶ್ರಗೊಳಿಸುವ ಮೂಲಕ ಆಂಗ್ಲರ ವೈನ್ ಪಾನೀಯಗಳೊಂದಿಗೆ ಸೇವಿಸುವುದನ್ನು ನಿರ್ದಿಷ್ಟವಾಗಿ ಕಂಡುಕೊಂಡಿದ್ದನು. ಹಿಂದೂ ಮಹಾರಾಜರುಗಳು ಹೋಳಿ, ದೀಪಾವಳಿ, ದಸರಾ ಇತ್ಯಾದಿ ಹಬ್ಬ ಸಮಾರಂಭಗಳಲ್ಲಿ ವಿಶೇಷವಾಗಿ ಅಫೀಮಿನಿಂದ ತಯಾರಿಸಿದ ದ್ರಾವಣವಾದ 'ಕಾಸುಂಬ' ಪಾನೀಯವನ್ನು ಕುಡಿದು ಸಂತೋಷಿಸುತ್ತಿದ್ದರು. ಅವರು ದಾಸಿಯರಿಂದ ಸುತ್ತುವರೆಯಲ್ಪಟ್ಟು ಉಲ್ಲಾಸಕರವಾದ ನರ್ತನ ಮತ್ತು ಸಂಗೀತ ವಾತಾವರಣದಲ್ಲಿ ಪಾನೀಯ ಸೇವನೆಯಲ್ಲಿ ಆನಂದಿತರಾಗುತ್ತಿದ್ದರು...ಹೇಗೆ ಇದ್ದರೂ, ಹಿಂದೂ ಮತ್ತು ಮುಸಲ್ಮಾನರ ಆಡಳಿತಗಳ ಕಾಲಾವಧಿಯುದ್ದಕ್ಕೂ ಜನಸಮೂಹವು ಸಾಮಾನ್ಯವಾಗಿ ಕುಡಿತ ಮತ್ತು ಮಾದಕ ವಸ್ತುಗಳ ಹಿಡುಗಿನಿಂದ ಸ್ವತಂತ್ರವಾಗಿ ಮುಕ್ತವಾಗಿದ್ದಿತು. ಹೀಗೆಂದು ಭಾರತಕ್ಕೆ ವಿವಿಧ ಕಾಲಗಳಲ್ಲಿ ಭೇಟಿ ಕೊಟ್ಟಿದ್ದ ವಿದೇಶಿ ಪ್ರವಾಸಿಗರಾದ ಫಾಹಿಯನ್, ವಾಸ್ಕೊಡಿಗಾಮ, ಬರ್ನಿಯರ್ ಮತ್ತು ಟ್ರಾವರ್ನಿಯರ್ ಮುಂತಾದವರು ಸಮರ್ಥಿಸಿದ್ದಾರೆ.

ವ್ಯಾಖ್ಯೆ ಮತ್ತು ಚಿಹ್ನೆಗಳು :

ವೈದ್ಯಕೀಯ ಕ್ಷೇತ್ರಕ್ಕೆ ಮಾತ್ರ ಸಂಬಂಧಿಸಿದ್ದೆಂದು ಹೇಳಲಾಗಿದ್ದ ಮಾದಕ ವಸ್ತು ಸೇವನೆಯು ಸಮಾಜಕ್ಕೂ ಒಂದು ದೊಡ್ಡ ಸವಾಲಾಗಿರುವುದು ಇತ್ತೀಚಿಗಿನ ಬೆಳವಣಿಗೆಯಾಗಿರುವುದರಿಂದ ಇದರ ಬಗೆಗಿನ ವ್ಯಾಖ್ಯೆಗಳು ಅತ್ಯಂತ ವಿರಳ.

ಸಿ.ಬಿ. ಮೆನೋರಿಯಾರವರ ಪ್ರಕಾರ :

"ಔಷಧವಸ್ತು" ವೆಂದರೆ "ಜೀವಿಸುವ ಶರೀರದೊಳಕ್ಕೆ ತೆಗೆದು ಕೊಂಡಾಗ ಅಲ್ಲಿನ ಚಟುವಟಿಕೆಗಳನ್ನು ಒಂದು ಅಥವಾ ಅದಕ್ಕಿಂತ ಹೆಚ್ಚಿಗೆ ವ್ಯತ್ಯಾಸಗೊಳಿಸ ಬಹುದಾದ ಯಾವುದೇ ಸಾರಪದಾರ್ಥವೆಂಬು" ವ್ಯಾಖ್ಯೆಮಾಡಲಾಗಿದೆ. ಬೇರೆ ಮಾತು ಗಳಲ್ಲಿ ಹೇಳುವುದಾದರೆ, ಔಷಧಗಳೆಂದರೆ ನಾವು ಅರ್ಥೈಸಿರುವಂತೆ ಮನೋಪ್ಷ ಗೊಳಿಸುವ ಅಥವಾ ಮನೋಪ್ರಚೇದಕ ಔಷಧಗಳು. ಒಬ್ಬ ವ್ಯಕ್ತಿಯ ಮನಃ ಶಾಸ್ತ್ರೀಯ ವ್ಯವಸ್ಥೆಯನ್ನೆ ಬದಲಾಯಿಸುತ್ತವೆ. ಪ್ರಮುಖ ಔಷಧ ವಸ್ತುಗಳೆಂದರೆ ಮಧ್ಯ, ತಂಬಾಕು, ಕನ್ನಾಬಿಸ್ ಅಥವಾ ಚರಸ್, ಟ್ರಾಂಕ್ವಿಲೈಸರ್ಸ್, ನಾರ್ಕಾಟಿಕ್ಸ್ ಅಥವಾ ಓಪಿಯೇಟ್ಸ್, ಮತ್ತು ಎಲ್. ಎಸ್. ಡಿ., ನಿಕೋಟಿನ್, ಕೋಲಾ, ಕಶ್ಪಲ ವಸ್ತುಗಳು. ಕೆಫಿನ್ ಮತ್ತು ಗೃಹಬಳಕೆ ರಾಸಾಯನಿಕ ವಸ್ತು ಗಳಂತಹ ಸಾರ ಪದಾರ್ಥಗಳನ್ನು ಸಾಮಾನ್ಯವಾಗಿ ಔಷಧವಸ್ತುಗಳೆಂದು ಪರಿಗಣಿ ಸಿರುವುದಿಲ್ಲ.

'ಔಷಧ ದುರುಪಯೋಗ 'ಎಂದರೆ ವೈದ್ಯಕೀಯ-ರಹಿತವಾದ ಕಾರಣಗಳಿಂದ ಒಂದು ಔಷಧವನ್ನು ತನ್ನಲ್ಲಿ ಅಳವಡಿಸಿಕೊಳ್ಳುವುದರಿಂದ ಇದರ ಪರಿಣಾಮಗಳು ಮತ್ತೆ ಪದೇ ಪದೇ ಸಂಭವಿಸುವಿಕೆಗಳು ಒಬ್ಬ ವ್ಯಕ್ತಿಯ ಕಾರ್ಯ ಸಾಮರ್ಥ್ಯವನ್ನು ಪರಿಣಾಮಕಾರಿಯಾಗಿ ಕುಂದಿಸುವುದು ಮಾತ್ರವಲ್ಲದೆ ಸಾಮಾಜಿಕವಾಗಿ, ಶಾರೀರಕ ವಾಗಿ ಅಥವಾ ಭಾವನಾತ್ಮಕವಾಗಿ ಹಾನಿಕರ ಫಲಿತಾಂಶಗಳನ್ನು ಉಂಟುಮಾಡುತ್ತವೆ ಎಂದು ವ್ಯಾಖ್ಯಾನ ಮಾಡಲಾಗಿದೆ.

"ಔಷಧ ಅವಲಂಬನೆಯೆಂದರೆ, ಅಸ್ತಿತ್ವವಿರುವ ಜೈವಿಕ ಅಂಶಕ್ಕೂ ಔಷಧಕ್ಕೂ ನಡುವಣ ಅನ್ಯೋನ್ಯತೆ ಫಲಿತಾಂಶದಿಂದ ಉದ್ಭವಿಸುವ ಮಾನಸಿಕ ಮತ್ತು ಕೆಲವುಟ್ಟಿಗೆ ಶಾರೀರಕ ಸ್ಥಿತಿಯು ನಡವಳಿಕಾತ್ಮಕ ಮತ್ತು ಇತರ ಪ್ರತಿಕ್ರಿಯೆಗಳ ಮೂಲಕ ಲಾಕ್ಷಣೀಕೃತಗೊಂಡು, ಇದರ ಗೈರುಹಾಜರಿಯಿಂದ ಉಂಟಾಗುವ ಅಸಂತೋಷವನ್ನು ಹೋಗಲಾಡಿಸಲು ಕಾಲಕಾಲಕ್ಕೆ ಅಥವಾ ಒಂದೇ ಸಮನೇ ಔಷಧ ತೆಗೆದುಕೊಳ್ಳುವುದನ್ನು ಮುಂದುವರಿಸುವಂತಹ ಶಾಶ್ವತತೆಯನ್ನು ಉಂಟುಮಾಡು ತ್ತದೆ ಎಂದು ವರ್ಣಿಸಲಾಗಿದೆ. ಒಬ್ಬ ವ್ಯಕ್ತಿಯು ಒಂದಕ್ಕಿಂತಲೂ ಹೆಚ್ಚಿನ ಔಷಧ ಗಳನ್ನು ಅವಲಂಬಿಸಬಹುದು."

ವಿಶ್ವ ಆರೋಗ್ಯ ಸಂಸ್ಥೆ ಸಮಿತಿಯು ಪ್ರಕಾರ, ಕುಡಿತ ಹವ್ಯಾಸ ಅಥವಾ ಮಾದಕವಸ್ತು ಸೇವನೆಯು ಒಂದು ಅವಧಿಯಲ್ಲಿ ಅಥವಾ ಸಾಂಕ್ರಮಿಕವಾಗಿ ಅಮಲನ್ನುಂಟುಮಾಡುವ ಸ್ಥಿತಿಯಾಗಿದ್ದು ವ್ಯಕ್ತಿಗೂ ಮತ್ತು ಸಮಾಜಕ್ಕೂ ಹಾನಿ ಯುಂಟುಮಾಡುತ್ತದೆ ಮಾತ್ರವಲ್ಲ ಸ್ವಾಭಾವಿಕವಾಗಿಯೇ ಅಗಲಿ ಕೃತಕವಾಗಿಯೇ ಗಲಿ ಮಾದಕ ವಸ್ತುಗಳ ಸೇವನೆಯ ಬಳಕೆಯು ಪುನರಾವರ್ತನೆಗೊಂಡಂತೆ

ಇನ್ನಷ್ಟು ಹಾನಿಕರ ಫಲಿತಾಂಶಗಳನ್ನುಂಟು ಮಾಡುತ್ತದೆಯೆಂದು ವ್ಯಾಖ್ಯಾನಿಸಲಾಗಿದೆ. ವೈದ್ಯಕೀಯ ದೃಷ್ಟಿಕೋನದಿಂದ ಹೇಳುವುದಾದರೆ, ಮಾದಕವಸ್ತು ಸೇವನೆಯು ಯಾವುದೇ ಔಷಧವನ್ನು ಒಂದು ಘಟ್ಟದವರೆಗೂ ಪದೇ ಪದೇ ಬಳಸುವುದರಿಂದ ಉಂಟಾಗುವ ಫಲಿತಾಂಶದ ಒಂದು ಸ್ಥಿತಿಯಾಗಿರುವುದಲ್ಲದೆ, ಶರೀರದಲ್ಲಿನ ಭಾಗಗಳ ಕಾರ್ಯಗಳು ಸಹಜವಾಗಿ ಸುಗಮವಾಗಿ ನಡೆಯುವಂತಾಗಲು ಇದರ ಬಳಕೆಯನ್ನು ಮುಂದುವರಿಸುವುದು ಅತ್ಯವಶ್ಯವಾಗಿರುವುದಷ್ಟೇ ಅಲ್ಲ, ತಟಕ್ಕನೆ ನಿಲ್ಲಿಸುವ ಔಷಧ ಬಳಕೆಯು ಸ್ಪಷ್ಟವಾಗಿ ಶಾರೀರಕ ಹಾಗೂ ಬೌದ್ಧಿಕ ವಿಕಲ್ಪಗಳಿಗೆ ಕಾರಣವಾಗುತ್ತದೆ. ಅದರ ಲಕ್ಷಣಗಳು (1) ಔಷಧ ವಸ್ತುಗಳನ್ನು ಯಾವುದೇ ಮಾಧ್ಯಮಗಳಿಂದಲಾದರೂ ಪಡೆಯಬೇಕೆಂಬ ಹಾಗೂ ಅದನ್ನು ತೆಗೆದುಕೊಳ್ಳುವುದನ್ನು ಸತತವಾಗಿ ಮುಂದುವರಿಸಬೇಕೆಂಬ ಶಕ್ತಿಮೀರಿದ ಸ್ವಇಚ್ಛೆ (2) ಪ್ರಮಾಣವನ್ನು ಏರಿಸುತ್ತಾ ಹೋಗುವ ಪ್ರವೃತ್ತಿ ಹಾಗೂ, (3) ಔಷಧದ ಪರಿಣಾಮಗಳ ಮೇಲೆ ಮಾನಸಿಕ ಹಾಗೂ ಕೆಲ ಸಮಯ ಶಾರೀರಕ ಅವಲಂಬನೆ, ಇವುಗಳನ್ನು ಒಳಗೊಂಡಿರುತ್ತವೆ.

ಔಷಧ ಅವಲಂಬನೆಯ ಚಿಹ್ನೆಗಳು ಈ ಕೆಳಗಿನಂತಿರುತ್ತವೆ.

1. ಆತಂಕ ಪ್ರತಿಕ್ರಿಯೆಗಳು ಮತ್ತು ನಿಷ್ಕಾರಣ ಭಯದ ಅವಸ್ಥೆಗಳು.
2. ದುರ್ಬಲ ತೀರ್ಪುಗಳಿಂದ ಉದ್ಭವಿಸುವ ಆಕಸ್ಮಿಕ ಘಟನೆಗಳು ಮತ್ತು ಕಾಲ ಅಥವಾ ಸ್ಥಳದ ಕುರಿತು ತಪ್ಪು ಅಭಿಪ್ರಾಯ ಮೂಡಿಸುವ ಗ್ರಹಣ ಶಕ್ತಿಗಳು.
3. ಪಾರ್ಶ್ವ ತಗುಲಿದಂತಹ ಮನೋಭಾವಗಳು ಅಥವಾ ಇತರರನ್ನು ಕುರಿತು ಮಿತಿಮೀರಿದ ಗುಮಾನಿಗಳು.
4. ವಾಸ್ತವತೆಯೊಂದಿಗೆ ಸಂಪರ್ಕ ಕಳೆದುಕೊಳ್ಳುವ ಬೌದ್ಧಿಕ ಸಂದಿಗ್ಧತೆ ಮತ್ತು ಸ್ಮರಣಶಕ್ತಿಯ ಕ್ಷೀಣತೆಗಳು.
5. ವಿಮನಸ್ಕತೆ, ಉದಾಸೀನತೆ ಮತ್ತು ಕೆಲಸಮಯ ಬಲವಂತ ನಡವಳಿಕೆ.
6. ಲಂಬಿಸುವ ಕಣ್ಣಿನ ಪಾಪೆಗಳು, ಬಣ್ಣವೇರಿದ ಮುಖ ಮತ್ತು ಅಸಭ್ಯ ತೋರ್ಪಡಿಕೆಗಳು.
7. ಸಾಂದರ್ಭಿಕ ಸೆಳೆತಗಳು.
8. ಮೌಲ್ಯಗಳ ಹಿಂಜರಿಕೆ.
9. ಉದ್ಯೋಗ ನಿರತ ನಿದ್ರಾಹೀನತೆ, ಜಡತ್ವ.
10. ವ್ರಣಗಳು, ಗಾಯದ ಗುರುತುಗಳು ಮತ್ತು ಸ್ನಾಯುತಂತುಗಳ ಸೆಳೆತಗಳು. (ತೋಳುಗಳು ಮತ್ತು ಕಾಲುಗಳ ರಕ್ತನಾಳಗಳ ಶಕ್ತಿ ಗುಂದುವಿಕೆ).

11. ಕಣ್ಣಿನ ಪಾಪೆಗಳ ರಕ್ಷಣೆಗಾಗಿ ನಿರಂತರ ಬಳಸುವ ಕಪ್ಪು ಕನ್ನಡಕಗಳು.
12. ವೈಯಕ್ತಿಕ ನಿರ್ಲಕ್ಷ್ಯ ಹಾಗೂ ಅಜೀರ್ಣತೆಯಿಂದಾಗಿ ಅನಾರೋಗ್ಯ ಕರವಾಗಿ ಕಾಣಿಸುವಿಕೆ. ಯಾವುದೇ ಒಬ್ಬ ವ್ಯಕ್ತಿಯು ಅವಶ್ಯವಾಗಿ ಈ ಎಲ್ಲಾ ರೋಗಗಳನ್ನಾಗಲಿ ಅಥವಾ ಎಲ್ಲಾ ವ್ಯಕ್ತಿಗಳೂ ಯಾವುದೇ ಒಂದು ರೋಗ ಲಕ್ಷಣವನ್ನಾಗಲಿ ಹೊಂದಿರುವುದಿಲ್ಲ. ಈ ರೋಗದ ಚಿಹ್ನೆಗಳು ಮಾದಕ ಪಾನೀಯ ಹಂತದಲ್ಲಿ ವ್ಯತ್ಯಾಸಗೊಳ್ಳು ವುದಲ್ಲದೆ ಔಷಧವಸ್ತುವನ್ನು ಬಳಸಿದ ವಿಧಾನವು ಔಷಧೋಪ ಯೋಗಿಯ ಅನುಭವದ ಆಧಾರದ ಮೇಲೆ ಮಿಳಿತಗೊಂಡಿರುತ್ತದೆ.

ವಾಸ್ತವವಾಗಿ, ಈ ಕೆಳಗಿನ ಮಾದರಿಯ ವ್ಯಕ್ತಿಗಳು ಔಷಧ ವಸ್ತುಗಳನ್ನು ಉಪಯೋಗಿಸುತ್ತಾರೆ—1. ಯಾರು ವೃತ್ತಿನಿರತ ಪರಿಸರದಲ್ಲಿ ಸ್ಫೂರ್ತಿಯ ಸೆಲೆ ಯಿಲ್ಲದೆ, ಮಾನವೀಯತೆಯ ಸೆಲೆಯಿಲ್ಲದೆ ಗೊತ್ತು ಗುರಿಗಳನ್ನು ಕಳೆದುಕೊಂಡು ಹುಚ್ಚು ಮನಸ್ಸಿನ ಸಂವೇದನೆಯಿಂದ ಕೂಡಿರುತ್ತಾರೋ ಅಂತಹ ವ್ಯಕ್ತಿಗಳು. 2. ಧ್ಯೇಯವಿಲ್ಲದ, ಪ್ರೇರಣೆಯಿಲ್ಲದ, ಸೃಷ್ಟಿಶೀಲತೆಯಿಲ್ಲದ, ವಿರಾಮ ಜೀವನವನ್ನು ಔಷಧಗಳ ಉಪಯೋಗದ ಮೂಲಕ ಐಷಾರಾಮವಾಗಿ ಕಳೆಯಬೇಕೆನ್ನುವ ಶ್ರೀಮಂತ ವ್ಯಕ್ತಿಗಳು. 3. ಒಡನಾಡಿ ಕಾರ್ಯಕರ್ತರು ಮತ್ತು ಸ್ನೇಹಿತರ ಮೂಲಕ ಒತ್ತಡಕ್ಕೆ ಒಳಗಾದ ವ್ಯಕ್ತಿಗಳು. 4. ಒಂದು ಗುಂಪಿನ ಬಹಿಷ್ಕಾರ ಅಥವಾ ಅಸಮ್ಮತಿಯಿಂದ ಅಂಜಿ ಔಷಧ ಸೇವಿಸುವ ವ್ಯಕ್ತಿಗಳು ; ಇತರರನ್ನು ತೃಪ್ತಿಪಡಿಸಲು ಅಥವಾ ಸ್ವಪರಿ ಚಯಕ್ಕಾಗಿ ಹುಡುಕಾಟ ಮಾಡಬೇಕೆನ್ನುವ ವ್ಯಕ್ತಿಗಳು. 5. ತಂದೆ ತಾಯಿಗಳು ಅಥವಾ ಕುಟುಂಬದಿಂದ ತಿರಸ್ಕರಿಸಲ್ಪಟ್ಟ, ದಬ್ಬಾಳಿಕೆಗೆ ಒಳಗಾದ, ನಿರಾಶವಾದಿಗಳಾದ ವ್ಯಕ್ತಿಗಳು ಮಾತ್ರವಲ್ಲದೆ, ಗಂಭೀರ ಸ್ವರೂಪದ ಜಟಿಲ ಸಮಸ್ಯೆಗಳನ್ನು ಹೊಂದಿದ ವ್ಯಕ್ತಿಗಳು ಹಾಗೂ ಭಗ್ನ ಹೃದಯಿಗಳು.

" ಭಾರತದಲ್ಲಿ ಮಾದಕ ಔಷಧವಸ್ತು ಸೇವನೆ " ಎನ್ನುವ ತಮ್ಮ ಲೇಖನದಲ್ಲಿ ಕೆ. ಮಿತ್ರ, ಅವರು ಹೀಗೆ ಅವಲೋಕಿಸಿದ್ದಾರೆ. ಈ ಬಗೆಯ ಔಷಧ ವಸ್ತುಗಳ ಲಕ್ಷಣಗಳು, ಒಂದು ಕೋನಾಂಶದಲ್ಲಿ ಅಮಲು ಅಥವಾ ಪ್ರಚೋದನೆಯ ಮೂಲಕ ಉತ್ಪತ್ತಿಯಾಗುವ ಔಷಧಗಳು ಯಾವ ಬೇಧವಿಲ್ಲದೆ ಅವುಗಳ ಪರಿಣಾಮದ ಆಕರ್ಷಣೆ ಯಿಂದ ಕೂಡಿರುತ್ತವೆ. ಹಾಗೆಂದೇ ಜನರು ಒಂದು ಬಾರಿ ಈ ಔಷಧಗಳ ಅವಲಂಬ ನೆಯನ್ನು ರೂಢಿಮಾಡಿಕೊಂಡಾಗ ಅವರಲ್ಲಿ ಇವುಗಳ ಹಿತವಲ್ಲದ ತಿರುವು ಮುರುವು ಪರಿಣಾಮಗಳು ಬೌದ್ಧಿಕವಾಗಿ, ನೈತಿಕವಾಗಿ ಅಥವಾ ಶಾರೀರಕವಾಗಿ ಉಂಟಾಗು ತ್ತವೆ.

ಸಿ. ಬಿ. ಮೆಮೋರಿಯಾರವರು ಉಲ್ಲೇಖಿಸಿರುವಂತೆ ಮಾದಕ ಔಷಧವಸ್ತುಗಳ ಸೇವನೆಗೆ ಈ ಕೆಳಗಿನ ಅಂಶಗಳು ಹೊಣೆಯಾಗಿರುತ್ತವೆ:

(1) ಪ್ರಾಯೋಗಿಕ ಇಚ್ಛೆ, (2) ಸಾಹಸ ಪ್ರಜ್ಞೆ (3) ಆತ್ಮ ಜ್ಞಾನದ ಬಯಕೆ (4) ಕೆಲ ಸಮಸ್ಯೆಗಳಿಂದ ತಪ್ಪಿಸಿಕೊಳ್ಳಬೇಕೆನ್ನುವ ಇಚ್ಛೆ (5) ಉಲ್ಲಾಸಕರ ಅನುಭವ (6) ಸಾಮಾಜಿಕ ಮೌಲ್ಯಗಳಲ್ಲಿ ಹಾಗೂ ಧ್ಯೇಯಗಳಲ್ಲಿನ ಪರಿವರ್ತನೆಗಳು (7) ಮಾನವ ಕುಲದ ನೈಜ ಗುಣಗಳು, ನೈಜ ಮಾನವೀಯತೆ ಹಾಗೂ ನೈಜ ವ್ಯಕ್ತಿಯ ಸಾಕ್ಷಾತ್ಕಾರಕ್ಕಾಗಿ (8) ಮಿತಿಮೀರಿದ ಶೀತೋಷ್ಣಗಳ ಪ್ರಭಾವ, ಒಂದೇ ಬಾರಿಗೆ ಮಿತಿಮೀರಿ ಗಂಟೆಗಟ್ಟಲೆ ದುಡಿದುದರ ಫಲವಾಗಿ ಉದ್ಭವಿಸುವ ಅಸಖ್ಯ ದಣಿವುಗಳ ಅನುಭವದಿಂದ ಪಾರಾಗುವಿಕೆ (9) ಒಡನಾಡಿಯೊಂದಿಗೆ ಸಖ್ಯ ಬೆಳೆಸುವಿಕೆ (10) ನಿರುದ್ಯೋಗದ ಅನಿರ್ದಿಷ್ಟತೆ ಅಥವಾ ನಿರುದ್ಯೋಗದ ಸತತ ಪೆಟ್ಟು ಹಾಗೂ ಭವಿಷ್ಯ ಜೀವನದ ಅನಿರ್ದಿಷ್ಟ ಪ್ರತೀಕಗಳಿಂದಾಗಿ (11) ಶ್ರೇಣಿಯಲ್ಲಿ ಉದ್ಭವಿಸುವ ತತ್‌ಕ್ಷಣದ ಏರಿಳಿತಗಳಿಂದಾದ ಸಾಮಾಜಿಕ ವಿಷಮರೂಪಗಳು (12) ಮನೋರಂಜನೆಗೆ ಅಗತ್ಯ ಆರೋಗ್ಯಕರ ಮೂಲಗಳ ಕೊರತೆ (13) ಅಂತರ್ಗತ ನರಸಂಬಂಧ ದೋಷಗಳು (14) ಅತಿಥಿಗಳನ್ನು ತೃಪ್ತಿಪಡಿಸುವಿಕೆ.

ಬಗೆಗಳು ಮತ್ತು ಪರಿಣಾಮಗಳು :

ಸಾಮಾನ್ಯವಾಗಿ ಹೆಚ್ಚಿನ ಪ್ರಮಾಣದಲ್ಲಿ ಉಪಯೋಗಿಸುವ ಔಷಧವಸ್ತುಗಳ ಆರು ಬಗೆಗಳು ಕೆಳಕಂಡಂತಿವೆ.

1. ಅಂಫೆಟಮೈನ್ಸ್ ಮತ್ತು ಕೊಕೈನ್, ಇವು ಬೆಂಜಿಡ್ರಿನ್, ಡೆಕ್ಸೆಡ್ರಿನ್, ಮೆಥೆಡ್ರಿನ್ ಇತ್ಯಾದಿಗಳ ರೂಪದಲ್ಲಿದ್ದು ಕೇಂದ್ರ ನರಮಂಡಲ ವ್ಯವಸ್ಥೆಯನ್ನು ಅಸ್ತವ್ಯಸ್ತಗೊಳಿಸುತ್ತವೆ. ಇವು ಉತ್ತೇಜಕಗಳು ಅಥವಾ ಮೇಲ್ಮುಖ ವಾಹಕಗಳೆಂದು ಕರೆಯಲ್ಪಡುವುದಲ್ಲದೆ ಇವು (ಅಂಫೆಟಮೈನ್, ಡೆಕ್ಸ್ಟ್ರೋ ಅಂಫೆಟಮೈನ್ ಮತ್ತು ಮೆಥೆನ್—ಫೆಟಮೈನ್ ಅಂದರೆ ಶೀಘ್ರತೆ ಅಥವಾ ಸ್ವಚ್ಛತೆಗಳು) ಮನಸ್ಸಿನ ಉಚ್ಛ್ರಾಯವನ್ನು ಉತ್ಸಾಹವನ್ನು. ಚೆನ್ನಾಗಿ ಇದ್ದೇನೆ ಎನ್ನುವ ಭಾವನೆಯನ್ನು ಉಂಟುಮಾಡುವುದಲ್ಲದೆ ಚುರುಕುತನ ಹಾಗೂ ಜಾಗರೂಕತೆಯ ಅತಿಶಯತೆ ಅನುಭವವನ್ನು ತಂದುಕೊಡುತ್ತದೆ.

ಕೋಕಾ ಎಲೆಗಳಿಂದ ಸಂಪಾದಿಸಿದ ಕೊಕೈನನ್ನು ಒಂದು ಔಷಧವಸ್ತುವನ್ನಾಗಿ ಬಳಸಲಾಗುತ್ತಿದೆ. ಈ ಔಷಧವಸ್ತುವು ಭಾರತದಲ್ಲಿ 1890 ಮತ್ತು 1900 ಮಧ್ಯಾವಧಿಯಲ್ಲಿ ಬೆಳಕಿಗೆ ಬಂದಿತು. ಈ ಔಷಧ ಬಳಕೆಯು ಒಂದು ಕಾಲದಲ್ಲಿ ಉತ್ತರ ಭಾರತದಲ್ಲಿ ವ್ಯಾಪಕವಾಗಿದ್ದಿತು. ಕೊಕೈನ್ ಒಂದು ಕೇಂದ್ರ ನರಮಂಡಲದ ಉತ್ತೇಜಕ. ಇದು ಮನಸ್ಸಿನ ಕ್ಷೋಭೆಯನ್ನು ಅತಿಶಯಗೊಳಿಸುವ ಅನುಭವವನ್ನು ಅಥವಾ ಎಚ್ಚರ ಮನೋಭಾವದಲ್ಲಿ ಕ್ಷೀಣತೆಯನ್ನು, ಹಾಗೂ ಮನೋವಿಕಲ್ಪಗಳನ್ನು ಉಂಟುಮಾಡುತ್ತದೆ. ಇವುಗಳ ಉಪಯೋಗವು ಮಾನಸಿಕ ಅವಲಂಬನೆಯಲ್ಲಿ ಪರ್ಯವಸಾನಗೊಳ್ಳುತ್ತದೆ.

ಅಫೀಮು ಔಷಧದ ಗುಳಿಗೆ ರೂಪದಲ್ಲಿ ತಿನ್ನಬಹುದಾದ ಅಥವಾ ನೀರು ಮಿಶ್ರಿತ ದ್ರಾವಣ ರೂಪದಲ್ಲಿ ಕುಡಿಯಬಹುದಾದ ವಸ್ತುವಾಗಿದೆ. ಒಂದು ಔಷಧವಾಗಿ ಇದು ಜೀರ್ಣತೆಯ ತೊಂದರೆಗಳನ್ನು ಉಪಶಮನಗೊಳಿಸುವುದಲ್ಲದೆ ಕೆಮ್ಮು ಮತ್ತು ನೋವಿನಿಂದ ಮುಕ್ತಗೊಳಿಸುತ್ತದೆ ಮತ್ತು ನಿದ್ರೆಗೆ ಅವಕಾಶ ಮೀಯುತ್ತದೆ. ಬಡ ವರ್ಗದ ಕುಟುಂಬಗಳಲ್ಲಿ ತಾಯಂದಿರು ಕೆಲಸಕ್ಕೆ ಹೋಗಬೇಕಾಗುವುದರಿಂದ ತಮ್ಮ ಹಸುಳೆಗಳು ಗಲಾಟೆ ಮಾಡದೆ ಶಾಂತವಾಗಿರುವಂತೆ ಮಾಡಲು ಅವುಗಳಿಗೆ ಅಫೀಮು ತಿನ್ನಿಸುವ ಮೂಲಕ ಸುಶುಪ್ತಾವಸ್ಥೆಗೊಳಪಡಿಸಿ ತಮ್ಮ ಕೆಲಸಕ್ಕೆ ಹೋಗುತ್ತಾರೆ. ಆದರೆ ಕಠಿಣ ಪ್ರಸಂಗ ಯಾವುದೆಂದರೆ ಇಂದು ಜನರಲ್ಲಿ ಬಹುಮಂದಿ ಇದರ ಚಟಕ್ಕೆ ಬಲಿಬಿದ್ದಿರುವುದು. ಅಫೀಮನ್ನು ಹೊಗೆ ರೂಪದಲ್ಲಿ ಕುಡಿಯುವುದಕ್ಕೂ ಬಳಸಲಾಗುತ್ತದೆ.

2. ಬಾರ್ಬಿಟುರೇಟ್ಸ್‌ಗಳು : ಶಾಮಕಗಳು ಮತ್ತು ಉಪಶಾಮಕ ಔಷಧಗಳಂತೆ ಕಾರ್ಯನಿರ್ವಹಿಸುವುದಲ್ಲದೆ ನಿದ್ರೆಯನ್ನು ಪ್ರಚೋದಿಸುತ್ತವೆ. ಈ ಔಷಧ ವಸ್ತುಗಳನ್ನು 'ಕೆಳಮುಖವಾಹಕ'ಗಳೆಂದು ದೀರ್ಘಕಾಲಿಕ ಬಾರ್ಬಿಟುರೇಟ್ಸ್‌ಗಳಿಗಿಂತಲೂ ತತ್‌ಕ್ಷಣ ಕಾರ್ಯ ಪ್ರವೃತ್ತವಾಗುವ ಪೆಂಟೋ-ಬಾರ್ಬಿಟಾಲ್ ಹಾಗೂ ಸೆಕೋ ಬಾರ್ಬಿಟಾಲ್‌ಗಳಂತ ಅಲ್ಪಕಾಲಿಕ ಬಾರ್ಬಿಟುರೇಟ್‌ಗಳನ್ನು ಹೆಚ್ಚು ಇಷ್ಟಪಡುತ್ತಾರೆ. ಇವುಗಳ ಸತತ ಉಪಯೋಗವು ಸರಳುಮಿಕೆಯು, ದೈನ್ಯತೆಯು ಅಥವಾ ಶಾರೀರಕ ಮತ್ತು ಮಾನಸಿಕ ಇವೆರಡರ ಅವಲಂಬನೆಯು ಕೆಟ್ಟರೂಪಗಳಿಗೆ ಅವಕಾಶ ಮಾಡಿಕೊಡುತ್ತದೆ.

3. ಕನ್ನಾಬಿಸ್ : ಹಶಿಷ್ ಅಥವಾ ಚರಸ್ ರೂಪದಲ್ಲಿದ್ದು ಸೆಣಬಿನ ಜಾತಿಯ ಸ್ತ್ರೀ ಸಸ್ಯದ (ಹೆಂಪ್ ಪ್ಲಾಂಟ್) ಹೂಗಳ ಮೇಲ್ತುದಿಗಳಿಂದ ಸ್ರವಿಸುವ ಅಂಟುಪದಾರ್ಥವಾಗಿದ್ದು (ಕನ್ನಾಬಿಸ್. ಸತೀವಾ, ಕನ್ನಾಬಿಸ್ ಇಂಡಿಕಾ, ಇತ್ಯಾದಿ) ಇದರಿಂದ ಭಂಗಿಸೊಪ್ಪು ಮತ್ತು ಗಾಂಜಾವನ್ನು ಸಹ ತಯಾರಿಸುತ್ತಾರೆ. ಚರಸ್, ಗಾಂಜಾ ಮತ್ತು ಭಂಗಿಸೊಪ್ಪುಗಳಂತಹ ಅಮಲು ಪದಾರ್ಥಗಳ ಚಟಕ್ಕೆ ಬಡವರ್ಗಗಳ ಜನರು ಹೆಚ್ಚು ವ್ಯಾಪಕವಾಗಿ ಬಲಿಯಾಗುತ್ತಿದ್ದಾರೆ. ಚರಸ್‌ನಂತೆಯೇ ಗಾಂಜಾ ಸಾಮಾನ್ಯವಾಗಿ ಹೊಗೆರೂಪದಲ್ಲಿ ಕುಡಿಯುವಂತಿರುವುದಲ್ಲದೆ ಭಂಗಿಸೊಪ್ಪನ್ನು ಸಾಧಾರಣವಾಗಿ ಪಾನೀಯ ರೂಪದಲ್ಲಿ ಸೇವಿಸುತ್ತಾರೆ. ಈ ಸಸ್ಯಜಾತಿಯ ಎಲೆಗಳನ್ನು ಸಹಜವಾಗಿ ಪಾನೀಯಗಳೊಂದಿಗೆ ಬೆರೆಸಿ ಇಲ್ಲವೆ ಸಿಹಿತಿಂಡಿಗಳಂತಹ ಆಹಾರ ಪದಾರ್ಥಗಳೊಂದಿಗೆ ಮಿಶ್ರಮಾಡಿ ತೆಗೆದುಕೊಳ್ಳುವರು. ಚರಸ್ ಅಥವಾ ಗಾಂಜಾದೊಡನೆ ಹೋಲಿಸಿ ನೋಡಿದರೆ ಭಂಗಿಸೊಪ್ಪಿನ ಅಮಲು ಪ್ರಭಾವ ಕಡಿಮೆ ಇರುತ್ತದೆ. ಒಂದು ಮಾರಿಜು ಆನ (ಒಂದು ಸಸ್ಯಜಾತಿಯ ಕಂದು ಎಲೆಗಳು) ಸಿಗರೇಟು ಕೆಲವೇ ನಿಮಿಷಗಳಲ್ಲಿ ಮಾನವ ಶರೀರದಲ್ಲಿ ಅಮಲು ಪರಿಸ್ಥಿತಿಯನ್ನು ಸೃಷ್ಟಿಸುತ್ತದೆ. ಜಾಗೃತಾವಸ್ಥೆಯನ್ನು ಪಲ್ಲಟಗೊಳಿಸಿ ಒಂದು ಕನಸಿನ ಸ್ಥಿತಿಯನ್ನುಂಟು ಮಾಡುವ ಬೆಳವಣಿಗೆ

ಹೆಚ್ಚು ಸಹಜವಾದ ಪ್ರತಿಕ್ರಿಯೆಯಾಗಿರುತ್ತದೆ. ಸ್ವಸಂತೋಷ ಅನುಭವ ವಿಸ್ತರಿಸು ವುದು, ನಗು ಪ್ರವೃತ್ತಿ ಏರುತ್ತಾ ಹೋಗುವುದು, ಶಬ್ದಗಳು, ವರ್ಣಗಳ ಬಗೆಗಿನ ಜಾಗರೂಕತೆ, ಸ್ಥಳ ಕಾಲಗಳ ಅರಿವಿಗೆ ಅಡಚಣೆಯುಂಟಾಗುವಿಕೆ ಮತ್ತು ಪಾರ್ಶ್ವ ಪೀಡನೆಗಳು ಮುಂತಾದ ಮನಃಶಾಸ್ತ್ರೀಯ ಪರಿಣಾಮಗಳು ಮಾರಿಜುಆನ ಉಪ ಯೋಗಿಗಳ ಮೂಲಕ ವರದಿಯಾಗಿವೆ. ಮಾನಸಿಕ ಅವಲಂಬನೆಯೇ ಇಲ್ಲಿ ಹೆಚ್ಚು ಒತ್ತುಕೊಡುತ್ತದೆ.

4. ಹೆರಾಯಿನ್, ಮಾರ್ಫಿನ್, ಕೊಡೈನ್, ಮೆಥಾಡನ್, ಪಿಥಿಡೈನ್ ಮುಂತಾದ ಔಷಧವಸ್ತುಗಳು ನೋವು ನಿವಾರಣೆಯ ಅಮಲು ಪದಾರ್ಥಗಳಾಗಿವೆ. ಇವುಗಳನ್ನು ಸತತವಾಗಿ ತೆಗೆದುಕೊಳ್ಳುವುದರಿಂದ ಇದು ಪರಾಧೀನತೆಯನ್ನುಂಟು ಮಾಡುವುದಲ್ಲದೆ ಮಾನಸಿಕ ಅವಲಂಬನೆಗೆ ಅವಕಾಶ ಮಾಡಿಕೊಡುವುದರಿಂದ ಇವು ಮಾದಕ ವಸ್ತುಗಳಲ್ಲೆ ಅತಿ ಕೆಟ್ಟ ಬಗೆಯಾಗಿವೆಯೆಂದು ಪರಿಗಣಿಸಲಾಗಿದೆ.

5. ಹಲ್ಯೂಸಿಜೆನೆಸ್—ಮೆಸ್ಕಲೈನ್, ಸೈಲೋಸೈಬಿನ್ ಡಿ. ಎಂ. ಟಿ., ಎಸ್.ಟಿ.ಪಿ., ಎಂ. ಡಿ. ಎ. ಮತ್ತು ಎಲ್. ಎಸ್. ಡಿ. ಇವುಗಳನ್ನು ಒಳಗೊಂಡಿದ್ದು ಇವು ಒಬ್ಬ ವ್ಯಕ್ತಿಯ ಗ್ರಹಣ ಶಕ್ತಿಯನ್ನೇ ಪಲ್ಲಟಗೊಳಿಸುವಷ್ಟು ಶಕ್ತಿಶಾಲಿಯಾಗಿ ರುತ್ತವೆ. ಈ ಬಗೆಯ ಔಷಧ ವಸ್ತುಗಳನ್ನು "ಸೈಕೆಡೆಲಿಕ್ಸ್" ಎಂಬುದಾಗಿ ಕರೆಯುತ್ತಾರೆ. ವರ್ಣಮಯವಾದ ರೀತಿಯಲ್ಲಿ ಇಂದ್ರಿಯ ಗೋಚರದ ತೀವ್ರತೆ, ಮತ್ತು ಶ್ರವಣ ಸಂಬಂಧವಾದ ತೀಕ್ಷ್ಣತೆ ಇಲ್ಲಿ ಕಂಡುಬರುತ್ತದೆ. ಶರೀರ ಪ್ರತೀಕ ವಿರೂಪತೆ, ದೃಶ್ಯಗೋಚರ ಕಣ್ಕಟ್ಟುಗಳು, ಹುಚ್ಚುಭ್ರಾಂತಿಗಳು, ಹುಸಿಮನೋ ವಿಕಲ್ಪಗಳು ಇಲ್ಲಿ ಕಂಡುಬರುವುದು ಸಾಮಾನ್ಯ.

6. ಆಲ್ಕೋಹಾಲ್ : ಸೆಡೆಟಿವ್, ಟ್ರಾಂಕ್ವಿಲೈಸರ್, ಹಿಪ್ನಾಟಿಕ್ ಅಥವಾ ಅನಾಸ್ತೆಟಿಕ್ ಔಷಧ ರೂಪದಲ್ಲಿದ್ದು ವ್ಯಕ್ತಿಗೆ ಮತ್ತು ಬರಿಸುವ ಪಾನೀಯವಾಗಿದೆ. ಆಲ್ಕೋಹಾಲ್ ಲಭ್ಯವಿರುವ ಸ್ಥಳಗಳಲ್ಲಿ ಇದರ ಗೈರುಹಾಜರಿಯಲ್ಲಿ ಅಸ್ವಾಭಾವಿಕ ಮಧ್ಯಗಳನ್ನೊಳಗೊಂಡ ಪ್ರಾಣನಾಶಕ ದ್ರಾವಣಗಳು ಮತ್ತು ಅದರ ಉತ್ಪನ್ನಗಳಾದ "ಫ್ರೆಂಚ್ ಪಾಲಿಷ್" ವಾರ್ನಿಷ್ ಮತ್ತು ಟಿಂಕ್ಚರ್‌ಗಳು ಬಳಕೆಯಾಗುತ್ತವೆ. ಇದು ಮೃದುವಿನಿಂದ ಕಠೋರತೆಯವರೆಗೆ ವಿಭಿನ್ನ ಕೋನಾಂಶಗಳಲ್ಲಿ ಮಾನಸಿಕ ಅವಲಂಬನೆಯನ್ನು ಉಂಟುಮಾಡುತ್ತದೆ. ಆಲ್ಕೋಹಾಲ್ ಉಪಯೋಗವು ತೀಕ್ಷ್ಣ ಹಾಗೂ ಸಾಂಕ್ರಾಮಿಕವಾಗಿ ಮಾದಕತೆಯನ್ನುಂಟುಮಾಡುವುದಲ್ಲದೆ, ಪಿತ್ತಜನಕಾಂ ಗಕ್ಕೆ ಹಾನಿ, ಮಾನಸಿಕ ವರ್ತನೆಗಳ ಮೇಲೆ ದುಷ್ಪರಿಣಾಮ, ಗ್ಯಾಸ್ಟ್ರಿಕ್ ತೊಂದರೆ ಗಳು, ಹಾಗೂ ನರಸಂಬಂಧ ಕಾಯಿಲೆಗಳಿಗೆ ಕಾರಣವಾಗುತ್ತದೆ. ಆತ್ಮಹತ್ಯೆ ಮತ್ತು ಇತರ ಅಪಘಾತಗಳಿಗೆ ಇದರ ಬಳಕೆ ಒಂದು ಪ್ರಮುಖ ಕಾರಣವಾಗಿರುತ್ತದೆ. ಆದರೆ ಕುಟುಂಬ ಅವ್ಯವಸ್ಥೆಯಲ್ಲಿ, ಅಪರಾಧ ಮತ್ತು ಸಂತಾನೋತ್ಪತ್ತಿ ಕೊರತೆಗೆ ಇದೊಂದೇ ದೊಡ್ಡ ಸಾಮಾಜಿಕ ವಿಘ್ನವಾಗಿರುವುದಿಲ್ಲ.

ಮಾರಿಜುಆನ :

ಕೆಲವು ವರುಷಗಳ ಹಿಂದೆ ಪತ್ರಿಕಾ ಮಾಧ್ಯಮಗಳು ಅನೇಕ ವೃತ್ತಾಂತಗಳ ಮೂಲಕ ಮಾರಿಜುಆನ ಸೇವನೆಯು ಮಾನವ ಶರೀರದಲ್ಲಿ ಅನೇಕ ರೀತಿಯಲ್ಲಿ ಜಖಂಗೊಳಿಸುವ ಪರಿಣಾಮಗಳನ್ನು ಬೀರುತ್ತಿವೆಯೆಂಬ ಕಟ್ಟಪ್ಪಣೆಯನ್ನು ಚಿತ್ರಿಸಿದ್ದರು. ಅಮೆರಿಕನ್ ಗ್ರಂಥಾಲಯ ಸಂಘದಿಂದ ನಮೂದಾಗಿರುವ ಧೂಮಪಾನ ಮತ್ತು ಸಾರ್ವಜನಿಕ ಆಸಕ್ತಿಯನ್ನು ಕುರಿತು ಬಳಕೆದಾರರ ಯೂನಿಯನ್ ವರದಿಯು ಗಹನ ಆಸಕ್ತಿಯೊಂದಿಗೆ ಹೊಸ ಅಂಕಿ ಅಂಶಗಳನ್ನು ಒಳಗೊಂಡು ಪ್ರಕಟವಾಯಿತು. ಆರೋಗ್ಯದ ಮೇಲೆ ಮಾರಿಜುಆನದ ಪರಿಣಾಮಗಳಿಗೆ ಸಂಬಂಧಿಸಿದಂತೆ ಇತ್ತೀಚಿನ ಅನೇಕ ಟೀಕೆಗಳು ವೈಜ್ಞಾನಿಕವಾದ ಪುರವಣಿಗಳಲ್ಲಿ ಕಾಣಿಸಿಕೊಂಡಿದೆ. ಸಾರಾಂಶದಲ್ಲಿ ಹೇಳಬೇಕೆಂದರೆ ಮಾರಿಜುಆನ ವಿರುದ್ಧ ಹೋರಾಟದ ಪ್ರಕರಣ ಇತ್ತೀಚೆಗಷ್ಟೇ ಸಾರ್ವಜನಿಕವಾಗಿ ಮಂಡಿತವಾಗಿದೆ.

ಮಾರಿಜುಆನ ಸೇವನೆಯ ವಿಶೇಷ ಪರಿಣಾಮಗಳು :

1. ಮಾರಿಜುಆನ ಸೇವನೆಯು ಬದಲಾಯಿಸಲಾಗದಂತೆ ಮಿದುಳನ್ನು ಘಾಸಿಗೊಳಿಸುವುದಲ್ಲದೆ ಅಪಕ್ವತೆಯಲ್ಲಿ ಅದರ ಆಯುಷ್ಯವನ್ನು ಮೊಟಕುಗೊಳಿಸುತ್ತದೆ.

ಡಿಸೆಂಬರ್ 1971ರಲ್ಲಿ ಡಾ : ಎ. ಎಂ. ಜಿ. ಕ್ಯಾಂಪ್‌ಬೆಲ್ ಮತ್ತು ಅವರ ಸಂಗಡಿಗರು " ದಿ ಲಾನ್‌ಸೆಟ್ " ಎಂಬ ಜನಪ್ರಿಯ ಬ್ರಿಟಿಷ್ ವೈದ್ಯಕೀಯ ನಿಯತಕಾಲಿಕದಲ್ಲಿ ಹತ್ತು ಮಂದಿ ಸಾಂಕ್ರಾಮಿಕ ರೀತಿಯಲ್ಲಿ ಮಾರಿಜುಆನ ಕುಡಿಯುವವರ ಮಿದುಳುಗಳ ಕ್ಷ-ಕಿರಣ ಅಧ್ಯಯನಗಳನ್ನು ವರದಿಮಾಡಿದ್ದಾರೆ. ಒಂದೇ ವಯಸ್ಸಿನ ಕುಡಿಯದಿರುವವರ ಗುಂಪಿಗೆ ಹೋಲಿಸಿದಾಗ ಮಾರಿಜುಆನ ಗುಂಪಿನಲ್ಲಿ ಮಿದುಳು ಕೋಶ ಕ್ರಮಕ್ರಮೇಣ ವಿನಾಶದ ಅಂಚಿಗೆ ಹೋಗುತ್ತಿರುವುದು ಕಂಡುಬಂದಿತು. ಇತರ ತಂತ್ರಗಳನ್ನೊಳಗೊಂಡಂತೆ ಅನೇಕ ಅಧ್ಯಯನಗಳು ಇದೇ ರೀತಿ ಡಾ: ಕ್ಯಾಂಪ್‌ಬೆಲ್‌ನ ಸಂಶೋಧನೆಗಳನ್ನು ಬೆಂಬಲಿಸಿ ಪ್ರಕಟವಾದವು. ಡಾ: ರಾಬರ್ಟ್ ಜಿ. ಹೀತ್‌ರವರು, ಮಾರಿಜುಆನ ಸೇವನೆಯನ್ನು ಕೆಲವು ಕೋತಿಗಳಿಗೆ ಪ್ರತಿದಿನ ದೊಡ್ಡ ಪ್ರಮಾಣಗಳಲ್ಲಿ ಅನೇಕ ತಿಂಗಳುಗಳ ಕಾಲ ಕುಡಿಸಿದಾಗ ಕಂಡುಬಂದಿರುವ ಬದಲಾವಣೆಗಳನ್ನು ವರದಿಮಾಡಿದ್ದಾರೆ. ಮಾರಿಜುಆನ ನಿಲ್ಲಿಸಿದ ನಂತರ ಐದು ದಿನಗಳವರೆಗೆ ಅವರು ಅವುಗಳನ್ನು ಪರೀಕ್ಷಿಸಿದರು. ''ಹೋಲಿಕೆ ಸ್ಥಿತಿಗಳೊಂದಿಗಿನ ನಮ್ಮ ಪೂರ್ವಾನುಭವವು ಮಾರಿಜುಆನ ಕುಡಿಯುವಿಕೆಯ ಸಾಂಕ್ರಾಮಿಕತೆಯು ಮಿದುಳು ಕಾರ್ಯನಿರ್ವಹಣೆಯಲ್ಲಿ ಬದಲಿಸಲಾಗದ ರೀತಿಯಲ್ಲಿ ವೈಚಿತ್ರ್ಯಗಳನ್ನುಂಟುಮಾಡಿರುವುದನ್ನು ದೃಢಪಡಿಸಿತು; ಎಂಬುದಾಗಿ ಡಾ : ಹೀತ್ ಪ್ರತಿಪಾದಿಸಿದ್ದಾರೆ. ಡಾ: ಕ್ಯಾಂಪ್‌ಬೆಲ್‌ರ 10 ಮಂದಿ ರೋಗಿಗಳು ಮತ್ತು ಡಾ: ಹೀತ್‌ರವರ ಎರಡು ಕೋತಿಗಳು ಒಂದೇ ದಿನಾಂಕದಲ್ಲಿ ಮಿದುಳನ್ನು ಘಾಸಿಗೊಳಿಸಿದ ಸಾಧ್ಯತೆಯ ನೇರ

ದಾಖಲೆಯನ್ನು ಒದಗಿಸಿದವು. ಡಾ: ಕೊಲಾನ್ಸ್ಕಿ ಮತ್ತು ಮೂರ್‌ರವರು ಪದೇ ಪದೇ ಸೇವನೆಯು ಒಂದು ನಿರ್ದಿಷ್ಟ ಹಾಗೂ ಪ್ರತ್ಯೇಕ ಚಿಕಿತ್ಸಾತ್ಮಕ ಮೂರ್ಛಾವಸ್ಥೆಯನ್ನು ತಂದೊಡ್ಡುವುದೆಂದು ಮಾರಿಜುಆನ ಸೇವಿಸಿದ ರೋಗಿಗಳ ಮೇಲಿನ ತಮ್ಮ ಅವಲೋಕನಗಳ ಆಧಾರದ ಮೇಲೆ ಮನದಟ್ಟು ಮಾಡಿಕೊಂಡಿದ್ದಾರೆ. "ಆತ್ಮದ ಬಗೆಗಿನ ಎಚ್ಚರವನ್ನು ಅಸ್ತವ್ಯಸ್ತಗೊಳಿಸುವಿಕೆ, ಉದಾಸೀನತೆ, ಗೊಂದಲ ಮತ್ತು ವಾಸ್ತವಿಕ ಪರೀಕ್ಷೆ ದಾರಿದ್ರ್ಯ" ಇವುಗಳು ಈ ಮೂರ್ಛಾವಸ್ಥೆಯ ಶ್ರೇಷ್ಠತೆಯ ಗುರುತುಗಳೆಂದು ಹೇಳಲಾಯಿತು. ಇತರ ಚಿಹ್ನೆಗಳು ಎಂದರೆ ನಿದ್ರಾಗೊಂದಲಗಳು, ಸ್ಮೃತಿಶಕ್ತಿ ದೋಷಗಳು, ಕಾಲ ಪರಿಜ್ಞಾನದ ಕ್ಷೀಣತೆ.

2. ಮಾರಿಜುಆನ ಸೇವನೆಯು ಶರೀರದ ಪ್ರತಿರೋಧ ಶಕ್ತಿಯನ್ನು ಕುಂಠಿತಗೊಳಿಸುವ ಮೂಲಕ ಸೋಂಕುರೋಗಗಳು ಮತ್ತು ಕ್ಯಾನ್ಸರ್‌ಗೆ ಗುರಿಮಾಡುತ್ತದೆ.

ಮಾನವ ಶರೀರವು ಸೋಂಕು ರೋಗಗಳು, ವಿದೇಶಿ ಪೌಷ್ಟಿಕ ಪರಿಕರಗಳ ವಿರುದ್ಧ ಹಾಗೂ ಸಾಧ್ಯವಿರುವಷ್ಟು ಕ್ಯಾನ್ಸರ್‌ನ ಕೆಲವು ಬಗೆಗಳ ವಿರುದ್ಧ ಅನೇಕ ರಕ್ಷಣಾತ್ಮಕ ವ್ಯವಸ್ಥೆಗಳನ್ನು ಹೊಂದಿರುತ್ತದೆ. ಅಬಾಧಿತವಾದ ಈ ಲಕ್ಷಣಾತ್ಮಕ ವ್ಯವಸ್ಥೆಗಳು ಒಂದಾಗಿರುವ ಥೈಮಸ್ ಗ್ರಂಥಿಯಿಂದ ಉತ್ಪತ್ತಿಯಾಗುವ ನಿರ್ದಿಷ್ಟ ಬಿಳಿಯ ರಕ್ತಕೋಶಗಳಾದ-ಟಿ-ಲಿಂಫೋಸೈಟ್ಸ್ ಪ್ರತಿರೋಧ ಶಕ್ತಿಯನ್ನು ಒದಗಿಸುತ್ತದೆ. ಡಾ: ನಹಾಸ್‌ರವರು ಮಾರಿಜುಆನ ಕುಡಿಯುವವರಲ್ಲಿ ಟಿ-ಲಿಂಫೋಸೈಟ್ಸ್ ಪ್ರತಿರೋಧ ಶಕ್ತಿಯುಳ್ಳ ಅಬಾಧಿತ ಪ್ರತಿಕ್ರಿಯೆಯು ಕ್ಷೀಣಿಸುತ್ತದೆ ಎನ್ನುವ ಅರ್ಥವನ್ನು ಈ ಶೋಧನೆಯಲ್ಲಿ ಕಂಡುಕೊಂಡಿದ್ದಾರೆ. ಈ ವಿಷಯ ಸಂಬಂಧವಾಗಿ, ಅವರು, ಕೆಲವು ರೋಗಿಗಳಲ್ಲಿ ಟಿ-ಲಿಂಫೋಸೈಟ್ಸ್ ಕ್ಯಾನ್ಸರ್ ಅಥವಾ ಮೂತ್ರಪಿಂಡ ಕಾಯಿಲೆಗಳೊಂದಿಗೆ ಸಮ್ಮಿಳಿತಗೊಂಡಿರುವುದಾಗಿ ಪ್ರತಿಪಾದಿಸಿದ್ದಾರೆ. ಮಾರಿಜುಆನ ಸೇವಿಸುವವರು ಸೊಂಕುರೋಗಗಳು ಹಾಗೂ ಕ್ಯಾನ್ಸರ್ ವಿರುದ್ಧ ಪ್ರತಿರೋಧ ಶಕ್ತಿಯ ಮಾಧ್ಯಮಗಳ ಕೊರತೆಯನ್ನು ಅನುಭವಿಸುತ್ತಾರೆಂದು ಅವರು ಮುಕ್ತಾಯ ಹೇಳಿದ್ದಾರೆ.

3. ಮಾರಿಜುಆನ ಸೇವನೆಯು ಜನನ ದೋಷಗಳು ಮತ್ತು ಅನುವಂಶೀಯ ಕಾಯಿಲೆಗಳ ಸಂಭಾವ್ಯತೆಯನ್ನು ಹೆಚ್ಚಿಸುತ್ತದೆ.

ಹೆಚ್ಚು ಪರಿಪೂರ್ಣ ಮಾನವ ಜೀವಕೋಶಗಳು ವರ್ಣತಂತುಗಳು 46 (ಕ್ರೊಮೋಸೋಮು)ಗಳನ್ನು ಹೊಂದಿರುತ್ತದೆ. ಪ್ರತಿಯೊಂದು ವರ್ಣತಂತು (ಕ್ರೊಮೋಸೋಮು) ಜೀವಕೋಶದೊಳಕ್ಕೆ ಪೌಷ್ಟಿಕ ಅಂಶಗಳ ತಯಾರಿಯ ಪ್ರಭುತ್ವವನ್ನು ಪಡೆದಿರುವ ವಂಶವಾಹಿಗಳನ್ನು ಹೊತ್ತಿರುತ್ತದೆಯಲ್ಲದೆ ಜೀವಕೋಶದ ಇತರ ಕಾರ್ಯಗಳಲ್ಲಿ ಬಹುಮಟ್ಟಿಗಿನ ಕಾರ್ಯಗಳನ್ನು ಸಮರ್ಪಕಗೊಳಿಸುತ್ತದೆ. 1967ಕ್ಕೂ ಹಿಂದೆ ಎಲ್. ಎಸ್. ಡಿ. ಔಷಧ ವಸ್ತುವು ವರ್ಣತಂತುಗಳನ್ನು ಘಾಸಿಗೊಳಿಸುತ್ತದೆ ಎಂಬ ಟೀಕೆಯನ್ನು ಕುರಿತ ವರದಿಗಳು ಬರಲು ಪ್ರಾರಂಭವಾದವು.

ಹಾಗೆಯೇ ಜನವರಿ 1974ರಲ್ಲಿ ಡಾ : ಸ್ಟೆನ್ಸ್‌ಎವರ್ ಮತ್ತು ಅವರ ಸಂಗಡಿಗರು. ವಾರಕ್ಕೆ ಎರಡುಬಾರಿ ಅಥವಾ ಅದಕ್ಕೂ ಕಡಿಮೆ ಮಾರಿಜುಆನ ಸೇವಿಸುವ ವ್ಯಕ್ತಿಗಳನ್ನೂ ಒಳಗೊಂಡಂತೆ 49 ಮಾರಿಜುಆನ ಸೇವಿಸುವ ವ್ಯಕ್ತಿಗಳ ಲಿಂಫೊಸೈಟ್ಸ್‌ಗಳಲ್ಲಿ ಕೆಲವಟ್ಟಿಗೆ ಎತ್ತಿ ಹಿಡಿಯುವ ಪ್ರಮಾಣದಲ್ಲಿ ವರ್ಣತಂತುಗಳಿಗೆ ಧಕ್ಕೆಯಾಗಿರುವುದು ಕಂಡುಬಂದಿತೆಂದು ವರದಿ ಮಾಡಿದ್ದಾರೆ. ಡಾ : ನಹಾಸೆರವರ ಸಹವರ್ತಿಯಾಗಿದ್ದ ಡಾ : ಸ್ಟೆನ್ಸ್‌ಎವರ್ ಮತ್ತು ಅವರ ಸಂಗಡಿಗರು, ವಾರಕ್ಕೆ ಎರಡು ಬಾರಿ ಅಥವಾ ಅದಕ್ಕೂ ಕಡಿಮೆ ಮಾರಿಜುಆನ ಸೇವಿಸುವ ವ್ಯಕ್ತಿಗಳನ್ನೂ ಒಳಗೊಂಡಂತೆ 49 ಮಾರಿಜುಆನ ಸೇವಿಸುವ ವ್ಯಕ್ತಿಗಳ ಲಿಂಫೋಸೈಟ್ಸ್‌ಗಳಲ್ಲಿ ಕೆಲವಟ್ಟಿಗೆ ಎತ್ತಿಹಿಡಿಯುವ ಪ್ರಮಾಣದಲ್ಲಿ ವರ್ಣತಂತುಗಳಿಗೆ ಧಕ್ಕೆಯಾಗಿರುವುದು ಕಂಡುಬಂದಿತೆಂದು ವರದಿಮಾಡಿದ್ದಾರೆ. ಡಾ : ನಹಾಸ್‌ರವರ ಸಹವರ್ತಿಯಾಗಿದ್ದ ಡಾ : ಅಕಿರಾ ಮಾರಿಷಿಮಾ ರವರು ಮಾರಿಜುಆನ ಸೇವಿಸುವ ವ್ಯಕ್ತಿಗಳಿಂದ 956 ಲಿಂಫೋಸೈಟ್ಸ್‌ಗಳನ್ನು, ಕುಡಿಯದೇ ಇರುವ ವ್ಯಕ್ತಿಗಳಿಂದ 954 ಲಿಂಫೋಸೈಟ್‌ಗಳೊಂದಿಗೆ ಸಾದೃಶ್ಯಗೊಳಿಸಿದ್ದಾಗಿ ಹೇಳಿದ್ದಾರೆ. ಮಾರಿಜುಆನ ಸೇವಿಸುವ ವ್ಯಕ್ತಿಗಳಲ್ಲಿನ ಲಿಂಫೋಸೈಟ್ಸ್‌ಗಳಲ್ಲಿ ಶೇಕಡಾ 30ಕ್ಕಿಂತ ಹೆಚ್ಚು ಪ್ರಮಾಣವು ಸಾಮಾನ್ಯವಾಗಿ ಇರಬೇಕಾದ 46 ವರ್ಣತಂತುಗಳ ಬದಲಿಗೆ ಕೇವಲ 31 ವರ್ಣತಂತುಗಳಿಗಿಂತಲೂ ಕಡಿಮೆ ಇದ್ದಿತು. "ಅಬಾಧಿತ ರಕ್ಷಣಾ ವ್ಯವಸ್ಥೆಯಲ್ಲಿ ಸಂಭವನೀಯತೆಗೆ ಅವಕಾಶವಿರುವ ಅಪಾಯವನ್ನು, ಕ್ಯಾನ್ಸರಿನ ಬೆಳವಣಿಗೆ ಮತ್ತು ಜನನ ದೋಷಗಳನ್ನು ಮುಂದಾಗಿಯೇ ನಿರೀಕ್ಷಿಸುವುದು ತರ್ಕಬದ್ಧವಾಗಿರುತ್ತದೆ" ಎಂದು ಡಾ: ಮಾರಿಷಿಮಾ ಘೋಷಿಸಿದರು.

4. ಮಾರಿಜುಆನ ಸೇವನೆಯು ಶ್ವಾಸಕೋಶಗಳಲ್ಲಿ ಮತ್ತು ಇತರ ಶ್ವಾಸಕೋಶ ಭಗ್ನತೆಯಲ್ಲಿ ಮುಂದಾಗಿಯೇ ಕ್ಯಾನ್ಸರ್ ಆಧಾರಿತ ಬದಲಾವಣೆಗಳಿಗೆ ಕಾರಣವಾಗುತ್ತದೆ.

ಶ್ವಾಸಕೋಶಗಳ ಜೀವಕೋಶಗಳಲ್ಲಿ ಮಾರಿಜುಆನ ಸೇವನೆಯಿಂದುಂಟಾಗುವ ಧಕ್ಕೆಯು ಸ್ವಿಟ್ಜರ್‌ಲೆಂಡಿನ ಡಾ : ಸಿಸಿಲಿ ಮತ್ತು ಡಾ : ರುಡಾಲ್ಫ್ ಲಿಯುಬಿಟನ್ ಬರ್ಗರ್ ಅವರಿಂದಲೂ ಹಾಗೂ ಡಾ : ಫಾರೆಸ್ಟ್ ಎಸ್. ಟೆನ್ನಾಂಟ್ ಅವರಿಂದಲೂ ಸಹ ವರದಿಯಾಗಿದೆ. ಇದರ ಜೊತೆಗೆ, ಕೆಲವು ಚಿಕಿತ್ಸಾತ್ಮಕ ಅಧ್ಯಯನಗಳು, ಯಾವ ವ್ಯಕ್ತಿಗಳು ಹೆಚ್ಚಿನ ಪ್ರಮಾಣದಲ್ಲಿ ದೀರ್ಘಕಾಲದವರೆಗೆ ಮಾರಿಜುಆನ ಸೇವಿಸುವರೋ ಅವರಲ್ಲಿ ಸೇವಿಸದೇ ಇರುವ ವ್ಯಕ್ತಿಗಳಿಗಿಂತಲೂ ಪದೇ ಪದೇ ಶ್ವಾಸನಾಳಗಳ ಊತ ಅಥವಾ ಶ್ವಾಸಕೋಶ ಜೀವಕೋಶದ ಭಗ್ನತೆಗೆ ಕಾರಣವಾಗುವ ಇತರ ಪರಿಸ್ಥಿತಿಗಳ ಬೆಳವಣಿಗೆ ಹೆಚ್ಚಾಗಿರುವ ಸಾಧ್ಯತೆಗಳಿರುತ್ತವೆಂದು ಸಲಹೆ ಮಾಡಿವೆ.

5. ಮಾರಿಜುಆನ ಸೇವನೆಯು ಪುರುಷರಲ್ಲಿ ಷಂಡತನ, ನಿರ್ವೀಯತೆ ಅಥವಾ ಎರಡಕ್ಕೂ ಅವಕಾಶ ಒದಗಿಸುತ್ತದೆ.

ಟೆಸ್ಟೋಸ್ಟೆರೋನ್ ಗಂಡಸರಲ್ಲಿ ಅತ್ಯಂತ ಶಕ್ಯತೆಯಿರುವ ಲೈಂಗಿಕ ಹಾರ್ಮೋನ್ ಆಗಿದೆ. ಪುರುಷನ ರಕ್ತದಲ್ಲಿ ಟೆಸ್ಟೋ–ಸ್ಟೆರೋನ್ ಹಾರ್ಮೋನು ಕೇಂದ್ರೀಕೃತವಾಗಿದ್ದು, ಒಂದು ಪರಿಮಾಣಕ್ಕೊಳಪಟ್ಟು ಸಿದ್ಧವಾಗುತ್ತಿರುತ್ತದೆ. ಏಪ್ರಿಲ್ 1974 ರಲ್ಲಿ ಡಾ : ರಾಬರ್ಟ್ ಸಿ. ಕೊಲೊಡ್ನಿ ಮತ್ತು ಅವರ ಸಂಗಡಿಗರು ಇಪ್ಪತ್ತು ಮಂದಿ ಪದೇ ಪದೇ ಮಾರಿಜುಆನ ಸೇವಿಸಿದ ವ್ಯಕ್ತಿಗಳು ಹಾಗೂ ಇಪ್ಪತ್ತು ಮಂದಿ ಸೇವಿಸದೆ ಇರುವ ವ್ಯಕ್ತಿಗಳಲ್ಲಿ ಕಂಡುಬಂದ ಟೆಸ್ಟೋಸ್ಟೆರೋನ್ ರಕ್ತದ ಮಟ್ಟಗಳನ್ನು ತಾವು ಅಧ್ಯಯನ ಮಾಡಿದುದಾಗಿ ವರದಿಮಾಡಿದ್ದಾರೆ. ಮಾರಿಜುಆನ ಸೇವಿಸಿದ ವ್ಯಕ್ತಿಗಳಲ್ಲಿನ ಮಟ್ಟಗಳು ಸಹಜ ಪರಿಮಿತಿಗಳಿಗೆ ಒಳಪಟ್ಟಿದ್ದಾಗ್ಯೂ ಇವು ಸೇವಿಸದಿರುವ ವ್ಯಕ್ತಿಗಳ ಮಟ್ಟಗಳಿಗಿಂತ ಕಡಿಮೆ ಪ್ರಮಾಣದಲ್ಲಿ ಶಕ್ತಿಹೀನವಾಗಿರುವುದು ಕಂಡುಬಂದಿದೆ. ಅಲ್ಲದೆ, ಒಂದು ವಾರದಲ್ಲಿ 10 ಅಥವಾ ಅದಕ್ಕಿಂತ ಹೆಚ್ಚು ಮಾರಿಜುಆನ ಸಿಗರೇಟುಗಳನ್ನು ಕುಡಿಯುವ ವ್ಯಕ್ತಿಯ ಮಟ್ಟಗಳು ಒಂದು ವಾರದಲ್ಲಿ 5 ರಿಂದ 9 ರವರೆಗೆ ಸಿಗರೇಟುಗಳನ್ನು ಕುಡಿಯುವ ವ್ಯಕ್ತಿಯ ಮಟ್ಟಗಳಿಗಿಂತ ಹೆಚ್ಚು ನಿರ್ವೀರ್ಯತೆಯಿಂದ ಕೂಡಿರುತ್ತದೆ. ಆರು ಮಂದಿ ಮಾರಿಜುಆನ ಸೇವಿಸಿದ ವ್ಯಕ್ತಿಗಳು ಬಹುಮಟ್ಟಿಗೆ ಸಂಬಂಧಾತ್ಮಕವಾಗಿ ಕಡಿಮೆ ಪ್ರಮಾಣದಲ್ಲಿ ವೀರ್ಯಾಣುಗಳನ್ನು ಹೊಂದಿದ್ದರೆ ಇಬ್ಬರು ವ್ಯಕ್ತಿಗಳು ನಪುಂಸಕತ್ವದ ಆರೋಪಕ್ಕೆ ಗುರಿಯಾಗುವ ಟೆಸ್ಟೋಸ್ಟೆರೋನ್ ಹಾರ್ಮೋನುಗಳಿಗೆ ಸಂಬಂಧಿಸಿದವುಗಳಾಗಿರುತ್ತವೆ. ಒಂದೊಮ್ಮೆ ನಪುಂಸಕತ್ವ ಆರೋಪಕ್ಕೆ ಗುರಿಯಾದ ಪುರುಷರಲ್ಲಿ ಒಬ್ಬ ವ್ಯಕ್ತಿಯು ಮಾರಿಜುಆನ ಸೇವನೆಯನ್ನು ನಿಲ್ಲಿಸಿದೊಡನೆ, ತಾನು ಗುಣಮುಖನಾದುದೇ ಅಲ್ಲದೆ ಮೊದಲಿನ ಶಕ್ತಿಯನ್ನು ಮರಳಿ ಪಡೆಯಲು ಸಾಧ್ಯವಾಯಿತೆಂದು ವರದಿ ಮಾಡಿದ್ದಾನೆ.

ಸೆನೆಟರ್ ಜೇಮ್ಸ್ ಓ. ಈಸ್ಟ್‌ಲ್ಯಾಂಡ್‌ರವರು ತಮ್ಮ ಸಾಕ್ಷ್ಯಾಧಾರಿತ ಪತ್ರದ ಮೂಲಕ ಇವುಗಳ ವೈಯುಕ್ತಿಕ ಸಮಾಪ್ತಿಗಳನ್ನು ಸ್ಪಷ್ಟಪಡಿಸಿದ್ದಾರೆ.

1. ಒಂದು ವೇಳೆ ಕನ್ನಾಬಿಸ್ (ಮಾರಿಜುಆನ) ಸಾಂಕ್ರಾಮಿಕತೆಯು ದಟ್ಟವಾಗಿ ಮುಂದುವರಿದದ್ದೇ ಆದರೆ........ ಪ್ರಚೋದನಾತ್ಮಕ ಸಿಂಡ್ರೋಮ್ (ಸಿಂಡ್ರೋಮ್) ನಿಂದ ತೀಕ್ಷ್ಣವಾಗಿ ಬಾಧಿಸಲ್ಪಟ್ಟ ಅತ್ಯಂತ ದೊಡ್ಡ ಪ್ರಮಾಣದ ಜನಸಂಖ್ಯೆಯ ತರುಣ ಪೀಳಿಗೆಯನ್ನು ತಡೆಹಾಕಲಾಗದ ಪರಿಸ್ಥಿತಿಗೆ ನಾವು ಸಿಲುಕಿಕೊಳ್ಳುತ್ತೇವೆ.

2. ತರುಣ ಪೀಳಿಗೆಯ ಒಂದು ಪಾರ್ಶ್ವಭಾಗ ಅಂದರೆ ಇಪ್ಪತ್ತು ಮತ್ತು ಅದಕ್ಕೂ ಕಡಿಮೆ ವಯಸ್ಸಿನ ಜನರು ಮಾರ್ಪಡಿಸಲಾಗದ ಮಿದುಳು ಘಾಸಿಯಿಂದ ನರಳುವುದನ್ನು ನಾವು ಕಾಣಬೇಕಾಗಬಹುದು.

3. ಮಾರಿಜುಆನ ಉಪಯೋಗಿಸುತ್ತಿರುವ ಇಂದಿನ ಲಕ್ಷಾಂತರ ಮಂದಿ ಜೂನಿಯರ್ ಪ್ರೌಢಶಾಲೆ ಮಕ್ಕಳು ಬೌದ್ಧಿಕವಾಗಿಯೇ ಅಗಲಿ ಶಾರೀರಕವಾಗಿಯೇ ಇನ್ನೂ ಪ್ರೌಢಾವಸ್ಥೆಗೆ ಬಂದಿರದ ಹದಿ–ಹರಯದ ಇನ್ನೊಂದು ಪಾರ್ಶ್ವ ಪೀಳಿಗೆ

ಯನ್ನೇ ಉತ್ಪತ್ತಿ ಮಾಡಬಹುದು. ಏಕೆಂದರೆ ಇದರಿಂದ ಪ್ರೌಢದೆಶೆಗೆ ಬರುವ ಸಂದಿಗ್ಧ ಪರಿಸ್ಥಿತಿಯ ಕಾಲಾವಧಿಯಲ್ಲಿ ಜೀವಕಣಗಳ ಉತ್ಪಾದನೆಯಲ್ಲಿನ ನ್ಯೂನತೆ ಮತ್ತು ಹಾರ್ಮೋನುಗಳ ಕೊರತೆ ಬೆಳೆಯುತ್ತಾ ಹೋಗುತ್ತದೆ .... ಅಲ್ಲದೇ ತರುಣ ಪೀಳಿಗೆಯು ಪ್ರೌಢಾವಸ್ಥೆಯನ್ನು ಹೊಂದುವ ಮುನ್ನವೇ ವಯಸ್ಸಾದವರಂತೆ ಬೆಳೆಯಲಾರಂಭಿಸುವ ಘಟನೆಯನ್ನೂ ನಾವೂ ವೀಕ್ಷಿಸಬಹುದು.

4. ಶ್ವಾಸೋಚ್ಛ್ವಾಸ ಕ್ರಿಯೆಯ ಹಾನಿಗೊಳಗಾಗಿರುವ ಒಂದು ದೊಡ್ಡ ಪ್ರಮಾಣದ ಜನಸಂಖ್ಯೆಯಲ್ಲಿನ ಯುವಜನರೂ ಅಭಿವೃದ್ಧಿಗೊಳ್ಳುವ ಸಾಧ್ಯತೆಯನ್ನೂ ನಾವು ಗಮನಿಸಬಹುದು. ಅಲ್ಲದೆ ಮಾರಿಜುಆನ ಸೇವಿಸುವ ವ್ಯಕ್ತಿಗಳು ತಮ್ಮಲ್ಲಿನ ಜನನ ಸಾಮರ್ಥ್ಯ ಅಂಶಗಳನ್ನು ಕುಗ್ಗಿಸಿಕೊಳ್ಳುವುದರಿಂದಾಗಿ ಹೆಚ್ಚು ಪ್ರಮಾಣದಲ್ಲಿ ಶಾರೀರಕ ಹಾಗೂ ಮಾನಸಿಕವಾಗಿ ಊನಗೊಳ್ಳುವ ಮಕ್ಕಳನ್ನು ಸೃಷ್ಟಿಸುವ ಸಾಧ್ಯತೆಯೂ ಕಂಡುಬರುತ್ತದೆ.

ವಿಶೇಷವಾಗಿ ಮಾರಿಜುಆನ ಸೇವಿಸುವಿಕೆಯು ಸ್ನಾಯು ಸೆಳತಕ್ಕೆ, ಸ್ಥಳ ಕಾಲಗಳ ಪರಿವೆಯಿಲ್ಲದಂತೆ ಮಾಡುವುದಕ್ಕೆ ತೀರ್ಪುಗಳನ್ನು ಮತ್ತು ನಿರ್ಧಾರಗಳನ್ನು ತೆಗೆದುಕೊಳ್ಳುವ ಸಾಮರ್ಥ್ಯ ಮಾತ್ರವಲ್ಲದೆ ಸ್ಮೃತಿಶಕ್ತಿಯ ಕ್ಷೀಣತೆಗೂ ಕಾರಣವಾಗುತ್ತದೆ. ಇದರ ಚಟವು ಲೈಂಗಿಕ ಪ್ರಚೋದನೆಯನ್ನು ಕಳೆಯುತ್ತವೆ. ವಿರುದ್ಧ ಲಿಂಗವನ್ನು ದ್ವೇಷಿಸುತ್ತದೆ ಮತ್ತು 35ನೇ ವಯಸ್ಸಿನಲ್ಲಿ 65 ಅಥವಾ 70ರ ವಯಸ್ಸಾಗಿದೆ ಎಂದು ಭಾವಿಸುವಂತೆ ಮಾಡುತ್ತದೆ. ಇದು ಆತ್ಮ ವಿಶ್ವಾಸ ಕುಂದುವಿಕೆ, ನಪುಂಸಕತ್ವ ಹಾಗೂ ಮಾನಸಿಕ ಚಿಪ್ಪಿನೊಳಕ್ಕೆ ಸೇರಿಕೊಂಡು ಖಿನ್ನತೆಯನ್ನು ಬೆಳೆಸಿಕೊಳ್ಳುವುದಕ್ಕೆ ಕಾರಣವಾಗುತ್ತದೆ. ಒಂದು ಗಂಭೀರ ಸ್ವರೂಪದ ಮಾನಸಿಕ ಸ್ಥಿತಿಯು ಇದಕ್ಕೆ ಹೊಂದಿಕೊಂಡ ಇತರ ಪುಷ್ಟಿಕರ ಅಂಶಗಳು ಸೇರ್ಪಡೆಯಾಗುತ್ತಾ ಹೋದಂತೆ ಆತ್ಮಹತ್ಯೆ ಮಾಡಿಕೊಳ್ಳಬೇಕೆನ್ನುವ ಘಟ್ಟವನ್ನು ತಲುಪುವ ಹಂತಕ್ಕೆ ವ್ಯಕ್ತಿಯನ್ನು ಕೊಂಡೊಯ್ಯುತ್ತದೆ. ಮಾದಕ ಔಷಧ ಚಟವು ದೊಡ್ಡ ಮಟ್ಟದಲ್ಲಿ ಅಪರಾಧಕರ ವರ್ತನೆಗೆ, ನೈತಿಕ ಅಧಃಪತನಕ್ಕೆ ಹಾಗೂ ಸಾಮಾಜಿಕ ಅನೈಕ್ಯತೆಗೆ ನೇರ ಜವಾಬ್ದಾರಿಯಾಗಿದೆ. ಮದ್ಯಸೇವನೆ ಮತ್ತು ಅಪರಾಧ ಇವೆರಡೂ ಅವಳಿ ಜವಳಿ ಸೋದರರಿದ್ದಂತೆ. ಮಾದಕೌಷಧ ಚಟಕ್ಕೆ ಬಲಿಬಿದ್ದ ವ್ಯಕ್ತಿ ಶಕ್ತಿಹೀನ ವ್ಯಕ್ತಿತ್ವವುಳ್ಳವನಾಗಿದ್ದು ಕಾನೂನು ಉಲ್ಲಂಘನೆಯ ಮೂಲಕ ಯಾವ ರೂಪದಲ್ಲಾದರೂ ಅಮಲು ಪದಾರ್ಥಗಳನ್ನು ಪಡೆಯಲು ಯತ್ನಿಸುತ್ತಾನೆ. ತಲೆಹಿಡುಕ ದಲ್ಲಾಳಿಗಳು ಸಭೆಸೇರಿ ಇಂತಹ ವ್ಯಕ್ತಿಗಳನ್ನು ಪ್ರಚೋದಿಸುವ ಮೂಲಕ ಕಾನೂನು ವಿರುದ್ಧ ಆತನ ಅವಶ್ಯಕತೆಗಳನ್ನು ಪೂರೈಸಲು ಕಳ್ಳಸಾಗಾಣಿಕೆದಾರರ ತಂಡಗಳನ್ನು ಬೆಳೆಸುತ್ತಾರೆ. ಹೀಗೆ ಅಪರಾಧ ಮೂರು ದಿಕ್ಕಿನಲ್ಲಿ ವಿಸ್ತರಣಗೊಳ್ಳುತ್ತಾ ಹೋಗುತ್ತದೆ. ಸಮಾಜ ವಿರೋಧಿ ನಡೆವಳಿಕೆ ಮಾದರಿಯು ಮಾದಕೌಷಧ ವ್ಯಸನಿಗಳ ಲಕ್ಷಣಗಳನ್ನು ಮದ್ಯಪಾನವು ಹೆಚ್ಚಾಗಿ ಸಾರ್ವಜನಿಕವಾಗಿ ಶಾಂತಿಭಂಗ, ತನ್ನ

ಪ್ರಭಾವ ಪರಿಮಿತಿಯಲ್ಲಿ ವ್ಯತಿಕ್ರಮಣತೆಯನ್ನು ಒಳಗೊಂಡಿದ್ದರೆ ಮಾದಕೌಷಧ ಅಪರಾಧಗಳು ಔಷಧ ವಸ್ತುಗಳನ್ನು ಒಂದಲ್ಲ ಒಂದು ರೂಪದಲ್ಲಿ ಕದಿಯುವಿಕೆಯನ್ನು ಒಳಗೊಂಡಿರುವ ಸಾಧ್ಯತೆಗಳಿರುತ್ತವೆ.

ಪ್ರಸ್ತುತ "ಲೈಂಗಿಕ ಸ್ಫೋಟ" ವುಂಟಾಗಲೂ ಸಹ ಮಾದಕೌಷಧ ವಸ್ತುವು ತನ್ನ ಕೊಡುಗೆ ನೀಡಿದೆ. "ಯಾವುದೇ ಮಾನವ ಸಮಾಜವು ಹೆಚ್ಚು ಶಕ್ತಿಯನ್ನು ನೀಡುವ ಮಾಧ್ಯಮವನ್ನು ಆರಿಸಿಕೊಳ್ಳಲು ಅಥವಾ ಲೈಂಗಿಕ ಭೋಗವನ್ನು ಅನುಭವಿಸುವ ಸ್ವಾತಂತ್ರ್ಯವನ್ನು ಹೊಂದಿದೆ. ಆದರೆ ಒಂದು ಪೀಳಿಗೆಗಿಂತ ಹೆಚ್ಚಾಗಿ ಇದನ್ನು ಎರಡು ವಿಧಾನಗಳಲ್ಲೂ ನಡೆಸಿಕೊಂಡು ಹೋಗಲು ಸಾಧ್ಯವಾಗುವುದಿಲ್ಲ ಎಂಬ ರುಜುವಾತನ್ನು ಒದಗಿಸಿದೆ" ಎಂಬುದಾಗಿ ಅನ್‌ವಿನ್‌ರವರು ಹೇಳಿದ್ದಾರೆ. ಲೈಂಗಿಕ ಸ್ವಾತಂತ್ರ್ಯ, ಅಶ್ಲೀಲ ಮಾತುಗಳು ಮತ್ತು ಬರಹಗಳು, ಅನೈತಿಕತೆ ಹಾಗೂ ಭಂಡತನ ಅಸಹ್ಯತೆಗಳು ಮಾದಕೌಷಧ ಚಟದಿಂದ ಉದ್ಭವಿಸುತ್ತವೆ. ಔಷಧ ವಸ್ತುಗಳ ಮಿತಿಮೀರಿದ ಪ್ರಮಾಣಗಳು ವ್ಯಕ್ತಿತ್ವವನ್ನು ಸುಲಿಗೆ ಮಾಡುತ್ತವೆ. ಶರೀರವನ್ನು ನಾಶಗೊಳಿಸುತ್ತವೆ, ಸ್ವಾಸ್ಥ್ಯವನ್ನು ಹಾಳುಮಾಡುತ್ತವೆ, ಪ್ರಾಣಶಕ್ತಿಯನ್ನು ಕುಂದಿಸುತ್ತವೆ, ನೈತಿಕ ಚಾರಿತ್ರ್ಯವನ್ನು ಪತನಗೊಳಿಸುತ್ತವೆ, ಹಾಗೂ ಶರೀರ ಮನಸ್ಸಿನ ಧೀಶಕ್ತಿಯನ್ನು ಕ್ಷೀಣಿಸುತ್ತವೆ. ಆರೋಗ್ಯದ ಅವನತಿಯೊಂದಿಗೆ ಬೌದ್ಧಿಕ ದಿವಾಳಿತನವುಂಟಾಗುತ್ತದೆ.

ಉದಾಹರಿತ ಎರಡು ಸಮೀಕ್ಷೆಗಳು :

ಶಿಕ್ಷಣ ಮತ್ತು ಸಮಾಜ ಕಲ್ಯಾಣ ಸಚಿವಾಲಯದಿಂದ ಅಂಗೀಕೃತಗೊಂಡ ಒಂದು ಸಮೀಕ್ಷೆಯು ದೆಹಲಿಯಲ್ಲಿ ಅಖಿಲ ಭಾರತ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಿಂದ ವ್ಯವಸ್ಥಾಪಿಸಲ್ಪಟ್ಟಿತು. ಇನ್ನೊಂದು ಸಮೀಕ್ಷೆಯನ್ನು ಆಗ್ರಾದಲ್ಲಿ ನಡೆಸಲಾಯಿತು.

(1) ದೆಹಲಿ ಸಮೀಕ್ಷೆ :

ದೆಹಲಿ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳ ನಡುವೆ ಅವರ ಸಾಮಾಜಿಕ ಸಾಂಸ್ಕೃತಿಕ ಹಿನ್ನೆಲೆ, ಕುಟುಂಬ, ತಂದೆತಾಯಿಗಳು, ನೆರೆಹೊರೆ ಶ್ರೀಮಂತ ಗುಂಪುಗಳು ಇವುಗಳಿಗೆ ಸಂಬಂಧಪಟ್ಟಂತೆ ಔಷಧ ದುರುಪಯೋಗದ ಪ್ರಚಲಿತ ದರ, ಸ್ವರೂಪ ಹಾಗೂ ಮಾದರಿಗಳನ್ನು ದೆಹಲಿ ಸಮೀಕ್ಷೆಯು ಅಧ್ಯಯನ ಮಾಡಿತು. ವಿಶ್ವವಿದ್ಯಾನಿಲಯದಿಂದ ಸ್ವೀಕೃತವಾದ 51 ಕಾಲೇಜುಗಳಲ್ಲಿ 10 ಕಾಲೇಜುಗಳನ್ನು ಯಾದೃಚ್ಛಿಕವಾಗಿ ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಯಿತು. ಮಾದರಿಯು ಸ್ನಾತಕೋತ್ತರ ಪೂರ್ವ ಹಾಗೂ ಸ್ನಾತಕೋತ್ತರ ತರಗತಿಗಳಿಗೆ ಸೇರಿದ 2,000

ಮಂದಿ ವಿದ್ಯಾರ್ಥಿಗಳು ಹಾಗೂ 1991 ಮಂದಿ ವಿದ್ಯಾರ್ಥಿನಿಯರನ್ನು ಒಳಗೊಂಡಿದ್ದಿತು.

ಒಟ್ಟು ಮಾದರಿಯಲ್ಲಿ ಶೇಕಡಾ 12ರಷ್ಟು ಮತ್ತು 11ರಷ್ಟು ಮಂದಿ ಕ್ರಮವಾಗಿ ಆಲ್ಕೋಹಾಲ್ ಮತ್ತು ತಂಬಾಕನ್ನು ಬಳಸುತ್ತಿದ್ದರೆಂದು ಅಂಕಿ ಅಂಶಗಳು ಪ್ರಕಾಶಪಡಿಸಿದವು. ಹೆಂಗಸರಿಗಿಂತ ಗಂಡಸರಲ್ಲಿ ಆಲ್ಕೋಹಾಲ್ ದುರುಪಯೋಗವು ಎಂಟರಷ್ಟು ಮತ್ತು ತಂಬಾಕಿನ ದುರುಪಯೋಗವು ಏಳರಷ್ಟು ರೂಢಿಯಲ್ಲಿದ್ದಿತು. ಆಲ್ಕೋಹಾಲ್ ಮತ್ತು ತಂಬಾಕಿನ ತರುವಾಯ, ಟ್ರಾಂಕ್ವಿಲೈಸರ್ಸ್ ಮತ್ತು ಕನ್ನಾಬಿಸ್ (ಮಾರಿಜುಆನ) ಇವು ಹೆಚ್ಚು ಜನಪ್ರಿಯವಾಗಿರುವುದು ಕಂಡು ಬಂದವಲ್ಲದೇ ಇವುಗಳ ಪ್ರಮಾಣ ಒಟ್ಟು ಮಾದರಿಯಲ್ಲಿ ಕ್ರಮವಾಗಿ ಶೇಕಡಾ 3ರಷ್ಟು ಮತ್ತು 1.3ರಷ್ಟು ಇದ್ದಿತು. ಚರಸ್ ಸೇವನೆಯು ಏಕಪ್ರಕಾರವಾದ ಒಂದು ಗುಂಪು ಚಟುವಟಿಕೆಯಾಗಿದ್ದಿತ್ತಲ್ಲದೆ ವಿದ್ಯಾರ್ಥಿಗಳು ಅದರಾಚೆ ಏನಿದೆಯೆಂಬ ಕುತೂಹಲಕ್ಕಾಗಿ: 'ಬೋರು ಹೊಡೆಯುತ್ತೆ ಎಂಬ ಕಾರಣಕ್ಕಾಗಿ' ಹಾಗೂ 'ಗೆಳೆಯರ ಬಲವಂತಕ್ಕಾಗಿ' ಮುಂತಾದ ನೆಪಗಳೊನ್ನೊಡ್ಡಿ ಈ ಚಟುವಟಿಕೆಯಲ್ಲಿ ತಲ್ಲೀನರಾಗುತ್ತಿದ್ದರು. ಚರಸ್ಸನ್ನು ಸಿಗರೇಟಿನಲ್ಲಿ ಇರಿಸಿಕೊಂಡು ದಮ್ ಎಳೆಯುತ್ತಿದ್ದರು. ಅನೇಕ ಮಂದಿ ದಿನವೂ, ಕನಿಷ್ಟ ಎಂದರೆ ತಿಂಗಳಿಗೆ ಅನೇಕ ಸಮಯಗಳಲ್ಲಿ ಇದರ ಧೂಮಪಾನ ಮಾಡುತ್ತಿದ್ದರು. ಕ್ಯಾಂಪಸ್ ಆವರಣದಲ್ಲಿ ರಹಸ್ಯಮಯ ಚಲನ ವಲನಗಳಿಂದ ತಿರುಗುವ ಔಷಧ ವ್ಯಾಪಾರಿಗಳು ಚರಸ್ಸನ್ನು ಸರಬರಾಯಿ ಮಾಡುತ್ತಿದ್ದರು.

ಕಠಿಣತಮ ಔಷಧವಸ್ತುಗಳಾದ ಅಫೀಮು, ಎಲ್. ಎಸ್. ಡಿ. ಮುಂತಾದುವುಗಳ ಪ್ರಚಲಿತ ದರವು ಶೇಕಡಾ ಒಂದಕ್ಕಿಂತಲೂ ಕಡಿಮೆ ಇದ್ದಿತು. ಕ್ಯಾಂಪಸ್ಸಿನ ಜನಸಂಖ್ಯೆಯ ಶೇಕಡಾ 98ರಷ್ಟು ವಿದ್ಯಾರ್ಥಿಗಳಲ್ಲಿ ಈ ಬಗೆಯ ಔಷಧ ದುರುಪಯೋಗದ ಕುರಿತು ಎಚ್ಚರ ಮನೋಭಾವ ಇದ್ದಿತು. ಹಾಗಿದ್ದರೂ, ಬುದ್ಧಿವಂತರಾದ ಹುಡುಗಿಯರು ಸರಾಸರಿ ಪ್ರಮಾಣದವರಿಗಿಂತ ಹೆಚ್ಚಿನ ಪ್ರಮಾಣದಲ್ಲಿ ಔಷಧವಸ್ತುಗಳನ್ನು ತೆಗೆದುಕೊಳ್ಳುತ್ತಿದ್ದರು. ಅವರ ಚಟಗಳು ಮತ್ತು ಆಯ್ಕೆಗಳು ಸ್ಪಷ್ಟವಾಗಿದ್ದವು.

ಸಮಾಜಶಾಸ್ತ್ರೀಯ ಅಂಶಗಳು ಸಮಸ್ಯೆಯ ಮೇಲೆ ನೇರ ಸಂಬಂಧವನ್ನು ಹೊಂದಿದ್ದವು. ಚಿಕ್ಕ ಚಿಕ್ಕ ಕುಟುಂಬಗಳಲ್ಲಿನ ಮಕ್ಕಳು ಮತ್ತು ಎಲ್ಲ ತಂದೆ ತಾಯಿಗಳಿಬ್ಬರೂ ಕೆಲಸಕ್ಕೆ ಹೋಗುತ್ತಾರೆಯೋ ಅಂತಹ ಕುಟುಂಬಗಳಲ್ಲಿ ಜವಾನರುಗಳ ಮೂಲಕ ಬೆಳೆಯಿಸುವ ಮಕ್ಕಳು ಮಾದಕೌಷಧ ವ್ಯಸನಕ್ಕೆ ಹೆಚ್ಚು ಬೋರಲು ಬಿದ್ದವರಾಗಿದ್ದರು. ಮೆಟ್ರೊಪಾಲಿಟನ್ ನಗರಗಳಿಂದ ಬಂದವರಿಗಿಂತಲೂ ಹೆಚ್ಚಾಗಿ ಪಟ್ಟಣಗಳು ಅಥವಾ ಹಳ್ಳಿಗಳಿಂದ ಬಂದವರೇ ದೊಡ್ಡ ಗಂಡಾಂತರಕ್ಕೆ ಗುರಿಯಾಗಿರುವುದು ಕಂಡುಬಂದಿತು. ಅಲ್ಲದೇ, ಹೆಚ್ಚು ವರಮಾನವುಳ್ಳ ಆವರಣದಿಂದ ಬಂದಿರುವ ಹಾಗೂ ಮೇಲ್ವರ್ಗದ ಸಾಮಾಜಿಕ ಅಂತಸ್ತನ್ನು ಹೊಂದಿರುವವರು ಉಳಿದವರಿಗಿಂತ ಹೆಚ್ಚಾಗಿ

ಔಷಧವಸ್ತುಗಳನ್ನು ಪದೇ ಪದೇ ಉಪಯೋಗಿಸುತ್ತಿದ್ದರು. ಈ ತೆರನ ಅನೇಕ ಮನೆಗಳಲ್ಲಿ ಮಾದಕ ಪಾನೀಯ ಸೇವನೆಯನ್ನು ಒಂದು ಸ್ಥಾನಮಾನದ ಸಂಕೇತವೆಂದು ಪರಿಗಣಿಸಿರುವುದರಿಂದ ಸ್ವಾಭಾವಿಕವಾಗಿಯೇ ಮಕ್ಕಳೂ ಚಿಕ್ಕ ವಯಸ್ಸಿನಲ್ಲೇ ಕುಡಿಯುವುದನ್ನು ಕಲಿತಿರುತ್ತಾರೆ. ವಿದ್ಯಾರ್ಥಿಗಳು ಅದರಲ್ಲೂ ಹೆಚ್ಚಾಗಿ 16ರಿಂದ 21 ವರ್ಷಗಳ ವಯೋ ಗುಂಪಿನ ವಿದ್ಯಾರ್ಥಿಗಳು ಬಾಲ್ಯತನದ ಪರಾವಲಂಬನೆಯಿಂದ ವಯಸ್ಕತನದ ಸ್ವಾಯತ್ತತೆಯೆಡೆಗೆ ಸ್ಥಿತ್ಯಂತರಗೊಳ್ಳುವ ಸಂಕ್ರಮಣ ಕಾಲವಾಗಿರುತ್ತದೆ. ಸಾಧಾರಣಾವಾಗಿ ಒಂದು ಗುಂಪಿನ ಸ್ನೇಹಿತರಲ್ಲಿ ದಯಾಪರತೆ ಅಥವಾ ಅಶ್ಲೀಲತೆ ಏಕರೂಪವಾಗಿರುವುದು ಕಂಡು ಬಂದಿದೆ. ಆದರೆ, ಬೇರೆ ಇತರರಿಗಿಂತ ಶ್ರೀಮಂತ ಸಂಗಡದ ಒತ್ತಡ ಬಲವಂತಗಳು ಹೆಚ್ಚು ಪ್ರಭಾವಶಾಲಿಯಾಗಿರುವುದರಿಂದ ಹಾಸ್ಟೆಲ್ ನಿವಾಸಿಗಳು ವಿದ್ಯಾಭ್ಯಾಸಿ ಹಂಬಲವುಳ್ಳವರಿಗಿಂತ ಅತ್ಯಂತ ಹೆಚ್ಚು ಪ್ರಮಾಣದಲ್ಲಿ ಔಷಧಗಳನ್ನು ದುರುಪಯೋಗ ಮಾಡುತ್ತಾರೆ. ಔಷಧವಸ್ತುಗಳ ದುರುಪಯೋಗಿಗಳು ಹೆಚ್ಚು ಬಹಿರ್ಮುಖಿಗಳೂ, ಹೆಚ್ಚು ಉದ್ವೇಗಿಗಳೂ ಹಾಗೂ ಹೆಚ್ಚು ಅಸ್ಥಿರತೆಯುಳ್ಳವರೂ ಆಗಿರುತ್ತಾರೆಂಬುದೂ ಸಹ ಗೋಚರವಾಗಿದೆ. 'ಕುತೂಹಲದಿಂದಾಚೆ ಏನಿದೆ' ಮತ್ತು 'ಗೆಳೆಯರ ಪ್ರಭಾವ ನಿರ್ಲಕ್ಷ್ಯ ಮಾಡುವುದು ಹೇಗೆ' ಮುಂತಾಗಿ ವಿದ್ಯಾರ್ಥಿಗಳು ಔಷಧವಸ್ತುಗಳನ್ನು ಹೆಚ್ಚಾಗಿ ತೆಗೆದುಕೊಳ್ಳದೇ ಇರುವ ಕಾರಣಗಳು ಅವರು ಅವುಗಳನ್ನು ಹೊರತುಪಡಿಸಿ ಜೀವನದಲ್ಲಿ ಸುಖಾನುಭವವನ್ನು ಪಡೆಯಬೇಕು ಎಂಬುದೇ ಆಗಿರುತ್ತದೆ. ಇತರ ಅಂಶಗಳೆಂದರೆ ವೈಯಕ್ತಿಕ ಅನಿಚ್ಛೆ, ತಂದೆ ತಾಯಿಗಳ ಪ್ರಭಾವ, ನೈತಿಕ ಅಥವಾ ಧಾರ್ಮಿಕ ತತ್ವಗಳು ಹಾಗೂ ಶಾರೀರಕ ಮತ್ತು ಮಾನಸಿಕ ಆಘಾತದ ಅಪಾಯ, ಇತ್ಯಾದಿ. ಬಹುಸಂಖ್ಯಾತ ಗಂಡಸರು ಔಷಧ ವಸ್ತುಗಳನ್ನು ಏಕೆ ತೆಗೆದುಕೊಳ್ಳಬೇಕೆಂಬುದನ್ನು ತಿಳಿದವರಾಗಿದ್ದಾರೆ, ಬಹುಸಂಖ್ಯಾತ ಹೆಂಗಸರು ಅವುಗಳನ್ನು ಏಕೆ ತೆಗೆದುಕೊಳ್ಳಬಾರದೆಂಬುದನ್ನು ಬಲ್ಲವರಾಗಿದ್ದಾರೆ.

(2) ಆಗ್ರಾ ಸಮೀಕ್ಷೆ:

ಸಮೀಕ್ಷೆಯು ಆಗ್ರಾದ ಕಾಲೇಜುಗಳಲ್ಲಿನ 564 ವಿದ್ಯಾರ್ಥಿಗಳನ್ನು ಒಳಗೊಂಡಿದ್ದಿತು. ಶೇಕಡ 10.39ರಷ್ಟು ಗಂಡಸರು ಮತ್ತು ಶೇಕಡಾ 1.92ರಷ್ಟು ಹೆಂಗಡಸರು ಕುಡಿತವನ್ನಾಗಲಿ ಅಥವಾ ಔಷಧವಸ್ತುಗಳನ್ನಾಗಲಿ ಪ್ರತಿನಿತ್ಯ ಅಥವಾ ಕನಿಷ್ಟ ವಾರಕ್ಕೊಂದು ಬಾರಿಯಾದರೂ ತೆಗೆದುಕೊಳ್ಳುತ್ತಾರೆಂಬುದು ಕಂಡುಬಂದಿತು. ವಿದ್ಯಾರ್ಥಿನಿಯರ ನಡುವಣ ಕುಡಿಯುವಿಕೆ ಅಥವಾ ಔಷಧವಸ್ತುಗಳ ಸೇವನೆ ಇತ್ತೀಚಿನ ಪ್ರವೃತ್ತಿಯಾಗಿದೆ. ವೈದ್ಯಕೀಯ ವಿದ್ಯಾರ್ಥಿನಿಲಯರು ತಮಗೆ ಔಷಧವಸ್ತುಗಳು ಸುಲಭವಾಗಿ ಲಭ್ಯವಾಗುವುದೆಂಬ ಹಾಗೂ ಅವುಗಳ ಬಳಕೆಯ ಬಗ್ಗೆ ಪರಿಜ್ಞಾನದ ಕಲ್ಪನೆ ತಮಗಿದೆಯೆಂಬ ಕಾರಣದಿಂದ ಒಂದಕ್ಕಿಂತ ಹೆಚ್ಚು ಔಷಧವಸ್ತು

ಗಳನ್ನು ಆಗಾಗ್ಗೆ ಸೇವಿಸುತ್ತಿರುತ್ತಾರೆ. ಆದರೆ ವಿದ್ಯಾರ್ಥಿನಿಯರ ನಡುವೆ ಬಹು ಸಂಖ್ಯೆಯಲ್ಲಿ ಔಷಧವಸ್ತುಗಳನ್ನು ತೆಗೆದುಕೊಳ್ಳುವವರ ಪ್ರಮಾಣಕ್ಕಿಂತಲೂ ಐದು ಪಟ್ಟು ಕಡಿಮೆ ಇರುತ್ತದೆ. ವಿದ್ಯಾರ್ಥಿಗಳ ನಡುವೆ ಬಹುಸಂಖ್ಯೆಯಲ್ಲಿ ಔಷಧವಸ್ತುಗಳನ್ನು ಸೇವಿಸುವವರ ಪ್ರಮಾಣ ಒಂದೇ ಔಷಧೋಪಯೋಗಿಗಳ ಹತ್ತಿರ ಎರಡು ಪಟ್ಟು ಇರುತ್ತದೆ. ವಿದ್ಯಾರ್ಥಿಗಳ ನಡುವೆ ಪ್ರಮುಖವಾಗಿ ಸರ್ವೇಸಾಧಾರಣವಾಗಿ ಉಪಯೋಗಿಸುವ ವಸ್ತುಗಳೆಂದರೆ, ಆಲ್ಕೋಹಾಲ್, ಭಂಗಿಸೊಪ್ಪು, ಚರಸ್, ಗಾಂಜಾ, ಸೆಡೆಟಿವ್ಸ್ ಮತ್ತು ಬಾರ್ಬಿಟುರೇಟ್ಸ್; ಅದರಲ್ಲೂ, ನಿರ್ದಿಷ್ಟವಾಗಿ ಮಾಂಡ್ರಕ್ಸ್, ವೆಸ್ಪರೆಕ್ಸ್, ಈಕ್ವನಿಲ್ ಹಾಗೂ ಲಿಬ್ರಿಯಮ್. ವೈದ್ಯಕೀಯ ಗುಂಪಿನಲ್ಲಿರದ ವಿದ್ಯಾರ್ಥಿನಿಯರು ಹೆಚ್ಚಾಗಿ ನೋವನ್ನು ಕೊಲ್ಲುವ ಔಷಧವಸ್ತುಗಳಿಗೆ ಅಂಟಿಕೊಳ್ಳುವರಾದರೂ ಸಹ, ವೈದ್ಯಕೀಯ ವಿದ್ಯಾರ್ಥಿನಿಯರು ಇವುಗಳೊಂದಿಗೆ ಈಕ್ವನಿಲ್‌ನ್ನೂ ತೆಗೆದುಕೊಳ್ಳುತ್ತಾರೆ. ಆಗ್ರಾ ಸಮೀಕ್ಷೆಯು, ಎಲ್ಲಾ ವಿದ್ಯಾರ್ಥಿಗಳಲ್ಲಿ ಶೇಕಡಾ 74ರಷ್ಟು ಮಂದಿ ಹಾಗೂ ವಿದಾರ್ಥಿನಿಯರಲ್ಲಿ ಶೇಕಡಾ 26ರಷ್ಟು ಮಂದಿ ಒಂದಲ್ಲ ಒಂದು ಸಮಯದಲ್ಲಿ ಔಷಧ ಸೇವನೆ ಅನುಭವವನ್ನು ಪಡದೇ ಇರುತ್ತಾರೆ ಎಂಬುದಾಗಿ ಪ್ರಕಟಪಡಿಸಿತು.

ಔಷಧವಸ್ತುಗಳ ಬಳಕೆಗೆ ಆಗ್ರಾ ವಿದ್ಯಾರ್ಥಿಗಳು ಪಟ್ಟಿಮಾಡಿದ ಇಪ್ಪತ್ಮೂರು ಕಾರಣಗಳನ್ನು ಸಮೀಕ್ಷೆಯು ಒಳಗೊಂಡಿದ್ದಿತು. ಅವರು ಕೊಟ್ಟಿರುವ ಪ್ರಮುಖ ಕಾರಣವೆಂದರೆ 'ಬಿಕ್ಕಟ್ಟಿನಿಂದ ಬಿಡುಗಡೆ ಮತ್ತು ಆರಾಮ ಸೌಕರ್ಯವನ್ನು ಹೊಂದುವುದು (ಶೇಕಡಾ 59). ಮುಂದಿನ ಪ್ರೇರಕ ಅಂಶವೆಂದರೆ 'ಕೇವಲ ತಮಾಷೆಗಾಗಿ' (ಶೇಕಡಾ 39) ಇತರ ಕಾರಣಗಳೆಂದರೆ ಕುತೂಹಲವನ್ನು ತಣಿಸುವುದು, ಲೈಂಗಿಕ ಅನುಭವವನ್ನು ಎತ್ತರಿಸುವುದು, ಸಮಾಜದ ಮೌಲ್ಯಗಳಿಗೆ ಸವಾಲೊಡ್ಡುವುದು, ಇತರರನ್ನು ಅನುಕರಿಸುವುದು, ಇತರರ ಮೇಲೆ ಪ್ರಭಾವ ಮುದ್ರೆ ಒತ್ತುವುದು, ಇಂದ್ರಿಯಜ್ಞಾನ ಹಾಗೂ ಆತ್ಮ ಸಂಬಂಧ ತಿಳಿವಳಿಕೆಗಳನ್ನು ವರ್ಧಿಸುವುದು ಹಾಗೂ ವೈಯಕ್ತಿಕ ಸಮಸ್ಯೆಗಳನ್ನು ತೀವ್ರವಾಗಿ ವಿಶ್ಲೇಷಿಸುವುದು ದೊಡ್ಡ ದೊಡ್ಡ ಪಟ್ಟಣಗಳಲ್ಲಿನ ಶೈಕ್ಷಣಿಕ ಸಂಸ್ಥೆಗಳಲ್ಲಿ ಹಾಗೂ ಸಮೃದ್ಧ ಸಾಮಾಜಿಕ ಸಮೂಹಗಳಲ್ಲಿ ಉಂಟಾಗಿರುವ ಮಹಿಳಾ ಚಳುವಳಿಯ ಫಲಿತಾಂಶವು ವಿದ್ಯಾರ್ಥಿನಿಯರಲ್ಲಿ ಔಷಧ ದುರುಪಯೋಗ ಪ್ರವೃತ್ತಿಯ ಬೆಳವಣಿಗೆಗೆ ಕಾರಣವಾಗಿದೆ. ಎಲ್. ಎಸ್. ಡಿ. ಈಗ ದೊರಕುವಂತಾಗಿದೆ. ವಿಪರೀತ ನಿದ್ರಾವಸ್ಥೆ, ಆಲಸ್ಯತನ, ತಲೆತಿರುಗುವಿಕೆ, ಬುದ್ಧಿಭ್ರಮಣತೆ, ಕೇಂದ್ರೀಕರಣ ಅಸಾಮರ್ಥ್ಯ, ಭೌತಿಕ ಸಮನ್ವಯ ದಾರಿದ್ರ್ಯ ಇವುಗಳನ್ನೊಳಗೊಂಡ ಅನೇಕ ಪಾರ್ಶ್ವ ತೊಂದರೆಗಳನ್ನು ಔಷಧ ಸೇವಿಸುವ ವ್ಯಕ್ತಿಗಳು ಹೊರಗೆಡಹಿದ್ದಾರೆ. ಅನೇಕ ಪ್ರಕರಣಗಳಲ್ಲಿ ಕ್ಯಾಂಪಸ್ಸಿನ ಗೆಳೆಯರ ಸಲಹೆ ಮೇರೆಗೆ ಮತ್ತು ವೈದ್ಯರ ಸಲಹೆ ಮೇರೆಗೆ ಔಷಧ ಬಳಕೆ ಆರಂಭವಾಗಿರುವುದು ಕಂಡುಬಂದಿದೆ. ಈ ಚಟ ಅತ್ಯಂತ ತೀವ್ರಗತಿಯಲ್ಲಿ ಬೆಳೆಯುತ್ತಿದೆ.

ಪ್ರತಿಬಂಧಕ ಪರಿಹಾರಗಳು :

ಹತ್ತೊಂಬತ್ತನೆಯ ಶತಮಾನದ ಮಧ್ಯಭಾಗದ ತರುವಾಯ ಪ್ರತಿಬಂಧಕ ಚಳುವಳಿಯು ಭಾರತದಲ್ಲಿ ಸ್ಪಷ್ಟರೂಪವನ್ನು ತಳೆಯಿತು. 1928ರಲ್ಲಿ ರಾಷ್ಟ್ರೀಯ ಕಾಂಗ್ರೆಸ್ ಪ್ರತಿಬಂಧನೆಯನ್ನು ಬೆಂಬಲಿಸುವ ನಿರ್ಣಯವನ್ನು ಅಂಗೀಕರಿಸಿತು. ಅದು ತನ್ನ ಹಕ್ಕುಗಳ ಮಸೂದೆಯಲ್ಲಿ ಇದಕ್ಕೆ ಸಂಬಂಧಿಸಿದ ಉಪವಾಕ್ಯವನ್ನು ಅಳವಡಿಸಿಕೊಂಡಿತು. ಕೆಳಗಿನ ವಿಚಾರಕ್ಕೆ ಸಂಬಂಧಿಸಿದ ವಿಚಾರವನ್ನು ತನ್ನ ಪರವಾಗಿ ಸ್ವರಾಜ್ಯ ಸರ್ಕಾರವು ಒಪ್ಪಿಕೊಂಡು ಯಾವುದೇ ಸಂವಿಧಾನದಲ್ಲಿ ಅದಕ್ಕೆ ಅವಕಾಶ ಕಲ್ಪಿಸಬೇಕೆಂದು ಕಾಂಗ್ರೆಸ್ ಘೋಷಿಸುತ್ತದೆ. '' ಮಾದಕ ಪಾನೀಯಗಳು ಹಾಗೂ ಔಷಧ ವಸ್ತುಗಳನ್ನು ವೈದ್ಯಕೀಯ ಉದ್ದಿಶ್ಯಗಳಿಗೆ ಹೊರತು ಪಡಿಸಿ ಒಟ್ಟಾರೆ ಸಂಪೂರ್ಣವಾಗಿ ಪ್ರತಿಬಂಧಿಸತಕ್ಕದ್ದು.. 1831ರಲ್ಲಿ ಕಾಂಗ್ರೆಸ್, ತನ್ನ ಎಲ್ಲಾ ಅಂಗ ಸಂಸ್ಥೆಗಳು ತಮ್ಮ ಶಕ್ತಿಮೀರಿ ಮದ್ಯಪಾನ ಮತ್ತು ಮಾದಕ ಔಷಧ ವಸ್ತುಗಳ ವಿರುದ್ಧ ವ್ಯವಸ್ಥಿತ ಪ್ರಚಾರ ಮುಂದುವರೆಸಲು ಕರೆನೀಡಿತಲ್ಲದೆ, ಈ ರಾಷ್ಟ್ರದ ಮಹಿಳೆಯರು ಸಂತೋಷಭರಿತ ಕುಟುಂಬಗಳನ್ನು ದಿಕ್ಕಾಪಾಲು ಮಾಡುವ ಹಾಗೂ ದೇಹ ಮತ್ತು ಆತ್ಮಗಳನ್ನು ಕುಂದಿಸುವಂತಹ ಕುಡಿತ ಮತ್ತು ಔಷಧ ವ್ಯಸನಿಗಳನ್ನು ಈ ಚಟದಿಂದ ವಿಮುಕ್ತಿಗೊಳಿಸಲು ಎರಡರಷ್ಟು ಪ್ರಯತ್ನಗಳನ್ನು ಮಾಡುತ್ತಾರೆ ಎಂದು ನಂಬಿದ್ದಿತು.

ಭಾರತವು ಸ್ವಾತಂತ್ರ್ಯಗೊಂಡ ಮೇಲೆ, ಸರ್ಕಾರವನ್ನು ರಚಿಸುವ ಜನಪ್ರಿಯ ನಾಯಕತ್ವವು ತನ್ನ ಬಹುದೂರ ಕನಸನ್ನು ನನಸುಗೊಳಿಸುವುದೆಂಬ ಆತ್ಮವಿಶ್ವಾಸವನ್ನು ಕಾಂಗ್ರೆಸ್ ಹೊಂದಿದ್ದಿತು. 1949ರಲ್ಲಿ ಸಂವಿಧಾನಾತ್ಮಕ ಶಾಸನಸಭೆಯು ಸಂವಿಧಾನವನ್ನು ರಚಿಸಿದಾಗ ಈ ವಿಶ್ವಾಸ ದೃಢಗೊಂಡಿತು. ರಾಜ್ಯನೀತಿ ನಿರ್ದೇಶಕ ತತ್ವಗಳಲ್ಲಿ ಒಂದಾದ 47ನೇ ಕಾಲಂ ಪ್ರಕಾರ, ' ಆರೋಗ್ಯಕ್ಕೆ ಮಾರಕವಾಗಿರುವ ಅಮಲು ಪಾನೀಯ ಮತ್ತು ಅಮಲು ಔಷಧಗಳನ್ನು ವೈದ್ಯಕೀಯ ಉದ್ದಿಶ್ಯಗಳಿಗಲ್ಲದೆ ಬೇರೆ ಯಾವ ಉದ್ದಿಶ್ಯಗಳಿಗೂ ಬಳಸುವುದನ್ನು ನಿರ್ಬಂಧಿಸಬೇಕಲ್ಲದೆ, ಇದಕ್ಕೆ ಸಂಬಂಧಿಸಿದ ನಿರೋಧ ಕ್ರಮಗಳನ್ನು ರಾಜ್ಯಗಳು ಕಟ್ಟುನಿಟ್ಟಾಗಿ ಜಾರಿಗೆ ತರಬೇಕು ಎಂದು ಹೇಳಲಾಗಿದೆ.

1907ರಲ್ಲಿ ಚೈನಾ ಸರ್ಕಾರದೊಡನೆ ಮಾಡಿಕೊಂಡ ಒಪ್ಪಂದದ ಮೇರೆಗೆ ಅಫೀಮನ್ನು ಚೈನಾಕ್ಕೆ ರಫ್ತು ಮಾಡುವುದನ್ನು ಕ್ರಮ ಕ್ರಮೇಣ ನಿಧಾನಗೊಳಿಸಲಾಯಿತಲ್ಲದೆ, 1913-14ರ ಸಾಲಿನಲ್ಲಿ ರಫ್ತುಗಳನ್ನು ಸಂಪೂರ್ಣವಾಗಿ ನಿಲ್ಲಿಸಲಾಯಿತು. ಆಂತರಿಕ ಬಳಕೆಗೆ ಸಂಬಂಧಿಸಿದಂತೆ ಸ್ವಾತಂತ್ರ್ಯ ಪೂರ್ವದಲ್ಲಿ ಅನುಸರಿಸುತ್ತಿದ್ದ ನೀತಿಯನ್ನು ಸುಂಕ ವಿಧಿಸುವ ಮಾಧ್ಯಮದ ಮೂಲಕ ಅಫೀಮನ್ನು ಇತರ ಉದ್ದಿಶ್ಯಗಳಿಗೆ ಉಪಯೋಗಿಸಿಕೊಳ್ಳಲು ಅನುಕೂಲವಾಗುವಂತೆ ಸಮರ್ಪಕ

ಗೊಳಿಸಲಾಯಿತು. ಅಫೀಮು ಸೇವನೆಯನ್ನು ಪ್ರಚೋದಿಸುವ ವಿವಿಧ ಪ್ರಾಂತ್ಯಗಳಲ್ಲಿ "ಅಫೀಮು ಸೇವನೆ ಕಾಯಿದೆ"ಯನ್ನು ಜಾರಿಗೊಳಿಸಲಾಯಿತಲ್ಲದೆ ತಮ್ಮ ಹೆಸರನ್ನು ನೊಂದಾಯಿಸಿರದ ರಾಜ್ಯಗಳನ್ನು ಬಿಟ್ಟು ಇತರ ಎಲ್ಲಾ ರಾಜ್ಯಗಳಲ್ಲೂ 1948ರ ನಂತರ 1953ರ ಕೊನೆಯ ವೇಳೆಗೆ ಅಫೀಮು ಸೇವನೆಯನ್ನು ಸಂಪೂರ್ಣವಾಗಿ ನಿಷಿದ್ಧಗೊಳಿಸಲಾಯಿತು. ನೊಂದಾಯಿಸಲ್ಪಟ್ಟ ಅಫೀಮು ಸೇವನೆಯ ವ್ಯಕ್ತಿಗಳು ವಾರ್ಷಿಕ ಪರಿಮಾಣದಲ್ಲಿ ಇಂತಿಷ್ಟೆ ಪಡೆಯಲು ಹಾಗೂ ಮರಣಾನಂತರ ಸರಬರಾಜನ್ನು ನಿಲ್ಲಿಸುವ ನೀತಿಯನ್ನು ಪ್ರಸ್ತುತಪಡಿಸಲಾಯಿತು. ವಿವಿಧ ದರಗಳಲ್ಲಿ ತೆರಿಗೆಗಳನ್ನು ವಿಧಿಸುವ ಮೂಲಕ ಬಳಕೆಯನ್ನು ನಿಷಿದ್ಧಗೊಳಿಸಬಹುದೆನ್ನುವ ಅಬಕಾರಿ ನೀತಿಯು ಪರಿಣಾಮಕಾರಿಯಾಗಲಿಲ್ಲ ಎನ್ನುವುದು ಸಾಬೀತಾಯಿತು. 1948ರಲ್ಲಿ ನವದೆಹಲಿಯಲ್ಲಿ ಭಾರತ ಸರ್ಕಾರವು ವ್ಯವಸ್ಥೆಗೊಳಿಸಿದ್ದ ಅಬಕಾರಿ ಸಚಿವರುಗಳ ಸಮ್ಮೇಳನವು 1959ರವರೆಗಿನ ಔಷಧ ಬಳಕೆಯನ್ನು ಪ್ರತಿಬಂಧಿಸುವ ಗುರಿಯೊಂದಿಗೆ ಅಫೀಮು ಸರಬರಾಜು ಮಾಡುವುದರ ಶಾರಿರಕ ನಿಯಂತ್ರಣ ಸಾಧಿಸಬಹುದೆನ್ನುವ ಪ್ರಸ್ತುತ ಅಬಕಾರಿ ನೀತಿಯನ್ನು ಕೈಬಿಡಬೇಕೆಂದು ತೀರ್ಮಾನಿಸಿತು. ಈ ನೀತಿಯಿಂದಾಗಿ, ರಾಜ್ಯ ಅಬಕಾರಿ ವಿಭಾಗಗಳಿಗೆ ಅವುಗಳಿಗೆ ವಿಧಿಸಿದ್ದ ಅಫೀಮು ಕೋಟಾವನ್ನು ಪ್ರತಿವರುಷವೂ ಶೇಕಡಾ 10ರಷ್ಟು ಕಡಿತಗೊಳಿಸುವ ಮೂಲಕ ಹೊಸ ಬೆಳವಣಿಗೆಗೆ ನಾಂದಿ ಹಾಕಿತು. 1819ರಲ್ಲಿ ಮತ್ತು ಅನಂತರ ಪ್ರತಿವರುಷ ಶೇಕಡಾ 10ರಷ್ಟು ವಾರ್ಷಿಕ ಕಡಿತವನ್ನು ಬಲಾತ್ಕಾರವಾಗಿ ಜಾರಿಗೆ ತಂದುದರ ಪರಿಣಾಮವಾಗಿ 1959ರ ವೇಳೆಗೆ ಸರಬರಾಜು ಕಡಿತಗೊಳಿಸಲು 'ಏನೂ ಉಳಿಯಲಿಲ್ಲ. ಗಮನಿಸಬೇಕಾದ ಅಂಶವೇದರೆ, ಅಫೀಮಿನ ಉತ್ಪಾದನೆ ಮತ್ತು ವಿತರಣೆ ಸಂಪೂರ್ಣವಾಗಿ ಭಾರತ ಸರ್ಕಾರದ ನಿಯಂತ್ರಣಕ್ಕೊಳಪಟ್ಟಿದ್ದರಿಂದ ಅಫೀಮನ್ನು ಸಂಪೂರ್ಣವಾಗಿ ಪ್ರತಿಬಂಧಿಸುವುದು ಕಷ್ಟಕರವಾಗಲಿಲ್ಲ. ಪ್ರತಿಬಂಧನಾ ವಿಚಾರಣ ಸಮಿತಿಯು "ಅಫೀಮು ನಿಧಾನವಾಗಿಯಾದರೂ ನಿಸ್ಸಂದೇಹವಾಗಿ ತನ್ನ ಚಿಪ್ಪಿನೊಳಕ್ಕೆ ಸೇರಿ ಮರೆಯಾಗುತ್ತದೆ" ಎಂಬುದನ್ನು ಸರಿಯಾಗಿಯೇ ಊಹಿಸಿದೆ. ಹೀಗೆ, ಬಲಪ್ರಯೋಗದ ಮೂಲಕ ಅಫೀಮಿನ ಬಳಕೆಯು ಈಗ ಭಾರತದ ಎಲ್ಲಾ ರಾಜ್ಯಗಳಲ್ಲಿಯೂ ನಿಷಿದ್ಧಗೊಂಡಿದೆ.

ಚರಸ್ ಪಂಜಾಬ್ ಸರ್ಕಾರದ ಮೂಲಕ ಕಾಶ್ಮೀರ ರಾಜ್ಯದಲ್ಲಿ ಯಾರ್ಕಂಡ್‌ನಿಂದ ಲೆಹ್‌ವರೆಗೆ ರಫ್ತಾಗುತ್ತಿತ್ತಲ್ಲದೆ ಪಂಜಾಬಿನ ಮಳಿಗೆಗಳಿಂದ ಅನೇಕ ಪ್ರಾಂತ್ಯಗಳಿಗೆ ಅದು ವಿತರಣೆಯಾಗುತ್ತಿತ್ತು. 1940–41ರಲ್ಲಿ ಸಿಂಕಿಯಾಂಗ್ ಸರಕಾರದ ಮೂಲಕ ಆಮದಾಗುತ್ತಿದ್ದ ಔಷಧವಸ್ತುವಿನ ಆಮದು ಮತ್ತು ಉತ್ಪಾದನೆಯನ್ನು ನಿಲ್ಲಿಸಿದುದರ ಪರಿಣಾಮವಾಗಿ ಚರಸ್ ಸರಬರಾಯಿಗಳಿಗೆ ಕತ್ತರಿ ಬಿದ್ದಿತಲ್ಲದೆ ಅಸ್ತಿತ್ವದಲ್ಲಿದ್ದ ಸಂಗ್ರಹಗಳು ಖರ್ಚಾದಂತೆ ಅದರ ಉಪಯೋಗವು ನಂತರ ತನ್ನಿಂದ ತಾನೇ ನಿಂತು ಹೋಯಿತು. ಬಹುಸಂಖ್ಯಾತ ಚರಸ್ ವ್ಯಸನಿಗಳು ಹೆಚ್ಚಾಗಿ ಸಂಸಯುಕ್ತ

ಪ್ರಾಂತ್ಯಗಳ ನಿರ್ಬಂಧಕ್ಕೊಳಪಟ್ಟದ್ದರಿಂದ ಈಗ ದೆಹಲಿ ಮತ್ತು ಪಂಜಾಬಿನ ಬಹುತೇಕ ಜನರು ಬದಲಿವಸ್ತುವಾಗಿ ಗಾಂಜಾ ಸೇವನೆ ಚಟವನ್ನು ಅಂಟಿಸಿಕೊಂಡಿದ್ದಾರೆಂದು ವರದಿಯಾಗಿದೆ.

ಗಾಂಜಾ ಸೆಣಬಿನ ಸಸ್ಯಜಾತಿಯ ಹೂವಿನ ದಳಗಳನ್ನು ಒಳಗೊಂಡಿದ್ದರೆ ಭಂಗಿಸೊಪ್ಪು ಅದರ ಎಲೆಗಳನ್ನು ಒಳಗೊಂಡಿರುತ್ತದೆ. ಗಾಂಜಾ ಮತ್ತು ಚರಸ್‌ಗಳಿಗೆ ಹೋಲಿಸಿದರೆ ಭಂಗೀಸೊಪ್ಪಿನ ಅಮಲು ಪ್ರಭಾವ ಅತಿ ಕಡಿಮೆ ಪ್ರಮಾಣದಲ್ಲಿರುತ್ತದೆ. ಚಿಕ್ಕ ಚಿಕ್ಕ ಕ್ಷೇತ್ರಗಳಲ್ಲಿ ಈ ಸಸ್ಯಗಳ ಬೇಸಾಯಕ್ರಮಗಳನ್ನು ನಿರ್ಬಂಧಿಸಲಾಗಿದೆಯಲ್ಲದೆ ಅಬಕಾರಿ ಅಧಿಕಾರಿಗಳ ಮೇಲ್ವಿಚಾರಣೆಯಲ್ಲಿ ಲೈಸನ್ಸ್ ಪಡೆಯಲು ಮತ್ತು ಒಯ್ಯಲು ಅವಕಾಶ ಕಲ್ಪಿಸಲಾಗಿದೆ.

ಕನಿಷ್ಟ ಬಳಕೆಯೊಂದಿಗೆ ಗರಿಷ್ಟ ಕಂದಾಯ ವಿಧಿಸುವ ಸಾಂಪ್ರದಾಯಿಕ ನೀತಿಯು ಯಾವುದೇ ತೃಪ್ತಿಕರ ಫಲಿತಾಂಶಗಳನ್ನು ಒದಗಿಸಿಲ್ಲ. ಗಾಂಜಾಕ್ಕೆ ಸಂಬಂಧಿಸಿದಂತೆ, ಮೇಲೆ ಉಲ್ಲೇಖಿಸಿದ 1949ರ ದೆಹಲಿ ಸಮ್ಮೇಳನವು ಮಂದಗತಿಯ ಪ್ರತಿಬಂಧನೆಯನ್ನು ಸೂಚಿಸಿದ್ದು ರಾಜ್ಯ ಸರ್ಕಾರಗಳು ಈ ನೀತಿಯನ್ನು ಅನುಸರಿಸಲು ಒಪ್ಪಿಕೊಂಡಿದ್ದವಲ್ಲದೆ ಕೆಲವು ವರುಷಗಳ ಅವಧಿಯಲ್ಲಿ ಈ ಔಷಧ ವಸ್ತುವನ್ನು ನಿಲ್ಲಿಸುವ ದೃಷ್ಟಿಕೋನದೊಂದಿಗೆ ಕ್ರಮಗಳನ್ನು ಕೈಗೊಂಡಿದ್ದವು. ಪ್ರತಿಬಂಧಕ ರಾಜ್ಯಗಳಲ್ಲಿ ಈ ಸೆಣಬಿನ ಜಾತಿಯ ಸಸ್ಯದ ಜೇಸಾಯ ಮುಂದುವರಿಯದಂತೆ ಮಾಡಲಾಯಿತು. ಮದರಾಸಿನಲ್ಲಿ (ತಮಿಳುನಾಡು) ಮದರಾಸು ಪ್ರತಿಬಂಧಕ ಕಾಯಿದೆ, 1947ರ ಪ್ರಕಾರ ಔಷಧಗಳ ತಯಾರಿಕೆಗಾಗಿ ಉತ್ಪಾದಿಸುವ ಉದ್ದಿಶ್ಯಗಳಿಗೆ ಮಾತ್ರ ಪರವಾನಗಿ ನೀಡುವ ಮೂಲಕ ಬೇರೆ ರೀತಿಯಲ್ಲಿ ಔಷಧ ಸಸ್ಯಗಳ ಉತ್ಪಾದನೆಯನ್ನು ಇಡಿಯಾಗಿಯೇ ನಿಷೇಧಿಸಲಾಯಿತು. ಬೊಂಬಾಯಿಯಲ್ಲಿ, ಬೊಂಬಾಯಿ ಪ್ರತಿಬಂಧಕ ಕಾಯಿದೆ 1949ರ ನೆರಳಲ್ಲಿ ಸರ್ಕಾರಿ ಡಿಪೋಗಳಿಂದ ಪರಿಮಿತ ಪ್ರಮಾಣಗಳಲ್ಲಿ ಈ ಔಷಧವಸ್ತುಗಳನ್ನು ತಮ್ಮ ಹೆಸರನ್ನು ನೊಂದಾಯಿಸಿದ ವ್ಯಸನಿಗಳಿಗೆ ಮಾತ್ರ ಲಭ್ಯವಾಗುವಂತೆ ಮಾಡಲಾಯಿತಲ್ಲದೆ, ಕೋಟಾಗಳಲ್ಲಿ ನೈದಾನಿಕ ಕತ್ತರಿಪ್ರಯೋಗಗಳನ್ನು ಮಾಡುವ ಮೂಲಕ ಈ ಸೆಣಬಿನ ಸಸ್ಯ ಜಾತಿಯ ಔಷಧ ವಸ್ತುಗಳ ಬಳಕೆಯಿಂದ ಅವರು ಕ್ರಮೇಣ ದೂರ ಸರಿಯುವಂತೆ ಪ್ರಯತ್ನಗಳು ನಡೆದವು. ಇದೇ ರೀತಿಯ ಕ್ರಮಗಳನ್ನು ಇತರ ರಾಜ್ಯಗಳಲ್ಲಿಯೂ ಕೂಡ ಜಾರಿಗೊಳಿಸಲಾಯ್ತು. ಬೆಲೆ ವಿಚಾರಕ್ಕೆ ಸಂಬಂಧಿಸಿದಂತೆ ಗಾಂಜಾ ಮತ್ತು ಭಂಗಿಸೊಪ್ಪಿನ ನಿಗದಿತ ದರಗಳು ಅನೇಕ ರಾಜ್ಯಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಏರುಮುಖಗೊಂಡವು, ಉದಾಹರಣೆಗೆ, ಬಂಗಾಳದಲ್ಲಿ 1932ರಲ್ಲಿ ಗಾಂಜಾದ ಮೇಲಿನ ಸುಂಕದ ತೆರಿಗೆಯು 40 ರೂ.ಗಳಿಂದ ನಿಧಾನಗತಿಯಲ್ಲಿ ಏರುತ್ತಾ 1951ರಲ್ಲಿ 236 ರೂ.ಗಳಿಗೆ ಮುಟ್ಟಿದರೆ, ಭಂಗಿಸೊಪ್ಪಿನ ಮೇಲಿನ ತೆರಿಗೆ ಸುಂಕ 1932ರಲ್ಲಿ 3.50 ರೂ ಇದ್ದದ್ದು 1949ರಲ್ಲಿ 60 ರೂಗಳಿಗೆ ಏರಿತು. ಗಾಂಜಾ ಮತ್ತು ಭಂಗಿ

ಸೊಪ್ಪಿನ ಮಾರಾಟವನ್ನು ಇಂದು ಅನೇಕ ರಾಜ್ಯಗಳಲ್ಲಿ ನಿಷೇಧಿಸಲಾಗಿದೆ. ಕೋಕಾ ಎಲೆಗಳಿಂದ ತೆಗೆದು ಶುದ್ಧೀಕರಿಸಿದ ಕೊಕೈನ್ ಒಂದು ಔಷಧ ವಸ್ತುವಾಗಿ ಬಳಕೆಯಾಗುತ್ತಿದೆ. ಭಾರತ ಸರಕಾರವು ಏರುತ್ತಿರುವ ಇದರ ಬಳಕೆಯನ್ನು ಮುನಗಂಡು ಅದರ ರಫ್ತಿನ ಮೇಲೆ ನಿಷೇಧವನ್ನು ಹೇರಿತಲ್ಲದೆ ದೇಶದೊಳಗೆ ಕೋಕಾಗಿಡದ ಬೇಸಾಯುವನ್ನು ಪ್ರತಿಬಂಧಿಸಿತು. ಹೀಗೆ ದೇಶದಲ್ಲಿ ಈ ಪಿಡುಗು ಮಂದಗತಿಯಲ್ಲಿ ಮರಣಿಸುತ್ತಿದ್ದಂತೆಯೇ ಅಲ್ಲಲ್ಲಿ ಮರುಕಳಿಸುತ್ತಿರುವ ಕಳ್ಳಸಾಗಾಣಿಕೆಯ ಕೆಲವು ಪ್ರಕರಣಗಳು ಈ ಪಿಡಗು ಇನ್ನೂ ಜೀವಂತವಿರುವ ನಿದರ್ಶನವನ್ನು ಎತ್ತಿ ತೋರಿಸಿವೆ.

1936ರಲ್ಲಿ ಭಾರತ ಸರ್ಕಾರದಿಂದ ಸ್ಥಾಪಿತವಾದ ನಾರ್ಕಾಟಿಕ್ ಇಂಟಲಿಜೆನ್ಸ್ ಬ್ಯೂರೋ ಎಂಬ ಕೇಂದ್ರೀಯ ಸಂಸ್ಥೆ ಹಾಗೂ 1936ರ ಜಿನೀವಾ ಸಮಾವೇಶದ 11 ಮತ್ತು 12ನೇ ನಿಧಿಗಳು ಮಾದಕ ಔಷಧ ವಸ್ತುಗಳ ವಿಷಯದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಪ್ರತಿಬಂಧಕ ಚಟುವಟಿಕೆಗಳನ್ನು ಸಮನ್ವಯಗೊಳಿಸಿಕೊಳ್ಳ ಬೇಕಾದ ಅಗತ್ಯವನ್ನು ಒತ್ತಿ ಹೇಳಿವೆ. ಕೆಲವು ವರುಷಗಳ ಹಿಂದಿನ ಇತಿಹಾಸವನ್ನು ಪರಿಶೀಲಿಸಿದಾಗ ಕಂಡುಬಂದ ದಾಖಲೆಗಳಲ್ಲಿ ಔಷಧವಸ್ತುಗಳ ಅಮಲಿನಿಂದ ವಾಹನ ನಡೆಸುತ್ತಿದ್ದ 398 ಮಂದಿ ಚಾಲಕರ ಪ್ರಕರಣಗಳು ಕಂಡುಬಂದಿದ್ದವು. ವಿವಿಧ ರಾಜ್ಯಗಳಲ್ಲಿ ಚಟುವಟಿಕೆಗಳನ್ನು ಸಮನ್ವಯಗೊಳಿಸಲು, ಪ್ರತಿಬಂಧಕ ಕಾರ್ಯ ಕ್ರಮಗಳ ಪ್ರಗತಿಯನ್ನು ಪರಿಶೀಲಿಸಲು ಒಂದು ಕೇಂದ್ರ ಸಮಿತಿ ಕೂಡ ಇರುವುದಲ್ಲದೇ ರಾಜ್ಯಗಳ ಪ್ರಾಯೋಗಿಕ ಸಮಸ್ಯೆಗಳನ್ನು ಅದು ಗಮನಿಸುತ್ತದೆ. 1977ರಲ್ಲಿ ಕೇಂದ್ರ ಪ್ರತಿಬಂಧನಾ ಸಮಿತಿಯು ಪ್ರತಿಬಂಧನೆಯ ಮೇಲೆ ರಾಷ್ಟ್ರೀಯ ನೀತಿ ಯೊಂದನ್ನು ಸಲಹೆ ಮಾಡಿದ್ದು ಇದರ ಪ್ರಕಾರ, ಇನ್ನು ನಾಲ್ಕು ವರುಷಗಳಲ್ಲಿ ಮಾರ್ಚ 1982ರ ವೇಳೆಗೆ ಪೂರ್ಣನಿಷೇಧ ಜಾರಿಯಾಗಿ ಸಾರ್ವಜನಿಕರಿಗೆ ಅದನ್ನು ಗೊತ್ತುಪಡಿಸಬೇಕೆಂದು ಸಲಹೆ ಮಾಡಿತ್ತು. ಇದೇ ಕಾರಣಕ್ಕಾಗಿ ಕೇಂದ್ರ ಸರ್ಕಾರವು 1977–78ನೇ ಸಾಲಿನಲ್ಲಿದ್ದ ಕಂದಾಯದ ಆಧಾರದ ಮೇಲೆ ಪ್ರತಿ ಬಂಧಕಾಜ್ಞೆಯನ್ನು ಪರಿಚಯಿಸುವುದರ ಫಲಿತಾಂಶದಿಂದಾಗಿ ಉಂಟಾಗುವ ಪ್ರತಿ ವರುಷದ ಅಬಕಾರಿ ಕಂದಾಯದ ನಷ್ಟವನ್ನು ಸರಿತೂಗಿಸಿಕೊಂಡು ಹೋಗ ಬೇಕಾದ ರಾಜ್ಯ ಸರ್ಕಾರಗಳಿಗೆ ಅಗತ್ಯ ಧನಸಹಾಯವನ್ನು ಶೇಕಡಾ 50ರ ಪ್ರಮಾಣದಲ್ಲಿ ನೀಡಿದೆ. "ಕುಡಿತ ಮತ್ತು ಅಮಲು ಔಷಧಗಳ ಮೇಲಿನ ಕಂದಾಯವು ತೆರಿಗೆಯನ್ನೇ ತೀವ್ರವಾಗಿ ಇಳಿಸುವ ಒಂದು ರೂಪವಾಗಿರುತ್ತದೆ" ಎಂದು ಮಹಾತ್ಮ ಗಾಂಧೀಜಿಯವರು ಹೇಳಿದ್ದಾರೆ. "ಪ್ರತಿಬಂಧನೆಯನ್ನೂ ಪರಿಶೀಲಿಸುವಾಗ ಆರ್ಥಿಕ ದೃಷ್ಟಿಕೋನ ಮುಖ್ಯವಾಗಿರಬಾರದು, ಒಂದು ಕಾರ್ಯ ಒಳ್ಳೆಯದೆಂದು ಕಂಡುಬಂದಾಗ ವೆಚ್ಚ ಎಷ್ಟೇ ಇದ್ದರೂ ಆ ಕಾರ್ಯವನ್ನು ಮಾಡಿ ಮುಗಿಸಬೇಕು." ಎಂಬ ದಾಗಿ ಶ್ರೀ ಜವಹರಲಾಲ್ ನೆಹರೂ ಅವರು ತಮ್ಮ ಅಭಿ ಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಪ್ರತಿಬಂಧಕಾಜ್ಞೆ ಇರಬೇಕೇ ಬೇಡವೇ ಎಂಬುದರ

ಪರ ವಿರೋಧವಾದ ಪ್ರತಿವಾದಗಳು ಬಹಳಷ್ಟು ನಡದಿವೆಯಾದರೂ, ಭಾರತೀಯರು ಅಮಲು ಔಷಧ ವಸ್ತುಗಳ ಸೇವನೆಯ ಸುಖಭೋಗದಲ್ಲಿ ಮೈಮರೆತಿರುವರಲ್ಲದೆ ತಮ್ಮ ಸಹವರ್ತಿ ಪ್ರಜೆಗಳನ್ನೂ ನೈತಿಕ ಅಧಃಪತನದ ಅಂಚಿಗೆ ಕೊಂಡೊಯ್ಯುತ್ತಿದ್ದಾರೆ ಎಂಬುದು ನಿರ್ವಿವಾದ, ನಿಸ್ಸಂಶಯ. ಆದರೂ, ಪ್ರಸ್ತುತ ಪರಿಹಾರವೆಂದರೆ ಈ ಬೃಹತ್ ಸಾಮಾಜಿಕ ಪಿಡುಗಿಗೆ ಪ್ರತಿಬಂಧನೆಯೇ ಉತ್ತರವಾಗಿದೆ.

ಅಮಲಿನ ಪದಾರ್ಥಗಳ ಸೇವನೆ ಭಾರತದಲ್ಲಿ ಇತ್ತೀಚಿನ ಬೆಳವಣಿಗೆಯೇನಲ್ಲ; ಶತಮಾನಗಳಿಂದ ಅಸ್ತಿತ್ವದಲ್ಲಿದ್ದುದಕ್ಕೆ ಸಾಕಷ್ಟು ಐತಿಹಾಸಿಕ ಪುರಾವೆಗಳಿವೆ. ವೇದಗಳಕಾಲದಲ್ಲಿ ಸೋಮಪಾನದ ಬಗ್ಗೆ ಹಲವಾರು ಉಲ್ಲೇಖಗಳಿವೆ. ಪಲ್ಲವದೊರೆ ಮಹೇಂದ್ರವರ್ಮ ವಿರಚಿತ 'ಮತ್ತ ವಿಲಾಸ ಪ್ರಹಸನ'ದ ವಸ್ತು ಅಮಲಿನ ಕುಡಿತದಿಂದ ಪ್ರಭಾವಿತನಾದ ಒಬ್ಬ ಕೂಟಸನ್ಯಾಸಿಯ ಉಪದ್ವ್ಯಾಪವೇ ಆಗಿದೆ. ಶೈವಧರ್ಮದ ಒಂದು ಶಾಖೆಯಾದ ಕಾಪಾಲಿಕಪಂಥವು ವಾಮಾಚಾರವನ್ನೂ ರೂಢಿಸಿ ಕೊಂಡಿತ್ತು, ನರಮಾಂಸಭಕ್ಷಣೆ, ಸುರಾಪಾನ ಇವರ ಮುಖ್ಯ ಧಾರ್ಮಿಕ ರೀತಿ ಯಾಗಿತ್ತು. ಕಾಪಾಲಿಕರನ್ನೇ ಹೋಲುವ ಕೌಲರು ಇನ್ನು ಒಂದು ಹೆಜ್ಜೆಮುಂದಿದ್ದರು. ರಾಜಶೇಖರನ 'ಕರ್ಪೂರ ಮಂಜರಿ'ಯಲ್ಲಿ (೧೦ನೇಶತಮಾನ) ಭೈರವಾನಂದನೆಂಬ ಮಂತ್ರವಾದಿ ತಾನು ಕೌಲನೆಂದೂ, ಮದ್ಯಪಾನ ಮತ್ತು ಸ್ತ್ರೀಸಂಗ ಮಾಡುವುದಾಗಿ ಹೇಳಿಕೊಂಡಿದ್ದಾನೆ. ಚನ್ನಬಸವಣ್ಣನವರು ಕೌಲರ ಆಚರಣೆಗಳನ್ನು ಖಂಡಿಸಿದ್ದರೆ, ಬ್ರಹ್ಮಶಿವನು ತನ್ನ 'ಸಮಯ ಪರೀಕ್ಷೆ'ಯಲ್ಲಿ ಮದ್ಯಪಾನ, ಮಾಂಸಭಕ್ಷಣೆ ಮಾಡುವ ಕೌಲರನ್ನು ನಿಂದಿಸಿದ್ದಾನೆ.

ಅರ್ವಾಚೀನ ಕಾಲದಲ್ಲಿ ಈ ಅಮಲಿನ ಪದಾರ್ಥಗಳ ಸೇವನೆ ಒಂದು ಸಾಮಾಜಿಕ ಪಿಡುಗಾಗಿ ಪ್ರಮುಖರಾಗಿ ಕಾರ್ಮಿಕ, ವಿದ್ಯಾರ್ಥಿ ಮತ್ತು ಶ್ರೀಮಂತ ಯುವಕ ವರ್ಗಗಳನ್ನು ವಿಶ್ವಾದ್ಯಂತ ಅಧಃಪತನಗೊಳಿಸುತ್ತಿದೆ.

ಎಲ್. ಎಸ್. ಕಪನಿಗೌಡ

ವೈನಾಡ್ ಜಿಲ್ಲೆಯ ಅಡಿಯ ಜನಾಂಗ

ಇವರು ವೈನಾಡ್ ಜಿಲ್ಲೆಯ ತಿರುನೆಲ್ಲಿ ಎಂಬ ಒಂದು ಗುಡ್ಡಗಾಡಿನಲ್ಲಿ ವಾಸವಾಗಿದ್ದಾರೆ. ಇದು ಕೇರಳ ರಾಜ್ಯದ ಪೂರ್ವಭಾಗಕ್ಕೆ ಸೇರಿದೆ. ವೈನಾಡ್ ಸಮುದ್ರ ಮಟ್ಟಕ್ಕಿಂತ 3000 ಅಡಿ ಎತ್ತರದಲ್ಲಿದೆ. ಇಲ್ಲಿ ಪ್ರಧಾನವಾಗಿ ಅನೇಕ ಆದಿವಾಸಿಗಳು ನೆಲೆಸಿದ್ದಾರೆ. ಉದಾ : ಕುರುಚಿಯನ್, ಮುಳ್ಳುಕುರುಮ, ಬೆಟ್ಟ ಕುರುಮ (ಊರಾಳಿ ಕುರುಮ), ತೇನುಕುರುಮ (ಕಾಟುನಾಯಕನ್) ವೈನಾಡ್‌ಕಾಡರ್, ಅಡಿಯನ್, ಪುಲಿಯನ್ ಇಷ್ಟೆಲ್ಲಾ ಆದಿವಾಸಿಗಳು ವೈನಾಡ್ ಜಿಲ್ಲೆಯಲ್ಲಿ ವಾಸವಾಗಿದ್ದಾರೆ.

ತಿರುನಲ್ಲಿಯು ಬಹಳ ಸೌಂದರ್ಯದಿಂದ ಕೂಡಿದ ಒಂದು ರಮಣೀಯ ಸ್ಥಳವಾಗಿದೆ. ಇದರ ಮತ್ತೊಂದು ಭಾಗ ಕರ್ನಾಟಕ ಪ್ರಾಂತ್ಯಕ್ಕೆ ಸೇರಿದೆ. ಇಲ್ಲಿ ಪ್ರಧಾನವಾಗಿ ಬ್ರಹ್ಮಗಿರಿ ಎಂಬ ಬೆಟ್ಟದಿಂದ ಕೂಡಿದೆ. ತಿರುನಲ್ಲಿ ದೇಶಂ 11–49° -11–58° ಸೆಂಟಿಗ್ರೇಡ್ ಪ್ರದೇಶವಾಗಿದೆ. ಒಟ್ಟು ಎಕರೆಗಳು 49,564. ಅದರಲ್ಲಿ 37,357 ಎಕರೆ ಪ್ರದೇಶ ಕಾಡಿನಿಂದ ಕೂಡಿದೆ. ಕಾಡಿನಲ್ಲಿ ಬೆಲೆ ಬಾಳುವ ತೇಗದ ಮರ, ಗಂಧದ ಮರ, ಹೊನ್ನೆ ಇತ್ಯಾದಿ ಮರಗಳನ್ನು ಈ ಒಂದು ಪ್ರದೇಶದಲ್ಲಿ ಸರ್ಕಾರವು ಬೆಳೆಸುತ್ತಾ ಇದೆ.

ತಿರುನಲ್ಲಿಯಲ್ಲಿ ಪ್ರಧಾನವಾಗಿ ಮೂರು ಜನಾಂಗ ವಾಸಿಸುತ್ತಾರೆ. (1) ಅಡಿಯರು (2) ಪಣಿಯರು (3) ಕುರುಮರು. ಕುರುಮರಲ್ಲಿ ಪ್ರಧಾನವಾಗಿ 3 ಭಾಗ ವಿಂಗಡಿಸಿದ್ದಾರೆ. (1) ಬೆಟ್ಟಕುರುಬ, (2) ಜೇನು ಕುರುಬ (3) ಮುಳ್ಳು ಕುರುಬ. ಇಷ್ಟಲ್ಲದೆ ಸುಲ್ತಾನ ಬತೇರಿಯ ಒಂದು ಪಾರ್ಶ್ವದಲ್ಲಿ ಕುರುಚಿಯರು ವಾಸವಾಗಿದ್ದಾರೆ. ಈ ಎಲ್ಲಾ ಆದಿವಾಸಿಗಳ ಕಸುಬು ವ್ಯವಸಾಯಕ್ಕೆ ಸಂಬಂಧಪಟ್ಟ ಕೂಲಿ ಕೆಲಸವಾಗಿದೆ. ಈ ಒಂದು ಪ್ರದೇಶದಲ್ಲಿ ಒಂದು ದೇವಸ್ಥಾನವಿದೆ. ಇದು ವಿಷ್ಣು ದೇವಸ್ಥಾನವಾಗಿದೆ. ಇದರ ಪಕ್ಕದಲ್ಲೇ '**ಕಾಳಂದಿ**' ನದಿಯು ಹರಿಯುತ್ತದೆ. ಇದು ಕಬಿನಿ ನದಿಯ ಉಪನದಿಯಾಗಿದೆ. ತಿರುನಲ್ಲಿಯನ್ನು 'ದಕ್ಷಿಣಕಾಶಿ' ಎಂದು ಕರೆಯುತ್ತಾರೆ. ಇಲ್ಲಿ ಏಪ್ರಿಲ್ 14ರಂದು 'ವಿಶು' ಹಬ್ಬವನ್ನು ಆಚರಿಸು

ತ್ತಾರೆ. ಇಲ್ಲಿ ಹರಿಯುವ ಕಾಳಿಂದಿ ನದಿಯು ಕಣ್ಣೀರಿನ ತರಹ ಯಾವಾಗಲೂ ಹರಿಯುತ್ತದೆ. ಈ ನೀರನ್ನು 'ಸೀತಾಕಣ್ಣೀರು' ಎನ್ನುತ್ತಾರೆ. ಇಲ್ಲಿ ರಾಮ-ಸೀತೆ ವನವಾಸದ ಕಾಲದಲ್ಲಿ ನೆಲೆಸಿದ್ದರು ಎಂಬ ಪ್ರತೀತಿ ಇದೆ. ಈ ಒಂದು ದೇವಸ್ಥಾನ ವನ್ನು ಶ್ರೀರಾಮನು ಕಟ್ಟಿಸಿದ ಎಂಬ ಪ್ರತೀತಿ ಇದೆ. ಟಿಪ್ಪೂ ಕಾಲದಲ್ಲಿ ಈ ದೇವ ಸ್ಥಾನ ಭಿನ್ನವಾಗಿದೆ. ಇಲ್ಲಿಯ ಅರ್ಚಕ ಕರ್ನಾಟಕದವನಾಗಿದ್ದಾನೆ.

ಇಂತಹ ಒಂದು ಪ್ರದೇಶದಲ್ಲಿ ಮೊಟ್ಟಮೊದಲು ಪಣಿಯರು, ಕುರುಮರು ವಾಸ ವಾಗಿದ್ದು ಕೆಲವು ವರ್ಷಗಳ ನಂತರ ಇಲ್ಲಿಂದ ವಲಸೆ ಹೋಗಿದ್ದಾರೆ. ನಂತರ ಇತರೆ ಜನಾಂಗಗಳು ಇಲ್ಲಿಗೆ ಬಂದು ಸೇರಿದರೆಂದು ಹೇಳುತ್ತಾರೆ.

ಕುಟುಂಬ ವ್ಯವಸ್ಥೆ :

1971ರ ಪ್ರಕಾರ 7073 ಜನರಿದ್ದಾರೆ. ಅವರಲ್ಲಿ 3455 ಗಂಡಸರು, 3618 ಹೆಂಗಸರು ಇದ್ದಾರೆ. ಇವರ ಮಾತೃ ಭಾಷೆ ಅಡಿಯಾ. ಇವರು ಅಡಿಯಾ ಭಾಷೆ ಜೊತೆಗೆ ತಮಿಳು, ಮಲೆಯಾಳ, ಕನ್ನಡ ಮಾತನಾಡುತ್ತಾರೆ. ಅಡಿಯ ಜನಗಳು ಕುರುಮರಿಗಿಂತ ಮೇಲ್ಮಟ್ಟದವರು ಎಂದು ಭಾವಿಸಿದ್ದಾರೆ.

ಅಡಿಯ ಹೆಂಗಸರು ಹಿಂದೂಗಳಂತೆ ಪೂರ್ಣ ಸೀರೆಯನ್ನು ಧರಿಸುವುದಿಲ್ಲ. ಅದಕ್ಕೆ ಬದಲಾಗಿ ಹೆಂಗಸರು ಸೀರೆಯನ್ನು ಎದೆಯ ಮೇಲೆ ಹಿಂಭಾಗದಿಂದ ಬಳಸಿ ಬಿಗಿಯುತ್ತಾರೆ. ಇವರು ವ್ಯವಸಾಯಕ್ಕೆ ಸಂಬಂಧಪಟ್ಟ ಕೆಲಸವನ್ನು ಮಾಡುತ್ತಾರೆ. ಮತ್ತೆ ಕೆಲವರು ಕೂಲಿ ಕೆಲಸಕ್ಕೆ ಹೋಗುತ್ತಾರೆ. ಇವರಲ್ಲಿ ಜಾಸ್ತಿ ಗುಲಾಮಗಿರಿ ಪದ್ಧತಿ ಇದೆ. ಇವರು ರಾವಣ ವಂಶಕ್ಕೆ ಸೇರಿದವರು ಎನ್ನುತ್ತಾರೆ. ಇವರು ಎಲ್ಲಿಂದ ಬಂದವರು ಎಂಬ ಮೂಲ ತಿಳಿದುಬಂದಿಲ್ಲ. ಇವರು ಅಕ್ಕಿ, ಗೆಣಸು, ಮಾಂಸ ತಿನ್ನುತ್ತಾರೆ.

ಅಡಿಯಾ ಜನಾಂಗದಲ್ಲಿ ಪ್ರಧಾನವಾಗಿ 16 ಕುಟುಂಬಗಳನ್ನು ಕಾಣುತ್ತೇವೆ.

1. ತಿರುನೆಲ್ಲಿ ಮಾಂಟು ಕುಟುಂಬ
2. ವಡಕು ಮಾಂಟು ಕುಟುಂಬ
3. ಪೊಡ್ಡೂರು ಮಾಂಟು ಕುಟುಂಬ
4. ಉಲವಂಗುತ್ತು ಮಾಂಟು ಕುಟುಂಬ
5. ಎಡಯಾನ ಮಾಂಟು ಕುಟುಂಬ
6. ಕಚ್ಚಲಾ ಮಾಂಟು ಕುಟುಂಬ
7. ಮರೆಗಾಯಿ ಕುಟುಂಬ
8. ನಾಲಪಾಯಿ ಮಾಂಟು ಕುಟುಂಬ
9. ಪುತ್ತೂರು ಮಾಂಟು ಕುಟುಂಬ

10. ಕಲ್ಲಿಲ ಮೂಂಟು ಕುಟುಂಬ
11. ಕೆಲಂಕೋಟು ಕುಟುಂಬ
12. ಮದುರೆ ಕುಟುಂಬ
13. ಮೋಮೋಟೆ ಕುಟುಂಬ
14. ಬಿಂದೆ ಕುಟುಂಬ
15. ಅಂಜಲಿ ಕುಟುಂಬ
16. ಎಲಿಲ ಕುಟುಂಬ

ಇವುಗಳಲ್ಲಿ ಯಾವುದಾದರೂ ಒಂದೇ ಕುಟುಂಬದಲ್ಲಿ ವಿವಾಹ ಮಾಡಿಕೊಳ್ಳು ವಂತಿಲ್ಲ. ಇವರು ತಮ್ಮ ಪ್ರಧಾನವಾದ ಬೇರೊಂದು ಕುಟುಂಬದಲ್ಲಿ ವಿವಾಹ ಮಾಡಿ ಕೊಳ್ಳಬೇಕು. ಉದಾಹರಣೆಗೆ ತಿರುನಲ್ಲಿ ಮೂಂಟು ಕುಟುಂಬದವರು ವಡಕು ಮೂಂಟು ಕುಟುಂಬದಲ್ಲಿ ಸಂಬಂಧ ಬೆಳೆಸಬಹುದು. ಇವರಲ್ಲಿ ತಮ್ಮ ಆಸ್ತಿಯ ಹಕ್ಕು ತಂಗಿಯ ಮಕ್ಕಳಿಗೆ ಸೇರುತ್ತದೆ. ಪ್ರತಿಯೊಂದು ಕುಟುಂಬದಲ್ಲೂ ಮೂಪನಾರ್ ಪ್ರಧಾನ ನಾಯಕನಾಗಿರುತ್ತಾನೆ. ಅಥವಾ ಪೆರುಮಾಳ್ ಮತ್ತೊಂದು ಕುಟುಂಬದಲ್ಲಿ ಪ್ರಧಾನವಾಗಿರುತ್ತಾನೆ. ಕುಟುಂಬದಲ್ಲಿ ಜರುಗುವ ಪ್ರತಿಯೊಂದು ಕಾರ್ಯವು ನಾಟು ಮೂಪನಾರ್ ಒಪ್ಪಿಗೆಯ ಮೇಲೆ ನಡೆಯುತ್ತದೆ.

ನಾಟುಮೂಪನಾರ್ :

ಅಡಿಯ ಜನಾಂಗದಲ್ಲಿ 12 ಸಾವಿರ ದೇವರುಗಳು ಇವೆ ಎಂದು ನಂಬುತ್ತಾರೆ. 12 ಸಾವಿರ ದೇವರ ಪ್ರತಿನಿಧಿ ಮೂಪನಾರ್ ಎಂದು ಭಾವಿಸುತ್ತಾರೆ. ಈತನು ಪುರೋಹಿತನಿದ್ದಂತೆ, ಮನೆತನಕ್ಕೆ ರಾಜನಿದ್ದಂತೆ. ಆತನೇ ಒಬ್ಬ ಡಾಕ್ಟರ್ ಕೂಡ, ನ್ಯಾಯಾಧಿಪತಿಯೂ ಕೂಡ. ಹಾಗೆಯೇ ನಮ್ಮಗಳ ರಕ್ಷಕ ಎಂದೂ ಕೂಡ ನಂಬು ತ್ತಾರೆ.

ರೋಗಿಗಳು ಕಾಯಿಲೆ ಬಿದ್ದರೆ ಮೂಪನಾರ್ ಹತ್ತಿರ ಹೋಗುತ್ತಾರೆ. ಮೂಪ ನಾರ್ ಎಡಗೈಯಲ್ಲಿ ಬೆಳ್ಳಿ ಬಳೆ, ಬಲಗೈಯಲ್ಲಿ ಒಂದು ಮಂತ್ರದ ದೊಣ್ಣೆ ಪಾತ್ರೆ (ಶಂಖ) ಹಿಡಿದಿರುತ್ತಾನೆ. ರೋಗಿಯು ಮೂಪನಾರ್ ಹತ್ತಿರ ಹೋದಾಗ ಅತನಿಗೆ ಕೋಳಿ, ತೆಂಗಿನಕಾಯಿ, ಹೂ ಇತ್ಯಾದಿಯನ್ನು ತೆಗೆದುಕೊಂಡು ಹೋಗುತ್ತಾನೆ. ಅನಂತರ ರೋಗಿಯು ಒಂದು ಗೊತ್ತಾದ ಸ್ಥಳದಲ್ಲಿ ಕುಳಿತುಕೊಂಡಮೇಲೆ ಮಂತ್ರ ವಾದಿಯು ರೋಗಿಯ ಮುಂದೆ ಹಾವಿನ ತಲೆ, ಕಲ್ಲು ಮುಳ್ಳು, ಮೂಳೆ, ಕಂಗಳ ಹುಳ, ಗೋಸುಂಬೆ ಇಟ್ಟು ಮಂತ್ರ ಹೇಳುತ್ತಾನೆ. ಅನಂತರ ರೋಗಿಗೆ ರೋಗ ವಾಸಿಯಾಗುತ್ತದೆ ಎಂಬ ಬಲವಾದ ನಂಬಿಕೆಯನ್ನು ಹೊಂದಿರುತ್ತಾರೆ. ಇಂತಹ ಒಂದು ವಿದ್ಯೆಯನ್ನು ಮಂತ್ರವಾದಿ ತನ್ನ ಕುಟುಂಬಕ್ಕೆ ಮಾತ್ರ ಹೇಳಿಕೊಡುತ್ತಾನೆ. ಇತರ ಕುಟುಂಬಗಳಿಗೆ ಈ ಮಂತ್ರವನ್ನು ಬೋಧಿಸುವುದಿಲ್ಲ.

ಪ್ರತಿಯೊಂದು ಕುಟುಂಬದಲ್ಲಿ ನಾಟು ಮೂಪನಾರ್ ಪ್ರಧಾನ ನಾಯಕನಾಗಿರುತ್ತಾನೆ. ಈತನು ವಿವಾಹ ಸಂದರ್ಭದಲ್ಲಿ, ಕುಟುಂಬದಲ್ಲಿ ಜರುಗುವ ಸಾವು ನೋವು, ಶುಭಕಾರ್ಯ ಇತ್ಯಾದಿಯಲ್ಲಿ ನಾಟು ಮೂಪನಾರ್ ಪ್ರಧಾನನಾಗಿರುತ್ತಾನೆ. ಹೀಗೆ ಹಲವು ಬಗೆಯ ಕಾರ್ಯದಲ್ಲಿ ಈತನು ಭಾಗಿಯಾಗುತ್ತಾನೆ.

ವಿವಾಹ ಪದ್ಧತಿ:

ಇವರಲ್ಲಿ ವಿವಾಹ ಪದ್ಧತಿಯಲ್ಲಿ ಕೆಲವು ನಿಷೇಧಗಳು ಜಾರಿಯಲ್ಲಿವೆ. ಹೆಣ್ಣು ಮಕ್ಕಳು ಋತುಮತಿಯಾಗದೆ ವಿವಾಹವಾಗುವಂತಿಲ್ಲ. ಗಂಡು ಮಕ್ಕಳಲ್ಲಿ ಮದುವೆಯ ವಯಸ್ಸು ಮುಖ್ಯವಲ್ಲ. ಗಂಡು ಹುಡುಗ ಒಂದು ಭತ್ತದ ಮೂಟೆ ಹೊರುವ ಶಕ್ತಿ ಬಂದಾಗ ವಿವಾಹವಾಗಬೇಕೆಂಬ ಪದ್ಧತಿ ಜಾರಿಯಲ್ಲಿದೆ. ಅಡಿಯ ಜನರಲ್ಲಿ ಒಂದು ಕುಟುಂಬದಲ್ಲೇ ವಿವಾಹ ಮಾಡಿಕೊಳ್ಳುವಂತಿಲ್ಲ. ಬೇರೊಂದು ಕುಟುಂಬದಲ್ಲಿ ವಿವಾಹ ಮಾಡಿಕೊಳ್ಳಬೇಕು. **ಉದಾಹರಣೆಗೆ,** ಮರಗಾಯಿ ಕುಟುಂಬದವರು; ಪುತ್ತೂರು ಕುಟುಂಬದಲ್ಲಿ ವಿವಾಹ ಮಾಡಿಕೊಳ್ಳಬಹುದು.

ಅಡಿಯ ಆದಿವಾಸಿಗಳಲ್ಲಿ ಒಂದು ಹೆಣ್ಣು ತಮಗೆ ಬೇಕಾದರೆ ಬೇರೊಂದು ಕುಟುಂಬದಲ್ಲಿ ಹುಡುಗಿಗೆ 6–7 ವರ್ಷವಾಗಿದ್ದಾಗಲೇ ಹುಡುಗಿಯನ್ನು ನಿಶ್ಚಯ ಮಾಡುತ್ತಾರೆ. ಅದಕ್ಕೆ ಕೆಲವು ನಿಯಮಗಳನ್ನು ಪಾಲಿಸಬೇಕು. ಏನೆಂದರೆ ಒಂದು ಹೆಣ್ಣಿನ ಮನೆಯನ್ನು ಗೊತ್ತು ಪಡಿಸಿದ ನಂತರ ಹುಡುಗನ ಮನೆಯವರು ಹುಡುಗಿಯ ಮನೆಯವರಿಗೆ, ಉಪ್ಪು, ಕಾರ, ಮೆಣಸಿನಕಾಯಿ, ಎಲೆಅಡಿಕೆ, ಹೊಗೆಸೊಪ್ಪು, ಇತ್ಯಾದಿಯನ್ನು ಹುಡುಗಿಯು ಋತುಮತಿಯಾಗುವವರೆವಿಗೂ ಅವರ ಮನೆಗೆ ಕೊಡಬೇಕು. ಋತುಮತಿಯಾದ ನಂತರ ವಿವಾಹ ಜರುಗುತ್ತದೆ. ವಿವಾಹವನ್ನು ರಾತ್ರಿ ಹತ್ತು ಗಂಟೆಗೆ ಶುರುಮಾಡಿ ಬೆಳಗ್ಗೆ ಹತ್ತು ಗಂಟೆಗೆ ಮುಗಿಸುತ್ತಾರೆ. ಈ ಕುಟುಂಬಕ್ಕೆ ಸಂಬಂಧಪಟ್ಟ ಮೂಪನಾರ್ ಪ್ರಮುಖನಾಗಿರುತ್ತಾನೆ. ಇವರ ವಿವಾಹದಲ್ಲಿ ಮದ್ಯಪಾನ, ನೃತ್ಯ, ಗಾಯನ ವಿಶೇಷವಾಗಿರುತ್ತವೆ.

ಮತ್ತೊಂದು ವಿಶೇಷವೆಂದರೆ ಒಬ್ಬ ವ್ಯಕ್ತಿಯು ಮೊದಲು ವಿವಾಹವಾಗಿದ್ದು, ಬೇರೆ ಹೆಣ್ಣಿನೊಡನೆ ಮರುವಿವಾಹಕ್ಕೆ ಇಷ್ಟಪಟ್ಟರೆ, ಮೊದಲನೆ ಹೆಂಡತಿಗೆ ತಿಳಿಯದಂತೆ 15 ದಿವಸ ತಲೆಮರೆಸಿಕೊಂಡು ಕಾಡಿಗೆ ಹೋಗಿ ಸೇರಿಕೊಳ್ಳುತ್ತಾನೆ. ಅನಂತರ ಈ ವಿಷಯವನ್ನು ಮೂಪನಾರ್‌ಗೆ ತಿಳಿಸುತ್ತಾನೆ. ಆಗ ಮೂಪನಾರ್ ಸಮ್ಮತಿಸಿ ಕೆಲವು ದಂಡವನ್ನು ವಿಧಿಸುತ್ತಾನೆ. ಈ ದಂಡದಲ್ಲಿ ಮೂಪನಾರ್ ಅರ್ಧ ಭಾಗವನ್ನು, ಮೊದಲನೆಯ ಹೆಂಡತಿಗೆ ಅರ್ಧ ಭಾಗವನ್ನು ಹಂಚಿಕೊಂಡು ಮರು ವಿವಾಹಕ್ಕೆ ಸಮ್ಮತಿಸುತ್ತಾರೆ.

ಇದೇ ರೀತಿ ಒಂದು ಹೆಣ್ಣು ಮತ್ತೊಬ್ಬ ವ್ಯಕ್ತಿಯೊಡನೆ ಮರು ವಿವಾಹಕ್ಕೆ ಬಯಸಿದರೆ ಈಕೆಯು ಆತನೊಡನೆ ಒಂದೆರಡು ವಾರ ಕಾಡಿನಲ್ಲಿ ನೆಲಸಿದ್ದು ಅನಂತರ

ಮೂಪನಾರ್‌ಗೆ ತಿಳಿಸಿ, ಆತನು ವಿಧಿಸಿದ ದಂಡವನ್ನು ತೆತ್ತು ವಿವಾಹ ಮಾಡಿಕೊಳ್ಳುತ್ತಾಳೆ.

ಇವರಲ್ಲಿ ವಿವಾಹ ಒಂದು ಕರಾರು ಮಾತ್ರವಾಗಿರುತ್ತದೆ. ಇಲ್ಲಿ ವಿಧವಾ ವಿವಾಹ, ವಿವಾಹ ವಿಚ್ಛೇದನ, ಪುನರ್‌ವಿವಾಹ ಜರುಗುತ್ತವೆ. ಉದಾ : ಒಬ್ಬ ವ್ಯಕ್ತಿ ಅಂದರೆ ಹೆಣ್ಣಾಗಲೀ, ಗಂಡಾಗಲೀ ಮೊದಲು ಬೇರೆಯವರೊಂದಿಗೆ ಓಡಿ ಹೋಗಿದ್ದು ಪುನಃ ಆತನನ್ನು ಅಥವಾ ಆಕೆಯನ್ನು ವಿವಾಹ ಮಾಡಿಕೊಳ್ಳಬೇಕೆಂದರೆ ದಂಡ ತೆತ್ತು ಪುನಃ ಒಳಗೆ ಸೇರಿಕೊಂಡು ಬಾಳಬಹುದು.

ಅಡಿಯ ಜನಾಂಗದಲ್ಲಿ ಹೆಂಡತಿ ಸತ್ತಾಗ ಕೆಲವು ವಿಧಿನಿಯಮಗಳನ್ನು ಪಾಲಿಸಬೇಕಾಗುತ್ತದೆ. ಏನೆಂದರೆ ಒಂದು ವರ್ಷ ಸ್ನಾನ ಮಾಡಕೂಡದು, ಬಟ್ಟೆಗಳನ್ನು ಬದಲಾಯಿಸಕೂಡದು, ಮಾಂಸ ತಿನ್ನಕೂಡದು, ಇವರು ಊಟಕ್ಕೆ ಉಪ್ಪು, ಮೆಣಸಿನಕಾಯಿಯನ್ನು ಮಾತ್ರ ಉಪಯೋಗಿಸಬೇಕು. ಊಟ ಮಾಡುವಾಗ ಪಾತ್ರೆ ಅಥವಾ ತಟ್ಟೆಗಳನ್ನು ಬಳಸುವಂತಿಲ್ಲ, ಬಾಳೆ ಎಲೆಯಲ್ಲಿ ಊಟಮಾಡಬೇಕು. ಗಂಡ ಸತ್ತರೆ ಹೆಂಡತಿಯೂ ಸಹ ಈ ನಿಯಮವನ್ನು ಪಾಲಿಸಬೇಕು.

ಈ ನಿಯಮವನ್ನು ಯಾರು ಅನುಸರಿಸುವುದಿಲ್ಲವೋ ಅಂತಹವರನ್ನು ಮೂಪನಾರ್ ಶಿಕ್ಷೆಗೆ ಒಳಪಡಿಸಬಹುದು, ಅಥವಾ ಕುಲದಿಂದ ಬಹಿಷ್ಕರಿಸಬಹುದು.

ಇವರಲ್ಲಿ 16 ಪ್ರಧಾನ ಕುಟುಂಬಗಳು ಇರುತ್ತವೆ. ಪ್ರತಿಯೊಂದು ಕುಟುಂಬದಲ್ಲೂ ಒಬ್ಬೊಬ್ಬ ಮುಖ್ಯಸ್ಥನಿರುತ್ತಾನೆ. ಈತನನ್ನು '**ಚಮ್ಮಕಾರನ್**' ಎನ್ನುತ್ತಾರೆ. ಚಮ್ಮಕಾರನಿಗೆ ವಿವಾಹ ಮಾಡಿಕೊಂಡ ಪುರುಷನು ಪ್ರತಿ ವರ್ಷ ಒಂದು ಭತ್ತದ ಮೂಟೆಯನ್ನು ಕೊಡಬೇಕು. ಕೊಡದಿದ್ದರೆ ಹೆಂಡತಿಯನ್ನು ಚಮ್ಮಕಾರ ತನ್ನ ಕುಟುಂಬಕ್ಕೆ ಕರೆಸಿಕೊಳ್ಳುತ್ತಾನೆ. ಆದ್ದರಿಂದ ಈ ವಿಷಯದಲ್ಲಿ ಪೂರ್ಣ ಹಕ್ಕನ್ನು ಹೊಂದಿರುತ್ತಾನೆ.

ನಂಬಿಕೆಗಳು

ಇವರಲ್ಲಿ ರೋಗರುಜಿನ ಬಂದರೆ ಡಾಕ್ಟರ್ ಹತ್ತಿರ ಹೋಗುವುದಿಲ್ಲ. ಇದಕ್ಕೆ ಬದಲಾಗಿ ನಾಟಮೂಪನಾರ್ ಹತ್ತಿರ ಹೋಗುತ್ತಾರೆ. 12 ಸಾವಿರ ದೇವರಿಗೆ ಮೂಪನಾರ್ ಪ್ರತಿನಿಧಿಯಾಗಿರುತ್ತಾನೆ. ಆದ್ದರಿಂದ ಈತನು ಹೇಳಿದಂತೆ ಚಿಕಿತ್ಸೆ ಪಡೆಯುತ್ತಾರೆ. ಭೂತಪ್ರೇತ ಬಂದಾಗ ಒಂದು ಬಾರುಕೋಲಿನಿಂದ ಭೂತ ಹಿಡಿದುಕೊಂಡವರಿಗೆ ಬಾರಿಸುತ್ತಾನೆ. ಆಗ ಭೂತ ಬಿಡುತ್ತದೆ ಎಂದು ನಂಬಿಕೆ. ಈತನು ಒಂದು ಪಾತ್ರೆಯಲ್ಲಿ ಕೆಂಪುವಸ್ತ್ರ, ತೆಂಗಿನಕಾಯಿ, ಹೂ, ಹಣ್ಣು, ಭತ್ತ, ಅಕ್ಕಿ ಎಲ್ಲವನ್ನೂ ಇಟ್ಟು ಪೂಜೆಮಾಡುತ್ತಾನೆ. ಆಗ ದೇವರು ಮೈಮೇಲೆ ಬರುತ್ತದೆ. ದೇವರು ಮಾತನಾಡುತ್ತಾನೆ ಎಂದು ಹೇಳುತ್ತಾನೆ. ಇದು ಸತ್ಯ ಎಂದು ನಂಬುತ್ತಾರೆ. ಮತ್ತೆ ಕೆಲವು ಸಂದರ್ಭದಲ್ಲಿ ಗಿಡಮೂಲಿಕೆಯಿಂದ ಭೂತ ಬಿಡಿಸುವುದಕ್ಕೆ ಪ್ರಯತ್ನಿ

ಸುತ್ತಾನೆ, ಮತ್ತೆ ಕೆಲವು ವೇಳೆಯಲ್ಲಿ ಚಿಕಿತ್ಸೆ ಬಗ್ಗೆ ಬಲಿ ಬೇಕು, ಎಂದು ಹೇಳಿ ಪ್ರಾಣಿ ಬಲಿ ಮಾಡಿಸುತ್ತಾನೆ. ಇಂತಹ ಮಂತ್ರವಾದಿ ಮೂಪನಾರ್ ಬಳಿ ಬಂದ ಜನಗಳು ಈತನಿಗೆ ತಾನು ಧರಿಸಿದ್ದ ಬಳೆಗಳನ್ನು ಮೂಪನಾರ್ ಕೇಳಿದಷ್ಟು ಕೊಡಬೇಕು. ಈ ಬಳೆಯು ಹಣಕ್ಕೆ ಸಮನಾಗಿರುತ್ತದೆ. ಸಾಮಾನ್ಯವಾಗಿ ರೋಗಿ ಸಾವನ್ನಪ್ಪಿದರೆ (ಸಾಮಾನ್ಯವಾಗಿ ರೋಗಿ ಗುಣಹೊಂದುವುದಕ್ಕಿಂತ ಹೆಚ್ಚಾಗಿ ಸಾವನ್ನಪ್ಪುವುದೇ ಜಾಸ್ತಿ) ಅಂತಹ ಸಂದರ್ಭದಲ್ಲಿ ಮೂಪನಾರ್ ಇದು ನಿಮ್ಮ ಕರ್ಮಫಲ ಎನ್ನುತ್ತಾನೆ.

ಆರ್ಥಿಕ ವ್ಯವಸ್ಥೆ

ವ್ಯವಸಾಯಕ್ಕೆ ಸಂಬಂಧಪಟ್ಟ ಕೂಲಿ ಕೆಲಸವನ್ನು ಹೆಚ್ಚಾಗಿ ಅವಲಂಬಿಸಿದ್ದಾರೆ, ಹೆಂಗಸರು ಮತ್ತು ಗಂಡಸರು ಸಹ ಕಸಬನ್ನು ಮಾಡುತ್ತಾರೆ. ಗಂಡಸಿಗೆ ಒಂದು ದಿನಕ್ಕೆ 12–15 ರೂಪಾಯಿಗಳ ಕೂಲಿಯನ್ನು, ಹೆಂಗಸಿಗೆ 8–10 ರೂ.ಗಳನ್ನು ಕೊಡುತ್ತಾರೆ. ಕಾಫಿ ತೋಟದಲ್ಲಿ ಕಾಯಂ ಕೆಲಸಕ್ಕೆ ಸೇರಿಕೊಂಡಿದ್ದಾರೆ. ಕೆಲವರು ಮಾತ್ರ ಸ್ವಂತ ಭೂಮಿಯನ್ನು ಹೊಂದಿದ್ದಾರೆ. ಕೆಲವರಿಗೆ 20 ಸೆಂಟ್‌ನಿಂದ 80 ಸೆಂಟ್ ಇದೆ. ಇಲ್ಲಿ ಭತ್ತ, ಮರಗೆಣಸು, ತರಕಾರಿ, ಬಾಳೆ ಇತ್ಯಾದಿಯನ್ನು ಬೆಳೆಯುತ್ತಾರೆ. ಇವರಿಗೆ ವ್ಯವಸಾಯದಿಂದ ಬರುವ ಉತ್ಪಾದನೆ ಕಡಿಮೆ. ಕಾರಣ ಇವರು ಆಧುನಿಕ ಬೇಸಾಯ ಪದ್ಧತಿಯನ್ನು ಅನುಸರಿಸುವುದಿಲ್ಲ. ಇವರು ಯಾವುದೇ ವಿಧವಾದ ಟ್ರಾಕ್ಟರ್, ರಾಸಾಯನಿಕ ಗೊಬ್ಬರ, ಬಿತ್ತನೆ ಬೀಜ ಬಳಸುವುದಿಲ್ಲ. ಇವರು ತಮ್ಮಲ್ಲಿ ಬರುವ ಉತ್ಪಾದನೆಗಿಂತ ಹೆಚ್ಚು ಖರ್ಚುಮಾಡುತ್ತಾರೆ. ಆದ್ದರಿಂದ ಆರ್ಥಿಕ ಪರಿಸ್ಥಿತಿ ಹಿಂದೆ ಬಿದ್ದಿದೆ. ಇವರಿಗೆ ವರ್ಷದ 6 ತಿಂಗಳು ಮಾತ್ರ ಕೂಲಿ ಸಿಗುತ್ತದೆ. ಇನ್ನು 6 ತಿಂಗಳು ಇರುವುದಿಲ್ಲ. ಇಂತಹ ವೇಳೆಯಲ್ಲಿ ರೈತರಿಂದ ಸಾಲ ಪಡೆಯುತ್ತಾರೆ. ಈ ಸಾಲವನ್ನು ತೀರಿಸುವುದಕೋಸ್ಕರ ತಮ್ಮ ಮಕ್ಕಳನ್ನು ರೈತರ ಮನೆಯಲ್ಲಿ ಜೀತ ಪದ್ಧತಿಗೆ ಇಡುತ್ತಾರೆ. ಹುಡುಗರು ಕೂಲಿಗೆ ಹೋದರೆ 2–3 ರೂ.ಗಳನ್ನು ಕೊಡುತ್ತಾರೆ. ಹುಡುಗರು ರೈತರ ಮನೆಯಲ್ಲಿ ಸೇರಿದಾಗ ದನ ಕಾಯುವುದು, ಸೌದೆ ತರುವುದು, ವ್ಯವಸಾಯಕ್ಕೆ ಸಂಬಂಧಪಟ್ಟ ಕೆಲಸ ಕಾರ್ಯವನ್ನು ಮಾಡುತ್ತಾರೆ. ಸೌದೆ ತರುವುದಕ್ಕೆ ಹೋದಾಗ ಸಿಗುವ ಜೇನನ್ನು ಶೇಖರಿಸುವುದು ಇವರಲ್ಲಿ ರೂಢಿಯಲ್ಲಿದೆ. ಇದನ್ನು ತಂದು ಮಾರಿ ಸ್ವಲ್ಪ ಹಣ ಗಳಿಸುತ್ತಾರೆ. ಅಡಿಯರ ಪಕ್ಕದಲ್ಲಿಯೇ ಬೆಟ್ಟಕುರುಬರು, ಜೇನುಕುರುಬರು ವಾಸವಾಗಿದ್ದಾರೆ.

ಆರೋಗ್ಯ

ಇವರು ಕಾಯಿಲೆಗೆ ತುತ್ತಾದಾಗ ಡಾಕ್ಟರಿಂದ ಔಷಧಿಯನ್ನು ಪಡೆಯುವುದಿಲ್ಲ. ಅದಕ್ಕೆ ಬದಲಾಗಿ ತಮ್ಮ ಮೂಪನಾರ್ ಹತ್ತಿರ ಹೋಗುತ್ತಾರೆ. ಆತನು ಕೊಡುವ ಗಿಡಮೂಲಿಕೆಯನ್ನು ಔಷಧಿಯಾಗಿ ಬಳಸುತ್ತಾರೆ. ಇವರಲ್ಲಿ ಒಂದಾನೊಂದು ಕಾಲದಲ್ಲಿ ಕ್ಷಯ, ಮಲೇರಿಯಾ ಬಹಳ ಇದ್ದಿತು, ಇಂದು ಅದು ಹೆಚ್ಚಾಗಿ ಕಾಣು

ವುದಿಲ್ಲ. ಇಂದು ಸರ್ಕಾರದವರು ಆರೋಗ್ಯ ಕಾಪಾಡುವುದಕ್ಕೋಸ್ಕರ ಅನೇಕ ವೈದ್ಯಕೀಯ ಸೌಲಭ್ಯವನ್ನು ಒದಗಿಸಿಕೊಟ್ಟಿದ್ದಾರೆ. ಈ ಒಂದು ಆದಿವಾಸಿಗೋಸ್ಕರ ಒಂದು ಆಸ್ಪತ್ರೆಯನ್ನು ಒದಗಿಸಿದ್ದಾರೆ. ಇಲ್ಲಿ ದಾದಿಯರು, ಡಾಕ್ಟರ್ ಸಹ ಇದ್ದಾರೆ. ಇತ್ತೀಚೆಗೆ ಈ ಒಂದು ಸೌಕರ್ಯವನ್ನು ಬಳಸಿಕೊಳ್ಳುತ್ತಿದ್ದಾರೆ. ಮೊದಲು ಇದ್ದ ಮೂಪನಾರ್ ಬಗ್ಗೆ ಇದ್ದ ನಂಬಿಕೆಯನ್ನು ಕಳೆದುಕೊಂಡಿರುವುದನ್ನು ಕಾಣಬಹುದು.

ವಿದ್ಯಾಭ್ಯಾಸ

ಆದಿವಾಸಿಗಳಲ್ಲಿ ಇಂದು ವಿದ್ಯಾವಂತರನ್ನು ಕಾಣಬಹುದಾಗಿದೆ. ಮೊದಲು ಒಬ್ಬ ವಿದ್ಯಾವಂತನನ್ನು ಕಾಣಲು ಸಾಧ್ಯವಾಗುತ್ತಿರಲಿಲ್ಲ. ಇಂದು ಅನೇಕ ಅಧಿಕಾರಿಗಳು, ಗುಮಾಸ್ತರು, ಉಪನ್ಯಾಸಕರು, ಇತ್ಯಾದಿಯವರನ್ನು ಗುರುತಿಸ ಬಹುದು. ಇಂದು ಇವರ ವಿದ್ಯಾಭ್ಯಾಸಕ್ಕೆ ಅನೇಕ ಶಾಲೆಗಳನ್ನು ತೆರೆದಿದ್ದಾರೆ. ಅಡಿಯ ಜನಾಂಗದಲ್ಲಿ ಒಂದು ಪ್ರಾಥಮಿಕ ವಿದ್ಯಾಭ್ಯಾಸದ ಶಾಲೆಯನ್ನು ಕಾಣ ಬಹುದು. ಈ ಒಂದು ಶಾಲೆಯಲ್ಲಿ, ಕುರುಚಿಯರು, ಅಡಿಯರು, ಕುರುಬರು, ಪಣಿಯರು ಇತ್ಯಾದಿ ಆದಿವಾಸಿಗಳ ಮಕ್ಕಳು ಈ ಒಂದು ಶಾಲೆಗೆ ಹೋಗುತ್ತಾರೆ. ಈ ಒಂದು ಶಾಲೆಯಲ್ಲಿ ಮಲೆಯಾಳಂ ಭಾಷೆಯನ್ನು ಬೋಧಿಸುತ್ತಾರೆ. ಇಲ್ಲಿ ಒಂದನೇ ತರಗತಿಯಿಂದ 4ನೇ ತರಗತಿಯ ವರೆಗೆ ತರಗತಿಗಳು ನಡೆಯುತ್ತವೆ. ಅಡಿಯ ಜನಾಂಗದಲ್ಲಿ ಗುಲಿಕರ್ ಎಂಬುವನು ಪೋಸ್ಟ್ ಆಫೀಸ್‌ನಲ್ಲಿ ಕೆಲಸದಲ್ಲಿದ್ದಾನೆ, ಮತ್ತೊಬ್ಬ ಪಂಚಾಯಿತಿ ಆಫೀಸಿನಲ್ಲಿ ಉದ್ಯೋಗದಲ್ಲಿದ್ದಾನೆ. ಅಡಿಯ ಜನಾಂಗದ 80 ಜನ ಹುಡುಗರು 1–3ನೆಯ ತರಗತಿಯಲ್ಲಿದ್ದಾರೆ, ಎರಡನೇ ತರಗತಿಯಲ್ಲಿ 26 ಜನರು ಇದ್ದಾರೆ. ಶಾಲೆಯಲ್ಲಿ ಮಲೆಯಾಳಂ ಕಲಿತರೆ ತಮ್ಮ ಮನೆಗಳಲ್ಲಿ ಅಡಿಯಾ ಭಾಷೆಯನ್ನು ಮಾತನಾಡುತ್ತಾರೆ. ಈ ಒಂದು ಶಾಲೆಯಲ್ಲಿ 10 ಹುಡುಗರು ಜೇನು ಕುರುಮರು, ಬೆಟ್ಟ ಕುರುಬರು 14 ಹುಡುಗರು, ಇನ್ನು 60 ಜನ ಹುಡುಗರು ಅಡಿಯರಾಗಿದ್ದಾರೆ.

ಗ್ರಂಥಋಣ

1. Ethnographic report on Thirunelli Village. Govt. of India, 1961.
2. P. R. G. Mathur—Tribal Situation in Kerala.
3. Census Report of India, 1971.
4. Tribes of Kerala by A.A.D. Luzy.
5. Mysore Tribes and Castes by Anantha Krishnaiyer.

ಅಡಿಯರು

ಆಡಿಯರೆಂದರೆ 'ಆಳು' ಎನ್ನುವ ಅರ್ಥ ಬರುತ್ತದೆ. ಇವರು ಮುಖ್ಯವಾಗಿ ದಕ್ಷಿಣ ಕನ್ನಡದ ದಟ್ಟಡವಿಗಳಲ್ಲಿ ಕಂಡುಬರುತ್ತಾರೆ. ತುಳು, ಮಲೆಯಾಳಂ ಮತ್ತು ತಮಿಳುಮಿಶ್ರಿತ ಕನ್ನಡವನ್ನು ಮಾತನಾಡುತ್ತಾರೆ. ಬಣ್ಣಬಣ್ಣದ ಬಳೆ ಮತ್ತು ಬೆಂಡೋಲೆಗಳನ್ನು ಧರಿಸುವುದೆಂದರೆ ಗಂಡಸರು ಮತ್ತು ಹೆಂಗಸರಿಗೆ ಬಹಳ ಇಷ್ಟ. ಇವರು ಹೆಚ್ಚಾಗಿ ಕಾಫೀತೋಟಗಳಲ್ಲಿ ಕೆಲಸಮಾಡುತ್ತಾರೆ. ಬೇಟೆಯಾಡುವುದು ಇವರ ಮುಖ್ಯ ಹವ್ಯಾಸ. ಅನೇಕ ಹಿಂದೂ ಹಬ್ಬಗಳನ್ನು ಆಚರಿಸುವರಾದರೂ ಇವರಿಗೆ ತಮ್ಮದೇ ಆದ ಅನೇಕ ದೇವತೆಗಳಿವೆ.

'ಕರ್ನಾಟಕ' ವಿಷಯ ವಿಶ್ವಕೋಶ, ಪುಟ ೮೮೯

ಪಿ. ಅಬ್ದುಲ್ ಸತ್ತಾರ್

ಕಾಮಗೇತಿ ಅರಸರು - ಕೆಲವು ವಿಚಾರಗಳು

ಹದಿನಾರನೆಯ ಶತಮಾನದ ಮಧ್ಯಕಾಲ ದಕ್ಷಿಣ ಭಾರತದ ಇತಿಹಾಸದಲ್ಲಿ ಒಂದು ಸಂಕ್ರಮಣದ ಕಾಲ. ವಿಜಯನಗರ ಸಾಮ್ರಾಟರಲ್ಲಿ ಅತಿ ಪ್ರಖ್ಯಾತವಾದ ಕೃಷ್ಣ ದೇವರಾಯ ಕಾಲವಾಗಿದ್ದನು. ಸದಾಶಿವರಾಯ ನಾಮಮಾತ್ರಕ್ಕೆ ಸಾಮ್ರಾಟ ನಾಗಿದ್ದ ಕಾಲದಲ್ಲಿ ರಾಜ್ಯದ ಅಳಿವು, ಉಳಿವುಗಳ ವಿಧಾತ ಅಳಿಯ ರಾಮರಾಜ ನಾಗಿದ್ದನು. ಈತ ರಕ್ಕಸತಂಗಡಗಿಯ ಯುದ್ಧದಲ್ಲಿ ಹತನಾದ ಮೇಲೆ ಈ ಸಾಮ್ರಾಜ್ಯ ಬಲಹೀನವಾಯಿತು. ರಾಜಧಾನಿ ಪೆನುಗೊಂಡೆಯಾಯಿತು. ಇಂತಹ ಸಂಧಿಕಾಲದಲ್ಲಿ ಅನೇಕ ಸಾಮಂತರು, ಮಂಡಲೇಶ್ವರರು, ಕಾರ್ಯಕರ್ತರೂ ತಾವೇ ಸ್ವತಂತ್ರರಾಗುವ ಕನಸುಗಳನ್ನು ಕಂಡರು. ಆದರೆ ಪ್ರಕಟವಾಗಿ ಮಲೆತು ನಿಲ್ಲುವ ನೈತಿಕ ಹಾಗೂ ಭೌತಿಕ ಶಕ್ತಿ ಸಾಮರ್ಥ್ಯಗಳು ಇವರಿಗೆ ಇರಲಿಲ್ಲ. ಆದರೆ ಪ್ರಯತ್ನ ಗಳನ್ನು ಬಿಟ್ಟಿರಲಿಲ್ಲ. ಈ ಪರಿಸ್ಥಿತಿಯನ್ನು ಅರಿತು ಈ ಸಾಮ್ರಾಟರೂ, ಅವರ ಸರ್ವಾಧಿ ಕಾರಿಗಳು ಇದನ್ನು ಎದುರಿಸಲು ಒಂದು ಪರ್ಯಾಯ ವ್ಯವಸ್ಥೆಯನ್ನು ಮಾಡಿದರು. ಹಿಂದೆ ತಮ್ಮ ಮಹಾಸಾಮ್ರಾಜ್ಯದ ವಿವಿಧ ಭಾಗಗಳಲ್ಲಿ ಅಧಿಕಾರಿಗಳಾಗಿದ್ದ, ಕಾರ್ಯ ಕರ್ತರಾಗಿದ್ದ ತಮ್ಮ ನಂಬಿಕೆಗೆ ಪಾತ್ರರಾಗಿದ್ದ ಜನರನ್ನೇ ಸಾಮ್ರಾಜ್ಯದ ಹಲವು ಭಾಗಗಳಲ್ಲಿ ತಮ್ಮ ಕಾರ್ಯಕರ್ತರನ್ನಾಗಿ ನೇಮಿಸಿ ಅವರಿಗೆ ವಿಶೇಷ, ವಿಶಿಷ್ಟ ಅಧಿಕಾರ ಗಳನ್ನು ಸಾಕಷ್ಟು ಸ್ವಾತಂತ್ರವನ್ನು ನೀಡಿದರು. ಹೀಗಾಗಿ ದಕ್ಷಿಣ ಭಾರತದ ನಾನಾ ಕಡೆಗಳಲ್ಲಿ ಪಾಳೆಯಪಟ್ಟುಗಳು ಹುಟ್ಟಿಕೊಂಡವು. ಹೀಗೆ ಹುಟ್ಟಿಕೊಂಡ ಅನೇಕ ಪಾಳೆಯಪಟ್ಟುಗಳಲ್ಲಿ ಚಿತ್ರದುರ್ಗವೂ ಒಂದಾಗಿದೆ.

ಇದು ವಿಜಯನಗರದವರ ಕಾಲದಲ್ಲಿ ಕಾಮಗೇತಿ ಅರಸರ ಆಡಳಿತೆಯ ಕೇಂದ್ರ ವಾದರೂ ಇದರ ಇತಿಹಾಸ ಇದಕ್ಕೂ ಬಹಳ ಹಿಂದಕ್ಕೆ ಹೋಗುತ್ತದೆ. ಇಲ್ಲಿ ಹೊಯ್ಸಳರ, ಪಲ್ಲವ (ನೊಳಂಬ), ಚಾಲುಕ್ಯರ ಪ್ರತಿನಿಧಿಗಳು ಆಳ್ವಿಕೆ ನಡೆಸಿದ್ದರು. ಈ ದುರ್ಗದ ಹೆಸರು ಕೂಡ ಸುಮಾರು ಎಂಟುನೂರು ವರ್ಷಗಳ ಕಾಲದಲ್ಲಿ ಅನೇಕ ನಾಮಾಂತರಗಳಿಗೆ ಒಳಗಾಗಿದೆ–ಶಾಸನೋಕ್ತ ಇತಿಹಾಸದ ಕಾಲಕ್ಕೆ ಹಿಂದೆಯೂ

ಇದು ಒಂದು ಆಡಳಿತ ಪ್ರದೇಶದ ಕೇಂದ್ರವಾಗಿತ್ತು ಎನ್ನುವುದು ಸಾಧ್ಯ. ಆದರೆ ಈ ದಿಸೆಯಲ್ಲಿ ಇನ್ನೂ ಸಂಶೋಧನೆ ನಡೆಯು ಬೇಕಾಗಿದೆ.

ಈಗ ಇದನ್ನು ಚಿತ್ರದುರ್ಗ ಎನ್ನುತ್ತಾರೆ–ಇಲ್ಲಿ ಆಳಿದ ಅರಸರಲ್ಲಿ ತೀರ ಈಚಿನವರೇ ಕಾಮಗೇತಿ ಅರಸರು. ಈ ವಂಶದ ಮೂಲಪುರುಷ ಚಿತ್ರ ನಾಯಕ ಎಂತಲೂ, ಇವರ ಮನೆದೇವರು ಚಿತ್ರದೇವರು ಎಂತಲೂ ಆದುದರಿಂದ ಈ ಗಿರಿ ದುರ್ಗಕ್ಕೆ, ಚಿತ್ರಕಲ್ಲು ದುರ್ಗ; (ಚಿತ್ರದುರ್ಗ) ಎಂದು ಹೆಸರಾಯಿತೆಂಬ ಒಂದು ಕಥೆ ಇದೆ. ಇದು ಕೇವಲ ಕಲ್ಪನೆ, ಕಟ್ಟು ಕಥೆ. ಈ ನಾಯಕರ ಯಾವ ಒಂದು ಶಾಸನದಲ್ಲಾಗಲೀ, ತಮ್ಮ ಮನೆ ದೇವರು ಚಿತ್ರ ದೇವರೆಂತಾಗಲೀ, ತಮ್ಮ ಮೂಲ ಪುರುಷ ಚಿತ್ರನಾಯಕ ಎಂದಾಗಲೀ ಹೇಳಿಕೊಂಡಿಲ್ಲ. ಈ ಸಂಸ್ಥಾನಿಕರು, ಮಂಡಲೇಶ್ವರರು, ಮಂತ್ರಿಗಳೂ ಮತ್ತಿತರ ಅಧಿಕಾರಿಗಳು, ತಮ್ಮ ಮನೆದೇವರುಗಳ ಹೆಸರಿನಲ್ಲಿ, ತಮ್ಮ ಪೂರ್ವಿಕರ ಹೆಸರಿನ ದೇವಾಲಯಗಳನ್ನೂ, ಗ್ರಾಮಗಳನ್ನೂ, ಕೆರೆಗಳನ್ನೂ ಕಟ್ಟಿಸಿದ ನೂರಾರು ಉದಾಹರಣೆಗಳಿವೆ. ಅಂತಹದರಲ್ಲಿ ಕಾಮಗೇತಿ ಅರಸರು ತಮ್ಮ ಯಾವ ಒಂದು ಶಾಸನದಲ್ಲೂ ಈ ಹೆಸರುಗಳನ್ನು ಸ್ಮರಿಸಿಲ್ಲ; ಏಕೆ ? ಈ ಅರಸರ ಕಾಲದಲ್ಲಿ ಈ ಗಿರಿಗೆ 'ಚಿತ್ರದುರ್ಗ' ಎಂಬ ಹೆಸರು ಅವರ ಆಳ್ವಿಕೆಯ ಪ್ರಾರಂಭದಿಂದ ಎಂದರೆ ಕ್ರಿ. ಶ.1566ರಿಂದ ಕ್ರಿ.ಶ. 1799ರವರೆಗೆ, ಇರಲಿಲ್ಲ. ಈ ಹೆಸರು ಶಾಸನಗಳಲ್ಲಿ ಕಂಡು ಬಂದದ್ದು ಕ್ರಿ.ಶ. 1731ರ ಹಿರೇಮದಕೇರಿ ನಾಯಕನ ಸಿರಿಗೆರೆ ಶಾಸನದಲ್ಲಿ "...ಸಿರಸ್ತುಂಬಿ ಜಲಸ್ತುಂಬಿ.... ಶಾಲಿವಾಹನ ಶಕ ಸಂವತ್ಸರ ೧೬೫೩ **ಚಿತ್ರದುರ್ಗದ** ದೊರೆಗಳು ಮದಕೆರಿ ನಾಯಕ ಮಗ .... ಹನುಮನಾಯಕನ .... ಕೊರಾಥಾ ..." ಇದಕ್ಕೆ ಮೊದಲು ಈ ದುರ್ಗಕ್ಕೆ ಚಿತ್ರಹಳ್ಳಿ ಸೀಮೆಯೆಂದು ಕರೆದಿದೆ, ಕೆಲವು ಕಡೆ ಚಿಂನನಗಿರಿದುರ್ಗ ಎಂದೂ ಕರೆದಿದೆ.

"ನಮಸ್ತುಂಗ .... ಕೊಮಾರ ಯಿಂಮಡಿ ಮೆದಕೆರಿ ನಾಯಕ ರೈನವರು .... ಮನ ಪ್ರೀತಿಯಾಗಿ ಕೊಟ ಅಗ್ರಾರ ನಂಮ ಚಿತ್ರಹಳ್ಳಿ **ಸೀಮೆ** ..." (ಕಡಲೆಗುದ್ದು ಶಾಸನ. ನಂ 51. ಚಿ.ತಾ)

"ನಮಸ್ತುಂಗ ... ಸ್ವಸ್ತಿಶ್ರೀ ... ೧೬೩೭ ನೇ ... ಬುಧವಾರದಲೂ **ಚಿಂನನಗಿರಿ ದುರ್ಗದ** ವೆಂಕಟರಮಣ ಸ್ವಾಮಿಗೆ ... ಬರಮಂಣ ನಾಯಕರು ... ಸಮರ್ಪಣ ಮಾಡಿಯಿಧೇವೆ"

(ಪಿಳ್ಳೇಕೆರೆ ಶಾಸನ, ಚಿತ್ರದುರ್ಗ ನಂ. 31)

ಹೀಗೆ ಈ ಗಿರಿಗೆ ಈ ಅರಸರ ಪ್ರಾರಂಭದ ಕಾಲದಲ್ಲಿ ಚಿತ್ರದುರ್ಗ ಎಂಬ ಹೆಸರು ಇರಲಿಲ್ಲ, ಅದು ಇತ್ತೀಚಿಗೆ ಬಂದ ಹೆಸರು ಎಂದು ಗೊತ್ತಾಗುತ್ತದೆ. ಆದುದರಿಂದ ಈ ನಾಯಕರು ಈ ಗಿರಿಗೆ ತಮ್ಮ ದೇವರ, ಯಾ ಮೂಲ ಪುರುಷನ ನೆನಪಿನಲ್ಲಿ 'ಚಿತ್ರದುರ್ಗ' ಎಂದು ಹೆಸರಿಟ್ಟರು ಎಂಬುದಾಗಲೀ, ಮೊದಲಿನಿಂದಲೂ ಇದಕ್ಕೆ 'ಚಿತ್ರದುರ್ಗ' ಎಂಬುದು ಹೆಸರೆಂತಾಗಲೀ ಎಂಬ ಹೇಳಿಕೆ ನಿರಾಧಾರವಾದುದು.

ಕಾಮಗೇತಿ ಅರಸರು ಹುಟ್ಟು ಚಿತ್ರದುರ್ಗ(ಜಿಲ್ಲೆ)ದವರೇ :

ಈ ವಂಶದ ನಾಯಕರ ಸುಮಾರು 46 ಶಾಸನಗಳಲ್ಲಿ ಕೇವಲ ಮೂರು ಶಾಸನಗಳು ಮಾತ್ರ ಈ ವಂಶದ ಮೂಲದ ಬಗ್ಗೆ ಬೆಳಕು ಚೆಲ್ಲುತ್ತವೆ-(೧) . . . ಶ್ರೀ ಗಣಾಧಿಪತಿಯೇ ನಮಃ . . . ಶ್ರೀಮನ್ಮಹಾರಾಜಧಿರಾಜ . . ಪ್ರತಾಪ . . . . ಶ್ರೀಮತೀ ರಾಮಾನುಜಾಯನಮಃ . . . . ವಾರಿಕಿ **ಕಾಮಗೆತ್ತಿ ಹನುಮಿನಾಯನಿಂಗಾರಿ ಕೊಮಾರುಡು ಕಾಮಿಗೆತ್ತಿ ತಿಂಮಣನಾಯನಿಂಗಾರು** .... ಶ್ರೀ ಶ್ರೀ ಶ್ರೀ " (Hr, 75, ರಂಗ ಸಮುದ್ರ ಶಾಸನ)

(೨)

" . . . ದಿನಿಕೀನಿ ಶ್ರೀ ಮದ್ವೇದ ಮಾರ್ಗ ಪ್ರತಿಷ್ಠಾಪನಾಚಾರ್ಯ . . . ಸದಾಸಿವದೇವ ಮಹಾದೇವ . . . ಪಾಲಿಂಚಿವ ಕುಂತಣ ದೇಶಮು . . . ಶ್ರೀಮನ್ಮಹಾನಾಯಕಾಚಾರ್ಯ **ಕಾಮಗೆತ್ತಿ ಹನುಮಿನಾಯನಿಂಗಾರಿ ಕೊಮಾರುಡು ಕಾಮಗೆತ್ತಿ ತಿಂಮಣನಾಯ ನಿಂಗಾರಿ** ತಂಮ ತಂಡ್ರಿ . . . . ಧಾರಾಪೋಶಿ ಇಸ್ತಿ ಮಿಂಗಾನ " (Hr 76, ರಂಗಸಮುದ್ರ),

(೩)

" ಶುಭಮಸ್ತು । ನಮಸ್ತುಂಗ ಶಿರಶ್ಚುಂಬಿ . . . ಶಾ. ಶ. ೧೫೦೩ನೆಯ . . . ಶ್ರೀಮನ್ಮಹಾನಾಯಕಾಚಾರಿಯ **ಕಾಮಗೇತಿಯ ಸಗಲೆಯ ಹನುಮಿನಾಯಕರ ಮಕಳು ಲೋಬಂಣ ನಾಯಕರ** ಮಗ ಮೆದಕೆರಿ ನಾಯಕರಿಗೆ . . . . . ಬೋಳೆನಾಯಕರೂ . . . "

(Cd 48, ರೊಟ್ಟಹಳ್ಳಿ ಶಾಸನ).

ಐತಿಹಾಸಿಕವಾಗಿ ಕಾಮಗೇತಿ **ತಿಮ್ಮಣ್ಣ** ನಾಯಕನೇ ಈ ವಂಶದ ಮೊದಲನೇ ಅರಸ. ಈ ಮೂರು ಶಾಸನಗಳ ಪ್ರಕಾರ ಹನುಮಿನಾಯಕ ಎಂಬಾತನು ಈತನ ಮತ್ತು ಲೋಬಂಣನಾಯಕನ ತಂದೆ ಎಂದು ತಿಳಿದು ಬರುತ್ತದೆ. ಹೀಗೆ ತಿಮ್ಮಣ್ಣ ನಾಯಕ ಮತ್ತು ಲೋಬಂಣನಾಯಕ ಸೋದರರಾಗಿಯೂ, ಅವರಲ್ಲಿ ಹಿರಿಯವನೂ, ವಿಜಯನಗರದಲ್ಲಿ ಸೈನ್ಯ ಚಟುವಟಿಕೆಗಳಲ್ಲಿ ನಾಮಾಂಕಿತನೂ ಆಗಿದ್ದ ಕಾರಣದಿಂದ ತಿಮ್ಮಣ್ಣನಾಯಕನನ್ನು ವಿಜಯನಗರದ ಅರಸರು ಇಲ್ಲಿ ತಮ್ಮ ಕಾರ್ಯಕರ್ತನಾಗಿ ನೇಮಿಸಿದಂತೆ ತೋರುತ್ತದೆ. ಈತನ ನಂತರ ಆಳಿದವನೇ (ಮೊದಲನೇ) ಮೆದಕೆರಿ ನಾಯಕ, ಈತ ತಾನು " . . . ಕಾಮಗೇತಿಯ ಸಗಲೆಯ ಹನುಮಿನಾಯಕರ ಮಕಳು ಲೋಬಂಣನಾಯಕ ಮಗ ಮೆದಕೆರಿ ನಾಯಕರಿಗೆ . . . " (Cd 48. ರೊಟ್ಟಹಳ್ಳಿ) ಸಗಲೆಯ ಹನುಮಿನಾಯಕನ ಮಕ್ಕಳು, ಲೋಬಂಣ ನಾಯಕನ ಮಗ ಮೆದಕೆರಿನಾಯಕ ಎಂದು ಹೇಳಿಕೊಂಡಿರುವುದರಿಂದ, ಪ್ರಾಯಶಃ ತಿಮ್ಮಣ್ಣ ನಾಯಕ ನಿಪುತ್ರಿಕನಾಗಿ ಸತ್ತಿರಬೇಕು-

ಸಾಮಾನ್ಯವಾಗಿ ಈ ಅರಸರು ತಮ್ಮ ಹೆಸರುಗಳ ಜೊತೆಗೆ ತಮ್ಮ ಹುಟ್ಟು ಊರುಗಳನ್ನು (ಕೆಲವು ಸಂದರ್ಭಗಳಲ್ಲಿ ರಾಜಧಾನಿಗಳನ್ನು) ಸೇರಿಸಿಕೊಳ್ಳುತ್ತಿದ್ದುದು ಒಂದು ವಾಡಿಕೆಯೇ ಆಗಿತ್ತು. ಉದಾ : ಕೋಟಿಕೆರೆ ಅಬ್ಬಯ್ಯ ನಾಯಕ, ಹರತಿ ತಿಮ್ಮಣನಾಯಕ, ಹಟ್ಟಿ ಮಲ್ಲಪ್ಪನಾಯಕ, ಸಂತೇಬೆಂನೂರ ಹನುಮಪ್ಪನಾಯಕ, ನಿಡಗಲ್ಲು ಹೊಟಂಣನಾಯಕ, ಬೇಲೂರ ವೆಂಕಟಾದ್ರಿ ನಾಯಕ, ಮತ್ತೋಡು ಹಾಲಪ್ಪನಾಯಕ, ಇತ್ಯಾದಿ–

ಪ್ರಸ್ತುತ ಸಂದರ್ಭದಲ್ಲಿ ಕಾಮಗೇತಿ ಅರಸರ ಮೂಲ ಪುರುಷ (ಐತಿಹಾಸಿಕವಾಗಿ) ಹನುಮನಾಯಕ ತನ್ನನ್ನು ಸಗಲೆಯ ಹನುಮನಾಯಕ ಎಂದು ಕರೆದುಕೊಂಡಿದ್ದಾನೆ. ಈ 'ಸಗಲೆ' ಎಂಬುದು ಅತನ ಹುಟ್ಟೂರು ಇರಬೇಕು. ದಾವಣಗೆರೆ ತಾಲ್ಲೋಕು, ಹದಡಿ ಹೋಬಳಿಯಲ್ಲಿ 'ಸ್ಯಾಗಲಿ' ಎಂಬ ಊರಿದೆ– ಆ 'ಸಗಲೆ' ಯೇ ಈ 'ಸ್ಯಾಗಲಿ' ಆಗಿರಬಹುದು–

ಈ ವಂಶದ ಎರಡನೆ ಅರಸ ಮೊದಲನೆ ಮದಕೆರಿನಾಯಕ, ನಂತರ ಈ ಹೆಸರು ಈ ವಂಶದಲ್ಲಿ ಸಾಮಾನ್ಯ ಹೆಸರಾಯಿತು– ಇಲ್ಲಿ 'ಮದಕೆರಿ' ಎಂಬುದೂ ಆತನ ಹುಟ್ಟೂರಿನ ಹೆಸರಿರಬೇಕು. ಈ ಹೆಸರಿನ ಯಾವುವಾದರೂ ಊರುಗಳು ಈ ಜಿಲ್ಲೆಯಲ್ಲೋ ಅಥವಾ ಬೇರೆ ಕಡೆಗಳಲ್ಲೋ ಇರಬಹುದು ಎಂದು ನೋಡಿದಾಗ ಚಿತ್ರದುರ್ಗ ಜಿಲ್ಲೆಯಲ್ಲಿ ಈ ಹೆಸರಿನ ನಾಲ್ಕು ಸ್ಥಳಗಳು ಕಂಡುಬರುತ್ತವೆ. ಆದರೆ ಇವು ಐತಿಹಾಸಿಕವಾಗಿ ಮೊದಲನೆ ಮದಕೆರಿನಾಯಕನ ಕಾಲಕ್ಕಿಂತ ಪ್ರಾಚೀನವಲ್ಲ (ಕ್ರಿ.ಶ. 1583) ಇವು ಈ ಹೆಸರಿನ ದೊರೆಗಳ ನೆನಪಿನಲ್ಲಿ ಸ್ಥಾಪನೆಯಾದ ಅಥವಾ ಪ್ರತಿನಾಮಾಂಕಿತವಾದ ಸ್ಥಳಗಳು–

ಬೇರೆ ಕಡೆಗಳಲ್ಲಿ ಇಂತಹ ಹೆಸರಿನ ಯಾ ಅದನ್ನು ಹೋಲುವ ಹೆಸರಿನ ಊರುಗಳಿವೆಯೇ ಎಂದು ನೋಡಿದಾಗ, ಕೊಡಗು ಜಿಲ್ಲೆಯ ರಾಜಧಾನಿ ಮಡಕೇರಿ, ಎಂಬ ಊರು, ಮಂಡ್ಯ ಜಿಲ್ಲೆಯ ಪಾಂಡವಪುರ ತಾಲ್ಲೋಕಿನ ಮಟಕೇರಿ ಎಂಬ ಊರುಗಳೂ ಕಂಡುಬರುತ್ತವೆ. ಅಲ್ಪ, ಸ್ವಲ್ಪ ಬದಲಾವಣೆಗಳೊಂದಿಗೆ ಇವು 'ಮದಕೆರಿ' ಆಗಿರಬಹುದೇ ? ಆದರೆ ಚಿತ್ರದುರ್ಗಕ್ಕೂ, ಕೊಡಗಿಗೂ, ಮಂಡ್ಯ ಜಿಲ್ಲೆಗೂ ಬಹು ದೂರದ ನಂಟು ! ಈ ಹೆಸರನ್ನು ಹೋಲುವ ಯಾವುದಾದರೂ ಪ್ರಾಚೀನವಾದ ಸ್ಥಳ ಚಿತ್ರದುರ್ಗ ಜಿಲ್ಲೆಯಲ್ಲಿ ಇದೆಯೋ ಎಂದು ನೋಡಿದಾಗ ಅಂತಹ ಒಂದು ಶಾಸನದ ಪಾಠ ಹೀಗಿದೆ, "ಶುಭಮಸ್ತು ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕ ವರುಷಂಗಳು ೧೪೭೫ನೆಯ ಸ್ವಸ್ತಿ ಶ್ರೀ ಪ್ರಮಾದಿ ಸಂವತ್ಸರ . . . . . ಶ್ರೀ ಮನ್ಮಹಾಮಂಡಲೇಸ್ವರ . . . . ಅಯಣ ವೀರಲಿಂಗದೇವರು . . . ಶ್ರೀ ಮನ್ಮಹಾಮಂಡಲೇಸ್ವರ . . . ಸಲುವ ಹಳ್ಳಿಗಳ ಗಉಡುಗಳು ಮುಂತಾದ ಪ್ರಜೆಗಳು ಗೋಪಿಕೆಜಿ[3] ಲಿಂಗದ ವೀರಯ್ಯನ ಮಕ್ಕಳು ಅಯನ ಮದಕೆರೆ ಲಿಂಗ ವೀರಯ್ಯಗೆ . . . ಶಾಸನದ ಕ್ರಮವೆಂತೆಂದರೆ . . . " (Hr 34, ವೇಣುಕಲ್ಲು). ಇಲ್ಲಿ ಶಾಸನೋಕ್ತ

ಕಾಲವು ಸಂವತ್ಸರಕ್ಕೆ ಸರಿ ಹೊಂದುವುದಿಲ್ಲ. ಪ್ರಮಾದಿ ಸಂವತ್ಸರವು ಕ್ರಿ. ಶ. 1519 ಆಗುತ್ತದೆ. ಆಗ ತಿಂಮಣ್ಣನಾಯಕ ದುರ್ಗದ ಆಡಳಿತೆಗೆ ನೇಮಕಗೊಂಡಿರಲಿಲ್ಲ. ಈತನ ನಂತರ ಆಳಿದ ಮೊದಲನೆಯ ಮೆದಕೆರಿ ನಾಯಕನಿಗಿಂತಲೂ ಇದು ಪ್ರಾಚೀನವಾಯಿತು—ಶಾಸನೋಕ್ತ ಕಾಲಕ್ಕಿಂತಲೂ ಈ ಗ್ರಾಮ ಇನ್ನೂ ಹಿಂದಿನಿಂದಲೂ ಅಸ್ಥಿತ್ವದಲ್ಲಿರಬೇಕು. ಪ್ರಾಯಶಃ ಈ ಮೆದಕೆರಿ ನಾಯಕನ ತಂದೆ ಕಾರಣಾಂತರಗಳಿಂದ ಈ ಊರಿನ ನಿವಾಸಿಯಾಗಿದ್ದು ಅದು ಮೆದಕೆರಿನಾಯಕನ ಜನ್ಮಸ್ಥಳವಾಗಿರಬೇಕು. ಈ ನೆನಪಿನಲ್ಲಿ ಈತ ತನ್ನನ್ನು ಮೆದಕೆರಿ ನಾಯಕ ಎಂದು ಕರೆದುಕೊಂಡಿರಬೇಕು. ಈ ಗ್ರಾಮ ಚಿತ್ರದುರ್ಗ ಜಿಲ್ಲೆಯ ಗೋಸಿಕರೆಯ ಆಸುಪಾಸಿನಲ್ಲಿ ಇರಬಹುದು. ಹೀಗಾಗಿ ಕಾಮಗೇತಿ ವಂಶದ (ಐತಿಹಾಸಿಕವಾಗಿ) ಪೂರ್ವಜರಾದ ಈ ಹಸುಮಿನಾಯಕ, ಆತನ ಮಕ್ಕಳು, ಮತ್ತು ಮೊಮ್ಮಗ ತಾವು ಚಿತ್ರದುರ್ಗ ಜಿಲ್ಲೆಗೆ ಸೇರಿದ ಗ್ರಾಮಗಳ ನಿವಾಸಿಗಳೆಂದು ಹೇಳಿಕೊಂಡಿದ್ದಾರೆ. ಈ ಆಧಾರಗಳ ರೀತ್ಯ ಈ ಕಾಮಗೇತಿ ಅರಸರು ಹುಟ್ಟಾ ಚಿತ್ರದುರ್ಗ ಜಿಲ್ಲೆಯವರೆನ್ನುವುದಕ್ಕೆ ಸಾಕಷ್ಟು ಆಧಾರಗಳು ದೊರೆತಂತೆ ಆಯಿತು—

ಮದಕರಿಯೋ, ಮೆದಕೆರಿಯೋ?

ಈ ಕಾಮಗೇತಿ ವಂಶದ ಅನೇಕ ಅರಸರ ಹೆಸರುಗಳು ಮೆದಕೆರಿನಾಯಕ ಎಂದು ಕಂಡುಬರುತ್ತವೆ. ಇದು ಅವರಿಗೆ ಬಹು ಪ್ರಿಯವಾದ ನಾಮಧೇಯವಾಗಿತ್ತು. ಒಟ್ಟಾರೆ ಈ ಅರಸರ ಸುಮಾರು 21 ಶಾಸನಗಳು, ಈ ಹೆಸರಿನ ಉಲ್ಲೇಖ ಬರುವ ಸುಮಾರು 27 ಶಾಸನಗಳು ಇವೆ. ಆದರೆ ಯಾವ ಒಂದು ಕಡೆಯಲ್ಲೂ 'ಮದಕರಿ' ಎಂದು ಇಲ್ಲ. ಉದಾಹರಣೆಗೆ ಈ ಹೆಸರಿನ ನಾಲ್ಕು ಅರಸರು ತಮ್ಮ ಶಾಸನಗಳಲ್ಲಿ ತಮ್ಮನ್ನು; (1) ನಮಸ್ತುಂಗ . . . ಸದಾಶಿವ ಮಹಾರಾಯರು . . . . ಶ್ರೀಮನ್ಮಹಾನಾಯಕಾಚಾರ್ಯ ಕಾಮಗೆತ್ತಿಯ **ಮೆದಕೆರಿ** ನಾಯಕರಿಗೆ ಆ ಮೊರ ಮಾಗಣಿಗೆ . . . . ಸಾಸನ (Hr 6, ಹೊಳಲಕೆರೆ, 1490 ಶಾ. ಶ.). ಇದು ಮೊದಲನೆ ಮೆದಕೆರಿ ನಾಯಕನ ಶಾಸನ, ಕಾಲ ಕ್ರಿ.ಶ. 1568, (2) "ಶುಭಮಸ್ತು . . . ಶಾ. ಶಕ ೧೫೩೧ ರಲ್ಲು . . . ಶ್ರೀ ಮನ್ಮಹಾನಾಯಕಾಚಾರ್ಯ ಕಾಮಗೆತ್ತಿಯಿಂಮಡಿ **ಮೆದಕೆರಿ** ನಾಯ್ಕ ಅಯ್ಯನವರು . . . . . ." (Cd 22, ಹುಲ್ಲೂರು). ಇದು ಇಮ್ಮಡಿ ಮೆದಕೆರಿ ನಾಯಕನ ಶಾಸನ ಕಾಲ ಕ್ರಿ.ಶ. 1609 (3) "ಹರೇ ಲೀಲಾ ವರಾಹಸ್ಯ ದಂಷ್ಟ್ರಾ ದಂಡ ಸಪಾತುವಃ। . . . . ಶಾಲೀವಾಹನ ಶಕ ವರ್ಷಂಗಳು ೧೬೫೦ನೆಯ ಕೀಲಕ . . . . ಕಾಮಗೆತಿ ಕಸ್ತೂರಿ ಮೆದಕೆರಿ ನಾಯಕರ ಸುಪುತ್ರರಾದ ಬರಮಂಣ ನಾಯಕರ ಪುತ್ರರಾದ **ಮೆದಕೆರಿ** ನಾಯಕರವರು। ಪ್ರತಿಮಾಷಾವಶಿಷ್ಟ . . ." (Dg 157, ಮಲ್ಲೇನಹಳ್ಳಿ). ಇದು ಹಿರೇ ಮೆದಕೆರಿ ನಾಯಕನ ಶಾಸನ, ಕಾಲ ಕ್ರಿ.ಶ. 1728. (4) "ನಮಸ್ತುಂಗ . . . ಸಾ

೧೬೭೭ಲನೆಯ ಧಾತು . . . ಶ್ರೀ ಮನ್ಮಾಹ ನಾಯಕಾಚಾರ್ಯ . . . . . ಕಸ್ತೂರಿ ದುಗಪಣ ನಾಯಕರ ಪುತ್ರರಾದ ರಾಜಾ ಮೆದಕೆರ್‍ರಿ ನಾಯಕರವರು . . . ." (Hr 53.) ಇದು ಕೊನೆಯ ಅರಸು ರಾಜಾ ಮೇದಕೆರ್‍ರಿ ನಾಯಕನ ಶಾಸನ, ಇದರ ಕಾಲ ಕ್ರಿ.ಶ. 1757 (ಗೌಡನ ಹಳ್ಳಿ ಶಾಸನ).

ಈ ವಂಶದಲ್ಲಿ ಆಳಿದ ಈ ನಾಲ್ಕೂ ಜನ ಅರಸರು ತಮ್ಮನ್ನು ಅಪ್ಪಿ, ತಪ್ಪಿಯೂ ಕೂಡ 'ಮದಕರಿ' ನಾಯಕ ಎಂದು ಕರೆದುಕೊಂಡಿಲ್ಲ. ಹಾಗಿದ್ದರೆ ಈ ಹೆಸರು ಇವರಿಗೆ ಹೇಗೆ ಅಂಟಿಕೊಂಡಿತು—?

ಈ ಹೆಸರು ಮೊದಲು ಕಂಡುಬರುವುದು ಈ ಅರಸರ ಬಗ್ಗೆ ರಚಿತವಾದ ಜನಪದ ಗೀತೆಗಳಲ್ಲಿ. ಈ ಗೀತಕಾರರು ಈ ಹೆಸರಿನಿಂದಲೇ (ಮದಕರಿ) ಕರೆದರೋ ಅಥವಾ ಈ ಗೀತೆಗಳನ್ನು ಲಿಖಿತ ರೂಪಕ್ಕೆ ಇಳಿಸಿದ ಲಿಪಿಕಾರರು. ಈ ರೂಪಕ್ಕೆ ಪರಿವರ್ತಿಸಿದರೋ ಎಂಬುದೊಂದು ಬೀಜವೃಕ್ಷ ನ್ಯಾಯವಾಗಿದೆ. ಯಾರಾದರೂ ಮಾಡಿರಲಿ ಈ ಹೆಸರನ್ನು (ಮದಕರಿ) ನಮ್ಮ ಸಂಶೋಧಕರು ಚರಿತ್ರಕಾರರು, ಲೇಖಕರು. ಅನಾಮತ್ತಾಗಿ ಸ್ವೀಕರಿಸಿ ಅದಕ್ಕೆ ಆ ಅಸ್ಥಿಪಂಜರಕ್ಕೆ—ರಕ್ತ, ಮಾಂಸಾದಿಗಳನ್ನು ತುಂಬಿದರು.

ಈ ಬಗ್ಗೆ ರೋಚಕವಾದ ಕಥೆಯೊಂದನ್ನು ನಿರೂಪಿಸುತ್ತಾರೆ. ದೆಹಲಿಯಲ್ಲಿ ಮಹಮದ್ ಬಿನ್ ತೊಗಲಖ್ ಆಳುತ್ತಿದ್ದಾಗ, ಆತನ ಸೇನೆ ಕಮ್ಮಟ ದುರ್ಗವನ್ನು ಮುತ್ತಿ ಗೆದ್ದಾಗ ಸೆರೆಹೋದ ಅನೇಕ ನಾಯಕರಲ್ಲಿ ತಿಂಮಣನಾಯಕನೂ ಒಬ್ಬನಂತೆ. ಈತ ದೆಹಲಿಯಲ್ಲಿ ಮದಿಸಿದ ಒಂದು ಆನೆಯನ್ನು ಮಥಿಸಿದುದರಿಂದ ಆತನಿಗೆ ಆ ಕಾರಣಕ್ಕಾಗಿ ಸುಲ್ತಾನ ಮಹಮ್ಮದ್ ಬಿನ್ ತೊಗಲಖ್ 'ಮದಕರಿ ನಾಯಕ' ಎಂಬ ಬಿರುದನ್ನೂ ಕೊಟ್ಟು ಸನ್ಮಾನ ಮಾಡಿದನಂತೆ. ಮಹಮದ್ ಬಿನ್ ತೊಗಲಖ್‌ನ ಕಾಲ ಹದಿನಾಲ್ಕನೆಯ ಶತಮಾನ. ತಿಂಮಣನಾಯಕನ ಕಾಲ ಹದಿನಾರನೆಯ ಶತಮಾನ. ಈ ನಡುವೆ ಇನ್ನೂರು ವರ್ಷಗಳ ಅಂತರ ಬೀಳುತ್ತದೆ. ಹೀಗಿರುವಾಗ ಈ 'ಮದಕರಿ' (ಮದಿಸಿದ ಆನೆ)ಯ ಕಥೆ ಒಂದು ಸತ್ಯದೂರವಾದ ಕಥೆಯಾಗುತ್ತದೆ–ಇದು ಕೇವಲ ಕೆಲವು ಲೇಖಕರು ತಮ್ಮ ಮನೋರಂಜನೆಗಾಗಿ, ಮನೋಕಾಮನೆಯ ತಣಿವಿಗಾಗಿ ಕಟ್ಟಿಕೊಂಡ ಸುಳ್ಳುಕಥೆ. ಇದರ ಹೊಣೆಗಾರಿಕೆಯನ್ನು ಕೊನೆಯ ಅರಸ ರಾಜಾ ಮೇದಕೆರಿ ನಾಯಕನಿಗೆ ಅಂಟಿಸಿ ಆ ಅಸಹಜ ಕೀರ್ತಿಯ ತೋರುಬೆಳಕಿನಲ್ಲಿ ತಾವು, ತಾವಾಗಿಯೇ ಮಿಂಚಿದರು.

ಆದುದರಿಂದ ಈ ಅರಸರ ನ್ಯಾಯವಾದ ಹೆಸರು 'ಮೆದಕೆರಿ' ನಾಯಕ ಎಂಬುದೇ ಹೊರತು ಮದಕರಿ ನಾಯಕ ಎಂದಲ್ಲ.

ಕೊನೆಯ ಅರಸ ರಾಜಾ ಮೆದಕೆರಿಯ ಬಗ್ಗೆ :

ಕಾಮಗೇತಿ ವಂಶದ ಕೊನೆಯ ಅರಸ ರಾಜಾ ಮೇದಕೆರಿನಾಯಕ. ಈತನ ಬಗ್ಗೆ ಅನೇಕ ಕಾಲ್ಪನಿಕ ಸಂಬಂಧಗಳನ್ನೂ, ಸಂಗತಿಗಳನ್ನೂ ಎಬ್ಬಿಸಿದ್ದಾರೆ. ಇದರಲ್ಲಿ

ಒಂದು ಆತನ ಹುಟ್ಟಿಗೆ ಸಂಬಂಧಿಸಿದುದು. ಈತ ನೇರವಾಗಿ ಸಗಲೆ ಹನುಮಿ ನಾಯಕ. ವೋಬಂಣನಾಯಕನ ವಂಶಸ್ಥ, ಹಾಗೂ ಹಿರೇ ಮೆದಕೆರಿ ನಾಯಕನ ಪಾತ್ರ-ಈತನ ಗೌಡನ ಹಳ್ಳಿ ಶಾಸನ ಸ್ಪಷ್ಟವಾಗಿ ಈತನ ವಂಶವೃಕ್ಷವನ್ನು ತಿಳಿಸುತ್ತದೆ "ನಮಸ್ತುಂಗ ಶಿರಶ್ಚುಂಬಿ ಸ್ವಸ್ತಿಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕ ವರುಶಂಗಳು । ಸಾ ೧೬೭೮ನೆಯ . . . ವಾಲ್ಮೀಕಗೋತ್ರದ ಶ್ರಿಮಂನ್ಮಾಹ ನಾಯಕಚಾರ್ಯ । ಕಾಮ ಗೆತ್ತಿ । ಮೆದಕೆರ್ರಿ ನಾಯಕರ ಪಉತ್ರರಾದಾ । ಕಸ್ತುರಿ ದುಗಪಣಯಕರ ಪುತ್ರರಾದ ರಾಜಾ ಮೆದಕೆರ್ರಿ ನಾಯಕರವರು . . . . ಭಾವೇತು" (Hr 53, ಗೌಡನ ಹಳ್ಳಿ).

ಸ್ವಯಂ ರಾಜಾ ಮೆದಕೆರಿನಾಯಕನೇ ತನ್ನ ಈ ಶಾಸನದಲ್ಲಿ ತನ್ನ ತಂದೆ ಕಸ್ತೂರಿ ದುಗ್ಗಪ್ಪನಾಯಕನೆಂದೂ, ತನ್ನ ತಾತ ಕಸ್ತೂರಿ (ಹಿರೇ)ಮೆದಕೆರಿನಾಯಕ ನೆಂದು ಹೇಳಿಕೊಂಡಿದ್ದಾನೆ. ಹಾಗಾದರೆ ಈತ ಕಸ್ತೂರಿ ರಂಗಪ್ಪನಾಯಕನ ಸೋದರನ ಮಗನೆಂದಹಾಗಾಯಿತು. ಈತ-ಪ್ರಾಯಶಃ - ಚಿಕ್ಕತಂದೆಯಾದ ಕಸ್ತೂರಿ ರಂಗಪ್ಪ ನಾಯಕನ ಕಾಲದಲ್ಲಿ ರಾಜಕಾರ್ಯಗಳಲ್ಲಿ ಭಾಗವಹಿಸುತ್ತಿದ್ದಂತೆ ತೋರಿಬರುತ್ತದೆ. "ಸ್ವಸ್ತಿಶ್ರೀ ವಿಜಯಾಭ್ಯುದಯ ಶಾಲೀವಾಹನ ಶಕವರುಷಂ ಗಳು ೧೬೭೬ನೆಯ ಭಾವ ಸಂವತ್ಸರದ........ ಕಾಮಗೆತಿ ಕಸ್ತೂರಿ ಬರಮಂಣ ನಾಯಕರ ಮೆದಿಕೆರಿನಾಯಕರ ಕೊಮಾರ ಕಸ್ತೂರಿ ರಂಗಪ್ಪನಾಯಕರ ಕಾಯಿ ಮೆದಕೆರಿನಾಯಕರು ಹೊರಕೆರೆ,........ ಹೊಲ ಮಾನ್ಯ....ಪಾಲಿಸಿಯ್ಸಿ ದೇವೆ"- (Hk. 54. ಹೊರಕೆರೆ ದೇವರಪುರ). ಹೀಗಾಗಿ ಕಸ್ತೂರಿರಂಗಪ್ಪನ ಜೀವನಕಾಲದಲ್ಲಿ ಈ ಮೆದಕೆರಿನಾಯಕ ಆತನ ಕಾವಲು ಪಡೆಯ ಮುಖ್ಯಸ್ಥ(ಕಾಯಿ) ಆಗಿ ನೇಮಕಗೊಂಡಿದ್ದನಲ್ಲದೇ, ಆತನ ಪರವಾಗಿ ತಾನೇ ದಾನಗಳನ್ನು ನೀಡುವಷ್ಟು ಅಧಿಕಾರ ಪಡೆದಿದ್ದಾನೆ - ಆದ್ದರಿಂದ ಪ್ರಾಯಶಃ ನಿಪುತ್ರಿಕನಾದ ಕಸ್ತೂರಿ ರಂಗಪ್ಪ ನಾಯಕನು ಈತನನ್ನು ತನ್ನ ಜೀವನಕಾಲದಲ್ಲೇ ರಾಜಕಾರ್ಯಗಳಲ್ಲಿ ತೊಡಗಿಸಿ ಆತನನ್ನು ಭಾವಿ ಅರಸುತನಕ್ಕೆ ಪರಿಣತಗೊಳಿಸುತ್ತಿದ್ದನೆಂದೂ ತಿಳಿದುಬರುತ್ತದೆ - ಈತ ಚಿತ್ರದುರ್ಗದ ಪಟ್ಟಕ್ಕೆ ಹೊರಗಿನಿಂದ ಬಂದ ಆಗಂತುಕನಲ್ಲ, ನೇರವಾಗಿ ಆ ವಂಶದ ಕುಡಿ, ಆ ಅರಸು ಪಟ್ಟದ ನ್ಯಾಯಬದ್ಧಹಕ್ಕುದಾರ.

ಹಿರೇಮೆದಕೆರಿ ನಾಯಕನಿಗೆ ಈ ಶಾಸನಗಳ ಆಧಾರದಿಂದ ರಂಗಪ್ಪ ಮತ್ತು ದುಗ್ಗಪ್ಪ ಎಂಬ ಮಕ್ಕಳಿದ್ದುದು ಸಿದ್ಧವಾಯಿತು- ಇವರೊಂದಿಗೆ ಈತನಿಗೆ ಚಿಕಂಣ ನೆಂಬ ಇನ್ನೊಬ್ಬ ಮಗನಿದ್ದನೆಂದೂ ತಿಳಿದುಬರುತ್ತದೆ. "ಶುಭಮಸ್ತು ।ಸ್ವಸ್ತಿಶ್ರೀ। ....ಸಿಖಾಬ್ದಿ ೧೬೪೩ನೆಯ ಪ್ಲವ ನಾಮ .... ಕಾಮಗೆರೆ ಬರಮಂಣನಾಯಕರ ಮೆದಕೆರಿ ನಾಯಕರ್ರೈನವರ ಅಪಣೆಯಉ ಕೊಮಾರ ಚಿಕಂಣನವರು ಬಂದು ಚೆಲುಗ್ರಾಮ.... ಹೊಲದ ಮೇರೆ ಶಾಸನಕೆ.... (Hr 57. ಆನೇಸಿದರಿ) ಆದುದರಿಂದ ಕಸ್ತೂರಿರಂಗಪ್ಪನಾಯಕನ ನಂತರ, ರಾಜಾಮೆದಕೆರಿನಾಯಕ ಪಟ್ಟಕ್ಕೆ ಬಂದುದರಿಂದ, ಈ ಚಿಕಂಣನಾಯಕ ತನ್ನ ತಂದೆಯ ಕಾಲದಲ್ಲೇ ಯಾವುದೋ ಯುದ್ಧದಲ್ಲಿ ಮಡಿದಿರಬೇಕು—

ಈತನ ಬಗ್ಗೆ ಪ್ರಚಾರದಲ್ಲಿರುವ ಇನ್ನೊಂದು ಸುದ್ದಿ ಆತನ ಅಂತ್ಯಕಾಲಕ್ಕೆ ಸಂಬಂಧಿಸಿದುದು– ಚಿತ್ರದುರ್ಗ ಪತನವಾದಾಗ ಈತನನ್ನು ಬಂಧಿಸಿ, ಶ್ರೀರಂಗಪಟ್ಟಣಕ್ಕೆ ಒಯ್ಯಲಾಯಿತು. ಈತನೊಂದಿಗೆ ಈತನ ತಮ್ಮನಾದ ಪರಶುರಾಮ ನಾಯಕ, ಮಗ ಭರಮಪ್ಪನಾಯಕ, ಪ್ರೇಯಸಿ ಕಸ್ತೂರಿ, ಅಳಿಯ ಹುಚ್ಚಪ್ಪ ನಾಯಕ, ಹಾಗೂ ದಾಯಾದಿಗಳಾದ ದೊಡ್ಡ ಮದಕೇರಿನಾಯಕ ಮತ್ತು ಇತರರನ್ನು ಬಂಧಿಸಿ ಒಯ್ಯಲಾಯಿತು. ಶ್ರೀರಂಗಪಟ್ಟಣದಲ್ಲಿ ಇವರ ವಾಸಕ್ಕೆ ಯೋಗ್ಯವ್ಯವಸ್ಥೆ ಮಾಡಲಾಗಿತ್ತು. ರಾಜಾ ಮದಕೇರಿನಾಯಕ ಖೈದಿನಲ್ಲಿಯೇ ಮೃತನಾದನೆಂದೂ, (ದೊಡ್ಡ ಮದಕರಿನಾಯಕನ ಕೈಫಿಯತ್ತು), ಇನ್ನೊಂದು ಮೂಲದ ಪ್ರಕಾರ ಆತ.... ಕಾವೇರಿಯು ಆಹುತಿ ತೆಗೆದುಕೊಂಡಳು" (ಚಿತ್ರದುರ್ಗದ ಪಾಳೆಯಗಾರರು, ಕೈಬರಹದ ಪುಸ್ತಕದಿಂದ), ಎಂದೂ ಹೇಳಲಾಗಿದೆ. ಇವುಗಳಲ್ಲಿ ಹೆಚ್ಚು ನಂಬಿಕೆಗೆ ಅರ್ಹವಾದುದು ದೊಡ್ಡ ಮದಕರಿಯ ಹೇಳಿಕೆ. ಆತನ ಈ ಬರಹ ಸಮಕಾಲೀನ ಬರಹ, ಆಗ ಆತ ಶ್ರೀರಂಗಪಟ್ಟಣವಲ್ಲೇ ಇದ್ದವನು– ಒಟ್ಟಿನಲ್ಲಿ ರಾಜಾ ಮದಕೇರಿನಾಯಕನ ಅಂತ್ಯ ಶ್ರೀರಂಗಪಟ್ಟಣದಲ್ಲಿ ಆಗಿದೆ–ವಿಷಯ ಇಷ್ಟು ಸ್ಪಷ್ಟವಾಗಿದ್ದರೂ ಈತನ ಸಾವು ಚಿತ್ರದುರ್ಗದಲ್ಲೇ ಆಯಿತೆಂದು ಕಲ್ಪಿಸಿ ಗೊಂದಲಗಳಿಗೆ ಕಾರಣವಾಗಿದ್ದಾರೆ.

ಹನುಮದ್ಗರುಡ ಲಾಂಛನ

ಕಾಮಗೇತಿ ಅರಸರ ಲಾಂಛನ ಹನುಮದ್ಗರುಡ ಧ್ವಜ. ಈ ಇಬ್ಬರು ಭಾಗವತ ಶ್ರೇಷ್ಠರನ್ನು ಒಂದೇ ಕಡೆ ಸೇರಿಸಿರುವುದು ಪ್ರಾಯಶಃ ಭಾರತದಲ್ಲಿ ಇದೊಂದೇ ಕಡೆ ಇರಬೇಕು, ಇದೊಂದು ವಿಶೇಷ. ಈ ಅರಸರು ತಮ್ಮ ಮೇಲೆ ಈ ಮುದ್ರೆಗಳನ್ನು (ಹನುಮದ್ಗರುಡ) ಹಾಕುವುದರ ಮೂಲಕ ಇವು ಕಾಮಗೇತಿ ಅರಸರ ಆಸ್ತಿ ಎಂದು ಪ್ರಕಟಿಸುತ್ತಿದ್ದರು. ಆದರೆ ಈ ಗುರುತ (ಲಾಂಛನ)ನ್ನು ಆರಿಸಿ ಕೊಂಡವರು ಇವರೇ ಮೊದಲು ಅಲ್ಲವೇ ಎಂದು ಪರಿಶೀಲಿಸಿದಾಗ ಕಾಮಗೇತಿ ಅರಸರ ಆಳ್ವಿಕೆಯು ಪ್ರಾರಂಭವಾಗುವ ಸುಮಾರು ನೂರಐವತ್ತು ವರ್ಷ ಹಿಂದೆಯೇ ಇಂತಹ ಒಂದು ಘಟನೆ ಸಂದಿದೆ. ....ಶ್ರೀ ಮನ್ಮಹಾನಾಯಕಾಚಾರ್ಯ, ಬಾಚಿಗೆ ತಪ್ಪುವ ನಾಯ್ಕರ .... ಮಗ ಮಲ್ಲೆಯ | ನಾಯಂಕರು ಸಕವರುಶ ೧೩೧೩ನೆಯ.... ಶ್ರೀಗರುಡ ದೇವರು | ಶ್ರೀ ಹನುಮಂತ ದೇವರು ಯಿಬ್ಬರನು| ಮಾಡ್ಸಿ ಪ್ರತಿಷ್ಠೆಯಂ ಮಾಡ್ಸಿದನು...... (Ch 37, ಪರಶುರಾಮಪುರ). ಹರತಿ ಮಲ್ಲಯ್ಯನಾಯಕನು ಕ್ರಿ.ಶ. 1391ರಲ್ಲಿ ಗರುಡ ದೇವರನ್ನೂ, ಹನುಮಂತ ದೇವರನ್ನೂ ಮಾಡಿಸಿ ಪ್ರತಿಷ್ಠೆ ಮಾಡಿಸಿದ ವಿಷಯವನ್ನು ಈ ಶಾಸನ ಹೇಳುತ್ತದೆ.

ಈ ಎರಡು ಸಂದರ್ಭಗಳು ಒಂದಕ್ಕೊಂದು ಪೂರಕವೇ ? ಕಾಮಗೇತಿ ಅರಸರಿಗೂ, ಹರತಿಯ ನಾಯಕರಿಗೂ ಸಂಬಂಧವಿದ್ದು, ಇವರು ಇಲ್ಲಿ–ಚಿತ್ರದುರ್ಗದಲ್ಲಿ–ತಮ್ಮ ಆಳ್ವಿಕೆ ಪ್ರಾರಂಭಮಾಡಿದಾಗ ತಮ್ಮ ಮೂಲ ಮನೆದೇವರುಗಳಾದ ಹನುಮ ಮತ್ತು ಗರುಡದೇವರನ್ನು ಹೀಗೆ ತಮ್ಮ ಲಾಂಛನವಾಗಿ ಆರಿಸಿಕೊಂಡು ಗೌರವಿಸಿರಬಹುದೇ? ಇದು ಪರಿಶೀಲನೆಗೆ ಗುರಿಯಾಗಬೇಕಾಗಿದೆ.

ಆರ್. ರಾಮಕೃಷ್ಣ

ಮೌಲಾನಾ ಅಬುಲ್–ಕಲಾಮ್ ಆಜಾದ್ (1888—1958)

ಭಾರತದಲ್ಲಿಯು ಹಿಂದುಗಳು ಮುಸ್ಲಿಮರು ಪರಸ್ಪರ ಸೌಹಾರ್ದದಿಂದ ಕೂಡಿ ಬಾಳದಿದ್ದರೆ ಇಬ್ಬರಿಗೂ ಏಳಿಗೆ ಇಲ್ಲವೆಂಬ ಅಂಶವನ್ನು ಮನಗಂಡು ಅದಕ್ಕಾಗಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟ ಮಹಾನ್ ವ್ಯಕ್ತಿ ಮೌಲಾನಾ ಆಬುಲ್–ಕಲಾಮ್ ಆಜಾದ್ (1888–1958).

ಆಜಾದರ ತಂದೆ ಮೌಲಾನ ಮೊಹಮ್ಮದ್ ಖೈರುದ್ದೀನ್ (1831–1908) ತಮ್ಮ 25ನೆಯ ವಯಸ್ಸಿನಲ್ಲಿ ಭಾರತದಿಂದ ಮೆಕ್ಕಾಕ್ಕೆ ಹೋಗಿ ನೆಲೆಸಿದರು. ಮದೀನಾ ಪಟ್ಟಣದ ಬಹುದೊಡ್ಡ ಅರಬ್ಬಿ ವಿದ್ವಾಂಸ ಹಾಗೂ ತಮ್ಮ ಧಾರ್ಮಿಕ ಗುರುಗಳಾದ ಷೇಖ್ ಮೊಹಮ್ಮದ್ ಜಾಹೆರ್ ವತ್ರಿಯವರ ಪುತ್ರಿ ಅಲಿಯ ಅವರನ್ನು ಮದುವೆಯಾದರು. ಈ ದಂಪತಿಗಳ ದ್ವಿತೀಯ ಪುತ್ರರಾಗಿ 1888ನೆಯ ನವೆಂಬರ್ 11 ರಂದು ಆಜಾದರು ಜನಿಸಿದರು.

ಆಜಾದರ ತಂದೆ ಪ್ರಸಿದ್ಧ ವಿದ್ವಾಂಸರು. ಧರ್ಮಗುರುವೂ ಅಗಿದ್ದರು. ಮುಸ್ಲಿಮ್ ಧರ್ಮದ ಬಗ್ಗೆ ಅವರು ಬರೆದ ಗ್ರಂಥಗಳು ಇಂದಿಗೂ ವಿದ್ವಾಂಸರಿಂದ ಮನ್ನಣೆ ಪಡೆದಿವೆ. ಪ್ರಮಾಣ ಗ್ರಂಥಗಳಾಗಿವೆ. ತಮ್ಮ ಶಿಷ್ಯರ ಕೋರಿಕೆಯನ್ನು ಮನ್ನಿಸಿ ಆಜಾದರ ತಂದೆ 1890 ರಲ್ಲಿ ಸಂಸಾರ ಸಮೇತ ಕಲ್ಕತ್ತಾ ನಗರಕ್ಕೆ ಬಂದರು. ಕಲ್ಕತ್ತೆಗೆ ಬಂದ ಒಂದು ವರ್ಷದಲ್ಲಿ ಆಜಾದರ ತಾಯಿ ತೀರಿಕೊಂಡರು.

ತಮ್ಮ ಬಾಲ್ಯದಲ್ಲಿ ಆಧುನಿಕ ರೀತಿಯ ಶಿಕ್ಷಣ ಕ್ರಮಕ್ಕೆ ಅನುಗುಣವಾಗಿ ವಿದ್ಯೆ ಕಲಿಯಲು ಸಾಧ್ಯವಾಗದಿದ್ದುದಕ್ಕಾಗಿ ಆಜಾದರು ಬಹಳ ನೊಂದುಕೊಂಡಿದ್ದಾರೆ. ಈ ಬಗ್ಗೆ ತಮ್ಮ ಆತ್ಮಚರಿತ್ರೆಯಲ್ಲಿ ಅವರು ತೋಡಿಕೊಂಡಿರುವ ಬಗೆ ಇದು: "ನನ್ನ ತಾಯಿ ತಂದೆ ಹಿಂದಿನ ಜೀವನ ರೀತಿಗಳಲ್ಲಿ ಸಂಪ್ರದಾಯಗಳಲ್ಲಿ ನಂಬಿಕೆಯುಳ್ಳವರು ಅವರಿಗೆ ಪಾಶ್ಚಾತ್ಯ ವಿದ್ಯಾಭ್ಯಾಸ ಕ್ರಮದಲ್ಲಿ ವಿಶ್ವಾಸವಿರಲಿಲ್ಲ. ಆದುದರಿಂದ ನನಗೆ ಆಧುನಿಕ ರೀತಿಯ ಶಿಕ್ಷಣವನ್ನು ಕೊಡಿಸಲು ಇಚ್ಛಿಸಲಿಲ್ಲ. ಆಧುನಿಕ ವಿದ್ಯಾಭ್ಯಾಸ

ಮುಸ್ಲಿಮ್ ಮತದ ನಂಬಿಕೆಯನ್ನು ನಾಶಮಾಡುವುದೆಂದು ಅವರ ಬಲವಾದ ವಾದ. ಆದ್ದರಿಂದ ಹಳೆಯ ಸಾಂಪ್ರದಾಯಿಕ ಪದ್ಧತಿಯಂತೆಯೇ ನನ್ನ ವಿದ್ಯಾಭ್ಯಾಸವನ್ನು ಮನೆಯಲ್ಲೇ ಏರ್ಪಡಿಸಿದರು. ಯಾವ ಮದ್ರಸಕ್ಕೂ ನನ್ನನ್ನು ಕಳುಹಿಸಲಿಲ್ಲ. ಮೊದ ಮೊದಲು ತಂದೆಯವರೇ ಪಾಠ ಹೇಳುತ್ತಿದ್ದರು. ಅನಂತರ ಬೇರೆ ಬೇರೆ ವಿಷಯಗಳಿಗೆ ಬೇರೆ ಬೇರೆ ಅಧ್ಯಾಪಕರನ್ನು ನೇಮಿಸಿದರು. ಪ್ರತಿ ಕ್ಷೇತ್ರದಲ್ಲೂ ನಿಷ್ಣಾವಂತರಾದ ವಿದ್ವಾಂಸರಿಂದ ವಿದ್ಯೆ ಕಲಿಸಬೇಕೆಂದು ಅವರ ಅಭಿಲಾಷೆಯಾಗಿತ್ತು.

ಸಾಂಪ್ರದಾಯಿಕ ವಿದ್ಯಾಭ್ಯಾಸ ಕ್ರಮದಲ್ಲಿ ಕಲಿತ ವಿದ್ಯಾರ್ಥಿಗಳು ಸಾಧಾರಣ ವಾಗಿ 20 ರಿಂದ 25 ವರ್ಷ ವಯಸ್ಸಿನೊಳಗಾಗಿ ತಮ್ಮ ಶಿಕ್ಷಣವನ್ನು ಮುಗಿಸು ತ್ತಿದ್ದರು. ತರುವಾಯ ಅವರು ಶಿಷ್ಯರಿಗೆ ಪಾಠ ಹೇಳಿ ತಾವು ಕಲಿತ ವಿಷಯಗಳ ಮೇಲೆ ತಮಗೆ ಪ್ರಭುತ್ವ ಬಂದಿದೆಯೆಂದು ತೋರಿಸಿಕೊಡಬೇಕಿತ್ತು. ನನಗೆ ಕೇವಲ 16 ವರ್ಷವಾಗುವ ಹೊತ್ತಿಗೆ ಶಿಕ್ಷಣವನ್ನು ಯಶಸ್ವಿಯಾಗಿ ಪೂರೈಸಿದೆ. ನನ್ನ ತಂದೆ ಯವರು 15 ಮಂದಿ ವಿದ್ಯಾರ್ಥಿಗಳನ್ನು ಸೇರಿಸಿ ಅವರಿಗೆ ತತ್ತ್ವಶಾಸ್ತ್ರ, ತರ್ಕ ಹಾಗೂ ಗಣಿತವನ್ನು ಕಲಿಸುವಂತೆ ಹೇಳಿದರು. ಇದೇ ಸಮಯದಲ್ಲಿ ಪಾಶ್ಚಾತ್ಯರ ವಿದ್ಯಾಭ್ಯಾಸ ಕ್ರಮವನ್ನು ತಿಳಿದುಕೊಳ್ಳಬೇಕೆಂಬ ಉದ್ದೇಶದಿಂದ ಮೊಹಮ್ಮದ್ ಯೂಸೆಫ್ ಜಫ್ರಿ ಅವರಿಂದ ಇಂಗ್ಲಿಷ್ ಕಲಿತೆ ”

ಅಜಾದರು ಅರ್ಥಹೀನ ಸಂಪ್ರದಾಯಗಳ ಹಾಗೂ ಮೂಢನಂಬಿಕೆಗಳ ವಿರುದ್ಧ ತೀವ್ರ ಅಸಮಾಧಾನ ವ್ಯಕ್ತಪಡಿಸುತ್ತಿದ್ದರು. ಬದುಕಿನ ಏಳ್ಗೆಗೆ ಸುಸೂತ್ರ ಬಾಳ್ವೆಗೆ ಅವು ಮಾರಕವೆಂದು ಪದೇ ಪದೇ ಹೇಳುತ್ತಿದ್ದರು. ತಮ್ಮ ಮನೆಯಲ್ಲಿಯೇ ಆಚರಿಸುತ್ತಿದ್ದ ಸಂಪ್ರದಾಯಗಳು ಎಷ್ಟರ ಮಟ್ಟಿಗೆ ಅವರಿಗೆ ಬೇಸರ ತರುತ್ತಿದ್ದುವು ಹಾಗೂ ಮನೆಯ ಪರಿಸರದಿಂದ ತಾನು ಹೇಗೆ ಸಿಡಿದು ಹೊರಬಂದೆ ಎಂಬುದನ್ನು ತಮ್ಮ ಆತ್ಮಚರಿತ್ರೆಯಲ್ಲಿ ಹೀಗೆ ಹೇಳಿದ್ದಾರೆ:

“ನಮ್ಮ ಮನೆಯಲ್ಲಿ ಮತಧರ್ಮಕ್ಕೆ ಸಂಬಂಧಿಸಿದ ಸಂಪ್ರದಾಯಗಳು ಆಳ ವಾಗಿ ಬೇರೂರಿದ್ದವು. ಮನೆಯ ಹಿರಿಯರು ಯಾವ ಪ್ರಶ್ನೆಯನ್ನೂ ಮಾಡದೆ ವೈಚಾರಿಕವಾಗಿ ಯೋಚಿಸದೆ ಸಾಂಪ್ರದಾಯಿಕ ಜೀವನದ ಆಚಾರಗಳನ್ನೆಲ್ಲ ಒಪ್ಪುತ್ತಿ ದ್ದರು. ಸಂಪ್ರದಾಯಗಳಿಂದ ತಪ್ಪಿ ನಡೆಯಲು ಅವಕಾಶವಿರಲಿಲ್ಲ. ಮನೆಯಲ್ಲಿ ಬಳಕೆಯಲ್ಲಿದ್ದ ನಂಬಿಕೆ ಆಚಾರ ವಿಚಾರಗಳು ನನ್ನ ಮನಸ್ಸಿಗೆ ಆಗಾಗ್ಗೆ ಬೇಸರತರು ತ್ತಿತ್ತು. ಇದು ಹೆಚ್ಚುತ್ತಾ ಹೋಗಿ ನನ್ನ ಮನದಲ್ಲಿ ಪ್ರತಿಭಟನೆಯ ಹೊಸ ಭಾವನೆ ತುಂಬಿಕೊಳ್ಳುತ್ತಾ ಬಂತು. ಎಲ್ಲ ಸಾಂಪ್ರದಾಯಿಕ ಬಂಧನಗಳಿಂದಲೂ ಬಿಡುಗಡೆ ಹೊಂದಿ ಆಧುನಿಕ ಸತ್ಯವನ್ನು ಕಂಡುಕೊಂಡು ನನ್ನ ದಾರಿಯನ್ನು ನಾನೇ ರೂಪಿಸಿ ಕೊಳ್ಳಬೇಕೆಂಬ ನಿಶ್ಚಯಕ್ಕೆ ಬಂದೆ. ಅಷ್ಟೇ ಅಲ್ಲ ಬರಹಗಳಲ್ಲೂ ನನ್ನ ಅಂಕಿತವನ್ನು ‘ಆಜಾದ್’ ಎಂದೇ ಬಳಸಲು ನಿಶ್ಚಯಿಸಿದೆ. ಅನುವಂಶಿಕವಾಗಿ ಬಂದ ನಂಬಿಕೆಗಳು

ಸಂಪ್ರದಾಯುಗಳು ಇನ್ನು ಮುಂದೆ ನನ್ನನ್ನು ಬಂಧಿಸದು ಎಂಬುದಕ್ಕೆ ಇದು ಸೂಚಿಕೆಯೆಂದೇ ನನ್ನ ಅನಿಸಿಕೆ ".

ಈ ನಡುವೆ ಬ್ರಿಟಿಷರ ಸಾಮ್ರಾಜ್ಯಶಾಹಿ ಪ್ರವೃತ್ತಿ ಹಾಗೂ ಅವರ ಆಡಳಿತ ಕ್ರಮ ಆಜಾದರ ಮನಕಲಕಿತು. ನಾಡಿನಲ್ಲಿಯ ಹಿಂದೂ ಮುಸ್ಲಿಮರ ನಡುವೆ ಶಾಶ್ವತವಾದ ಭಿನ್ನತೆಯನ್ನು ಮೂಡಿಸಲು ಬ್ರಿಟಿಷರು ಯತ್ನಿಸುತ್ತಿದ್ದರು. ಈ ಪರಿಸ್ಥಿತಿಯಲ್ಲಿ ಭಾರತದ ಮುಸ್ಲಿಮರು ಎಚ್ಚತ್ತು ರಾಷ್ಟ್ರೀಯ ಭಾವನೆ ಬೆಳೆಸಿಕೊಂಡು ಹಿಂದೂಗಳೊಡನೆ ಬೆರೆತು ನಾಡಿನ ಐಕ್ಯತೆಗೆ ಶ್ರಮಿಸುವುದು ಮುಖ್ಯವಾಗಿತ್ತು. ಇದನ್ನು ಸಾಧಿಸಲು ಪಣತೊಟ್ಟ ಆಜಾದರು 1912 ಜುಲೈ 13 ರಂದು ಅಲ್ ಹಿಲಾಲ್ (ಬಾಲಚಂದ್ರ) ಎಂಬ ಉರ್ದು ವಾರಪತ್ರಿಕೆಯನ್ನು ಹೊರಡಿಸಿದರು. ಅದರಲ್ಲಿ ಕಲಾಂ ಆಜಾದ್ (ಸ್ವತಂತ್ರ ಲೇಖನಿ) ಎಂಬ ಗುಪ್ತನಾಮದಿಂದ ಬರೆಯಲು ತೊಡಗಿದರು. ಉರ್ದು ವೃತ್ತಪತ್ರಿಕೆಯ ಇತಿಹಾಸದಲ್ಲಿ ಅಲ್-ಹಿಲಾಲ್ ಪ್ರಕಟಣೆ ಒಂದು ದೊಡ್ಡ ಘಟ್ಟ. ಅಲ್ಪಕಾಲದಲ್ಲಿಯೇ ಅದಕ್ಕೆ ಅಪಾರ ಜನಪ್ರಿಯತೆ ಲಭಿಸಿತು. ಪತ್ರಿಕೆಯ ಹೊರ ಅಂದಕ್ಕೂ ಉತ್ತಮವಾದ ಅವರ ಅಚ್ಚಿಗೂ ಸಾರ್ವಜನಿಕರು ಆಕರ್ಷಿತರಾಗಲಿಲ್ಲ. ಪತ್ರಿಕೆಯಲ್ಲಿ ವ್ಯಕ್ತಗೊಂಡ ರಾಷ್ಟ್ರೀಯತೆ ಆ ಪತ್ರಿಕೆಯ ಒಂದು ಹೊಸ ಧ್ವನಿಯಾಯಿತು. ಜನಸಾಮಾನ್ಯರಲ್ಲಿ ಪತ್ರಿಕೆ ಒಂದು ಕ್ರಾಂತಿಕಾರಕ ಚುರುಕನ್ನುಂಟು ಮಾಡಿತು. ಅವರ ಬರಹಗಳಲ್ಲಿ ಕಂಡು ಬಂದ ರಾಷ್ಟ್ರಾಭಿಮಾನ ಹಾಗೂ ರಾಷ್ಟ್ರದ ಏಳಿಗೆ ವಿಚಾರದಲ್ಲಿ ಆಜಾದರ ಅಭಿಪ್ರಾಯ ಆಲೋಚನೆಗಳು ಜನಮನವನ್ನು ತೀವ್ರವಾಗಿ ಸೆಳೆದವು. ಪತ್ರಿಕೆಯನ್ನು ಕೇಳುವವರ ಓದುವವರ ಸಂಖ್ಯೆ ಹೆಚ್ಚಾಯಿತು. ಮೊದಲ ಮೂರು ತಿಂಗಳೊಳಗಾಗಿ ಹಳೆಯ ಪ್ರತಿಗಳನ್ನೆಲ್ಲ ಮತ್ತೆ ಮುದ್ರಿಸಬೇಕಾಯಿತು. ಪ್ರತಿಯೊಬ್ಬ ಹೊಸ ಚಂದಾದಾರನು ಮೊದಲಿಂದ ಎಲ್ಲ ಸಂಚಿಕೆಯನ್ನೂ ಕೇಳುತ್ತಿದ್ದನು. ಪ್ರಾರಂಭವಾದ ಆರು ತಿಂಗಳಲ್ಲೇ ಪತ್ರಿಕೆಯ ಪ್ರಸಾರ ಸಂಖ್ಯೆ ಸುಮಾರು ಹತ್ತುಸಾವಿರಕ್ಕೇರಿತು.

ಈ ವೇಳೆಗೆ ಮೊದಲನೆಯ ಮಹಾಯುದ್ಧ (1914) ಪ್ರಾರಂಭವಾಯಿತು. ಭೇದೋಪಾಯದಿಂದ ಭಾರತದ ಹಿಂದೂ ಮುಸ್ಲಿಮರಲ್ಲಿ ವೈಮನಸ್ಯ ಉಂಟುಮಾಡಿ ಅವರಿಬ್ಬರನ್ನೂ ಪ್ರತ್ಯೇಕಿಸದಿದ್ದರೆ ತಮ್ಮ ಅಧಿಕಾರಕ್ಕೆ ಸಾರ್ವಭೌಮತ್ವಕ್ಕೆ ಆಪತ್ತು ಒದಗುವುದು ಎಂಬ ವಿಚಾರವನ್ನು ಅರಿತಿದ್ದ ಬ್ರಿಟಿಷ್ ಸರಕಾರ, ಆಜಾದರ ಚಟುವಟಿಕೆಗಳನ್ನು ಕಂಡು ಗಾಬರಿಗೊಂಡಿತು. ಅಲ್ ಹಿಲಾಲ್ ಪತ್ರಿಕೆಯ ಜನಪ್ರಿಯತೆ ಬ್ರಿಟಿಷ್ ಅಧಿಕಾರಿಗಳಿಗೆ ನುಂಗಲಾರದ ತುತ್ತಾಯಿತು. ಆದುದರಿಂದ ಸರಕಾರ ವೃತ್ತಪತ್ರಿಕೆಗಳ ಶಾಸನದ ಪ್ರಕಾರ 2000 ರೂಪಾಯಿಗಳ ಹೊಣೆ ದ್ರವ್ಯವನ್ನು ಕೇಳಿತು. ಇಷ್ಟೇ ಅಲ್ಲದೆ ಹೊಸದಾಗಿ 10000 ರೂಪಾಯಿ ಠೇವಣಿ ಹಣ ಕೇಳಿತು. ಪರಿಣಾಮವಾಗಿ 1915ರ ವೇಳೆಗೆ ಅಲ್ ಹಿಲಾಲ್ ಪತ್ರಿಕೆ ಪ್ರಕಟಣೆ ನಿಂತುಹೋಯಿತು. ಆದರೆ ಆಜಾದರು ಧೃತಿಗೆಡಲಿಲ್ಲ. ಐದು ತಿಂಗಳ ಅನಂತರ 'ಅಲ್-ಬಲಘ್' ಎಂಬ

ಒಂದು ಹೊಸ ಅಚ್ಚುಕೂಟವನ್ನು ಪ್ರಾರಂಭಿಸಿ ಅದೇ ಹೆಸರಿನ ಒಂದು ಹೊಸ ವಾರ ಪತ್ರಿಕೆಯನ್ನು 1915 ನವೆಂಬರ್ 12 ರಂದು ಹೊರತಂದರು. ವೃತ್ತಪತ್ರಿಕೆಯ ಶಾಸನವನ್ನು ಬಳಸಿ ಆಜಾದರು ಚಟುವಟಿಕೆಗಳನ್ನು ನಿಲ್ಲಿಸಲು ಸಾಧ್ಯವಿಲ್ಲ ವೆಂದು ಸರಕಾರಕ್ಕೆ ಮನದಟ್ಟಾಗಿ, ಭಾರತದ ದಕ್ಷಿಣ ನಿಯಂತ್ರಣಗಳಿಗೆ ಒಳಪಡಿಸಿ 1916 ಏಪ್ರಿಲ್ ತಿಂಗಳಲ್ಲಿ ಕಲ್ಕತ್ತಾದಿಂದ ಆಜಾದರನ್ನು ಹೊರಗೆ ಹಾಕಿದರು. ದೆಹಲಿ, ಉತ್ತರ ಪ್ರದೇಶ, ಪಂಜಾಬ್, ಮುಂಬಯಿ ಸರಕಾರಗಳು ಪ್ರಾದೇಶಿಕ ನಿರ್ಬಂಧ ವಿಧಿಸಿದ್ದರಿಂದ ಆ ಪ್ರಾಂತಗಳನ್ನು ಆಜಾದರು ಪ್ರವೇಶಿಸುವಂತಿರಲಿಲ್ಲ. ಅವರು ಹೋಗಬಹುದಾಗಿದ್ದ ಒಂದೇ ಒಂದು ಸ್ಥಳ ಬಿಹಾರ ರಾಜ್ಯವಾಗಿದ್ದರಿಂದ ರಾಂಚಿಗೆ ಹೋದರು. ರಾಂಚಿಯ ಒಳಮಿತಿಯಲ್ಲೇ ಇರಬೇಕೆಂದೂ ಅವರನ್ನು ನಿರ್ಬಂಧಿಸಿದ್ದ 1919 ಡಿಸೆಂಬರ್ 31ರ ತನಕ ಅಲ್ಲಿಯೇ ಉಳಿದರು. 1920 ಜನವರಿ 1ರಂದು ಇತರ ನಿರ್ಬಂಧಿತರ ಹಾಗೂ ಖೈದಿಗಳ ಜೊತೆಗೆ ಅವರನ್ನೂ ಬಿಡುಗಡೆ ಮಾಡ ಲಾಯಿತು.

ಯುದ್ಧಕಾಲದಲ್ಲಿ ಖಿಲಾಫತ್ ವಿಚಾರದಲ್ಲಿ ಬ್ರಿಟಿಷ್ ಸರಕಾರ ಮುಸ್ಲಿಮರಿಗೆ ಕೊಟ್ಟಿದ್ದ ವಾಗ್ದಾನದಂತೆ ಯುದ್ಧದ ತರುವಾಯ ನಡೆಯಲಿಲ್ಲ. ಇದರಿಂದ ಮುಸ್ಲಿ ಮರೂ ಬ್ರಿಟಿಷರ ವಿರೋಧಿಗಳಾದರು. ಆಜಾದರ ನಡೆನುಡಿಗಳಿಂದ ಪ್ರಭಾವಿತರಾಗಿದ್ದ ಅವರು ಕಾಂಗ್ರೆಸ್ ಪಕ್ಷದೊಡನೆ ಸ್ನೇಹ ಬೆಳೆಸಿದರು. ಈ ಹಿಂದೂ ಮುಸ್ಲಿಮ್ ಮೈತ್ರಿ ದೇಶದಲ್ಲಿ ಏಕತೆಯನ್ನು ಉಂಟುಮಾಡಿ, ಸ್ವಾತಂತ್ರ್ಯಗಳಿಕೆ ಬಹು ದೂರವಿಲ್ಲ ಎಂಬ ಆಶೆಯನ್ನು ಜನರಲ್ಲಿ ಮೂಡಿಸಿತು. ಜೊತೆಗೆ ಗಾಂಧೀಜಿಯವರ ಸತ್ಯಾಗ್ರಹ, ಕರನಿರಾಕರಣೆ ಅಂಶಗಳು ಜನರಲ್ಲಿ ಜಾಗೃತಿಯನ್ನುಂಟು ಮಾಡಿದವು. ಬ್ರಿಟಿಷರ ಮನಸ್ಸಿಲ್ಲದ ಮನಸ್ಸಿನಿಂದ ನೀಡಿದ ರಾಜಕೀಯ ಸುಧಾರಣೆಗಳನ್ನು ಒಪ್ಪಬೇಕೇ ಬೇಡವೇ ಎಂಬ ವಿಚಾರದಲ್ಲಿ ಕಾಂಗ್ರೆಸ್ ಸದಸ್ಯರಲ್ಲೇ ತೀವ್ರ ಭಿನ್ನಾಭಿಪ್ರಾಯ ಉಂಟಾಗಿ ಏಕತೆಗೆ ಭಂಗಉಂಟಾಯಿತು. ಆದರೆ ಆಜಾದರು ಸುಧಾರಣೆಗೆ ವಿರೋಧ ವನ್ನು ವ್ಯಕ್ತಪಡಿಸಿ, ಅಸಹಕಾರ ಚಳವಳಿಯನ್ನು ಮುಂದುವರಿಸಲೇಬೇಕು ಎಂದು ನಾಡಿನ ಜನರಿಗೆ ಕರೆಕೊಟ್ಟರು.

ಜನರನ್ನು ಅಸಹಕಾರ ಚಳವಳಿಗೆ ಸಜ್ಜುಗೊಳಿಸಲು ಹಿರಿಯ ನಾಯಕರು ಪ್ರವಾಸವನ್ನು ಮಾಡತೊಡಗಿದರು. ಗಾಂಧೀಜಿ ನಾಡಿನ ಬಹುಭಾಗ ಸುತ್ತಿದರು. ಆಜಾದರು ಅವರೊಡನೆ ಇದ್ದರು. ಮೊಹಮ್ಮದ್ ಅಲಿ, ಶೌಕತ್ ಅಲಿ ಅನೇಕ ವೇಳೆ ಸಂಗಡಿಗರಾಗಿದ್ದರು. 1920 ಡಿಸೆಂಬರ್ ತಿಂಗಳಲ್ಲಿ ಕಾಂಗ್ರೆಸ್‌ನ ವಾರ್ಷಿಕ ಅಧಿ ವೇಶನ ನಾಗಪುರದಲ್ಲಿ ನಡೆಯಿತು. ಅಷ್ಟು ಹೊತ್ತಿಗೆ ಜನತೆಯ ಮನೋವೃತ್ತಿ ಬದಲಾಗಿತ್ತು. ಲಾಲಾ ಲಜಪತರಾಯ್ ಮೊದಲು ವಿರೋಧಿಸಿದರೂ ಪಂಜಾಬಿನ ಪ್ರತಿನಿಧಿಗಳೆಲ್ಲ ಗಾಂಧೀಜೀಯವರಿಗೆ ಬೆಂಬಲ ಕೊಟ್ಟದ್ದರಿಂದ ತಾವೂ ಸೇರಿಕೊಂಡರು.

ನಾಡಿನ ಪ್ರಮುಖ ನಾಯಕರನ್ನೆಲ್ಲ ಸರ್ಕಾರ ಬಂಧಿಸಿತು. ಬಂಗಾಳದಲ್ಲಿ ಬಂಧಿಸಿದ ನಾಯಕರ ಪೈಕಿ ಆಜಾದರು ಹಾಗೂ ಚಿತ್ತರಂಜನದಾಸ್ ಪ್ರಮುಖರು. ಇವರ ಜೊತೆಗೆ ಸೆರೆಮನೆಯಲ್ಲಿ ಸುಭಾಷ್‌ಚಂದ್ರಬೋಸ್ ಮತ್ತು ಬೀರೇಂದ್ರನಾಥ ಶಸ್ಮಲ್ ಸೇರಿಕೊಂಡರು. ಇವರೆಲ್ಲರನ್ನೂ ಅಲಿಪುರ ಸೆಂಟ್ರಲ್ ಜೈಲಿನ ಯುರೋಪಿಯನ್ ವಿಭಾಗದಲ್ಲಿ ಇಟ್ಟಿದ್ದರು. ಅದು ರಾಜಕೀಯ ಸಂಬಂಧಿ ಮುಖ್ಯ ಚರ್ಚೆಗಳಿಗೆ ಕೇಂದ್ರವಾಗಿ ಪರಿಣಮಿಸಿತು.

ಆಜಾದರ ವಿಚಾರಣೆ ನಿಧಾನವಾಗಿ ನಡೆಯಿತು. ಅವರಿಗೆ ಒಂದು ವರ್ಷ ಕಾರಾಗೃಹವಾಸ ವಿಧಿಸಿದರು. ಚಿತ್ತರಂಜನದಾಸರನ್ನು ಮುಂಚಿತವಾಗಿ ಬಿಡುಗಡೆ ಮಾಡಿದರು. ಬಿಡುಗಡೆಯಾದ ತರುವಾಯ ಅವರು ಗಯೆಯ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷತೆಯನ್ನು ವಹಿಸಿದರು. ಈ ಅಧಿವೇಶನದಲ್ಲಿ ಕಾಂಗ್ರೆಸ್‌ನಾಯಕರ ನಡುವೆ ಭಿನ್ನಾಭಿಪ್ರಾಯಗಳು ಉಂಟಾದವು. ದಾಸ್, ಮೋತಿಲಾಲ್ ನೆಹರು, ಹಕೀಮ್ ಅಜಮಲ್‌ಖಾನ್ ಮುಂತಾದವರು ಸ್ವರಾಜ್ಯಪಕ್ಷವನ್ನು ರಚಿಸಿ, ಸಭಾಪ್ರವೇಶ ಕಾರ್ಯವನ್ನು ಮಂಡಿಸಲು, ಗಾಂಧೀಜಿಯ ನಿಷ್ಠ ಹಿಂಬಾಲಕರ ಪೈಕಿ ಅನೇಕರು ಅದನ್ನು ವಿರೋಧಿಸಿದರು. ಈ ರೀತಿಯಾಗಿ ಬದಲಾವಣೆ ಬೇಕು ಎನ್ನುವವರು ಬೇಡ ಎನ್ನುವವರು ಎಂಬುದಾಗಿ ಕಾಂಗ್ರೆಸ್ ಎರಡಾಗಿ ಒಡೆಯಿತು. ಆಜಾದರು ಸೆರೆಯಿಂದ ಬಂದ ಅನಂತರ ಈ ಎರಡು ಗುಂಪುಗಳ ನಡುವೆ ಐಕ್ಯತೆ ತರಲು ಯತ್ನಿಸಿ ಸಫಲರಾದರು. 1923ರ ಸೆಪ್ಟೆಂಬರ್ ತಿಂಗಳ ಕಾಂಗ್ರೆಸ್ಸಿನ ವಿಶೇಷ ಅಧಿವೇಶನದಲ್ಲಿ ಒಂದು ಒಪ್ಪಂದಕ್ಕೆ ಬರುವುದು ಸಾಧ್ಯವಾಯಿತು. ಆಗ ಅವರಿಗೆ ವಯಸ್ಸು ಮೂವತ್ತೈದು. ಆ ಅಧಿವೇಶನಕ್ಕೆ ಆಜಾದರೇ ಅಧ್ಯಕ್ಷರು. ಕಾಂಗ್ರೆಸ್ ಅಧ್ಯಕ್ಷರಾಗಿ ಆಯ್ಕೆಯಾದವರ ಪೈಕಿ ಆಜಾದರೆ ವಯಸ್ಸಿನಲ್ಲಿ ಅತ್ಯಂತ ಕಿರಿಯ ವ್ಯಕ್ತಿ.

1925ರ ತರುವಾಯ ಕಾಂಗ್ರೆಸ್ಸಿನ ಚಟುವಟಿಕೆಗಳು ಪ್ರಧಾನವಾಗಿ ಸ್ವರಾಜ್ ಪಕ್ಷದ ಕೈಯಲ್ಲೇ ಇದ್ದುವು. ಎಲ್ಲ ಶಾಸನ ಸಭೆಗಳಲ್ಲೂ ಪಕ್ಷಕ್ಕೆ ಬಹುಮತಗಳು ದೊರಕಿತ್ತು. ಪಕ್ಷದ ಹೊರಗುಳಿದ ಕಾಂಗ್ರೆಸ್ಸಿಗರು ಅನೇಕ ಕ್ರಿಯಾತ್ಮಕ ಕಾರ್ಯಕ್ರಮಗಳನ್ನು ನಡೆಸತೊಡಗಿದರು.

1928ರಲ್ಲಿ ಸೈಮನ್ ಆಯೋಗ ಭಾರತಕ್ಕೆ ಭೇಟಿಕೊಟ್ಟಾಗ ರಾಜಕೀಯ ಉದ್ರೇಕ ಹೆಚ್ಚಾಯಿತು. 1929ರಲ್ಲಿ ಕಾಂಗ್ರೆಸ್ ಸ್ವಾಧೀನತೆಯ ನಿರ್ಣಯವನ್ನು ಮಾಡಿತು. ರಾಷ್ಟ್ರದ ಬೇಡಿಕೆಗಳು ಈಡೇರದಿದ್ದರೆ ಸಾಮೂಹಿಕ ಚಳವಳಿ ಮಾಡುವುದಾಗಿಯೂ ಇದಕ್ಕಾಗಿ ಒಂದು ವರ್ಷ ಕಾಲಾವಧಿಯನ್ನು ಸರ್ಕಾರಕ್ಕೆ ಕೊಟ್ಟಿತು. ಬ್ರಿಟಿಷರು ರಾಷ್ಟ್ರದ ಬೇಡಿಕೆಗಳನ್ನು ನಿರಾಕರಿಸಿದರು. 1930ರಲ್ಲಿ ಉಪ್ಪಿನ ಕಾನೂನುಗಳನ್ನು ಮೀರುವುದೆಂದು ಕಾಂಗ್ರೆಸ್ ಪಕ್ಷ ಘೋಷಿಸಿತು. ಉಪ್ಪಿನ ಸತ್ಯಾಗ್ರಹ ಮೊದಲಾದಾಗ ಅನೇಕ ಜನರಿಗೆ ಸಂದೇಹವಿತ್ತು. ಆದರೆ ಚಳವಳಿಯ ಶಕ್ತಿ ಬಲಗೊಂಡಂತೆಲ್ಲ ಸರಕಾರಕ್ಕೂ ಜನತೆಗೂ ಅಚ್ಚರಿಯುಂಟಾಯಿತು. ಸರ್ಕಾರವೂ ಉಗ್ರ

ಕ್ರಮಗಳನ್ನು ಕೈಗೊಂಡಿತು. ಕಾಂಗ್ರೆಸ್ ಪಕ್ಷ ಕಾನೂನಿಗೆ ವಿರುದ್ಧವಾದ ಪಕ್ಷವೆಂದು ಸಾರಿತು. ಕಾಂಗ್ರೆಸ್ ಅಧ್ಯಕ್ಷರನ್ನೂ ಅದರ ಕಾರ್ಯಕಾರಿ ಸಮಿತಿಯನ್ನೂ ಬಂಧಿಸುವ ಆಜ್ಞೆಯನ್ನು ಹೊರಡಿಸಿತು. ಸರ್ಕಾರದ ಕ್ರಮವನ್ನು ಎದುರಿಸಲು ಪ್ರತಿಯೊಬ್ಬ ಕಾಂಗ್ರೆಸ್ ಅಧ್ಯಕ್ಷನೂ ತನ್ನ ತರುವಾಯದ ಅಧ್ಯಕ್ಷನನ್ನು ನಾಮಕರಣ ಮಾಡಬೇಕೆಂದು ಅಧಿಕಾರ ಕೊಡಲಾಯಿತು. ಈ ರೀತಿ ಆಯ್ಕೆಯಾದ ಅಧ್ಯಕ್ಷರಲ್ಲಿ ಆಜಾದರೂ ಒಬ್ಬರು. ಆಜಾದರು ಬಂಧನಕ್ಕೊಳಗಾಗುವ ಮುಂಚೆ ತನ್ನ ತರುವಾಯದ ಅಧ್ಯಕ್ಷರನ್ನಾಗಿ ಡಾ. ಅನ್ಸಾರಿ ಅವರ ಹೆಸರನ್ನು ಸೂಚಿಸಿದರು. ಮೊದಮೊದಲು ಅವರಿಗೆ ಚಳವಳಿಗೆ ಸೇರಲು ಆಸಕ್ತಿಯಿರಲಿಲ್ಲ. ಆದರೆ ಅವರ ಮನಸ್ಸನ್ನು ಆಜಾದರು ಒಲಿಸಿಕೊಂಡದ್ದು ಒಂದು ಪವಾಡ. ಈ ಬಗೆಯಲ್ಲಿ ರಾಷ್ಟ್ರದ ಹಿರಿಯ ನಾಯಕರೊಡನೆ ಆಜಾದರು ಚಳವಳಿಯನ್ನು ಮುಂದುವರಿಸಿದರು. ಇವರ ಕಾರ್ಯಚಟುವಟಿಕೆಗಳನ್ನು ವಿರೋಧಿಸಿ ಸರ್ಕಾರ ಅವರನ್ನು ಮತ್ತೆ ಸೆರೆಮನೆಗೆ ದೂಡಿತು. ಮೀರತ್, ದೆಹಲಿ ಮುಂತಾದೆಡೆಗಳಲ್ಲಿ ಅವರು ಮತ್ತೆ ಮತ್ತೆ ಜೈಲುವಾಸವನ್ನು ಅನುಭವಿಸಿದರು.

ಸರ್ಕಾರಕ್ಕೆ ವಿರುದ್ಧವಾಗಿ ಚಳವಳಿ ನಡೆಸಿದರೆಂದು ಅಪಾದಿಸಿ ಆಜಾದರಿಗೆ ಒಂದು ವರ್ಷ ಸಜ ವಿಧಿಸಿದರು. ನ್ಯಾಯಾಲಯದಲ್ಲಿ ಕೊಟ್ಟ ಹೇಳಿಕೆಯ ಕೊನೆಯಲ್ಲಿ ಆಜಾದರು ದಿಟ್ಟತನದಿಂದ ಹೇಳಿದ ಬಗೆ ಇದು : " ನೀವು ನ್ಯಾಯಮೂರ್ತಿಯಾಗಿಯೇ ಮುಂದುವರಿಯಿರಿ, ನಾನು ಅಪರಾಧಿಯಾಗಿಯೇ ಮತ್ತೆ ಮತ್ತೆ ಮುಂದುವರಿಯುತ್ತೇನೆ. ಅಂತೂ ಈ ನಾಟಕ ಎಂದಾದರೂ ಮುಗಿಯಲೇ ಬೇಕು. ಕೊನೆಗೆ ಭಗವಂತನ ನ್ಯಾಯಾಲಯದಲ್ಲಿ ನಾವು ಸಂಧಿಸುತ್ತೇವೆ. ಕಾಲ ಪುರುಷನೇ ಅಲ್ಲಿ ನ್ಯಾಯಮೂರ್ತಿ. ಅವನು ನೀಡಿದ ತೀರ್ಪನ್ನು ನೀವಾಗಲಿ ನಾನಾಗಲಿ ಉಲ್ಲಂಘಿಸಲು ಸಾಧ್ಯವಿಲ್ಲ."

ಮುಂದಿನ ದಿನಗಳಲ್ಲಿ ಬ್ರಿಟಿಷರು ತಮ್ಮ ಒಡೆದು ಆಳುವ (ಡಿವೈಡ್ ಅಂಡ್ ರೂಲ್) ನೀತಿಗನುಸಾರವಾಗಿ, ಹಿಂದೂ ಮುಸ್ಲಿಮರಲ್ಲಿ ವೈಮನಸ್ಯ ಬೆಳೆಯಲು ಎಲ್ಲ ಬಗೆಯ ಸಹಾಯ ಮಾಡಿದರು ಹಿಂದೂ ಮುಸ್ಲಿಮ್ ಏಕತೆ ಖಂಡಿತ ಸಾಧ್ಯವಿಲ್ಲ. ಹಿಂದೂಗಳು ಮತ್ತು ಮುಸ್ಲಿಮರು ಚಾರಿತ್ರಿಕವಾಗಿ, ಸಾಂಸ್ಕೃತಿಕವಾಗಿ ಬೇರೆ ಬೇರೆಯಾದವರು ಎಂಬ ಭಾವನೆ ಬೆಳೆಯುತ್ತಾ ಹೋಯಿತು. ಕೊನೆಗೆ ಜಿನ್ನಾರವರ ಪಾಕಿಸ್ತಾನ್ ಬೇಡಿಕೆ ಬಲವಾಯಿತು. ವಿಭಜನೆಗೆ ಅವರು ಸಜ್ಜಾದರು. ಆದರೂ ಹಿಂದೂಗಳೂ ಮತ್ತು ದೇಶಪ್ರೇಮವನ್ನು ಉಳಿಸಿಕೊಂಡಿದ್ದ ಮುಸ್ಲಿಮರ ಪೈಕಿ ಅನೇಕರು ಸ್ವಾತಂತ್ರ್ಯಕ್ಕಾಗಿ ಹೋರಾಟವನ್ನು ಮುಂದುವರಿಸಿದರು. ಈ ಹೋರಾಟದಲ್ಲಿ ಅನೇಕರು ದೇಹತ್ಯಾಗ ಮಾಡಿದರು. ಲಕ್ಷಾಂತರ ಮಂದಿ ಅನೇಕ ಬಗೆಯ ತೊಂದರೆಗಳನ್ನು ಅನುಭವಿಸಿದರು. ಆದರೂ ದೇಶದ ಸ್ವಾತಂತ್ರ್ಯಕ್ಕಾಗಿ ನಡೆದ ಹೋರಾಟ ನಿಲ್ಲಲಿಲ್ಲ. ಕೊನೆಗೆ 1947ರಲ್ಲಿ ಹೋರಾಟಗಾರರಿಗೆ ಜಯ ಲಭಿಸಿತು. ಬ್ರಿಟಿಷರಿಂದ ಭಾರತ ಬಿಡುಗಡೆ ಪಡೆಯಿತು. ಈ ಪರ್ವಕಾಲದಲ್ಲಿ

ಆಜಾದರು ದೇಶದ ಸ್ವಾತಂತ್ರ್ಯ ಹಾಗೂ ಏಕತೆಗಳಿಗಾಗಿ ಪ್ರೇಮದಿಂದ ನಿಷ್ಠೆಯಿಂದ ದುಡಿದರು. ತಮ್ಮ ಬಾಳನ್ನೇ ಸವೆಸಿದರು. ರಾಷ್ಟ್ರದ ಬಿಕ್ಕಟ್ಟಿನ ಪರಿಸ್ಥಿತಿಗಳಲ್ಲಿ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿ ನಿಂತು ಪಕ್ಷದ ಕಾರ್ಯಕಲಾಪಗಳನ್ನು ಸಮರ್ಥವಾಗಿ ನಿರ್ವಹಿಸಿದರು. ತಮ್ಮ ವಿರೋಧಿ ಮುಸ್ಲಿಮರ ಅವಹೇಳನ, ಕೋಪ, ಉಪದ್ರವ, ಬೆದರಿಕೆಗಳನ್ನು ಕಡೆಗಣಿಸಿ ದೃಢಮನಸ್ಸಿನಿಂದ ದೇಶಸೇವೆಗೆ ಟೊಂಕಕಟ್ಟಿ ನಿಂತರು.

ದೇಶ ಸ್ವಾತಂತ್ರ್ಯ ಪಡೆದ ತರುವಾಯ ಕೇಂದ್ರ ಸರ್ಕಾರದ ವಿದ್ಯಾಮಂತ್ರಿಯಾದರು. ಶಿಕ್ಷಣದ ಉನ್ನತಿಗಾಗಿ ಅವರು ಬಹುವಾಗಿ ಶ್ರಮಿಸಿದರು. ವಿಶ್ವವಿದ್ಯಾಲಯ ಹಾಗೂ ಸೆಕೆಂಡರಿ ಶಿಕ್ಷಣಗಳಿಗೆ ಸಂಬಂಧಿಸಿದಂತೆ ಅನುಕ್ರಮವಾಗಿ 1948 ಮತ್ತು 1952ರಲ್ಲಿ ಆಯೋಗಗಳನ್ನು ರಚಿಸಿದರು. ವಿಶ್ವವಿದ್ಯಾಲಯ ಧನಸಹಾಯ ಆಯೋಗ ಸ್ಥಾಪನೆಯಲ್ಲಿ ಅವರದು ಮುಖ್ಯ ಪಾತ್ರ. 1947ರಲ್ಲಿ ಶಿಕ್ಷಣದ ವಾರ್ಷಿಕ ಆಯವ್ಯಯ 2 ಕೋಟಿ ರೂಪಾಯಿ ಇತ್ತು. ಇದನ್ನು 1958ರ ಹೊತ್ತಿಗೆ 30 ಕೋಟಿ ರೂಪಾಯಿಗಳವರೆಗೆ ಹೆಚ್ಚಿಸುವಲ್ಲಿ ಆಜಾದರ ಪಾತ್ರ ಹಿರಿದು. ಶಿಕ್ಷಣ ಕ್ರಮದಲ್ಲಿ ಆಧುನಿಕತೆಯನ್ನೂ ವೈಚಾರಿಕ ವೈಜ್ಞಾನಿಕ ಮನೋಭಾವವನ್ನು ಅಳವಡಿಸಿಕೊಳ್ಳಲು ಕರೆಯಿತ್ತರು. ನಾಡಿನ ಮಕ್ಕಳನ್ನು ರೂಪಿಸುವಲ್ಲಿ ಶಿಕ್ಷಕರ ಪಾತ್ರವನ್ನು ಕುರಿತು ಅವರು ಒತ್ತಿ ಹೇಳುತ್ತಿದ್ದರು. ನೆಹರೂ ಅವರು ತಮ್ಮ ಆತ್ಮಚರಿತ್ರೆಯಲ್ಲಿ ಒಂದೆಡೆ ಹೀಗೆ ಬರೆದಿದ್ದಾರೆ: “ಆಜಾದರ ಪಾಂಡಿತ್ಯ ಅನೇಕ ವೇಳೆ ನಮ್ಮನ್ನು ಭಾವಪರವಶರನ್ನಾಗಿಸುತ್ತಿತ್ತು”.

ನಾಡಿನ ಸ್ವಾತಂತ್ರ್ಯಕ್ಕಾಗಿ, ಹಿಂದೂ ಮುಸ್ಲಿಮರ ಏಕತೆಗಾಗಿ, ಆಧುನಿಕ ಶಿಕ್ಷಣ ಪದ್ಧತಿಗಾಗಿ ತಮ್ಮ ಬದುಕನ್ನೇ ಮುಡಿಪಿಟ್ಟ ಆಜಾದರು ಅನಾರೋಗ್ಯದಿಂದ 1958 ಫೆಬ್ರವರಿ 22ರಂದು ನವದೆಹಲಿಯಲ್ಲಿ ನಿಧನರಾದರು. “ಪ್ರಪಂಚ ಅಲ್ಲಾನದು, ಅದು ಯಾರ ಸ್ವತ್ತೂ ಅಲ್ಲ. ಅದೊಂದು ದಿವ್ಯ ಸಂಗಮ. ಇಲ್ಲಿ ಅಹಂಕಾರ ಸಲ್ಲ, ಹಿಂಸೆ ಹೊಲ್ಲ ಇದು ಆಜಾದರ ಅಂತಿಮ ನುಡಿ.

* ದಿನಾಂಕ 11. 11. 85ರಂದು ಮೈಸೂರು ಆಕಾಶವಾಣಿಯಿಂದ ಪ್ರಸಾರಗೊಂಡ ಕಾರ್ಯಕ್ರಮ.

ಪೆಥಿಕ್–ಲಾರೆನ್ಸ್ ನಿಯೋಗದ ಪ್ರಯತ್ನ ವಿಫಲಗೊಂಡ ಮೇಲೆ ಭಾರತದಲ್ಲಿ ಭೀಕರ ಹಿಂದೂ ಮುಸ್ಲಿಮ್ ಹಿಂಸಾಚಾರ ಸಂಭವಿಸಿತು. ಪರಸ್ಪರ ಸೇಡು ತೀರಿಸಿ ಕೊಳ್ಳುವ ಪ್ರವೃತ್ತಿ ಬೆಳೆಯಿತು. ಆಗಸ್ಟ 16ರಂದು ನೇರ ಕಾರ್ಯಾಚರಣೆ ನಡೆಸುವುದಾಗಿ ಜಿನ್ನಾ ಘೋಷಿಸಿದರು. ಕಲ್ಕತ್ತದಲ್ಲಿ ಕೊಲೆಗಳು ಸಂಭವಿಸಿದುವು. ಇಲ್ಲಿ ಹಿಂದುಗಳು ಹೆಚ್ಚಿನ ಸಂಖ್ಯೆಯಲ್ಲಿ ಸತ್ತರು. ಇದಕ್ಕೆ ಪ್ರತೀಕಾರವಾಗಿ ಬಿಹಾರ ದಲ್ಲಿ ಮುಸ್ಲಿಮ್ ಅಲ್ಪಸಂಖ್ಯಾತರ ಕೊಲೆಯಾಯಿತು. ಪೂರ್ವಬಂಗಾಲ, ಸಂಯುಕ್ತ ಪ್ರಾಂತ್ಯಗಳಿಗೂ ಗಲಭೆ ಹಬ್ಬಿತು.

ಈ ಘಟನೆಗಳಿಂದ ಕಾಂಗ್ರೆಸ್ ಗಂಭೀರವಾಯಿತು. ಸೆಪ್ಟಂಬರಿನಲ್ಲಿ ಅಧಿಕಾರ ಸ್ವೀಕರಿಸಿತು. ಮುಸ್ಲಿಮ್‌ಲೀಗೂ ಕೇಂದ್ರ ಸರ್ಕಾರವನ್ನು ಸೇರಿತು. ಆದರೆ ಅದರ ಪ್ರವೇಶ ಸಹಕಾರೋದ್ದೇಶದಿಂದ ಅಲ್ಲ, ಅಡ್ಡಿಪಡಿಸುವ ಸಲುವಾಗಿ, ಪಂಜಾಬಿನಲ್ಲಿ ಕೋಮುವಾರು ಗಲಭೆಗಳು ಉಲ್ಬಣಿಸಿದವು. ಭಾರತದ ವಿಭಜನೆ ಅನಿವಾರ್ಯವೆಂದು ಕಾಂಗ್ರೆಸಿಗೆ ಮನವರಿಕೆಯಾಯಿತು. ನೂತನ ವೈಸ್‌ರಾಯಿಯಾಗಿ ಬಂದ ಮೌಂಟ್ ಬ್ಯಾಟನ್ 1947 ಆಗಸ್ಟ್ 14ರಂದು ಭಾರತಕ್ಕೆ ಸ್ವಾತಂತ್ರ್ಯ ನೀಡುವುದಾಗಿ ಘೋಷಿಸಿದರು.

ಗಡಿ ಆಯೋಗದ ನಿರ್ಣಯದಂತೆ ಭಾರತ ಪಾಕಿಸ್ತಾನಗಳ ಸೀಮಾನಿರ್ಧರಣೆ ಆಯಿತು. ಬಂಗಾಲ, ಪಂಜಾಬ್ ಪ್ರಾಂತ್ಯಗಳನ್ನು ಒಡೆಯಲಾಯಿತು ಪೂರ್ವ ಬಂಗಾಲವೂ ಪಶ್ಚಿಮ ಪಂಜಾಬು ಪಾಕಿಸ್ತಾನಕ್ಕೆ ಸೇರಿದುವು. ಆಗಸ್ಟ್ 14ರ ಮಧ್ಯರಾತ್ರಿಯಾದೊಡನೆ ವಿಭಜಿತ ಭಾರತ ಸ್ವತಂತ್ರವಾಯಿತು. ಮೌಂಟ್‌ಬ್ಯಾಟನ್ ಸ್ವತಂತ್ರ ಭಾರತದ ಪ್ರಥಮ ಗವರ್ನರ್ ಜನರಲ್ ಆಗಿ ನೇಮಕಗೊಂಡರು. ಜವಾಹರ್‌ಲಾಲ್ ನೆಹರೂ ಪ್ರಧಾನಮಂತ್ರಿ. ಕೇಂದ್ರದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂತು.

—ಕನ್ನಡ ವಿಶ್ವಕೋಶ ಸಂ. 12 ಪು. 601

ಸಿ.ಪಿ. ರಾಮಶೇಷ್

ವಿಶ್ವವಿದ್ಯಾನಿಲಯಗಳಲ್ಲಿ ಗ್ರಂಥಾಲಯದ ಪಾತ್ರ

ಆಧುನಿಕ ವಿಶ್ವವಿದ್ಯಾನಿಲಯಗಳು ಮುಖ್ಯವಾಗಿ ಗಮನಿಸಬೇಕಾದ ಕಾರ್ಯಗಳು ಜ್ಞಾನ ಸಂಪಾದನೆ, ವಿವರಣೆ, ಹೊಸ ಅನುಭವಗಳನ್ನೊಳಗೊಂಡ ಜ್ಞಾನೋತ್ಪತ್ತಿ ಹಾಗೂ ಸಮಾಜದ ಜನರೊಡನೆ ಜ್ಞಾನವನ್ನು ಹಂಚಿಕೊಂಡು ಕಾರ್ಯಾಚರಣೆಗೆ ತರುವುದು. ಸಾಮಾನ್ಯವಾಗಿ ವಿಶ್ವವಿದ್ಯಾನಿಲಯದ ಮಟ್ಟವನ್ನು ನಿರ್ಧರಿಸುವುದು ಶಿಕ್ಷಣ ಮತ್ತು ಸಂಶೋಧನೆಗೆ ಒದಗಿಸಿರುವ ಸೌಲಭ್ಯ, ವಿದ್ವಾಂಸರ ಯಶಸ್ಸು ಮತ್ತು ಸತ್ಕೀರ್ತಿ, ಜ್ಞಾನೋತ್ಪತ್ತಿಗೆ ಕೊಡುಗೆ ಮತ್ತು ಸಮಾಜದ ಉನ್ನತಿಗಾಗಿ ಬೆಳೆಸಿರುವ ನಿಕಟ ಸಂಬಂಧ ಇವೇ ಮುಂತಾದುವು.

ಈ ರೀತಿಯ ಗುರಿಯನ್ನೊಳಗೊಂಡ ಒಂದು ವಿಶ್ವವಿದ್ಯಾನಿಲಯ ತನ್ನ ಪ್ರಗತಿ ಮಾರ್ಗದಲ್ಲಿ ಹಲವು ರೀತಿಯ ಚಟುವಟಿಕೆಗಳನ್ನು ಕೈಗೊಂಡಿರುತ್ತದೆ. ಅವುಗಳಲ್ಲಿ ಮುಖ್ಯವಾಗಿ

ಜ್ಞಾನ ಸಂಪಾದನೆ
ಜ್ಞಾನಾರ್ಥ ವಿವರಣೆ
ಬೋಧನೆ, ಸಂಶೋಧನೆ ಮತ್ತು
ವ್ಯಾಸಂಗ ವಿಸ್ತರಣೆ.

ಹೀಗೆ ಮೇಲ್ಕಂಡ ಚಟುವಟಿಕೆಗಳನ್ನು ಉತ್ತಮ ಮಟ್ಟದಲ್ಲಿ ಕಾರ್ಯರೂಪಕ್ಕೆ ತರಲು ವಿಶ್ವವಿದ್ಯಾನಿಲಯ ಒಂದು ವ್ಯವಸ್ಥಿತ ಸಮುದಾಯದ (System) ರೀತಿಯಲ್ಲಿ ಕಾರ್ಯಚರಣೆಗೆ ತೊಡಗುತ್ತದೆ; ಅಂದರೆ ಮನುಷ್ಯನ ಶರೀರವು ಉತ್ತಮ ಸ್ಥಿತಿ ಅಥವ ಆರೋಗ್ಯವಾಗಿರಲು ರಕ್ತಮಂಡಲ, ನರಮಂಡಲ, ಜೀರ್ಣಾಂಗವ್ಯೂಹ ಮುಂತಾದವು ವ್ಯವಸ್ಥಿತ ರೀತಿಯಲ್ಲಿ ಒಂದುಗೂಡಿ ಹೇಗೆ ಒಂದನ್ನೊಂದು ಅವಲಂಬಿಸಿ ಕಾರ್ಯ ನಿರ್ವಹಿಸುತ್ತವೋ, ಹಾಗೆ ವಿಶ್ವವಿದ್ಯಾನಿಲಯದ ಎಲ್ಲಾ ವಿಭಾಗಗಳು (ಆಡಳಿತ, ದ್ರವ್ಯ, ಗ್ರಂಥಾಲಯ ಮುಂತಾದುವುಗಳು) ಒಟ್ಟುಗೂಡಿ ಕೈಕೊಂಡ ಧ್ಯೇಯವನ್ನು ಕಾರ್ಯರೂಪಕ್ಕೆ ತರುವುವು. ಆದುದರಿಂದ ಒಂದನ್ನೊಂದು ಅವಲಂಬಿಸಿರುವ ಈ ಸಣ್ಣ

ವ್ಯವಸ್ಥಿತ ಸಮುದಾಯಗಳ ಹೊಂದಾಣಿಕೆಯೋ ಕೈಗೊಂಡ ಧ್ಯೇಯ ಮತ್ತು ವಾಸ್ತವಿಕ ಸಂಗತಿಗಳನ್ನು (Objectives) ಕಾರ್ಯರೂಪಕ್ಕೆ ತರಲು ಸಹಾಯಕವಾಗುವುವು. ಈಗ ನಾವು ಗ್ರಂಥಾಲಯ ವಿಭಾಗವು ಹೇಗೆ ವಿಶ್ವವಿದ್ಯಾನಿಲಯದ ವಾಸ್ತವಿಕ ಸಂಗತಿಗಳನ್ನು ಕಾರ್ಯರೂಪಕ್ಕೆ ತರಲು ಸಹಾಯಕವಾಗುವುದೆಂದು ಗಮನಿಸೋಣ.

ವಿಶ್ವವಿದ್ಯಾನಿಲಯ ಧ್ಯೇಯಗಳ ದೃಷ್ಟಿಯಿಂದ ಗ್ರಂಥಾಲಯದ ಚಟುವಟಿಕೆಗಳು ಮುಖ್ಯವಾಗಿ—

ಶಿಕ್ಷಣ
ವಿಷಯ ಪ್ರಸಾರ
ಸಂಶೋಧನೆ ಮತ್ತು
ಮನೋರಂಜನೆ (ಸಾಮಾಜಿಕ ಮತ್ತು ಸಾಂಸ್ಕೃತಿಕ)

ಶಿಕ್ಷಣ

ಅನಿರ್ಬಂಧ ಸ್ವಶಿಕ್ಷಣ : (Informal self education) ಗ್ರಂಥಾಲಯವು ಮುಖ್ಯವಾಗಿ ಶಾಲಾಕಾಲೇಜುಗಳಿಗೆ ಹೋಗಲಾರದ ಜನಸಾಮಾನ್ಯರಿಗೆ ಒಂದು ಶಿಕ್ಷಣ ಕೇಂದ್ರದಂತೆ. ಇಲ್ಲಿ ಅವರ ಜ್ಞಾನ ಅಭಿವೃದ್ಧಿಗೆ ಬೇಕಾದ ಎಲ್ಲಾ ವಸ್ತುಗಳು ಸಂಗ್ರಹಿಸಲಾಗಿರುತ್ತದೆ. ಮುಖ್ಯವಾಗಿ ಉತ್ಸಾಹಭರಿತರಾದ ಗ್ರಂಥಪಾಲಕ ವೃಂದವು ಓದುಗರಿಗೆ ವಿಷಯ ಅಥವ ಜ್ಞಾನವನ್ನು ಹೇಗೆ ಗ್ರಂಥಾಲಯದಲ್ಲಿ ಶೀಘ್ರವಾಗಿ ಶ್ರಮವಿಲ್ಲದೆ ಪಡೆಯಬೇಕೆಂಬುದನ್ನು ಕಲಿಸುವರು. ಓದುಗರೊಡನೆ ಪ್ರೀತಿ ವಾತ್ಸಲ್ಯದಿಂದ ಮಾತನಾಡಿ ಅವರ ಇಚ್ಛೆಯನ್ನು ತಿಳಿದು, ಅವರವರ ಮಟ್ಟ ಮತ್ತು ಸಂದರ್ಭಕ್ಕೆ ತಕ್ಕಂತೆ ಗ್ರಂಥಗಳನ್ನು ಒದಗಿಸಲಾಗುವುದು. ಹಾಗೆಯೇ, ಇಷ್ಟಕ್ಕೇ ನಿಲ್ಲದೆ ಆತನ ಅಗತ್ಯಗಳನ್ನು ಪೂರೈಸುವರು. ಜ್ಞಾನದ ಅರಿವಾಗಿದೆಯೆ ಎಂದು ಅರಿತು ಸಹಾಯಮಾಡುವರು. ಹೀಗೆ ಸಮಾಜದ ಅನಕ್ಷರಸ್ಥರಿಗೋಸ್ಕರ ಚಲನಚಿತ್ರ ಹಾಗೂ ಶಬ್ದಗ್ರಾಹಕ ಸಲಕರಣೆಗಳಿಂದ ಜ್ಞಾನಪ್ರಸಾರ ಮತ್ತು ಶಿಕ್ಷಣ ಕಾರ್ಯದಲ್ಲಿ ತೊಡಗುತ್ತಾರೆ. ಆದುದರಿಂದ ಗ್ರಂಥಪಾಲಕರು ಸಮಾಜದ ದೃಷ್ಟಿಯಿಂದ ಜನಸಾಮಾನ್ಯರಿಗೆ ಶಿಕ್ಷಕರಾಗಿರುವರು.

ಓದುಗರ **ಮಾರ್ಗದರ್ಶನ :** ತರಗತಿಯ ಉಪನ್ಯಾಸಗಳು, ಅಂಚೆ ಮತ್ತು ತೆರಪಿನ ಪ್ರಶ್ನೋತ್ತರ ಪತ್ರಿಕೆಗಳು ಮತ್ತು ಪಠ್ಯಪುಸ್ತಕಗಳ ಕೇಂದ್ರೀಕೃತ ಶಿಕ್ಷಣ ಒಂದು ಸೀಮಿತ ಜ್ಞಾನವನ್ನು ಕೊಡುತ್ತವೆ. ಇವು ಕೇವಲ ಮುಂದಿನ ಜ್ಞಾನಾಭಿವೃದ್ಧಿಗೆ ಮಾರ್ಗದರ್ಶನ. ಹೆಚ್ಚಿನ ಜ್ಞಾನ ಪಡೆಯಲಿಚ್ಛಿಸುವವರು ಗ್ರಂಥಾಲಯವನ್ನು ಆಶ್ರಯಿಸಬೇಕಾಗುತ್ತದೆ. ಇಂತಹ ಸನ್ನಿವೇಶದಲ್ಲಿ ಗ್ರಂಥಾಲಯದ ಮಾರ್ಗದರ್ಶನಕಾರರು ವಿದ್ಯಾರ್ಥಿಗಳಿಗೆ ಸಹಾಯಕರಾಗುವರು. ವಿಚಾರ

ಗೋಷ್ಠಿ, ಪ್ರಬಂಧ ಬರಹಗಳಿಗೆ ಬೇಕಾಗುವಂತಹ ಪರಾಮರ್ಶನ ಗ್ರಂಥಗಳು, ನಿಯತಕಾಲಿಕೆಗಳು, ಲೇಖನಗಳ ಪಟ್ಟಿ, ಗ್ರಂಥಸೂಚಿ ಮುಂತಾದ ಅತ್ಯಾವಶ್ಯಕ ವಸ್ತುಗಳನ್ನು ಒದಗಿಸಿ ಸಹಾಯ ಮಾಡುವರು. ಹೀಗೆ ಉತ್ತೇಜಕ ಮಾತು ಹಾಗೂ ಗ್ರಂಥಗಳನ್ನು ಉಪಯೋಗಿಸಿಕೊಂಡು ಓದುವ ವಾಡಿಕೆಯನ್ನು ವಿದ್ಯಾರ್ಥಿಗಳಲ್ಲಿ ಬಿತ್ತುವರು.

ಪರಾಮರ್ಶನ ಸೇವೆ : ಪರಾಮರ್ಶನ ಅಧಿಕಾರಿಯು ಓದುಗರಿಗೆ ಬೇಕಾದ ವಿಷಯವನ್ನು ಒದಗಿಸುವುದು ಒಂದು ಮುಖ್ಯಸೇವೆ. ಈತನಿಗಿರುವ ಮುಖ್ಯ ಅರ್ಹತೆಗಳು : ಗ್ರಂಥಜ್ಞಾನ ಹಾಗೂ ವಿಶಿಷ್ಟ, ಸಂಪೂರ್ಣ ಮತ್ತು ತ್ವರಿತ ಪೂರ್ಣವಾಗಿ ಓದುಗರಿಗೆ ತಕ್ಕ ವಿಷಯವನ್ನು ಒದಗಿಸುವುದು. ಅಧ್ಯಾಪಕ ವರ್ಗದವರಿಗೆ ನವ್ಯ ಪ್ರಕಾಶನ, ಗ್ರಂಥಸೂಚಿ ಪರಾಮರ್ಶನ ಗ್ರಂಥಗಳಿಂದ ವಿಷಯ ಮುಂತಾದವುಗಳನ್ನು ಒದಗಿಸುವುದರ ಮೂಲಕ ಉಪನ್ಯಾಸ ಮುಂತಾದುವುಗಳಿಗೆ ಉತ್ತೇಜಕನಾಗುವನು. ಪಠ್ಯ ವಿಷಯವನ್ನು (Syllabus) ಅನುಸರಿಸಿ, ಅದಕ್ಕೆ ಸಂಬಂಧಪಟ್ಟ ಗ್ರಂಥಗಳು ಹಾಗೂ ವಿಷಯ ಪ್ರಸಾರಕ್ಕೆ ಬೇಕಾದ ಸಿದ್ಧತೆಗಳನ್ನು ಮಾಡುವುದು.

ಗ್ರಂಥವಿಮರ್ಶನಾ ಕಾರ್ಯಕ್ರಮಗಳು : ಪ್ರಸ್ತುತ ವಿಷಯವಾಗಿ ಕುರಿತ ಪುಸ್ತಕಗಳ ಬಗ್ಗೆ ಹಾಗೂ ವಿದ್ಯಾರ್ಥಿಗಳ ದೃಷ್ಟಿಯಿಂದ ಪಠ್ಯಪುಸ್ತಕಗಳ ವಿಷಯವಾಗಿ ವಿಮರ್ಶಾತ್ಮಕ ಉಪನ್ಯಾಸಗಳನ್ನು ಗ್ರಂಥಾಲಯದಲ್ಲಿ ಅಥವ ಓದುಗರಿಗೆ ಉಪಯೋಗವಿದ್ದಂತಹ ಸ್ಥಳಗಳಲ್ಲಿ ಏರ್ಪಡಿಸುವುದು ಒಂದು ವಿಶೇಷ ಸಂಗತಿ. ಈ ದೃಷ್ಟಿಯಿಂದ ಗಂಥಪಾಲಕನು ಸಂಬಂಧಪಟ್ಟ ಶಿಕ್ಷಕರೊಡನೆ ಕೂಡಿ ವಿದ್ವಾಂಸರನ್ನು ಬರಮಾಡಿ ಇಂತಹ ಕಾರ್ಯಕ್ರಮವನ್ನು ಏರ್ಪಡಿಸುವುದು, ಒಂದು ಗ್ರಂಥಾಲಯದ ಮುಖ್ಯ ವಿಸ್ತರಣಾ ಚಟುವಟಿಕೆ. ಇದರಿಂದಾಗಿ ವಿದ್ಯಾರ್ಥಿಗಳಿಗೆ ಹೆಚ್ಚಿನ ವಿಷಯ ತಿಳಿಸಲು ಒಂದು ಅವಕಾಶ ಕಲ್ಪಿಸಿದ ಹಾಗಾಗುವುದು.

ಲೇಖಕರ ಸಂದರ್ಶನಾ ಕಾರ್ಯಕ್ರಮ : ಮೇಲಿನ ಕಾರ್ಯಕ್ರಮದ ಹಾಗೆಯೇ ಇದು ಕೂಡ ಮುಖ್ಯವಾದ ವಿಸ್ತರಣಾ ಕಾರ್ಯಕ್ರಮಗಳಲ್ಲಿ ಒಂದು. ಮೇಲಿನ ಕಾರ್ಯಕ್ರಮದಲ್ಲಿ ವಿಷಯವನ್ನು ಅರಿತ ವಿದ್ವಾಂಸರನ್ನು ವಿಮರ್ಶೆಗಾಗಿ ಕರೆಯಲಾಗಿರುತ್ತದೆ. ಆದರೆ ಇಲ್ಲಿ ಆಯಾ ಲೇಖಕರಿಂದಲೇ ಗ್ರಂಥದ ವಿಷಯವಾಗಿ ಸಂಶಯಗಳು, ಅರ್ಥವಾಗದ ಸಂಗತಿಗಳು, ಕೆಲವು ಬಿಕ್ಕಟ್ಟಿನ ಪ್ರಸಂಗಗಳು ಮುಂತಾದವುಗಳನ್ನು ಗ್ರಂಥ ಕರ್ತೃಗಳಿಂದಲೇ ತಿಳಿಯುವಂತಹ ಒಂದು ಅವಕಾಶ ಕಲ್ಪಿಸಿದಂತಾಗುವುದು. ಈ ಕಾರ್ಯಕ್ರಮ ಪಠ್ಯಪುಸ್ತಕಕ್ಕೆಂದೇ ಸೀಮಿತವಾಗಬೇಕಿಲ್ಲ. ಯಾವ ಪ್ರಸ್ತುತ ಪ್ರಚಲಿತ ವಿಷಯವಾದರೂ ಆಗಬಹುದು ಮತ್ತು ಕೇಳುವವರಿಗೆ ಹೆಚ್ಚಿನ ಆಸಕ್ತಿ ಇರಬೇಕು ಮತ್ತು ಉಪಯೋಗವಿರುವಂತದ್ದಾಗಿರಬೇಕು.

ವಿಷಯ ಪ್ರಸಾರ

ಸಮ್ಮೇಳನ ಹಾಗೂ ತರಬೇತಿ ಶಿಬಿರ: ಗ್ರಂಥಪಾಲಕರು ಶಿಕ್ಷಕ ವರ್ಗದವರೊಡಗೂಡಿ ಪುಸ್ತುತ ವಿಷಯದ ಬಗ್ಗೆ ಚರ್ಚಾಗೋಷ್ಠಿ, ಸಮ್ಮೇಳನಾ ಸಭೆ, ತರಬೇತಿ ಶಿಬಿರ ಮುಂತಾದವುಗಳನ್ನು ಏರ್ಪಡಿಸಿ ಜ್ಞಾನವನ್ನು ವಿದ್ಯಾರ್ಥಿಗಳಿಗೆ ಹಾಗೂ ಸಮಾಜದ ಜನ ಸಾಮಾನ್ಯರಿಗೆ ಉಪಯೋಗವಾಗುವಂತೆ ಏರ್ಪಡಿಸುವರು. ತರಬೇತಿ ಶಿಬಿರಗಳನ್ನು ಉದಾಹರಣೆಗೆ ಸೂಚಿಸುವುದಾದರೆ ಕೃಷಿ, ಕೈಗಾರಿಕೆ ಮುಂತಾದ ಜ್ಞಾನಗಳನ್ನೊಳಗೊಂಡ ವಿಷಯವಾಗಿ ಏರ್ಪಡಿಸತಕ್ಕದ್ದು. ಇದನ್ನು ಗ್ರಂಥಾಲಯದಲ್ಲಿ ಅಥವ ವಿಶ್ವವಿದ್ಯಾನಿಲಯವಿರುವ ಕಡೆಯಲ್ಲೇ ಇರಬೇಕೆಂದಿಲ್ಲ. ವಿಶ್ವವಿದ್ಯಾನಿಲಯವು ಪ್ರಜೆಗಳಿರುವ ಕಡೆಗಳಲ್ಲಿ ಚಲಿಸುತ್ತಿರಬೇಕು. ಅಂದರೆ ವಿದ್ವಾಂಸರು, ಶಿಕ್ಷಕ ವರ್ಗದವರು ಹಳ್ಳಿಹಳ್ಳಿಗಳಿಗೆ ಹೋಗಿ ಶಿಬಿರವನ್ನು ಏರ್ಪಡಿಸಿ ವಿಷಯವನ್ನು ಸಾಮಾನ್ಯ ಜನರಿಗೆ ತಿಳಿಯುವಂತೆ ಚಟುವಟಿಕೆಗಳಿಗೆ ಕೈಹಾಕಬೇಕು. ಸಾಮಾನ್ಯರಿಗೆ ಅರ್ಥವಾಗುವಂತೆ ಪುಸ್ತಕಗಳನ್ನು ಭಾಷಾಂತರಿಸಿ ವಿಷಯವನ್ನು ಅರಿವು ಮಾಡಿಕೊಡಬೇಕು. ಅಲ್ಲಿಗೆ ವಿಶ್ವವಿದ್ಯಾನಿಲಯ ಇರುವುದು ಸಾರ್ಥಕವೆನಿಸುವುದು. ಇಂತಹ ಚಟುವಟಿಕೆಗಳಲ್ಲಿ ವಿಷಯ ಪ್ರಸಾರವಾಗುವುದು ಬಹು ಮುಖ್ಯ. ಉದಾಹರಣೆಗೆ, ಚರ್ಚಾಗೋಷ್ಠಿಯಲ್ಲಿ ಹಲವಾರು ವಿಭಾಗದ ವಿದ್ಯಾರ್ಥಿಗಳು ಸೇರುವುದರಿಂದ ತಮ್ಮ ತಮ್ಮ ಹಿನ್ನಲೆಗೆ ತಕ್ಕಂತೆ, ಅವರು ಪ್ರಶ್ನೋತ್ತರಗಳನ್ನು ಸೂಚಿಸುವುದರಿಂದ ಇದು ಜ್ಞಾನಾಭಿವೃದ್ಧಿಯ ಒಂದು ಮುಖ್ಯ ಚಟುವಟಿಕೆ ಎನಿಸುತ್ತದೆ.

ವಾಚಕ ವೃಂದ: ವಾಚಕ ವೃಂದವೆಂದರೆ ಸಮಾಜದ ಕೆಲವು ಪ್ರಮುಖ ಕೇಂದ್ರಗಳಲ್ಲಿ ಓದುವ ಒಂದು ಅವಕಾಶ ದೊರಕಿಸಿ ಕೊಟ್ಟ ಸ್ಥಳ. ಇದು ಸಮಾಜದ ಸಾಮಾನ್ಯ ಜನರಿಗೆ ಹಾಗು ವಿದ್ಯಾವಂತರಿಗೆ ದಿನವಾರ್ತೆ, ಇತರ ಸಾಮಾನ್ಯ ಜ್ಞಾನ ದೊರಕುವ ಸ್ಥಳ. ಆದುದರಿಂದ ವಿಶ್ವವಿದ್ಯಾನಿಲಯವೇ ಆಗಲಿ ಅಥವ ಸರಕಾರವೇ ಆಗಲಿ ಇಂತಹ ಸಮಾಜದ ಕೆಲವು ಕೇಂದ್ರ ಸ್ಥಳಗಳಲ್ಲಿ ವೃತ್ತ ಪತ್ರಿಕೆ, ನಿಯತಕಾಲಿಕ ಮುಂತಾದವುಗಳನ್ನು ಒದಗಿಸಿ ಜ್ಞಾನಶೀಲರನ್ನಾಗಿ ಮಾಡಬೇಕು. ಇಂತಹ ಓದುಗರ ವೃತ್ತ ಅಥವ ವಾಚಕ ವೃಂದದಲ್ಲಿ ಹಲವಾರು ಜನರು ಬೇರೆ ಬೇರೆ ಸಂಸ್ಕೃತಿ, ವೃತ್ತಿ, ವಿದ್ಯಾಮಟ್ಟದವರು ಬಂದು ಸೇರುವುದರಿಂದ ಜ್ಞಾನ ವಿನಿಮಯಕ್ಕೆ ಒಂದು ಒಳ್ಳೆಯ ಪರಿಸರ.

ಸಮೂಹ ಮಾಧ್ಯಮದ ಬಳಕೆ: (Mass Media) ನಿತ್ಯವಾರ್ತೆಗಳು, ಕಾರ್ಯಕ್ರಮಗಳು ಪ್ರಸ್ತುತ ಪ್ರವೃತ್ತಿ ಮತ್ತು ಅಭಿವೃದ್ಧಿ ಮುಂತಾದವುಗಳು ಆದಷ್ಟು ಶೀಘ್ರವಾಗಿ ಜನರಿಗೆ ತಿಳಿಯುವಂತೆ ಗ್ರಂಥಾಲಯದಲ್ಲಿ ಏರ್ಪಾಡು ಮಾಡಬೇಕು. ಇದರಿಂದಾಗಿ ವಿಷಯವು ಸಮಾಜದ ಜನರಿಗೆ ಕೂಡಲೆ ತಲುಪುವುದು. ಇಲ್ಲಿ ಬಳಸಲಾಗುವ ಮಾಧ್ಯಮಗಳು ರೇಡಿಯೋ, ಟೆಲಿವಿಷನ್, ಚಲನಚಿತ್ರ, ಪ್ರಕಟನಾ

ಪತ್ರ ಇತ್ಯಾದಿಗಳು ಇದರಿಂದಾಗಿ ಸಮಾಜದ ಜನಸಾಮಾನ್ಯರಿಗೂ ವಿಷಯ ತಲಪಲು ಸಹಾಯಕವಾಗುವುದು. ಗ್ರಂಥಾಲಯದ ಮುಖ್ಯ ಕಾರ್ಯಕ್ರಮಗಳು, ಸಾಮಾಜಿಕ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳು, ನವ್ಯ ಪ್ರಕಾಶನಗಳು, ನಡೆಯಲಿರುವ ಉಪನ್ಯಾಸ, ಸಮಾರಂಭ ಸಭೆ, ಇತರ ಚಟುವಟಿಕೆಗಳು ಇತ್ಯಾದಿಗಳನ್ನು ಈ ಸಮೂಹ ಮಾಧ್ಯಮದ ಬಳಕೆಯಿಂದ ಪ್ರಸಾರ ಮಾಡಬಹುದು. ವಿಷಯವನ್ನು ಶಕ್ತಿಯೆಂದೂ, ಜ್ಞಾನವನ್ನು ಆಸ್ತಿಯೆಂದೂ ಕರೆಯಬಹುದು. ಸಾಮಾನ್ಯ ಪ್ರಜೆಗೂ ಬೇಕು ವಿಷಯಗಳು; ಇವರ ದಿನಚರಿ ಹಾಗೂ ಕೆಲವು ಮುಖ್ಯಹೆಜ್ಜೆಗಳು ವಿಷಯವನ್ನರಿತ ಮೇಲೆಯೇ ತೀರ್ಮಾನಕ್ಕೆ ಬರಬೇಕಾಗುತ್ತದೆ. ಹೀಗೆಯೇ ಹಿಂದು ಮುಂದಿನ ವಿಷಯಗಳು ತಿಳಿದ ಬಳಿಕ ಒಂದು ದೃಢ ನಿರ್ಧಾರಕ್ಕೆ ಬರಬಹುದು ಮತ್ತು ಜ್ಞಾನ ಒಂದು ಅಸ್ತಿತ್ವಕ್ಕೆ ಬರುವುದು.

ಸಂಶೋಧನೆ

ಸಮೂಹ ಕ್ಷೇತ್ರ ಸಂಶೋಧನೆ: ಮುಂದುವರಿದ ವಿಶ್ವವಿದ್ಯಾನಿಲಯಗಳು ಸಮೂಹ ಕ್ಷೇತ್ರ ಸಂಶೋಧನೆಯಲ್ಲಿ (Mission Orieated Research) ತೊಡಗುವುವು. ಇಂತಹ ಪರಿಸರದಲ್ಲಿ ಹಲವಾರು ವಿಭಾಗದ ವಿಜ್ಞಾನಿಗಳು ಸಂಶೋಧಕರು ಒಟ್ಟುಗೂಡಿ ವಾಸ್ತವಿಕ ಕಾರ್ಯವನ್ನು ನೆರವೇರಿಸುವರು. ಉದಾಹರಣೆಗೆ, ಬಾಹ್ಯಾಕಾಶ ಸಂಶೋಧನೆಯಲ್ಲಿ ತಾಂತ್ರಿಕ, ಭೌತಿಕ, ರಾಸಾಯನಿಕ ಹಾಗೂ ಹಲವಾರು ವಿಭಾಗದ ವಿಜ್ಞಾನಿಗಳ ಸಾಮರ್ಥ್ಯವೇ ಯೋಜನೆಯ ಯಶಸ್ವಿಗೆ ಕಾರಣ. ಇಲ್ಲಿ ಗ್ರಂಥ ಪಾಲಕರು ವಿಷಯ ವಿಜ್ಞಾನಿಗಳಂತೆ ವರ್ತಿಸುವರು. ಮತ್ತು ಸಂಶೋಧನಾ ಚಟುವಟಿಕೆಗಳನ್ನು ಒಂದು ವ್ಯವಸ್ಥಿತ ಸಮುದಾಯ (System)ದಂತೆ ಹೊಂದಿಸಿ, ಸಂಶೋಧನಾ ಸಮನ್ವಯಕ್ಕೆ ಪಾತ್ರರಾಗುವರು.

ಪೂರ್ವಾನ್ವಯ ನೋಟಗಳು: ಸಂಶೋಧಕ ಒಂದು ವಿಷಯವನ್ನು ಕುರಿತು ಸಂಶೋಧನೆ ನಡೆಸಲು ಆತನು ಕೆಲವು ವಿಷಯಗಳನ್ನು ಗಮನಕ್ಕೆ ತೆಗೆದುಕೊಳ್ಳಬೇಕು. ಇಲ್ಲಿಯವರೆಗೆ ಏನು ಮಾಡಲಾಗಿದೆ. ಈಗ ಏನು ನಡೆಯುತ್ತಲಿದೆ ಎಂದು ತಿಳಿಯಬೇಕು. ಜೊತೆಗೆ ತನ್ನ ಸಂಶೋಧನಾ ವಿಷಯದಲ್ಲಿ ಯಾವ ಯಾವ ಸಂಸ್ಥೆಗಳು, ವಿಜ್ಞಾನಿಗಳು ಭಾಗಿಯಾಗಿದ್ದಾರೆ ಎಂಬುದನ್ನು ಅರಿಯಬೇಕು. ಇದರಿಂದಾಗಿ ಒಬ್ಬರು ಕಂಡು ಹಿಡಿದ ವಿಷಯದ ಬಗ್ಗೆ ಮತ್ತೆ ಗೊತ್ತಿಲ್ಲದೆ ಕೈ ಹಾಕುವುದು ತಪ್ಪುತ್ತದೆ. ಆದಕಾರಣ ಆತನಿಗೆ ಅಗತ್ಯ ವಸ್ತುಗಳು ಗ್ರಂಥ ಸೂಚಿ, ಸಾಹಿತ್ಯ ಸಮೀಕ್ಷಣೆ, ವಿಮರ್ಶಾಗ್ರಂಥಗಳು ಬೇಕಾಗುವುವು. ಇದನ್ನು ಗ್ರಂಥಪಾಲಕರು ಮುಂಗಡವಾಗಿ ಅಥವ ಬೇಡಿಕೆ ಇದ್ದಾಗ ತಯಾರಿಸಿ ಕೊಡುವುದು. ಸಂಶೋಧಕ ಚಟುವಟಿಕೆಯಲ್ಲಿ ಆಸಕ್ತಿ ವಹಿಸಿರುವ ವಿಶ್ವವಿದ್ಯಾನಿಲಯ ಗ್ರಂಥಾಲಯಗಳ ಲಕ್ಷಣ.

ಪ್ರಸ್ತುತ ವಿಷಯ ಜ್ಞಾನ: ಸಂಶೋಧಕರಿಗೆ ಹೊಸ ಹೊಸ ಪ್ರಕಾಶನಗಳ ಅರಿವು ಅಗತ್ಯ. ಅವರಿಗೆ ಪ್ರಸ್ತುತ ವಿಷಯಗಳನ್ನು ಒದಗಿಸುವುದು ಒಂದು ಮಹತ್ತರ ಕಾರ್ಯ. ಇದು ವೇಗವರ್ಧಕರೆನಿಸಿಕೊಳ್ಳುವ ಗ್ರಂಥಾಲಯ ವಿಜ್ಞಾನಿಗಳು ತಿಳಿಸಬೇಕು. ಇದರಿಂದಾಗಿ ಅಂದಿನ ದಿನದವರೆಗೆ ಎಲ್ಲಿ, ಯಾರು ತನ್ನ ಸಂಶೋಧನಾ ವಿಷಯದಲ್ಲಿ ಏನು ನಡೆಸಿದ್ದಾರೆ ಎಂದು ತಿಳಿಯಬಹುದು. ಇದು ವಿಜ್ಞಾನಿಗಳಿಗೆ ಬೇಕಾದ ಬಹುಮುಖ್ಯ ಸೇವೆ. ಆದುದರಿಂದ ಭಾಷಾಂತರ ಪ್ರವೃತ್ತಿ ವರದಿ ಮುಂತಾದವುಗಳು ಅಗತ್ಯ. ಕೆಲವು ಮುಖ್ಯ ಪ್ರಸಕ್ತ ಸಂಶೋಧನಾ ಗ್ರಂಥಸೂಚಿ, ಪ್ರವೃತ್ತಿ ವರದಿ ಭಾಷಾಂತರ, ವಿಮರ್ಶಾತ್ಮಕ ಟಿಪ್ಪಣಿ ಮುಂತಾದವುಗಳನ್ನು ಅದೇ ವಿಷಯವಾಗಿ ಕುರಿತು ಗಮನ ಹರಿಸುವ ಗ್ರಂಥಾಲಯ ಅಥವಾ ವಿಶ್ಲೇಷಣೆ ಕೇಂದ್ರಗಳು (Information Analysis Centres) ಪ್ರಸಾರ ಮಾಡುವವು. ಈ ಮೇಲೆ ಹೇಳಿದ ಸಂಶೋಧನಾ ಅಗತ್ಯಗಳನ್ನು ವಿಶ್ವವಿದ್ಯಾನಿಲಯ ಗ್ರಂಥಾಲಯಗಳು ಪರಸ್ಪರ ಸೇವೆಯಲ್ಲಿ ಒಟ್ಟುಗೂಡಿ ಸಂಶೋಧನೆಗೆ ವೇಗವರ್ಧಕವಾಗಬೇಕು. ಇಂತಹ ಅಗತ್ಯಗಳ ಪ್ರತಿಯನ್ನು ಎಲ್ಲಾ ಗ್ರಂಥಾಲಯಗಳಿಗೂ ಛಾಯಾಚಿತ್ರ ರೂಪದಲ್ಲಿ ಕಳುಹಿಸುವುದು ಉತ್ತಮ. ವಿಷಯ ವಿಶ್ಲೇಷಣಾಕೇಂದ್ರಗಳಿಂದ ವಿಮರ್ಶಾತ್ಮಕ ಟಿಪ್ಪಣಿಗಳು, ಪ್ರಸ್ತುತ ವರದಿ ಮುಂತಾದವುಗಳನ್ನು ದೊರಕಿಸಿಕೊಡುವರು. ಆದುದರಿಂದ ಒಂದೇ ಮಟ್ಟದಲ್ಲಿರುವ ಎಲ್ಲಾ ಗ್ರಂಥಾಲಯಗಳೂ ಬೆಲೆಗೆಲಸದ ಒಂದು ವ್ಯವಸ್ಥೆಯಂತೆ ರೂಪಿಸಿದ ಸಹಕಾರದಲ್ಲಿ ಸೇವೆ ಸಲ್ಲಿಸತಕ್ಕದ್ದು. ಇಂತಹ ಒಂದು ದೊಡ್ಡ ಪ್ರಮಾಣದಲ್ಲಿ ಕಂಪ್ಯೂಟರೊಂದಿಗೆ ಸಹಕರಿಸಿದಾಗ ಆಯ್ದ ವಿಷಯ ಪ್ರಸಾರ (Selective Dissemination of Information) ಎಂಬ ಸೇವೆಯನ್ನು ದೊರಕಿಸಿಕೊಡಬಹುದು. ಇದರಲ್ಲಿ ಸಂಶೋಧಕರ ಮತ್ತು ಗ್ರಂಥ ವಿಷಯ ಪಾರಿಭಾಷಿಕ ಪದಗಳ ಜೋಡಣೆಯೇ ಮೂಲ. ಇದರಿಂದಾಗಿ ಆಯಾ ವಿಷಯವು ತಕ್ಕ ಸಂಶೋಧಕರಿಗೆ ತ್ವರಿತವಾಗಿ ತಿಳಿಯಪಡಿಸಲಾಗುತ್ತದೆ.

ಸಂಶೋಧನಾ ಪ್ರಬಂಧ ರೂಪ: ಲೇಖನ ಮತ್ತು ಪ್ರಬಂಧವನ್ನು ಬರೆಯಲು ಗ್ರಂಥಪಾಲಕರು ಸಂಶೋಧಕರಿಗೆ ಸಹಾಯ ಮಾಡಬೇಕು. ಅಂದರೆ ವಿಷಯಾನುಕ್ರಮಣಿಕೆ ಬಗ್ಗೆ ಸೂಚನೆ ನೀಡಿ, ಅಡಿ ಟಿಪ್ಪಣಿ, ಪರಾಮರ್ಶನ ಗ್ರಂಥ, ಗ್ರಂಥ ಋಣ ಮುಂತಾದುವುಗಳ ಪ್ರಾಮುಖ ಹಾಗೂ ಅದನ್ನು ಹೇಗೆ ಕೊಡಬೇಕೆಂದು ಸೂಚಿಸುವರು. ಇದರಲ್ಲಿ ಮುಖ್ಯ ಪಾತ್ರವಹಿಸಲು ಗ್ರಂಥಪಾಲಕರಿಗೆ ಬೆರಳಚ್ಚು ಜ್ಞಾನವಿದ್ದರೆ ಒಂದು ಆಸ್ತಿ ಎನ್ನಬಹುದು. ಇದರ ಜೊತೆಗೆ ಪ್ರಕ್ಷಿಪ್ತ, ಅಕರಾದಿ, ರಟ್ಟು ಮುಂತಾದುವುಗಳಲ್ಲಿ ತಮ್ಮ ಪಾತ್ರವನ್ನು ವಹಿಸಬಲ್ಲವರಾಗಿರಬೇಕು. ಆದುದರಿಂದ ಗ್ರಂಥಪಾಲಕ ಸಂಶೋಧನೆಯ ಹಾಗೂ ಅದರ ಪ್ರಬಂಧ ರೂಪದ ವಿಷಯವನ್ನು ಸಾಕಷ್ಟು ಅರಿತಿರಬೇಕು.

ಮನೋರಂಜನೆ

ವಿಶ್ವವಿದ್ಯಾನಿಲಯಗಳಲ್ಲಿ ಗ್ರಂಥಾಲಯದ ಗುರಿ ಶಿಕ್ಷಣ, ವಿಷಯ ಪ್ರಸಾರ ಮತ್ತು ಸಂಶೋಧನೆ ಮಾತ್ರವಲ್ಲ ಮನೋರಂಜನೆಯೂ ಕೂಡ. ಓದುಗರಿಗೆ ಆಗಾಗ್ಗೆ ಮನೋರಂಜನೆ ಆಗತ್ಯ. ಆದುದರಿಂದ ಅಲ್ಲಲ್ಲಿ ಚಿತ್ರಪಟಗಳು ವಿಶ್ರಾಂತಿಗಾಗಿ ಕೂರುವ ಸ್ಥಳಗಳಲ್ಲಿ ನಿಯತಕಾಲಿಕ ಮುಂತಾದವುಗಳು, ಕಾದಂಬರಿಗಳು ಗ್ರಂಥಾಲಯ ದಲ್ಲಿ ಅಗತ್ಯವಾಗಿ ದೊರಕಿಸತಕ್ಕದ್ದು. ಹಾಗೆಯೇ ನಾಟಕ ಚಲನಚಿತ್ರ ಮುಂತಾದು ವುಗಳನ್ನು ಏರ್ಪಡಿಸಿ ಬೇರೆ ಬೇರೆ ವಿದ್ಯಾರ್ಥಿ ಹಾಗೂ ಶಿಕ್ಷಕ ವರ್ಗದವರೂ ಕಲೆತು ಮಾನಸಿಕ ಸಮನ್ವಯ ಹಾಗೂ ವಿಷಯ ವಿನಿಯಯಕ್ಕೆ ಸಂದರ್ಭ ಒದಗಿಸಿಕೊಡ ಬೇಕಾಗುವುದು. ಇಷ್ಟೇ ಅಲ್ಲದೆ ಪ್ರಾಚ್ಯವಸ್ತುಗಳು ಹಾಗೂ ಸಂಸ್ಕೃತಿಯ ವಿಷಯಕ್ಕೆ ಸಂಬಂಧಪಟ್ಟ ವಸ್ತುಗಳು ಹಾಗೂ ಕಾರ್ಯಕ್ರಮಗಳನ್ನು ಏರ್ಪಡಿಸಿ ಸಂಸ್ಕೃತಿಯ ಮುನ್ನಡೆಗೆ ಪಾತ್ರವಾಗಬೇಕು.

ಇಲ್ಲಿ ಮುಖ್ಯವಾಗಿ ವಿಶ್ವವಿದ್ಯಾನಿಲಯವು ಉತ್ತಮ ಮಟ್ಟವನ್ನು ಪ್ರದರ್ಶಿಸ ಬೇಕಾದರೆ ಅದರ ವಿಭಾಗಗಳು ಸಹಕರಿಸಿ ಕೆಲಸ ಮಾಡಬೇಕು. ಗ್ರಂಥಾಲಯವು ಒಂದು ಮುಖ್ಯವಾದ ವಿಭಾಗವಾಗಿದ್ದು ವಿಶ್ವವಿದ್ಯಾನಿಲಯದ ಚಟುವಟಿಕೆಗಳಿಗೆ ಹೃದಯವಿದ್ದಂತೆ. ಎರಡನೆಯದಾಗಿ ವಿಶ್ವವಿದ್ಯಾನಿಲಯವು ಸಮಾಜದ ಸ್ಥಿತಿಗತಿ ಗಳನ್ನು ಸುಧಾರಿಸುವುದಕ್ಕಾಗಿ, ಅಂದರೆ ಅನಕ್ಷರಸ್ಥರಿಗೆ, ರೈತರಿಗೆ ಹಾಗೂ ಶಿಕ್ಷಣಕ್ಕಾಗಿ ಶಾಲಾ ಕಾಲೇಜುಗಳಿಗೆ ಬರಲಾಗದವರಿಗೆ ತನ್ನ ಸೌಲಭ್ಯವನ್ನು ವಿಸ್ತರಿಸಬೇಕು; ತನ್ನ ಚಟುವಟಿಕೆಗಳು ಕೇವಲ ವಿದ್ಯಾರ್ಥಿಗಳು ಮತ್ತು ಶಿಕ್ಷಕ ವರ್ಗದವರಿಗೆ ಮಾತ್ರ ವೆಂದು ಭಾವಿಸಿದರೆ ತಪ್ಪಾಗುವುದು. ಅದು ಸಮಾಜವನ್ನವಲಂಬಿಸಿ ಸಮಾಜದಲ್ಲೇ ಇದ್ದು ಅದಕ್ಕೇನೂ ಪ್ರಯೋಜನಕ್ಕೆ ಬಾರದಿದ್ದರೆ ವ್ಯರ್ಥವೆಂದು ಪರಿಗಣಿಸಬಹುದು. ಆದುದರಿಂದ ಮೇಲೆ ಹೇಳಲ್ಪಟ್ಟ ವಿಸ್ತರಣಾ ಕಾರ್ಯಕ್ರಮಗಳನ್ನು ಶ್ರದ್ಧೆಯಿಂದ ಕೈಗೊಳ್ಳುವುದು ವಿಶ್ವವಿದ್ಯಾನಿಲಯದ ಗುರಿಯಾಗಿರಬೇಕು.

ಪರಾಮರ್ಶನ ಲೇಖನಗಳು ಮತ್ತು ಗ್ರಂಥಗಳು :

1. ದೇಶಪಾಂಡೆ (ಕೆ. ಸಿ.)

ವಿಶ್ವವಿದ್ಯಾನಿಲಯ ಪ್ರಕಟಣೆಗಳ ಮಾರುಕಟ್ಟೆಯ ವಿಸ್ತರಣೆ [ಕೆಲವು ಸಲಹೆಗಳು]. ಅನು: ಆರ್. ಎಲ್. ಅನಂತರಾಮಯ್ಯ, ಮಾನವಿಕ ಕರ್ನಾಟಕ ಸಂ. ೮, ೧೯೭೮, ಪು. ೩೯–೪೦.

2. KATZ (Willian A)

Introduction to reference work. Ed. 2 V. 1 New York, MC Graw-Hill, 1974.

3. PARSONS (C. J.)
Thesis and Project work : A guide to research and writing. London, George Allen & Unwin 1973.

4. SHERA (J. H.)
Sociological foundations of Librarianship, Bombay, Asia Publishing House 1970.

5. Wilson (Lovi & Round) and TAUBER (Maurice F)
The University Libraries. New York, Columbia University 1956.

ಎಂ. ಜಿ. ಮಂಜುನಾಥಾಚಾರ್

ಮಾತಿನ ಮಹತ್ವ

ನಮ್ಮ ಮನಸ್ಸಿನಲ್ಲಿ ಉಂಟಾಗುವ ಭಾವನೆಗಳನ್ನು ಮತ್ತು ಅಭಿಪ್ರಾಯಗಳನ್ನು ಇತರರಿಗೆ ವ್ಯಕ್ತಪಡಿಸಲು 'ಮಾತು' ಮೂಲ ಸಾಧನವಾಗಿದೆ. ಇದು ಕೇವಲ ಕನ್ನಡ ಭಾಷೆಗೆ ಮಾತ್ರ ಅನ್ವಯಿಸದೆ ಇಡೀ ಪ್ರಪಂಚದ ಎಲ್ಲಾ ಭಾಷೆಗಳಿಗೂ ಸಂಬಂಧಿಸಿದ ವಿಷಯವಾಗಿದೆ. ಶಿಲಾಯುಗದ ಮಾನವನು ಕೇವಲ ಸಂಕೇತಗಳಿಂದ ತನ್ನ ಭಾವನೆಗಳನ್ನು ಇತರರಿಗೆ ವ್ಯಕ್ತಪಡಿಸುತ್ತಿದ್ದನು. ಕಾಲವು ಬದಲಾದಂತೆ ಬಾಯಿಯ ಮೂಲಕ ಮಾತನಾಡಿ ತನ್ನ ಭಾವನೆಗಳನ್ನು ಅಭಿವ್ಯಕ್ತಗೊಳಿಸಲು ಪ್ರಾರಂಭಿಸಿದನು. ಮಾತುಗಾರಿಕೆಯೆಂದರೆ 'ಹೇಳುವುದು, ಮಾತನಾಡುವುದು' ಎಂಬುದರಿಂದ ಹಿಡಿದು 'ಭಾಷಣ' ಎಂಬುದರವರೆಗೆ ಅರ್ಥವ್ಯಾಪ್ತಿಯನ್ನು ಪಡೆದಿದೆ. ಬಹಳ ಕಾಲ ಅಂದರೆ ಭಾಷೆಗೆ ಒಂದು ನಿರ್ದಿಷ್ಟವಾದ ಲಿಪಿಯನ್ನು ಕಂಡುಹಿಡಿಯುವವರೆಗೂ 'ಆಡು ಮಾತು' ಜನರ ಸಂಪರ್ಕದ ಏಕೈಕ ಸಾಧನವಾಗಿತ್ತು. ಮಾತಿನ ಮಹತ್ವವು ಆಧುನಿಕ ಕಾಲದಲ್ಲಿ ಇನ್ನೂ ವಿಸ್ತಾರವಾಗಿ ಸಾಗುತ್ತಿದೆ. ಮಾತುಗಾರಿಕೆ ಒಂದು ಕಲೆ. ಇದು ಎಲ್ಲರಿಗೂ ಸಿದ್ಧಿಸುವುದಿಲ್ಲ. ಸರಾಗವಾಗಿ ಮಾತನಾಡಬೇಕಾದರೆ ವಿಪುಲ ಶಬ್ದ ಸಂಪತ್ತು ಇರಬೇಕು. ಶಬ್ದ ಸಂಪತ್ತು ಬೆಳೆಯಬೇಕಾದರೆ 'ಶಬ್ದಕೋಶ' ಅಥವಾ 'ನಿಘಂಟುವನ್ನು' ಆಶ್ರಯಿಸುವುದು ಅನಿವಾರ್ಯವಾಗುತ್ತದೆ. 'ಮಾತು ಆಡಿದರೆ ಹೋಯಿತು, ಮುತ್ತು ಒಡೆದರೆ ಹೋಯಿತು' ಎಂಬಂತೆ ಸಮಯಕ್ಕೆ ಸೂಕ್ತವಾದ ಮಾತುಗಳನ್ನು ಆಡಬೇಕು. ಮಾತಿನ ಮಹತ್ವವನ್ನು ಅನೇಕರು ಅನೇಕ ರೀತಿಯಲ್ಲಿ ಬಣ್ಣಿಸಿದ್ದಾರೆ. ೧೨ನೆಯ ಶತಮಾನದಲ್ಲಿ ಕ್ರಾಂತಿ ಎಬ್ಬಿಸಿದ ಮಹಾಪುರುಷರಾದ ಭಂಡಾರಿ ಜಗಜ್ಯೋತಿ ಬಸವೇಶ್ವರರು ಮಾತಿಗೆ ಹೇಗೆ ಪ್ರಾಮುಖ್ಯವನ್ನು ಕೊಟ್ಟಿದ್ದಾರೆ ಎಂಬುದನ್ನು ತಿಳಿಯಲು ಅವರ ಒಂದು ವಚನವನ್ನು ಪರಿಶೀಲಿಸೋಣ.

ನುಡಿದರೆ ಮುತ್ತಿನ ಹಾರದಂತಿರಬೇಕು,
ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು,
ನುಡಿದರೆ ಸ್ಫಟಿಕದ ಸಲಾಕೆಯಂತಿರಬೇಕು,

ನುಡಿದರೆ ಲಿಂಗ ಮೆಚ್ಚಿ ಅಹುದಹುದೆನ್ನಬೇಕು,
ನುಡಿಯೊಳಗಾಡಿ ನಡೆಯದಿದ್ದರೆ,
ಕೂಡಲ ಸಂಗಮದೇವನೆಂತೊಲಿವನಯ್ಯ!

ಮಾತನಾಡಿದರೆ ಮುತ್ತಿನ ಹಾರದಂತೆ ಬಹಳ ಬೆಲೆಯುಳ್ಳದಾಗಿರಬೇಕು. ನುಡಿದರೆ ಮಾಣಿಕ್ಯದ ದೀಪ್ತಿಯಂತೆ (ಕಿರಣ) ಪ್ರಕಾಶಮಾನವಾಗಿರಬೇಕು. ಅಂದರೆ ಇನ್ನೊಬ್ಬರ ಮನಸ್ಸಿನಮೇಲೆ ಪ್ರಭಾವ ಬೀರುವಂತೆ ಇರಬೇಕು. ನುಡಿದರೆ ಸ್ಫಟಿಕದ ಸಲಾಕೆಯಂತೆ ಗಟ್ಟಿಯಾಗಿರಬೇಕು. ನಡೆದಂತೆ ನುಡಿಯಬಾರದು. ನುಡಿದಂತೆ ನಡೆಯಬೇಕು. ಮಾತಿನಲ್ಲಿ ಹೇಳಿಕೆ ಕೊಟ್ಟ ಅನಂತರ ಅದೇ ರೀತಿ ನಡೆಯದಿದ್ದರೆ ಜನರು ಆ ವ್ಯಕ್ತಿಯನ್ನು 'ಮಾತಿಗೆ ತಪ್ಪಿದವನು' ಎಂದು ಅಪಹಾಸ್ಯ ಮಾಡುತ್ತಾರೆ. 'ಹೇಳುವುದು ಸುಲಭ, ಮಾಡುವುದು ಕಷ್ಟ ಎಂಬ ನಾಣ್ಣುಡಿಯೂ ಈ ಮಾತಿಗೆ ಪೂರಕ ಸಾಕ್ಷಿಯಾಗಿದೆ. ಹಾಗೆಯೇ "ಅಯ್ಯಾ ಎಂದರೆ ಸ್ವರ್ಗ, ಎಲವೋ ಎಂದರೆ ನರಕ" "ಕುಳ್ಳಿರೆಂದರೆ ನೆಲ ಕುಳಿಹೋಹುದೇ" ಎಂಬ ಬಸವಣ್ಣನವರ ನುಡಿಮುತ್ತುಗಳು ಮಾತಿನ ಮಹಿಮೆಯನ್ನು ಸಾರುತ್ತವೆ.

ಇದಕ್ಕೆ ಪೋಷಕವಾಗಿ ಮಹಾತ್ಮಾ ಗಾಂಧೀಜಿಯವರ ಜೀವನದ ಒಂದು ಘಟನೆಯನ್ನು ನಾವು ನೆನಪಿಸಿಕೊಳ್ಳಬಹುದು. ಮಹಾತ್ಮ ಗಾಂಧೀಜಿಯವರು ನುಡಿದಂತೆ ನಡೆಯುತ್ತಿದ್ದರು. ಗಾಂಧೀಜಿಯವರು ವಾಸಿಸುತ್ತಿದ್ದ ಮನೆಯ ಅಕ್ಕಪಕ್ಕದಲ್ಲಿ ಗಲೀಜು ಜಾಸ್ತಿಯಾಗಿತ್ತು. ಗಾಂಧೀಜಿಯವರು ತಮ್ಮ ಹೆಂಡತಿ ಕಸ್ತೂರಿಬಾ ಅವರನ್ನು ಕರೆದು "ಗಲೀಜಾಗಿರುವ ಭಾಗವನ್ನು ಸ್ವಚ್ಛಮಾಡು" ಎಂದು ಹೇಳಿದರು ಆದರೆ ಕಸ್ತೂರಿ ಬಾ ಅವರಿಗೆ ಇದು 'ಹಿಡಿಸಲಿಲ್ಲ. ಅಲ್ಲಿ ಓಡಾಡುವ ಜನರು ಮೂಗು ಮುಚ್ಚಿಕೊಂಡು ಓಡಾಡುತ್ತಿದ್ದರು. ಆಗ ಗಾಂಧೀಜಿಯವರು ಸ್ವತಃ ಕಸದ ಬುಟ್ಟಿ ಮತ್ತು ಕಸದ ಪೊರಕೆಯನ್ನು ತೆಗೆದುಕೊಂಡು ಪಾಯಖಾನೆಯನ್ನು ಗುಡಿಸಿ ಸ್ವಚ್ಛಗೊಳಿಸಲು ಮುಂದಾದರು. ಆಗ ಅಲ್ಲಿ ನೋಡುತ್ತಿದ್ದವರೆಲ್ಲಾ ಸಹಾಯಕ್ಕೆ ಬಂದರು. ಗಾಂಧೀಜಿಯವರು ಕೇವಲ ಬಾಯಿಯಲ್ಲಿ ಹೇಳಿದ ಮಾತ್ರಕ್ಕೆ ಅವರು ಕೆಲಸವನ್ನು ಮಾಡಲಿಲ್ಲ. ಸ್ವತಃ ತಾವೇ ಕೆಲಸದಲ್ಲಿ ಮಗ್ನರಾದಾಗ ಎಲ್ಲರೂ ಅವರಿಗೆ ನೆರವಾಗಲು ಬಂದರು. ಈ ನಿದರ್ಶನವೇ ನಮಗೆ ತಿಳಿಸುತ್ತದೆ, ಅದೇನೆಂದರೆ "ಸ್ವತಃ ಕಾರ್ಯಶೀಲರಾಗಬೇಕು; ಅತಿಯಾದ ಉಪದೇಶ ಮಾಡಬಾರದು; ಆಗ ಇತರರು ನೋಡಿ ಅದರಂತೆಯೇ ಅನುಕರಿಸುತ್ತಾರೆ" ಎಂಬುದು ತಿಳಿಯುತ್ತದೆ. ಇಂತಹ ಹಲವಾರು ಸದ್ಗುಣಗಳನ್ನು ಹೊಂದಿದ್ದ ಗಾಂಧೀಜಿಯವರು 'ಮಹಾತ್ಮಾ' ಎನಿಸಿಕೊಂಡರು ಹಾಗೆಯೇ 'ಮಾತೇ ಮಾಣಿಕ್ಯ' 'ಮಾತೇ ಜ್ಯೋತಿರ್ಲಿಂಗ' 'ಮೃದು ವಚನಂಗಳೇ ಸಕಲ ಜಪ ತಪಂಗಳಯ್ಯಾ' ಎಂಬ ಬಸವೇಶ್ವರರ ನುಡಿಮುತ್ತುಗಳು ಮಾತಿನ ಮಹತ್ವವನ್ನು ತಿಳಿಸುತ್ತವೆ.

ಇದೇ ರೀತಿ ಸರ್ವಜ್ಞ ಮೂರ್ತಿಯು ತನ್ನ ವಚನಗಳಲ್ಲಿ ಮಾತಿನ ಮಹಿಮೆಯನ್ನು ಹೊಗಳಿದ್ದಾನೆ. ಈಗ ಕೆಲವು ವಚನಗಳನ್ನು ಪರಿಶೀಲಿಸೋಣ.

ಮಾತು ಮಾಣಿಕ ಮುತ್ತು ಮಾತೇ ತಾ ಸದರವು।
ಮಾತಾಡಿದಂತೆ ನಡೆದಾತ। ಜಗವನ್ನು
ಕೂತಲ್ಲಿ ಆಳ್ವ ಸರ್ವಜ್ಞ॥

ಮಾತೇ ಮಾಣಿಕ್ಯ, ಮಾತೇ ಮುತ್ತು, ಮಾತೇ ಸದರವು. ಕೆಲವು ಸಂದರ್ಭಗಳಲ್ಲಿ ಮಾತನ್ನು ಸರಿಯಾದ ಹಿಡಿತದಲ್ಲಿ ಆಡದಿದ್ದರೆ ಸದರವಾಗುತ್ತದೆ. ಸದರ ಕೊಟ್ಟರೆ ಪದರಕ್ಕೆ ಕೈ ಇಡುತ್ತಾರೆ. 'ಆಡಿಕೊಳ್ಳೋರ ಮುಂದೆ ಜಾರಿ ಬಿದ್ದಂತೆ' ಆಗುತ್ತದೆ. ಮಾತನ್ನು ಆಡಿದಂತೆ ನಡೆಯುವಂತಹ ವ್ಯಕ್ತಿ ಪ್ರಪಂಚವನ್ನು ಕುಳಿತಲ್ಲಿಯೇ ಆಳುತ್ತಾನೆ ಎಂಬುದು ಈ ತ್ರಿಪದಿಯ ಸಾರಾಂಶ. ಅಂದರೆ ಜಗತ್ತಿನಲ್ಲಿ ಆಡಿದಂತೆ ನಡೆಯುವ ವ್ಯಕ್ತಿಗಳು ಬಹಳ ವಿರಳ.

ಮಾತಿಂಗೆ ಮಾತುಗಳು ಓತು ಸಾಸರವುಂಟು।
ಮಾತಾಡಿದಂತೆ ನಡೆದ। ರಾ ಕೈಲಾಸ
ಕಾತನೇ ಒಡೆಯ ಸರ್ವಜ್ಞ॥

ಮರಕ್ಕಿಂತ ಮರವು ದೊಡ್ಡದಿರುವಂತೆ ಮಾತಿಗೆ ಪ್ರತಿ ಮಾತುಗಳು ಸಾವಿರಾರು ಇರುತ್ತವೆ. ಒಂದೇ ಪದಕ್ಕೆ ಹಲವಾರು ಅರ್ಥಗಳು ಬರುತ್ತವೆ. ಯಾವ ವ್ಯಕ್ತಿಯು ನುಡಿದಂತೆ ನಡೆಯುವನೋ ಆ ವ್ಯಕ್ತಿಯೇ ಕೈಲಾಸಕ್ಕೆ ಒಡೆಯನಾಗಬಲ್ಲ! ಎಂಬುದು ಈ ತ್ರಿಪದಿಯ ಸಾರಾಂಶ. ಅಂದರೆ ಮಾತಾಡಿದಂತೆ ನಡೆಯುವ ವ್ಯಕ್ತಿಗೆ ಜಗತ್ತಿನಲ್ಲಿ ಎಂತಹ ಸ್ಥಾನಮಾನಗಳಿವೆ ಎಂಬುದನ್ನು ಸರ್ವಜ್ಞನು ತನ್ನ ವಚನಗಳಲ್ಲಿ ಅಭಿವ್ಯಕ್ತಿಗೊಳಿಸಿದ್ದಾನೆ.

ಪ್ರಸ್ತಕಿಲ್ಲದ ಮಾತು ಹತ್ತು ಸಾವಿರ ವ್ಯರ್ಥ।
ಕತ್ತೆ ಕೂಗಿದರೆ ಫಲವುಂಟು। ಬರಿಮಾತು
ಕತ್ತೆಗಿಂ ಕಷ್ಟ ಸರ್ವಜ್ಞ

ಸಮಯಕ್ಕೆ ಸರಿಯಾಗಿ ಪ್ರಯೋಜನವಾಗದ ಮಾತು ಹತ್ತು ಸಾವಿರವಾದರೂ ವ್ಯರ್ಥವಾಗುತ್ತವೆ. ಹೇಗೆಂದರೆ ಕತ್ತೆ ಕೂಗಿದರೆ ಜನರು ಅದನ್ನು ಶಕುನವೆಂದು ಭಾವಿಸುತ್ತಾರೆ. ಅದರಿಂದ ಒಳ್ಳೆಯದಾಗಲೀ, ಕೆಟ್ಟದಾಗಲೀ ಅದರ ವಿವಾದದ ಅಗತ್ಯವಿಲ್ಲ. ಆ ಕತ್ತೆಯ ಕೂಗುವಿಕೆಯಾದರೂ ಸ್ವಲ್ಪ ಪ್ರಯೋಜನವಾಗುತ್ತದೆ. ಆದರೆ ಸಮಯಕ್ಕೆ ಸದುಪಯೋಗವಾಗದ ಬರಿಯ ಮಾತುಗಳು ಕತ್ತೆಯ ಕೂಗಿಗಿಂತಲೂ ನಿಷ್ಪ್ರಯೋಜಕ ಎಂಬುದು ಸರ್ವಜ್ಞ ಮೂರ್ತಿಯ ವಾದ.

ಮಾತಿನಿಂ ನಗೆ ನುಡಿಯು ಮಾತಿನಿಂ ಹಗೆ ಕೊಲೆಯು ।
ಮಾತಿನಿಂ ಸರ್ವ ಸಂಪದವು । ಲೋಕಕ್ಕೆ
ಮಾತೆ ಮಾಣಿಕವು ಸರ್ವಜ್ಞ

ಒಳ್ಳೆಯ ಮಾತುಗಾರನಾದವನು ಎಲ್ಲರನ್ನೂ ನಗಿಸಬಹುದು, ತನ್ನ ಮನಸ್ಸಿಗೂ ಮತ್ತು ಇತರರ ಮನಸ್ಸಿಗೂ ಉಲ್ಲಾಸವಾಗುವಂತಹ ಹಾಸ್ಯ ಚಟಾಕಿಗಳನ್ನು ಹಾರಿಸಿ ನಕ್ಕು ನಲಿಸಿ ಸಂತೋಷಗೊಳಿಸಬಹುದು. ಇದಕ್ಕೆ ಬೀರಬಲ್ ಮತ್ತು ತೆನಾಲಿ ರಾಮಕೃಷ್ಣರನ್ನು ಉದಾಹರಣೆಯಾಗಿ ತೆಗೆದುಕೊಳ್ಳಬಹುದು. ಪ್ರಾಣ ಹೋಗುವ ಸಂದರ್ಭದಲ್ಲಿಯೂ ಸಹ ತನ್ನ ಚತುರತೆಯ ಯುಕ್ತಿಯಿಂದ ಆ ಸಮಯದಲ್ಲಿ ತನ್ನ ವಾಕ್ಚಾತುರ್ಯದ ಬಲದಿಂದ ತಕ್ಕ ಮಾತನ್ನು ಆಡಿ, ಎಲ್ಲರನ್ನೂ ನಕ್ಕು ನಲಿಸಿ, ತನ್ನ ಮನಸ್ಸಿಗೂ ಆನಂದ ತಂದುಕೊಂಡು ಹೇಗೆ ರಾಜನಿಂದ ಬಹುಮಾನವನ್ನು ಗಿಟ್ಟಿಸಿಕೊಳ್ಳುತ್ತಿದ್ದರೆಂಬುದನ್ನು ತೆನಾಲಿ ರಾಮಕೃಷ್ಣ ಮತ್ತು ಬೀರಬಲ್ಲರ ಕತೆಗಳಿಂದ ನಮಗೆ ವೇದ್ಯವಾಗುತ್ತದೆ. ಹೆಚ್ಚು ಕಡಿಮೆ ಮಾತನಾಡಿದರೆ ಹಗೆಯುಂಟಾಗುತ್ತದೆ. ಇದು ಹೀಗೆಯೇ ಬೆಳೆಯುತ್ತಾ ಹೋಗಿ ಎಷ್ಟೋ ಕೊಲೆಗಳಾಗುತ್ತವೆ. ಕೊಲೆಗಳಾಗಿರುವ ಅನೇಕ ಮೊಕದ್ದಮೆಗಳನ್ನು ತೀವ್ರವಾದ ಪರಿಶೀಲನೆಗೆ ಗುರಿಮಾಡಿದಾಗ ಅದರಲ್ಲಿ ಒರಟಾದ ಮಾತುಗಳಿಂದ ಪ್ರಾರಂಭವಾಗಿ ಹೊಡೆದಾಟವಾಗಿ ಕೊಲೆಯಾಗಿದೆ ಎಂಬ ವಿಷಯ ತಿಳಿದುಬರುತ್ತದೆ. ಆದ್ದರಿಂದ ಪರಸ್ಪರ ಸಹಕಾರದಿಂದ ಒಳ್ಳೆಯ ಮಾತುಗಳನ್ನಾಡಿ ಜೀವನ ನಡೆಸಬೇಕೆಂಬುದೇ ಸರ್ವಜ್ಞನ ಮತ. ಪ್ರಪಂಚವು ಶಾಂತಿಯಿಂದ ಜೀವನವನ್ನು ನಡೆಸಬೇಕಾದರೆ ಮಾತು ಬಹಳ ಮುಖ್ಯವಾಗಿದೆ. "ಮಾತೇ ಮಾಣಿಕ್ಯ" ಎಂಬ ಗಾದೆಯಲ್ಲಿ ಎಳ್ಳಷ್ಟೂ ಉತ್ಪ್ರೇಕ್ಷೆಯಿಲ್ಲ.

ಹೊತ್ತಿಗೊದಗಿದ ಮಾತು ಸತ್ತವನು ಎದ್ದಂತೆ ।
ಹೊತ್ತಾಗಿ ನುಡಿದ ಮಾತು । ಕೈ ಜಾರಿದಾ
ಮುತ್ತಿನಂತಿಹುದು ಸರ್ವಜ್ಞ ॥

ಸಮಯಕ್ಕೆ ಸರಿಯಾಗಿ ಆಡಿದ ಮಾತು ಸತ್ತವನು ಎದ್ದಂತೆ. ಇಲ್ಲಿ ಸರ್ವಜ್ಞ ಕವಿಯು ಉಪಮಾಲಂಕಾರವನ್ನು ಬಳಸಿದ್ದಾನೆ. ಅಂದರೆ ಯಾವುದೇ ಒಂದು ವಿಷಯವು ಹಳೆಯದಾಗಿದ್ದು, ಅದಕ್ಕೆ ಸೂಕ್ತ ಸಂದರ್ಭದಲ್ಲಿ ಒಂದು ಮಾತನ್ನು ಆಡಿದರೆ ಅದಕ್ಕೆ ಬಹಳ ಬೆಲೆ ಇರುತ್ತದೆ. 'ಸತ್ತವನು ಎದ್ದಂತೆ' ಎಂಬಲ್ಲಿ ನಾವು ಪ್ರಾಣದ ಮಹತ್ವವನ್ನು ಅರಿತಿರಬೇಕು. ಸತ್ತಮೇಲೆ ಪ್ರಾಣವು ಬರಲಾರದು! ಅಂತಹ ಸಂದರ್ಭದಲ್ಲಿಯೂ ಆಡಿದಂತಹ ಒಂದು ಶ್ರೇಷ್ಠ ಮಾತು ಬೆಲೆಯನ್ನು ತರುತ್ತದೆ. ಸಮಯ ಮೀರಿ ನುಡಿದರೆ ಆ ಮಾತು ಕೈ ಜಾರಿದಾ ಮುತ್ತಿನಂತೆ. ಮುತ್ತಿಗೆ ಬಹಳ ಬೆಲೆಯಿರುತ್ತದೆ. ಅದು ಆಕಸ್ಮಿಕವಾಗಿ ಕೈ ಜಾರಿ ಕೆಳಗೆ ಬಿದ್ದ

ಒಡೆದು ಹೋಗುತ್ತದೆ. ಆಗ ಆ ಮುತ್ತಿಗೆ ಎಳ್ಳಷ್ಟೂ ಬೆಲೆಯಿರುವುದಿಲ್ಲ. ಅದರಂತೆ ನಿಧಾನವಾಗಿ ನುಡಿದರೆ ಆ ಮಾತಿಗೆ ಗೌರವವಿರುವುದಿಲ್ಲ. ಅಂದರೆ ಹೊತ್ತಿಗೆ ಸರಿಯಾಗಿ ಮಾತನಾಡುವವರಿಗೆ ಸಮಾಜದಲ್ಲಿ ಎಷ್ಟು ಗೌರವವಿದೆ ಎಂಬುದನ್ನು ಸರ್ವಜ್ಞಕವಿ ಚೆನ್ನಾಗಿ ಚಿತ್ರಿಸಿದ್ದಾನೆ.

ಪ್ರಸ್ತಕ್ಕೆ ನುಡಿದಿಹರೆ ಬೆಸ್ತಂತೆ ಇರಬೇಕು !
ಪ್ರಸ್ತವನು ತಪ್ಪಿ ನುಡಿದಿಹರೆ । ನಡು ಬೆನ್ನಿ-
ನಸ್ತಿ ಮುರಿದಂತೆ ಸರ್ವಜ್ಞ ॥

ಒಂದು ಮಾತಿಗೂ ಇನ್ನೊಂದು ಮಾತಿಗೂ ಪರಸ್ಪರ ಸಂಬಂಧವಿರಬೇಕು. ಇನ್ನೊಬ್ಬರಿಗೆ ಅರ್ಥವಾಗುವಂತೆ ಮಾತುಮಾತಿಗೆ ಬೆಸಿಗೆ ಹಾಕಿರಬೇಕು. ಒಂದು ಮಾತಿಗೂ ಇನ್ನೊಂದು ಮಾತಿಗೂ ಸಂಬಂಧವಿಲ್ಲದ ಮಾತು ನಡುಬೆನ್ನಿನ ಮೂಳೆ ಮುರಿದಂತಾಗುತ್ತದೆ. ಈ ತ್ರಿಪದಿಯಿಂದ ಒಂದು ಮಾತಿಗೂ ಇನ್ನೊಂದು ಮಾತಿಗೂ ಪರಸ್ಪರ ಸಂಬಂಧವಿರಬೇಕೆಂದು ತಿಳಿದುಬರುತ್ತದೆ.

ಹೊಲಬನರಿಯದ ಮಾತು ತಲೆ ಬೇನೆ ಎದ್ದಂತೆ
ಹೊಲಬನರಿತು ಒಂದ ನುಡಿದಿಹರೆ । ಅದು ದಿವ್ಯ
ಫಲ ಪಕ್ವದಂತೆ ಸರ್ವಜ್ಞ ॥

ಅರ್ಥವಿಲ್ಲದ ಮಾತನ್ನು ಆಡಿದರೆ ಅದು ತಲೆ ನೋವು ಬಂದಂತೆ ಇತರರಿಗೆ ಸಮಸ್ಯೆಯಾಗುತ್ತದೆ. ಅಂದರೆ ಅರ್ಥವಿಲ್ಲದ ಮಾತು ವ್ಯರ್ಥ. ಸೂಕ್ತ ಅರ್ಥ ತುಂಬಿದ ಒಂದೇ ಒಂದು ಮಾತನ್ನು ಆಡಿದರೆ ಅದು ಇತರರಿಗೆ ಪಕ್ವವಾದ ಹಣ್ಣಿದ್ದಂತೆ ಪ್ರಿಯವಾಗಿರುತ್ತದೆ. ಮಾತನಾಡಿದ ವ್ಯಕ್ತಿಯೂ ಸಹ ಇತರರ ದೃಷ್ಟಿಯಲ್ಲಿ ಯೋಗ್ಯ ಗೌರವವುಳ್ಳ ವ್ಯಕ್ತಿಯಾಗಿರುತ್ತಾನೆ. ಇದರಿಂದ ಮಾತನ್ನು ಆಡುವಾಗ ಅರ್ಥ ಗರ್ಭಿತವಾದ ಮಾತನ್ನು ಆಡಬೇಕೆಂಬುದೇ ಈ ತ್ರಿಪದಿಯ ಅರ್ಥ.

ಮಾತು ಮಾತಿಗೆ ತಕ್ಕ ಮಾತು ಕೋಟಿಗಳುಂಟು ।
ಮಾತಾಡಿ ಮನಕೆ । ಮುನಿಸಕ್ಕು ಮಾತಿನಲಿ ।
ಸೋತವನೇ ಜಾಣ ಸರ್ವಜ್ಞ

ಮರಕ್ಕಿಂತ ಮರವು ದೊಡ್ಡದಿರುತ್ತದೆ. ಮಾತಿಗಿಂತ ಮಾತುಗಳು ಸಾವಿರಾರು. ಲಕ್ಷಗಟ್ಟಲೆ, ಕೋಟಿಗಟ್ಟಲೆ ಇರುತ್ತವೆಂಬುದನ್ನು ಹಿಂದಿನ ಒಂದು ತ್ರಿಪದಿಯಲ್ಲಿ ಗಮನಿಸಿದ್ದೇವೆ. ಹಲವಾರು ಜನ ಮಾತನಾಡಲು ಕುಳಿತುಕೊಂಡಾಗ ಒಬ್ಬೊಬ್ಬ ರಿಂದಲೂ ಒಂದೊಂದು ಮಾತುಗಳು ಬರುತ್ತವೆ. ಕೆಲವು ವಿಚಾರಗಳಲ್ಲಿ ಸಾಮ್ಯತೆಯಿರಬಹುದು; ಭಿನ್ನತೆಗಳು ಕಂಡುಬರಬಹುದು. ಏಕೆಂದರೆ 'ಪ್ರತಿಯೊಬ್ಬ ವ್ಯಕ್ತಿಗೂ ವೈಯಕ್ತಿಕ ಭಿನ್ನತೆಗಳು ಕಂಡುಬರುತ್ತವೆ' ಎಂಬುದನ್ನು ಮನೋ ವಿಜ್ಞಾನವೇ ಎತ್ತಿ ತೋರಿಸುತ್ತದೆ. ಭಿನ್ನತೆ ತಲೆದೋರಿದಾಗ ವೈರಭಾವನೆಯು

ತಲೆದೋರುತ್ತದೆ. ಬುದ್ಧಿವಂತನಾದ ವ್ಯಕ್ತಿಯು ಆಗ ತನ್ನ ವಾದವನ್ನು ನಿಲ್ಲಿಸಿದರೆ ಅಲ್ಲಿಗೆ ಕ್ಷೇಮವಾಗುತ್ತದೆ. ಅಂತಹ ಸಂದರ್ಭಗಳಲ್ಲಿ ಕೆಲವರು 'ಇವನು ರಣಹೇಡಿ' 'ನಮ್ಮ ಬೆದರಿಕೆಗೆ ಸುಮ್ಮನಾದ' ಎಂದು ಈತನನ್ನು ತೆಗಳಿ ಆತ್ಮ ಪ್ರಶಂಸೆ ಮಾಡಿಕೊಳ್ಳುತ್ತಾರೆ. ಇದು ತಪ್ಪಾದ ಅಭಿಪ್ರಾಯ.

"ಖಂಡಿತವಾದಿ ಲೋಕಕ್ಕೆ ವಿರೋಧಿ" ಎಂಬ ಲೋಕೋಕ್ತಿಯ ಮಹತ್ವವನ್ನು ಶ್ರೇಷ್ಠ ವಿಜ್ಞಾನಿಯಾದ ಗೆಲಿಲಿಯೋನ ಉದಾಹರಣೆಯಿಂದ ತಿಳಿಯಬಹುದು. ಗೆಲಿಲಿಯೋ ಒಬ್ಬ ಶ್ರೇಷ್ಠ ವಿಜ್ಞಾನಿ. ಈತನು ವಿಶ್ವಪ್ರಸಿದ್ಧವಾದ ದೂರದರ್ಶಕ ಯಂತ್ರವನ್ನು ಕಂಡುಹಿಡಿದಿದ್ದಾನೆ. ಈತನು ತನ್ನ ದೂರದರ್ಶಕ ಯಂತ್ರದ ಸಹಾಯದಿಂದ ಸೌರವ್ಯೂಹದ ವರ್ಣನೆ ಮಾಡಿದ್ದಾನೆ. 'ಸೂರ್ಯನೇ ಕೇಂದ್ರ ಬಿಂದು, ಸೂರ್ಯನ ಸುತ್ತಲೂ ಇತರ ಗ್ರಹಗಳು ಸುತ್ತುತ್ತವೆ' ಎಂಬುದೇ ಇವನ ವಾದ. ಆದರೆ ಧಾರ್ಮಿಕ ಗುರುಗಳು 'ಭೂಮಿಯೂ ಚಪ್ಪಟೆಯಾಗಿದೆ, ಭೂಮಿಯೇ ಕೇಂದ್ರ, ಭೂಮಿಯ ಸುತ್ತ ಸೂರ್ಯ ಮತ್ತಿತರ ಗ್ರಹಗಳು ಸುತ್ತುತ್ತಿವೆ' ಎಂದು ನಂಬಿದ್ದರು. ಇವನ ಅಭಿಪ್ರಾಯವು ಧರ್ಮಕ್ಕೆ ವಿರುದ್ಧವಾಗಿತ್ತು. ರಾಜನ ಸಮ್ಮುಖ ವಿಚಾರಣೆ ನಡೆಯಿತು. ಉಗ್ರ ಶಿಕ್ಷೆಯ ಭಯದಿಂದ ತನ್ನ ವಾದವನ್ನು ಹಿಂತೆಗೆದುಕೊಳ್ಳಬೇಕಾದ ಪ್ರಸಂಗ ಬಂತು. ಮನಸ್ಸಿನಲ್ಲಿ ಮಾತ್ರ ತನ್ನ ವಾದವನ್ನೇ ಮೆಲುಕು ಹಾಕಿದ. 'ಕೊನೆಗೂ ನಿಲ್ಲುವುದು ಸತ್ಯ ಮಾತ್ರ".

ಮಾತು ಬಲ್ಲಹ ತಾನು ಸೋತು ಹೋಹುದು ಲೇಸು ।
ಮಾತಿಂಗೆ ಮಾತು ಮಥಿಸಲ್ಕೆ । ವಿಥ ಬಂದು
ಆತುಕೊಂಡಿಹುದು ಸರ್ವಜ್ಞ ॥

ಈ ತ್ರಿಪದಿಯೂ ಸಹ ಹಿಂದಿನ ತ್ರಿಪದಿಯ ಅರ್ಥವನ್ನೇ ಹೋಲುತ್ತದೆ. ಕಠಿಣ ಸಂದರ್ಭಗಳಲ್ಲಿ ಮಾತು ಬಲ್ಲವನು ಸೋತು ಬಾಳುವುದೇ ಲೇಸು. ಆದ್ದರಿಂದಲೇ ಹಿರಿಯರು "ಮಾತು ಬಲ್ಲವನಿಗೆ ಜಗಳವಿಲ್ಲ; ಊಟ ಬಲ್ಲವನಿಗೆ ರೋಗವಿಲ್ಲ" ಎಂಬ ಗಾದೆಯನ್ನು ಸೃಷ್ಟಿಸಿದ್ದಾರೆ. ಕಲ್ಲು ಮತ್ತೊಂದು ಕಲ್ಲಿನಿಂದ ತಿಕ್ಕಿದಾಗ ಬೆಂಕಿಯ ಕಿಡಿ ಉತ್ಪತ್ತಿಯಾಗುತ್ತದೆ. ಹಾಗೆಯೇ ಮಾತಿಗೆ ಮಾತು ಬೆಳೆದು ವೈರತ್ವವು ಉಂಟಾಗಿ ಮರಣ ಹೊಂದುವ ಸಂದರ್ಭವೂ ಬರಬಹುದು !

ಮಾತು ಬಲ್ಲಾತಂಗೆ ಯಾತವದು ಸುರಿದಂತೆ ।
ಮಾತಾಡಲರಿಯದಾತಂಗೆ । ಬರಿಯಾತ
ನೇತಾಡಿದಂತೆ ಸರ್ವಜ್ಞ ॥

ಏತದಿಂದ ನೀರು ಬಂದು ಸುರಿದರೆ ಬೆಳೆಗಳಿಗೆ ಅನುಕೂಲವಾಗುತ್ತದೆ. ಆದರೆ ಬರಿ ಏತವು ನೇತಾಡಿದರೆ ಯಾವ ಪ್ರಯೋಜನವು ಇರುವುದಿಲ್ಲ. ಹಾಗೆಯೇ ಮಾತನ್ನು ಯಾವ ಸಂದರ್ಭದಲ್ಲಿ ಹೇಗೆ ಆಡಬೇಕು ಎಂಬ ಮರ್ಮವನ್ನು ತಿಳಿದವನು

ಸುಲಭವಾಗಿ ತನ್ನ ಕಠಿಣ ಸಂದರ್ಭಗಳಲ್ಲಿ ತಪ್ಪಿಸಿಕೊಳ್ಳುತ್ತಾನೆ. ಆದರೆ ಮಾತನಾಡಲು ಬರದವನು ಇಕ್ಕಟ್ಟಿಗೆ ಸಿಕ್ಕಿ ಕಷ್ಟವನ್ನು ಅನುಭವಿಸುತ್ತಾನೆ. ಈ ತ್ರಿಪದಿಯಲ್ಲಿ ಮಾತು ಬಲ್ಲವನನ್ನು ನೀರು ತುಂಬಿದ ಏತಕ್ಕೂ ಮತ್ತು ಮಾತಾಡಲು ಬರದವನನ್ನು ಬರೀ ಏತಕ್ಕೂ ಹೋಲಿಕೆ ಮಾಡಲಾಗಿದೆ.

ರಸಿಕನಾಡಿದ ಮಾತು ಶಶಿಯುದಿಸಿ ಬಂದಂತೆ ।
ರಸಿಕನಲ್ಲದವನ ಬರಿ ಮಾತು । ಕಿವಿಯೊಳ್
ಕೂರ್ದಸಿಯ ಬಡಿದಂತೆ ಸರ್ವಜ್ಞ ॥

ರಸಿಕನು ಮಾತನಾಡಿದರೆ ಚಂದ್ರನು ಉದಿಸಿ ಬಂದಂತೆ ಸಂತೋಷವಾಗುತ್ತದೆ. ಅಂದರೆ ರಸಿಕನ ಮಾತನ್ನು ಇನ್ನೂ ಕೇಳಬೇಕು ಎಂಬ ಆಸೆಯುಂಟಾಗುತ್ತದೆ. ಆದರೆ ಅರಸಿಕನಾದವನ ಮಾತನ್ನು ಕೇಳಿದ ತಕ್ಷಣ ಕಿವಿಯಲ್ಲಿ ಹತ್ತಿಯನ್ನು ಇಟ್ಟುಕೊಳ್ಳುವಷ್ಟು ಬೇಸರವಾಗುತ್ತದೆ. ಕೆಲವರು ಹಾಡನ್ನು ಹಾಡಲು ಪ್ರಾರಂಭಿಸಿದರೆ 'ಕತ್ತೆ ಬರ್‍ತಾವೆ' ಅನ್ನುವುದು ರೂಢಿಯಲ್ಲಿದೆ.

ಕಾದ ಕಬ್ಬುನವು ತಾ ಹೊಯ್ದೊಡನೆ ಕೂಡುವುದು ।
ಹೋದಲ್ಲಿ ಮಾತ ಮರೆದರಾ । ಕಬ್ಬುನವು
ಕಾದಾರಿದಂತೆ ಸರ್ವಜ್ಞ ॥

ಕಬ್ಬಿಣವನ್ನು ಕಾಯಿಸಿದಾಗ ಹೇಗೆ ಬಗ್ಗಿಸಿದರೂ ಬಗ್ಗುತ್ತದೆ. ಚೆನ್ನಾಗಿ ಕುದಿಸಿ ಪಾಕಮಾಡಿದಾಗ ಯಾವ ಆಕಾರವನ್ನು ಬೇಕಾದರೂ ತಾಳುತ್ತದೆ. ಅದೇ ಕಬ್ಬಿಣವು ಆರಿ ತಣ್ಣಗಾದ ನಂತರ ಅದು ಬಗ್ಗುವುದಿಲ್ಲ. ಈ ತ್ರಿಪದಿಯ ಅರ್ಥವೂ ಸಹ ಸಮಯಕ್ಕೆ ತಕ್ಕ ಮಾತಾಡಿದರೆ ಪರಿಣಾಮಕಾರಿಯಾಗಿರುತ್ತದೆ ಎಂಬುದೇ ಆಗಿದೆ.

ಮಾತು ಬಲ್ಲಾತಂಗೆ ಮಾತೊಂದು ಮಾಣಿಕವು ।
ಮಾತು ತಾನರಿಯದಧಮಂಗೆ । ಮಾಣಿಕವು
ತೂತು ಬಿದ್ದಂತೆ ಸರ್ವಜ್ಞ ॥

"ಮಾತು ಬಲ್ಲಾತಂಗೆ ಜಗಳವಿಲ್ಲ" ಮಾತನ್ನು ಆಡಲು ಬಲ್ಲವನಿಗೆ ಆ ಮಾತು ಮಾಣಿಕ್ಯವಿದ್ದಂತೆ. ಮಾತು ಬಾರದವನಿಗೆ ಮಾಣಿಕ್ಯವು ತೂತು ಬಿದ್ದಂತಿರುತ್ತದೆ. "ಕತ್ತೆ ಬಲ್ಲುದೇ ಕಸ್ತೂರಿ ವಾಸನೆ", "ಕೋತಿ ಕೈಗೆ ಗುಲಗಂಜಿ ಕೊಟ್ಟ ಹಾಗೆ", "ಮಂಗನ ಕೈಗೆ ಮಾಣಿಕ್ಯ ಕೊಟ್ಟ ಹಾಗೆ" ಎಂಬ ಗಾದೆಗಳು ಈ ಸಂದರ್ಭಕ್ಕೆ ಅನ್ವಯವಾಗುತ್ತದೆ.

ತಿಂದು ಗಾದಿಯು ಮೇಲೆ ಬಂದು ಗುರು ಬೀಳ್ವಂತೆ ।
ಬಂದ ಪ್ರಸ್ತಾವಕೊದಗಿದರೆ । ಆ ಮಾತ–
ನೊಂದೆನ್ನಬಹುದೆ ಸರ್ವಜ್ಞ ॥

ಗುರುಗಳು ಊಟ ಮಾಡಿ ಅನಂತರ ಹಾಸಿಗೆಯ ಮೇಲೆ ಮಲಗಿಕೊಳ್ಳುವ ಹಾಗೆ ಮಾತನಾಡುವ ಪ್ರಸಂಗ ಬಂದಾಗ ಆ ಸಂದರ್ಭಕ್ಕೆ ಅನುಸರಿಸಿ ಒಂದು ಯೋಗ್ಯವಾದ ಮಾತನ್ನು ಆಡಿದರೆ ಸಾಕು, ಆ ಮಾತು ಉಳಿದ ಸಾವಿರ ಮಾತಿಗೆ ಸಮಾನವಾಗಿರುವುದು.

ಪ್ರಸ್ತಾವಕೊದಗಿದಾ ಕತ್ತೆ ಮದಕರಿಯಂತೆ ।
ಪ್ರಸ್ತಾವ ತೀರ್ದ ಮರುದಿನಾ । ಮದಕರಿಯು
ಕತ್ತೆಯಂತಕ್ಕು ಸರ್ವಜ್ಞ ॥

ಸಮಯಕ್ಕೆ ಸರಿಯಾಗಿ ಒದಗಿ ಬಂದ ಕತ್ತೆಯೂ ಸಹ ಮದ್ದಾನೆಯಂತೆ ಬಹಳ ಉಪಯೋಗವಾಗಿರುವುದು. ಆ ಸಂದರ್ಭವು ಕಳೆದ ನಂತರ ಮದ್ದಾನೆಯೂ ಸಹ ಪ್ರಯೋಜನಕ್ಕೆ ಬರದ ಕತ್ತೆಯಂತೆ ಆಗುವುದು. "ಊಟ ತೀರಿದ ಮೇಲೆ ಲೌಡಿ ಸಂಗವೇತಕೆ ?" ಎಂಬ ಗಾದೆಯನ್ನು ಇಲ್ಲಿ ಅನ್ವಯಿಸಬಹುದು.

ಕಂಡಂತೆ ಹೇಳಿದರೆ ಕೆಂಡ ಉರಿಯುವುದು ಭೂ ।
ಮಂಡಲದ ಒಳಗೆ—ಖಂಡಿತವನಾಡುವರ
ಕಂಡಿಹುದೆ ಕಷ್ಟ ! ಸರ್ವಜ್ಞ ॥

ಈ ಪ್ರಪಂಚದಲ್ಲಿ ಖಂಡಿತವಾದಿಗಳು ಬದುಕುವುದೇ ಕಷ್ಟ ! ಆದ್ದರಿಂದಲೇ ಹಿರಿಯರು " ಖಂಡಿತವಾದಿ ಲೋಕಕ್ಕೆ ವಿರೋಧಿ " " ಇರೋದು ಇದ್ದಂಗೆ ಹೇಳಿದ್ರೆ ಎದ್ದು ಬಂದು ಎದೆಗೆ ಒದ್ರು " ಮುಂತಾದ ಗಾದೆಗಳನ್ನು ಸೃಷ್ಟಿಸಿದ್ದಾರೆ. ಒಬ್ಬ ವ್ಯಕ್ತಿಯಲ್ಲಿರುವ ದುರ್ಗುಣಗಳನ್ನು ಇದ್ದ ಹಾಗೆಯೇ ಹೇಳಿದರೆ ಅವರಿಗೆ ಕೋಪ ಬರುವುದು ಸಹಜ. ಏಕೆಂದರೆ ಜನ ಆಡುವುದೂ ಹಾಗೆಯೇ, ಮಗಳು ಮಾಡುವುದೂ ಹಾಗೆಯೇ. ಕುಂಬಳಕಾಯಿ ಕಳ್ಳ ಎಂದರೆ ಹೆಗಲು ಮುಟ್ಟಿ ನೋಡಿಕೊಳ್ಳುತ್ತಾರೆ. ಹೊಗಳುಭಟ್ಟರ ಹೊಗಳಿಕೆಗೆ ಉಬ್ಬುವ ಜನಗಳೇ ಜಾಸ್ತಿ !

ಬಡವಿ ಆಡಿದ ಮಾತು ನುಡಿ ನುಡಿಗೆ ಬ್ಯಾಸರ
ಬಡವಿ ಇಟ್ಟವ್ವ ಬನ ಒನದು–ಹೇಳಿದರ
ನುಡಿಗೆ ಬಾಯಿ ಬಿಡತಾರ.

ಇದು ಆರ್ಥಿಕವಾಗಿ ಮುಂದುವರಿಯುತ್ತಿರುವ ಪ್ರಪಂಚ. ಬಲವಿದ್ದವರದೇ ಪ್ರಪಂಚ, ದುಡ್ಡೇ ದೊಡ್ಡಪ್ಪ, ಹಣವಿಲ್ಲದವನು ಹೆಣದಂತೆ. ಬಡವರು ಮಾಡಿದರೆ ವ್ಯಭಿಚಾರ; ಬಲ್ಲಿದರು ಮಾಡಿದರೆ ವ್ಯವಹಾರ. ಬಡವರು, ಆಡುವ ಒಂದೊಂದು ಮಾತುಗಳೂ ಸಹ ಬಲ್ಲಿದರಿಗೆ ಬೇಸರವಾಗುತ್ತದೆ. ಬಡವರು ಆಕಸ್ಮಿಕವಾಗಿ ಏನಾದರೂ ತಪ್ಪು ಮಾತು ಆಡಿದರೆ ಅದನ್ನೂ ಇಡೀ ಊರೇ ಕೇಕೆ ಹೊಡೆಯುತ್ತದೆ. ಅದೇ ಮಾತನ್ನು ಸಾಹುಕಾರರು ಆಡಿದರೆ ಆ ವ್ಯಕ್ತಿಯ ಪ್ರಭಾವದಿಂದ ಅದೊಂದು ವ್ಯವಹಾರವಾಗಿ ಪರಿಣಮಿಸುತ್ತದೆ.

ಮಾತಿಗೆ ಸಂಬಂಧಿಸಿದ ಗಾದೆಗಳು.

ಗಾದೆಗಳು ಜನಪದ ಸಾಹಿತ್ಯದ ಒಂದು ಅವಿಭಾಜ್ಯ ಅಂಗಗಳಾಗಿವೆ. ಗಾದೆಗಳಿಗೆ ಜಾಣ್ಣುಡಿ, ನಾಣ್ಣುಡಿ, ಲೋಕೋಕ್ತಿ, ಮುಂತಾದ ಪರ್ಯಾಯ ಪದಗಳಿವೆ. ಮಾತು ಪ್ರಾರಂಭವಾದಾಗಲೇ ಗಾದೆಗಳೂ ಹುಟ್ಟಿರಬಹುದು! ಆದ್ದರಿಂದ ಗಾದೆಗಳಿಗೂ ಮಾತಿಗೂ ನಿಕಟವಾದ ಸಂಬಂಧವಿದೆ. ಹಿರಿಯರು ಮಾತಿಗೆ ಸಂಬಂಧಿಸಿದಂತೆ ಹಲವಾರು ಗಾದೆಗಳನ್ನು ಸೃಷ್ಟಿಸಿದ್ದಾರೆ. ಕೆಲವು ನೇರ ಪರಿಣಾಮ ಬೀರುವಂತಿವೆ, ಕೆಲವು ಚುಚ್ಚಿ ಹೇಳುವಂತಿವೆ. ಅಂತಹ ಗಾದೆಗಳನ್ನು ಕೆಳಗೆ ಅಕಾರಾದಿಯಾಗಿ ಸಂಗ್ರಹಿಸಿ ಕೊಡಲಾಗಿದೆ.

೧. ಅಯ್ಯಾ ಎಂದರೆ ಸ್ವರ್ಗ; ಎಲವೋ ಎಂದರೆ ನರಕ.
೨. ಅಲ್ಲ ಸಲ್ಲದ ಮಾತಾಡಿ ಹಲ್ಲು ಮುರಿಯ ಬಡಿಸಿಕೊಂಡ.
೩. ಆಗದವರು ಆಡಿಕೊಂಬುದೇ ಲೇಸು.
೪. ಆಡುವುದಕ್ಕಿಂತ ಮಾಡುವುದೇ ಲೇಸು.
೫. ಆಸೆ ಮಾತು ಕೊಟ್ಟು ಭಾಷೆ ತಪ್ಪುವವ ಹೊಲೆಯ.
೬. ಇದ್ದ ಮಾತು ಇದ್ದ ಹಾಗೇ ಹೇಳಿದರೆ ಗುದ್ದಾಟಕ್ಕೆ ಬಂದನಂತೆ.
೭. ಊಟ ತಾನು ಮೆಚ್ಚಬೇಕು; ಮಾತು ಪರರು ಮೆಚ್ಚಬೇಕು.
೮. ಊಟಕ್ಕೆ ಮುಂದಾಗಿರಬೇಕು; ಮಾತಿಗೆ ಹಿಂದಾಗಿರಬೇಕು.
೯. ಊರಿಗೆ ಒಕ್ಕಲಿಗ ಲೇಸು, ನಕ್ಕು ನಗಿಸುವ ನುಡಿ ಲೇಸು.
೧೦. ಒಬ್ಬರಿಗೆ ಕೊಡೋದು ಬ್ಯಾಡ, ಒಂದು ಒಳ್ಳೇ ಮಾತಾದರೂ ಬ್ಯಾಡ್ವೇ?
೧೧. ಓಡಿ ಸಿಕ್ಕ ಬೇಡ, ಆಡಿ ತಪ್ಪ ಬೇಡ.
೧೨. ಕಂಡದ್ದನ್ನಾಡಿದರೆ ಕೆಂಡದಂಥ ಕೋಪ!
೧೩. ಕತ್ತಿಯ ಗಾಯ ಮಾಯಬಹುದು, ಮಾತಿನ ಗಾಯ ಮಾಯದು.
೧೪. ಕತ್ತೆಗೆ ಲತ್ತೆಯ ಪೆಟ್ಟು, ಜಾಣನಿಗೆ ಮಾತಿನ ಪೆಟ್ಟು.
೧೫. ಕುಲಮಂ ನಾಲಿಗೆ ತುಬ್ಬುವವೊಲ್.
೧೬. ಕೈಲಾದವರು ಮಾಡುತ್ತಾರೆ, ಕೈಲಾಗದವರು ಆಡುತ್ತಾರೆ.
೧೭. ಖಂಡಿತವಾದಿ ಲೋಕಕ್ಕೆ ವಿರೋಧಿ.
೧೮. ತಾಳಿದವನು ಬಾಳಿಯಾನು.
೧೯. ನಗುತ್ತಾ ಹೇಳುವವರು ಕೆಡೋಕ್ಕೆ ಹೇಳ್ತಾರೆ; ಬೈಯುತ್ತಾ ಹೇಳುವವರು ಬದುಕೋಕೆ ಹೇಳ್ತಾರೆ.
೨೦. ನಾ ಬಲ್ಲಿದ ಅಂತ ಬಡವರ ಬಾಯಿ ಹೊಡೀಬಾರದು.
೨೧. ನಾಲಿಗೆ ಒಳ್ಳೆಯದಾದರೆ ಊರೆಲ್ಲ ಒಳ್ಳೆಯದು.

೨೨. ನುಡಿದರೆ ಮುತ್ತಿನ ಹಾರದಂತಿರಬೇಕು.

೨೩. ಬಡವನಿಗೆ ನಾಡ ಮಾತ್ಯಾಕೆ?

೨೪. ಬಡವಿ ಆಡಿದ ಮಾತು ನುಡಿನುಡಿಗೂ ಬ್ಯಾಸರ.

೨೫. ಬರಗಾಲದಲ್ಲಿ ಆಡಿದ ಮಾತು, ಕೆರದಲ್ಲಿ ಒಡೆದ ಏಟು ಬೇಗ ಮರೆಯೋಲ್ಲ.

೨೬. ಬಾಯಿ ಬಿಟ್ಟರೆ ಬಣ್ಣಗೇಡು.

೨೭. 'ಮಣ' ಮಾತಿಗಿಂತ 'ಕಣ' ಕೃತಿ ಲೇಸು.

೨೮. ಮರ್ಮವಿಲ್ಲದವನ ಮಾತು ಹೊಸ ಮೊಗೆ ತೂತು.

೨೯. ಮಾಡುವವರು ಆಡುವುದಿಲ್ಲ; ಆಡುವವರು ಮಾಡುವುದಿಲ್ಲ.

೩೦. ಮಾತಿನಿಂದಲೇ ಸ್ವರ್ಗ, ಮಾತಿನಿಂದಲೇ ನರಕ.

೩೧. ಮಾತು ಕಲಿತವನ ಮನೆ ಹಾಳು; ತೋಟ ಮಾಡಿದವನ ಹೊಲ ಹಾಳು.

೩೨. ಮಾತು ಬಲ್ಲವನಿಗೆ ಜಗಳವಿಲ್ಲ.

೩೩. ಮಾತುಗಾರ ಬರಗಾಲದಲ್ಲಿಯೂ ಬದುಕಬಲ್ಲ.

೩೪. ಮಾತು ಆಡಿದರೆ ಹೋಯ್ತು, ಮುತ್ತು ಒಡೆದರೆ ಹೋಯ್ತು.

೩೫. ಮಾತು ಅರಿಯದವ ತೂತು ಗಡಿಗೆಯಂತೆ.

೩೬. ಮಾತು ಬಾರದಿದ್ದರೆ ಸುಮ್ಮನಿರೋನೆ ಜಾಣ.

೩೭. ಮಾತು ಬೆಳ್ಳಿ ಮೌನ ಬಂಗಾರ.

೩೮. ಮಾತೇ ಮುತ್ತು, ಮಾತೇ ಮೃತ್ಯು, ಮಾತೇ ಮಾಣಿಕ್ಯ, ಮಾತೇ ಜ್ಯೋತಿರ್ಲಿಂಗ.

೩೯. ರಸಿಕನಾಡಿದ ಮಾತು ಶಶಿಯುದಿಸಿ ಬಂದಂತೆ.

೪೦. ಹಗಲು ಕಾಡಿನಾಗೆ ಮಾತನಾಡಬೇಡ, ಇರುಳು ಮನೆಯಾಗೆ ಮಾತನಾಡಬೇಡ.

೪೧. ಹಾಡಿದ್ದೇ ಹಾಡೋ ಕಿಸಬಾಯಿ ದಾಸ.

೪೨. ಹೇಳುವುದು ಸುಲಭ, ಮಾಡುವುದು ಕಷ್ಟ.

೪೩. ಹೊತ್ತಿಗೊದಗಿದಾ ಮಾತು ಸತ್ತವನು ಎದ್ದಂತೆ.

ಜಿ. ನಾಗರಾಜ

ಕಾರ್ಯನಿರತ ಭಾರತ ಪ್ರಜಾತಂತ್ರ :

ಒಂದು ಆಂಶಿಕ ನೋಟ*

ಭಾರತ–ಪ್ರಜಾಗಣರಾಜ್ಯ : ನವೆಂಬರ್ 26, 1949ರಂದು ನಮ್ಮ ಸಂವಿಧಾನ ರಚನಾಸಭೆಯಲ್ಲಿ ಪಡೆದುಕೊಂಡು, ಜನವರಿ 26, 1950ರಲಾಗಾಯ್ತು ಕಾರ್ಯ ರೂಪಕ್ಕೆ ಬಂದಿರುವ, ನಮ್ಮ ಭಾರತ ರಾಷ್ಟ್ರದ ಸಂವಿಧಾನ, ತನ್ನ ಪ್ರಸ್ತಾವನೆ (Preamble)ಯಲ್ಲಿ ನಮ್ಮ ರಾಷ್ಟ್ರ, "ಸಾರ್ವಭೌಮ, ಸಮಾಜವಾದಿ, ಜಾತ್ಯಾತೀತ, ಪ್ರಜಾಸತ್ತಾತ್ಮಕ ಗಣರಾಜ್ಯ" ಎಂದು ಘೋಷಿಸಿದೆ. ಮಾತ್ರವಲ್ಲ ನಮ್ಮ ಭಾರತೀಯರಿಗೆ ವಿವಿಧ ರೀತಿಯ ಮೂಲಭೂತಹಕ್ಕು, ಸ್ವಾತಂತ್ರ್ಯಸಮಾನತೆಗಳು ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಸ್ವಾತಂತ್ರ್ಯಗಳು ಕೂಡಿ ಕೊಡ ಮಾಡಲ್ಪಟ್ಟಿದೆ. ಸಂಪೂರ್ಣವಾಗಿ ನ್ಯಾಯಬದ್ಧವಾಗಿ ಸಂರಕ್ಷಿಸಲಾಗಿದೆ. ಪ್ರಜಾಸಾರ್ವ ಭೌಮತೆಯನ್ನು ಎತ್ತಿಹಿಡಿದು ಸಂರಕ್ಷಿಸುವ ಮಾರ್ಗ ಸೂಚಿಯು ನಮ್ಮ ಸಂವಿಧಾನತೆ ಯಲ್ಲಿ ನಿರೂಪಿಸಲಾಗಿದೆ.

ಭಾರತ ಒಂದು ವೈವಿಧ್ಯತೆಯರಾಷ್ಟ್ರ–ಒಕ್ಕೂಟ ರಚನೆಯಲ್ಲಿ ಮೂಲ ತತ್ವ : ನಮ್ಮ ದೇಶ, ಒಂದು ವೈವಿಧ್ಯತೆಯ ಲಕ್ಷಣಗಳನ್ನೊಳಗೊಂಡ ರಾಷ್ಟ್ರ. ಧರ್ಮ, ಸಂಸ್ಕೃತಿ, ಭಾಷೆ, ಜನಾಂಗ ಮುಂತಾದ ಸಾಮಾಜಿಕ, ಧಾರ್ಮಿಕ ಹಾಗೂ ಆರ್ಥಿಕ ವೈವಿಧ್ಯತೆಯನ್ನು ಪಡೆದುಕೊಂಡ ರಾಷ್ಟ್ರ. ಭೌಗೋಳಿಕ ಪರಿಸರ ಲಕ್ಷಣ ಗಳಿಂದಲೂ, ರಾಜಕೀಯ ವಿಭಿನ್ನತೆಗಳಿಂದಲೂ ವಿವಿಧ ರೀತಿಯ ರೂಪ ಲಕ್ಷಣಗಳನ್ನು ನಮ್ಮ ರಾಷ್ಟ್ರ ಪಡೆದುಕೊಂಡಿದೆ. ಐತಿಹಾಸಿಕವಾಗಿಯೂ ಈ ರೀತಿಯ ವೈವಿಧ್ಯತೆಗೆ ಸಾಕಷ್ಟು ಪುರಾವೆಗಳು ಕಾಣಸಿಗುತ್ತವೆ. ಹಾಗಾಗಿ, ಸಂವಿಧಾನ ಕರ್ತಗಳ ಮೂಲ ಕರ್ತವ್ಯ–ವೈವಿಧ್ಯತೆಯಲ್ಲೂ ಏಕತೆ, ಐಕ್ಯತೆ, ಒಗ್ಗಟ್ಟು–ಸಮಗ್ರ ರೀತಿಯಲ್ಲಿ ಉಂಟು

---

*ಕರ್ನಾಟಕ ರಾಜ್ಯದ ಲೋಕಸಭಾ ಕ್ಷೇತ್ರದ ಚುನಾವಣೆ–ಡಿಸೆಂಬರ್ 24, 1984–ಅಂಕಿ–ಅಂಶಗಳ ನೋಟದ ಆಧಾರದ ಮೇಲೆ.

ಮಾಡುವುದು ಸಂವಿಧಾನದ ಪ್ರಸ್ತಾವನೆಯಲ್ಲಿ ಭ್ರಾತೃತ್ವ ಮನೋಭಾವನೆ ಉಂಟು ಮಾಡುವುದು ಮಾತ್ರವಲ್ಲ, ರಾಷ್ಟ್ರದ ಐಕ್ಯತೆ, ಒಗ್ಗಟ್ಟಿಗೆ ಆದ್ಯ ಪ್ರಾಶಸ್ತ್ಯ ನೀಡಲಾಗಿದೆ. ಆದ್ದರಿಂದ ಸಂವಿಧಾನದ ಪ್ರಥಮ ಭಾಗ, ಮೊದಲ ವಿಧಿಯಲ್ಲಿ "ಭಾರತ, ಒಂದು ಒಕ್ಕೂಟರಾಷ್ಟ್ರ"ಎಂದು ಸಾರಲಾಗಿದೆ. ಪ್ರಸ್ತುತ ಇಪ್ಪತ್ತೆರಡು ಸ್ವಾಯತ್ತ ರಾಜ್ಯಾಂಗ ಗಳು, ಹಾಗೂ ಒಂಬತ್ತು ಕೇಂದ್ರಾಡಳಿತ ಪ್ರದೇಶಗಳು ನಮ್ಮ ಒಕ್ಕೂಟ ರಾಷ್ಟ್ರದ ಅವಿಭಾಜ್ಯ ಅಂಗಗಳಾಗಿವೆ. ಒಕ್ಕೂಟದ ಸದಸ್ಯ ಭಾಗಗಳಾಗಿವೆ. ಪ್ರತಿಯೊಂದು ಸದಸ್ಯಾಂಗಗಳಿಗೂ ಸಂವಿಧಾನದತ್ತವಾಗಿ ಸಕಲರೀತಿಯ, ರಾಜಕೀಯ, ಆರ್ಥಿಕ, ಆಡಳಿತ, ಪ್ರಾದೇಶಿಕ ಸ್ವಾತಂತ್ರ, ಹಕ್ಕುಗಳನ್ನು ಕೊಡಲ್ಪಟ್ಟಿದೆ. ಮಾತ್ರವಲ್ಲ ಅದನ್ನು ಸಂವಿಧಾನಿಕವಾಗಿಯೇ ಅನುಭವಿಸಿಕೊಂಡು, ಸ್ವಾತಂತ್ರವಾಗಿ, ಹೋಗುವ ಹಕ್ಕು ಈ ಎಲ್ಲ ಪ್ರಾಂತ್ಯಗಳಿಗಿವೆ. ವಿಭಿನ್ನ ರೀತಿಯ ವೈವಿಧ್ಯತೆಯನ್ನು ಮರೆಮಾಚಿ, ಏಕತೆ, ಒಗ್ಗಟ್ಟು ಉಂಟುಮಾಡಿ ನಮ್ಮ ರಾಷ್ಟ್ರ ಒಂದು ಬಲಿಷ್ಠ ರಾಷ್ಟ್ರ ಎಂಬುದಾಗಿ ಮಾಡುವುದೇ ಈ ಒಕ್ಕೂಟ ರಚನೆಯ ಮೂಲ ಧ್ಯೇಯ.

ಪ್ರಜಾತಂತ್ರ; ಒಕ್ಕೂಟ ರಚನೆಯ, ತತ್ವ, ಧೋರಣೆ ಫಲಪ್ರದ ಗೊಳಿಸಲು, ಪ್ರಾತಿನಿಧ್ಯ, ಚುನಾಯಿತ ಸರ್ಕಾರ ಮೂಲ ಪ್ರಧಾನ ವಾದುದು : ಪ್ರಜಾಗಣರಾಜ್ಯ ಎಂದ ಮೇಲೆ, ನಮ್ಮ ರಾಷ್ಟ್ರದಲ್ಲಿ, ಸಂವಿಧಾನದಲ್ಲಿ, ರಾಜಪ್ರಭುತ್ವ, ಅರಸು ಆಳ್ವಿಕೆ, ವಂಶಪಾರಂಪರ್ಯ ರಾಜ್ಯ ಭಾರಕ್ಕೆ ಅವಕಾಶ ಮನ್ನಣೆ ಇಲ್ಲ. ನಮ್ಮದು ಸಂಸದೀಯ ಪ್ರಜಾಸರ್ಕಾರ, ಪರೋಕ್ಷ ಪ್ರಜಾಪ್ರಭುತ್ವ, ಪ್ರಾತಿನಿಧ್ಯ ಸರ್ಕಾರ. ನಮ್ಮಂಥಹ ಬೃಹತ್ ರಾಷ್ಟ್ರದಲ್ಲಿ, ಒಂದು ಉಪಖಂಡ ಎಂದೆನಿಸಿಕೊಳ್ಳುವ ರಾಷ್ಟ್ರದಲ್ಲಿ, ವೈವಿಧ್ಯತೆಯೇ ಪ್ರಬಲ ಲಕ್ಷಣವಾಗಿರುವ ರಾಷ್ಟ್ರ ದಲ್ಲಿ, ನೇರ, ಪ್ರತ್ಯಕ್ಷ ಪ್ರಜಾಪ್ರಭುತ್ವಕ್ಕೆ ಸುಲಭ ಸಾಧ್ಯ ಅವಕಾಶಗಳು ಇಲ್ಲ. ಹಾಗಾಗಿ, ಪ್ರಜಾಸರ್ಕಾರ, ಪ್ರಜೆಯೇ ಸಮ ರೀತಿಯಲ್ಲಿ ಸಕಲ ವಿಚಾರಗಳಿಗೂ, ಸಾರ್ವಭೌಮ ಎಂದರೂ, ಪ್ರಜೆಗೆ ನೇರ ಸಹಭಾಗಿತ್ವ, ಪ್ರತ್ಯಕ್ಷ, ವ್ಯಕ್ತಿಶಃ, ಕಾರ್ಯಾಡಳಿತ ನಮ್ಮಲ್ಲಿ ಸಾಧ್ಯವಾಗಿದೆ. ಆದ್ದರಿಂದ ಅವನಿಂದ ಆರಿಸಿ, ಚುನಾಯಿತ, ಪ್ರತಿನಿಧಿಗಳು ರಾಷ್ಟ್ರದ ವಿವಿಧ ಅಧಿಕಾರ ಸ್ಥಾನವನ್ನು ಅಲಂಕರಿಸಿ, ಅಧಿಕಾರ ನಡೆಸ ಬೇಕಾಗುತ್ತದೆ. ಪ್ರಜೆಗೆ ಹೊಣೆಗಾರನಾಗಿ, ಪ್ರಜೆಗಳ ವಿಶ್ವಾಸ ಬೆಂಬಲಿತನಾಗಿ, ನಡೆದುಕೊಳ್ಳಬೇಕಾಗುತ್ತದೆ. ಚುನಾವಣೆ, ಮತ್ತು ಪ್ರಾತಿನಿಧ್ಯ ಪ್ರಜಾರಾಜ್ಯದ, ಗಣತಂತ್ರದ ಆಧಾರ ಸ್ಥಂಬಗಳು, ಅಧಿಕಾರ ಮೂಲಗಳು, ಅಂತೆಯೇ ನಮ್ಮ ರಾಷ್ಟ್ರದ ರಾಷ್ಟ್ರಪತಿ, ಉಪರಾಷ್ಟ್ರಪತಿ, ಪ್ರಧಾನಮಂತ್ರಿಯನ್ನೊಳಗೊಂಡ ಮಂತ್ರಿ ಮಂಡಳ, ಹಾಗೂ ಪ್ರಜಾಸಾರ್ವಭೌಮ ಪ್ರತಿಬಿಂಬಿತವಾದ ರಾಷ್ಟ್ರದ ಸಂಸತ್–ಅದರ ಎರಡು ಮನೆಗಳು ಕೂಡಿ, ಮತ್ತು ಒಕ್ಕೂಟದ ಸದಸ್ಯರಾಜ್ಯಗಳ ಸರ್ಕಾರಗಳ ಶಾಸನಸಭೆಗೂ, ನೇರ ಯ ಪರೋಕ್ಷ ಚುನಾವಣೆ ನಡೆಯಬೇಕು. ಪ್ರಜೆಗಳು ತಮ್ಮ ಅಭ್ಯರ್ಥಿ ಯನ್ನು ನ್ಯಾಯಬದ್ಧವಾಗಿ ಆರಿಸಿ ಅಧಿಕಾರ ವಹಿಸಬೇಕು ಎಂದು ಸಂವಿಧಾನ

ಘೋಷಿಸುತ್ತದೆ. ಚುನಾವಣೆ, ಪ್ರಾತಿನಿಧ್ಯದ, ಮುಖ್ಯ ಉದ್ದೇಶ ಪ್ರಜಾಸ್ವಾತಂತ್ರ್ಯ, ಹಕ್ಕು ಮತ್ತು ಸಾರ್ವಭೌಮತೆಯನ್ನು ಸಂಸ್ಥಾಪಿಸಿ, ಪ್ರಚುರ ಪಡಿಸುವುದು. ಪ್ರಜಾ ಸ್ವಾತಂತ್ರ್ಯತೆ ಹಾಗೂ ಒಕ್ಕೂಟ ಸದಸ್ಯರ ಸ್ವಾತಂತ್ರ್ಯತೆ, ಕಾಪಾಡಿಕೊಳ್ಳು ವಂತಾದ್ದು–ಮುಖ್ಯ ಹೊಣೆ.

ಆಗಲೇ ತಿಳಿಸಿದಂತೆ ನಮ್ಮ ರಾಷ್ಟ್ರ ಕೇವಲ ಪ್ರಜಾರಾಜ್ಯ ಮಾತ್ರವಲ್ಲ. ಜೊತೆ ಯಲ್ಲಿ ಒಕ್ಕೂಟರಾಷ್ಟ್ರ–ಸಂಯುಕ್ತ ರಾಷ್ಟ್ರ ಮಾದರಿಯಲ್ಲಿವುದು. ಹಾಗಾಗಿ ಒಂದು ಕಡೆಯಲ್ಲಿ ಪ್ರಜಾಸ್ವಾತಂತ್ರ್ಯ, ಹಕ್ಕು ಮತ್ತು ಸಾರ್ವಭೌಮತೆ ಕಾಪಾಡುವ ಕಾಳಜಿ, ಆದರೆ, ಇನ್ನೊಂದು ಕಡೆ ಪ್ರಜೆಗಳನ್ನೊಳಗೂಡಿದ ಒಕ್ಕೂಟರಾಷ್ಟ್ರ ಸದಸ್ಯದ ಭಾಗಗಳ ಹಕ್ಕು, ಸ್ವಾತಂತ್ರ್ಯತೆ, ಸಾರ್ವಭೌಮತೆ ಸಂರಕ್ಷಿಸುವುದು ಇನ್ನೊಂದು ದೊಡ್ಡ ಹೊಣೆಗಾರಿಕೆ. ಈ ಉದ್ದೇಶಕ್ಕಾಗಿಯೇ ನಮ್ಮ ಸಂವಿಧಾನ ರಚನೆಯಲ್ಲಿ, ರಾಷ್ಟ್ರಮಟ್ಟದಲ್ಲಿ ದ್ವಿಸದನಾ ಶಾಸಕಾಂಗವಾಗಿ, 'ಸಂಸತ್' ಇದೆ. ಸಂವಿಧಾನದ ಐದನೆಯ ಭಾಗ, ಎರಡನೆಯ ಅಧ್ಯಾಯ, 79ನೆಯ ವಿಧಿಯಲ್ಲಿ ಉಲ್ಲೇಖವಾದಂತೆ, ರಾಷ್ಟ್ರಪತಿಯನ್ನೊಳಗೊಂಡ ದ್ವಿಸದನ ಶಾಸಕಾಂಗವಾಗಿ 'ಸಂಸತ್' ಒಂದು ಕೇಂದ್ರ ಮಟ್ಟದಲ್ಲಿ ಇರಬೇಕು. ಮೇಲ್ಮನೆಯಾಗಿ ರಾಜ್ಯ ಸಭೆಯು (Council of States) ಹಾಗೂ ಕೆಳಮನೆಯಾಗಿ ಲೋಕಸಭೆಯು (House of the People) ಇರಬೇಕು ಎಂದು ಪ್ರಕಟಪಡಿಸಿದೆ. ಒಕ್ಕೂಟ ಹಾಗೂ ಪ್ರಜಾರಾಜ್ಯವಾದುದರಿಂದ, ರಾಜ್ಯ ಸಭೆ–ಒಕ್ಕೂಟ ರಾಷ್ಟ್ರದ ಸದಸ್ಯ ಪ್ರಾಂತ್ಯಗಳನ್ನು ಪ್ರತಿನಿಧಿಸಿದರೆ, ಲೋಕಸಭೆ, ಪ್ರಜಾ ಪ್ರಾತಿನಿಧ್ಯ ಸಭೆಯಾಗಿ, ಪ್ರಜಾಸಾರ್ವಭೌಮತೆಯನ್ನು ಪ್ರತಿನಿಧಿಸಿ, ಪ್ರತಿಬಿಂಬಿಸುತ್ತದೆ. ಪ್ರಜಾಸತ್ತಾತ್ಮಕ ರಾಷ್ಟ್ರಗಳಲ್ಲಿ ಪ್ರಜಾಪ್ರಾತಿನಿಧ್ಯಮ ಸಭೆಯಾದ ಶಾಸಕಾಂಗವೆ ಸಾರ್ವಭೌಮ ಅಂದರೆ ನಮ್ಮ ರಾಷ್ಟ್ರದ ಸಂಸತ್– ಅದರಲ್ಲೂ, ಲೋಕಸಭೆಯೇ ಸಾರ್ವಭೌಮವಾದುದು–ಸ್ಥಾನ, ಅಂತಸ್ತು, ಅಧಿಕಾರ, ರಾಯಭಾರ, ಇತ್ಯಾದಿ ವಿಷಯಗಳಲ್ಲಿ ಪ್ರಜಾರಾಜ್ಯದಲ್ಲಿ ಪ್ರಾತಿನಿಧ್ಯಸರ್ಕಾರ ಹೊಣೆಗಾರ ಸರ್ಕಾರ ಇರಬೇಕು. ಎಂದರೆ, ಪ್ರಜೆಗಳಿಗೆ, ಸಂಸತ್ತಿನ ಮುಖಾಂತರ, ಮಾಧ್ಯಮದಿಂದ–ಅಂದರೆ, ಸಂಸತ್ತಿಗೆ ನೇರವಾಗಿ, ಪ್ರಜೆಗಳಿಗೆ ಪರೋಕ್ಷವಾಗಿ, ಸರ್ಕಾರ ಹೊಣೆಗಾರ ಇರಬೇಕು ಎನ್ನುವುದು ಸಂವಿಧಾನದ ವಿಧಿ, ಸಂಸದೀಯ ಸರ್ಕಾರದ ಲಕ್ಷಣ. ಎಂದಿಗೆ ಸರ್ಕಾರ ತನ್ನ ಹೊಣೆ ಗಾರಿಕೆ ಮೀರಿ ನಡೆಯುತ್ತಿದೆ, ಪ್ರಜೆಗಳ ವಿಶ್ವಾಸ ಬೆಂಬಲ ಕಳಕೊಳ್ಳುತ್ತದೆ, ಅಂದು ಸರ್ಕಾರ ರಾಜೀನಾಮೆ ಕೊಡಬೇಕು ಇಲ್ಲ; ಅಂತಹ ಬೇಜವಾಬ್ದಾರಿ, ವಿಶ್ವಾಸನಷ್ಟ ವಾದ ಸರ್ಕಾರವನ್ನು ಪ್ರಜೆಗಳು–ಸಂಸತ್–ಕಿತ್ತೊಗೆಯಬಹುದು, ನೂತನ ಸರ್ಕಾರ ರಚಿಸಬಹುದು. ಇದನ್ನೆಲ್ಲ ನಿರ್ವಹಿಸುವ ಅಧಿಕಾರ ಪ್ರಜೆಗಳಿಗೆ ಇದ್ದರೂ ಪ್ರಧಾನ ವಾಗಿ ಸಂಸತ್ತಿಗೆ, ನಿರ್ದಿಷ್ಟವಾಗಿ, ಲೋಕಸಭೆಗೆ ಇದೆ.

ಸಂಸತ್ ಚುನಾವಣೆ ಮುಖೇನ ರಚಿತವಾಗಬೇಕು: ಸಂವಿಧಾನದ ಎಂಬತ್ತೊಂದನೆಯ ವಿಧಿ ಲೋಕಸಭೆ, ರಾಜ್ಯಸಭೆ ರಚನೆಬಗ್ಗೆ ತಿಳಿಸುತ್ತದೆ. ರಾಜ್ಯಸಭೆ

ಪರೋಕ್ಷವಾಗಿ, ರಾಜ್ಯಗಳ ಶಾಸನಾಸಭಾ ಸದಸ್ಯರ ಮುಖಾಂತರ ಚುನಾಯಿತವಾದರೆ, ಲೋಕಸಭೆ ಪ್ರಜೆಗಳಿಂದ ನೇರವಾಗಿ ಚುನಾಯಿತವಾಗುತ್ತದೆ. ರಾಜ್ಯಸಭೆಯಲ್ಲಿ ಇನ್ನೂರಐವತ್ತು ಮಂದಿ ಸದಸ್ಯಬಲಕ್ಕೆ ಮನ್ನಣೆ ಇದ್ದು, ಇದರಲ್ಲಿ 238 ಮಂದಿ ಚುನಾವಣಾ ಮುಖಾಂತರವೂ, ಉಳಿದ 12ಮಂದಿ ಕಲಾ, ವಿಜ್ಞಾನ, ಸಾಹಿತ್ಯ ಮುಂತಾದ ಕ್ಷೇತ್ರಗಳಲ್ಲೂ ಅಗ್ರಗಣ್ಯ ವ್ಯಕ್ತಿಗಳನ್ನು ರಾಷ್ಟ್ರಪತಿಯವರು ನೇಮಕ ಮಾಡುತ್ತಾರೆ. ರಾಜ್ಯಸಭೆಯ ಸದಸ್ಯಬಲ ನಿಗದಿತವಾದುದು, ಬದಲಾಯಿಸಲು, ವ್ಯತ್ಯಾಸಗೊಳಿಸಲು ಅಸಾಧ್ಯವಾದುದು. ರಾಜ್ಯಸಭೆಯ ಕಾಲಾವಧಿ ಸಹ ಆರು ವರ್ಷಕ್ಕೆ ನಿಗದಿತವಾಗಿದ್ದರೂ, ಮೂರನೆಯ ಒಂದಂಶ ಸದಸ್ಯರು ಪ್ರತಿ ಎರಡುವರ್ಷಕ್ಕೆ ಒಮ್ಮೆ ನಿವೃತ್ತರಾಗುತ್ತಾ ಬಂದು, ಖಾಲಿಯಾದ ಸದಸ್ಯಸ್ಥಾನಕ್ಕೆ ಮರುಚುನಾವಣೆ-ಆಯ್ಕೆನಡೆದು, ನವೀಕರಣ, ಪರಿಷ್ಕರಣ ಆಗುತ್ತಾ ಬರುತ್ತಿದ್ದು, ಶಾಶ್ವತ ಹಾಗೂ ನಿರಂತರವಾಗಿ ಮುಂದುವರಿದುಕೊಂಡುಬರುವ ಸಭೆಯಾಗಿದೆ.

ಲೋಕಸಭೆ–ಜನಸಂಖ್ಯಾ ಬಲಆಧಾರಿತ – ವಿಸರ್ಜನೆಗೆ ಒಳಪಡುವಂತಹದು– ಲೋಕಸಭೆ ನೇರವಾಗಿ ಪ್ರಜೆಗಳನ್ನು ಪ್ರತಿನಿಧಿಸುವುದರಿಂದ, ಇದು ಜನಸಂಖ್ಯಾಬಲವನ್ನು ಆಧರಿಸಿರುವಂಥಾದ್ದು. ರಾಷ್ಟ್ರದ ಜನಸಂಖ್ಯೆ ಏರಿಳಿತವಾದಾಗಲೆಲ್ಲ ಸದಸ್ಯ ಸಂಖ್ಯಾಬಲ ವ್ಯತ್ಯಾಸವಾಗುತ್ತಾ ಬರುತ್ತದೆ. ಸಂವಿಧಾನ ಪ್ರಾರಂಭವಾದ ಕಾಲ ಸಮಯದಲ್ಲೂ 500 ಮಂದಿಗೆ ಮನ್ನಣೆ ಇದ್ದರೆ–ಈಗ ಇತ್ತೀಚಿನ ಸಂವಿಧಾನ ತಿದ್ದುಪಡಿ ಸಂಖ್ಯೆ 31, ಮೇ 9, 1973ರ ಪ್ರಕಾರ, 547 ಮಂದಿಗೆ ಅವಕಾಶ ಇದೆ. ಇದರಲ್ಲೂ 525 ಮಂದಿ, 22 ಸ್ವಾಯತ್ತ ರಾಜ್ಯಗಳಿಂದಲೂ 20 ಮಂದಿ ಕೇಂದ್ರಾಡಳಿತ ಪ್ರದೇಶಗಳಿಂದಲೂ, ಉಳಿದ 2 ಮಂದಿ– ಸಂವಿಧಾನ ವಿಧಿ 331 ರಂತೆ ಒಂದು ವೇಳೆ ಕ್ರಮಬದ್ಧ ಚುನಾಯಿತರಾಗಿ ಬರಲು ಸಾಧ್ಯವಿಲ್ಲದಾಗ ಆಂಗ್ಲೋ– ಇಂಡಿಯನ್ ಮತದಿಂದ, ರಾಷ್ಟ್ರಪತಿಯವರಿಂದ ನೇಮಕಗೊಂಡವರು ಆಗಿರುತ್ತಾರೆ. ಜನಸಂಖ್ಯೆ, ಸಂವಿಧಾನ ಕಾರ್ಯರಂಭ ಮಾಡಿದ ಹೊತ್ತಿನಲ್ಲೂ ಸುಮಾರು 40 ಕೋಟಿ ಇದ್ದರೆ– 1981ರ ಜನಗಣತಿ ರೀತ್ಯಾ–68 ಕೋಟಿ ಮೀರಿ ಜನಸಂಖ್ಯೆ ಹೆಚ್ಚಳವಾಗಿದೆ. ಸಂವಿಧಾನ ಲೆಕ್ಕಚಾರ ರೀತ್ಯ, ಹತ್ತು ವರ್ಷಕ್ಕೊಮ್ಮೆ ನಡೆಯುವ ರಾಷ್ಟ್ರಜನಗಣತಿ ರೀತ್ಯ– ಏನು ಅಂಕೆ ಸಂಖ್ಯೆ, ಅಂತಿಮವಾಗಿ ಕೊಡುತ್ತದೆ, ಅದಕ್ಕೆ ಹೊಂದಿಕೊಂಡು ಲೋಕಸಭಾಸದಸ್ಯಬಲ ವ್ಯತ್ಯಾಸಗೊಳಿಸಬೇಕು, ಹೆಚ್ಚುವರಿ ಜನಬಲಕ್ಕೆ ಪ್ರಾತಿನಿಧ್ಯ– ನೂತನವಾಗಿ ಕೊಡುವಂತೆ ಶಾಸನ ಕ್ರಮಮಾಡಬೇಕು ಎಂದು ನಿರ್ಧರಿಸುತ್ತದೆ. ಹಾಗಾಗಿ, 1973ರ ತಿದ್ದುಪಡಿ ಮುಖಾಂತರ 525 ಆಗ ಇದ್ದ ಸದಸ್ಯ ಬಲವನ್ನು 545ಕ್ಕೆ ಏರಿಸಲು–1971ರ ಜನಗಣತಿ ಆಧಾರದ ಮೇಲೆ ಅವಕಾಶ ಮಾಡಿಕೊಟ್ಟಿತು. ಆದರೆ ಈಗ ಹೆಚ್ಚಳವಾದ ಸಂಖ್ಯೆ–ಇನ್ನು ಮುಂಬರುವ 2000 ಇಸವಿವರೆಗೂ ಸ್ಥಗಿತವಾಗಿ ಮುಂದುವರೆದು ಹೋಗುತ್ತದೆ ಎಂದು ಸಂವಿಧಾನದ ತೀರ್ಮಾನ. 2000 ಇಸವಿಯ ಅನಂತರ ಎಂದು

ಪ್ರಥಮವಾಗಿ ಜನಗಣತಿ ನಡೆಯುತ್ತದೆ, ಅದು ಏನು ತೀರ್ಮಾನ ಕೊಡುತ್ತದೆ, ಅದಕ್ಕೆ ಹೊಂದಿಕೊಂಡು ಲೋಕಸಭಾ ಸದಸ್ಯಬಲವನ್ನು ವ್ಯತ್ಯಾಸ ಗೊಳಿಸಬಹುದು ಎಂದು ನಿರ್ಧರಿಸಿದೆ. ಈ ರೀತಿ ಹೆಚ್ಚಳವಾದ 545 ಮಂದಿ ಸದಸ್ಯಬಲವನ್ನು ಪ್ರಥಮವಾಗಿ 6ನೇ ಲೋಕಸಭೆ, 1977 ಮಾರ್ಚ್ ಚುನಾವಣಾ ಮುಖೇನ ಪಡೆದುಕೊಳ್ಳುವ ಅವಕಾಶ ಸಿಕ್ಕಿತು. ಅಂದರೆ ಜರೀ, ಎಂದೂ ಇದ್ದು ಮುನ್ನಡೆಯುತ್ತಿರುವ ಜನಾಂಗಕ್ಕೆ ಪ್ರಾತಿನಿಧ್ಯ ಸಿಗುವುದು ಮಾತ್ರವಲ್ಲ, ನೂತನವಾಗಿ ಸೇರ್ಪಡೆಯಾಗುತ್ತಿರುವ ಯುವಪೀಳಿಗೆಗೂ ಪ್ರಾತಿನಿಧ್ಯ ಸಿಗುತ್ತಾ ಹೋಗುತ್ತಿರಬೇಕೆನ್ನುವುದು ಪ್ರಜಾಪ್ರಾತಿನಿಧ್ಯ ಸರ್ಕಾರದ ತತ್ವ, ತತ್ಪರಿಣಾಮ ಲೋಕಸಭಾ ಸದಸ್ಯಬಲ ನವೀಕರಣ.

ಜನಸಂಖ್ಯೆ ಆಧಾರ ಎಂದ ಮೇಲೆ ಕನಿಷ್ಠ ಗರಿಷ್ಠ ಇಂತಿಷ್ಟು ಜನಸಂಖ್ಯೆಗೆ ಕೊನೆ ಪಕ್ಷ ಒಬ್ಬ ಪ್ರತಿನಿಧಿ ಲೋಕಸಭೆಯಲ್ಲಿರಬೇಕು ಎಂಬುದು ಸಂವಿಧಾನದ ತೀರ್ಮಾನ, ಮಾತ್ರವಲ್ಲ, ಪ್ರತಿಯೊಂದು ರಾಜ್ಯದಿಂದಲೂ, ಪ್ರದೇಶದಿಂದಲೂ ಕೊನೆಯಪಕ್ಷ ಒಂದು ಅಭ್ಯರ್ಥಿಯಾದರೂ ಇರಬೇಕೆನ್ನುವುದು ಇನ್ನೊಂದು ನಿಯಮ. ಸುಮಾರು 5,00,000 ದಿಂದ 7,50,000 ಜನತೆಗೆ ಒಬ್ಬ ಪ್ರತಿನಿಧಿಯಂತೆ ಲೋಕಸಭೆಯಲ್ಲಿ ವ್ಯವಸ್ಥೆಗೊಳಿಸಲಾಗಿದೆ. ರಾಜ್ಯದ ಸದಸ್ಯರುಗಳನ್ನು ಚುನಾವಣಾ ಮುಖೇನ, ಭೌಗೋಳಿಕ ಪ್ರಾದೇಶಿಕ ಕ್ಷೇತ್ರಾನುಸಾರ ಆರಿಸಬೇಕೆಂದು ಸಂವಿಧಾನವೇ ತೀರ್ಮಾನಿಸಿದರೆ, ಕೇಂದ್ರಾಡಳಿತ ಪ್ರದೇಶದ ಅಭ್ಯರ್ಥಿಗಳನ್ನು ಸಂಸತ್ತಿನ ಕಾನೂನು ತೀರ್ಮಾನಿಸಬೇಕೆಂದು ಹೇಳುತ್ತದೆ. ಸದಸ್ಯರುಗಳನ್ನು ಏಕಮತ ಹಾಗೂ ನೇರಮತ–ಗುಹ್ಯಮತದಾನದ ಮುಖಾಂತರ, ಪ್ರಾದೇಶಿಕ ಕ್ಷೇತ್ರಾನುಸರಣೆ ರೀತ್ಯ ಆರಿಸಬೇಕು. ಲೋಕಸಭಾಕ್ಷೇತ್ರಗಳನ್ನು ರಚಿಸಬೇಕು, ನಿಷ್ಕರ್ಷಿಸಬೇಕು, ಹಾಗೆ ನಿಷ್ಕರ್ಷಿಸುವಾಗ, ಇಡೀ ರಾಷ್ಟ್ರಾದ್ಯಂತ ಏಕರೂಪತೆ, ನಿಯಮಾನುಸರಣೆ ಇರಬೇಕು, ಪ್ರಜಾಸಂಖ್ಯೆಗೂ, ಕ್ಷೇತ್ರವಿಸ್ತೀರ್ಣಕ್ಕೂ ಆಯಾಯ ರಾಜ್ಯದಲ್ಲಿ ಮಾತ್ರವಲ್ಲ, ಇಡೀ ರಾಷ್ಟ್ರದಾದ್ಯಂತ ಒಂದೇ ಕ್ರಮ, ನಿಯಮ, ಏಕರೂಪತೆ ಪಾಲಿಸಿಕೊಂಡು ಹೋಗಬೇಕು ಎಂದು ಸಂವಿಧಾನವೇ ತೀರ್ಮಾನ ಮಾಡಿದೆ. ಕ್ಷೇತ್ರ ಹಂಚಿಕೆಯಲ್ಲಿ ಜನಸಂಖ್ಯಾ ಏರಿಳಿತ ಹೊಂದಿಕೊಂಡು ಹೋಗಬೇಕು. ಸಂವಿಧಾನ ವಿಧಿ 325ರಂತೆ, ಮಿಗಿಲಾಗಿ ಎಲ್ಲರಿಗೂ ಎಲ್ಲರೂಪದ ಜನರಿಗೂ ಒಂದೇ ಏಕೈಕಮತಕ್ಷೇತ್ರ (Single general electorate), ಬೇರೆಬೇರೆಯಾಗಿಯಲ್ಲ–ಕಾರಣ ಪ್ರಜಾಪ್ರಭುತ್ವ ಸಮಾನತೆ, ಏಕತೆಗೆ ಪ್ರಾಶಸ್ತ್ಯ ಇದು ಬ್ರಿಟಿಷರ ಕಾಲದ ಬೇರೆಬೇರೆ ಮತಕ್ಷೇತ್ರಪದ್ಧತಿ (Separate electorate)ಗೆ ವಿರುದ್ಧವಾದ, ಯಾ ರದ್ದುಪಡಿಸಿದ ಕ್ರಮ. ಆದರೂ, ಸಂವಿಧಾನದ ವಿಧಿ 332 ರಂತೆ ಅನುಸೂಚಿತ ಜಾತಿ, ಪಂಗಡ, ವರ್ಗದವರಿಗೆ ಮಾತ್ರ ಮೀಸಲು ಮತಕ್ಷೇತ್ರ, ಸಮಾನ ಮತಪಟ್ಟಿ ಎಲ್ಲರಿಗೂ ಅನ್ವಯವಾಗುವಂತೆ. ಇದು ನಮ್ಮ ಸಂವಿಧಾನದ

ಉತ್ಕೃಷ್ಟ ಲಕ್ಷಣವನ್ನು ಎತ್ತಿತೋರಿಸುತ್ತದೆ ಮಾತ್ರವಲ್ಲ, ಸಮಾನತೆ ಹಕ್ಕನ್ನು ಕಾರ್ಯರೂಪಕ್ಕೆ ತರುವ ಸಾಧನವೆಂದು ತಿಳಿಯಪಡಿಸುತ್ತದೆ.

ಚುನಾವಣಕ್ರಮ-ನಿಯಮ, ಪದ್ಧತಿಗಳು : ಹಾಗೆಯೇ, ಚುನಾವಣಾ ಕ್ರಮ ಪದ್ಧತಿಯ ಬಗ್ಗೆ ಸಂವಿಧಾನ ಸವಿವರವಾಗಿ ಸ್ಪಷ್ಟವಾಗಿ ನಿರ್ಧರಿಸಿದೆ. ಇದು ಒಂದು ವಿಶೇಷದಸಂಗತಿ ನಮ್ಮ ಸಂವಿಧಾನದ್ದು-ಸಂವಿಧಾನದ ಹದಿನೈದನೇ ಭಾಗ-324ನೇ ವಿಧಿಯಿಂದ 329ನೇ ವಿಧಿವರೆಗೆ ಚುನಾವಣೆ ವಿಷಯಕ್ಕೆ ಸಂಬಂಧಿಸಿದ ವಿವರಗಳಿವೆ. ಪ್ರಜಾಪ್ರಭುತ್ವದಲ್ಲಿ ಮುಕ್ತವಾದ, ನ್ಯಾಯಬದ್ಧವಾದ, ನಿಷ್ಪಕ್ಷಪಾತ ಚುನಾವಣೆಗೆ ಮಹತ್ವ, ಶಾಸನ ನಿಯಮಾನುಬಂಧ. ಹಾಗೆಯೇ, ಚುನಾವಣೆ “ಸಾಮೂಹಿಕ ವಯಸ್ಕಮತದಾನಪದ್ಧತಿ” ಮೇಲೆ ನಡೆದರೆ ಪ್ರಜಾಪ್ರಭುತ್ವದ ಮೂಲತತ್ವಕ್ಕೆ ಬೆಲೆ, ಪ್ರಜಾತಂತ್ರ ಕಾರ್ಯಸಾಫಲ್ಯಕ್ಕೆ ಸಾಕ್ಷಿ. ನಮ್ಮ ಸಂವಿಧಾನ ಈ ತತ್ವ, ನಿಯಮ ಮನಗಂಡು ಸ್ವತಂತ್ರವಾದ, ಸ್ವಾಯತ್ತತೆ ಪಡೆದುಕೊಂಡು ಬಂದು ಚುನಾವಣಾ ಆಯೋಗಕ್ಕೆ ಅನುಮತಿ ನೀಡಿ, ರಚಿಸುವಂತೆ ರಾಷ್ಟ್ರಪತಿಯವರಿಗೆ ಅಧಿಕಾರ ನೀಡಿ, ಕಾರ್ಯ ವಹಿಸುವಂತೆ ನಿರ್ದೇಶಿಸಿದೆ. ವಿಧಿಸಂಖ್ಯೆ 324 ಈ ಚುನಾವಣಾ ಆಯೋಗ ಮುಕ್ತವಾದ ಹಾಗೂ ನಿಷ್ಪಕ್ಷಪಾತವಾದ ಚುನಾವಣೆ ಕಾಲಕಾಲಕ್ಕೆ ಅಗತ್ಯವಾದ ಕಡೆ, ಸಂಬಂಧಪಟ್ಟ ಸ್ಥಾನ, ಸಂಸ್ಥೆಗೂ ಸಂವಿಧಾನ ರೀತ್ಯ ನಡೆಸಿಕೊಡಬೇಕು. ಸಂವಿಧಾನದ ವಿಧಿ 326ರಲ್ಲಿ, ಸಾಮೂಹಿಕ ವಯಸ್ಕ ಮತದಾನಪದ್ಧತಿಗೆ ಅವಕಾಶ ಇದೆ. ಪ್ರತಿಯೊಬ್ಬ 21 ವರ್ಷವಾದ ಅರ್ಹ ವಯಸ್ಕನಿಗೂ ಸಮಾನವಾದ ಮತದಾನದ ಹಕ್ಕು ಸ್ವತಂತ್ರ ಅನುದಾನಮಾಡಿದೆ. ಸಂವಿಧಾನವೇ ಮತದಾರನ ಅರ್ಹತೆ, ಅನರ್ಹತೆಯನ್ನು ತೀರ್ಮಾನಿಸಿರುವುದು ಮಾತ್ರವಲ್ಲ, ಶಾಸನಸಭೆಗಳಿಗೆ ಇನ್ನೂ ನಿಖರಪಡಿಸುವಂತೆಯೂ, ಚುನಾವಣಾ ಆಯೋಗಕ್ಕೆ ಇದನ್ನು ಸ್ಫುಟಪಡಿಸುವಂತೆಯೂ, ಅಧಿಕಾರ ನೀಡಿವೆ. ಮತದಾನದ ವಿಷಯಮಾತ್ರವಲ್ಲ, ಚುನಾವಣೆಗೆ ಅಭ್ಯರ್ಥಿಯಾಗಿ ನಿಲ್ಲುವವನ ವಿಷಯವನ್ನು ವಿವರಿಸಿದೆ ಸವಿವರವಾಗಿ, ರಾಜ್ಯಸಭೆಯ ಅಭ್ಯರ್ಥಿಗೆ ಮೂವತ್ತು ವರ್ಷ ಆಗಿರಬೇಕೆಂದಾದರೆ ಲೋಕಸಭೆ ಅಭ್ಯರ್ಥಿಗೆ 25 ವರ್ಷ ಆಗಿರಬೇಕು. ಸಂವಿಧಾನದ, ಶಾಸನದ, ಹಾಗೂ ಚುನಾವಣ ಆಯೋಗ ಪ್ರಕಟ ಪಡಿಸುವ ನಿಯಮ, ಷರತ್ತು, ನಿಬಂಧಗಳಿಗೆ ಒಳಪಟ್ಟಿರಬೇಕು. ಇಲ್ಲವಾದಲ್ಲಿ ಮತದಾರ ಮಾತ್ರವಲ್ಲ, ಅಭ್ಯರ್ಥಿಯೂ ಕೂಡ ತನ್ನ ಹಕ್ಕಿಗೆ, ಸ್ವಾತಂತ್ರಕ್ಕೆ ಅನರ್ಹನಾಗುತ್ತಾನೆ, ವ್ಯತಿರಿಕ್ತವಾದುದಕ್ಕೆ ಶಿಕ್ಷೆಗೆ ಅರ್ಹನಾಗುತ್ತಾನೆ. ಈ ರೀತಿಯಲ್ಲಿ ಚುನಾವಣಾ ಆಯೋಗಕ್ಕೆ ವಿಶೇಷವಾದ ಹೊಣೆಗಾರಿಕೆ, ಬೇಹುಗಾರಿಕೆ ವಹಿಸಿ, ಲೋಕಸಭೆಗೆ ಮಾತ್ರವಲ್ಲ, ರಾಜ್ಯಸಭೆ, ರಾಷ್ಟ್ರಾಧ್ಯಕ್ಷರು, ಉಪರಾಷ್ಟ್ರಾಧ್ಯಕ್ಷರು, ರಾಜ್ಯದ ಶಾಸಕಾಂಗಸಭೆಗಳಿಗೂ ಚುನಾವಣೆ ನಡೆಸಿಕೊಡುವ ಮಹಾನ್ ಕಾರ್ಯ ಕರ್ತವ್ಯ ವಹಿಸಲಾಗಿದೆ. ಸಂವಿಧಾನವೇ ಈ ಚುನಾವಣಾ ಆಯೋಗಕ್ಕೆ, ಚುನಾವಣೆಗೆ ಮನ್ನಣೆ ನೀಡಿರುವುದರಿಂದ, ಇದರಲ್ಲಿ ರಾಜಕೀಯ

ಪ್ರವೇಶ, ಪ್ರಭಾವ, ಯಾ ಅವ್ಯವಹಾರಕ್ಕೆ ಅವಕಾಶ ಇಲ್ಲ. ಇವನ್ನೆಲ್ಲಾ ದೂರಮಾಡಿ, ಪಾರುಮಾಡಿ ಪ್ರಜಾಪ್ರಭುತ್ವ ಸಂರಕ್ಷಣೆಯೇ ಸಂವಿಧಾನ ಮುಖ್ಯ ಗುರಿಯಾದಂತೆ ಆಗಿದೆ.

ಚುನಾವಣೆ ಯಾವಾಗ–ಲೋಕಸಭೆಗೆ ; ಲೋಕಸಭೆ ಅವಧಿ :— ಲೋಕಸಭೆ ಚುನಾಯಿತ ಅಂಗ ಆಂದಮೇಲೆ ಚುನಾವಣೆ ಯಾವಾಗ ನಡೆಸಬೇಕು–ಎನ್ನುವ ತೀರ್ಮಾನ, ಲೋಕಸಭೆಯ ಅಧಿಕಾರ ಕಾಲಾವಧಿಯ ಮೇಲೆ ಹೊಂದಿಕೊಂಡುಹೋಗಿದೆ. ಸಂವಿಧಾನದ 83ನೇ ವಿಧಿಯಂತೆ ಲೋಕಸಭೆಯ ಕಾಲಾವಧಿ ಐದು ವರ್ಷ. ಆದರೆ ಆ ನಡುವೆ ಸಭೆಯನ್ನು ವಿಸರ್ಜನೆಗೊಳಿಸುವ ಅಧಿಕಾರ ರಾಷ್ಟ್ರದ ರಾಷ್ಟ್ರಪತಿಯವರದಾಗಿದೆ. ಸಂವಿಧಾನದ ವಿಧಿ 85 (2) (b) ರಾಷ್ಟ್ರಪತಿಯವರಿಗೆ ಸಭೆಯನ್ನು ವಿಸರ್ಜಿಸುವ ಅಧಿಕಾರ ಕೊಟ್ಟಿದೆ. ಅಂದರೆ ಲೋಕಸಭೆಗೆ ಐದು ವರ್ಷ ಕಾಲಾವಧಿ ಕೊಟ್ಟಿದ್ದರೂ ಆ ಐದು ವರ್ಷ ಮುಗಿಯುವುದರೊಳಗೇ ಸಭೆಯನ್ನು ಬರ್ಖಾಸ್ತು ಗೊಳಿಸಬಹುದು, ಜೀವಂತವಾಗಿಯೋ, ವಿಸರ್ಜನೆ ಮಾಡಿ, ಅನೂರ್ಜಿತ ಗೊಳಿಸಬಹುದು. ಇದರ ಅರ್ಥ ಲೋಕಸಭೆ, ರಾಜ್ಯಸಭೆಯ ಹಾಗೆ, ಶಾಶ್ವತ, ನಿರಂತರ ವಾಗಿ ಮುಂದುವರೆಯುವ ಸಭೆ ಅಲ್ಲ. ಎಂದೂ ಅಸ್ಥಿರ, ಅನಿರ್ದಿಷ್ಟವಾಗಿರತಕ್ಕಂತ ಸಭೆ ಆಗುತ್ತದೆ. ಇದಕ್ಕೆ ಕಾರಣ, ಬರೇ ಸಂವಿಧಾನ ನಿರೂಪಣೆ, ನಿಬಂಧನೆಗಳೇ ಆಧಾರ ಅಂತಲ್ಲ, ನಮ್ಮದು ಸಂಸದೀಯ ಪ್ರಜಾಸತ್ತಾತ್ಮಕ ಗಣರಾಜ್ಯ. ಸಂವಿಧಾನದ ನಿಯಮವನ್ನು, ವಿಧಿಯನ್ನು ಪಾಲಿಸುವುದರ ಜೊತೆಯಲ್ಲಿ, ಹೊಸತಾಗಿ, ಸಂಸದೀಯ ಸರ್ಕಾರ ಪದ್ಧತಿಯ ಕಾರ್ಯಾನುಸರಣೆ, ರೀತಿ, ನೀತಿ, ಸಂಪ್ರದಾಯ, ಪದ್ಧತಿ, ರೂಢಿ ಪ್ರಯೋಗಾಭ್ಯಾಸಗಳು ಬಹುಪಾಲು ನಾವು ಪಾಲಿಸಬೇಕಾಗುತ್ತದೆ. ಇಂತಹ ನಮೂನೆಯ ಸರ್ಕಾರದ ಮೂಲ ತತ್ವ, ಪ್ರಜಾ ಸರ್ಕಾರ ಬರೇ ಪ್ರಾತಿನಿಧ್ಯ ಸರ್ಕಾರ ವಲ್ಲ, ಹೊಣೆಗಾರ, ಜವಾಬ್ದಾರಿಯುತ ಸರ್ಕಾರ. ಮಿಗಿಲಾಗಿ, ಬಹುಜನಬೆಂಬಲ ಆಧಾರಿತ, ವಿಶ್ವಾಸನಿಷ್ಠ ಸರ್ಕಾರ. ಆದ್ದರಿಂದ, ಐದು ವರ್ಷ ಕಾಲಾವಧಿ ಸಂವಿಧಾನ ನಿಗಧಿ ಪಡಿಸಿದೆ ನಿಜ. ವಾಸ್ತವಿಕವಾಗಿ, ಸಂಸದೀಯ ಸರ್ಕಾರ ರೀತ್ಯ, ಯಾವಾಗ ಸರ್ಕಾರ ಶಾಸನ ಸಭೆಯಲ್ಲಿ,ತನ್ನ ಬಹುಮತ ಬೆಂಬಲ ವಿಶ್ವಾಸಕಳೆದು ಕೊಂಡಾಗ, ಚುನಾವಣಾ ಸಂದರ್ಭ, ಜನತಾ ತೀರ್ಪಿನ ಮುಖಾಂತರ, ಆವಾಗ ಸರ್ಕಾರ ಅಧಿಕಾರ ಬಿಟ್ಟುಹೋಗಬೇಕಾಗುವುದು ಮಾತ್ರವಲ್ಲ, ಸನ್ನಿವೇಶ ಬಂದರೆ ಶಾಸನಸಭೆ–ಲೋಕಸಭೆ–ವಿಸರ್ಜನೆಗೆ ಶಿಪಾರಸ್ಸು ಮಾಡಿ ಹೋಗಬಹುದು, ಹೊಸ ಚುನಾವಣೆ ನಡೆಸಿ, ಮರು ವಿಶ್ವಾಸ ಪಡೆಯುವ ತೀರ್ಪನ್ನು ಮುಂದಿಡಬಹುದು. ಈ ತೀರ್ಪು–ಶಿಫಾರಸ್ಸು–ನಮ್ಮ ರಾಷ್ಟ್ರ ಮಟ್ಟದಲ್ಲಿ, ಕೇಂದ್ರದಲ್ಲಿ, ಪ್ರಧಾನಮಂತ್ರಿ ರಾಷ್ಟ್ರಪತಿ ಯವರಿಗೆ ಸಲ್ಲಿಸುತ್ತಾರೆ, ರಾಜ್ಯದಲ್ಲಿ ಮುಖ್ಯಮಂತ್ರಿಗಳು, ರಾಜ್ಯಪಾಲರಿಗೆ ನೀಡುತ್ತಾರೆ, ಶ್ರೀರಾಮಕೃಷ್ಣ ಹೆಗ್ಗಡೆಯವರು ನಡೆಸಿದ ಪ್ರಸಂಗದ ಹಾಗೆ–ಇಂತಹ ಸಂದಿಗ್ಧ ಸನ್ನಿವೇಶ ಬಂದರೆ–ಲೋಕಸಭೆ ತನ್ನ ನಿಗದಿತ ಕಾಲಾವಧಿ ಐದು ವರ್ಷ ಮುಗಿಯುವ

ಮುನ್ನವೇ ಅಂತ್ಯವಾದಂತೆ ಆಗುತ್ತದೆ. ಆದರೆ ಇಂತಹ ಸನ್ನಿವೇಶಗಳು ಜನರನ್ನು ದಿಗಿಲು ಗೊಳಿಸುವುದು ಹೋಗಲಿ, ರಾಷ್ಟ್ರಪತಿಯವರ ಸ್ಥಾನ, ನಿಲುವು, ತೀರ್ಮಾನ ವನ್ನು ನಿರ್ಧರಿಸುವ ಪ್ರಸಂಗಕ್ಕೆ ಎಡೆಮಾಡುತ್ತವೆ. ಕಾರಣ ರಾಷ್ಟ್ರಪತಿಯವರೂ ಸಂಸತ್ತಿನ ಅವಿಭಾಜ್ಯ ಅಂಗವಾದರೂ, ಸರ್ಕಾರದ-ಮಂತ್ರಿಮಂಡಲದ ಸಕ್ರಿಯ ಸದಸ್ಯರಲ್ಲ, ಸಂಸತ್ತಿನ ಸಜೀವ ಸದಸ್ಯರಲ್ಲ, ರಾಜಕೀಯ, ಬಹು/ಅಲ್ಪಮತ ಬೆಂಬಲಿತ ಆಡಳಿತ; ವಿರೋಧ ಪಕ್ಷದ ಸದಸ್ಯರಲ್ಲ, ಇಡೀ ರಾಷ್ಟ್ರದ ಸದಸ್ಯ, ರಾಷ್ಟ್ರ ಏಕತೆಯ ಸಂಕೇತ, ಸಂವಿಧಾನ ಸಂರಕ್ಷಕ, ಪೋಷಕ, ಶ್ರೇಷ್ಠತೆ ಕಾಪಾಡಿಕೊಳ್ಳುವ ಹೊಣೆ ಗಾರಿಕೆ ಅವರದ್ದು. ಹಾಗಾಗಿ ಇಂತಹ ಸಂದರ್ಭಗಳಲ್ಲಿ, ತುಂಬಾ ವಿವೇಕದಿಂದ ವಿಚಾರ ಶೀಲರಾಗಿ, ನಿಷ್ಪಕ್ಷಪಾತರಾಗಿ ನಡೆದುಕೊಳ್ಳಬೇಕಾಗುತ್ತದೆ. 1969ರ ಲಾಗಾಯ್ತು ನಮ್ಮ ರಾಷ್ಟ್ರಮಟ್ಟದಲ್ಲಿ ಇಂತಹ ಪ್ರಸಂಗಗಳು ಸಾಮಾನ್ಯವಾಗುತ್ತಿವೆ. ಮೊದಲನೇ, ಎರಡನೇ, ಹಾಗೂ ಮೂರನೇ (1952, 1957, 1962,) ಲೋಕ ಸಭೆ ತುಂಬು ಐದು ವರ್ಷದ ನಂತರ ವಿಸರ್ಜನೆಗೊಂಡರೆ, 4ನೇ ಲೋಕಸಭೆ, 1967 ರಲ್ಲಿ ರಚಿತವಾದುದು, ಐದು ವರ್ಷ ಮುಗಿಯುವ ಮುನ್ನ ತನ್ನ ನಾಲ್ಕನೇ ವರ್ಷ- ಡಿಶಂಬರ್ 1970 ರಂದು ಪ್ರಥಮಬಾರಿಗೆ ವಿಸರ್ಜನೆಗೊಂಡಿತು, ಅನಂತರ, 6ನೇ ಲೋಕಸಭೆ. 1977 ರ ಮಾರ್ಚಿನಲ್ಲಿ ರಚಿತವಾದುದು 1979 ರ ಆಗಸ್ಟ್ ರಂದು, ತನ್ನ ಮೂರನೇ ವರ್ಷದ ಆರಂಭದಲ್ಲೇ ಅಸ್ತಿತ್ವ ಕಳಕೊಂಡಿತು. ಈ ಎರಡು ಸನ್ನಿವೇಶಗಳು ನಮ್ಮ ಸಂವಿಧಾನ, ಸಂಸದೀಯ ಸರ್ಕಾರ ಪದ್ಧತಿ ಹಾಗು ಸಂವಿಧಾನ ಪೋಷಕ ರಾಷ್ಟ್ರಪತಿಯವರನ್ನು ಸಾಕಷ್ಟು ಪರೀಕ್ಷೆಗೆ, ವಿಮರ್ಶೆಗೆ, (ತುಚ್ಛೀಕರಣವೂ ಸೇರಿಕೊಳ್ಳುತ್ತದೆ-ನ್ಯಾಯಾಲಯ ಹೋರಾಟ ಹೇಳಬೇಕೆಂದಿಲ್ಲ), ಒಳಪಡಿಸಿದೆ. ಕಾರಣ, ನಮ್ಮ ಲೋಕಸಭೆಯ ಅಕಾಲಿಕ ಅಸ್ತಿತ್ವಕ್ಕೆ ಬಂದಿದೆ.

ಇದು ಒಂದು ಕಥೆಯಾದರೆ, ಇನ್ನೊಂದು ಕಥೆ, ಸಂವಿಧಾನ ನಿಗದಿತ ಐದು ವರ್ಷ ಮುಗಿಯದೇ, ನಂತರ ತಕ್ಷಣವೇ, ಸಭೆ ವಿಸರ್ಜನೆ ಆಗದೆಯೇ, ನೂತನ ಲೋಕಸಭೆ ರಚಿತವಾಗಬೇಕಾದ ಕಾಲಾವಧಿ ಮುಂದೂಡ ಬಹುದೇ ?—ನೂತನ ಸಭೆ—ತನ್ನ, ಪ್ರಸ್ತುತ ಕಾಲಾವಧಿ ನಿಗದಿತವಾದುದು ಮುಗಿಯದೇನೆ ಸಭೆ ವಿಸರ್ಜನೆ ಆಗದೇನೆ, ನಿಗದಿತ ಕಾಲಾವಧಿ ಮುಗಿಯುವ ದಿನಾಂಕದೊಳಗೇ ರಚನೆ ಆಗಬಹುದೇ- ಎನ್ನುವುದು, ಈ ಎರಡಕ್ಕೂ ಸಮರ್ಪಕ ಉದಾಹರಣೆ ಸಿಗುತ್ತದೆ.

ಮೊದಲನೆಯದಾಗಿ ಕಾಲಾವಧಿ ವಿಸ್ತೀರ್ಣ : ಐದನೇ ಲೋಕಸಭೆ 1971 ರ ಮಾರ್ಚಿನಲ್ಲಿ ರಚಿತವಾದುದು, ಐದು ವರ್ಷ ಅವಧಿಯಂತೆ 1976 ರಲ್ಲಿ ಮುಗಿಯಬೇಕಿತ್ತು. ಆದರೆ 1977 ರ ಜನವರಿವರೆಗೂ ಮುಂದುವರೆದುಕೊಂಡು ಹೋಯಿತು, ವಾಸ್ತವವಾಗಿ 1978 ರ ವರೆಗೆ, ಎಂದು ತೀರ್ಮಾನವಾಗಿತ್ತು. ಐದು ವರ್ಷ ಮೀರಿ, ಎರಡು ವರ್ಷ ಜಾಸ್ತಿ-7 ವರ್ಷಕ್ಕೆ. ಆದರೆ ಒಂದು ವರ್ಷ ಮುನ್ನಾ-6ನೇ ವರ್ಷದಲ್ಲಿ (ಅಂದರೆ 1978 ರ ಮೊದಲು, ಒಂದು ವರ್ಷ) ನಂತರ

ಐದು ವರ್ಷ ಕಳೆದು 1977 ಮಾರ್ಚ್‌ನಲ್ಲಿ ಚುನಾವಣೆ, ಆರನೇ ಲೋಕಸಭೆಗಾಗಿ ನಡೆಯಿತು. ಅದಕ್ಕೆ ಸನ್ನಿವೇಶ ಆಗಿನ ಆಂತರಿಕ ತುರ್ತು ಪರಿಸ್ಥಿತಿ, ಜೂ, 1975 ರಂದು ಘೋಷಿಸಿದ್ದು ಜಾರಿಯಲ್ಲಿತ್ತು, ಬಾಹ್ಯ ತುರ್ತು ಪರಿಸ್ಥಿತಿ 1971 ಬಾಂಗ್ಲಾದೇಶ ಗಲಭೆಯಿಂದ ಜಾರಿಯಲ್ಲಿರುವುದರ ಜೊತೆಯಲ್ಲಿ ಇದ್ದುದು ಹೊರತಾಗಿ, ಸಂವಿಧಾನವೇ ತನ್ನ ಹದಿನೆಂಟನೇ ವಿಭಾಗದಲ್ಲಿ ವಿಧಿ 350 ; 356 ವಿಧಿಗಳಲ್ಲಿ ಈ ರೀತಿಯ ಪ್ರಸಂಗಕ್ಕೆ ಎಡೆ ಮಾಡಿಕೊಟ್ಟಿದೆ, 81 ಮತ್ತು 83 ವಿಧಿ ಹೇಗೂ ಆಯಿತಲ್ಲ. ತನ್ಮೂಲಕ ಚುನಾವಣೆ, ಹಾಗೂ ಅನೂರ್ಜಿತವಾಗತಕ್ಕ ಲೋಕಸಭೆ ಪುನರೂರ್ಜಿತ ಗೊಳಿಸಲು, ಬರ್ಖಾಸ್ತು, ಮುಂದೂಡಗೊಡದಂತೆ ಮಾಡಿದ ಹಾಗೆ ಆಯಿತು. ಸಭೆಗೆ ಆಯಸ್ಸು ವೃದ್ಧಿ ಆದಂತೆ ಆಯಿತು ಇಲ್ಲಿ.

ಅಂತೆಯೇ ಎರಡನೇ ಪ್ರಸಂಗಕ್ಕೆ ಬಂದರೆ, ಈಗತಾನೇ ನಡೆದ 1984 ಡಿಶಂಬರ್ 24, 27, 28 ರಂದು, ಎಂಟನೇ ಲೋಕಸಭಾ ಚುನಾವಣೆ. ನಿಗದಿತ ಆಯಸ್ಸು ದಿನಾಂಕ, 1985 ಜನವರಿ 20 ನೇ ತಾರೀಕಿಗೆ ಏಳನೇ ಲೋಕಸಭೆ, 1980 ರ ಜನವರಿಯಲ್ಲಿ ರಚಿತವಾದುದು, ಮುಗಿಯುತ್ತಿತ್ತು, ಅಷ್ಟರೊಳಗೆ ಒಂದು ತಿಂಗಳು ಮುನ್ನ ಚುನಾವಣೆ ನಡೆಸಿ ನೂತನಸಭೆ ರಚಿತವಾಗಿ ಜನವರಿ 15, 1985 ರಿಂದಲೇ-ಐದು ದಿನ ಮುಂದಾಗಿ ಅಸ್ತಿತ್ವಕ್ಕೆ ಬರುವಂತಾಗುವುದು ಮತ್ತೊಂದು ಸ್ವಾರಸ್ಯ ಸಂಗತಿ. ಇನ್ನೂ ಹೆಚ್ಚಿನದು ಅಂದರೆ, ಈವರೆಗಿನ ಲೋಕಸಭೆಗಳು, ಸಂಪೂರ್ಣ ಸಭೆಯಾಗಿ ಅಂದರೆ ಎಲ್ಲಾ-500-520-525-545 ಆಯಾಯ ಸಂದರ್ಭಕ್ಕೆ ಅನುಚಿತವಾಗಿ ಸಂಪೂರ್ಣ ಸದಸ್ಯಬಲಕ್ಕೆ ಚುನಾಯಿತವಾಗಿ ಅಸ್ತಿತ್ವಕ್ಕೆ ಬಂದರೆ ಈ ಸಾರಿ ಕೇವಲ 515 (514) ಸ್ಥಾನಕ್ಕೆ ಮಾತ್ರ ಚುನಾವಣೆ ಘೋಷಿಸಿದುದು, 508 ಸ್ಥಾನಕ್ಕೆ ಚುನಾವಣೆ ನಡೆದುದು-544 (545) ಸ್ಥಾನದಲ್ಲಿ-ಪಂಜಾಬ್‌ನ 13 ಸ್ಥಾನ, ಅಸ್ಸಾಂನ 14 ಸ್ಥಾನ, ಲಡ್ಹಾಕ್ ಒಂದು ಸ್ಥಾನಗಳಿಗೆ ಇನ್ನೂ ಚುನಾವಣೆ ನಡೆಯಬೇಕು. ಪಂಜಾಬ್‌ನಲ್ಲಿ ಅಕಾಲೀ ಆಂದೋಳನದ ಪ್ರಕ್ಷುಬ್ಧ ವಾತಾವರಣ ಇದ್ದರೆ, ಅಸ್ಸಾಂನಲ್ಲಿ ಪರಕೀಯ ಪರ ರಾಷ್ಟ್ರೀಯ ಜನರ ಸಮಸ್ಯೆ-ಮತದಾರರ ಯಾದಿ ಪರಿಷ್ಕರಣ ಒಂದು ಕಾರಣವಾಗಿದ್ದರೆ, ಲಡ್ಹಾಕ್‌ನಲ್ಲಿ ಪ್ರಕೃತಿ ವಾತಾವರಣ ಅಡ್ಡಿ-ಹೀಗೆ ಕಾರಣ ಹೇತುವಾಗಿ ಚುನಾವಣೆ ಸ್ಥಗಿತವಾಗಿದೆಯಾದರೂ ಲೋಕಸಭೆ ಸಂಪೂರ್ಣ ಸಭೆಯೆಂದು ಊರ್ಜಿತವಾಗಿ ಕಾರ್ಯರೂಪಕ್ಕೆ ಬಂದಂತಾಗಿದೆ. ಇದಕ್ಕೆ ಸಂವಿಧಾನ ಕಾನೂನು, ಸಂಸದೀಯ ಸರ್ಕಾರ ತತ್ವ ಪದ್ಧತಿ ಪರಿಣತರು, ಪಂಡಿತರು, ತಜ್ಞರು ಏನು ತೀರ್ಮಾನ ಕೊಡ ಬಯಸುತ್ತಾರೆ, ಜಿಜ್ಞಾಸೆ ವ್ಯಕ್ತಪಡಿಸುತ್ತಾರೆ, ಎನ್ನುವುದು ಆತಂಕಕಾರಿ ವಿಚಾರ, ಅರಿಯಬೇಕಾದ ವಿಷಯ.

ಸಂವಿಧಾನವೇ ಇದನ್ನು ತೀರ್ಮಾನಿಸಿದೆ. ಕನಿಷ್ಠ ಪಕ್ಷ ಆರು ತಿಂಗಳು ಸಂಸತ್ತು, ಲೋಕಸಭೆ ಕಾರ್ಯ ಕಲಾಪದಿಂದ ವಿರಾಮ ಪಡೆಯಬಹುದು, ಅಸ್ತಿತ್ವದಿಂದ

ಅಳಿದಿರಬಹುದು, ಕಳಿದಿರಬಹುದು, ಚುನಾವಣೆ ತೀರ್ಮಾನವಾಗಬೇಕಾದರೆ ಚುನಾವಣಾ ಆಯೋಗ, ಸರ್ವಸಿದ್ಧತೆ ಆಗಿದೆ, ಸರ್ವಾನುರೀತಿ ವಾತಾವರಣ ಅನುಕೂಲವಾಗಿದೆ ಎಲ್ಲ ಕಾನೂನು, ಶಾಂತಿ, ಸ್ಥಿತಿ ಸುಭದ್ರ ಸುರಕ್ಷಕವಾಗಿದೆ ಎಂಬ ಹಸಿರುಬಾವುಟ ಪ್ರದರ್ಶನಕೊಡಬೇಕು. ಇಲ್ಲವಾದಲ್ಲಿ, ಅನಿವಾರ್ಯ ಪ್ರಸಂಗಗಳನ್ನೂ ವೀಕ್ಷಿಸಬೇಕಾದ ಸಂಗತಿಗಳು ಕಾಣಬರುತ್ತಿರುತ್ತವೆ—ಈ ಎಲ್ಲ ಉದಾಹರಣಾ ರೀತ್ಯ. ಈಗ ನಡೆದುಹೋದ 1984ರ ಚುನಾವಣೆ ಬಗ್ಗೆ ಬಹಳಷ್ಟು ಆತಂಕ, ಸಂಶಯ ಇತ್ತು, ಸಕಾಲಕ್ಕೆ ಸರಿಯಾಗಿ ನಡೆಯುತ್ತೊ ಇಲ್ಲವೋ, ಮುಂದುಹೋಗುತ್ತದೋ ಏನೋ ಎಂದು. ಕಾರಣ, ಈ ಎಲ್ಲ ಪ್ರಸ್ತಾಪ, ಅವಕಾಶಗಳೂ ಸಂವಿಧಾನವೇ ಮಾಡಿ ಕೊಟ್ಟಿರುವಾಗ ಈ ರೀತಿಯ ಆತಂಕ, ಸಂಶಯ, ದುರಾ–ದೂರಾಲೋಚನೆಗೆ ನಮ್ಮ ದಿವಂಗತ ಪ್ರಧಾನಿ ಶ್ರೀಮತಿ ಇಂದಿರಾಗಾಂಧಿಯವರ ರಾಜಕೀಯ ನಿಲುವು, ಆಲೋಚನೆ, ಕಾರ್ಯಕಾರಣತ್ವ. ಆದರೆ ಆಕೆಯ ಯುಗ ಒಂದು ದುರಂತದಲ್ಲಿ ಮುಗಿದು ಅವರ ದುರಂತದ ಮರಣವೇ ಮತ್ತೊಂದು ವಿಸ್ಮಯಕಾರಕ 'ನಭೂತೋ ನ ಭವಿಷ್ಯತಿ' ಎಂಬ ಲೆಕ್ಕಾಚಾರದಂತೆ ಬದಲಾಯಿಸಿ ಇತಿಹಾಸಕ್ಕೆ ಕಾರಣಭೂತವಾಯಿತು.—1984ರಲ್ಲಿ ಚುನಾವಣೆ ನಡೆದುದು, ಅಳಿಯಬೇಕಾಗಿದ್ದ ವಂಶ ಪಾರಂಪರ್ಯ ಆಡಳಿತ, ಕಾಂಗ್ರೆಸ್ ಪಕ್ಷ (ಇಂದಿರಾ) ಅತ್ಯದ್ಭುತ ಬಹುಮತ 401/515ಕ್ಕೆ ಪಡೆದುಕೊಂಡು ಬಂದದ್ದು, ಯುವಜನ ನೇತಾರ ಶ್ರೀ ರಾಜೀವಗಾಂಧಿಯವರು ಪ್ರಧಾನಿ ಪಟ್ಟಕ್ಕೆ ಬಂದುದು ಎಲ್ಲ ಪ್ರಾಸಂಗಿಕ, ಪ್ರಚಲಿತ, ಪ್ರಸ್ತುತ, ಇತಿಹಾಸ ದಾಖಲಾರ್ಹ ಸಂಗತಿ ಆಗಿ ನಮಗೆ ಗೋಚರಿಸುತ್ತಿವೆ. ಹಾಗೆಯೇ ಪ್ರಜಾಸಂಖ್ಯೆ 1952ರ ಹೊತ್ತಿಗೆ 40 ಕೋಟಿ ಇದ್ದದು—ಮತದಾರರ ಸಂಖ್ಯೆಯು—17 ಕೋಟಿ. 1984ರ ಸಂದರ್ಭದಲ್ಲಿ 70 ಕೋಟಿ ಮೀರಿದ ಜನಸಂಖ್ಯೆ 38 ಕೋಟಿಯಷ್ಟು ಮತದಾರರು ದಾಖಲೆಯಾಗಿ ಸೇರ್ಪಡೆಯಾಗಿದ್ದಾರೆ. ಮತ್ತೆ ಈ ಬದಲಾವಣೆ ಜೊತೆಯಲ್ಲಿ ಪಕ್ಷ, ಪ್ರತಿನಿಧಿಗಳು ಪ್ರಚಾರಕರು, ಅಂಕೆಸಂಖ್ಯೆಗಳಲ್ಲಿ ಜಾಸ್ತಿಯಾಗುತ್ತಿರುವುದು ತಮ್ಮ 'ಲಾಭಲಾಭಾ ಜಯಾಜಯಾ' ಅನುಭವಿಸಿದ ಇತಿಹಾಸ ಪುನಃ ಪ್ರಸ್ತಾಪ ಮಾಡಬೇಕೆಂದಿಲ್ಲ. ಕಾಲಾನುಸ್ಥಿತಿ, ಅನುಭವ ಸವಿ, ದಾಖಲೆಪತ್ರ, ಪ್ರಚಾರ ಮಾಧ್ಯಮಗಳು ತಿಳಿಸುತ್ತವೆ.

ಈ ಒಂದು ಸೂಕ್ಷ್ಮ–ದೀರ್ಘ ಹಿನ್ನೆಲೆಯೊಂದಿಗೆ ಈ ಲೇಖನದ ಮೂಲ ವಿಷಯಕ್ಕೆ–'ಕಾರ್ಯನಿರತ ಭಾರತ ಪ್ರಜಾಪ್ರಭುತ್ವ–ಕರ್ನಾಟಕ ರಾಜ್ಯದ ಲೋಕ ಸಭಾ ಕ್ಷೇತ್ರದ ಚುನಾವಣೆ, ಡಿಶಂಬರ್ 24, 1984, ಅಂಕಿ ಅಂಶಗಳ ಆಧಾರದ ಮೇಲಿನ ವಿಚಾರಕ್ಕೆ ಎಡೆಮಾಡಿಕೊಳ್ಳಬೇಕಾಗಿದೆ.

ಈ ಮೇಲಿನ ವಿವರಾಣಾನುಭವದಿಂದ, ನಮ್ಮ ಪ್ರಜಾಪ್ರಭುತ್ವದ ಮೂಲ ಸ್ವರೂಪ, ಲಕ್ಷಣ, ಕಾರ್ಯವೈಖರಿ ಅರ್ಥವಾದರೆ ಈ ಮುಂದೆ ವಿವರಿಸುವ ವಿಚಾರ

ಗಳಿಂದ 1947, ಆಗಸ್ಟ್ 15 ಸ್ವಾತಂತ್ರ ಬಂದ ನಂತರದಿಂದಲೂ ಪ್ರಜಾತಂತ್ರವನ್ನು ಅನುಸರಿಸುತ್ತಿರುವ ನಮ್ಮ ರಾಷ್ಟ್ರದ ಜನತೆ, ಎಷ್ಟರಮಟ್ಟಿಗೆ ಪ್ರಜಾತಂತ್ರ ಕಾರ್ಯಾಚರಣೆಯಲ್ಲಿ ಪ್ರಜಾಸತ್ತಾತ್ಮಕ ಗಣರಾಜ್ಯದ ತತ್ವ, ಧೋರಣೆಗಳಲ್ಲಿ ನಿಷ್ಠೆಯನ್ನು ಹೊಂದಿದೆ, ಕಾರ್ಯಸಾಧನೆ ಮಾಡುವುದರಲ್ಲಿ ಸಕ್ರಿಯವಾಗಿ ಸಹಭಾಗಿತ್ವ ಪಡೆದುಕೊಂಡು, ಯಶಸ್ವಿಯಾಗಿದೆ. ಪ್ರಜಾಪ್ರಾತಿನಿಧ್ಯ, ಬೆಂಬಲಿತ ಸರ್ಕಾರ ಎಂದ ಮೇಲೆ, ಎಷ್ಟುಪಾಲು ಜನರಿಗೆ ಪ್ರಾತಿನಿಧ್ಯ ಸಹಜವಾಗಿ ಸಿಗುತ್ತದೆ, ಆ ಒಂದು ಸರ್ಕಾರ ಸಹಜವಾಗಿ ಎಷ್ಟು ಜನರ ಬೆಂಬಲ, ವಿಶ್ವಾಸ ಅವಲಂಬಿಸಿಕೊಂಡಿರುತ್ತದೆ, ಪ್ರಾತಿನಿಧ್ಯ ರಹಿತ ಪ್ರಜೆಗಳ ನೆಲೆಯೇನು, ಗತಿಯೇನು, ಎಂಬುವ ವಿಷಯಗಳನ್ನು ಕೆಳಗಿನ ಅಂಕಿ ಅಂಶಗಳ ನೋಟದಿಂದ ಅರಿಯಲು ಸಾಧ್ಯವಾಗುತ್ತದೆ.

ಪ್ರಜಾಪ್ರಭುತ್ವ ಸರ್ಕಾರ ಅಂದ ಮೇಲೆ, ರಾಜಕೀಯ ಪಕ್ಷಗಳ ಸರ್ಕಾರ, ರಾಜಕೀಯ ಪಕ್ಷ, ಆಡಳಿತ, ವಿರೋಧ, ನಿರ್ದಳೀಯ ಎಲ್ಲ ಅಗತ್ಯವಾಗುತ್ತವೆ. ಹಾಗೆಯೇ, ಪ್ರಜಾಪ್ರಭುತ್ವಧೋರಣೆ "ಎಲ್ಲರಿಗೂ ಸಮಾನ ಬೇಡಿಕೆ, ಎಲ್ಲರಿಗೂ ಸಮಾನಪಾಲು", (Democracy is one in which each one has a share each one has a stake) ಹಾಗೆಯೇ "ಪ್ರತಿಯೊಬ್ಬರ ಕ್ಷೇಮಾಭಿವೃದ್ಧಿಗಾಗಿ, ಶ್ರೇಯಸ್ಸಿಗಾಗಿ, ಪ್ರತಿಯೊಬ್ಬರ ಪ್ರತಿಧ್ವನಿ ವಿಚಾರ ಪ್ರಕಟಣೆ (voice of All for the Good of All) ಎಂಬುದಾಗಿ ಇದೆ. ಇದು ಎಷ್ಟರಮಟ್ಟಿಗೆ ಸತ್ಯ ಎಂದು ತಿಳಿಯಬೇಕು.

ಸ್ವರಾಜ್ಯ, ಗಣತಂತ್ರ-ಇತಿಹಾಸ ಪೂರ್ವಸಂಸ್ಥೆ, ಬೇಡಿಕೆ :

ಪೂರ್ವೇತಿಹಾಸ, ಪುರಾಣ, ವೇದಗಳ ಕಾಲದಿಂದಲೂ ನಾವು ಗಣತಂತ್ರಕ್ಕೆ, ಸ್ವರಾಜ್ಯ ಸಂಸ್ಥಾ ಕಾರ್ಯಾಚರಣೆಗೆ ಮನ್ನಣೆಕೊಟ್ಟವರು, ಆ ರೀತಿಯಲ್ಲೇ ಕಾರ್ಯ ಗತಿ ನಡೆಸಿಕೊಂಡು ಬಂದವರು. ವೇದ, ಇತಿಹಾಸಗಳ ಕಾಲದ ಸಭಾ, ಸಮಿತಿ, ಸ್ವಯಮಾಡಳಿತ ಸ್ವತಂತ್ರ ಗ್ರಾಮ ಗಣರಾಜ್ಯಗಳು ಇದಕ್ಕೆಲ್ಲ ಪುರಾವೆ. ಹಾಗೆಯೇ ಪರಕೀಯರಿಂದ ಆಡಳಿತ ನಡೆಸಲ್ಪಟ್ಟ ನಮ್ಮ ರಾಷ್ಟ್ರ, ಪರ್ಷಿಯನ್ನರು, ಗ್ರೀಕರು, ಮುಸಲ್ಮಾನರು, ಸಕರು ಆಂಗ್ಲೇಯರು- ಶತಮಾನಗಳ ಕಾಲ ಆಳಿದರೂ ನಮ್ಮ ಮೂಲ ತಂತ್ರ-ರಾಜಕೀಯ ವ್ಯವಸ್ಥೆಗೆ ದಕ್ಕೆ ಬಂದುದು ಕಡಿಮೆ. ಸ್ವರಾಜ್ಯಕ್ಕಾಗಿ, ಸ್ವತಂತ್ರ ರಾಷ್ಟ್ರಕ್ಕಾಗಿ ಸಂಸದೀಯ ಪ್ರಜಾ ಗಣರಾಜ್ಯಕ್ಕಾಗಿ, ನಾವು ಕ್ರಾಂತಿ, ಆಂದೋಲನ, ಚಳುವಳಿ ನಡೆಸಿದವರು. ಸ್ವಾತಂತ್ರ್ಯ ಚಳುವಳಿ ನೇತಾರರು ಮಾನ್ಯತಿಲಕರು, ಗೋಖಲೆಯವರು, ಗಾಂಧೀಜಿ, ನೆಹರೂಜಿ ಮೊದಲಾದವರು. 'ಸ್ವರಾಜ್ಯವೇ ನಮ್ಮ ಉಸಿರು, ಆಜನ್ಮ ಸಿದ್ಧ ಹಕ್ಕು, ಅದಕ್ಕಾಗಿ ದುಡಿಯುತ್ತೇವೆ, ಮಡಿಯುತ್ತೇವೆ' ಎಂದು ಹಾಗೆಯೇ ನಡೆದುಕೊಂಡವರು. ಪ್ರತಿಫಲವಾಗಿ ಅಂತಿಮವಾಗಿ ಆಗಸ್ಟ್ 15, 1947 ರಂದು ಪರಕೀಯರ ಆಳ್ವಿಕೆಗೆ

ಸಂಪೂರ್ಣ ಮುಕ್ತಾಯ ಹೇಳಿ, ನಮ್ಮದೇ ಸ್ವರಾಜ್ಯ, ಗಣರಾಜ್ಯ, ಒಕ್ಕೂಟರಾಜ್ಯ ಸಂಸ್ಥಾಪನೆ ಮಾಡಿಕೊಂಡು, ಕಾರ್ಯಗತಿ ನಡೆಸಿಕೊಂಡು ಇಂದಿಗೂ ಬರುತ್ತಿದ್ದೇವೆ. ರಾಷ್ಟ್ರೀಯ ಸ್ವಾತಂತ್ರ್ಯ ಆಂದೋಳನ ಕಾಲಗಳಲ್ಲಿ ನಮಗೆ ಸ್ವರಾಜ್ಯವೇ ಬೇಕು ಎಂಬ ಒತ್ತಾಯ ಪ್ರಭಲವಾಗಿ, ಆಂಗ್ಲೇಯರ ಮುಂದೆ ಇಡುತ್ತಾ ಬಂದಿದ್ದಿರಲಿ, ಆಂಗ್ಲೇಯರು ಮಾತ್ರ-“ಭಾರತೀಯರು ಅನ್ಯದೇಶೀಯರು, ಅನ್ಯವರ್ಣೀಯ ಜನಾಂಗ ಸ್ವಾತಂತ್ರ ಸ್ವರಾಜ್ಯಕ್ಕೆ ಅನರ್ಹರು, ಅಯೋಗ್ಯರು,” ಎಂದೆಲ್ಲ ಹೇಳಿ ಕೇಳಿದಾಗಲೆಲ್ಲ ತಿರಸ್ಕರಿಸುತ್ತಾ ಬರುತ್ತಿದ್ದರು, ಸದೆಬಡಿಯುತ್ತಿದ್ದರು. ನಮ್ಮ ದೌರ್ಬಲ್ಯ, ಪ್ರಜಾರಾಜ್ಯಕ್ಕೆ ಬೇಕಾದ ಅಗತ್ಯ ಗುಣಲಕ್ಷಣ, ಸಾಮರ್ಥ್ಯ, ಅರ್ಹತೆ ನಮ್ಮಲ್ಲಿ ಸಾಕಷ್ಟು ಪರಿಗಣನೀಯ, ಪೋಷನೀಯ ಮಟ್ಟದಲ್ಲಿ ಇಲ್ಲವೆಂದು ಆಂಗ್ಲೇಯರಿಗೆ ಅರಿವಾಗಿದ್ದುದು ವೇದ್ಯ ವಿಷಯವಾಗಿದ್ದಿತು. ಆಗ ನಮ್ಮನಮ್ಮಲ್ಲಿ ಒಗ್ಗಟ್ಟು, ಏಕತೆ ಐಕ್ಯತೆ, ಸಾಮರಸ್ಯ ಮನೋಭಾವನೆ ಹೀನವಾಗಿದ್ದಿತು. ಅನಕ್ಷರತೆ, ಬಡತನ, ಅನುಭವಹೀನತೆ, ಪ್ರಜಾತಂತ್ರ-ಸಂಸದೀಯ ಸರ್ಕಾರ ನಿರ್ವಹಣೆ ಕಲೆ, ಕುಶಲತೆ, ಸ್ಪಷ್ಟ, ಸ್ಫುಟವಾಗಿ ಗೋಚರಿಸದಿದ್ದುದು, ಆಂಗ್ಲೇಯರ ಅನ್ನಿಸಿಕೆಗಳಿಗೆ ತಿರಸ್ಕಾರಕ್ಕೆ ಪುರಾವೆಯಾಗಿ ದೊರಕುತ್ತಿತ್ತು. ಎಂದಾದರೂ, ಅಂತಿಮವಾಗಿ ಆಂಗ್ಲೇಯರೇ ಖುದ್ದಾಗಿ ನಮ್ಮ ರಾಜ್ಯದ ಹಣೆಬರಹವನ್ನು ಅದರ ಕಾರ್ಯನಿರ್ವಾಹಣೆಯನ್ನು ನಮಗೇ ಒಪ್ಪಿಸಿ, ನಾವು ಭಾರತೀಯರು ಸ್ವರಾಜ್ಯ ಪಡೆದುಕೊಂಡವರು ಎಂದೆನಿಸುವಂತೆ ಮಾಡಿಹೋದರು. ಈ ಒಂದು ಅಂಕಿ-ಅಂಶನೋಟ, ನಮಗೆ ಈ ರೀತಿಯ ಟೀಕೆಗಳನ್ನು, ಅವಹೇಳನಗಳನ್ನು ಸಮರ್ಥಿಸಲು, ದೂರೀಕರಿಸಲು, ಎಷ್ಟರ ಮಟ್ಟಿಗೆ ಸಹಾಯಕಾರಿಯಾಗುತ್ತದೆ ಎಂಬುದಕ್ಕೆ ಆಧಾರವಾಗಬಹುದು.

ಒಟ್ಟಾರೆಯಲ್ಲಿ ಹೇಳುವುದಿದ್ದರೆ, ಇಂಥಾ ಸಂದಿಗ್ಧ, ಕ್ಲಿಷ್ಟ, ಸಂಕೀರ್ಣ ಸನ್ನಿವೇಶ, ಪ್ರಸಂಗಗಳು, ನಮ್ಮ ಪ್ರಜಾಪ್ರಭುತ್ವ ಅಸ್ತಿತ್ವದ ಉಳಿವಿಗೇ ತೊಂದರೆ ಬಂವಿದ್ದಾಗ, ಇಡೀ ವಿಶ್ವವೇ ನಮ್ಮ ಕಡೆ ಇಂಥಾ ಸನ್ನಿವೇಶಗಳ ಸಮಯಗಳಲ್ಲಿ ಅತೀ ಕಾತುರದಿಂದ, ಪ್ರಶ್ನಾರ್ಹವಾಗಿ, ನೋಡುವಂಥ ಪರಿಸ್ಥಿತಿ ಬಂದಿದ್ದಾಗ, ಭಾರತ ಮಾತ್ರ ಪ್ರಜಾಪ್ರಭುತ್ವ ರಾಷ್ಟ್ರವೆಂದೇ ಬದುಕಿ ಬಾಳುತ್ತದೆ. ಇದನ್ನು ಅಳಿಸಲು ಅಸಾಧ್ಯ. ಪ್ರಪಂಚದಲ್ಲೇ ‘ಬೃಹತ್ ಪ್ರಜಾಗಣರಾಜ್ಯ’ ಎಂದು ಕರೆಯಲಾಗುತ್ತಿರುವ ಹೆಮ್ಮೆ, ಕೀರ್ತಿಯನ್ನು ಇನ್ನು ಮುಂದುವರಿಸಿಕೊಂಡು, ಪ್ರಜ್ವಲಗೊಳಿಸಿಕೊಂಡು ಹೋಗುತ್ತೇವೆ ಎಂಬ ಕುರುಹನ್ನು, ಪುರಾವೆಗಳನ್ನು, ವ್ಯಕ್ತಪಡಿಸುತ್ತಾ ಬಂದಿದ್ದೇವೆ. 1964, 1967, 1971, 1977, 1984ರ ಘಟನೆಗಳು-ನೆಹರು ಯುಗ ಕಳೆದು-ಶಾಸ್ತ್ರಿ ಯುಗ ಬಂದಳಿದು, ಶ್ರೀಮತಿ ಇಂದಿರಾಗಾಂಧಿ ಯುಗ ನಿರಂತರ, 1977-1980ರ ಮಧ್ಯಂತರ ವಿರಾಮದೊಡನೆ-ಸಾಗಿ 1984 ಆಕ್ಟೋಬರ್ 31ರವರೆಗೂ ಸಾಗಿ, ನಂತರ ದುರಂತಾವಸ್ಥೆಯಲ್ಲಿ ಮುಗಿದು, ಅನಂತರ, ಪರಿಣಾಮವಾಗಿ, ನೆಹರು ವಂಶದ ಕುಡಿ, ಶ್ರೀಮತಿ ಗಾಂಧಿಯವರ ತನಯ ಯುವ

ನೇತಾರ, ಮಾಜೀ ವಿಮಾನ ಚಾಲಕ, ಶ್ರೀ ರಾಜೀವ ಗಾಂಧಿಯವರ ಪ್ರಚಂಡ ಬಹುಮತದ ಆಯ್ಕೆ-1984ರ ಚುನಾವಣಾ ಮುಖೇನ,-ಈ ಎಲ್ಲವೂ ನಮ್ಮ ಪ್ರಜಾಪ್ರಭುತ್ವ ತತ್ವಶಃ ಅಸ್ತಿತ್ವಕ್ಕೆ ಸಾಕ್ಷಿ-ಈ ರಾಷ್ಟ್ರದಲ್ಲಿ.

ಆದರೂ ಅಂತರ್ಯದಲ್ಲಿ ಕೆಲವು ನ್ಯೂನತೆಗಳು, ವೇದನೀಯ ಸಂಗತಿಗಳು ಮನ ಗಾಣುತ್ತಿವೆ. ವಿಚಾರವಂತರಿಗೆ, ಇದು ಪ್ರಜಾಪ್ರಭುತ್ವದ ಕಾರ್ಯತಂತ್ರ ಸಫಲತೆಗೆ ಕಂಠಕ ಎನ್ನುವ ಅರಿವು ಬರುವುದರಿಂದ, ಅದನ್ನು ಪ್ರಕಟಪಡಿಸುವುದು ಇಲ್ಲಿಯ ಉದ್ದೇಶ. ಆದಕ್ಕೆ ಅಂಕಿ-ಅಂಶಗಳ ನೋಟ ಚಿತ್ರಣ.

ಅಂಕಿ-ಅಂಶಗಳ ನೋಟದಲ್ಲಿ ವ್ಯಕ್ತವಾಗುವ ವಿಷಯ: ಈ ಒಂದು ಕರ್ನಾಟಕ ರಾಜ್ಯದ ಲೋಕಸಭೆ ಕ್ಷೇತ್ರದ ಚುನಾವಣೆಯ ಅಂಕಿ-ಅಂಶ ನೋಟದಿಂದ, ಇಷ್ಟು ವಿಚಾರಗಳ ಅರಿವಿಗೆ ಅವಕಾಶ ಇದೆ. ಕರ್ನಾಟಕ ರಾಜ್ಯದಲ್ಲಿ ಒಟ್ಟು ಮತ ದಾರರ ಸಂಖ್ಯೆ, ಅದರಲ್ಲಿ ನಿಜವಾಗಿ ಮತ ಹಾಕಿದವರು, ಆ ಹಾಕಿದ ಮತಗಳಲ್ಲಿ, ತಿರಸ್ಕೃತ, ಪರಿಗ್ರಹಿತ-ಕಲಗೆಟ್ಟವು, ಮಾನ್ಯ ಮಾಡುವಂತಾದ್ದು, ಮತ ವಿಂಗಡಿಸಿ-ಪರ, ವಿರೋಧ, ಅನ್ಯ, ನಿರ್ದಳೀಯ ಎಂದು, ಮತ ಬಹಿಷ್ಕರಣ, ಮತಗಳ ಮೌಲ್ಯ ನಷ್ಟ.-ಸಾಮಾನ್ಯ, ಸಹಜವಾಗಿ, ವಿಗಿಲಾಗಿ, ಪ್ರಾತಿನಿಧ್ಯರಹಿತ ಪ್ರಜೆಗಳ ಸಂಖ್ಯೆ ಎಂಬಿತ್ಯಾದಿ ಸೂಚಕಗಳನ್ನು ಕೊಟ್ಟಿದೆ. ಒಂದು ಪಕ್ಷಿನೋಟದಿಂದ ಸಾಮಾನ್ಯ ಗ್ರಹಿಕೆ ನಮ್ಮ ಪ್ರಜಾತಂತ್ರ ವೈಖರಿ-ಕಾರ್ಯತತ್ಪರತೆ, ಈ ಒಂದು ರಾಜ್ಯದ ಮುಖೇನ ಅರಿಯಲು ಸಾಧ್ಯ.

ಇದೊಂದು ನಿಖರ ಸಂಖ್ಯೆ ಎಂದು ಹೇಳಲು ಸಿದ್ಧಾಂತರೂಪಿತ ಕಾರ್ಯ ಎಂದು ಹೇಳಲು ಕಷ್ಟ: ಕಾರಣ, ಹೀಗೆಯೇ ದಿನ ಪತ್ರಿಕೆಗಳು-ವರ್ತಮಾನ ಪತ್ರಿಕೆಯಲ್ಲಿ 'ಉದಯವಾಣಿ ಹಾಗೂ ಡೆಕ್ಕನ್ ಹೆರಾಲ್ಡ್ ದಿನಪತ್ರಿಕೆಗಳಲ್ಲಿ ಮುದ್ರಿತವಾದ ಚುನಾವಣಾ ವಿವರಣೆ, ದಾಖಲೆಗಳನ್ನು ಸಂಗ್ರಹಿಸಿ ಒಂದು ಸಾಮಾನ್ಯ ಸಮೀಕ್ಷೆ ಯಾಗಿ ಈ ಒಂದು ಕಾರ್ಯ ಮಾಡಲಾಗಿದೆ. ಹಾಗಾಗಿ, ಅಲ್ಲಲ್ಲಿ ತಪ್ಪುಒಪ್ಪುಗಳಿಗೆ ಅವಕಾಶ ಕೊಡಬಹುದು, ದಯಮಾಡಿ ಅಂಗೀಕರಿಸಿರಿ ಎಂದು ಹೇಳಬೇಕಾಗುತ್ತದೆ. ಕಾರಣ ನಾಲ್ಕಾರು ದಾಖಲೆಪ್ರತಿಗಳನ್ನು ವಿಚಾರ ಸಂಗ್ರಹಣ ಸಾಮಗ್ರಿಗಳನ್ನು ಬಳಸು ವಾಗ, ತುಲನೆ ಮಾಡುವಾಗ, ವ್ಯತ್ಯಾಸಗಳು ಭಿನ್ನತೆಗಳು ಕಂಡುಬರಲು ಸಾಧ್ಯತೆ ಇದೆ. ಅಂತಹ ಒಂದು ವ್ಯತ್ಯಾಸ ಚಿತ್ರಣ ತಮ್ಮ ಅವಗಾಹನೆಗೆ ಬಂದಲ್ಲಿ ಈ ಬರಹ ಗಾರನನ್ನು ಮನ್ನಿಸಬೇಕೆಂದು ಕೋರಿಕೆ. ಕಾರಣ, ನಾನು ಆಧರಿಸಿರುವ ಪತ್ರಿಕೆಗಳ ಮೇಲೆ, ಈ ಸಮೀಕ್ಷೆ ರಚಿಸುವಂತೆ, ನನಗೆ ಕುತೂಹಲ ಬಂದುದರಿಂದ, ಅದನ್ನೇ ಒಪ್ಪ ಬೇಕಾದುದು ನನಗೆ ಅನಿವಾರ್ಯವಾಗಿತ್ತು. ಏನಿದ್ದರೂ, ಸಮೀಕ್ಷೆಯ ವಿವರಣೆ ಹೀಗಿದೆ:

ಮತದಾರರ ಒಟ್ಟು ಸಂಖ್ಯೆ : ನಮ್ಮ ಈ ಕರ್ನಾಟಕ ರಾಜ್ಯ ಭಾರತ ಒಕ್ಕೂಟದ ಒಂದು ಅವಿಭಾಜ್ಯ ಸದಸ್ಯ ರಾಜ್ಯ. ಇಲ್ಲಿ ಡಿಶಂಬರ್ 24, 1984ರಂದು

ಚುನಾವಣೆ–28 ಲೋಕಸಭಾ ಕ್ಷೇತ್ರಗಳಿಗೆ ನಡೆಯಿತು. ಈ ಮುಂದೆ ವಿವರಿಸಿದ ರೀತಿ ಭಾರತೀಯ ಚುನಾವಣೆ ಆಯೋಗದ ವರದಿ ರೀತ್ಯ 1984ರ ಚುನಾವಣೆ ಸಂದರ್ಭದಲ್ಲಿ ರಾಜ್ಯದಲ್ಲಿ 2,11,05,057 (2,10,79,298) ಮತದಾರರು ದಾಖಲೆಯಾಗಿದ್ದಾರೆ. ಇದರಲ್ಲಿ ಗಂಡಸರು–1,07,21,785 ಮತ್ತು ಮಹಿಳೆಯರು, 1,03,83,272 ಮಂದಿ. ಇದು 1980ರ ಸಂಖ್ಯೆ–1,95,62,924 ಮತದಾರರಿಗಿಂತ–0,15,42,133 ಮಂದಿ ಮತದಾರರು ಜಾಸ್ತಿ ಆಗಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ಈಗ ಅಂದರೆ, 1973, ಮೇ 9ರ ಸಂವಿಧಾನದ 31ನೇ ತಿದ್ದುಪಡಿ ಕಾಯಿದೆ ಅನ್ವಯ, 1977ರ, 6ನೇ ಲೋಕಸಭೆ ಮೊದಲ್ಗೊಂಡು, 28 ಮಂದಿಗೆ ಲೋಕಸಭೆಯಲ್ಲಿ ಸ್ಥಾನವಿದೆ–ಅವರು ರಾಜ್ಯದ 28 ಕ್ಷೇತ್ರಗಳಿಂದ ಚುನಾಯಿತರಾಗಬೇಕು. ಈ ಎಲ್ಲ ಇಪ್ಪತ್ತೆಂಟು ಕ್ಷೇತ್ರಗಳ ಒಟ್ಟು ಮತದಾರರ ಸಂಖ್ಯೆ ಮೇಲೆ ಕೊಟ್ಟದ್ದು. ಪ್ರಜಾಸಂಖ್ಯೆ ಆಧಾರಿತ ಪ್ರಾತಿನಿಧ್ಯವಾದುದರಿಂದ, ಕರ್ನಾಟಕ 37,043, 451 ಜನಸಂಖ್ಯೆಗೆ (1981ರ ಜನಗಣತಿ ರೀತ್ಯ) 2 ಕೋಟಿ 11 ಲಕ್ಷ ಮೀರಿ ಮತದಾರರು ದಾಖಲೆಯಾಗಿದ್ದಾರೆ. ನೂತನವಾಗಿ, ಅಂದರೆ ಈಗ ತಾನೆ 21 ವರ್ಷ ಅರ್ಹ ವಯಸ್ಸಿನ ಯುವ ಮತದಾರರು ಕೂಡಿ. ಅಷ್ಟಾದರೂ, ಈ ಸಾರಿಯ ಚುನಾವಣೆಯ ಒಂದು ವೈಶಿಷ್ಟ್ಯ ಎಂದರೆ ದಾಖಲೆ ಸಂಖ್ಯೆಯಲ್ಲಿ ಮತಪಟ್ಟಿಯಲ್ಲಿ ಅರ್ಹಮತದಾರರು ಸೇರ್ಪಡೆಯಾಗದಿದ್ದುದು, ಕೈಬಿಟ್ಟುಹೋದುದು. ಸಾಮಾನ್ಯ ಜನ ಬಿಡಿ, ಅತ್ಯಂತ ಗಣ್ಯ ವ್ಯಕ್ತಿಗಳು, ಗ್ರಾಮೀಣ ಪ್ರದೇಶ ಬಿಡಿ,–ಅತ್ಯಂತ ಪ್ರಗತಿಪರ ಪ್ರದೇಶಗಳಲ್ಲೂ, ಮತದಾರ ಪಟ್ಟಿಯಿಂದ ಕೈಬಿಟ್ಟುಹೋದವರು, ಮಾನ್ಯ ಶ್ರೀ ಜಿ.ವಿ.ಕೆ. ರಾವ್, ಮಾಜಿ ಪ್ರಧಾನ ಕಾರ್ಯದರ್ಶಿ, ಕರ್ನಾಟಕ ಸರ್ಕಾರ ಮಾನ್ಯ ಕುವೆಂಪು, ರಾಷ್ಟ್ರಕವಿಗಳು; ಶ್ರೀ ಕೆ. ಹೆಚ್. ಪಾಟೀಲರು, ಕಾಂಗ್ರೆಸ್ (ಇ) ಅಧ್ಯಕ್ಷರು, ಇವರೆಲ್ಲ ಸೇರಿಕೊಂಡಿದ್ದಾರೆ. ಮತದಾನದ ಹಕ್ಕು ಚಲಾವಣೆ ನಷ್ಟವಾದವರಲ್ಲಿ. ಮತದಾರರ ಪಟ್ಟಿಯಲ್ಲಿ ದಾಖಲೆಯಲ್ಲಿಲ್ಲ ಎಂದಾದರೆ, ಮತದಾನದ ಹಕ್ಕು ಇದ್ದರೂ, ಚಲಾಯಿಸಲು ಅನರ್ಹರು ಎಂದಾಯಿತು. ಒಂದು ಅಮೂಲ್ಯವಾದ, ಅಸಾಧಾರಣವಾದ ಸ್ವತಂತ್ರ, ಸಾರ್ವಭೌಮ ಪ್ರಜೆಯ ಹಕ್ಕು, ಲಭ್ಯವಿದ್ದರೂ, ಕಳೆದುಕೊಂಡ ಹಾಗಾಯಿತು, ಸುವರ್ಣ ಅವಕಾಶ ಮಾಯವಾದಂತೆ ಆಯಿತು. ನೂತನವಾಗಿ ದಾಖಲೆಯಾಗುವವರು, ಈಗ ತಾನೆ 21 ವರ್ಷ ಆದವರು ದಾಖಲೆಯಾಗದಿದ್ದರೆ, ವಿಸ್ಮಯ ಹೆಚ್ಚಿನದು ಆಗುವುದು ಕಡಿಮೆ, ಆದರೆ ಮಾಮೂಲಿ ಮತದಾರರು, ಅನುಭವಿವ್ಯಕ್ತಿಗಳು ಕೈಬಿಟ್ಟುಹೋದರು ಎಂದರೆ ಪ್ರಜಾತಂತ್ರಕ್ಕೆ ಕಳಂಕ, ಯಂತ್ರದ ಕಾರ್ಯನಿಷ್ಫಲತೆಯನ್ನು ಸೂಚಿಸುತ್ತದೆ.

ಇದು ಒಂದು ವಿಚಾರವಾದರೆ ಇನ್ನೊಂದು ವಿಚಾರ, ಹೆಸರು ಸೇರ್ಪಡೆಯಾದರೂ, ವಿಚಿತ್ರ, ವಿಕೃತರೀತಿಯಲ್ಲಿ ನೊಂದಾವಣೆಯಾದುದು. ಪೂರ್ಣಹೆಸರಿನಲ್ಲಿ, ವಯಸ್ಸಲ್ಲಿ, ವಾಸಸ್ಥಳ, ಹೆತ್ತವರ, ಪೋಷಕರ, ಹೆಸರುಗಳ ವಿವರ ಇತ್ಯಾದಿಯಲ್ಲಿ

ಸಾಮಾನ್ಯ ಉದಾ.– ಶ್ರೀ ಅಟಲಬಿಹಾರಿ ವಾಜಪೇಯಿಯವರ ಹೆಸರು ವಿಕಲಿತ ಆಚ್ಛಾದುದು. ಇನ್ನು ಕೆಲವು ಸಂದರ್ಭದಲ್ಲಿ–ಜೀವಂತ ಇರುವವರ ಹೆಸರಿನಬದಲು, ವಿರುದ್ಧವಾಗಿ, ಪರಲೋಕವಾಸಿಗಳೂ, ಅನ್ಯ ಪ್ರದೇಶವಾಸಿಗಳ ಹೆಸರು ದಾಖಲೆಯಾದುದು ಗಮನಾರ್ಹವಾಗಿತ್ತು. ಬಹುಶಃ ಇಂತಹವರೇ, ಈ ಸಾರಿಯ ವಿಸ್ಮಯ ಕಾರಕ ಬದಲಾವಣೆಗೆ ಅಗೋಚರ ಶಕ್ತಿಯಾಗಿ ಕೆಲಸಮಾಡಲು ಕಾರಣವಾಗಿರಬಹುದು.

ಹಾಗೆಯೇ ಮತ್ತು ಒಂದು ವಿಚಾರ, ಲಿಂಗಪರಿವರ್ತನೆ, ಗಂಡು ಹೆಣ್ಣಿನ ಹೆಸರು ಅದಲುಬದಲು ಆದುದು. ವಾಸ್ತವಿಕವಾಗಿ, ವೈದ್ಯಕೀಯ ವೈಜ್ಞಾನಿಕತಂತ್ರ ರೀತ್ಯ ಆಗದಿದ್ದರೂ, ಈ ಚುನಾವಣ ಸಂದರ್ಭದಲ್ಲಿ ಆಶ್ಚರ್ಯಕರ ರೀತಿಯಲ್ಲಿ ಲಿಂಗ ಬದಲಾವಣೆಯಾದುದು ಒಂದು ತಮಾಷೆಯ ಸಂಗತಿ. ಚುನಾವಣಾ ಆಯೋಗದ ವರದಿ ರೀತ್ಯ ಕೆಲವು ಮತಗಟ್ಟೆಗಳ ಪ್ರದೇಶ, ಮತದಾರರ ಕ್ಷೇತ್ರ ಉಡುಪಿ, ಶಿವಮೊಗ್ಗ ಇನ್ನು ಕೆಲವೆಡೆಗಳಲ್ಲಿ ಮಹಿಳಾಮತದಾರರ ಸಂಖ್ಯೆಯೇ ಜಾಸ್ತಿ ಇತ್ತೆಂದು ದಾಖಲೆಯಿದೆ. ಈ ರೀತಿ ಅನಧಿಕೃತ ಲಿಂಗ ಬದಲಾವಣೆ ಹೆಸರು ಇದಕ್ಕೆ ಒಂದು ನಿದರ್ಶನವೇ ? ಅದೇ ನಮೂನೆಯಲ್ಲೂ ಈ ಸಾರಿಯ ಮಹಿಳಾಪ್ರಧಾನ ಮತದಾರರಿಂದಲೂ ವಿಸ್ಮಯಕಾರಕ ‘ ಅನುಕಂಪ ವಿಷಯ ’ (Sympathy factor) ಬದಲಾವಣೆಗೆ ಕಾರಣವಾಗಿರಬಹುದು. ಏನಾದರೂ ಹೆಣ್ಣಲ್ಲವಾ, ಅಥವಾ ಹೆಣ್ಣಿನ ಹೃದಯ ಲಕ್ಷಣವಂತರಲ್ಲವಾ ?. ಅನುಕಂಪಭರಿತ ಮಾನವಪ್ರಾಣಿವರ್ಗ.

[ಈ ರಾಜ್ಯದ 28 ಕ್ಷೇತ್ರದ ಆಯಾಯಾಭಾಗದ ಮತದಾರರ ಸಂಖ್ಯೆ–ಕಾಲಮು ನಂಬರು 3 ರಲ್ಲಿ ನಮೂದಿಸಿದೆ.]

ಒಟ್ಟುಮತದಾನ ಮಾಡಿದವರು–ಬಹಿಷ್ಕರಿಸಿದವರು : ಪ್ರಜಾರಾಜ್ಯದಲ್ಲಿ ರಾಜಕೀಯ ಹಕ್ಕು, ಸ್ವಾತಂತ್ರ್ಯ ಎಲ್ಲರಿಗೂ ಸರಿಸಮಾನವಾಗಿ ದೊರಕಬೇಕು ಎಲ್ಲರನ್ನು ಸಮಾನ ಅಂತಸ್ತಿನಿಂದ, ಅವಕಾಶ ಒದಗಿಸುವುದರ ಮುಖೇನ ಕಾಣಬೇಕು ಎಂದು ತತ್ವ ಇದೆ. ನಮ್ಮ ಸಂವಿಧಾನ ಕಾನೂನು ನಿಯಮ ಈ ಪರತ್ತನ್ನು ಪೂರೈಸಿ, ಎಲ್ಲ ಅರ್ಹಮತದಾರನಿಗೂ, ವಯಸ್ಕನಿಗೂ ಮತದಾನದ ಹಕ್ಕು ಲಭ್ಯವಾಗುವಂತೆ–ನ್ಯೂನತೆ ಅಲ್ಲಿ ಇಲ್ಲಿ ಇದ್ದರೂ–ಮಾಡಿದೆ. ಆದರೂ ಎಷ್ಟು ಮಂದಿ, ಯಾವಸಂಖ್ಯೆ ಮೊತ್ತದಲ್ಲಿ ಈ ಅರ್ಹಮತದಾರರು ಮತಚಲಾವಣೆ ಮಾಡುತ್ತಾರೆ, ಬಹಿಷ್ಕರಿಸಿದವರು, ಬಹಿಷ್ಕರಿಸುವವರು ಎಷ್ಟುಮಂದಿ, ಕಾರಣ ಏನೆಲ್ಲರೀತಿ ಊಹಿಸಬಹುದು, ಇರಬಹುದು ಎನ್ನುವುದೂ ಕೂಡ ಒಂದು ಪ್ರಾಸಂಗಿಕ, ಸ್ವಾರಸ್ಯಮಯ ವಿಚಾರ. ಈ ವಿಷಯವು ಕೂಡ ನಮ್ಮ ಪ್ರಜಾತಂತ್ರ ವೈಖರಿ, ಕಾರ್ಯತತ್ಪರತೆಗಳನ್ನು ಸ್ಫುಟ ಪಡಿಸುತ್ತದೆ.

2,11,05,057 (2,10,79,298) ಒಟ್ಟುಮತದಾರರಲ್ಲೂ, 1,37,33,427 (1,38,49,781) ಮಂದಿ ಮತದಾನ ಒಟ್ಟು–ಎಲ್ಲಾ 28 ಕ್ಷೇತ್ರಗಳು ಕೂಡಿ–

ಮಾಡಿದ್ದಾರೆ. ಮಹಿಳೆಯರು, ಪುರುಷರು, ನವಯುವಕರು, ಮಧ್ಯವಯಸ್ಕರು. ಶತಮಾನದ ಅಂಚನ್ನು, ದಾಟಿದವರು, ಹಿಂದುಳಿದವರು ಅಲ್ಪಸಂಖ್ಯಾತ, ಮುಂದುವರಿದವರು, ಸಾಮಾನ್ಯ ಜನತೆ, ವಿಶಾಲಾತಿ ವರ್ಗ ಬಹುಸಂಖ್ಯಾತ, ಸರ್ವಾಂಗ ಸದೃಢಸ್ಥರು, ಪೂರ್ಣಶರೀರದವರು, ಅಂಗವಿಹೀನ ಊನತೆಯುಳ್ಳವರು, ಸಬಲ, ದುರ್ಬಲರೂ, ದೀನ, ದಲಿತರೂ, ಒಟ್ಟಾರೆ ಎಲ್ಲಾ ಮಂದಿ ಮತದಾನ ಮಾಡಿದವರಲ್ಲಿ ಸೇರಿಕೊಳ್ಳುತ್ತಾರೆ. ಜೀನಾವಿಯವರು, ಹೇಗೂ ಆಯಿತಲ್ಲ. ಎಲ್ಲಿಯವರೆಗೆ ಅಂದರೆ, ಸಾಯುವುದಾದರೆ ಸರಿ, ಮತದಾನ ಮಾಡಿಯೇ ಮತಕಟ್ಟೆಯಲ್ಲಿಯೇ– ಮತದಾನದ ದಾರಿಯಲ್ಲಿಯೇ ಸರಿ ಎಂದು ತೀರ್ಮಾನಿಸಿ ಹೊರಟವರು–ಹೋದವರು, ಅಕಸ್ಮಾತ್ ಹಠಾತ್ತನೆ ಕುಸಿದು ಮರಣ, ಇರಿದು ಮರಣ, ನೂಕುನುಗ್ಗಲಿನ ಒತ್ತಡ ಭರಿಸಲಾಗದೆ ಮರಣ–ಎಲ್ಲ ಪುರಾವೆಗಳು.

ಇಷ್ಟಿದ್ದು ಮತಬಹಿಷ್ಕರಣ, ಸಂಖ್ಯೆ–ಲಕ್ಷಾಂತರ ಅರ್ಹಮತದಾರರೇ ಮತದಾನದಿಂದ ಹಿಂಸರಿದಿರುವುದು. ಎಲ್ಲಾ 28 ಕ್ಷೇತ್ರದಿಂದ ಒಟ್ಟಾರೆ–73,45,871 ಮತದಾರರು ಮತದಾನ ಕ್ರಿಯೆಯಿಂದ ಹಿಂಸರಿದಿದ್ದಾರೆ, ಬಹಿಷ್ಕರಿಸಿದ್ದಾರೆ. [ಕಾಲಮು 4ರಲ್ಲಿ ಒಟ್ಟು ಮತದಾನಮಾಡಿದವರ ಸಂಖ್ಯೆ ಇದ್ದರೆ ಕಾಲಮು 5 ರಲ್ಲಿ ಮತಬಹಿಷ್ಕರಣ ಸಂಖ್ಯೆ ಇದೆ.] ಈ ಒಂದು ಕ್ರಿಯೆಗೆ, ನಿಷ್ಕ್ರಿಯೆಗೆ, ಏನು, ಎಂತಹ, ಎಷ್ಟು ಕಾರಣ ಇರಬಹುದು, ಇರದಿಲ್ಲದಿರಬಹುದು. ಕಾರಣ, ನಮ್ಮದು ಸ್ವತಂತ್ರ, 'ಮತಾತೀತ,' ಪ್ರಜಾಪ್ರಭುತ್ವ (Liberal, Secular, and free Democracy).

ಮತಬಹಿಷ್ಕರಣೆಗೆ ಕಾರಣ–ಊಹೆಗಳು : ಮತದಾರರ ಪಟ್ಟಿಯಲ್ಲಿ ದಾಖಲೆ ಇಲ್ಲದೆ ಮತಹಾಕದಿರುವುದು, ಹಾಕಲಾಗದಿರುವುದು ಒಪ್ಪತಕ್ಕ ಕಾನೂನು— ಕಾರಣ. ಹಾಗೆಯೇ ಅನಿವಾರ್ಯ ಪ್ರಸಂಗಗಳಲ್ಲಿ, ಅನ್ಯ ಕಾರಣವಶಾತ್, ದಾರುಣ ವಶಾತ್, ಮತದಾನ ಬಹಿಷ್ಕರಿಸಿರುವುದು ಒಂದು ರೀತಿ ಒಪ್ಪುವಂತಾದ್ದೆ. ಆದರೆ ಉದ್ದೇಶಪೂರ್ವಕವಾಗಿ, ವಿಭಿನ್ನವಿಚಾರವಂತಿಕೆ, ಧೋರಣೆಯಿಂದ ಮತಬಹಿಷ್ಕರಿಸಿದ್ದರೆ, ನಮ್ಮದೇ ಆತ್ಮಪ್ರತಿಷ್ಠೆ, ಅಂತಸ್ತಿಕೆ ಪ್ರಶ್ನೆ, ಆಲಸ್ಯತನ, ಬೇಜವಾಬುದಾರಿತನ, ಜ್ಞಾನಾಂಧತೆ, ಅನುಭವಹೀನತೆ–ಇಂತಾದ, ಮುಂತಾದ ಕಾರಣಗಳಿಂದ ಮತದಾನದಿಂದ ಹಿಂಜರಿದಿದ್ದರೆ–ಸ್ವಲ್ಪ ಪ್ರಶ್ನಾರ್ಥಕವಾಗಿ ಪರಿಶೀಲಿಸಬೇಕಾಗುತ್ತದೆ.

ಮುಖ್ಯವಾಗಿ ಪರಿಗ್ರಹಿಸುವಂತಾದ್ದು, ಕೆಲವು ಕುತೂಹಲಕಾರಿ ಸಂಗತಿಗಳು– ಈರೀತಿ ಇರಬಹುದು. ಮತದಾನದ ಕಾಲ, ಸಮಯ, ಸಂದರ್ಭ, ಸನ್ನಿವೇಶ, ಚುನಾವಣಾದಿನ, ದಿನಾಂಕಗಳು, ಮತದಾರನಿಗೆ ಅನಾನುಕೂಲ ರೀತಿಯದ್ದಾಗಿರುವುದು. ಮತಕಟ್ಟೆ ತನ್ನ ವಾಸ್ತವ್ಯ ಸ್ಥಳದಿಂದ ಅತಿ ದೂರ ಇರುವುದು. ಹಾಗಂತ ಮತದಾರರನ್ನು ಮತಗಟ್ಟೆಗೆ ಸಾಗಿಸುವುದು, ಆಸಕ್ತ ಪಕ್ಷ, ಅಭ್ಯರ್ಥಿ ಬೆಂಬಲಿಗರಿಂದ

ಕಾನೂನುರೀತ್ಯ ದಂಡನಾರ್ಹ ಅಪರಾಧ, ಮುಕ್ತ ಚುನಾವಣೆಗೆ ವಿರುದ್ಧ, ಅನಾರೋಗ್ಯ, ಮುಂತಾದ ಕಾರಣಗಳು, ಸಾಧಾರವಾದುದು.

ಇನ್ನು ಕೆಲವು ಸಂದರ್ಭದಲ್ಲಿ ರಾಜಕೀಯ, ಪಕ್ಷಗಳ ಕ್ರಿಯಾತಂತ್ರ, ಮತದಾನಕ್ಕೆ ಪ್ರತಿಬಂಧಿತವಾಗುತ್ತವೆ. ಈ ಸಾರಿಯಲ್ಲೂ ಇಂತಹ ಪ್ರಸಂಗಗಳು ಹಲವಾರು. ಮತದಾರನಿಗೆ ಅರ್ಹವಾದ ಅಭ್ಯರ್ಥಿ, ಪಕ್ಷ, ಧೋರಣೆ, ಇಲ್ಲದಿಲ್ಲ ದಿರುವುದು, ಅನ್ಯ ಪಕ್ಷ, ಅಭ್ಯರ್ಥಿ, ವಿರುದ್ಧಧೋರಣೆಗೆ ಸಮ್ಮತಿಸದೇ ಬೆಂಬಲಿಸದೆ, ಮತದಾನಕ್ರಿಯೆಯಿಂದ ಹಿಂದೆ ಸರಿಯುವುದು, ಪ್ರಬಲ ಕಾರಣ. ಉಡುಪಿ, ಮಂಗಳೂರು, ಚಿಕ್ಕಮಗಳೂರು, ಶಿವಮೊಗ್ಗ ಮುಂತಾದ ಕಡೆ ಮತದಾನ ರೀತಿ ನೋಡಿದರೆ ಅಂದಾಜಾಗುತ್ತದೆ, ಕಾಂಗ್ರೆಸ್ಸಿಗೆ ವಿರುದ್ಧ, ಜನತಾ ಮೈತ್ರಿ—ಜನತಾ ಪಕ್ಷ, ಯಾ ನಿರ್ದಳೀಯ ವ್ಯಕ್ತಿ ನಿಂತು, ಆಯಾಯ ಪಕ್ಷ, ಅಭ್ಯರ್ಥಿ ನಿಷ್ಠರು, ಅವರಿಗೆ ಬೇಕಾದ ಪಕ್ಷ, ಅಭ್ಯರ್ಥಿ ಮತದಾನ ಮುಖೇನ ಬೆಂಬಲ ನೀಡಲು ಅವಕಾಶ ಸಿಗದಿದ್ದಾಗ ಮತ ಬಹಿಸ್ಕರಿಸುವುದು ಸಾಮಾನ್ಯ, ಸಹಜ, ಚಿಕ್ಕಮಗಳೂರು ಕ್ಷೇತ್ರದಲ್ಲಿ, ಕಟ್ಟಾ ಜನತಾ, ಬಿ.ಜೆ.ಪಿ. ಬೆಂಬಲಿಗರು ಕಾಂಗ್ರೆಸ್‌ಗೆ, ಕಮ್ಯುನಿಸ್ಟರಿಗೆ (ಜನತಾ ಬೆಂಬಲಿತ) ಮತ ಹಾಕಲು ಇಷ್ಟಪಡಲಿಲ್ಲ ಮತ ಹಾಕಲಿಲ್ಲ. ಹಾಗೆಯೇ ಮಂಗಳೂರಿನಲ್ಲಿ, ಕಾಂಗ್ರೆಸ್, ಬಿ.ಜೆ.ಪಿ. ವಿರೋಧಿಗಳು ತಮ್ಮ ನಿಲುವಿನ ಪಕ್ಷ, ಅಭ್ಯರ್ಥಿ ಇಲ್ಲದಾಗ, ಮತಬಹಿಷ್ಕರಣ ಮಾಡಿರಬಹುದು. ಇಂತಹ ಉದಾಹರಣೆ ಸಿಗುತ್ತದೆ.

ಮತ್ತೆ ಕೆಲವು ಕಾರಣ, ನಮ್ಮ ಪ್ರತಿನಿಧಿಗಳ ಕಾರ್ಯ ವೈಖರಿ, ಪ್ರತಿಷ್ಠೆ ಒಮ್ಮೆ ಚುನಾಯಿತರಾಗಿ, ಶಾಸಕಾಂಗ, ಸರ್ಕಾರದ ಸದಸ್ಯನಾದಮೇಲೆ, ಚುನಾವಣೆ ಮುಗಿದು ಗೆದ್ದನಂತರದಲ್ಲಿ, ಆತ ತಿರುಗಿ ತನ್ನ ಕ್ಷೇತ್ರದ ಕಡೆ ನೋಡಬೇಕಾದರೆ, ಪಾದಾರ್ಪಣೆ ಮಾಡಬೇಕಾದರೆ ಇನ್ನೊಂದು ಚುನಾವಣೆ ಬರಬೇಕು, ಅವನಿಗೆ ಸ್ಥಾನ ಸಿಗಬೇಕು. ಅವರೆವಿಗೆ ತನ್ನ ಮತದಾರನನ್ನು ಕ್ಷೇತ್ರವನ್ನು ಮರೆಯುತ್ತಾನೆ. ಪ್ರಜಾಕ್ಷೇಮ, ಕ್ಷೇತ್ರಪ್ರಗತಿ ಎಲ್ಲಾ ಕಡೆಗಣಿಸಿ ತನ್ನ ಸ್ವಂತ ಪ್ರತಿಷ್ಠೆ ಪ್ರಗತಿ ಬೆಳೆಸಲು ವಿಮನಸ್ಕನಾದಾಗ ಮತದಾರರು–ಸಾಮೂಹಿಕವಾಗಿ, ವರ್ಗಗುಂಪಾಗಿ ವೈಯುಕ್ತಿಕವಾಗಿ ಬಹಿಸ್ಕರಿಸುವುದು, ಬಹಿಷ್ಕರಿಸಿರುವುದು ಸಾಕ್ಷ್ಯಾಧಾರಿತ ಕಾರಣ ವಾಗಿದೆ.

ಮತ್ತೆ, ಪಕ್ಷದ ಸದಸ್ಯರುಗಳಲ್ಲಿ, ಧುರೀಣರಲ್ಲಿ, ಕಾರ್ಯಕರ್ತರುಗಳಲ್ಲಿ, ಅನುಮೋದಕರು, ಬಂಡಾಯಗಾರರು, ತಾಟಸ್ಥ್ಯವರ್ಗ ಎಂಬ ವೈವಿಧ್ಯತೆ, ಇತ್ತೀಚಿನ ಸನ್ನಿವೇಶಗಳಲ್ಲಿ ಅಸಂಖ್ಯಾತ ವ್ಯಕ್ತಿಗಳು, ಪಕ್ಷಗಳು, ಚುನಾವಣೆ ನಿಮಿತ್ತ ಮಾತ್ರ ನಿಂತುಕೊಂಡು ಒಂದು ಸಾಮಾನ್ಯ ಸುವ್ಯವಸ್ಥಿತ ಚುನಾವಣಾ ಕ್ರಮವನ್ನು ಕಲುಷಿತ ಗೊಳಿಸುವುದೂ ಕೂಡ ಮತ್ತೊಂದು ಕಾರಣ.

ಇನ್ನು ಕೆಲವು ಪ್ರತಿಷ್ಠಿತ, ತತ್ವವೇತ್ತ ವ್ಯಕ್ತಿಗಳಲ್ಲಿ, ಶ್ರೀ ಮುರಾರ್ಜಿ ಭಾಯಿ, ಶ್ರೀ ಜಾರ್ಜ್ ಫರ್ನಾಂಡೀಸ್ ಅಂತವರಲ್ಲಿ ಒಂದು ರೀತಿಯ ಭಾವನೆ, ಮತ ಪ್ರತಿಭಟನೆಗೆ ಶ್ರೀ ಮುರಾರ್ಜಿಯವರು, ವಿರೋಧ ಪಕ್ಷಗಳ ಮೈತ್ರಿಕೂಟ ವಿಫಲತೆಯನ್ನು ಪ್ರತಿಭಟಿಸಿ ಮತದಾನಮಾಡಲಿಲ್ಲ, ಶ್ರೀ ಫರ್ನಾಂಡೀಸರು ಅನ್ಯಸ್ಥಳ ವಾಸ್ತವ್ಯದಿಂದ ಡಿಲ್ಲಿಯಿಂದ ದೂರ ಬೆಂಗಳೂರಲ್ಲಿ ನೆಲಸಿದ್ದರಿಂದ ಮತದಾನ ಮಾಡದಿದ್ದುದು, ಈ ಎಲ್ಲಾ ಮತದಾನ ಬಹಿಷ್ಕರಣ ಅಸಂಖ್ಯಾತಬಲಕ್ಕೆ ಕಾರಣವಾಗುತ್ತವೆ. ಈ ರೀತಿಯ ಮತ ಬಹಿಷ್ಕರಣ ಮತಗಳ ಮೌಲ್ಯನಷ್ಟಕ್ಕೆ ಕಾರಣವಾಗುವುದು ಮಾತ್ರವಲ್ಲ, ಪ್ರಜಾಪ್ರಭುತ್ವ ತತ್ವ ಏಕವ್ಯಕ್ತಿ ಏಕಮತ, ಏಕಬೆಲೆ ಇದಕ್ಕೆ ಮಾರಕ.

ಮತದಾನ ಹಾಕಿದ್ದು ಮತದಾನ ಬಹಿಷ್ಕರಿಸಿ ಮೌಲ್ಯನಷ್ಟಕ್ಕೆ, ಹಕ್ಕು ಹರಣಕ್ಕೆ ಕಾರಣ, ಸಂಖ್ಯೆ ಸಾಕಷ್ಟಿದ್ದರೆ, ಈಗ ಮತದಾನ ಮಾಡಿದ್ದರೂ, ಅವುಗಳಲ್ಲಿ ಎಷ್ಟು ಮತಗಳಿಗೆ ಸರಿಯಾದ, ಸಹಜವಾದ, ಶಾಸನಬದ್ಧ ಮೌಲ್ಯ, ಮಾನ್ಯತೆ, ಅಪಮೌಲ್ಯ, ಅಮಾನ್ಯತೆ ಆಗುತ್ತದೆ ಎಂದು ನೋಡುವುದು, ಅರಿಯುವುದು ಮತ್ತೊಂದು ಆಚ್ಚರಿಯ ಸಂಗತಿ. ಮಾನ್ಯವಾದಲ್ಲಿ ಆ ಮತಕ್ಕೆ ಮೌಲ್ಯ ಸಿಗುತ್ತದೆ, ಸ್ವೀಕೃತ, ಪರಿಗ್ರಹಿತ ಮತವಾಗುತ್ತದೆ, ಇಲ್ಲವಾದಲ್ಲಿ ಕುಲಗೆಟ್ಟ ಮತಗಳಾಗಿ, ಅಮಾನ್ಯವಾಗಿ, ತಿರಸ್ಕೃತವಾಗಿ ಮೌಲ್ಯನಷ್ಟವಾಗುತ್ತವೆ. ಈ ಸಂಗತಿಯಿಂದಲೇ ನಮ್ಮ ಪ್ರಜಾಪ್ರಭುತ್ವ ಕಾರ್ಯವೈಖರಿ ನೋಡಲು ಸಾಧ್ಯ.

ತಿರಸ್ಕೃತ, ಕುಲಗೆಟ್ಟ ಮತಗಳು: (ಕಾಲಮು 6ರಲ್ಲಿ ಇದರ ಸಂಖ್ಯೆ ಇದೆ) ಲೆಕ್ಕಾಚಾರದಲ್ಲಿ ಎಲ್ಲಾ 28 ಕ್ಷೇತ್ರಗಳಿಂದ 3,49,876 (3,40,546) ಮತಗಳು ಕುಲಗೆಟ್ಟ ತಿರಸ್ಕರಿಸಲಾದ ಜಾತಿಗೆ ಸೇರಿವೆ. ಪ್ರಜಾಸ್ವಾತಂತ್ರ ಸಿಕ್ಕಿ 37 ವರ್ಷಗಳು ಸಂದರೂ, ಪ್ರಜಾತಂತ್ರ ಶಿಕ್ಷಣ, ಅನುಭವ ಈ 37ವರ್ಷ ಪರ್ಯಂತ ದೊರಕುತ್ತಿದ್ದರೂ, ಈ ರೀತಿ ಕುಲಗೆಡುವ ಮತಗಳು ದೊರಕುವುದು ಹಾಸ್ಯಾಸ್ಪದ, ಶೋಚನೀಯ; ಸಂಸ್ಕರಣೆ, ಸಂಶೋಧನೆಗೆ ಆಸಕ್ತಿ, ಆಧಾರ; ಬಹಿಷ್ಕೃತ ಮತಗಳ ಸಂಖ್ಯೆಯ ಜೊತೆಯಲ್ಲಿ, ಈ ಕುಲಗೆಟ್ಟ ಮತಗಳ ಸಂಖ್ಯೆಯೂ ಮತಗಳ ಮೌಲ್ಯ ನಷ್ಟಕ್ಕೆ ಪ್ರಜಾಪ್ರಭುತ್ವ ತತ್ವಾಧಾರದ ಮೌಲ್ಯ ನಷ್ಟಕ್ಕೆ ಪ್ರಜಾತಂತ್ರ ಕುಶಲತೆಯ ಕುಂಠಿತತನಕ್ಕೆ ಕಾರಣ ಬಂಧುಗಳು. ಅಂಚೆ ಮತದಾನ ಅವಕಾಶ ಇದ್ದರೂ ಮತ ಬಹಿಷ್ಕರಣವಾಗುತ್ತದೆ.

ಕಾರಣಗಳು ಮತ ಬಹಿಷ್ಕರಣಕ್ಕೆ ಕೊಟ್ಟಂತೆಯೇ ಇರಬಹುದು. ಮುಖ್ಯವಾಗಿ ಮತ ನಷ್ಟವಾದರೂ ಚಿಂತೆಯಿಲ್ಲ, ಆದರೆ ಹಕ್ಕು ಕಳಕೊಳ್ಳಲು ಅಸಾಧ್ಯ ಎನ್ನುವುದು. ಅನಕ್ಷರತೆ, ಅಜ್ಞಾನ, ಮತದಾನ, ಮುದ್ರೆ ಒತ್ತುವ ಕಲೆ, ತಂತ್ರ ಗೊತ್ತಿಲ್ಲದಿರುವುದು, ಮತಚೀಟಿ, ಪತ್ರ ಮಡಚುವ ತಂತ್ರ ವಿಧಾನ ಸರಿಯಾಗಿ ಗೊತ್ತಿಲ್ಲದಿರುವುದು, ದ್ವಂದ್ವ ಅಭಿಪ್ರಾಯಕ್ಕೆ ಎಡೆ ಕೊಡುವುದು, ಅಭ್ಯರ್ಥಿಗಳ

ಸಂಖ್ಯೆ ಜಾಸ್ತಿಯಾಗಿ ಮತ ಪತ್ರ ದೀರ್ಘವಾಗಿ, ಸಂಖ್ಯೆ ನಂಬ್ರ, ಅಭ್ಯರ್ಥಿಯ ಹೆಸರು, ಚಿನ್ಹೆ, ಗೊಂದಲಕ್ಕೆ ಎಡೆ ಮಾಡುವುದು–ಎಲ್ಲ ಕಾರಣಗಳು ಸಿಗುತ್ತವೆ.

ವ್ಯಂಗ್ಯ ನುಡಿಗಳಂತೆ–"ತಮ್ಮ ಹೆಸರಿಗೆ ಮಸಿ ಹಚ್ಚಲು ಮನಸ್ಸಿಲ್ಲ ಸ್ವಾಮಿ, ಹಾಗಾಗಿ ವಿರೋಧಿಗೆ, ಅನ್ಯರಿಗೆ ಕೊಟ್ಟೇಕೊಡಲಿಲ್ಲ;" ಯಾರನ್ನು ಬಿಡಲಿಕ್ಕೆ ಆಗಲಿಲ್ಲ, ಎಲ್ಲವರು ಬೇಕು. ಎಲ್ಲವರ ಬಗ್ಗೆ ಸಹಾನುಭೂತಿ, ಹಾಗಾಗಿ ಎಲ್ಲವರಿಗೂ–ಬೇಕಾದ ವರಿಗೂ ಒತ್ತುವುದು, ಅಂಚೆ ಮತ ಪತ್ರ ವಿಲೇವಾರಿ ವಿಳಂಬ, ದೊರಕದೆ ಇರುವುದು, ಕೆಲವು ಕಾರಣಗಳು ಕುಲಗೆಟ್ಟ ಸಂಗ್ರಹಣ ಗುಂಪಿಗೆ ಸೇರಲು ಸಾಧಕವಾಗುತ್ತವೆ. ಏಕೆ ಅಂದರೆ' ಒಬ್ಬನಿಗಿಂತ ಜಾಸ್ತಿಯಾಗಿ ಅಭ್ಯರ್ಥಿಗೆ, ಪಕ್ಷಕ್ಕೆ–ಚಿನ್ಹೆಗೆ ಮತ ಹಾಕಿದಲ್ಲಿ–ಕೆಲವು ಸಾರಿ, ಮುದ್ರೆಯಲ್ಲಿ ಶಾಯಿ ಇನ್ನು ಉಳಿದಿದ್ದು, ಮಾಸುವವರೆಗೂ ಒತ್ತಿದ್ದಿರಬಹುದು. 'ಏಕಮತ, ಏಕಬೆಲೆ' ನೀತಿಗೆ ವಿರುದ್ಧ; ಅಂತಹ ಮತ ತಿರಸ್ಕೃತ. ಕೆಲವು ಕ್ಷೇತ್ರಗಳಲ್ಲಿ, ಕೊಪ್ಪಳ, ರಾಯಚೂರು, ಬಳ್ಳಾರಿಗಳಂತಹ ಕ್ಷೇತ್ರಗಳಲ್ಲಿ, ಅತೀ ದೀರ್ಘ ಸಂಖ್ಯೆಯಲ್ಲಿ ಈ ಕುಲಗೆಟ್ಟ ಜಾತಿಯ ಮತಗಳು ಸಿಗುತ್ತದೆ.

ಅತೀ ಹಿಂದುಳಿದ, ಅನಕ್ಷರಸ್ಥ, ವಿಚಾರ ಹೀನರಿರುವಂಥಾ ಅನುಭವ ಪರಿಪಕ್ವರಾಗಿರದಿರುವಂತ ಕ್ಷೇತ್ರಗಳಲ್ಲಿ ಇಂಥದ್ದಾದರೆ ವೇದನೆ ಕಡಿಮೆ, ಎಲ್ಲ ಅಕ್ಷರಸ್ಥರು, ವಿದ್ಯಾವಂತರು, ಬುದ್ಧಿವಂತರು, ವಿಚಾರ, ಅನುಭವ ಹೇರಳ ಇರುವಂತಹವರು, ಪ್ರಗತಿಪರ ಪ್ರದೇಶಗಳಲ್ಲಿ, ಇಂಥದ್ದಾದರೆ ಸ್ವಲ್ಪ ವಿಚಾರ ಮಾಡಬೇಕಾಗುತ್ತದೆ. ಬೆಂಗಳೂರು, ಮಂಗಳೂರು, ಉಡುಪಿ, ದಾವಣಗೆರೆ, ಮೈಸೂರು ಮುಂತಾದ ಸುಶಿಕ್ಷಿತ ನಾಗರಿಕರಿರುವಂತ ಸ್ಥಳಗಳನ್ನು ವೀಕ್ಷಿಸಿದರೆ, ಇದರ ಅರ್ಥವಾಗುತ್ತದೆ. ಪ್ರಜಾಪ್ರಭುತ್ವದ ತತ್ವದ ಬಗ್ಗೆ–ಕಾರ್ಯತತ್ಪರತೆ ಬಗ್ಗೆ ಅಸಡ್ಡೆ, ಅಶಾಂತಿ ತೋರಿಸಿದ ಹಾಗೆ ಆಗುತ್ತದೆ–ಮತ ಬಹಿಷ್ಕರಣ ಹಾಗೂ ಕುಲಗೆಟ್ಟ ಮತಗಳ ಸಂಖ್ಯೆಗಳು, ನೂತನ ಮತದಾರ ಪ್ರಪ್ರಥಮವಾಗಿ ಮತದಾನ ಮಾಡುವವರ ಈ ರೀತಿ ದಾರುಣ ಪ್ರಸಂಗಕ್ಕೆ ಎಡೆ ಮಾಡುವುದು ಹೆಚ್ಚಿನ ಅಚ್ಚರಿಯ ಸಂಗತಿಯಾಗುವುದಿಲ್ಲ. ಮತ ದಾನವೂ ಒಂದು ಕಲೆಯೆಂದು, ಕ್ರಿಯಾಭ್ಯಾಸ, ಅನುಭವದಿಂದಲೇ ರೂಢಿಯಾಗ ಬೇಕು ಎಂದು ಒಪ್ಪಿಕೊಳ್ಳುವುದಿದ್ದಲ್ಲಿ.

ಏನಿದ್ದರೂ ಈ ಬಹಿಷ್ಕೃತ ಹಾಗೂ ತಿರಸ್ಕೃತ ಮತಗಳು ಸಹಜ ಮತಗಳ ಮೌಲ್ಯ ನಷ್ಟಕ್ಕೆ ಗುರಿಯಾಗುತ್ತವೆ. ಇದನ್ನು ಕಾಲಮು 18ರಲ್ಲಿ ನಮೂದಿಸಿದೆ.

ಮತ ವಿಂಗಡಣೆ–ಪರ, ವಿರೋಧ, ನಿರ್ದಳೀಯರಿಗೆ-ಪಕ್ಷ, ಅಭ್ಯರ್ಥಿ, ಎಂದು: ಈಗ ಚಲಾಯಿತ ಮತಗಳ ಒಟ್ಟು ಸಂಖ್ಯೆಯಲ್ಲಿ ಕುಲಗೆಟ್ಟ ಮತಗಳ ಸಂಖ್ಯೆ ಜೊತೆಯಲ್ಲಿ, ಹೊರತಾಗಿ, ಮಾನ್ಯವಾದ, ಸ್ವೀಕೃತವಾದ, ಶಾಸನಬದ್ಧವಾಗಿ ಮತಗಳು ಹಲವು ಪಾಲಾಗಿ ಹಂಚಿ ವಿಂಗಡಿಸಿ ಹೋಗುತ್ತವೆ–ಪಕ್ಷದ–ಆಡಳಿತ–(ಅಂದರೆ ಇಲ್ಲಿ ಲೋಕಸಭಾ ಕ್ಷೇತ್ರದಲ್ಲಿ–ಕೇಂದ್ರದ–ಆಡಳಿತ ಪಕ್ಷ, ಅಭ್ಯರ್ಥಿ ಎಂದರೆ

ಕಾಂಗ್ರೆಸು (ಇ)–ವಿರೋಧ ಅಂದರೆ, ಕರ್ಣಾಟಕದಲ್ಲಿ–ಜನತಾ–ಜನತಾ ಮೈತ್ರಿ ಪಕ್ಷಗಳು ಕರ್ಣಾಟಕ ರಾಜ್ಯ ' ಜನತಾ ' ಸರ್ಕಾರ ತೆಗೆದುಕೊಂಡರೆ, ಜನತಾ ಪರ ಎಂದು ಆಗಬಹುದು)-ವಿರೋಧಿ-ಅಭ್ಯರ್ಥಿ ಪರ, ವಿರೋಧ,–ಹಾಗೆಯೇ ಪಕ್ಷಾತೀತ, ಪಕ್ಷೇತರ, ನಿರ್ದಲೀಯ, ಅನ್ಯರಿಗೆ ಎಂದು ಹಂಚಿ ಹೋಗುತ್ತಿವೆ. ಈ ರೀತಿಯ ಹಂಚುವಿಕೆ; ಹೆಚ್ಚು, ಕಡಿಮೆ, ಕನಿಷ್ಠ ಗರಿಷ್ಠ, ಪರ ವಿರೋಧ–ಅನ್ಯರಿಗೆ ಎಂದು, ಅವರೊಳಗಿನ ಸೋಲು, ಗೆಲವು ಜಯ; ಅಪಜಯ ತೀರ್ಮಾನ ಮಾಡುತ್ತದೆ; ಅಧಿಕಾರ ಸ್ಥಾನ ಅಲಂಕರಿಸುವ ಅದೃಷ್ಟ, ದುರಾದೃಷ್ಟ ತೀರ್ಮಾನವಾಗುತ್ತದೆ.

ವಿಚಾರ ತಿಳಿಸಬೇಕಾದರೆ, ಖಾತ್ರಿಯಾಗಿ ಗೆಲ್ಲುವಂಥ, ವಿಜಯದ ಭರವಸೆಯನ್ನು ಮೂಡಿಸುವಂತಹ ವ್ಯಕ್ತಿಗಳಿಗೆ, ಅಭ್ಯರ್ಥಿಗಳಿಗೆ ಮತ ಸಾಗಿಹೋದರೆ ಅದಕ್ಕೆ ಸ್ಪಷ್ಟ ಮೌಲ್ಯ ಸಿಗುತ್ತದೆ. ಇಲ್ಲವಾದಲ್ಲಿ, ಅನ್ಯರಿಗೆ, ಪಕ್ಷೇತರರಿಗೆ, ಯಾ ಬಹುಪಾಲು ಅಂಶ ಠೇವಣಿ ಕಳಕೊಂಡವರಿಗೆ ಮತದಾನಮಾಡಿದ್ದು ತಿರುಗಿ ಮತಗಳ ಮೌಲ್ಯನಷ್ಟಕ್ಕೆ ಆಸ್ಪದ ಆಗುತ್ತದೆ. ಅಂತಹ ಮತಗಳು ಬಹಿಷ್ಕೃತ, ತಿರಸ್ಕೃತ ಮತಗಳ ಸಾಲಿಗೆ ಸೇರಿ ಮೌಲ್ಯನಷ್ಟ ಸಂಗ್ರಹಣ ಗುಂಪಿಗೆ ಸೇರುತ್ತವೆ ಎನ್ನುವುದು ನನ್ನ ಸಾಮಾನ್ಯ ತೀರ್ಮಾನ. ಇದನ್ನು ಕಾಲಮು 17ರಲ್ಲಿ ಸೂಚಿಸಿದೆ. ಎಲ್ಲ 28 ಕ್ಷೇತ್ರಗಳ ವಿಜೇತ ಅಭ್ಯರ್ಥಿಗಳ (ಪಕ್ಷಗಳ) ಮೀಸಲಾತಿ ನಾಲ್ಕು ಕ್ಷೇತ್ರಗಳು ಸೇರಿ, ಕಾಂಗ್ರೆಸ್ಸು 24, ಜನತಾ 4 ಸ್ಥಾನಸೇರಿ ವಿಜೇತರ ಒಟ್ಟು ಸಂಖ್ಯಾ ಮೊತ್ತ–ಮತ-ಕಾಲಮು 8ರಲ್ಲಿ ಸೂಚಿಸಿದಂತೆ, 71,46,213; ಹಾಗೆಯೇ ವಿರೋಧಿಗೆ–ಪಕ್ಷ, ಅಭ್ಯರ್ಥಿಗೆ–ಇಲ್ಲಿ ವಿರೋಧಿ-ಅತೀ ಸಮೀಪ, ನೇರ, ತೀವ್ರ ವಿರೋಧಿ–ಸ್ಪಷ್ಟವಾಗಿ ಮಾನ್ಯಮಾಡುವಂತ ವಿರೋಧಿ ದೊರಕಿದ ಮತ ಕಾಲಮು ನಂ. 9ರ ರೀತ್ಯ ಒಟ್ಟು 54,79,826 ಮತಗಳು; ಅನ್ಯರಿಗೆ, ಪಕ್ಷೇತರರಿಗೆ, ದೊರಕಿದ್ದು ಕಾಲಮು 12ರ ರೀತ್ಯ-87,12,86 ಮತಗಳು, ಅಂದರೆ, ವಿಜೇತ ಪರಾಜಿತ-ನೇರ ವ್ಯಕ್ತಿಗಳ ಜೊತೆಯಲ್ಲಿ ಬಹುಪಾಲು ಸಂಖ್ಯೆ ಮೊತ್ತದ ಮತಗಳನ್ನು ಅನ್ಯರು, ನಿರ್ದಳೀಯರು, ಪಕ್ಷೇತರರೂ ಪಡಕೊಂಡಿದ್ದಾರೆ-ಎಲ್ಲ 28 ಕ್ಷೇತ್ರಗಳು ಕೂಡಿ.

ಈ ಸಾರಿಯ ಚುನಾವಣೆಯಲ್ಲಿ-ಒಟ್ಟಿಗೆ-334 (337, 343?) ಸ್ಪರ್ಧಿಸಿದ್ದು, ಕರ್ಣಾಟಕ 28 ಕ್ಷೇತ್ರಗಳಲ್ಲಿ ಅದರಲ್ಲಿ ಕಾಂಗ್ರೆಸ್ಸು 28 ಸ್ಥಾನ, ಜನತಾ-ಜನತಾ ಮೈತ್ರಿ 28 ಸ್ಥಾನಕ್ಕೆ ನೇರ-ಪರ-ವಿರೋಧಿಗಳಾಗಿ-ಅನ್ಯರು 278 (281) ಮಂದಿ ಅಭ್ಯರ್ಥಿಗಳಾಗಿ ಸ್ಪರ್ಧಿಸಿದ್ದರು. ಈ ಅನ್ಯರಲ್ಲಿ 278 ಮಂದಿ (267) ಮಂದಿಗೆ ಠೇವಣಿ ನಷ್ಟವಾಗಿದೆ. ಬೆಳಗಾವಿಯ ಒಂದು ಕ್ಷೇತ್ರದಲ್ಲಿ ಮಾತ್ರ ಒಂದು ಲಕ್ಷಕ್ಕೂ ಮೀರಿ, ಒಬ್ಬ ಅಭ್ಯರ್ಥಿ 60,000 ಮೀರಿ ಪಡೆದ ಮತಸೇರಿ-ಮತ ಪಡೆದಿದ್ದಾರೆ ಅನ್ಯರು, ಪಕ್ಷೇತರರು.

ಈ ಒಂದು ದಾಖಲೆ, ಅನ್ಯರಿಗೆ, ಪಕ್ಷೇತರರಿಗೆ ಠೇವಣಿ ಕಳಕೊಂಡವರಿಗೆ ದೊರಕಿದ, ದೊರಕುವಂತಹ ಮತಗಳು ಪರಿಗ್ರಹಣೀಯ ವಿಷಯ. ಇವರನ್ನು, ದಾಖಲೆಗೆ, ಚುನಾವಣೆ ಮುನ್ನ, ಸಂದರ್ಭ, ಸಮಯ, ನಂತರ ಲೆಕ್ಕಚಾರಕ್ಕೆ ಹಿಡಿಯುತ್ತಾರೆ. ಇವರು ಪಡೆಯುವಂತ ಬಲದಿಂದ ಸಂಖ್ಯೆಯಿಂದ ಆಳುವ ವಿರೋಧ ಪಕ್ಷಗಳ ನೆಲಗಟ್ಟು, ಧೋರಣೆ, ಭದ್ರತೆ, ಶಿಥಿಲತೆ, ಜೆಂಬಲ, ಸಹಾನುಭೂತಿ ಎಲ್ಲ ಅಳೆದು ತೀರ್ಮಾನಿಸಲು ಶಕ್ಯ, ಹಾಗೆಯೇ ಓಟಿನ-ಭದ್ರ, ಸಾಮಾನ್ಯ-ಕೋಟೆಯ ಸ್ಥಿರತೆ, ಪಲ್ಲಟ, ಬಿರುಕು, ಒಡಕು, ನಿರ್ನಾಮ, ಪ್ರಗತಿ ಎಲ್ಲ ನೋಡಲೂ ಶಕ್ಯ. ಇವರು ಪಡೆಯುವ ಓಟಿನ ಸಂಖ್ಯೆ ಯಾರಿಗೆ, ಯಾವಪಕ್ಷಕ್ಕೆ ಲಾಭ ನಷ್ಟ ಎಂಬುದೂ ತೀರ್ಮಾನವಾಗುತ್ತದೆ. ಈ ಅನ್ಯರೂ ಸೇರಿ, ನೇರಸ್ಪರ್ಧೆ ಇರುವ ಪರಾಜಿತ-ವಿಜೇತರ ಅಂತರ-ವ್ಯತ್ಯಾಸ, ಕೂಡಿ ಕಳೆದು ಸಂಗ್ರಹಿಸಿ, ಯಾರಿಗೆ ಲಾಭ, ನಷ್ಟ ಎನ್ನುವುದು ಕಾಲಮು 15ರಲ್ಲಿ ಸೂಚಿಸಿದೆ ± ವಿ/ಪ ಎಂದು.

ಮತಗಳ ಅಂತರ-ವಿಜೇತ, ಪರಾಜಿತರ ನಡುವೆ: ಈಗಾಗಲೇ ತಿಳಿಸಿದಂತೆ, ಒಟ್ಟು ಮಾನ್ಯವಾದ ಮತಗಳು ವಿಜೇತರಿಗೆ ಪರಾಜಿತರಿಗೆ ಹಂಚಿ ಹೋಗುತ್ತವೆ. ಎಷ್ಟು ಏನು ಎಂದು ತೀರ್ಮಾನದಿಂದ, ಗೆದ್ದ, ಸೋತ, ಎಂದು ತೀರ್ಮಾನ ಹಾಗೆಯೇ ಎಷ್ಟು ಅಂತರದಿಂದ, ಸಂಖ್ಯೆ ಮೊತ್ತಮತದಿಂದ ಕನಿಷ್ಠ, ಗರಿಷ್ಠ, ಸಾಮಾನ್ಯ ಅಂತರದಿಂದ ಎಂದೂ ಅಳೆದು ನೋಡುತ್ತಾರೆ. ಗೆದ್ದ ಅಭ್ಯರ್ಥಿಗಳ ಸಂಖ್ಯಾ ಮೊತ್ತ ಮತವನ್ನು ಕಾಲಮು 8ರಲ್ಲೂ, ಸೋತ ಅಭ್ಯರ್ಥಿಯ ಮತವನ್ನು ಕಾಲಮು 9ರಲ್ಲೂ, ಅವರಿಬ್ಬರೂ ಪಡೆದ ಒಟ್ಟು ಮತವನ್ನೂ ಕಾಲಮು 10ರಲ್ಲೂ, ಮಿಗಿಲಾಗಿ, ಅವರಿಬ್ಬರಲ್ಲಿ ಸೋಲಿಗೇ ಗೆಲುವಿಗೆ ಕಾರಣವಾದ ಸಂಖ್ಯಾ ಮೊತ್ತದ ಅಂತರ ಮತವನ್ನು ಎಲ್ಲಾ 28 ಕ್ಷೇತ್ರದ್ದು, ಆಯಾಯಾ ಭಾಗಗಳ ವಿವರಣೆ, ವಿಭಜನೆಯೊಂದಿಗೆ ಗರಿಷ್ಠ, ಕನಿಷ್ಠ, ಅಂತರ ಅನುಸಾರವಾಗಿ ಕಾಲಮು 11ರಲ್ಲಿ ಕೊಟ್ಟಿದೆ. ಅತಿ ಗರಿಷ್ಠ ಅಂತರದಲ್ಲಿ ಉಡುಪಿ ಕ್ಷೇತ್ರದ ಅಭ್ಯರ್ಥಿ ಕಾಂಗ್ರೆಸ್ ಪಕ್ಷದವರು ಗೆದ್ದಿದ್ದಾರೆ-ಅತಿ, ಕನಿಷ್ಠ ಅಂತರ ಮತದಿಂದ ಬಿಜಾಪುರದ ಜನತಾ ಪಕ್ಷದ ಅಭ್ಯರ್ಥಿ ಗೆದ್ದು ಬಂದಿದ್ದಾರೆ. (ಕ್ರಮವಾಗಿ 1,42,370 ಮತ್ತು 2419) ಈ ಒಂದು ಅಂತರವೂ ಪಕ್ಷಗಳ ಬಲಾಬಲ ಬೆಂಬಲ ಸೂಚಿಸುತ್ತವೆ. ಇದು ಒಂದು ಪ್ರಥಮ ಅಂತರ.

ಇದರ ಜೊತೆಯಲ್ಲಿ ಅನ್ಯರು, ಪಕ್ಷೇತರರು, ಅವರೂ ಸೋತವರೇ ಆದುದರಿಂದ ಪಡೆದ ಮತಗಳ ಮೊತ್ತವನ್ನು ಸೇರಿಸಿದರೆ, ವಿಜೇತ ಪರಾಜಿತರ ಅಂತರ ಇನ್ನೂ ದೂರ-ಸಮೀಪ ಎಂದು ತೀರ್ಮಾನಿಸುತ್ತದೆ. ಈ ಒಂದು ಲೆಕ್ಕಾಚಾರ, ಅಂದರೆ ಎಲ್ಲ ಪರಾಜಿತರ ಮತ, ನೇರವಾಗಿ ಸೇರಿಸಿದವನೂ ಪಡೆದಮತ, ಅನ್ಯರಮತ-ಎಲ್ಲ ಲೆಕ್ಕಾಚಾರ ಸಂಖ್ಯೆ-ಕಾಲಮು 13ರಲ್ಲೂ; 14ರಲ್ಲೂ; ಕಾಲಮು 15ರಲ್ಲಿ ಕೊಟ್ಟಿದೆ. ಕಾಲಮು ಹದಿಮೂರರಲ್ಲಿ ನೇರ ಪರಾಜಿತರ ಮತ ಹಾಗೂ ಅನ್ಯರ ಮತ ಕೂಡಿ

ಕೊಟ್ಟಿದೆ. ಕಾಲಮು 14ರಲ್ಲಿ ವಿಜೇತ ಅಭ್ಯರ್ಥಿ ಹಾಗೂ ಎಲ್ಲಾ ಪರಾಜಿತ ಅಭ್ಯರ್ಥಿಗಳ ಮತ ಅಂತರ ಕೊಟ್ಟಿದೆ, ಕಾಲಮು ಹದಿನೈದರಲ್ಲಿ ವಿಜೇತನ ಮತ, ಪರಾಜಿತರ ಎಲ್ಲರ ಮತ ಕೂಡು ಕಳೆಯುವಿಕೆಯಿಂದ ಬಂದ ಅಂತರಮತ ± ಲಾಭ ನಷ್ಟ ತೀರ್ಮಾನ ಮಾಡಿಕೊಟ್ಟಿದೆ, ವಿಜೇತರಿಗೆ/ಪರಾಜಿತರಿಗೆ.

ಎಲ್ಲಿಯವರೆಗೆ ಈ ಅಂತರ ಅಂದರೆ, ನೇರ ಸೋತವನ, ಗೆದ್ದವನ ಅಂತರ ಒಂದು ಹಂತದಲ್ಲಿ ಕಡಿಮೆ ಇದ್ದರೆ, ಗೆದ್ದವನ ಮತವನ್ನು ಎಲ್ಲಾ ಪರಾಜಿತರಿಗೆ, ಬಹು ಮುಖ ಸ್ಪರ್ಧೆ ಇರುವಲ್ಲಿ–ಹೋಲಿಸಿದಾಗ ಪರಾಜಿತರು ಎಲ್ಲಸೇರಿ ಗೆದ್ದ ಅಭ್ಯರ್ಥಿಗಿಂತ ಜಾಸ್ತಿಮತ ಪಡೆದಿರುವ ದಾಖಲೆ ಸಾಕ್ಷಿ ಸಿಗುತ್ತದೆ. ಉದಾಹರಣೆಗೆ ಬೆಳಗಾವಿ, ಹಾಸನ ನಂತರದ ಕ್ರಮಸಂಖ್ಯೆ ಕ್ಷೇತ್ರಗಳನ್ನು ನೋಡಿದರೆ ಈ ಅಭಿಪ್ರಾಯ ಮನ್ನಣೆ ಆಗುತ್ತದೆ.

ಅಂದರೆ ಹೆಚ್ಚಿನ ಸಂದರ್ಭದಲ್ಲಿ ಬಹುಮತ ಬೆಂಬಲದಿಂದ ಒಬ್ಬ ಅಭ್ಯರ್ಥಿ ಗೆದ್ದ ಅಂದರೆ ಅವನು ಅಲ್ಪಸಂಖ್ಯಾಬೆಂಬಲಿತ ಎಂದಾಗುತ್ತದೆ ಮಾತ್ರವಲ್ಲ, ಅವನು ಪ್ರತಿನಿಧಿಸಿ ಸ್ಪರ್ಧಿಸುತ್ತಿರುವ ಪಕ್ಷ ಹೀಗೆಯೇ ಏಕೈಕ ಪಕ್ಷವಾಗಿ ಬಹುಪಾಲು 50% ಗಿಂತ ಕಡಿಮೆಸ್ಥಾನ ಯಾ ಹತ್ತು ಕ್ಷೇತ್ರದಲ್ಲಿ ಒಂದೇ ಪಕ್ಷಗೆದ್ದು–18ರಲ್ಲಿ ಬೇರೆಬೇರೆ ಪಕ್ಷ ಅಭ್ಯರ್ಥಿ ಗೆದ್ದು ಬಂದರೆ, ಲೆಕ್ಕಚಾರದಲ್ಲಿ ಒಂದೇಪಕ್ಷ ಬಹುಪಾಲು ಮತ ಪಡೆದಿದೆ, ಬಹುಕ್ಷೇತ್ರದಿಂದ ಗೆದ್ದಿದೆ ಎಂಬ ಲೆಕ್ಕಚಾರದಿಂದ ಶಾಸನ ಸಭೆಯಲ್ಲಿ ಬಹುಮತ ಪಡೆವ ಏಕೈಕ ದೊಡ್ಡಪಕ್ಷ, ಸರ್ಕಾರನಡೆಸಲು ಕ್ರಮಬದ್ಧವಾದುದು ಎಂದು ತೀರ್ಮಾನವಾಗಿ ಅಂತೆಯೇ ಕಾರ್ಯಗತವಾಗುತ್ತದೆ. ಆದರೆ ಲೆಕ್ಕಚಾರ ರೀತ್ಯ ನೊಡಿದರೆ, ಆ ಪಕ್ಷ–ಅಭ್ಯರ್ಥಿ ಅಲ್ಪ ಸಂಖ್ಯಾಬೆಂಬಲಿತವಾಗುತ್ತದೆ, ಆಗುತ್ತಾನೆ.

ಈ ಸಾರಿಯ ಪ್ರಾಮುಖ್ಯದ ಸಂಗತಿ ಈಗಿನ ಕಾಂಗ್ರೆಸ್ ಸರ್ಕಾರ ಲೋಕ ಸಭೆಯಲ್ಲಿ 3/4 ಅಂಶಮೀರಿ 401/515–508ರಲ್ಲಿ ಸ್ಥಾನ ಪಡೆದುಕೊಂಡು ಭರ್ಜರಿ ಬಹುಮತ ಬೆಂಬಲ ಪಡೆದ ಪಕ್ಷವಾಗಿ ರಚಿತವಾಗಿ ಕಾರ್ಯರೂಪಕ್ಕೆ ಬಂದುದು.

ಇದಕ್ಕೆ ಅರಿವು ಏನೆಂದರೆ–ನಮ್ಮ ಪ್ರಜಾಪ್ರಭುತ್ವಕಾರ್ಯಾಚರಣೆ ತತ್ವ ರೀತ್ಯ, ಒಂದು ಪಕ್ಷ ಸರ್ಕಾರ ರಚಿಸಬೇಕಾದರೆ ಸಾಮಾನ್ಯ ಬಹುಮತ ಪಡೆದುಬಂದರೆ ಸಾಕು, ಬಿದ್ದ ಮತಗಳಲ್ಲಿ, ಗರಿಷ್ಠ ಪಡೆಯಬೇಕೆಂದಿಲ್ಲ, 49–51/100ರಲ್ಲಿ ಎಂದಲ್ಲ,– ಹತ್ತು ಓಟಿನಲ್ಲಿ 4ಓಟು ಒಬ್ಬನಿಗೆ ಬಂದರೆ ಉಳಿದ ಆರು,–2–3–4 ಮಂದಿಗೆಹಂಚಿ ಹೋದರೆ 4ಓಟು ಒಟ್ಟಿಗೆ ಪಡೆದ ಏಕವ್ಯಕ್ತಿ ಗೆದ್ದಎನ್ನವುದು ನಮ್ಮ ಪ್ರಜಾತಂತ್ರದ ನಿಯಮ, ವಾಸ್ತವ್ಯದಲ್ಲಿ ಬಹುಮತ ಲೆಕ್ಕಚಾರದಲ್ಲಿ ಅಲ್ಪಮತ–ಇಂತಹ ಒಂದು ಸರ್ಕಾರ ಕಾರ್ಯರೂಪಕ್ಕೆ ಬಂದಾಗ, ನಿಜ ಪ್ರಜಾಪ್ರಭುತ್ವ ಧ್ಯೇಯ ಏನು, ಕರ್ತವ್ಯ ಏನು ಎನ್ನುವುದು ಅಳೆದು, ತೂಗಿ ವಿಶ್ಲೇಷಿಸಬೇಕಾಗುತ್ತದೆ. ಈ ರೀತಿಯ ಲೆಕ್ಕಚಾರ

ಗಣನೆಗೆ ಈಗತಾನೆ ರಾಜಿನಾಮೆ ಕೊಟ್ಟ-ನಮ್ಮ ರಾಜ್ಯದ ಜನತಾ ಸರ್ಕಾರ ಒಂದು ಸ್ಪಷ್ಟ, ಸ್ಫುಟವಾದ ಉದಾಹರಣೆ.

ಸಮಗ್ರಸಂಖ್ಯೆವಿವರ : ಕಾಲಮು 8-ವಿಜೇತರ ಮತ-71,46,213 ಕಾಲಮು-9ಪರಾಜಿತ ಮತ-54,79,826, ಕಾಲಮು 10ರಲ್ಲಿ-ಈ ಇಬ್ಬರ ಒಟ್ಟು ಮತ-1,26,26,039 ಕಾಲಮು ಹನ್ನೊಂದರಲ್ಲಿ-ವಿಜೇತ, ಪರಾಜಿತನ, ಒಂದು, ಅಂತರ-16,66,387 ಕಾಲಮು ಹನ್ನೆರಡರಲ್ಲಿ-ಅನ್ಯರಿಗೆ ದೊರೆತಮತ, 08,71,286, ಕಾಲಮು 13ರಲ್ಲಿ ಎಲ್ಲಾ ಪರಾಜಿತ ಮತ 25,37,673 ವ್ಯತ್ಯಾಸ ರೂಪದಲ್ಲಿ ವಿಜೇತ, ಪರಾಜಿತರದ್ದು-ಕಾಲಮು 14ರಲ್ಲೂ ಸಹಜವಾದ ಅಂತರ-ವಿಜೇತ ಹಾಗೂ ಎಲ್ಲ ಪರಾಜಿತರಿಗೂ-63,51,112, ಕಾಲಮು ಹದಿನೈದರಲ್ಲಿ-ಅಂತರ ಲಾಭನಷ್ಟ ±-07,95,101 ಎಂದು ಕಾಣಿಸಿದೆ.

ಈಗಾಗಲೇ ತಿಳಿಸಿದಂತೆ, ಅನ್ಯರಿಗೆ ಕೊಟ್ಟಮತ ಒಂದು ರೀತಿಯ ಮತ ಮೌಲ್ಯ ನಷ್ಟಕ್ಕೆ ಎಡೆಯಾಗುತ್ತದೆ. ಇದನ್ನು ಕಾಲಮು 16 ರಲ್ಲಿ ತಿಳಿಸಿ ಬಹಿಷ್ಕೃತ, ತಿರಸ್ಕೃತ ಹಾಗೂ ಅನ್ಯರ ಮತ ಕೂಡಿ ಸೇರಿಸಿ-86,67,033 ಎಂದು ಸೂಚಿಸಿದೆ.

ಈ ಲೆಕ್ಕಚಾರದಿಂದ ನಮಗೆ ಕಾಣಬರುವುದು ಸಹಜವಾಗಿ, ಪ್ರತ್ಯಕ್ಷವಾಗಿ, ಅಸಂಖ್ಯಾತ ಜನಸಂಖ್ಯೆ ಇರುವ ಒಂದು ಕ್ಷೇತ್ರ, ಪ್ರದೇಶ, ರಾಜ್ಯದಲ್ಲಿ, ಪ್ರತ್ಯೇಕ-ಒಟ್ಟಾರೆ, ಎಷ್ಟುಜನರಿಗೆ ನೇರಪ್ರಾತಿನಿಧ್ಯ, ಶಾಸನಸಭೆ-ಲೋಕಸಭೆಯಲ್ಲಿ ಸಿಕ್ಕ ಹಾಗಾಗುತ್ತದೆ, ಪ್ರಾತಿನಿಧ್ಯ ದೊರಕಿದ ಸಂಖ್ಯೆ ಎಷ್ಟು ಅವರ ಸ್ಥಿತಿ ಏನು ಎನ್ನುವುದು ಪರಿಶೀಲನೀಯ ಸಂಗತಿ.

ಪ್ರಜಾಪ್ರಾತಿನಿಧ್ಯರಹಿತಸಂಖ್ಯೆ : ಕಾಲಮು 18ರಲ್ಲಿ ಇದನ್ನು ಸೂಚಿಸಿ ಎಲ್ಲ 28 ಕ್ಷೇತ್ರಗಳಿಂದ ಒಟ್ಟಾರೆ, 1,39,33,085 ಪ್ರಜೆಗಳು ಪ್ರಾತಿನಿಧ್ಯ ರಹಿತರಾಗಿ ಹೋಗುತ್ತಾರೆ, ಒಂದೇ ಮತ ಬಹಿಷ್ಕರಣದಿಂದ ಯೂ, ಮತ ಕುಲಗೆಟ್ಟದ್ದರಿಂದ, ಯೂ, ಮತದಾರ, ಮತ ಹಾಕಿದವ್ಯಕ್ತಿಗೆ, ಪಕ್ಷಕ್ಕೆ ವಿರುದ್ಧವಾಗಿ ಅನ್ಯ ಅಭ್ಯರ್ಥಿ, ಪಕ್ಷ ಗೆದ್ದುಬಂದುದು, ಇವನ ಪಕ್ಷ, ಅಭ್ಯರ್ಥಿ ಸೋತುದುದರಿಂದ, ಒಟ್ಟು ಮತದಾರರ ಸಂಖ್ಯೆಯಿಂದ ಈ ಸಂಖ್ಯೆ ಕಳೆದರೆ-(2,10,79,298-039,33,085) 50% ಮೀರಿ ಪ್ರಜೆಗಳು ಪ್ರಾತಿನಿಧ್ಯ ನೇರವಾಗಿ ಕಳೆದುಕೊಳ್ಳುತ್ತಾರೆ. ಅಭ್ಯರ್ಥಿ ಇದ್ದರೂ, ಅವನು ಒಂದು ಪಕ್ಷವನ್ನು, ಆ ಪಕ್ಷದ ಬೆಂಬಲಿಗರನ್ನು ಪ್ರತಿನಿಧಿಸುವುದರಿಂದ, ಒಂದು ಕ್ಷೇತ್ರದ ಒಂದು ಭಾಗದ ಜನತೆಯ ಪ್ರತಿನಿಧಿ ಲೆಕ್ಕಚಾರ ರೀತ್ಯ ಆಗುತ್ತಾನೆ. ಈ ವಿಚಾರ ಅತ್ಯಂತ ಕ್ಲಿಷ್ಟವಾದ ತೊಡಕಾದ ಸಂಗತಿ, ಇದು ಆರಿಸಿ, ಚುನಾಯಿಸಿ ಗೆಲ್ಲಿಸಿ ಕಳುಹಿಸಿದ ಅಭ್ಯರ್ಥಿಯ ಸಹಜ ನಿಲುವು ತೀರ್ಮಾನವನ್ನು ಅಳೆದು ನೋಡುವಂತ ಅವಕಾಶ ಸಿಗುತ್ತದೆ. ಸಹಜವಾದ ಪ್ರಜಾಪ್ರಭುತ್ವ ರೀತ್ಯ-ಒಮ್ಮೆ ಒಂದುಸಾರಿ, ಒಬ್ಬ ಅಭ್ಯರ್ಥಿ ಒಂದು ಕ್ಷೇತ್ರದಿಂದ, ಸ್ವತಂತ್ರನಾಗಿ, ಪಕ್ಷ

ಪ್ರತಿನಿಧಿಯಾಗಿ, ಗೆದ್ದು ಬಂದ ಎಂದಾದರೆ, ಚುನಾಯಿತನಾದ ನಂತರ ಅವನು ಕೇವಲ ಅವನಿಗೆ ಮತಹಾಕಿದವರ, ವರ್ಗದವರ, ಭಾಗದ ಸದಸ್ಯನಾಗುವಂತಾಗ ಬಾರದು. ಆ ಮನವರಿಕೆ ನಿಲುವು ಅವನಲ್ಲಿರಕೂಡದು ಎಂದು ಮಾತ್ರವಲ್ಲ, ಈಗ ಅವನು ಪಕ್ಷದ, ಅಭ್ಯರ್ಥಿ ಹೊರತಾಗಿ, ಇಡೀ ಸಮಸ್ತ ಕ್ಷೇತ್ರ-ಜನತೆಯು, ತಾನು ಪ್ರತಿನಿಧಿಸಿ ಸ್ಪರ್ಧಿಸಿದ, ಅಭ್ಯರ್ಥಿ, ಆ ಎಲ್ಲಾ ಜನರ, ಕ್ಷೇತ್ರದ ಸಮಗ್ರ ಕಲ್ಯಾಣಕ್ಕೆ ಅವನು ಶ್ರಮಿಸಬೇಕಾದುದು ಅವನ ಆದ್ಯ ಕರ್ತವ್ಯ, ಹೊಣೆಗಾರಿಕೆ. ಅವನು ಗೆದ್ದ ಕ್ಷೇತ್ರ-ರಾಷ್ಟ್ರದ, ರಾಜ್ಯದ ಒಂದು ಭಾಗ, ರಾಜ್ಯ ರಾಷ್ಟ್ರದ ಹಿತದೃಷ್ಟಿಯನ್ನು ಅವನು ಇಟ್ಟುಕೊಳ್ಳಬೇಕಾಗುತ್ತದೆ. ಇದನ್ನು ಮರೆತಾಗ, ಉಲ್ಲಂಘಿಸಿದಾಗ, ತಿರಸ್ಕರಿಸಿದಾಗ, ಮಿತಿಮೀರಿ ನಡೆದಾಗ, ಪ್ರಜಾಪ್ರಭುತ್ವದಲ್ಲಿ ಆ ಬೇಜವಾಬುದಾರಿ, ನಿಷ್ಕ್ರಿಯ ಅಭ್ಯರ್ಥಿಯನ್ನು ಮರುವಾಪಸಾತಿ ಕರೆಸುವ, ಸಂಪೂರ್ಣ ತಿರಸ್ಕರಿಸಿ, ಅನ್ಯ ಅಭ್ಯರ್ಥಿಗೆ ಅವಕಾಶ ಕೊಡುವ ಪ್ರಾಯೋಗಿಕ ತತ್ವಾತ್ಮಕಸಾಧನ ಇದೆ. ಕಾರಣ ಪ್ರಜಾಪ್ರಭುತ್ವದಲ್ಲಿ, ಕೇವಲ ಬಹುಮತಕ್ಕೆ, ಬಹುಸಂಖ್ಯಾಬಲಕ್ಕೆ ಬೆಲೆ ಮಾತ್ರವಲ್ಲ, ಬಹುಸಂಖ್ಯಾಬಲ ಎಷ್ಟು ಮುಖ್ಯವೋ ಹಾಗೆಯೇ ಅಲ್ಪಸಂಖ್ಯಾಬಲವನ್ನು ಪೋಷಿಸ ಬೇಕು, ಪ್ರಶಸ್ತ ಪ್ರಧಾನ ದೃಷ್ಟಿಯಿಂದ ಕಾಪಾಡಿಕೊಂಡು ಹೋಗಬೇಕು. ಇಲ್ಲವಾದಲ್ಲಿ ಅಂತಹ ಪ್ರಜಾತಂತ್ರಕ್ಕೆ ಯಾವರೀತಿಯ ಮೌಲ್ಯ, ಪುರಸ್ಕಾರ ಗೌರವಗಳು ಸಿಗುವುದು ವಿರಳ, ಕಷ್ಟ.

ಆದರೆ ಈ ನಿಲುವನ್ನು, ತತ್ವವನ್ನು ಕಾರ್ಯತಃ ಪ್ರಾಯೋಗಿಕವಾಗಿ ಎಷ್ಟು ಜನ ಸದಸ್ಯರು, ಗೆದ್ದವರು, ಪಡೆಯುತ್ತಾರೆ ಪಾಲಿಸುತ್ತಾರೆ, ಎಂಬುದು ಪ್ರಶ್ನಾತ್ಮಕ ಸಮಸ್ಯೆ. ಅದು ನಮ್ಮಂತಹ ರಾಷ್ಟ್ರಗಳಲ್ಲಿ ಸ್ವಾರ್ಥಸಾಧಕರು, ಪಟ್ಟಭದ್ರಹಿತಾಸಕ್ತರು, ಅವಕಾಶವಾದಿಗಳು, ಅನುಕೂಲಸಾಧಕರು, ಸಂಕುಚಿತ ಮನೋಭಾವ, ಸ್ವಯಂ ಪ್ರತಿಷ್ಠೆ, ಪ್ರಗತಿ ಬಯಸಿ ಬೆಳೆಸುವವರು, ಭ್ರಷ್ಟಾಚಾರಿಗಳು ಇನ್ನೂ ಮುಂತಾದ ಧೂರ್ತ ಲಕ್ಷಣಗಳಿಂದ ಕರೆಯಲ್ಪಡುವ ವ್ಯಕ್ತಿಗಳ ಬಲವೇ ಜಾಸ್ತಿ ಇರುವಾಗ ಆದ್ದರಿಂದ ಪ್ರಾತಿನಿಧ್ಯ ರಹಿತ, ನೇರವಾಗಿ ಸಿಗದಿದ್ದವರು,-ಪ್ರಜೆಗಳ ವಿಚಾರವು ಗಣನೀಯ ಸಂಗತಿ ಅವರ ಅಹವಾಲನ್ನು, ಇಂಗಿತವನ್ನು, ಕೋರಿಕೆ, ಬೇಡಿಕೆ, ಆಸಕ್ತಿಗಳನ್ನು ಮನ್ನಿಸಿ, ಕಾರ್ಯಗತಗೊಳಿಸಿ ಇಷ್ಟಾರ್ಥಸಿದ್ಧಿಗೊಳಿಸುವ ಕ್ರಮ, ಮಾರ್ಗ ಸಾಧನಗಳೇನು ? ಇತ್ತೀಚಿನ ಸಂದರ್ಭಗಳಲ್ಲಿ, ಪ್ರಾಂತೀಯ, ಪ್ರಾದೇಶಿಕ ಪಕ್ಷಗಳ ಬಲ, ಸಂಖ್ಯೆ, ಸರ್ಕಾರ ಜಾಸ್ತಿ ಆಗುತ್ತಿರುವ ಸನ್ನಿವೇಶಗಳಲ್ಲಿ ಕೇಂದ್ರ ಸರ್ಕಾರದಲ್ಲಿ ಸೂಕ್ತರೀತಿ ಪ್ರಾತಿನಿಧ್ಯ ಸಿಕ್ಕದೆಹೋಗಿ, ಆ ಒಂದು ಪ್ರಾಂತ್ಯ ಪ್ರದೇಶ ಗಳ ಮನ್ನಣೆ, ಮನವಿ ಲಕ್ಷಿಸದೆ, ಧಿಕ್ಕರಿಸುವ ಮನೋಭಾವನೆ, ಕಾರ್ಯಾನುಸರಣೆ ನಮ್ಮಲ್ಲಿ ಹೆಚ್ಚಾಗಿ ಕಾಣಬರುತ್ತಿದ್ದು, ಕೇಂದ್ರ-ರಾಜ್ಯ ಅಂತರ, ಪಕ್ಷ, ಪ್ರಜೆಗಳ ಅಂತರ ಜಾಸ್ತಿಯಾಗಿ ಬರುತ್ತಿದ್ದು ಮತ್ತಷ್ಟು ಬಿಕ್ಕಟ್ಟಿಗೆ ಎಡೆಮಾಡುತ್ತಿವೆ.

1983ರಲ್ಲಿ ಅಧಿಕಾರಕ್ಕೆ ಬಂದ, ಜನತಾ ಸರ್ಕಾರ ನಮ್ಮ ರಾಜ್ಯದಲ್ಲೂ,

ಹಾಗೆಯೇ ನಮ್ಮ ನೆರೆ ರಾಜ್ಯಗಳಾದ ಆಂಧ್ರ, ತಮಿಳುನಾಡು, ದೂರದ ರಾಜ್ಯವಾದ ಪಶ್ಚಿಮ ಬಂಗಾಳ ಎಲ್ಲಾ ಉದಾಹರಣೆಯಾಗಿ ಸಿಗುತ್ತವೆ. ನಮ್ಮ ರಾಜ್ಯಗಳಿಂದಲೇ ಚುನಾಯಿತರಾದ ಒಂದೇ ಪಕ್ಷ ಕಾಂಗ್ರೆಸ್ (ಇ) ಕೇಂದ್ರದಲ್ಲಿ ಆಡಳಿತ ನಡೆಸುತ್ತಿರುವ ಪಕ್ಷದ ಅಭ್ಯರ್ಥಿಗಳು ತಮ್ಮ ಸ್ವಂತಕ್ಷೇತ್ರಕ್ಕಾಗಿ, ರಾಜ್ಯಕ್ಕಾಗಿ ಯಾವರೀತಿ ಕಾಳಜಿ ವಹಿಸಿದ್ದಾರೆ, ಎಷ್ಟು ನಿಷ್ಠಾವಂತರಾಗಿ ಪ್ರಜ್ಞಾವಂತರಾಗಿ, ಕ್ಷೇತ್ರ, ರಾಜ್ಯ ಕಲ್ಯಾಣ ಪ್ರಗತಿಗೆ ಶ್ರಮಿಸಿದ್ದಾರೆ. ಶ್ರಮಿಸುತ್ತಾರೆ ಎಂದು ತಿಳಿಯುವುದು ಕುತೂಹಲಕಾರಿ ಪ್ರಶ್ನೆ. ಆದ್ದರಿಂದ ಪ್ರತಿನಿಧಿ ದೊರೆಕಿದ ಪ್ರಜೆಗಳ, ಕ್ಷೇತ್ರದ ಸಮಸ್ಯೆ ಒಂದು ರೀತಿಯು ದಾದರೆ, ಸುರಕ್ಷಿತ ಸ್ಥಾನ, ಅಂತಸ್ತಿನಲ್ಲಿರಬಹುದಾದರೆ, ಪ್ರತಿನಿಧಿಗೆ ದೊರಕದ, ಕ್ಷೇತ್ರದ, ಬಹು ಸಂಖ್ಯಾತ ಪ್ರಜೆಗಳ ಸಮಸ್ಯೆ ಹೆಚ್ಚಿನದು. ಬಹುಪಾಲು ದಾರುಣ ಸಂಗತಿಯದು. ನಿಜವಾದ ಪ್ರಜಾಪ್ರಭುತ್ವದ ಅಸ್ತಿತ್ವ ಸ್ವರೂಪಕ್ಕೆ ಸಂಶಯಾತ್ಮಕ ವಾಗಿ, ಪ್ರಶ್ನಾರ್ಥಕವಾಗಿ ನೋಡುವ ಗತಿ.

ಈ ರೀತಿಯಲ್ಲಿ ಈ ಒಂದು ಕಿರು ಅಂಕಿ ಅಂಶಗಳ ನೋಟದಿಂದ ಹಲವಾರು ವಿಚಿತ್ರ, ವಿಭಿನ್ನ, ಸಂಗತಿಗಳು ಮನದಟ್ಟಾಗುತ್ತವೆ; ಪ್ರಜಾಪ್ರಭುತ್ವ ಕಾರ್ಯ ನಿರತೆಯನ್ನು ಪ್ರತಿಬಿಂಬಿಸುತ್ತವೆ. ಆಗಲೇ ತಿಳಿಸಿದಂತೆ ಇದೆಂದು ಕೇವಲ ಸಾಮಾನ್ಯ ನೋಟ, ಮೇಲ್ನೋಟ; ಸಂಸ್ಕರಿಸಿ, ಸಂಶೋಧಿಸಿ, ಸಿದ್ಧಾಂತ ಪಡಿಸಿ, ಸ್ಫುಟಪಡಿಸಿ, ತೀರ್ಮಾನ ಪಡಿಸಿದಲ್ಲಿ ನಿಜವಾದ ಅರ್ಥದಲ್ಲಿ ಸಾಮಾನ್ಯ ಮೇಲ್ನೋಟಕ್ಕೆ ಏನು ಸಿಕ್ಕಿದೆ ಅದನ್ನು ಕಾರ್ಯರೂಪಕ್ಕೆ ಇಳಿಸಿ ಪ್ರಕಟಪಡಿಸಬಹುದು. ಸಿದ್ಧಾಂತ ಪಡಿಸಿ ರೂಪಿಸಿದಲ್ಲಿ ಇನ್ನು ಬಹುಪಾಲು ಹೆಚ್ಚಿನ ದಿಟ ಸ್ಫುಟ ವಿಚಾರ ಸತ್ಯ ಸಂಗತಿಗಳು ದೊರಕುತ್ತಿತ್ತೊ ಏನೋ.

ಮುಕ್ತಾಯ ಮಾತುಗಳು : ಈ ಒಂದು ಅಂಕಿ-ಅಂಶ ನೋಟಗಳ ವಿವರಣೆ ಯಿಂದ, ಹಲವಾರು ವಿಷಯ, ವಿಚಾರ, ಅಲ್ಲಿ-ಇಲ್ಲಿ ಕಂಡುಬರುವ ಸೂಕ್ಷ್ಮ ಲೋಪ ದೋಷಗಳು ಸ್ವಾರಸ್ಯಗಳು ಸಮಸ್ಯೆಗಳೆಂತಲೂ ಇಟ್ಟು ಕೊಳ್ಳಬಹುದೆಂದು, ಕಂಡು ಕೊಂಡೆವು. ಈಗ ಪರಿಹಾರ ಸೂಚಕವೇನು ? ಸುಧಾರಣೆ ಕ್ರಮ ಯಾವುದು, ಇದು ಒಂದು ಗಂಭೀರ ಪ್ರಶ್ನೆ, ಕಾರಣ ನಮ್ಮ ಪ್ರಜಾಪ್ರಭುತ್ವದ ರೀತಿ, ಅದನ್ನು ಪಡೆದು ಕೊಂಡ ಸಂದರ್ಭ, ಅದನ್ನು ಪಡೆದುಕೊಂಡು ಅನುಭವಿಸಿಕೊಂಡು ಹೋಗುವ ಜನ, ಆದಕ್ಕೆ ಒದಗಿಸಿಕೊಂಡಿರುವ ಪರಿಕರ, ಯಂತ್ರ, ತಂತ್ರ, ವಿಧಾನ, ಸಾಮಗ್ರಿ, ಸಾಧನ ಗಳು, ಸೂತ್ರದಾರರು, ಎಲ್ಲ ವಿಭಿನ್ನವಾಗಿ ವಿವಿಧ ಸ್ವರೂಪದ್ದಾಗಿವೆ. ಪ್ರಜೆಗಳಿಂದ ಹಿಡಿದು, ಸರ್ಕಾರ, ಸಂಸ್ಥೆ ಮಟ್ಟಗಳವರೆಗೂ ಹಲವಾರು ಲೋಪದೋಷಗಳಿವೆ ಎಂದು ಮನವರಿಕೆ ಆಗಿದೆ.

ಇದಕ್ಕೆಲ್ಲ ಪರಿಹಾರ ಸೂಚಿತವಾಗಿಲ್ಲ, ಸುಧಾರಣೆ ಮಾರ್ಗ ಪ್ರಕಟವಾಗಲಿಲ್ಲ ಎಂದಲ್ಲ, ಸಂವಿಧಾನ ಕಾರ್ಯರೂಪಕ್ಕೆ ಬಂದಾಗಿನಿಂದ, ಸಂಸತ್ ಪದ್ಧತಿ ಪ್ರಜಾ ಸರ್ಕಾರ ಕ್ರಿಯಾರೂಪಕ್ಕೆ ಇಳಿದಾಗಿನಿಂದ ನಾವು ಪರಿಹಾರ ಸೂಚಿಸುತ್ತಲೇ ಬರುತ್ತಿ

ದ್ದೇವೆ, ವೈಯಕ್ತಿಕವಾಗಿ, ಸಾಮೂಹಿಕವಾಗಿ, ಖಾಸಗಿಯಾಗಿ, ಅಧಿಕೃತವಾಗಿ, ಸರ್ಕಾರ ಮಟ್ಟದಿಂದಲೇ ಆಗಿದೆ, ಹಲವಾರು ಸಮಿತಿಗಳು ರಚಿತವಾಗಿ, ಶಿಪಾರಸ್ಸು ಪಡೆದುಕೊಂಡಿವೆ, ಕಾನೂನು ಶಾಸನ ತಿದ್ದುಪಡಿ ಮಾಡಿ, ಸುಧಾರಣೆಗೆ ಅನುವು ಮಾಡಿಕೊಂಡಿವೆ. ತಜ್ಞರ, ನ್ಯಾಯಪಂಡಿತರ, ನ್ಯಾಯಾಲಯಗಳ ನೆರವನ್ನು ಶಿಪಾರಸ್ಸನ್ನೂ, ತೀರ್ಪನ್ನೂ ಪಡೆದುಕೊಂಡಿವೆ. ಚುನಾವಣಾ ಆಯೋಗವೇ ಶಿಪಾರಸ್ಸು ಮಾಡುತ್ತಿರುವುದು, ಈಗಿನ ಪ್ರತ್ಯಕ್ಷ ದರ್ಶನ ಮತದಾನ ವಯಸ್ಸು ಇಳಿಸುವಿಕೆ; ಅವನ ಅರ್ಹತೆಯನ್ನು ಧೃಡಪಡಿಸುವಿಕೆ, ಬಲಪಡಿಸುವಿಕೆ, ಮತದಾರನಿಗೆ ಪ್ರಜಾತಂತ್ರ ಶಿಕ್ಷಣ, ತರಬೇತಿ, ವಿಚಾರಶಕ್ತಿ ವಿಮರ್ಶಾ ಬುದ್ಧಿ ಹೆಚ್ಚಿಸಿಕೊಳ್ಳಲು ನೆರವು, ಸಹಾಯ ಸಾಧನಗಳು ಅಭ್ಯರ್ಥಿಗಳಾಗಿ ನಿಲ್ಲುವವರ, ಪಕ್ಷ ಎಂದು ಸ್ಪರ್ಧಿಸುವವರ ಅರ್ಹತೆಗಳು, ಶರತ್ತು ನಿಬಂಧನೆಗಳು, ನಿಯಮ ಬದ್ಧತೆ, ಇನ್ನೂ ಕಠಿಣ ಬದ್ಧ ಶರತ್ತುಗಳೊಡನೆ ನಿಯಂತ್ರಿಸುವುದು, ಅಭ್ಯರ್ಥಿಯನ್ನು ಸೂಚಿಸಲು ಸಮರ್ಥಿಸಿ, ಬೆಂಬಲಿಸಿ ಅನುಮೋದಿಸಲು, ನಾಮಪತ್ರ ಸಲ್ಲಿಸುವಾಗ ಬೇಕಾದ ಹಣದಲ್ಲಿ ಹೆಚ್ಚಳ, ಕನಿಷ್ಠ, ಗರಿಷ್ಠ ಮತಗಳನ್ನು ಪಡೆಯುವುದರಲ್ಲಿ ಸುಧಾರಿತ ನಿಯಮ, ಠೇವಣಿ ವಾಪಸ್ಸು ಪಡೆಯಲಿಕ್ಕೆ ಸೋತಾಗ ಶರತ್ತುಗಳು, ಪಕ್ಷ-ರಾಜ್ಯ, ರಾಜಕೀಯ, ರಾಷ್ಟ್ರೀಯ ಪಕ್ಷ ಎಂದು ತೀರ್ಮಾನಿಸಲು ಕಡ್ಡಾಯ ನಿಯಮಗಳು, ಅವುಗಳಿಗೆ ಸರ್ಕಾರದಿಂದ, ಶಾಸನ ಮುಖೇನ ದೊರಕಬಹುದಾದಂತ, ಸೌಲಭ್ಯಗಳು, ಮಾನ್ಯತೆಗಳು–ಚುನಾವಣಾ ಪದ್ಧತಿ, ಕ್ರಮ, ಶಾಸನ, ಸಾಧನಗಳಲ್ಲಿ ಸುಧಾರಣೆ, ತಿದ್ದುಪಡಿ ಮಾರ್ಪಾಡು–ಈಗಿನ ಏಕಮತ ಪದ್ಧತಿ ತೆಗೆದು ಬಹುಮತ ಪದ್ಧತಿ ಬಹುಪಕ್ಷ ಪದ್ಧತಿ ನಿರ್ಮೂಲಿಸಿ ದ್ವಿಪಕ್ಷ ರಚನೆ, ಮನ್ನಣೆ–ಪ್ರಥಮ ಪ್ರಾಶಸ್ತ್ಯ ಪ್ರಧಾನಮತ ಪದ್ಧತಿ, ಅನುಪಾತ ನಿಯಮ ಪದ್ಧತಿ–(First Preference and Proportional Representation System), ಏಕ ಹಾಗು ವರ್ಗಾವಣೆ, ಕ್ರಮ–(Single Transferable Voting system) ಅನುಸರಣೆ, ಮತಗಳ ಮೌಲ್ಯ ನಷ್ಟವಾಗುವುದನ್ನು ತಡೆಯಲು, ಉತ್ತಮ ದಕ್ಷ ಅಭ್ಯರ್ಥಿಯನ್ನು ಆರಿಸಲು, ಬೆಳಸಿ (ವಿದ್ಯುತ್‌ಯಂತ್ರ–Electronic Voting System) ಬಳಕೆ ಮತದಾನಕ್ಕೆ-- ದ್ದರೂ, ನ್ಯಾಯಾಲಯ ತೀರ್ಪಿನಿಂದ ರದ್ದು ಪಡಿಸಲಾಯಿತು,) ಅಭ್ಯರ್ಥಿ, ಪಕ್ಷಗಳ ಸಂಖ್ಯೆ ನಿಯಂತ್ರಿಸಿ ಮಿತಿಗೊಳಿಸುವುದು. ಮತದಾನ ಸಂದರ್ಭಗಳಲ್ಲಿ, ಅವ್ಯವಹಾರ, ಅಕ್ರಮ ವರ್ತನೆಗಳನ್ನ ಬಹಿಷ್ಕರಿಸುವುದು, ನಿಷೇಧಿಸುವುದು, ಮತದಾನ ಮಾಡಿದ್ದಕ್ಕೆ ಗುರುತು ಪಡಿಸಲು, ಬಳಸಲು ಈಗಿನ ಶಾಯಿಬಿಂದು ಮುಟ್ಟಿಸುವ ಕ್ರಮ ಬದಲಾವಣೆ, ಮತದಾರನಿಗೆ ಪ್ರಮಾಣಪತ್ರ ಗುರುತು ಚೀಟಿ, ಅವನ ಛಾಯಾ ಚಿತ್ರ (Identity card with his photo and personal full signature or Thumb impression), ಮತದಾನಕ್ಕೆ ಕನಿಷ್ಠ ವಯೋಮಿತಿ ನಿಗದಿತವಾದರೂ, ಗರಿಷ್ಠ ವಯೋಮಿತಿ ನಿಗದಿ ಯಾಗದಿರುವುದು, ಅದನ್ನು ನಿರ್ಧರಿಸುವುದು, ಮತದಾನ

ಕಡ್ಡಾಯ; ಧಿಕ್ಕರಿಸಿದಲ್ಲಿ ಅದನ್ನು ದಂಡನಾರ್ಹ ಅಪರಾಧ ಎಂದು ತೀರ್ಮಾನಿಸುವುದು, ಒಮ್ಮೆ ಚುನಾಯಿತನಾದ ಅಭ್ಯರ್ಥಿ ಪುನಃ ಸ್ಪರ್ಧಿಸಲು ಚುನಾಯಿತನಾಗಲು, ಕಾಲ ಮಿತಿ ನಿಗದಿ ಗೊಳಿಸುವುದು, ಇಂತಿಷ್ಟು ಬಾರಿಗಿಂತ ಜಾಸ್ತಿ ಸ್ಪರ್ಧಿಸಬಾರದು ಎಂದೆಲ್ಲ ಹತ್ತು ಹಲವಾರು ಪರಿಗಣನೀಯ ಶಿಫಾರಸ್ಸುಗಳನ್ನು ಪರಿಹಾರಾತ್ಮಕವಾಗಿ ಸೂಚಿಸಿವೆ. ಈ ಸಂದರ್ಭದಲ್ಲಿ 1974ರ ಸಮಯದಲ್ಲಿ ಮಾಡಲಾದ ಶ್ರೀ ಥಾರ್ಕುಂಡೆ ಸಮಿತಿ ಶಿಫಾರಸ್ಸು ಕೂಡ ನೆನಪಿಸಬೇಕು. ಅನುಪಾಥ ನಿಯಮ ಪದ್ಧತಿಗೆ ಶಿಫಾರಸ್ಸು ಮಾಡಿದ್ದರು, ಪ್ರಥಮ ಪ್ರಾಶಸ್ತ್ಯ ಪದ್ಧತಿಗೆ ಸೂಚಿಸಿದ್ದರು. ಹಾಗೆಯೇ ಈಗಿರುವ ಭೌಗೋಳಿಕ ಪ್ರದೇಶ ಕ್ಷೇತ್ರ ಪ್ರಾತಿನಿಧ್ಯ ಬದಲಾಗಿ ವ್ಯಕ್ತಿಯ ವೃತ್ತಿ, ಉದ್ಯೋಗ, ಕಸುಬು ಧೋರಣೆ ಹಿತಾಸಕ್ತಿಗನುಗುಣವಾಗಿ ಪ್ರಾತಿನಿಧ್ಯ ಕೊಡುವುದು, ಪಕ್ಷ ಸರ್ಕಾರ ಹೋಗಿ, ಪಕ್ಷಾತೀತ, ರಾಷ್ಟ್ರೀಯ ಸರ್ಕಾರಕ್ಕೆ ಶಾಸನ ಕ್ರಮ ಮಾಡಿಕೊಡುವುದು, ಕೂಡ ಸೂಕ್ತ ಪರಿಹಾರ ಸೂಚಕವಾಗಿವೆ.

ಎಲ್ಲಕ್ಕೂ ಮಿಗಿಲಾಗಿ, ಪ್ರಜಾತಂತ್ರ ಸಾಫಲ್ಯವಾಗಬೇಕಾದರೆ ಚಿರಕಾಲ ಉಳಿಯಬೇಕಾದರೆ, ಪ್ರಜೆಗಳಲ್ಲಿ ಪ್ರಜಾತಂತ್ರ, ತತ್ವದ ಅರಿವು, ಜಾಗ್ರತೆ, ಶಿಕ್ಷಣ, ಅನುಭವ ಮೂಡಿಸುವುದು, ರೂಢಿಸುವುದು ಅವನ ಪ್ರಜಾ ಸ್ವಾತಂತ್ರ್ಯದ ಹಕ್ಕನ್ನು ಮುಕ್ತವಾಗಿ, ನಿರ್ಭಯವಾಗಿ, ಚಲಾಯಿಸಲು ಸಂಪೂರ್ಣವಾದ ಸುರಕ್ಷಿತ ಸುಭದ್ರ ಅವಕಾಶ ಇನ್ನೂ ಖಾತ್ರಿಯಾಗಿ ಜಾಸ್ತಿಯಾಗಿ ಮಾಡಿಕೊಡುವುದು. ತೀರ ಅಗತ್ಯವಾದ ಕರ್ತವ್ಯಗಳು ಪರಿಹಾರೋಪಾಯ ಮಾರ್ಗಗಳು, ಶಾಸನ, ಸರ್ಕಾರ ಮಟ್ಟದ ಪ್ರಯತ್ನಕ್ಕಿಂತ ನಮ್ಮ ರಾಷ್ಟ್ರದ ಒಂದು ವಿಶೇಷ ಎಂದರೆ, ಏನು ಕೇಳಿದರೂ, ಕಂಡುಬಂದರೂ, ಸಮಿತಿ ರಚನೆ ಸಲಹೆ, ಶಿಫಾರಸ್ಸು ಪಡೆಯುತ್ತಾ ಹೋಗುವುದು, ಕಾರ್ಯರೂಪಕ್ಕೆ ಆಶ್ವಾಸನೆ ಹೊರತು, ಪ್ರಾಯೋಗಿಕವಾಗಿ ಇಳಿದುದು ಕಡಿಮೆ, ವಿರಳ. ಪ್ರಜೆಗಳಲ್ಲಿಯೇ ಸ್ವಯಂ ಅರಿವು, ಪ್ರತಿಕ್ರಿಯೆ, ಪ್ರತಿಸ್ಪಂಧನ ಬರದಿದ್ದಲ್ಲಿ ಮೂಡದಿದ್ದಲ್ಲಿ ಯಾವ ತತ್ವವೂ, ತಂತ್ರವೂ ಕಾರ್ಯರೂಪ, ಯಶಸ್ಸು ಕಾಣುವುದು, ಪಡೆಯುವುದು ತೀರ ಅಸಂಭವನೀಯ ಸಂಗತಿ. ಹೇಗೆ ರಾಜಕೀಯ ಮಹಾಪಂಡಿತರು ಶಾಸ್ತ್ರಜ್ಞರು, ರಾಜಕಾರಣಿಗಳು, ತತ್ವನೀತಿ ಶಾಸ್ತ್ರಜ್ಞರು ಬುದ್ಧಿವಂತವಾಗಿ ನುಡಿಯುತ್ತಾರೆ– ಒಂದು ಒಳ್ಳೆಯ ಸರ್ಕಾರಕ್ಕೆ ಯಾವುದೂ ಬದಲಿ, ಪ್ರತಿರೂಪ ಸರ್ಕಾರ ಇಲ್ಲ, ಒಳ್ಳೆಯ ಸರ್ಕಾರ ಎಂದರೆ ಪ್ರಜಾ–ಸ್ವರಾಜ್ಯ, ಅದು ಯಶಸ್ವಿಯಾಗಬೇಕಾದರೆ ಪ್ರಜೆಗಳೇ ನಿರಂತರ, ಶಾಶ್ವತ ಜಾಗ್ರತೆ, ಎಚ್ಚರ ವಹಿಸಬೇಕು. ಸಕ್ರಿಯವಾಗಿ, ಸಚೇತನರಾಗಿ ಸ್ವಬುದ್ಧಿ ತೀರ್ಮಾನದಿಂದ ಸ್ವಕ್ಷೇಮ, ಸ್ವಜನಕ್ಷೇಮ, ಸ್ವಂತರಾಷ್ಟ್ರೋದ್ಧಾರಕ್ಕಾಗಿ ಸರ್ಕಾರದ, ರಾಷ್ಟ್ರದ ಆಡಳಿತ ಕಾರ್ಯಚಟುವಟಿಕೆಗಳಲ್ಲಿ ಭಾಗವಹಿಸಿ, ತೀರ್ಮಾನ ಕೈಗೊಂಡು ಕಾರ್ಯ ನಿರ್ವಹಿಸಬೇಕಾಗುತ್ತದೆ, ಎಂಬ ಮಾತುಗಳು ನಾವು ಮನವರಿಯುವುದು ಮಾತ್ರವಲ್ಲ ಅಂದರಂತೆ ಕಾರ್ಯೋನ್ಮುಖರಾದಲ್ಲಿ, ನಮ್ಮ ಪ್ರಜಾತಂತ್ರವನ್ನು ಇನ್ನೂ ಹೆಚ್ಚು ಕಾರ್ಯನಿರತವಾಗಿ, ಸ್ಥಿರವಾಗಿ ನೆಲೆಗೊಳಿಸಿ, ಪ್ರಖ್ಯಾತಗೊಳಿಸಬಹುದು.

ಪ್ರಜಾಪ್ರಭುತ್ವದಲ್ಲಿ ಅಧಿಕ ಮತಗಳನ್ನು ಪಡೆದ ಅಭ್ಯರ್ಥಿ/ಪಕ್ಷ ಅಧಿಕಾರಕ್ಕೆ ಬರಬೇಕಾದುದು ನ್ಯಾಯಸಮ್ಮತವಾದುದು. ಆದರೆ ಭಾರತವೂ ಸೇರಿದಂತೆ ಹಲವು ಪ್ರಜಾಪ್ರಭುತ್ವದ ರಾಷ್ಟ್ರಗಳಲ್ಲಿ ಹಲವು ಅಭ್ಯರ್ಥಿ/ಪಕ್ಷಗಳು ಸ್ವತಂತ್ರರು ಚುನಾವಣೆಗಳಲ್ಲಿ ಪಾಲ್ಗೊಳ್ಳುವುದರಿಂದ ಅಲ್ಪಸಂಖ್ಯೆಯ ಮತಗಳನ್ನು ಪಡೆದ ಅಭ್ಯರ್ಥಿ/ಪಕ್ಷ ಅಧಿಕಾರಕ್ಕೆ ಬರುವುದು ಸಾಮಾನ್ಯವಾಗಿದೆ. ಸ್ವಾತಂತ್ರಾನಂತರ ಭಾರತದಲ್ಲಿ ಇಂಥ ಅಲ್ಪಸಂಖ್ಯಾತ ಮತದಾರರ ಬೆಂಬಲ ಪಡೆದ ಸರ್ಕಾರಗಳೇ ಬಹುವಾಗಿ ಅಸ್ತಿತ್ವಕ್ಕೆ ಬಂದಿವೆ. ಎಲ್ಲೋ ಆಗೊಮ್ಮೆ ಈಗೊಮ್ಮೆ ನೈಜ ಬಹುಸಂಖ್ಯಾಮತಗಳ ಬೆಂಬಲ ಪಡೆದ ಸರ್ಕಾರ ಅಧಿಕಾರಕ್ಕೆ ಬಂದಿರಬಹುದು. ಇಂಥ ಅಸಹಜತೆಯನ್ನು ಹೋಗಲಾಡಿಸಲು ಆಗಾಗ ನಮ್ಮ ರಾಜಕೀಯ ಮುತ್ಸದ್ದಿಗಳು ಬಾಯಿಮಾತಿನ ನಿರ್ಧಾರ ಪ್ರಕಟಿಸಿದ್ದಾರಾಗಲೀ, ದೃಢನಿರ್ಧಾರ ಕೈಗೊಂಡಿಲ್ಲ. ಇಂಥ ಪ್ರಯತ್ನವನ್ನು ನಿಶ್ಚಿತವಾಗಿ ಕೈಗೊಂಡು ನಿಜವಾಗಿಯೂ ಬಹುಮತದ ಬೆಂಬಲ ಪಡೆದ ಪಕ್ಷ ಅಧಿಕಾರಕ್ಕೆ ಬರುವಂತೆ ಮಾಡಿದರೆ ಮಾತ್ರ ನಿಜವಾದ ಪ್ರಜಾಪ್ರಭುತ್ವ ಅಸ್ತಿತ್ವದಲ್ಲಿದೆಯೆಂದು ಹೇಳಬಹುದು.

ಕ್ರಮ ಸಂಖ್ಯೆ	[illegible] (ಅಂತರ)	[illegible]	[illegible]	[illegible]
1	11	16	17	18
	(8 - 9)	(5 6 [illegible])	(5 6)	(3 - 8)
1	1,42,370	2,17,784	1,89,472	3,62,707
2	1,40,060	2,79,955	2,42,602	4,08,835
3	1,23,674	2,64,157	2,41,708	4,46,851
4	1,20,396	2,04,730	1,77,577	4,03,571
5	1,19,399	1,90,420	1,87,201	3,70,511
6	0,93,553	4,08,367	3,81,073	5,32,608
7	0,80,613	3,64,469	3,17,483	4,78,531
8	0,72,286	2,87,492	2,74,911	4,91,846
9	0,65,719	2,77,744	2,55,826	5,01,988
10	0,65,175	3,27,844	3,06,334	5,07,139
11	0,59,491	4,44,919	4,10,423	5,67,541
12	0,57,951	3,57,323	3,16,721	5,38,821
13	0,57,455	2,56,255	2,27,977	4,40,452
14	0,57,386	3,67,544	3,42,195	5,22,402
15	0,56,813	2,80,151	2,39,718	4,94,384
16	0,49,198	3,07,247	2,60,416	4,95,113
17	0,44,851	2,94,255	2,76,015	4,84,745
18	0,44,765	2,79,239	2,52,213	4,74,036
19	0,44,303	2,38,138	2,13,457	4,63,681
20	0,40,502	3,85,347	3,55,244	6,04,710
21	0,35,540	4,03,507	2,98,408	5,70,575
22	0,30,410	2,15,190	1,95,167	4,50,109
23	0,28,143	2,81,711	2,44,613	5,15,190
24	0,12,732	2,69,390	4,29,758	7,21,617
25	0,10,912	2,79,119	2,66,865	5,03,582
26	0,07,026	2,99,705	2,64,379	5,97,888
27	0,03,645	2,60,786	2,35,901	4,73,230
28	0,02,419	3,06,123	2,91,971	5,10,444
	1,66,387	85,67,033	76,95,747	1,39,33,085

ಗಳು ಬಳು [illegible]
[illegible]
[illegible]

ಜಿ. ಎಸ್. ಕುಂದರಗಿ

ವೇದಗಳು

ಭಾರತೀಯ ವಿಚಾರಪಥವನ್ನು ಅರಿಯುವುದರಲ್ಲಿ ವೇದಗಳು ಪ್ರಥಮ ಆಧಾರ. 'ವೇದ' ಪದ 'ವಿದ್' ಧಾತುವಿನಿಂದ ಬಂದುದು 'ವಿದ್' ಎಂದರೆ 'ಅರಿ' ಅಥವಾ 'ತಿಳಿ' ಎಂದರ್ಥ. ಈ ತಿಳಿವು ಮುಖ್ಯವಾಗಿ ದೇವತೆಗಳ ವಿಷಯವನ್ನು ಕುರಿತದ್ದು. ಅದು 'ಇರವಿನ ಅರಿವು' ಅಥವಾ 'ಪರತತ್ವದ ತಿಳಿವು' ಎಂದೂ ಹೇಳಬಹುದು.

ವೇದಗಳು ನಾಲ್ಕು: ಋಕ್, ಸಾಮ, ಯಜುರ್ ಮತ್ತು ಅಥರ್ವ. ಋಗ್ವೇದವು ಪ್ರಮುಖವಾಗಿ ಸೃಷ್ಟಿದೇವತೆಗಳನ್ನು ಸ್ತುತಿಸುವ ಮಂತ್ರಗಳನ್ನೊಳಗೊಂಡಿದೆ. ಸಾಮ ಮತ್ತು ಯಜುರ್‌ವೇದಗಳು ಹೆಸರು, ರೂಪ ಮತ್ತು ಭಾಷೆಗಳಲ್ಲಿಯಷ್ಟೇ ಅಲ್ಲ, ವಿಷಯದಲ್ಲಿ ಕೂಡ ಋಗ್ವೇದವನ್ನೇ ಹೋಲುತ್ತವೆ. ಅಥವಾ ಋಕ್-ಮಂತ್ರಗಳನ್ನೇ ಸಾಮವೇದ ರಾಗಬದ್ಧವಾಗಿ ಹಾಡುತ್ತದೆ. ಋಕ್-ಮಂತ್ರಗಳನ್ನೇ ಯಜುರ್ವೇದ ಯಜ್ಞ-ಯಾಗಾದಿ ಕ್ರಿಯೆಗಳ ಸಂದರ್ಭಗಳಲ್ಲಿ ಬಳಸಿಕೊಳ್ಳುತ್ತದೆ. ಅಥರ್ವವೇದವು ಮಾಂತ್ರಿಕ ಅಂಶಗಳನ್ನು ಒಳಗೊಂಡಿದೆ. ಅದು ಜಾನಪದ ಜೀವನ, ಕಲೆ ಮತ್ತು ದೇವತಾರ್ಚನೆಗಳನ್ನು ಹೇಳುತ್ತದೆ. ತಾತ್ವಿಕ ದೃಷ್ಟಿಯಿಂದ ಋಗ್ವೇದ ಮತ್ತು ಅಥರ್ವವೇದಗಳಿಗೆ ಮಹತ್ವವನ್ನು ಕೊಡಲಾಗಿದೆ.

ಪ್ರತಿ ವೇದದಲ್ಲಿ ಮೂರು ಭಾಗಗಳನ್ನು ಮಾಡಲಾಗಿದೆ. ಮಂತ್ರಗಳು, ಬ್ರಾಹ್ಮಣಗಳು ಮತ್ತು ಉಪನಿಷತ್ತುಗಳು. ಬ್ರಾಹ್ಮಣ ಮತ್ತು ಉಪನಿಷತ್ತುಗಳ ಮಧ್ಯೆ ಅರಣ್ಯಕಗಳೆಂಬ ಭಾಗವೂ ಬರುತ್ತದೆ. ಮಂತ್ರಗಳು ದೇವತಾಸ್ತುತಿಯನ್ನು ಕುರಿತಾಗಿವೆ. ಬ್ರಾಹ್ಮಣಗಳು ಯಜ್ಞಯಾಗಾದಿ ಕ್ರಿಯೆಗಳ ವಿವರಗಳನ್ನು ಒದಗಿಸುತ್ತವೆ. ಅರಣ್ಯಕಗಳು ಯಜ್ಞಯಾಗಾದಿಗಳ ಸಾಂಕೇತಿಕ ಹಾಗೂ ಆಧ್ಯಾತ್ಮಿಕ ಅಂಶಗಳನ್ನು ಪ್ರತಿಪಾದಿಸುತ್ತವೆ. ಗೃಹಸ್ಥಾಶ್ರಮದಿಂದ ವಾನಪ್ರಸ್ಥಕ್ಕೆ ಹೋಗುವ ಜನರಿಗೆ ಇವು ಅನುಕೂಲವಾಗಿವೆ. ಅರಣ್ಯವಾಸಿಗಳು ಯಜ್ಞ-ಯಾಗಾದಿಗಳನ್ನು ಕಾರ್ಯರೂಪದಲ್ಲಿ ನಡೆಸಬೇಕಾಗಿಲ್ಲ. ಅವುಗಳ ಸಾಂಕೇತಿಕ ಹಾಗೂ ಆಧ್ಯಾತ್ಮಿಕ ಅಂಶಗಳನ್ನು ಚಿಂತಿಸಿದರಾಯಿತು. ಪ್ರಾರಂಭದ ಅನೇಕ ಉಪನಿಷತ್ತುಗಳು

ಬ್ರಾಹ್ಮಣಗಳಲ್ಲಿ ಅಡಕವಾಗಿವೆ. ಆದರೆ ಅವುಗಳ ವಿಶೇಷ ಮಹತ್ವದ ಕಾರಣದಿಂದ ಅವುಗಳನ್ನು ವೇದದ ಪ್ರತ್ಯೇಕ ಪ್ರಕಾರಗಳೆಂದು ಪರಿಗಣಿಸಲಾಗುತ್ತದೆ.

ವೇದಗಳ ಕಾಲದ ಬಗ್ಗೆ ನಿಶ್ಚಿತವಾದ ಉತ್ತರವಿಲ್ಲ. ಗೌತಮಬುದ್ಧನು ವೇದಗಳನ್ನು ಖಂಡಿಸಿದನು. ಆತನು ನಿರ್ವಾಣಹೊಂದಿದ್ದು ಕ್ರಿ.ಪೂ. 480 ರಲ್ಲಿ. ವೇದಗಳು ಅವನಿಗಿಂತಲೂ ಪೂರ್ವದಲ್ಲಿ ಅಂದರೆ ಕ್ರಿ.ಪೂ. 500ರ ಸುಮಾರಂತೂ ಇದ್ದಿರಲೇಬೇಕು. ಅವು ಕ್ರಿ.ಪೂ. 1200 ರಿಂದ 1500ರ ಸುಮಾರು ಇದ್ದಿರಬೇಕೆಂದು ಒಂದು ಸಾಮಾನ್ಯ ಅಭಿಪ್ರಾಯವಿದೆ. ಡಾ. ವಿಂಟರ್‌ನಿಝ್ ಎಂಬುವರು ತಮ್ಮ History of Indian literature ಎಂಬ ಗ್ರಂಥದಲ್ಲಿ ವೇದಗಳ ಕಾಲವನ್ನು ಕ್ರಿ.ಪೂ. 2000 ದಿಂದ ಕ್ರಿ.ಪೂ. 2,500 ಎಂದು ಹೇಳುತ್ತಾರೆ. ಸಿಂಧೂನದಿಯ ತೀರದಲ್ಲಿ ಇತ್ತೀಚೆಗೆ ಶೋಧವಾದ ಹರಪ್ಪಾ ಮತ್ತು ಮೊಹೆಂಜೊದಾರೊ ನಾಗರಿಕತೆಗಳು ಈ ವಿಷಯದಮೇಲೆ ಇನ್ನೂ ಹೆಚ್ಚಿನ ಬೆಳಕನ್ನು ಚೆಲ್ಲುವ ಸಾಧ್ಯತೆ ಇದೆ.

ವೇದಾರ್ಥವನ್ನು ಕುರಿತು ಪಂಡಿತರಲ್ಲಿ ಭಿನ್ನಾಭಿಪ್ರಾಯಗಳಿವೆ. ಫ್ಲೈಡರ್ ಎಂಬ ವಿದ್ವಾಂಸನ ಅಭಿಪ್ರಾಯದಲ್ಲಿ ಋಗ್ವೇದವು ಪ್ರಾಚೀನವಾದ, ಬಾಲವತ್, ಸೋಜಿಗವೆನ್ನುವಷ್ಟು ಸರಳವಾದ ಪ್ರಾರ್ಥನೆಗಳನ್ನು ಒಳಗೊಂಡಿದೆ. ಆರ್ಯರ ಋಗ್ವೇದವು ಅಸ್ಪಷ್ಟವಾದ, ಪ್ರಾಚೀನ ಏಕದೇವತಾವಾದವನ್ನು ಸಾರುತ್ತದೆ ಎಂದು ಪಿಕ್‌ಟೆಟ್‌ನ ಮತ. ಸುಪ್ರಸಿದ್ಧ ಭಾಷ್ಯಕಾರರಾದ ಸಾಯಣರು ಮಂತ್ರಗಳ ದೇವತೆಗಳು ನೈಸರ್ಗಿಕ ಎಂದು ಹೇಳುತ್ತಾರೆ ಮತ್ತು ಅನಂತರ ಬಂದ ಬ್ರಾಹ್ಮಣ ಧರ್ಮವನ್ನು ಈ ವೇದ ಮಂತ್ರಗಳಲ್ಲಿ ಕಾಣುತ್ತಾರೆ.

ವೇದಗಳಿಗೆ ಅರವಿಂದರು ಹೊಸದೊಂದು ಅರ್ಥವನ್ನು ಕೊಡುತ್ತಾರೆ. ಅವರ ಅರ್ಥದಲ್ಲಿ ವೇದಗಳಲ್ಲಿ ಗೂಢತತ್ವವನ್ನು, ಅನುಭಾವವನ್ನು ಸಾಂಕೇತಿಕವಾಗಿ ಹೇಳಲಾಗಿದೆ. ಪವಿತ್ರವಾದ, ಗೂಢವಾದ ಆತ್ಮಜ್ಞಾನವೂ, ದೇವತೆಗಳ ನಿಜವಾದ ಜ್ಞಾನವೂ ಈ ಮಂತ್ರಗಳಲ್ಲಿ ಇದೆ ಎಂದು ಅವರ ಅಭಿಪ್ರಾಯ. ಸಾಮಾನ್ಯನಿಗೆ ಇದನ್ನು ಬಿಚ್ಚಿ ಹೇಳಿದರೆ ಅವನು ಅಪಾರ್ಥ ಮಾಡಿಕೊಳ್ಳುವ ಸಂಭವ ಹೆಚ್ಚು. ಅದಕ್ಕಾಗಿ ಸಾಮಾನ್ಯನಿಗೆ ಬಾಹ್ಯಪೂಜೆ, ಜ್ಞಾನಿಗೆ ಆಂತರಿಕ, ಸಾಂಕೇತಿಕ ಅರ್ಥ ಎಂದು ಅವರು ಖಚಿತವಾದ ಅಭಿಪ್ರಾಯವನ್ನು ನಮ್ಮೆದುರು ಇಡುತ್ತಾರೆ. ಈ ರೀತಿನಿಂದ ವೇದಗಳ ಮಹತ್ವವು ಉಪನಿಷತ್ತುಗಳ ಮಹತ್ವದಷ್ಟೇ ದೊಡ್ಡದು, ಮತ್ತು ಭಾರತೀಯ ವಿಚಾರ ಪಥದ ಮೂಲಗಳಾದ ವೇದ–ಉಪನಿಷತ್ತುಗಳಲ್ಲಿ ಯಾವುದೇ ವಿರೋಧಾಭಾಸವಿಲ್ಲವೆಂದೂ ಸ್ಪಷ್ಟವಾಗುತ್ತದೆ. ವೇದಗಳ ದ್ರಷ್ಟಾರರು ತಮ್ಮ ಅನುಭಾವದ ಕ್ಷಣಗಳಲ್ಲಿ ವಿಶ್ವಸತ್ಯಗಳನ್ನು ಆರ್ಷಜ್ಞಾನದಿಂದ ಪೂರ್ತಿಯಾಗಿ ಕಂಡರು, ಸಾಂಕೇತಿಕವಾಗಿ ಉಚ್ಚರಿಸಿದರು. ಉಪನಿಷತ್ತುಗಳಲ್ಲಿ ಅವುಗಳ ವಿವರವಾದ ವಿವರಣೆಯಾಯಿತು ಎಂದು ಹೇಳುವುದು ಸೂಕ್ತವೆನಿಸುತ್ತದೆ.

ಆದರೆ ಈ ಮಧ್ಯೆ ಬರುವ ಯಜ್ಞ ಯಾಗಾದಿಗಳನ್ನು ಒತ್ತಿ ಹೇಳುವ ಬ್ರಾಹ್ಮಣಗಳನ್ನು ಹೇಗೆ ಅರ್ಥಮಾಡಿಕೊಳ್ಳಬೇಕು ? ವೇದಗಳು ಯಜ್ಞ ಯಾಗಾದಿ ಕ್ರಿಯೆಗಳನ್ನು ಸ್ಪಷ್ಟೀಕರಿಸುವ ಮಂತ್ರಗಳನ್ನೇ ಹೇಳುತ್ತವೆಯೆಂಬ ಸಾಯಣರ ಅರ್ಥವನ್ನೇ ಒಪ್ಪಿಕೊಳ್ಳಬೇಕೆ ? ಎಂಬ ಸಂದೇಹವು ಬರುತ್ತದೆ. ಮಾನವ ಸಂಸ್ಕೃತಿಯ ಬೆಳವಣಿಗೆಯಲ್ಲಿ ವೇದಗಳು ಆದಿಯುಗ, ಬ್ರಾಹ್ಮಣಗಳು ಮಧ್ಯಯುಗ ಮತ್ತು ಉಪನಿಷತ್ತುಗಳು ಪರಿಪಕ್ವಯುಗ ಎಂಬ ಡಾ. ರಾಧಾಕೃಷ್ಣನ್‌ರ ಮಾತು ಸರಿಯಾಗಿರಬಹುದೇ ? ಆಧುನಿಕ ಐತಿಹಾಸಿಕ ಪದ್ಧತಿ ಮತ್ತು ಮಾನವ ಸಂಸ್ಕೃತಿಯ ವೈಜ್ಞಾನಿಕ ತತ್ವ ರಾಧಾಕೃಷ್ಣನ್‌ರ ಮಾತನ್ನು ಸಮರ್ಥಿಸುತ್ತದೆಯೆಂದು ನನಗೆ ಅನಿಸುತ್ತದೆ.

I. ಮಂತ್ರಗಳ ಸಾರ

ಮಂತ್ರದ ಅರ್ಥ ದೇವತಾಸ್ತುತಿ, ದೇವರನ್ನು ಕುರಿತ ಪ್ರಾರ್ಥನೆ, ಧಾರ್ಮಿಕ ಗೀತೆಯೆಂದು ಹೇಳಬಹುದು. ಮಂತ್ರಗಳ ಗುಂಪಿಗೆ ಸಂಹಿತೆ ಯೆಂಬ ಹೆಸರು. ಋಗ್ವೇದ ಹಾಗೂ ಅಥರ್ವವೇದಗಳಲ್ಲಿ ಬರುವ ಮಂತ್ರಗಳನ್ನು ನಾವಿಲ್ಲಿ ವಿಶೇಷವಾಗಿ ಚರ್ಚಿಸುತ್ತೇವೆ. ಈ ಮಂತ್ರಗಳನ್ನು (1) ಮೊದಲಿನ ಮಂತ್ರಗಳು ಹಾಗೂ (2) ಅನಂತರದ ಮಂತ್ರಗಳು–ಎಂದು ಎರಡು ಭಾಗಮಾಡಬಹುದು.

(1) ಮೊದಲಿನ ಮಂತ್ರಗಳು : ಈ ಮಂತ್ರಗಳಲ್ಲಿ ಸೃಷ್ಟಿಶಕ್ತಿಗಳ ಪೂಜೆ ಇದೆ. ಅನೇಕ ನೈಸರ್ಗಿಕ ದೇವತೆಗಳನ್ನು ಕುರಿತ (Naturalistic Polytheism) ಪ್ರಾರ್ಥನೆಯಿದೆ. ಸೂರ್ಯ, ಸವಿತೃ, ವಿಷ್ಣು, ಪೂಷನ್, ಅಶ್ವಿನಿಗಳು, ಇಂದ್ರ, ವರುಣ, ಅಗ್ನಿ, ಸೋಮ, ಯಮ, ಪರ್ಜನ್ಯ ಇತ್ಯಾದಿ ಪುರುಷದೇವತೆಗಳು, ಉಷಸ್, ಅದಿತಿ, ಸಿಂಧು, ಸರಸ್ವತಿ, ವಾಕ್, ಶಕ್ತಿ, ಅರಣ್ಯಾನಿ ಇತ್ಯಾದಿ ಸ್ತ್ರೀದೇವತೆಗಳು–ಇವುಗಳನ್ನು ಕುರಿತ ಪ್ರಾರ್ಥನೆಗಳಿವೆ. ಈ ದೇವತೆಗಳು ಮೂವತ್ತು ಮೂರು ಎಂದು ಹೇಳಿ ಹನ್ನೊಂದರ ಮೂರು ಗುಂಪುಗಳನ್ನು ಹೀಗೆ ಹೇಳಿದೆ : (i) ಮಿತ್ರ ವರುಣರಂತಹ ಸ್ವರ್ಗಲೋಕದ ದೇವತೆಗಳು ; (ii) ಇಂದ್ರ ಮತ್ತು ಮರುತ್ತುಗಳಂತಹ ಅಂತರಿಕ್ಷ ಲೋಕದ ದೇವತೆಗಳು ; (iii) ಅಗ್ನಿ ಮತ್ತು ಸೋಮರಂತಹ ಪೃಥ್ವಿಯ ದೇವತೆಗಳು.

ಭಾರತದ ನೆಲದಲ್ಲಿ ಹೊಸದಾಗಿ ಕಾಲಿಕ್ಕಿದ ಆರ್ಯರು ಸಿಂಧು ಹಾಗೂ ಗಂಗಾ ನದಿಗಳ ದಡದಲ್ಲಿಯ ಫಲವತ್ತಾದ ಭೂಮಿಯನ್ನು ಕಂಡರು. ಪ್ರಕಾಶಕೊಡುವ ಸೂರ್ಯ, ಮಳೆಯನ್ನು ಕೊಡುವ ಇಂದ್ರ, ಅಡಿಗೆಗೆ, ಯಜ್ಞಕ್ಕೆ ಬೇಕಾಗುವ ಅಗ್ನಿ, ನಿಯಮಿತತೆಯ ಪ್ರತಿನಿಧಿಯಾದ ವರುಣ– ಈ ದೇವತೆಗಳನ್ನು ಉಪಾಸಿಸಿದರು. ಸೃಷ್ಟಿಯ ಶಕ್ತಿಗಳನ್ನು ವ್ಯಕ್ತೀಕರಿಸಿದರು (Anthropomorphism). ಇದು ಅಪೂರ್ಣ ವ್ಯಕ್ತೀಕರಣ ಎನ್ನುವುದಕ್ಕಿಂತ, ಸೃಷ್ಟಿರಹಸ್ಯದ ಸತ್ಯಶೋಧನೆಗೆ ಅವರು ಹೆಚ್ಚು ಪ್ರಾಧಾನ್ಯನಿತ್ತರು ಎಂದು ಹೇಳುವುದು ಸಮಂಜಸವಾದೀತು (not

arrested anthropomorphism). ಈ ದೇವತೆಗಳಲ್ಲಿ ಇಂದ್ರ ಮತ್ತು ವರುಣರು ಗಣ್ಯರು.

ಇಂದ್ರನು ಶೌರ್ಯ ಮತ್ತು ಪರಾಕ್ರಮದ ಪ್ರತೀಕ. ಆರ್ಯರು ಭಾರತಕ್ಕೆ ಬಂದ ಮೇಲೆ ಇಲ್ಲಿ ನೆಲಸಿದ ದ್ರಾವಿಡರೊಡನೆ ಹೋರಾಡಬೇಕಾಯಿತು. ಈ ಹೋರಾಟ ದಲ್ಲಿ ತಮಗೆ ಗೆಲುವಾಗಬೇಕೆಂದು ಆರ್ಯರು ಇಂದ್ರನನ್ನು ಕುರಿತು ಪ್ರಾರ್ಥಿಸಿದರು. 'ಆರ್ಯರಕ್ಷಕ, ದಸ್ಯು ವಿನಾಶಕ'ನೆಂದು ಆತನನ್ನು ಬಣ್ಣಿಸಲಾಗಿದೆ. ತಮ್ಮ ಉಪಜೀವನಕ್ಕಾಗಿ ಅವರು ಮಳೆಯನ್ನು ಅವಲಂಬಿಸಬೇಕಾಯಿತು. ಇಂದ್ರನನ್ನು ಮಳೆಕೊಡುವ ದೇವರೆಂದು, ಗುಡುಗು, ಮಿಂಚುಗಳ ದೊರೆಯೆಂದೂ ಬಣ್ಣಿಸಲಾಗಿದೆ. 'ಬರಗಾಲವೆಂಬ ರಾಕ್ಷಸನನ್ನು ಕೊಂದು, ಮಳೆಸುರಿಸುವ ದೇವ'ನಿವ ಎಂದೂ ಈತ ನನ್ನು ವರ್ಣಿಸಲಾಗಿದೆ. ಈತನಿಗೆ ತುಸು ಜಂಭ. ಸೋಮರಸವೂ ಈತನಿಗೆ ಇಷ್ಟ.

'ಇಂದ್ರನ ಮಹತಿಯಿಂದ ಭಾರತದಲ್ಲಿ ನೈತಿಕ ಅವನತಿಯಾಯಿತು. ಶಕ್ತಿಯೇ ಧರ್ಮ' ಎಂದು ಕೆಲವರು ಹೇಳುತ್ತಾರೆ. ಆದರೆ ಈ ಅಭಿಪ್ರಾಯ ತಪ್ಪಾಗಿದೆ. ಪುನರ್ಜನ್ಮದಲ್ಲಿ ನಂಬಿಕೆ ಇಟ್ಟ, ಆತ್ಮಶಕ್ತಿಯಲ್ಲಿ ಶ್ರದ್ಧೆಯನ್ನಿಟ್ಟ ಭಾರತೀಯರ ನೈತಿಕ ಮೌಲ್ಯಗಳ ಅವನತಿಯಾಯಿತೆಂದು ಹೇಳುವುದು ತಪ್ಪೆಂದು ರುಡಾಲ್ಫ್ ರಾತ್[1] ಅಭಿಪ್ರಾಯಪಡುತ್ತಾರೆ.

ವರುಣನು ಧರ್ಮದೇವತೆ–ಧರ್ಮರಕ್ಷಕ. ಸೂರ್ಯ ಆತನ ಕಣ್ಣು. ಆಕಾಶ ಆತನ ವಸ್ತ್ರ. ಗುಡುಗು ಆತನ ಉಸಿರು. ಆತನ ಆಜ್ಞೆಯಿಂದ ನದಿಗಳು ಹರಿಯುತ್ತವೆ. ಸೂರ್ಯ ಪ್ರಕಾಶಿಸುತ್ತಾನೆ. ಆತನ ಭೀತಿಯಿಂದ ನಕ್ಷತ್ರಗಳು ಮತ್ತು ಚಂದ್ರ ತಮ್ಮ ಗತಿಯಲ್ಲಿವೆ. ಆತನು ಸರ್ವಜ್ಞ. ಮನುಷ್ಯನ ಒಳ್ಳೆಯತನ ಮತ್ತು ಕೆಡುಕನ್ನು ಆತ ಯಾವಾಗಲೂ ನೋಡುತ್ತಿರುತ್ತಾನೆ. ಆತನು ದಯಾಮಯ. ಪಾಪಮಾಡಿದವನು ಪಶ್ಚಾತ್ತಾಪ ವ್ಯಕ್ತಪಡಿಸಿದಾಗ ಕೂಡಲೆ ಆತನನ್ನು ಕ್ಷಮಿಸುವನು.

ದೈವತ್ವದ ಇನ್ನೊಂದು ಅಭಿವ್ಯಕ್ತಿ 'ಋತ' ತತ್ತ್ವ. ಅದರ ಅರ್ಥ ಕ್ರಮ. ಸೃಷ್ಟಿಯಲ್ಲಿ ಒಂದು ಕ್ರಮವಿದೆ. ಸೂರ್ಯೋದಯ, ಸೂರ್ಯಾಸ್ತಗಳು, ಋತುಮಾನ ಗಳು ಕ್ರಮದಿಂದ ಸಾಗುತ್ತವೆ. 'ಋತ' ಶಬ್ದ ಕೇವಲ ಸೃಷ್ಟಿಕ್ರಮವನ್ನು ಸೂಚಿಸುವುದಿಲ್ಲ. ನೈತಿಕ ಕ್ರಮವನ್ನು ಸೂಚಿಸುತ್ತದೆ. ಸೃಷ್ಟಿಯಲ್ಲಿ ಕ್ರಮವಿದೆ, ಇದರ ಅರ್ಥ ಅದು ಸರಿಯಾದವರ ಕೈಯಲ್ಲಿದೆ. ವರುಣನು ಸೃಷ್ಟಿಕ್ರಮದ ದೇವತೆ ಯಷ್ಟೇ ಅಲ್ಲ. ನೈತಿಕ ಕ್ರಮದ ದೇವತೆಯೂ ಹೌದು. ಸತ್ಯಕ್ಕೆ ಜಯ, ಕೀರ್ತಿ; ಅಸತ್ಯಕ್ಕೆ, ಅನ್ಯಾಯಕ್ಕೆ ದಂಡನೆ, ಶಿಕ್ಷೆ. 'ಋತಸ್ಯಗೋಪಾ' ಅಂದರೆ 'ಧರ್ಮರಕ್ಷಕ' ನೆಂದು ವರುಣನನ್ನು ಬಣ್ಣಿಸಲಾಗಿದೆ. 'ಋತ'ದ ಮೂರನೆಯ ಅರ್ಥ 'ಧರ್ಮ'. ಈ ಧರ್ಮವನ್ನು ಷಡ್ದರ್ಶನಗಳಲ್ಲಿ ಪ್ರತಿಪಾದಿಸಲಾಗಿದೆ.

---

[1] JAOS Vol. III, pp. 331–47.

(2) ಅನಂತರದ ಮಂತ್ರಗಳು ಮತ್ತು ತಾತ್ವಿಕ ಅಂಶಗಳು

ಅನಂತರ ಬಂದ ಮಂತ್ರಗಳಲ್ಲಿ ಬಹುದೇವತೆಗಳ ಪೂಜೆ ಕಡಿಮೆಯಾಗುತ್ತದೆ. ಏಕದೇವತಾವಾದ (Monotheism) ಮತ್ತು ಏಕತತ್ವವಾದ ಅಥವಾ ಅದ್ವೈತ (Monism)—ಈ ವಿಚಾರಗಳು ಕಾಣಿಸಿಕೊಳ್ಳುತ್ತವೆ.

(i) **ಏಕದೇವತಾವಾದ:** ಏಕದೇವತಾವಾದವೆಂದರೆ ಒಬ್ಬನೇ ದೇವತೆಯು ಉಳಿದೆಲ್ಲಾ ದೇವತೆಗಳಿಗಿಂತ ಶ್ರೇಷ್ಠನೆಂದು ಅರ್ಥವಲ್ಲ. ಎಲ್ಲಾ ದೇವತೆಗಳಲ್ಲಿ ಇರ ಬಹುದಾದ ಸಾಮಾನ್ಯ ತತ್ವವನ್ನು ಕಂಡು ಹಿಡಿಯುವುದು ಏಕದೇವತಾವಾದದ ನಿಜ ವಾದ ಅರ್ಥ. 'ದೇವ' ಪದ 'ಪ್ರಕಾಶಿಸು' ಎಂಬ ಅರ್ಥವನ್ನು ಕೊಡುತ್ತದೆ. ಎಲ್ಲಾದೇವತೆಗಳೂ ಪ್ರಕಾಶಿಸುವಂಥವರು. ದೇವತೆಗಳು ಸದ್ಗುಣಿಗಳ ಪಕ್ಷಪಾತಿಗಳು. ಇದು ಎಲ್ಲಾ ದೇವತೆಗಳಲ್ಲಿರುವ ಇನ್ನೊಂದು ಸಾಮಾನ್ಯ ಧರ್ಮ. ಏಕದೇವತಾ ವಾದವು ಎಲ್ಲಾ ದೇವತೆಗಳ ಹಿಂದೆ ಅಡಗಿರಬಹುದಾದ ಶಕ್ತಿಯನ್ನು, ಒಂದು ತತ್ವ ವನ್ನು ಸೂಚಿಸುತ್ತದೆ. ಸರ್ವಶಕ್ತಿತ್ವವು ಎಲ್ಲಾ ದೇವತೆಗಳಿಗೆ ಅನ್ವಯಿಸುವಂತಹದ್ದು. ಈ ದಾರಿಯಲ್ಲಿ 'ವಿಶ್ವಕರ್ಮ'ನ ಉದಯವಾಯಿತು. ನಾವೆಲ್ಲಾ ಸಂಕಟದಲ್ಲಿದ್ದಾಗ ನಮ್ಮ ತಂದೆಯನ್ನು ಮೊರೆ ಹೋಗುವುದು ಸ್ವಾಭಾವಿಕ. ಅದೇ ರೀತಿ ವಿಶ್ವದ ಮಕ್ಕಳೆಲ್ಲಾ ತೊಂದರೆಯಲ್ಲಿದ್ದಾಗ ವಿಶ್ವದ ತಂದೆಯನ್ನು ಬೇಡಿಕೊಳ್ಳಬೇಕು ತಾನೇ? ಈ ರೀತಿಯಲ್ಲಿ 'ಪ್ರಜಾಪತಿ' (प्रजानां पतिः)ಯು ಜನಿಸಿದನು.

ನಮ್ಮ ಪೂರ್ವಜರಲ್ಲಿ ಒಂದು ಅಭ್ಯಾಸವಿತ್ತು. ತಾವು ಪೂಜಿಸುವ ದೇವತೆ ಯನ್ನು ಅವರು ಉತ್ಪ್ರೇಕ್ಷಿಸುತ್ತಿದ್ದರು. ಆಗ ಉಳಿದ ದೇವತೆಗಳನ್ನು ಬೇರೆಡೆ ಹೆಸರಿಸಿ ಇಡುತ್ತಿದ್ದರು. ಈ ಅಂಶಕ್ಕೆ ಮ್ಯಾಕ್ಸ್‌ಮುಲ್ಲರ್ Henotheism–ಏಕದೇವೋ ಪಾಸನೆ–ಎಂದು ಕರೆದರು. ಇದನ್ನು Monotheism–ಒಂದೇ ದೇವರಲ್ಲಿ ನಂಬಿಕೆ– ಈ ವಾದದಿಂದ ಭಿನ್ನವೆಂದು ಕರೆದರು. ಏಕದೇವೋಪಾಸನೆಯು ಬಹುದೇವತೋಪಾಸನೆ ಹಾಗೂ ಏಕಮೇವದೇವತಾ ಉಪಾಸನೆ–ಇವುಗಳ ಮಧ್ಯದ ಒಂದು ಘಟ್ಟ ಎಂದೂ ಹೇಳುವರು. ಈ ಅಭಿಪ್ರಾಯ ಅನೇಕರಿಗೆ ಸಮ್ಮತವಾಗಿಲ್ಲ. ತಾವು ಪೂಜಿಸುತ್ತಿರುವ ದೇವರನ್ನು ಉತ್ಪ್ರೇಕ್ಷಿಸಿ ಸ್ತೋತ್ರಮಾಡುವುದು ಎಲ್ಲಾ ಧಾರ್ಮಿಕ ಕಾವ್ಯಗಳ ಸಹಜ ವಾದ ಅಂಶ. ಏಕದೇವೋಪಾಸನೆಯನ್ನು 'ಅನುಕೂಲ ಸಿಂಧು ಏಕದೇವತಾವಾದ' (Opportunistic Monotheism) ಎಂದೂ ಕರೆದಿದ್ದಾರೆ. ಏನೇ ಇರಲಿ, ಅನೇಕ ದೇವತೆಗಳ ಗೊಂದಲಮಯ ಪರಿಸ್ಥಿತಿಯಲ್ಲಿ ಏಕದೇವತೆಯತ್ತ ಲಕ್ಷ್ಯವನ್ನು ಸೆಳೆಯು ವುದರಲ್ಲಿ ಇದು ಸಹಾಯಕವಾಯಿತು ಎಂದು ಹೇಳಬಹುದು.

(ii) **ಏಕತತ್ವವಾದ (ಅದ್ವೈತ):** ಏಕದೇವತಾವಾದದಲ್ಲಿ ದ್ವೈತಭಾವ ಇದೆ. ಸಕಲದೇವತೆಗಳಲ್ಲಿ ಅಡಕವಾದ ಏಕತತ್ವವನ್ನು ಅದು ಕಂಡು ಹಿಡಿಯುತ್ತದೆ, ನಿಜ. ಆದರೆ ದೇವರಿಗೂ–ದೇವರಿಂದ ಸೃಷ್ಟಿಗೊಂಡ ಜಗತ್ತಿಗೂ ಭೇದವನ್ನು ಈ ತತ್ವ ಹೇಳುತ್ತದೆ.

ವಿಶ್ವದ ಮೂಲವೆಲ್ಲಿದೆ ? ಅದರ ಮೂಲಕಾರಣವಾವುದು ? ಯಾವ ಕಾರಣ ದಿಂದ ನಾವು ಸುತ್ತಲೂ ಕಾಣುವ ಪ್ರಪಂಚ–ಆಕಾಶ, ಸಾಗರ, ಬೆಟ್ಟಗಳು, ಗಿಡಗಳು, ಪ್ರಾಣಿಗಳು, ಮನುಷ್ಯವರ್ಗ–ಪ್ರಕಟವಾಯಿತು ? ಈ ಪ್ರಶ್ನೆಗಳಿಗೆ 'ನಾಸದೀಯ ಸೂಕ್ತ'ದಲ್ಲಿ ಉತ್ತರವಿದೆ. ಈ ಸೂಕ್ತದ ಮುಖ್ಯ ವಿಚಾರವನ್ನು ಹೀಗೆ ಸಂಗ್ರಹಿಸ ಬಹುದು.

"ಪ್ರಾರಂಭದಲ್ಲಿ 'ಸತ್' ಎನ್ನುವುದೂ ಇರಲಿಲ್ಲ, 'ಅಸತ್' ಎನ್ನುವುದೂ ಇರಲಿಲ್ಲ. 'ಆ ಒಂದು' (ತದೇಕಮ್) ಶಾಂತವಾಗಿ ತನ್ನಷ್ಟಕ್ಕೆ ತಾನೇ ಉಸಿರಾಡು ತ್ತಿತ್ತು. ಅದು ಬಹುವಾಗಲು ಬಯಸಿತು. ಅದು ತನ್ನಲ್ಲಿ ಗೂಢವಾದ ತಪಃಶಕ್ತಿ ಯನ್ನು ಹೊಂದಿತ್ತು. ಅದರಿಂದ ದೇವತೆಗಳ ಸಮೇತ ಸಮಸ್ತ ವಿಶ್ವ ಪ್ರಕಟವಾಯಿತು. ಆದಿ ತತ್ವವು ಯಾವರೀತಿಯಿಂದಲೂ ಇನ್ನೊಂದು ಶಕ್ತಿಯ ಸಹಾಯವನ್ನು ಬಯಸ ಲಿಲ್ಲ. ಮಾರ್ಗದರ್ಶಕ, ರೂಪಶಕ್ತಿಗಳನ್ನು ಬಯಸಲಿಲ್ಲ. ಅದು ಸ್ವಯಂ ಶಕ್ತಿ ಯಿಂದ, ಸ್ವಯಂ ವಿಕಾಸಗೊಳ್ಳುವಂತಹ 'ಚೇತನ ಶಕ್ತಿ'"

ಈ ಏಕತತ್ವವಾದಕ್ಕೂ, ವಿಶ್ವದೈವೈಕ್ಯವಾದಕ್ಕೂ (Pantheism) ಅಂತರವಿದೆ. ವಿಶ್ವದೈವೈಕ್ಯವಾದದ ಪ್ರಕಾರ ಸರ್ವವೂ ದೇವರು. Pan ಎಂದರೆ ಎಲ್ಲ, theism ಎಂದರೆ ದೇವರಲ್ಲಿ ನಂಬಿಕೆಯಿಡುವಂತ ಮನೋಧರ್ಮ. ಈ ವಾದದ ಪ್ರಕಾರ ಪರ ತತ್ವದ ಅಂತಸ್ಥ ಸ್ವರೂಪ (Immanence) ವ್ಯಕ್ತವಾಗುತ್ತದೆ. ಗುಡ್ಡ, ಬೆಟ್ಟ, ಆಕಾಶ, ಸಮುದ್ರ, ಪಕ್ಷಿ, ಪ್ರಾಣಿ, ಮನುಷ್ಯ, ನಾನು, ನೀನು–ಎಲ್ಲವೂ ದೇವರು. Wordsworth ಕವಿಯ ರೀತಿಯಿದು· God—world = zero, ದೇವರಿಂದ ಜಗತ್ತನ್ನು ತೆಗೆದುಹಾಕಿದರೆ ಉಳಿಯುವುದು ಶೂನ್ಯ.

ಆದರೆ ಏಕತತ್ತ್ವವಾದ ಅಥವಾ ಅದ್ವೈತದಲ್ಲಿ God—world = God. ದೇವ ರಿಂದ ಜಗತ್ತನ್ನು ತೆಗೆದುಹಾಕಿದರೂ ದೇವರು ಉಳಿದೇ ಉಳಿಯುತ್ತಾನೆ. ಅಂದರೆ ಏಕ ತತ್ತ್ವವಾದದ ಪ್ರಕಾರ ಸಕಲ ಜಗತ್ತನ್ನು ಪರತತ್ತ್ವ ಒಳಗೊಂಡೂ, ಅದಕ್ಕಿಂತ ಹೆಚ್ಚಿನ ಎತ್ತರದಲ್ಲಿದೆ. ಇಲ್ಲಿ ಪರತತ್ತ್ವದ ಅತೀತ ಸ್ವರೂಪ (Transcendental) ವ್ಯಕ್ತವಾಗುತ್ತದೆ. ಅದಕ್ಕೆಂದೇ 'ಪುರುಷಸೂಕ್ತ'ದಲ್ಲಿ 'ಅತ್ಯತಿಷ್ಠತ್ ದಶಾಂಗುಲಮ್' ಎಂದರೆ "ಈ ವಿಶ್ವವನ್ನು ಎಲ್ಲ ಕಡೆಯಿಂದಲೂ ವ್ಯಾಪಿಸಿಕೊಂಡು, ಅದು ಹತ್ತು ಅಂಗುಲ ಆಚೆಯೂ ಇದೆ" ಎಂದು ಹೇಳಲಾಗಿದೆ.

II. ಬ್ರಾಹ್ಮಣಗಳು ಮತ್ತು ಕರ್ಮವಿಧಿಗಳು

ಋಗ್ವೇದದ ಮೊದಲಿನ ಮಂತ್ರಗಳಲ್ಲಿ ಬರುವ ಕರ್ಮವಾದವು ತೀರ ಸರಳ ವಾಗಿತ್ತು. ಸ್ತುತಿಸುವ ದೇವರುಗಳಿಗೆ ಹಾಲು, ತುಪ್ಪ, ದವಸ, ಧಾನ್ಯ–ಇತ್ಯಾದಿ ಗಳನ್ನು ಅರ್ಪಿಸುವುದು. ಬರುಬರುತ್ತ ಈ ಸರಳ ಪದ್ಧತಿಯು ಅನಂತರದ ಮಂತ್ರ ಗಳಲ್ಲಿ ಮತ್ತು ಬ್ರಾಹ್ಮಣಗಳಲ್ಲಿ ಸಂಕೀರ್ಣವಾಗುತ್ತಾ ನಡೆಯಿತು. ಅಥರ್ವಣವೇದದ

ಮಂತ್ರ, ಮಾಯೆ, ಮಾಟ– ಈ ಅಂಶಗಳೂ ಬಂದು ಕೂಡಿಕೊಂಡವು. ಯಜುರ್ವೇದವು ಯಜ್ಞ–ಯಾಗಾದಿಗಳು, ಹೋಮ-ಹವನಗಳು– ಈ ವಿಷಯದ ವಿವರವನ್ನು ಕೊಡುವವು. ಯಜ್ಞ ಯಾಗಾದಿಗಳನ್ನು ನಡೆಸುವ ಸಂದರ್ಭದಲ್ಲಿ ಹೇಳಲಾಗುವ ಮಂತ್ರಗಳಿಗೆ ಸಾಮವೇದವೂ ಒಂದು ಬಗೆಯ ಸಂಗೀತ ಶಾಸ್ತ್ರವನ್ನೆ ಹೇಳಿಕೊಡುತ್ತದೆ.

ಆಗಲೇ ಹೇಳಿದಂತೆ ಈ ಕರ್ಮವಿಧಿಗಳು ಪ್ರಾರಂಭದಲ್ಲಿ ಸರಳವಾಗಿದ್ದವು. ಆದರೆ ಬರುಬರುತ್ತ ಯಜ್ಞಯಾಗಾದಿಗಳನ್ನು ಆರಂಭಿಸುವ ವಿಧಿಗಳು ತೀರ ವಿವರಗಳಿಂದ ಕೂಡಿ ಕ್ಲಿಷ್ಟ, ಸಂಕೀರ್ಣವೆನಿಸಿದವು. ಸಾಮಾನ್ಯವಾಗಿ ರಾಜರುಗಳು ರಾಜಸೂಯ ಯಾಗ, ಅಶ್ವಮೇಧ ಇಂಥ ಯಜ್ಞಗಳನ್ನು ನೆರವೇರಿಸುತ್ತಿದ್ದರು. ಮಕ್ಕಳಿಗಾಗಿ, ಹೆಚ್ಚಿನ ಸಂಪತ್ತಿಗಾಗಿ, ರಾಜ್ಯ ವಿಸ್ತಾರಕ್ಕಾಗಿ, ಯುದ್ಧದಲ್ಲಿ ಗೆಲುವಿಗಾಗಿ ಈ ಯಜ್ಞಗಳು ಮಾಡಲ್ಪಡುತ್ತಿದ್ದವು. ಇವು ಬೆಳೆದು ಸಂಕೀರ್ಣವಾದಾಗ, ಯಜ್ಞಗಳನ್ನು ಮಾಡಿಸುವ ಪುರೋಹಿತ ವರ್ಗವೊಂದು ತಲೆದೋರಿತು. ಯೂಪಸ್ತಂಭ, ಮಣ್ಣಿನ ಕುಡಿಕೆ, ಕಮಲದ ಎಲೆ–ಇಂಥ ಸಾಮಾನ್ಯ ವಸ್ತುಗಳಿಗೂ ವಿಶೇಷ ಮಹತ್ವ ಪ್ರಾರಂಭವಾಯಿತು. ಮೊದಮೊದಲು ದೇವರಿಗೆ ಪ್ರಾರ್ಥನೆ ಸಲ್ಲಿಸಿ ವರ ಕೇಳಿಕೊಳ್ಳುವುದಿತ್ತು. ಈಗ್ಗೆ 'ನಾನು ಈ ಯಜ್ಞ ಮಾಡುತ್ತಿದ್ದೇನೆ. ನನಗೆ ಈ ಫಲವನ್ನು ನೀನು ಕೊಡಲೇಬೇಕು' ಎಂದು ದೇವತೆಗಳನ್ನು ಆಹ್ವಾನಿಸುವ ಛಲ ಎದ್ದು ಕಾಣತೊಡಗಿತು. ಪುರೋಹಿತವರ್ಗದ ಮಹತಿಯೊಂದಿಗೆ, ವೇದ ಮಂತ್ರದ ಶಕ್ತಿಯೂ ಬೆಳೆಯಿತು. ಎಷ್ಟರ ಮಟ್ಟಿಗೆಯೆಂದರೆ ಪೂರ್ವಮೀಮಾಂಸಾತತ್ತ್ವ ಶಾಸ್ತ್ರದ ಸಮಯದಲ್ಲಿ ದೇವರು ಇಲ್ಲವಾಗಿ ಬರಿಯ ವೇದಗಳಿಗೆ ಮಹತ್ವ ದೊರೆಯಿತು.

ಬ್ರಾಹ್ಮಣಗಳಲ್ಲಿ ಐತರೇಯ ಬ್ರಾಹ್ಮಣ, ಮತ್ತು ಶತಪಥ ಬ್ರಾಹ್ಮಣ ಮಹತ್ವದವು. ಯಜ್ಞ–ಯಾಗಾದಿ ವಿಚಾರಗಳನ್ನೊಳಗೊಂಡ ಈ ಬ್ರಾಹ್ಮಣಗಳಿಗೆ ಒಂದು ಬಗೆಯ ಮಹತ್ವವಿದೆ. ಆದರೆ ಅವು ಬರಿಯ ಕರ್ಮಕಾಂಡವನ್ನು ಪ್ರಸ್ತಾಪಿಸುವುದರಿಂದ ಉಪನಿಷತ್ತುಗಳ ವೇಳೆಗೆ ಅವುಗಳ ಮಹತ್ವ ಕಡಿಮೆಯಾಯಿತು ಮತ್ತು ಯಜ್ಞಗಳ ಸಂದರ್ಭದಲ್ಲಿ ಬಲಿಕೊಡುವ ಪದ್ಧತಿಯಿರುವುದರಿಂದ (ಆಡನ್ನೋ, ಕುರಿಯನ್ನೋ), ಬೌದ್ಧಧರ್ಮದ ವೇಳೆಗೆ ಅಹಿಂಸಾಧರ್ಮದ ಸ್ಥಾಪನೆಯಾಗಿ, ಬಲಿ ಅಥವಾ ಹಿಂಸೆಯನ್ನು ಸಾರುವ ಬ್ರಾಹ್ಮಣ, ವೇದಗಳ ಮಹತ್ವ ನಿಂತು ಹೋದುದಲ್ಲದೆ, ಪ್ರತಿರೋಧವು ತಲೆಯೆತ್ತಿತು.

III. 'ವೇದಗಳ ಅಪೌರುಷೇಯತ್ವದ ಅರ್ಥ'

ಸಾಮಾನ್ಯವಾಗಿ ವೇದಗಳು 'ಅಪೌರುಷೇಯ', ಅವುಗಳನ್ನು ಯಾರೂ ಬರೆದಿಲ್ಲ. ಅವುಗಳಿಗೆ ಲೇಖಕರಾರೂ ಇಲ್ಲವೆಂದು ಹೇಳುವುದುಂಟು. ದೇವರೇ ಅವುಗಳನ್ನು ಬರೆದ, ಅಥವಾ ಉಸುರಿದ ಎಂದೂ ಹೇಳುವುದುಂಟು. ಈ ಮಾತಿನ ಅರ್ಥವೇನು? ಒಂದು ಪುಸ್ತಕಕ್ಕೆ ಒಬ್ಬ ಲೇಖಕನು ಬೇಡವೇ? ಗ್ರಂಥಕ್ಕೆ ಗ್ರಂಥಕರ್ತೃವೆನಿಸುವ

ವ್ಯಕ್ತಿ ಇಲ್ಲವೇ? ಇತ್ಯಾದಿ ಪ್ರಶ್ನೆಗಳು ಬರುತ್ತವೆ. ಈ ವಿಷಯವಾಗಿ ನನ್ನ ವೈಯುಕ್ತಿಕ ವಿವರಣೆ ಹೀಗಿದೆ:

ನಮ್ಮ ದರ್ಶನಕಾರರ ಸಮಯದಲ್ಲಿ ಕಾಗದ–ಮಸಿ ಇತ್ಯಾದಿ ಇರಲಿಲ್ಲ. ಅವರು ತಮ್ಮ ಹೆಸರಿಗಾಗಿ, ಕೀರ್ತಿಗಾಗಿ ವಿಶೇಷ ಲಕ್ಷ್ಯವನ್ನಿತ್ತಿರಲಿಲ್ಲ. ಹೊಳೆದ ಸತ್ಯದ ಕಡೆಗೆ, ತಮ್ಮ ದರ್ಶನದ ಹೊಳವಿನೆಡೆಗೆ ವಿಶೇಷ ಲಕ್ಷ್ಯವಿದ್ದಿತು.

Wordsworth ಕವಿ Daffodils ಪದ್ಯದ ಕೊನೆಯಲ್ಲಿ ಈ ಸಾಲುಗಳನ್ನು ಹೇಳುತ್ತಾನೆ:

"They flashed upon that inward eye
Which is the bliss of solitude"

"ಅಂತರಂಗದ ಕಣ್ಣಿಗೆ ಅವು ಹೊಳೆದವು. ಅದು ಏಕಾಂತ ಸುಖದ ಸಮೃದ್ಧಿಯು". ಚಿಂತನಶೀಲನಾದ ಕವಿ, ಅಥವಾ ದ್ರಷ್ಟಾರ ಕಾವ್ಯಲೋಕದಲ್ಲಿ ಅಥವಾ ತತ್ವಲೋಕದಲ್ಲಿದ್ದಾಗ ಸ್ಫುರಣೆಗೊಂಡವನಾಗಿರುತ್ತಾನೆ. ಆ ಸಂದರ್ಭದಲ್ಲಿ ಆತನುಸುರುವ ಮಾತು, ಕೇವಲ ಅವನ ಮಾತು ಆಗಿರದೆ, ದೇವವಾಣಿಯಾಗಿರುತ್ತದೆ. ವಿಶ್ವದ ನಿಗೂಢ ಸತ್ಯಗಳನ್ನು ಆಲೋಚಿಸುವ ನಮ್ಮ ದೃಷ್ಟಾರರಿಗೆ ಸಮಾಧಿ ಸ್ಫುರಣೆಯಲ್ಲಿ ಹೊಳೆದ ವಿಶ್ವಸತ್ಯಗಳೇ ದೇವವಾಣಿಯಾಗಿ ವೇದಗಳೆನಿಸಿವೆಯೆಂದು ಹೇಳುವುದು ಹೆಚ್ಚು ಸರಿಯಾದೀತು. ಅಲ್ಲಿ ವೈಯಕ್ತಿಕ ಅಂಶ ಮರೆಯಾಗಿ ವಿಶ್ವಸತ್ಯದ ದೃಷ್ಟಾರನಾಗಿ, ಶ್ರೋತಾರನಾಗಿ ಅವನು ನಮಗೆ ಕಾಣಿಸಿಕೊಳ್ಳುತ್ತಾನೆ. ಈ ಅರ್ಥದಲ್ಲಿ ವೇದಗಳು 'ಅಪೌರುಷೇಯ'.

ತಮ್ಮ ಅರವತ್ತನೇ ಹುಟ್ಟುಹಬ್ಬದ ಸಂದರ್ಭದಲ್ಲಿ ಕವಿ ಬೇಂದ್ರೆ ಮಾತನಾಡುತ್ತಿದ್ದರು. ಅವರ ಕಾವ್ಯವನ್ನು ಹೊಗಳಿ ಅನೇಕ ಕವಿಗಳು, ವಿದ್ವಾಂಸರು ಮಾತನಾಡಿದರು. ಅನಂತರ ಬೇಂದ್ರೆ ಎದ್ದು ನಿಂತು,: "ನೀವು ಯಾವ ಕವಿಯನ್ನು ಕುರಿತು ಇಷ್ಟು ಹೊತ್ತಿನವರೆಗೆ ಮಾತನಾಡಿದಿರೋ, ಆ ಕವಿ 'ಅಂಬಿಕಾತನಯದತ್ತ'ನಿಗೆ ನನ್ನ ಪ್ರಥಮ ನಮಸ್ಕಾರ. ಕವಿ ಬೇಂದ್ರೆ ಬೇರೆ, ಈ ದೇಹವನ್ನು ಧರಿಸಿದ ಬೇಂದ್ರೆ ಬೇರೆ. ಟ್ಯೂಬ್‌ಲೈಟ್ ಒಳಗಿದ್ದು ಬೆಳಕುಕೊಡುತ್ತದೆ. ಅದೇ ರೀತಿ ಅಂಬಿಕಾತನಯದತ್ತನು ಒಳಗಿದ್ದು ತಾಯಿಯ ಹೆಸರಿನಿಂದ ಈ ಕವಿತೆಗಳನ್ನು ಹೇಳುತ್ತಿದ್ದಾನೆ. ಹೊರಗಿನ ಬೇಂದ್ರೆ, ಅವುಗಳನ್ನು ಬರೆಯುತ್ತಿದ್ದಾನೆ." ಈ ಮಾತುಗಳಲ್ಲಿ ಅಪೌರುಷೇಯತ್ವದ ಒಂದು ಅಂಶ ವ್ಯಕ್ತವಾಗಿದೆಯೆಂದು ನನಗೆನಿಸುತ್ತದೆ.

ಕಾವ್ಯವು ಉಪನಿಷತ್ತುಗಳ ರೀತಿಯಲ್ಲಿ ಒಡಮೂಡಿ ಬರಬೇಕೆಂದೂ, ದೃಷ್ಟಾರನು ಕವಿಗಿಂತಲೂ ಶ್ರೇಷ್ಠನೆಂದೂ ಬೇಂದ್ರೆ ಹೇಳುತ್ತಿದ್ದರು. ಅವರ ಇತ್ತೀಚಿನ ಪದ್ಯಗಳಲ್ಲಿ ಅರವಿಂದ–ಮಾತಾಜೀಯವರ, ವೇದಗಳ ಪ್ರಭಾವ ವಿಶೇಷವಾಗಿತ್ತೆಂದು ನಮಗೆಲ್ಲ ಗೊತ್ತಿದೆ.

IV. ಅವೈದಿಕ ಹೇಳಿಕೆಗಳು

ವೇದಕಾಲದಲ್ಲಿ ಸ್ವತಂತ್ರ ಚಿಂತಕರೂ ಇದ್ದರು. ಅವರು ವೇದಗಳನ್ನು ಒಪ್ಪಿಕೊಂಡಿರಲಿಲ್ಲ. ಅವರನ್ನು ಬ್ರಹ್ಮದ್ವೇಷಿಗಳೆಂದೂ, ಅಪವ್ರತರೆಂದೂ ಕರೆದದ್ದುಂಟು. ಈ ಪ್ರವೃತ್ತಿಯೇ ಮುಂದಿನ ನಾಸ್ತಿಕ ದರ್ಶನಗಳಿಗೆ ಕಾರಣವಾಗಿರಬೇಕು. ಜೈನ ಧರ್ಮದ ಆದಿ ತೀರ್ಥಂಕರನಾದ ಪಾರ್ಶ್ವನಾಥನು ಐತಿಹಾಸಿಕ ವ್ಯಕ್ತಿಯಾಗಿದ್ದನು. ಆತನು ಎರಡನೇ ಶತಮಾನದ ಪೂರ್ವದಲ್ಲಿ ವಾಸವಾಗಿದ್ದನು ಎಂಬುದು ಈಗ ಸಿದ್ಧವಾಗಿದೆ. ಅಂದರೆ ಅದು ಬ್ರಾಹ್ಮಣಗಳ ಕಾಲ.

ಋಗ್ವೇದದಲ್ಲಿಯೇ ಒಂದು ಸಾಲು ಬರುತ್ತದೆ: 'ಏ ಶ್ರದ್ಧೆಯೇ ನಮ್ಮನ್ನು ಶ್ರದ್ಧಾವಂತರನ್ನಾಗಿ ಮಾಡು' ಎಂಬುದಾಗಿ ಇದರ ಅರ್ಥ. ಆ ಕಾಲದಲ್ಲಿ ಅಶ್ರದ್ಧಾವಂತರು ಇದ್ದರೆಂದೂ, ಶ್ರದ್ಧೆ ಸಡಿಲವಾಗಿತ್ತೆಂದೂ ಅರ್ಥವಾಗುತ್ತದೆ. ಇಂದ್ರನ ಇರುವಿಕೆಯಲ್ಲಿ ಮತ್ತು ಅವನ ಪಾರಮ್ಯದಲ್ಲಿ ಶಂಕೆ ವ್ಯಕ್ತಪಡಿಸುವ ಅಭಿಪ್ರಾಯಗಳೂ ಬಂದಿವೆ.

V. ವೇದಕಾಲದ ವಿಶ್ವರಚನಾಕ್ರಮ, ಧರ್ಮ, ನೀತಿ, ಮತ್ತು ಆತ್ಮದ ಅಮರತೆ

ಜಗತ್ತನ್ನು ದೇವರು ಹುಟ್ಟಿಸಿದ. ಶಿಲ್ಪಿಯು ಮೂರ್ತಿಯನ್ನು ಕೆತ್ತಿದಂತೆ, ಪರಮಾತ್ಮನು ಈ ಸೃಷ್ಟಿಯನ್ನು ಹುಟ್ಟಿಸಿದ. 'ಆ ಮರ ಯಾವುದು?' 'ಆ ಕಟ್ಟಿಗೆಯನ್ನು ಎಲ್ಲಿಂದ ತಂದರು?' 'ದ್ಯಾವಾ-ಪೃಥ್ವಿಗಳು ಈ ಜಗತ್ತಿನ ತಂದೆತಾಯಿಗಳು. ಈ ವಿಶ್ವ ಸೃಷ್ಟಿಯು ಒಂದು ಯಜ್ಞ'-ಇತ್ಯಾದಿ ವರ್ಣನೆಗಳು ಬರುತ್ತವೆ.

ಮನುಷ್ಯನಿಗೂ ಮತ್ತು ದೇವರಿಗೂ ತೀರ ನಿಕಟವಾದ ಸಂಬಂಧವಿದೆ. ವೇದಗಳ ದೇವರನ್ನು ಆರ್ಯರು 'ತಂದೆ,' 'ಸೋದರ' ಎಂದು ಪ್ರೀತಿಯಿಂದ ಕರೆಯುತ್ತಾರೆ. ದೇವತೆಗಳು ಈ ವಿಶ್ವವನ್ನು ಆಳುವವರು; ಅವರು ಶಕ್ತಿಶಾಲಿಗಳು. ದೇವರು ಧರ್ಮನಿಷ್ಠರಾದುದರಿಂದ, ಮನುಷ್ಯನೂ ಧರ್ಮನಿಷ್ಠನಾಗಿದ್ದು, ನೀತಿವಂತನಾಗಿ ಬಾಳಬೇಕು.

ವೇದಕಾಲದ ಋಷಿಗಳು ಈ ಜಗತ್ತನ್ನು ಮಾಯೆಯೆಂದು ಮಿಥ್ಯೆಯೆಂದು ಉಸುರಲಿಲ್ಲ, 'ನೂರುವರ್ಷ ಬಾಳೋಣ, ಮಕ್ಕಳಿಗಾಗಿ, ಹಸುಗಳಿಗಾಗಿ, ಸಂಪತ್ತಿಗಾಗಿ ಪ್ರಾರ್ಥನೆ ಸಲ್ಲಿಸೋಣ' ಎಂದು ಹೇಳುತ್ತಿದ್ದರು.

ಸತ್ಯಪರಿಪಾಲನೆಯು, ಇಂದ್ರಿಯ ನಿಗ್ರಹವು, ದಯಾಳುತನವು ಮುಖ್ಯ ಸದ್ಗುಣಗಳಾಗಿದ್ದವು. ಆಶ್ರಮ ಧರ್ಮಗಳು ವ್ಯವಸ್ಥಿತವಾಗಿ ರೂಪುಗೊಂಡಿದ್ದವು. ವರ್ಣಧರ್ಮಗಳನ್ನು ಹೇಳಲಾಗಿತ್ತು. ಪುರುಷಸೂಕ್ತದಲ್ಲಿ "ಬ್ರಾಹ್ಮಣ ಜಾತಿ ವಿಶಿಷ್ಟನಾದ ಪುರುಷನು ಈ ಪ್ರಜಾಪತಿಯ ಮುಖದಿಂದ ಹುಟ್ಟಿದನು· ಕ್ಷತ್ರಿಯಜಾತಿ

ವಿಶಿಷ್ಟ ಪುರುಷನು ತೋಳುಗಳಿಂದ ಹೊರ ಬಂದನು. ವೈಶ್ಯನು ತೊಡೆಗಳಿಂದ ಜನಿಸಿದನು. ಶೂದ್ರನು ಕಾಲುಗಳಿಂದ ಉತ್ಪನ್ನವಾದನು "[1] ಎಂದು ಹೇಳಲಾಗಿದೆ.

ಪುನರ್ಜನ್ಮದಲ್ಲಿ ಇನ್ನೂ ನಂಬಿಕೆ ಹುಟ್ಟಿರಲಿಲ್ಲ. ಆದರೆ ಸಾವಿನ ನಂತರ ಮನುಷ್ಯನು ಉಳಿಯುತ್ತಾನೆ. ಆತ್ಮವು ಅಮರವು-ಎಂಬ ಕಲ್ಪನೆಗಳು ಇದ್ದವು.

ದೇವಋಣ, ಋಷಿಋಣ, ಪಿತೃಋಣ-ಇವುಗಳನ್ನು ಗುರುತಿಸಲಾಗಿತ್ತು.

ಸದ್ಗುಣಿಗಳು, ಧರ್ಮವಂತರು, ಸಾವಿನ ನಂತರ ಸ್ವರ್ಗಕ್ಕೆ ಹೋಗುವರೆಂಬ ನಂಬಿಕೆಯಿತ್ತು. ಸ್ವರ್ಗದಲ್ಲಿ ದೇವತೆಗಳೊಡನೆ ಆನಂದದಿಂದ ಅವರು ಇರುತ್ತಾರೆಂದು ತಿಳಿಯಲಾಗಿತ್ತು.

ದುಷ್ಟ ಹಾಗೂ ಅಧರ್ಮವಂತರ ಗತಿಯೇನು ? ಎಂಬುದನ್ನು ಸ್ಪಷ್ಟವಾಗಿ ಸೂಚಿಸಿಲ್ಲ. ಅವರೂ ಸತ್ತನಂತರ ಉಳಿಯುತ್ತಾರೆ. ಸದ್ಗುಣಿಗಳು ಪ್ರಕಾಶಮಾನವಾದ ಲೋಕಕ್ಕೆ ಹೋದರೆ, ದುರ್ಗುಣಿಗಳು ಅಂಧಃಕಾರಮಯವಾದ ನರಕಕ್ಕೆ ಹೋಗುವುದು ನಿಶ್ಚಿತ.

---

[1] ಬ್ರಾಹ್ಮಣೋಸ್ಯ ಮುಖಮಾಸೀತ್ । ಬಾಹೂರಾಜನ್ಯಃ ಕೃತಃ ।
ಊರೂ ತದಸ್ಯ ಯದ್ವೈಶ್ಯಃ । ಪದ್ಭ್ಯಾಂ ಶೂದ್ರೋ ಅಜಾಯತ ॥ 12 x. 90

ಸೋಮೇಗೌಡ ಬೆಣಗನಹಳ್ಳಿ

ಜನಸಂಖ್ಯಾ ನಿಯಂತ್ರಣದ ಬಗ್ಗೆ ಡೋಲಾಯಮಾನವುಳ್ಳ ಜಗತ್ತು:

ಪ್ರಪಂಚದ ಜನಸಂಖ್ಯೆ 1860ರಲ್ಲಿ 960 ಮಿಲಿಯ, 1984ರಲ್ಲಿ 4600 ಮಿಲಿಯ 2050ರ ವೇಳೆಗೆ 10,000 ಮಿಲಿಯಗಳು. ಒಂದೇ ಮಗುವಿಗೆ ಖಡ್ಡಾಯ ಕುಟುಂಬ ಯೋಜನೆ, ವಿವಾಹ ವಯೋಮಿತಿ ಏರಿಕೆ ಪುರುಷರಿಗೆ 27, ಸ್ತ್ರೀಯರಿಗೆ 22 ಹಾಗೂ 20 ವರ್ಷದವರೆಗೆ ಖಡ್ಡಾಯ ಶಿಕ್ಷಣ ಮತ್ತು ಹಿಂದುಳಿದ ರಾಷ್ಟ್ರಗಳಿಗೆ ಮುಂದುವರಿದ ರಾಷ್ಟ್ರಗಳ ಕೆಲವು ಸವಲತ್ತುಗಳು ಅಗತ್ಯ. ಇಲ್ಲವೆ ಜಗತ್ತು ಮತ್ತಷ್ಟು ಕ್ರೂರ ಗಂಡಾಂತರಗಳನ್ನು ಎದುರಿಸಬೇಕಾಗುತ್ತದೆ.

ಪ್ರಪಂಚಕ್ಕೆ ಎರಡು ಕ್ರೂರ ಗಂಡಾಂತರಗಳು, ಭಯಂಕರ ಜನಸಂಖ್ಯೆ ಹಾಗೂ ಅಣುಯುದ್ಧ ; ಎರಡೂ ವಿಷಶಕ್ತಿಗಳು ಯಾವ ಘಳಿಗೆಯಲ್ಲಾದರೂ ಪೃಥ್ವಿಯನ್ನು ತಲ್ಲಣಿಸಬಹುದು.

ಸ್ಫೋಟನೆ : ಜನಸಂಖ್ಯಾ ಬೆಳವಣಿಗೆಯ ಅವಧಿಯಲ್ಲಿ ಅಧಿಕ ಜನಸಂಖ್ಯೆಯಿಂದ ಜನಸಂಖ್ಯಾಗಾತ್ರದ ಸ್ವರೂಪದಲ್ಲಿನ ಬದಲಾವಣೆ ಜನಸಂಖ್ಯಾಸ್ಫೋಟ. ವಿಶಾಲಾರ್ಥದಲ್ಲಿ ಇರುವ ಜನಸಂಖ್ಯೆಯ ಜೊತೆಗೆ ಇನ್ನೂ ಹೆಚ್ಚಿನ ಜನಸಂಖ್ಯೆ ರಭಸದ ವೇಗದಲ್ಲಿ ಹೆಚ್ಚು ಕಾಲ ಮುಂದುವರಿಯುವುದು ಇಲ್ಲವೆ ಹೆಚ್ಚುಕಾಲ ಮರಣ ದರಕ್ಕಿಂತ ಜನನದರವೇ ಹೆಚ್ಚಿನ ಪ್ರಮಾಣದಲ್ಲಿ ಉಂಟಾಗುವುದು. ಜನಸಂಖ್ಯೆಯಲ್ಲುಂಟಾಗುವ ಹೆಚ್ಚಳ, ಕಳೆಗುಂದಿದ ಜನಜೀವನ, ರಾಷ್ಟ್ರದ ಆರ್ಥಿಕ ಹಾಗು ಪ್ರಾಕೃತಿಕ ಸಂಪತ್ತು ತಗ್ಗುವಿಕೆ ಜನಸಂಖ್ಯಾಸ್ಫೋಟನೆಯ ಸ್ವರೂಪವೆನಿಸುತ್ತದೆ.

ಪ್ರಪಂಚದಲ್ಲಿ ಇಂದು ಜನಸಂಖ್ಯೆ ತೀವ್ರಗತಿಯಲ್ಲಿ ಬೆಳೆಯುತ್ತಿದ್ದು ಮರಣ ದರಕ್ಕಿಂತ ಜನನದರವೇ ಹೆಚ್ಚಾಗಿ ಸ್ಫೋಟನೆಯನ್ನು ಅರ್ಥೈಸಿವೆ. 1860ರಲ್ಲಿ 960ಮಿ, 1920-1862ಮಿ, 1970-3610ಮಿ ಇದ್ದು 1984ಕ್ಕೆ 4600ಮಿ, ದಾಟಿದೆ. ಜೊತೆಗೆ ಪ್ರತಿಸಿಮಿಷಕ್ಕೆ 125, 1ಘಂಟೆಗೆ 7500ರಂತೆ ಪ್ರತಿದಿನ 1,80,000 ಮಕ್ಕಳು ಮೊಗ್ಗುಗಳಂತೆ ಹೊರ ಬಂದು 2000ಕ್ಕೆ 7000 ಮಿಲಿಯ,

ಹಾಗೂ 2050ರ ವೇಳೆಗೆ 10,000 ಮಿಲಿಯ (10 ಮಿಲಿಯ)ಗಳಾಗಿ ಪೃಥ್ವಿಯಲ್ಲಿ ಅರಳುತ್ತವೆ.

ಜಾಗತಿಕ ಸಮಸ್ಯಾ ದೃಷ್ಟಿಯಿಂದ ಜನಸಂಖ್ಯಾ ಸ್ಫೋಟಕ್ಕೆ ಅನೇಕ ಕಾರಣಗಳಿದ್ದರೂ ಜನನ ಮರಣದರಗಳಲ್ಲಿನ ಅಧಿಕ ವ್ಯತ್ಯಾಸದ ಪಂದ್ಯವೇ ಮುಖ್ಯ. ಉದಾ: ಭಾರತದ ಪ್ರಸ್ತುತ 34 : 12ರ ಪ್ರಮಾಣದ ಜನನ ಮರಣದರಗಳ ಪಂದ್ಯವೇ ಸಾಕ್ಷಿಯಾಗಿ ಸಾವಯುವವಸ್ತುಗಳಂತೆ ಅಭಿವೃದ್ಧಿರಾಷ್ಟ್ರಗಳಲ್ಲಿ ಈ ಪಂದ್ಯ ಒಂದೇ ಸಮನೆ ಏರ್ಪಡುತ್ತಿದ್ದು ಜನನದರ ಮೇಲುಗೈಯಾಗಿದೆ.

	ಅಭಿವೃದ್ಧಿ ರಾಷ್ಟ್ರಗಳಲ್ಲಿ	ಅಭಿವೃದ್ಧಿ ಶೀಲರಾಷ್ಟ್ರಗಳಲ್ಲಿ	ಒಟ್ಟು ಪ್ರಪಂಚದಲ್ಲಿ
ಪ್ರತಿಸಾವಿರಕ್ಕೆ ಜನನದರ	17.3	39.0	30.0
ಪ್ರತಿಸಾವಿರಕ್ಕೆ ಮರಣದರ	9.3	15.1	12.1
ಶೇ. ಜನಸಂಖ್ಯಾ ಏರಿಕೆ ಪ್ರಮಾಣ	0.8	2.4	1.8

ಜನನ ಮರಣ ಪ್ರಮಾಣಗಳಲ್ಲಿ ಆಫ್ರಿಕಾಖಂಡ 47 : 25, ಯೂರೋಪ್ 19 : 11, ಅಮೇರಿಕಾ 34 : 13, ಆಸ್ಟ್ರೇಲಿಯಾ 3 : 4, ಏಷ್ಯಾ 41 : 22 ಇದ್ದು ವಿಶ್ವ ಜನಸಂಖ್ಯೆಯಲ್ಲಿ ಶೇ. 33 ಮಂದಿ ಏಷ್ಯಾಖಂಡದವರು. ಪ್ರಪಂಚದ ಸರಾಸರಿ ಜನನ ಮರಣ ಪ್ರಮಾಣ 35 : 17 ಜಗತ್ತಿನ ಒಟ್ಟು ಜನಸಂಖ್ಯೆಯ ಬೆಳವಣಿಗೆ ಕಳೆದ ಒಂದು ದಶಕದಲ್ಲಿ ಶೇ. 2 ರಿಂದ 1.8ಕ್ಕೆ ಇಳಿದಿದ್ದರೂ ಈ ಇಳಿಕೆ ಮುಂದುವರಿದ ರಾಷ್ಟ್ರಗಳಲ್ಲಿ ಮಾತ್ರ. ಯೂರೋಪ್ ಹಾಗೂ ರಷ್ಯಾದಲ್ಲಿ ಇಳಿಮುಖಜನನ ಪ್ರಮಾಣವಿದ್ದರೆ ಆಫ್ರಿಕಾ, ದ. ಅಮೇರಿಕಾ ಹಾಗು ಏಷ್ಯಾರಾಷ್ಟ್ರಗಳಲ್ಲಿ ತೀವ್ರ ಏರಿಕೆ. ಶೇ. 3ರಷ್ಟು ಕೆನ್ಯಾ, ಆಲ್ಜೀರಿಯಾ ಮತ್ತು ಕೊಲಂಬಿಯಾಗಳಲ್ಲಿ ಜನಸಂಖ್ಯಾ ಬೆಳವಣಿಗೆ ಪರಿಣಾಮವಾಗಿ ಪ್ರತಿ ರಾಷ್ಟ್ರದ ಸಮಗ್ರ ರಾಷ್ಟ್ರೀಯ ಆದಾಯದಲ್ಲಿ ಅತೀವ ವ್ಯತ್ಯಾಸ.

ರಾಷ್ಟ್ರೀಯ	ಒಟ್ಟು ಉತ್ಪತ್ತಿ	ಜನನ ದರ	ರಾಷ್ಟ್ರೀಯ	ಒಟ್ಟು ಉತ್ಪತ್ತಿ	ಜನನ ದರ
ಉತ್ತರ ಅಮೇರಿಕಾ	34.49 :	6. 1	ಏಷ್ಯಾ	9.35 :	53.89
ಪೂರ್ವ ಯೂರೋಪ್	15.02 :	10. 5	ಆಫ್ರಿಕಾ	1.82 :	8.99
ದ. ಅಮೇರಿಕಾ	5. 1 :	7. 8	ದ. ಆಫ್ರಿಕಾ	0.55 :	0.55
ಜಪಾನ್	6. 3 :	2.12	ಓಷಿನಿಯಾ	1.36 :	0.53

ಪ್ರಪಂಚದ ಕೆಲವು ಜನ ಬಾಹುಳ್ಯ ರಾಷ್ಟ್ರಗಳನ್ನು ವಿಶ್ಲೇಷಿಸಿದಾಗ ಚೀನಾ ಪ್ರಥಮ. 1950 ರಲ್ಲಿ ಅಧ್ಯಕ್ಷನಾಗಿದ್ದ ಮಾವೋನ ' ನಾವು ಹೆಚ್ಚು ಜನರಿಂದ ಹೆಚ್ಚು

ಕೆಲಸ ಮಾಡುತ್ತೇವೆ' ಎಂಬ ಘೋಷಣೆ ಜನಬಾಹುಳ್ಯಕ್ಕೆ ಮೂಲ ಕಾರಣ. 1953 ರಲ್ಲಿ 582.6 ಮಿಲಿಯ. 1983 ಕ್ಕೆ 1040 ಮಿಲಿಯಗಳು (1.4 ಬಿಲಿಯ) ಪ್ರತಿ ವರ್ಷ 15 ಮಿ, ಹೆಚ್ಚಳ. 1984 ರ ಮೆಕ್ಸಿಕೊ ಜನಸಂಖ್ಯಾ ಸಮ್ಮೇಳನದಲ್ಲಿ ಭಾಗವಹಿಸಿದ್ದ ಚೀನಾದ ಪ್ರತಿನಿಧಿ ವಾಂಡ್‌ವೈಯಿ ಪ್ರಕಾರ ಜನಸಂಖ್ಯಾ ಬೆಳವಣಿಗೆ ದರ 1973 ರಲ್ಲಿದ್ದ 2.08 ರಿಂದ 1983 ಕ್ಕೆ 1.15 ಕ್ಕೆ ಇಳಿದಿದ್ದು ಜನಜೀವನ ಮಟ್ಟ ಹಾಗೂ ತಲಾ ಆದಾಯ ಉತ್ತಮಗೊಂಡು ಒಂದು ಕುಟುಂಬಕ್ಕೆ ಒಂದೇ ಮಗು ಪ್ರಚಲಿತವಾಗಿದೆ. ಇನ್ನು ಹತ್ತು ವರ್ಷಗಳಲ್ಲಿ ಜನಸಂಖ್ಯಾ ಬೆಳವಣಿಗೆಯ ಸಂಪೂರ್ಣ ನಿಯಂತ್ರಣ ಸಾಧ್ಯ. ವಿಶ್ವರಾಷ್ಟ್ರಗಳ ಸಾಲಿನಲ್ಲಿ ಚೀನಾ ನಿಜಕ್ಕೂ ಅಭಿನಂದನಾರ್ಹವಾದುದು. 1982 ರ ವಿಶ್ವಬ್ಯಾಂಕ್ ವರದಿ ಪ್ರಕಾರ 1950 ರಲ್ಲಿ ಕೇವಲ 36 ವರ್ಷವಿದ್ದ ಆಯಾ ಪ್ರಮಾಣ ಇಂದು 64ಕ್ಕೆ ಏರಿದೆ. ರಾಷ್ಟ್ರೀಯ ಉತ್ಪನ್ನ 260 ಡಾಲರ್. (ಭಾರತ 190 ಡಾಲರ್) ಸಾಕ್ಷರತೆ ಶೇ. 66. ಶೇ. 93 ಮಕ್ಕಳು ಶಾಲೆಗೆ ಹೋಗುತ್ತಿದ್ದು (ಭಾರತದಲ್ಲಿ ಶೇ. 36.2, ಶೇ. 64) ಆರ್ಥಿಕ ನೀತಿಗಳೂ ಕೂಡ ಪೂರ್ಣ ಬದಲಾವಣೆಗೊಂಡಿವೆ. 1975 ರಲ್ಲಿ ಅಧಿಕಾರಕ್ಕೆ ಬಂದ ಉಪ ಪ್ರಧಾನಿ ಹುವಾ ಕುವಾಫೆಂಗ್ ಇಡೀ ರಾಷ್ಟ್ರವನ್ನೇ ಸಾಂಸ್ಕೃತಿಕ ಆಧುನೀಕರಣದತ್ತ ಕೊಂಡೊಯ್ದಿದ್ದಾರೆ.

ಭಾರತ: ವಿಶ್ವದ ದ್ವಿತೀಯ ಜನಬಾಹುಳ್ಯ ರಾಷ್ಟ್ರ. ಪ್ರತಿ ಗೃಹವೂ ಕಾರ್ಖಾನೆ, ಜನಸಂಖ್ಯೆ ಪ್ರಮುಖ ಉದ್ದಿಮೆ. 3 ಸೆಕೆಂಡಿಗೆ 2 ಮಕ್ಕಳು. 1920, 1971 ಮತ್ತು 81 ರಲ್ಲಿ ಅನುಕ್ರಮವಾಗಿ 260 ಮಿ, 548 ಮಿ. ಮತ್ತು 684 ಮಿ. ಪ್ರತಿವರ್ಷ 1 ಕೋಟಿ 30 ಲಕ್ಷ ಹೆಚ್ಚಳ. 1983 ರ ಅಮೇರಿಕಾ ಜನಗಣತಿ ಪ್ರಕಾರ 731 ಮಿ. ಸ್ತ್ರೀ ಪುರುಷರ ಪ್ರಮಾಣ 1000 : 935. ಜನಸಾಂದ್ರತೆ 210. ಜನನ ಮರಣ ಪ್ರಮಾಣ 34 : 12. ಸಾರ್ವತ್ರಿಕ ಖಡ್ಡಾಯ ಕುಟುಂಬ ಯೋಜನೆ ಅನನ್ಯ. 6ನೇ ಯೋಜನೆಗೆ 21 : 8 ಕ್ಕೆ ಇಳಿಸಬೇಕೆಂಬ ಗುರಿ ಸಾಧ್ಯವಾಗಿಲ್ಲ. 2000 ಹಾಗೂ 2040 ಕ್ಕೆ 1300 ಮಿ. ಹಾಗು 2600 ಮಿ. ತಲುಪಿ ಸ್ಫೋಟ ಖಂಡಿತ. ಕುಟುಂಬ ಯೋಜನೆ ಖರ್ಚಿಗಾಗಿ 7ನೇ ಯೋಜನೆಯಲ್ಲಿ 640 ಕೋಟಿ ರೂ ಅಂದಾಜು. ಇತರೆ ರಾಷ್ಟ್ರಗಳಿಗೆ ಹೋಲಿಸಿದಾಗ ಬಹಳ ಕಡಿಮೆ. ಕೊರಿಯ 80.46. ಇಂಡೋನೇಷಿಯ 80.48. ಫಿಲಿಪೈನ್ಸ್ 80.62 ಸಿಂಗಪೂರ್ 80. 64, ಮಲೇಷಿಯಾ 80.79, ಮಾರಿಷಸ್ 80.124, ವಿಶ್ವಬ್ಯಾಂಕ್ ವರದಿ ಪ್ರಕಾರ 2150 ರ ವೇಳೆಗೆ 1.8 ಬಿಲಿಯನ್‌ಗೆ ಏರಿ ವಿಶ್ವದ ಅತ್ಯಂತ ಜನಬಾಹುಳ್ಯ ರಾಷ್ಟ್ರವಾಗಲಿದೆ.

ಬಾಂಗ್ಲಾ: ಅತಿಜನ ಬಾಹುಳ್ಯರಾಷ್ಟ್ರ. ಪ್ರಸ್ತುತ 60 ಮಿಲಿಯ. ಏರಿಕೆ ಪ್ರಮಾಣ 2.36. ಸ್ತ್ರೀ ಪುರುಷರ ಪ್ರಮಾಣ 100 : 106, ಜನಸಾಂದ್ರತೆ 1300. ಸಿಂಗಪೂರ್ ದ್ವೀಪ ರಾಜ್ಯವಾದನಂತರ ಮತ್ತಷ್ಟು ಜನಸಾಂದ್ರತೆ, ಜನಜೀವನ

ಅಸ್ತವ್ಯಸ್ತ. ಹುಟ್ಟಿದ 28 ದಿನದ ಒಳಗೆ ಪ್ರತಿ 5 ಮಕ್ಕಳಲ್ಲಿ 2 ಸಾವು. ವಿಶ್ವ ದಾಖಲೆ. 7 ಮಿ. ನಿರುದ್ಯೋಗಿಗಳು, ಈ ಶತಕದೊಳಗೆ 13 ಕೋಟಿ ಪ್ರಮಾಣ. ಅತ್ಯಂತ ಜನನಿಬಿಡ ರಾಷ್ಟ್ರವೆಂಬ ಹಣೆಪಟ್ಟಿ.

ಪಾಕಿಸ್ತಾನ : ಬಾಂಗ್ಲಾದಂತೆಯೇ ಜನಬಾಹುಳ್ಯ. ಕರಾಚಿ ಡೈಲಿ ಡಾನ್ Population Explosion is the most accute problem facing Pakistan ಎಂದು 1981 ರ ಆಗಸ್ಟ್‌ನಲ್ಲಿ ವರದಿ ಮಾಡಿದೆ. 1950 ರಲ್ಲಿ ಕೇವಲ 32.5 ಮಿ. ಇಂದು 85 ಮಿ. ಜನನ ಮರಣ ದರ 3 : 1 ಜನಸಾಂದ್ರತೆ ನದಿ ಬಯಲುಗಳಲ್ಲಿ 1560, ಇತರೆ ಕಡೆ 1678, ವಿಶ್ವದಲ್ಲೆ ಅತಿಹೆಚ್ಚಿನ ಜನಸಾಂದ್ರ ಪ್ರದೇಶ. ಶೇ. 30 ಮಂದಿಗೆ ಕನಿಷ್ಠ ಮಟ್ಟದ ಆಹಾರ ಸೌಲಭ್ಯವಿಲ್ಲ. 2000 ದ ವೇಳೆಗೆ 12 ಕೋಟಿ ತಲುಪುವ ನಿರೀಕ್ಷೆ. ಒಂದು ಕಡೆ ಸರ್ಕಾರದ ವರಿಷ್ಠರು ತಮ್ಮ ಸ್ಥಾನ ಉಳಿಸಿಕೊಳ್ಳಲು ಜನರ ಮನಸ್ಸನ್ನು ಬೇರೆ ಕಡೆಗೆ ಸೆಳೆಯಲು ಯುದ್ಧದ ಭೀತಿ ಹುಟ್ಟಿಸಿ ವಿದೇಶಗಳಿಂದ ಅಣ್ವಸ್ತ್ರಗಳನ್ನು ಅನಗತ್ಯ ಪಡೆದು ರಾಷ್ಟ್ರದ ಬೊಕ್ಕಸ ಖಾಲಿ ಮಾಡಿದ್ದರೆ ಮತ್ತೊಂದು ಕಡೆ ಯೋಗ್ಯ ಯೋಜನೆಗಳನ್ನು ರೂಪಿಸದೆ, ಹಾಗೂ ಅನಿಯಂತ್ರಿತ ಜನಸಂಖ್ಯೆ ನಿಯಂತ್ರಿಸದೆ ಇಡೀ ರಾಷ್ಟ್ರವೇ ಅಧೋಗತಿಯಲ್ಲಿದ್ದು ಧರ್ಮದ ವಿಕಟ ಹಾಸ್ಯ ವೆನಿಸಿದೆ.

ಆಫ್ರಿಕಾ ಖಂಡದಲ್ಲಿ : 1950 ರಲ್ಲಿ 220 ಮಿ. ಗಳು. 1981 ಕ್ಕೆ 400 ಮಿ. ಏರಿಕೆದರ ಶೇ. 2. 2000 ದ ವೇಳೆಗೆ 850 ಮಿ. 2110 ಕ್ಕೆ 2100 ಮಿ. 50 ರಾಷ್ಟ್ರಗಳ ಪೈಕಿ 13 ರಾಷ್ಟ್ರಗಳಲ್ಲಿ ಪ್ರತಿ ಸಾವಿರಕ್ಕೆ ಜನನದರ 50. ಉಳಿದೆಡೆ 47. ಮರಣದರ ಸರಾಸರಿ 35. ವಿಶ್ವದ ಒಟ್ಟು ಜನಸಂಖ್ಯೆಯಲ್ಲಿ ಶೇ. 15 ಮಂದಿ ಆಫ್ರಿಕನ್ನರು, ಆಫ್ರಿಕಾದ ಅತ್ಯಧಿಕ ಜನಬಾಹುಳ್ಯ ರಾಷ್ಟ್ರಗಳಾದ ನೈಜೀರಿಯಾ. ಇಥಿಯೋಪಿಯ, ಜೈರೆ ಮತ್ತು ಕೆನ್ಯಾಗಳಲ್ಲಿ ಅನುಕ್ರಮವಾಗಿ 620 ಮಿ. 230 ಮಿ. 170 ಮಿ. ಮತ್ತು 150 ಮಿ. ಜನಸಂಖ್ಯಾ ಬೆಳವಣಿಗೆ ಏರಿಕೆ ಶೇ. 3. ಆಹಾರ ಉತ್ಪಾದನಾ ಪ್ರಮಾಣ 3 : 1.5. ಇಥಿಯೋಪಿಯಾದಲ್ಲಿ ಕಂಡರಿಯದ ಕಠೋರ ಬದುಕು. ಕಳೆದ ಮೂರು ವರ್ಷಗಳಿಂದಲೂ ಕ್ಷಾಮದ ದವಡೆಗೆ ಪ್ರತಿದಿನ ನೂರಾರು ಸಾವು. ರೈತರಿಗೆ ತಮ್ಮ ನೇಗಿಲ ಬದುಕೇ ಮರೆವು. ಹಸಿದ ಹೊಟ್ಟೆಯಲ್ಲಿ 18 ದಿನಗಳ ವರೆಗೂ ಹೋರಾಟ, ಸಾವು. ಭೂಮಿ ಒಣಗಿ ಹಸಿ ನೀರಿಗೆ ಬಾಯ್ದೆರೆದರೆ, ನದಿಗಳು ಪೂರ್ಣಕೃಶ. ಊರುಗಳು ಬಿಕೋ. ಹರಕು ಮುರುಕು ವಸ್ತ್ರದಲ್ಲಿ ಮಕ್ಕಳ ನಲುಗಾಟ ಚೀರಾಟ, ಹೋರಾಟ, ಶರೀರ ಚೈತನ್ಯ ವೆಲ್ಲಾ ಕುಗ್ಗಾಟ. ಮೈಮೇಲೆ ಕುಳಿತ ನೊಣಗಳನ್ನು ಓಡಿಸುವಷ್ಟು ಶಕ್ತಿಹೀನ. ವಾಸ್ತವ ಹಾಗೂ ಕಠೋರ ಸಂಗತಿ. ಬೃಹತ್ ರಾಷ್ಟ್ರಗಳಿಗೆ ಇನ್ನೂ ಕಿವಿ ಕೇಳಿಸಿಲ್ಲ, ಕಣ್ಣಿಗೆ ಬಿದ್ದಿಲ್ಲ, ಪರಿಹಾರ ನೋಡಲು ಹಿಂದೇಟು.

ವಿಶ್ವಜನಬಾಹುಳ್ಯಕ್ಕೆ ಯು. ಎಸ್. ಎಸ್. ಆರ್. ಕೊಡುಗೆ ಮಾತ್ರವಿಲ್ಲ.

ಭೂವಿಸ್ತೀರ್ಣದಲ್ಲಿ ಪ್ರಥಮವಿದ್ದರೂ ಜನಸಂಖ್ಯೆ ಮಾತ್ರ 270 ಮಿ. (1983) ಒಂದು ಕುಟುಂಬಕ್ಕೆ ಸರಾಸರಿ 3 ಮಕ್ಕಳು (ಪಿ. ಟಿ. ಸಿ. ವರದಿ) ಜನನ ಮರಣ ದರಗಳು 1897, 1940, 1950, 1960, 1972 ಮತ್ತು 1983 ರಲ್ಲಿ ಪ್ರತಿ ಸಾವಿರಕ್ಕೆ 47 : 47, 31 : 3, 26 : 7, 24 : 9, 17 : 6 ಮತ್ತು 10 : 8.8 ಕ್ಕೆ ಇಳಿದು ಕುಸಿದಿದೆ. ಸ್ವಯಂ ನಿಯಂತ್ರಣವೇ ಮುಖ್ಯ ಕಾರಣ. ಏರಿಕೆ ವಾರ್ಷಿಕ ಶೇ. 1.2 ಪ್ರತಿವರ್ಷ 30 ಲಕ್ಷ ಮಂದಿ ಸೇರ್ಪಡೆ. 2000 ದ ವೇಳೆಗೆ 33.3 ಕೋಟಿ ಅಂದಾಜು. ಹೆಚ್ಚು ಸಂತಾನಕ್ಕೆ ಪ್ರೋತ್ಸಾಹ. ಎಂಟು ಮಕ್ಕಳನ್ನು ಹಡೆದ ಸ್ತ್ರೀಗೆ ' ಹೀರೋ ಮದರ್ ' ಎಂಬ ಬಿರುದು ಹಾಗೂ ಪಾರಿತೋಷಕಗಳು, ಜನನದರ ಶೂನ್ಯತೆಯ ಕಡೆಗೆ 2½ ಕೋಟಿ ಉದ್ಯೋಗಗಳು ಖಾಲಿ. ಮುಂದಿನ ಐದು ವರ್ಷಗಳಲ್ಲಿ ಕಾರ್ಮಿಕರ ಅಭಾವ ಸೋವಿಯತ್ ನಾಯಕರ ಚಿಂತೆ.

ಅಮೇರಿಕಾದ ಜನಸಂಖ್ಯೆ 1983 ರಲ್ಲಿ 185 ಮಿ. ಜನಸಾಂದ್ರತೆ 20–25 ಜನಸಂಖ್ಯಾ ಸಮಸ್ಯೆ ಇಲ್ಲ. ಆದರೂ ಉನ್ನತ ಮಟ್ಟದ ಸೌಕರ್ಯಗಳನ್ನು ಒದಗಿಸಲು ಆರ್ಥಿಕ ನೀತಿಗಳು ವಿಫಲ. ಐಶ್ವರ್ಯವಿದ್ದರೂ ಕ್ರಮಬದ್ಧ ಬಳಕೆ ಇಲ್ಲ. ಹಣದುಬ್ಬರದ ತಲೆನೋವು. 1979 ರ ಸಮೀಕ್ಷೆ ಪ್ರಕಾರ ಕೇವಲ ನಾಯಿಗಳಿಗೆ 3.2 ಬಿಲಿಯನ್ ಡಾಲರ್ (320 ಕೋಟಿ). ಅಣ್ವಸ್ತ್ರಗಳ ತಯಾರಿಕೆಗೆ ಶೇ. 60 ಹಣ ಪೋಲು. 10.3 ಮಿ. ನಿರುದ್ಯೋಗಿಗಳು, ದಿನೇ ದಿನೇ ಏರಿಕೆ. 2 ಮಿಲಿಯಕ್ಕೆ ವಸತಿ ಕೊರತೆ. ಮುಖ್ಯ ಕೇಂದ್ರ ನ್ಯೂಯಾರ್ಕಿನಲ್ಲಿಯೇ 36000 ಮಂದಿಗೆ ವಸತಿ ಇಲ್ಲ. ಪ್ರತಿ ನಿಮಿಷಕ್ಕೆ ಒಬ್ಬರ ಆತ್ಮಹತ್ಯೆ. ಹೆಚ್ಚುತ್ತಿರುವ ವಿವಾಹ ವಿಚ್ಛೇದನ, ಕುಡಿತ, ಧೂಮಪಾನಗಳಿಂದ ಸಾಮಾಜಿಕ ಶಾಂತಿಗೆ ಭಂಗ.

ವಿಶ್ವಸಂಸ್ಥೆ ಅಭಿವೃದ್ಧಿ ಚರ್ಚಾಸ್ಥಾನದ [U.N. Development Forum] ಸಮೀಕ್ಷೆ ಪ್ರಕಾರ ಯೂರೋಪ್, ಉತ್ತರ ಅಮೇರಿಕಾ, ಆಸ್ಟ್ರೇಲಿಯಾಗಳಲ್ಲಿ ಶೂನ್ಯಜನಸಂಖ್ಯಾ ಬೆಳವಣಿಗೆ. ಜನನದರ 0.50. ಆಫ್ರಿಕಾ, ಲ್ಯಾಟಿನ್ ಅಮೇರಿಕಾ ಹಾಗು ಏಷ್ಯಾಗಳಲ್ಲಿ ಪ್ರತಿವರ್ಷ ಒಟ್ಟು 700ಮಿ. ಹೆಚ್ಚಳ. 2100ರ ವೇಳೆಗೆ ಏಷ್ಯಾ ಖಂಡದ ಜನಸಂಖ್ಯೆಯೇ 4.1 ಬಿಲಿಯ. 1.50 ಚೈನಾದ ಪಾಲು. ಲ್ಯಾಟಿನ್ ಅಮೇರಿಕಾದಲ್ಲಿಯೂ ಮೂರುಪಟ್ಟು ಬೆಳವಣಿಗೆ. 400ಮಿ. ಹೆಚ್ಚಳ. ಪ್ರಪಂಚದ ಒಟ್ಟು ಜನಸಂಖ್ಯೆ 2090ರ ವೇಳೆಗ 14.2 ಬಿಲಿಯಗಳು. ತಜ್ಞರ ಲೆಕ್ಕಾಚಾರ.

2110 ನೇ ವರ್ಷದಲ್ಲಿ ವಿಶ್ವದ ಪ್ರಮುಖ ರಾಷ್ಟ್ರಗಳ ಅಥವಾ ಖಂಡ ಗಳ ಜನಸಂಖ್ಯಾ ಬೆಳವಣಿಗೆ.

ರಾಷ್ಟ್ರ ಅಥವಾ ಖಂಡ.	ಪ್ರಸ್ತುತ ಜನಸಂಖ್ಯೆ (ಕೋಟಿ)	2110ನೇ ವರ್ಷದಲ್ಲಿ (ಕೋಟಿ)
ದಕ್ಷಿಣಏಷ್ಯಾ	140	410
ಪೂರ್ವಏಷ್ಯಾ	120.6	176
ಆಫ್ರಿಕಾ	40	210
ಲ್ಯಾಟಿನ್ ಅಮೇರಿಕಾ	40	120
ಯೂರೋಪ್	45	80
ರಷ್ಯಾ	26.5	38
ಉ. ಅಮೇರಿಕಾ	24	32

U.N.F.P.A. ವರದಿ 1983 (ವಿಶ್ವಸಂಸ್ಥೆಯ ಜನಸಂಖ್ಯಾ ಚಟುವಟಿಕೆ ನಿಧಿ) ಏರುತ್ತಿರುವ ಭಯಾನಕ ಜನಸಂಖ್ಯೆ ಸ್ಫೋಟನೆಗೆ ಸದವಕಾಶ, ಜನಸಂಖ್ಯೆ ಎದುರಿಸ ಲಾರದ ರಾಷ್ಟ್ರಗಳು ಯುದ್ಧಕ್ಕೆ ಶರಣು ಇಲ್ಲವೇ ಸ್ವಯಂ ಹತ್ಯೆ. ಪ್ರಪಂಚದ ಬಡತನ ಶೇ 60. ಆಹಾರದ ಉತ್ಪಾದನೆ ಒಂದೊತ್ತಿನ ಊಟಕ್ಕೂ ಸಾಲುತ್ತಿಲ್ಲ. ಪ್ರತಿನಿಮಿಷ 24, ಪ್ರತಿದಿನ ಸುಮಾರು 35 ಸಾವಿರ ಮಂದಿ ಹಸಿವಿನ ಸಾವಿಗೆ. ಇವರಲ್ಲಿ ಶೇ 18 ಮಕ್ಕಳು. ಸಾಕಷ್ಟು ಪೌಷ್ಟಿಕಾಂಶಗಳಿಲ್ಲದೆ 17ಮಿ ಮಕ್ಕಳು ಗರ್ಭ ದಲ್ಲಿಯೇ ಸಾವು. F.A.O. ಪ್ರಕಾರ 500 ಮಿ ಜನರಿಗೆ ಪೌಷ್ಟಿಕಾಂಶಗಳ ಕೊರತೆ. 400 ಮಿ ಕಡುಬಡತನ ಹಾಗೂ ಕೊಳಕು ಪರಿಸರದಲ್ಲಿ. ಏಷ್ಯಾ ಅಭಿವೃದ್ಧಿ ಬ್ಯಾಂಕ್ ಪ್ರಕಾರ 3/4 ರಷ್ಟು ಪ್ರಪಂಚದ ಬಡಜನರು ಏಷ್ಯಾ ಫೆಸಿಫಿಕ್ ರಾಷ್ಟ್ರಗಳಲ್ಲಿ. ಇಟಲಿ ಹಾಗು ಉತ್ತರ ಮೆಡಿಟರೇನಿಯನ್ ಪ್ರದೇಶಗಳಲ್ಲಿ ಜೀತಪದ್ಧತಿ ವ್ಯಾಪಕ, ಲ್ಯಾಟಿನ್ ಅಮೆರಿಕಾ ಹಾಗು ಯೂರೋಪ್‌ಗಳಲ್ಲಿ ಗುಲಾಮತನ ಇನ್ನೂ ಜೀವಂತ. ಆಫ್ರಿಕಾದಲ್ಲಿಯೇ 16 ಮಿ ಬಾಲಕಾರ್ಮಿಕರು. 1000ಕ್ಕೆ 17ರಷ್ಟು. ಏಷ್ಯಾ, ದ. ಅಮೇರಿಕಾ ಮತ್ತು ಯೂರೋಪ್‌ನಲ್ಲಿ ಪ್ರತಿಸಾವಿರಕ್ಕೆ 14, 6 ಮತ್ತು 1 ರಂತೆ ವಿಶ್ವದಲ್ಲಿ ಒಟ್ಟು 145ಮಿ. ಬಾಲಕಾರ್ಮಿಕರು. ಒಟ್ಟು 50ಮಿ. ನಿರುದ್ಯೋಗಿ ಗಳು. 300 ಮಿ ಅರೆನಿರುದ್ಯೋಗಿಗಳು. ಬ್ರಿಟನ್ನಿನಲ್ಲಿ ಶೇ 13.8ರಂತೆ 32,24,715 ನಿರುದ್ಯೋಗಿಗಳು. ಆದರೂ ಪ್ರತಿವರ್ಷ 800 ಮಿ ಡಾಲರ್ ಬೆಲೆಯ ಆಹಾರ ಪದಾರ್ಥಗಳು ನಾಯಿ ಮತ್ತು ಬೆಕ್ಕುಗಳಿಗೆ. ಬಡರಾಷ್ಟ್ರಗಳಿಗೆ ಗಂಜಿಗೂ ಗತಿಯಿಲ್ಲ. ಪ. ಜರ್ಮನಿಯಲ್ಲಿ 2.5 ನಿರುದ್ಯೋಗಿಗಳಿದ್ದು ಗರಿಷ್ಠಮಟ್ಟದಲ್ಲಿದೆ.

ವಿಶ್ವದ ಜನಸಂಖ್ಯೆಯಲ್ಲಿ ಮೂವರಲ್ಲಿ ಇಬ್ಬರು ಸ್ತ್ರೀಯರು ಅನಕ್ಷರಸ್ಥರು, ಯುನೆಸ್ಕೋ (Unesco) ವರದಿ ಪ್ರಕಾರ ವಿಶ್ವದಲ್ಲಿ 824 ಮಿ. ನಿರಕ್ಷರ ಕುಕ್ಷಿಗಳು.

121 ಮಿ. ಮಕ್ಕಳಿಗೆ ಪ್ರಾಥಮಿಕ ಶಿಕ್ಷಣವೇ ವಂಚಿತ. ಶೇ. 75 ಮಂದಿಗೆ ಕುಡಿಯುವ ನೀರೇ ಇಲ್ಲ. ವಿಶ್ವದ ಸುಮಾರು 42 ಮಿ. ಕುರುಡರ ಪೈಕಿ 34 ಮಿ. ಅನಭಿವೃದ್ಧಿ ದೇಶಗಳವರು. ಒಟ್ಟು 28 ಮಿ. ಅಂಧರು, ಶೇ. 70 ಮಂದಿ ಅನಭಿವೃದ್ಧಿ ರಾಷ್ಟ್ರಗಳ ಗುಂಪಿನವರು. ಹೆಚ್ಚುತ್ತಿರುವ ಮಂದಿಯ ವಸತಿಗಾಗಿ ಅರಣ್ಯರೋದನ. ನೈಸರ್ಗಿಕ ಪಾಲಾಯನವಾಗಿ ಪ್ರಕೃತಿಯೂ ವಿಕೃತಿ. 1982 ರ ಅಂತರರಾಷ್ಟ್ರೀಯ ಪ್ರಕೃತಿ ಮತ್ತು ಪ್ರಾಕೃತಿಕ ಸಂಪನ್ಮೂಲ ಸಂರಕ್ಷಣಾ ಸಂಘದವರ ಪ್ರಕಾರ ಒಂದು ನಿಮಿಷಕ್ಕೆ 21.6 ಹೆಕ್ಟೇರ್ ಅರಣ್ಯ ನಾಶ. ಉರುವಲಕ್ಕಾಗಿ ದನಕರುಗಳ ಗೊಬ್ಬರ ಬಳಕೆಯಾಗಿ, ಆಹಾರ ಪದಾರ್ಥಗಳು ಸತ್ವಹೀನ. ದೊಡ್ಡ ದೊಡ್ಡ ಪಟ್ಟಣಗಳು ಜನನಿಬಿಡಗೊಂಡು ನೀರು ಗಾಳಿಗೂ ಬರ. ಆರೋಗ್ಯ ನೈರ್ಮಲ್ಯ ಹದಗೆಟ್ಟು ಜನಜೀವನ ದುರ್ಭರ.

ಪ್ರಪಂಚದ ಮುಖ್ಯ ಪಟ್ಟಣಗಳಲ್ಲಿ ಅತೀವ ಜನಸಂಖ್ಯೆ 1 ಚ.ಕಿ. ಮೀ.ಗೆ ವೆಸ್ಟ್‌ಬರ್ಲಿನ್ ಮತ್ತು ಸಿಂಗಪೂರ್‌ನಲ್ಲಿ 230. ಹಾಂಕಾಂಗ್ ಮತ್ತು ಲಂಡನ್ ನಲ್ಲಿ 4600 ಇದ್ದು ಬೊಂಬಾಯಿ ಹಾಗು ಮದ್ರಾಸ್‌ನಲ್ಲಿ 45000 ಹಾಗೂ 22500. ಪಟ್ಟಣ ಪ್ರದೇಶಗಳ ಜನಸಂಖ್ಯಾ ಬೆಳವಣಿಗೆ ಕುರಿತು ವಿಶ್ವಸಂಸ್ಥೆ ಏರ್ಪಡಿಸಿದ್ದ ಸಮ್ಮೇಳನದಲ್ಲಿ ಚಿಂತಿಸಿದಂತೆ ರಾಷ್ಟ್ರ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಯೋಜನೆಗಳನ್ನು ರೂಪಿಸುವಾಗ ಭಾರಿ ಬದಲಾವಣೆಗಳನ್ನು ಮಾಡದಿದ್ದರೆ 2025ರ ವೇಳೆಗೆ ವಿಶ್ವದ ಅನೇಕ ಬೃಹತ್ ನಗರಗಳು ಅವ್ಯವಸ್ಥೆಗೀಡಾಗುತ್ತವೆ. ಜನಸಂಖ್ಯೆ ಶೇ. 62.5 ರಷ್ಟು ಹೆಚ್ಚಿ ವಿಶ್ವದ ಅರ್ಧ ಜನಸಂಖ್ಯೆ ಪಟ್ಟಣಗಳಲ್ಲಿಯೇ ಇರುತ್ತದೆ. 2015 ರ ವೇಳೆಗೆ ಅಭಿವೃದ್ಧಿಶೀಲ ರಾಷ್ಟ್ರಗಳ ಅರ್ಧಕ್ಕೂ ಹೆಚ್ಚು ಜನ ನಗರಗಳಲ್ಲಿ ವಾಸಮಾಡುತ್ತಾರೆ. ಮೆಕ್ಸಿಕೋ 26 ಮಿ. ಜನಸಂಖ್ಯೆಯುಳ್ಳ ವಿಶ್ವದ ಅತ್ಯಂತ ಜನಬಾಹುಳ್ಯ ನಗರವಾಗಿರುತ್ತದೆ. ನಂತರ ಸಾವ್‌ಪೌಲೋ, ಬ್ರೆಜಿಲ್, ಟೋಕಿಯೋ, ಯಾಕೋಹಾಮ, ಕಲ್ಕತ್ತ ಮತ್ತು ಮುಂಬೈ ಕ್ರಮವಾಗಿ ಸೇರ್ಪಡೆಯಾಗುತ್ತವೆ. ಅಭಿವೃದ್ಧಿ ರಾಷ್ಟ್ರಗಳ ನಗರಪ್ರದೇಶದಲ್ಲಿ ಜನಸಂಖ್ಯಾ ಸ್ಫೋಟ ಹೆಚ್ಚಾಗಲಿದ್ದು ಬಡತನ, ಸಾರ್ವಜನಿಕ ಸೇವೆಗಳ ಕೊರತೆ, ನಿರುದ್ಯೋಗ ಮತ್ತು ಮಾಲಿನ್ಯ ಹೆಚ್ಚಿ ಪರಿಸ್ಥಿತಿ ಹದಗೆಡುವುದೆಂದು ಅಮೇರಿಕಾದ ಸಾಮಾಜಿಕ ಮತ್ತು ಪರಿಸರ ಯೋಜನೆಯ ಪ್ರಾಧ್ಯಾಪಕ ಥಾಮಸ್‌ಬ್ಲೇರ್ ಹೇಳಿದ್ದಾರೆ. ಕ್ರಿ.ಶ. 2000ಕ್ಕೆ ಮೂರನೇ ವಿಶ್ವದ ನಗರಗಳಲ್ಲಿ ಒಂದು ಶತಕೋಟಿಗೂ ಹೆಚ್ಚು ಜನ ಇರುತ್ತಾರೆಂದು ವಿಶ್ವಸಂಸ್ಥೆಯ ಮಾನವ ವಸಾಹತು ಕೇಂದ್ರದ ಎಕ್ಸಿಕ್ಯೂಟಿವ್ ಡೈರೆಕ್ಟರ್ ಆರ್ಕಾಟ್ ರಾಮಚಂದ್ರನ್ ಅಭಿಪ್ರಾಯ ಪಟ್ಟಿದ್ದಾರೆ.

ಕೆಲವು ವಿಶ್ವವಿಖ್ಯಾತ ತಜ್ಞರ ಪ್ರಕಾರ ಜನಸಂಖ್ಯೆ ಇದೇ ರೀತಿ ಬೆಳೆದರೆ ಕೆಲವೇ ದಶಕಗಳಲ್ಲಿ ಭೂಮಿಯ ಮೇಲೆ ಜನರಿಗೆ ಸರಿಯಾಗಿ ನಿಲ್ಲಲು ಕೂಡ ಸ್ಥಳವಿಲ್ಲದೆ ಒಬ್ಬರಿಗೊಬ್ಬರು ಬಿಗಿಯಾಗಿ ಅಪ್ಪಿಕೊಂಡು ನಿಲ್ಲಬೇಕಾಗುವುದು. ನೊಬೆಲ್ ಪ್ರಶಸ್ತಿ

ವಿಜೇತ ಡಾ. ನಾರ್ಮನ್ ಬೋರ್ಲಾಗ್‌ರವರ ಮುಂದಿನ ದಶಕದಲ್ಲಿ ಕೋಟ್ಯಾಂತರ ಜನರು ಹಸಿವಿನ ದವಡೆಗೆ ಸಿಲುಕುವರು, ಮುಂದಿನ 35 ವರ್ಷಗಳಲ್ಲಿ ನಮ್ಮನ್ನು ನಾವೇ ನಾಶಮಾಡಿಕೊಳ್ಳುತ್ತೇವೆ ಎಂಬ ಭವಿಷ್ಯ ನುಡಿ ನಿಜವಾಗಲಿದೆ. ಅಮೇರಿಕಾದ ಜೀವಶಾಸ್ತ್ರಜ್ಞ ಪಾಲ್‌ಎರ್ಲಿಚ್ ತನ್ನ ಪಾಪುಲೇಶನ್ ಬಾಂಬ್ ಎಂಬ ಗ್ರಂಥದಲ್ಲಿ ಏರುತ್ತಿರುವ ಜನಸಂಖ್ಯೆ ಕಡಿಮೆಯಾಗಲು ಪ್ಲೇಗ್, ಕಾಲರಾ ಹರಡ ಬೇಕು ಅಥವಾ ಅಣು ಯುದ್ಧ ಉಂಟಾಗಬೇಕು. ಜೊತೆಗೆ ಪ್ರತಿ ದಂಪತಿಗಳು ಎರಡು ಮಕ್ಕಳಿಗೆ ತಡೆಯನ್ನಾಚರಿಸಬೇಕೆಂದಿದ್ದಾನೆ. ಅಭಿವೃದ್ಧಿ ರಾಷ್ಟ್ರಗಳ ದೃಷ್ಟಿ ಯಿಂದ ಒಂದೇ ಮಗು ಸಾಕು! ಈತನ ಸಿದ್ಧಾಂತ ಮಾಲ್ತೂಸನ ವಾದಕ್ಕೆ ಹತ್ತಿರ ವಿದ್ದಂತಿದೆ.

ಪರಿಹಾರವೆಂದರೆ, ಜನಸಂಖ್ಯಾ ಬೆಳವಣಿಗೆಯ ವೇಗ ಹಾಗು ಅದರ ಪರಿಣಾಮ ಗಳನ್ನು ತಡೆಗಟ್ಟುವುದಾಗಿದೆ. ಈ ಚರ್ಚೆಗೋಸ್ಕರ ಜಾಗತಿಕ ಮಟ್ಟದಲ್ಲಿ ಜನ ಸಂಖ್ಯಾ ಸಮ್ಮೇಳನಗಳು ನಡೆಯುತ್ತಿದ್ದು 1929 ರಲ್ಲಿ ಪ್ರಥಮ ಬಾರಿಗೆ ಜಿನೀವಾ 1954 ರೋಂ, 1965 ಬೆಲ್‌ಗ್ರೇಡ್, 1974 ಬುಕಾರಾಸ್ಟ್ ಮತ್ತು 1984ರ ಆಗಸ್ಟನಲ್ಲಿ ಅಮೇರಿಕಾದ ಮೆಕ್ಸಿಕೋ ನಗರದಲ್ಲಿ ಐದನೇ ಸಮ್ಮೇಳನ ನಡೆಯಿತು. ಭಾರತವು ರಾಷ್ಟ್ರೀಯ ಮಟ್ಟದಲ್ಲಿ 1975 ರಲ್ಲಿ ದೆಹಲಿಯಲ್ಲಿ ಜನಸಂಖ್ಯಾ ತಜ್ಞರುಗಳ ಸಮ್ಮೇಳನ ನಡೆಸಿ 1975 ನೇ ವರ್ಷವನ್ನು World Population Year ಎಂದು ಆಚರಿಸಿತು. ವಿವಿಧ ರಾಷ್ಟ್ರಗಳ ಜನಸಂಖ್ಯಾ ತಜ್ಞರು, ಆರೋಗ್ಯ ಮಂತ್ರಿಗಳು ಹಾಗೂ ನಾನಾ ತಜ್ಞರು ಭಾಗವಹಿಸಿದ್ದರು.

ಸುಮಾರು ಒಂದು ವಾರ (6–13) ನಡೆದ ಮೆಕ್ಸಿಕೋ ಸಮ್ಮೇಳನದಲ್ಲಿ 133 ರಾಷ್ಟ್ರಗಳು ಪಾಲ್ಗೊಂಡು ವಿಶ್ವದ ಭವಿಷ್ಯ, ಜನಸಂಖ್ಯೆ ಬಗ್ಗೆ ಚರ್ಚೆ ಹಾಗೂ ವಿಚಾರ ಗೋಷ್ಠಿಗಳನ್ನು ನಡೆಸಿದವು. ಫಲಮಾತ್ರ ಸೊನ್ನೆ. ಖಚಿತ ನಿರ್ಣಯಗಳೇ ಇಲ್ಲ. ಡಾ॥ ಮಯೂರ್ ಹೇಳುವಂತೆ ಕೇವಲ ರಾಜಕೀಯ ಹಿತಾಚಿಂತನೆಯುಳ್ಳ ಈ ಸಮ್ಮೇಳನ ಸಮಯ ವ್ಯರ್ಥವಷ್ಟೆ ಅಲ್ಲ. ಮಾನವತೆ ವಿರುದ್ಧದ ಅಪರಾಧವೂ ಹೌದು! ತೃತೀಯ ಪ್ರಪಂಚದ ರಾಷ್ಟ್ರಗಳಿಗಂತೂ ಪೂರ್ಣ ನಿರಾಶೆ. ಜೊತೆಗೆ ಅಮೇರಿಕಾವು ವಿಶ್ವಸಂಸ್ಥೆಯ ಜನಸಂಖ್ಯಾ ಚಟುವಟಿಕೆ ನಿಧಿಗೆ U.N.F.P.A. (United Nations Fund for Population Activities) 38 ಮಿಲಿಯನ್ ಡಾಲರ್ ಹಣ ನೀಡುವು ದಾಗಿ ಮೊದಲು ಹೇಳಿ ತಕ್ಷಣವೇ 19 ಮಿಲಿಯನ್ ಡಾಲರ್ ಮಾತ್ರ ಕೊಡುತ್ತೇವೆಂಬ ನಾಟಕೀಯ ಪ್ರಚಾರ ಮಾಡಿತು. ಎರಡು ದಿನಗಳ ನಂತರ ಪುನಃ ಜನಸಂಖ್ಯಾ ಸಮ್ಮೇಳನದ ಅಮೇರಿಕಾದ ಪ್ರತಿನಿಧಿಗಳ ನಾಯಕ ಜೇಮ್ಸ್ ಬರ್ಕಲಿ " ನಾವು ವಿಶ್ವ ಜನಸಂಖ್ಯಾ ಸಮ್ಮೇಳನ ನಡೆಸಿದ್ದೇವೆ ". ಗರ್ಭಪಾತ ಹಾಗು ಕುಟುಂಬ ಚಟುವಟಿಕೆ ಗಳಿಗೆ ಬಳಸುವುದಿಲ್ಲವೆಂಬ ಭರವಸೆ ಸಿಗುವವರೆಗೆ ಹಣ ನೀಡುವುದಿಲ್ಲವೆಂದರು.

ಅಮೇರಿಕಾದ ನಿಲುವು ಉಳಿದ ರಾಷ್ಟ್ರಗಳಿಗೆ ನುಂಗಲಾರದ ತುತ್ತಾಯಿತು. ಚೀನಾದ ಪ್ರತಿನಿಧಿ ಸೆನ್‌ಗುಹಾಕ್ಸಿಯಾಂಗ್ ಮಾತ್ರ ನೇರವಾಗಿ ಖಂಡಿಸಿದರು.

ಚೀನಾ ಬಿಟ್ಟು ಉಳಿದ ರಾಷ್ಟ್ರಗಳಿಗೆ ಧರ್ಮದ ಉಳಿವೇ ಮುಖ್ಯ. ರಾಷ್ಟ್ರ ಹಾಳಾದರೂ ಧರ್ಮ ಬೆಳೆಯಬೇಕು. ಜಗತ್ತಿನ ಒಟ್ಟು 458 ಕೋಟಿ 60 ಲಕ್ಷ (4·6) ಜನಸಂಖ್ಯೆಯಲ್ಲಿ 140 ಕೋಟಿಯಿರುವ ಕ್ರೈಸ್ತರು 2000 ದ ವೇಳೆಗೆ ಪ್ರತಿಶತ 60 ಭಾಗ ತೃತೀಯ ವಿಶ್ವದ ಪ್ರಜೆಗಳಾಗುತ್ತಾರೆ. ಇಂದಿನ 100 ಕೋಟಿ ಮುಸ್ಲಿಮರು 140 ಕೋಟಿಯಾಗಲಿದ್ದಾರೆ. ಆದರೂ ಧರ್ಮಾಚರಣೆಯ ರಾಷ್ಟ್ರಗಳಿಗೆ ತೃಪ್ತಿ ಇಲ್ಲ. ಅಮೆರಿಕಾ ಗರ್ಭಪಾತವನ್ನು ವಿರೋಧಿಸಿದರೆ ಮುಸ್ಲಿಂ ರಾಷ್ಟ್ರಗಳು ಕುಟುಂಬ ಯೋಜನೆಯನ್ನು ತಿರಸ್ಕರಿಸುತ್ತವೆ. ತೃತೀಯ ಹಿಂದೂ ಧರ್ಮ ಉಳಿದ ಧರ್ಮಗಳಿಗೆ ನಾನೇನು ಕಡಿಮೆ ಇಲ್ಲವೆಂಬಂತೆ ಜನಸಂಖ್ಯಾ ಸವಾಲ್ ಹಾಕುತ್ತಿದ್ದು ಈಗ ನಿಯಂತ್ರಿಸುತ್ತಿದೆ. ಉಳಿದ ಧರ್ಮಗಳು ಅಲ್ಪಸಂಖ್ಯಾತರೆಂದು ಪ್ರಬಲವಾಗಿ ಸಂತತಿಯನ್ನು ಬೆಳೆಸುತ್ತಿವೆ. ಜಾಗತಿಕ ಮನೋಭಾವ, ವಿಶ್ವಪ್ರೇಮ ಹಾಗು ವಿಶ್ವ ಶಾಂತಿಯನ್ನು ಎಲ್ಲಾ ರಾಷ್ಟ್ರಗಳು ಬದಿಗಿಟ್ಟಿವೆ. ಮುಂದುವರಿದ ರಾಷ್ಟ್ರಗಳ ಹಿಡಿತಕ್ಕೆ ಸಿಲುಕಿ ವಿಶ್ವಸಂಸ್ಥೆಯು ಕೈಕಟ್ಟಿ ಕುಳಿತು ಅಸಾಹಾಯಕವಾಗಿದೆ. ಹಿಂದುಳಿದ ರಾಷ್ಟ್ರಗಳು ಪ್ರಬಲ ರಾಷ್ಟ್ರಗಳ ಕೈಗೊಂಬೆಗಳು. ಯುದ್ಧದ ಭೀತಿ, ಶಸ್ತ್ರಾಸ್ತ್ರಗಳ ಸರಬರಾಜು, ಒಟ್ಟು ವರಮಾನದಲ್ಲಿ ಶೇ. 60 ರಷ್ಟು ಖರ್ಚು. ಅನ್ನ, ಅರಿವೆ, ವಸತಿ ಇಲ್ಲದಿದ್ದರೂ ಯುದ್ಧ ಮಾತ್ರ ಬೇಕೆನ್ನುವ ರಾಷ್ಟ್ರಗಳು ಹಲವಾರು. ಹೀಗಾಗಿ ಜನಸಂಖ್ಯಾ ನಿಯಂತ್ರಣದಲ್ಲಿ ಪ್ರತಿರಾಷ್ಟ್ರಗಳು ಡೋಲಾಯಮಾನ. ಮತಾಂಧತೆ, ವರ್ಗಬೇಧ, ವರ್ಣ ಬೇಧ ಹಾಗು ಜಾತಿ ಪದ್ಧತಿಯ ಮುಸುಕಿನೊಳಗೆ ಪ್ರತಿರಾಷ್ಟ್ರಗಳೂ ಗುದ್ದಾಟ. ಜನಸಂಖ್ಯಾ ನಿಯಂತ್ರಣದ ಸ್ಪಷ್ಟ ಅರಿವು ಯಾರಿಗೂ ಬೇಕಿಲ್ಲ. ಪ್ರಬಲ ರಾಷ್ಟ್ರಗಳಿಗೆ ಸಬಲ ರಾಷ್ಟ್ರಗಳ ಏಳಿಗೆಯು ಬೇಕಿಲ್ಲ. ಜನಬಾಹುಳ್ಯ ರಾಷ್ಟ್ರಗಳು ಯಾವುದೇ ಹಿತಾಸಕ್ತಿ ಇದ್ದರೂ ಬದಿಗೊತ್ತಿ ಕಾಲ ಮಿಂಚುವ ಮುನ್ನ ಸಾಕ್ಷರತೆ ಹಾಗೂ ಜನ ಸಂಖ್ಯಾ ನಿಯಂತ್ರಣಗಳೇ ಪೂರ್ಣ ಪ್ರಮಾಣದ ಯೋಜನೆಗಳೆಂದು ಕೈಗೊಳ್ಳಬೇಕು. ಇಲ್ಲದಿದ್ದರೆ ಹಿಡಿ ಅನ್ನಕ್ಕಾಗಿ ಕೈಚಾಚಿ ರಾಷ್ಟ್ರದ ಮಾನ ಮರ್ಯಾದೆಗಳೆಲ್ಲವನ್ನು ಹರಾಜುಮಾಡಿ ತಲೆ ತಗ್ಗಿಸಿ ನಿಲ್ಲಬೇಕು ಇಲ್ಲವೇ ಶ್ರೀಮಂತ ರಾಷ್ಟ್ರಗಳಿಗೆ ಮಾರಾಟ ಮಾಡಿಕೊಳ್ಳಬೇಕು. ಮುಂದುವರಿದರೆ ಸಮರಕ್ಕಿಳಿದು ಅಮರರಾಗಬೇಕು.

ಮಾಲ್ಥಸನ ಜನಸಂಖ್ಯಾ ಸಿದ್ಧಾಂತ:

ಇದು ಎರಡು ಪ್ರಮುಖ ಊಹೆಗಳನ್ನವಲಂಬಿಸಿದೆ—(1) ಜೀವನಕ್ಕೆ ಆಹಾರ ಅತ್ಯಾವಶ್ಯಕ (2) ಮಾನವರಲ್ಲಿ ಲೈಂಗಿಕ ಆಕರ್ಷಣೆ ಪ್ರಬಲವೂ ನಿರಂತರವೂ ಆದುದು.

ಆಹಾರೋತ್ಪಾದನೆ ಜನಸಂಖ್ಯೆಯ ಮೇಲೆ ಒಂದು ಮಿತಿಯನ್ನು ಹೇರುತ್ತದೆ–ಆ ಮಿತಿಯನ್ನು ಮೀರಬಾರದು. ಆದರೆ ಮಾನವರ ನಿರಂತರ, ಪ್ರಬಲ ಲೈಂಗಿಕ ದಾಹದಿಂದ ಈ ಸಮತೋಲನ ಉಳಿದುಬಂದಿಲ್ಲ. ಆಹಾರೋತ್ಪಾದನೆ ಭೂಮಿಯ ಉತ್ಪಾದನಾ ಸಾಮರ್ಥ್ಯವನ್ನವಲಂಬಿಸುತ್ತದೆ. ಮಾಲ್ಥಸ್ ಟರ್ಗಾಟನ 'ಇಳಿಮುಖ ವ್ಯವಸಾಯೋತ್ಪಾದನೆ'ಯ ಸಿದ್ಧಾಂತದ ಪ್ರಕಾರ ಆಹಾರೋತ್ಪಾದನೆ ಜನಸಂಖ್ಯಾ ಏರಿಕೆಯ ವೇಗದಲ್ಲಿ ಸಂಭವಿಸುವುದಿಲ್ಲವೆಂದು ಒಪ್ಪುತ್ತಾನೆ.

ಆಹಾರ ಮತ್ತು ಜನಸಂಖ್ಯಾ ಏರಿಕೆಯಲ್ಲಿ ತೀವ್ರ ಅಸಮಾನತೆ ಇದೆ. ಅದನ್ನು ಅನುಕ್ರಮವಾಗಿ ಈ ರೀತಿ ತೋರಿಸಬಹುದಾಗಿದೆ:

ಜನಸಂಖ್ಯೆ—2, 4, 8, 16, 32, 64, 128.
ಆಹಾರೋತ್ಪಾದನೆ—2, 3, 4, 5, 6, 7, 8

ಆರ್ಥಿಕ ಚಿಂತನೆಯ ಬೆಳವಣಿಗೆ
ಬಿ. ಎಂ. ಕುಮಾರಸ್ವಾಮಿ
ಪುಟ ೩೩–೩೪

ಕೆ. ಎಸ್. ರಾಮಕೃಷ್ಣರಾವ್

ಇಮ್ಯಾನುಯಲ್ ಕ್ಯಾಂಟ್

ಹ್ಯೂಮನ ವಾದ ಕ್ರಮದಿಂದ ಸಂದೇಹವಾದಕ್ಕೊಳಗಾದ ಪಾಶ್ಚಾತ್ಯ ತತ್ವಶಾಸ್ತ್ರವನ್ನು ಮತ್ತೆ ಪುನಃ ಸ್ಥಾಪಿಸಿದವನು ಜರ್ಮನಿಯ ತತ್ವಜ್ಞಾನಿಯಾದ ಇಮ್ಯಾನುಯಲ್ ಕ್ಯಾಂಟ್ (1724–1804). ಈತನ ತತ್ವ ಸಿದ್ಧಾಂತವನ್ನು ವಿಮರ್ಶಾತ್ಮಕ ತತ್ವ ಶಾಸ್ತ್ರವೆನ್ನುತ್ತಾರೆ. ತನ್ನ ಜೀವನದಲ್ಲಿ ಶಿಸ್ತು, ವ್ಯವಸ್ಥೆ ಮತ್ತು ಸರಳತೆಗಳನ್ನು ರೂಪಿಸಿಕೊಂಡ ಕ್ಯಾಂಟ್ ತನ್ನ ತತ್ವ ನಿರೂಪಣೆಯಲ್ಲಿಯೂ ಅದೇ ಗುಣಗಳನ್ನು ಪ್ರತಿ ಬಿಂಬಿಸಿದ್ದಾನೆ. ತನ್ನ ಪ್ರಾರಂಭದ ದಿನಗಳಲ್ಲಿ ಆತನು ವಿಚಾರವಾದದಿಂದ ಪ್ರಭಾವಿತ ನಾಗಿದ್ದನು. ಆದರೆ ಮುಂದೆ ಅನುಭವವಾದವು ಆತನ ಮೇಲೆ ಉತ್ತಮ ಪರಿಣಾಮ ವನ್ನು ಬೀರಿತು. ಅದರಲ್ಲೂ ಹ್ಯೂಮನ ವಾದಗಳು ಅವನನ್ನು ಬಹಳಷ್ಟು ಆಕರ್ಷಿಸಿದವು. ಹ್ಯೂಮ್ ತನ್ನನ್ನು ತನ್ನ ಸಾಂಪ್ರದಾಯಿಕ ಭಾವನೆಯ ನಿದ್ರೆ ಯಿಂದ ಎಚ್ಚರಗೊಳ್ಳುವಂತೆ ಮಾಡಿದನು ಎಂದು ಕ್ಯಾಂಟ್ ಹೇಳಿಕೊಂಡಿದ್ದಾನೆ. ಆದರೆ ಅನುಭವವಾದದ ಕೊರತೆಗಳು ಅವನಲ್ಲಿ ಅದರ ಬಗ್ಗೆ ಜಿಗುಪ್ಸೆಯನ್ನುಂಟು ಮಾಡಿತು. ವಿಚಾರವಾದ ಮತ್ತು ಅನುಭವವಾದಗಳೆರಡನ್ನೂ ಸರಿಯಾಗಿ ಅರ್ಥ ಮಾಡಿಕೊಂಡ ಕ್ಯಾಂಟ್ ಮೊದಲು ಹ್ಯೂಮ್‌ನ ಸಂದೇಹವಾದವನ್ನು ನಿರಾಕರಿಸಿ ಜ್ಞಾನದ ಸಾಧ್ಯತೆಯನ್ನು ತೋರಿಸುವ ತೀರ್ಮಾನವನ್ನು ಕೈಗೊಂಡನು. ಇಷ್ಟಲ್ಲದೇ ಸತ್ಯವನ್ನು ಕೇವಲ ವಿಚಾರದಿಂದ ತಿಳಿಯಲು ಸಾಧ್ಯವಿಲ್ಲವೆಂದು, ಅದನ್ನು ಭಾವನೆಗಳ ಮೂಲಕವೇ ತಿಳಿಯಬೇಕೆಂದು ಅಭಿಪ್ರಾಯಪಟ್ಟನು. ತನ್ನ ಈ ಅಭಿಪ್ರಾಯ ಮತ್ತು ಇದರ ಸಾಧ್ಯತೆಯನ್ನು ಸೂಚಿಸಲು ಮೂರು ಪ್ರಮುಖ ಗ್ರಂಥಗಳನ್ನು ಬರೆದನು. ಅವು 1. The critique of pure Reason 2. The critique of practical Reason 3. The oritique of judgement.

ಡೇಕಾರ್ಟೆಯಿಂದ ಪ್ರಾರಂಭವಾದ ವಿಚಾರವಾದವು ರಹಸ್ಯವಾದದಲ್ಲೂ, ಲಾಕ್‌ನಿಂದ ಪ್ರಾರಂಭವಾದ ಅನುಭವವಾದವು ಸಂದೇಹವಾದದಲ್ಲಿಯೂ ಕೊನೆ ಗೊಂಡಿದ್ದನ್ನು ನೋಡಿದ ಕ್ಯಾಂಟ್ ಆ ಎರಡು ವಾದಗಳು ತಮ್ಮ ಅತಿರೇಕಕ್ಕೆ

ಹೋಗಿ ತಪ್ಪು ಮಾಡಿವೆ ಎಂದು ಅಭಿಪ್ರಾಯಪಟ್ಟನು. ನಮ್ಮಲ್ಲಿ ಸಾರ್ವತ್ರಿಕವಾದ ಹಾಗೂ ವಸ್ತುಸತ್ಯದಿಂದ ಕೂಡಿದ ಜ್ಞಾನವಿರುವುದು ಖಚಿತ ಎಂದು ಆತನ ನಂಬಿಕೆ. ಅವನ ಪ್ರಕಾರ ಸಾರ್ವತ್ರಿಕವಾದದ್ದು, ಸ್ಪಷ್ಟವಾದದ್ದು ವಸ್ತುಸತ್ವವನ್ನೊಳಗೊಂಡಿರುವುದೇ ಸರಿಯಾದ ಜ್ಞಾನ. ಎರಡು ಮತ್ತು ಎರಡು ಸೇರಿದರೆ ನಾಲ್ಕು ಆಗುತ್ತದೆ, ಒಂದು ತ್ರಿಕೋನದ ಮೂರು ಕೋನಗಳ ಮೊತ್ತ ಎರಡು ಸಮಕೋನಗಳಾಗುತ್ತವೆ; ಎಲ್ಲಾ ಭೌತವಸ್ತುಗಳು ಗುರುತ್ವಾಕರ್ಷಣ ಶಕ್ತಿಗೆ ಒಳಗಾಗಿವೆ ಎಂಬ ಮುಂತಾದ ಅನೇಕ ನಿರ್ದಿಷ್ಟ ಜ್ಞಾನವನ್ನು ನಾವು ಪಡೆದಿದ್ದೇವೆ. ಹೀಗಿದ್ದರೂ ವಿಚಾರವಾದ ಮತ್ತು ಅನುಭವವಾದಗಳು ಜ್ಞಾನದ ಸಾಧ್ಯತೆಯನ್ನು ನಿರಾಕರಿಸುವುದು ಅವುಗಳಲ್ಲಿಯ ಮಹತ್ತರ ಕೊರತೆಯಾಗಿದೆ. ಸಮಂಜಸವಾದ ಜ್ಞಾನವು ಸಾರ್ವತ್ರಿಕತೆ, ಅನಿವಾರ್ಯತೆ ಮತ್ತು ಸ್ಪಷ್ಟತೆಗಳನ್ನಷ್ಟೇ ಅಲ್ಲದೆ ವಾಸ್ತವಿಕತೆಯನ್ನು ಹೊಂದಿರಬೇಕು. ಇಂತಹ ಜ್ಞಾನವನ್ನು ಕ್ಯಾಂಟ್ ಅನುಭವಪೂರ್ವ ಅಂಶ ಮತ್ತು ವಾಸ್ತವಿಕ ಅನುಭವದ ಸಂಯುಕ್ತ ಜ್ಞಾನವೆಂದು ಕರೆದನು.

ಜ್ಞಾನದ ಸಮಸ್ಯೆಗೆ ಕ್ಯಾಂಟ್ ನೀಡುವ ಪರಿಹಾರವು ಅನುಭವವಾದ ಮತ್ತು ವಿಚಾರವಾದಗಳ ಒಂದು ಅಪೂರ್ವ ಸಂಯೋಜನೆಯಾಗಿದೆ. ಈ ಎರಡು ವಾದಗಳು ಸಂಕುಚಿತ ದೃಷ್ಟಿಯನ್ನು ಹೊಂದಿದ್ದು ಸಮಂಜಸ ನಿರ್ಣಯವನ್ನು ಕೊಡಲು ಅಸಮರ್ಥವಾದವು. ಕ್ಯಾಂಟನ ಪ್ರಕಾರ ಇಂದ್ರಿಯವಾದಗಳಿಂದ ಬೇರ್ಪಟ್ಟ ವಿಚಾರವಾಗಲಿ, ವಿಚಾರದಿಂದ ಬೇರ್ಪಟ್ಟ ಇಂದ್ರಿಯಗಳಾಗಲಿ ಸ್ವತಂತ್ರವಾಗಿ ಸಮಂಜಸ ಜ್ಞಾನವನ್ನು ನೀಡಲಾರವು. ವಿಚಾರ ಮತ್ತು ಇಂದ್ರಿಯ ಜ್ಞಾನವು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಇಂದ್ರಿಯಗಳು ಜ್ಞಾನದ ಮೂಲವಸ್ತುಗಳನ್ನು ಪೂರೈಸಿದರೆ, ವಿಚಾರವು ಅವಕ್ಕೆ ಆಕಾರವನ್ನು ನೀಡುತ್ತದೆ. ವಸ್ತುವಿಲ್ಲದೆ ಆಕಾರವಿಲ್ಲ, ಆಕಾರವಿಲ್ಲದೇ ವಸ್ತುವು ಇಲ್ಲ ಎಂಬ ಮಾತು ಜ್ಞಾನಕ್ಕೂ ಅನ್ವಯಿಸುತ್ತದೆ. ಅನುಭವವಾದಿಗಳು ಪ್ರತಿಪಾದಿಸುವ ಇಂದ್ರಿಯಗಳು ಜ್ಞಾನದ ವಸ್ತುವನ್ನು ನೀಡಿದರೆ ವಿಚಾರವು ಅದಕ್ಕೆ ಆಕಾರವನ್ನು ಕೊಡುತ್ತವೆ.

1. ಕ್ಯಾಂಟನ ಅನುಭವಪೂರ್ವ ಮತ್ತು ಇಂದ್ರಿಯಾನುಭವದ ಸಂಯೋಜಿತಜ್ಞಾನ :

ಪ್ರತಿನಿತ್ಯ ನಾವು ನಮ್ಮ ಜ್ಞಾನೇಂದ್ರಿಯಗಳ ಮೂಲಕ ಅಸಂಖ್ಯಾತ ಇಂದ್ರಿಯಾನುಭವಗಳನ್ನು ಪಡೆಯುತ್ತೇವೆ. ಆದರೆ ಈ ಎಲ್ಲಾ ಇಂದ್ರಿಯಾನುಭವಗಳನ್ನು ನಮ್ಮ ಮನಸ್ಸು ಗ್ರಹಿಸುವುದು ಅಸಾಧ್ಯವಾಗಿದೆ. ಈ ಮಾತಿಗೆ ಶಕುಂತಲಾ ನಾಟಕದಲ್ಲಿ ಬರುವ ಪ್ರಸಂಗವನ್ನು ನಿದರ್ಶನವನ್ನಾಗಿ ತೋರಿಸಬಹುದು. ಹೇಗೆ ದೂರ್ವಾಸ ಋಷಿಗಳು ಶಕುಂತಲೆಯ ಕಣ್ಣುಮುಂದೆ ನಿಂತಿದ್ದು ಅವಳನ್ನು ಕರೆಯುತ್ತಿದ್ದರೂ ಅವಳಿಗೆ ಆತನ ಇರುವಿಕೆಯ ಅಥವಾ ಕೂಗುವಿಕೆಯ ಜ್ಞಾನ ಉಂಟಾಗುವುದಿಲ್ಲವೋ

ಅದೇ ರೀತಿ ನಮ್ಮ ಮನಸ್ಸು ಇಂದ್ರಿಯಾನುಭವಗಳಲ್ಲಿ ಕೆಲವನ್ನು ನಿರ್ಲಕ್ಷಿಸಿ ಕೆಲವನ್ನು ಮಾತ್ರ ಆಯ್ದು ತಿಳಿಯುತ್ತದೆ. ನಿರ್ಲಕ್ಷಿಸಲ್ಪಟ್ಟ ಇಂದ್ರಿಯಾನುಭವಗಳು ಜ್ಞಾನವಾಗಿ ಪರಿವರ್ತಿತವಾಗದೆ ಅನುಭವಗಳಾಗಿಯೇ ಉಳಿಯುತ್ತವೆ. ಕ್ಯಾಂಟನ ಪ್ರಕಾರ ಹೊರಪ್ರಪಂಚದಿಂದ ಇಂದ್ರಿಯಗಳ ಮೂಲಕ ಬರುವ ಅನುಭವಗಳು ಕೇವಲ ಉತ್ತೇಜನಪೂರ್ವಕ ಅನುಭವಗಳಾಗಿವೆ. ಅಂದರೆ ಅವು ಶಬ್ದದ ಅಲೆಯ ರೂಪದಲ್ಲಿರಬಹುದು ಅಥವಾ ಬಣ್ಣದ ಸಮೂಹದಂತಿರಬಹುದು ಅಥವಾ ವಾಸನೆಯ ಸಮೂಹವಾಗಿರಬಹುದು. ಇಷ್ಟಲ್ಲದೆ ಆ ಅನುಭವಗಳು ತಾವಾಗಿ ಯಾವ ವಸ್ತುವನ್ನು ಸೂಚಿಸಲಾರವು. ಈ ಅರ್ಥರಹಿತವಾದ ಇಂದ್ರಿಯಾನುಭವಗಳನ್ನು ಅರ್ಥಪೂರ್ಣವಾದ ಜ್ಞಾನವನ್ನಾಗಿ ಪರಿವರ್ತಿಸಲು ಮನಸ್ಸು ಕ್ರಿಯಾತ್ಮಕವಾಗಿ ವರ್ತಿಸಬೇಕಾಗಿದೆ. ಕ್ಯಾಂಟನ ಪ್ರಕಾರ ಮನಸ್ಸು ತನ್ನ ರಚನೆಗೆ ಅನ್ವಯವಾಗಿ ಈ ಅರ್ಥರಹಿತ ಅನುಭವಗಳನ್ನು ವ್ಯವಸ್ಥೆಗೊಳಿಸಿ ಒಂದುಗೂಡಿಸುತ್ತದೆ. ಮನಸ್ಸು ಈ ಕೆಲಸವನ್ನು ಮಾಡದಿದ್ದರೆ ಇಂದ್ರಿಯಾನುಭವಗಳು ಅನುಭವಗಳಾಗಿಯೇ ಉಳಿದು "ವಸ್ತುವಿನ" ಜ್ಞಾನವುಂಟಾಗುವುದಿಲ್ಲ. ಶಕುಂತಲೆಯ ಮನಸ್ಸು ಎಲ್ಲೋ ಒಂದು ಕಡೆ ಕೇಂದ್ರಿಕೃತವಾಗಿದ್ದು ಆಗಿನ ಇಂದ್ರಿಯಾನುಭವಗಳನ್ನು ವ್ಯವಸ್ಥಿತವಾಗಿ ಒಂದುಗೂಡಿಸಲು ತಪ್ಪಿದುದರಿಂದಲೇ ಅವಳಿಗೆ ದೂರ್ವಾಸರ ಇರುವಿಕೆಯು ತಿಳಿಯದಂತಾಯಿತು.

ಕ್ಯಾಂಟನ ಪ್ರಕಾರ ನಮ್ಮ ಜ್ಞಾನದಲ್ಲಿ ಅರ್ಥರಹಿತವಾದ "ಇಂದ್ರಿಯಾನುಭವಗಳು" ಮತ್ತು "ವ್ಯವಸ್ಥಿತಜ್ಞಾನ" ಎಂಬ ಎರಡು ಹಂತಗಳಿದ್ದು ಅವುಗಳಿನುಗುಣವಾಗಿ ಮನಸ್ಸಿನ ರಚನೆಯು ಎರಡು ವಿಭಾಗಗಳಿಂದ ಕೂಡಿರುತ್ತದೆ. ಅಂದರೆ ನಮ್ಮ ಜ್ಞಾನವೆಲ್ಲಾ ನಮ್ಮ ಮನಸ್ಸಿನ ರಚನೆಯನ್ನೇ ಅವಲಂಬಿಸಿರುತ್ತವೆ. ಮನಸ್ಸಿನ ರಚನೆಯ ಎರಡುಭಾಗಗಳಲ್ಲಿ ಒಂದು "ಇಂದ್ರಿಯಾನುಭವಗಳನ್ನು ಮಾತ್ರ ಗ್ರಹಿಸುವ ಪ್ರತ್ಯಕ್ಷದ ಪ್ರಕಾರಗಳು" ಎನ್ನುವ ಕೆಳಮಟ್ಟದ ಭಾಗವಾಗಿದೆ. ಈ ವಿಭಾಗದಲ್ಲಿ ಇಂದ್ರಿಯಗಳ ಮೂಲಕ ಬರುವ ಅನುಭವಗಳು ನೇರವಾಗಿ ಗ್ರಹಿಸಲ್ಪಡುತ್ತವೆ. ಪ್ರತ್ಯಕ್ಷದ ಪ್ರಕಾರಗಳ ಭಾಗವು ದೇಶ ಮತ್ತು ಕಾಲ (Space and Time)ಗಳಿಂದ ಕೂಡಿದೆ. ಈ ವಿಭಾಗದೊಳಗೆ ಬಂದ ಇಂದ್ರಿಯಾನುಭವಗಳು ಅದರ ರಚನೆಯ ಆಕಾರವನ್ನೇ ಪಡೆಯುತ್ತವೆ. "ಒಂದು ದ್ರವವು ತನ್ನನ್ನು ಹೊಂದಿರುವ ಪಾತ್ರೆಯ ಆಕಾರವನ್ನೇ ಪಡೆದಿರುವಂತೆ" ದೇಶ ಮತ್ತು ಕಾಲಗಳ ಮೂಲಕ ಬರುವ ಇಂದ್ರಿಯಾನುಭವಗಳು ಮನಸ್ಸಿನ ಆ ವಿಭಾಗದ ಆಕೃತಿಯನ್ನೇ ಪಡೆಯುತ್ತವೆ. ಆದರೆ ಈ ಅನುಭವಗಳು ಈ ವಿಭಾಗದಲ್ಲಿ ದೇಶ ಮತ್ತು ಕಾಲಗಳಿಗನುಸಾರವಾಗಿ ವ್ಯವಸ್ಥೆಗೊಳಿಸಲ್ಪಡುತ್ತವೆ. ಹಸಿರುಬಣ್ಣದ ಕನ್ನಡಕ ಹಾಕಿದರೆ ಹೇಗೆ ವಸ್ತುಗಳೆಲ್ಲವೂ ಹಸಿರಾಗಿಯೇ ಕಾಣುವುವೋ ಅದೇ ರೀತಿ (ದಿಕ್) ದೇಶ ಮತ್ತು ಕಾಲವನ್ನು ಕನ್ನಡಕದಂತೆ ಹೊಂದಿರುವ ಮನಸ್ಸು ಪ್ರತಿಯೊಂದು ವಸ್ತುವು ದಿಕ್ ಮತ್ತು ಕಾಲಗಳಲ್ಲಿರುವಂತೆ ಕಾಣುತ್ತದೆ. ಈ ಹಂತದಲ್ಲಿ ಇಂದ್ರಿಯಾನುಭವಗಳು ಜ್ಞಾನವಾಗಿ ಮಾರ್ಪಟ್ಟು

ಅವು ಯಾವ ವಸ್ತುವಿನ ಅನುಭವಗಳಿಂದು ತಿಳಿಯಲ್ಪಡುತ್ತವೆ. ಆದರೆ ಇಂದ್ರಿಯಾನುಭವಗಳು ಜ್ಞಾನವಾಗಿ ಪರಿವರ್ತನೆಯಾದನಂತರವೂ ಮನಸ್ಸಿನ ವಿಚಾರಕ್ರಿಯೆಯು ಮುಂದುವರಿದು ಎರಡನೆಯ ಹಂತವನ್ನು ಸೇರುತ್ತದೆ. ಇದರ ಪರಿಣಾಮವಾಗಿ ಮನಸ್ಸಿನಲ್ಲಿ ಕಲ್ಪನೆಗಳು, ಸಾಮಾನ್ಯಪದಗಳು, ವರ್ಗಗಳು, ಸಂಬಂಧಗಳು ನಿರ್ಮಿತವಾಗುತ್ತವೆ. ಇವುಗಳಲ್ಲಿ ಮನಸ್ಸಿನ ಉನ್ನತವಿಭಾಗವಾದ "ಜ್ಞಾನದ ವರ್ಗಗಳ" ಮೂಲಕ ನಿರ್ಮಿಸಲ್ಪಡುತ್ತವೆ. ಕ್ಯಾಂಟನ ಪ್ರಕಾರ ನಮ್ಮ ಮನಸ್ಸಿನಲ್ಲಿ ಹನ್ನೆರಡು ರೀತಿಯ ತೀರ್ಮಾನಗಳಿದ್ದು ಅವುಗಳಿಗೆ ಅನುಸಾರವಾದ ಹನ್ನೆರಡು ಜ್ಞಾನದ ವರ್ಗಗಳಿಂದ ನಿರ್ಮಿಸಲ್ಪಡುತ್ತವೆ. ಅವು (1) ಸಾಮಾನ್ಯತೆ (2) ವಿಶೇಷತೆ (3) ಏಕತೆ (4) ಭಾವ (ಅಂಗೀಕಾರ) (5) ಅಭಾವ ಅಥವಾ ನಿಷೇಧ (6) ಅನಂತತೆ (7) ನಿರಪೇಕ್ಷತೆ (8) ಕಾಲ್ಪನಿಕತೆ (9) ವಿಕಲ್ಪ (10) ಸಂದಿಗ್ಧತೆ (11) ಪ್ರತಿಪಾದನ (12) ಸ್ಪಷ್ಟತೆ. ಉನ್ನತ ಭಾಗಗಳಲ್ಲಿರುವ ವಿವಿಧ ಸಂಬಂಧಗಳಲ್ಲಿ ಒಂದಾದ "ಕಾರ್ಯಕಾರಣ ಸಂಬಂಧ"ವು ವಸ್ತುಗಳ ಪರಸ್ಪರ ಅನಿವಾರ್ಯತೆಯನ್ನು ತಿಳಿಯಲು ಸಹಕರಿಸುತ್ತದೆ. ಕಾರ್ಯಕಾರಣ ಸಂಬಂಧವನ್ನು ತಿಳಿಯಲು ಸಾಧ್ಯವಾದರೆ, ವಿಜ್ಞಾನದ ಸಾಧ್ಯತೆಯನ್ನು ಅಂಗೀಕರಿಸಿದಂತಾಗುತ್ತದೆ. ''ಹ್ಯೂಮ್ ತನ್ನ ಮನಸ್ಸಿನಲ್ಲೇ ಇರುವ ಈ ವಿವಿಧ ವರ್ಗಗಳನ್ನರಿಯಲು ಅಸಮರ್ಥನಾದುದರಿಂದ ಆತನು ಎಲ್ಲಾರೀತಿಯ ಜ್ಞಾನಗಳನ್ನು ನಿರಾಕರಿಸಿ ಸಂದೇಹವಾದಿಯಾದನು.'' ಕ್ಯಾಂಟನ ಪ್ರಕಾರ ''ಮನಸ್ಸಿನ ರಚನೆಗಳೇ ಆದ ಪ್ರತ್ಯಕ್ಷದ ಪ್ರಕಾರಗಳು ಮತ್ತು ಜ್ಞಾನದ ವರ್ಗಗಳ" ಸಹಾಯದಿಂದ ಸ್ಪಷ್ಟವಾದ ಸಾರ್ವತ್ರಿಕವಾದ ಮತ್ತು ನಿಶ್ಚಿತವಾದ ಎಲ್ಲಾ ರೀತಿಯ ಜ್ಞಾನವನ್ನು ಪಡೆಯಬಹುದಾಗಿದೆ. ಇಂತಹ ಜ್ಞಾನವು ನಿರ್ದಿಷ್ಟವಾಗಿರುವುದು ಮಾತ್ರವಲ್ಲದೇ ವಸ್ತುಸತ್ಯತೆಯಿಂದಲೂ ಕೂಡಿರುತ್ತದೆ. ಇದೇ ಅತ್ಯಂತ ಸಮಂಜಸವಾದ ಜ್ಞಾನ. ಕ್ಯಾಂಟ್ ಪ್ರತಿಪಾದಿಸಿದಂತೆ ಪ್ರತಿಯೊಂದು ಜ್ಞಾನವು ಪ್ರಾರಂಭದಲ್ಲಿ ಇಂದ್ರಿಯಾನುಭವಗಳಿಂದ ಕೂಡಿದ್ದು ಸೃಷ್ಟಿಯ ವಸ್ತುಗಳ ಇರುವಿಕೆಯನ್ನು ಸೂಚಿಸುತ್ತದೆ. ಜ್ಞಾನ ಸಂಪೂರ್ಣವಾದಾಗ ಈ ಇಂದ್ರಿಯಾನುಭವಗಳು ಸವಿವರವಾಗಿ ತಿಳಿಯಲ್ಪಟ್ಟು ಸ್ಪಷ್ಟ ಕಲ್ಪನೆಗಳ ಮೂಲಕ ಗ್ರಹಿಸಲ್ಪಡುತ್ತವೆ. ಇಂತಹ ಜ್ಞಾನವನ್ನೇ ಕ್ಯಾಂಟ್ ಅನುಭವಪೂರ್ವ ಮತ್ತು ಇಂದ್ರಿಯಾನುಭವದ ''ಸಂಯೋಜನಾಯುಕ್ತ ಜ್ಞಾನ''ಎಂದು ಕರೆದಿದ್ದಾನೆ.

ಕ್ಯಾಂಟ್‌ನ ಈ ಜ್ಞಾನಮೀಮಾಂಸೆಯು ಪ್ರಕೃತಿಯ ವಸ್ತುಗಳ ನಿಜವಾದ ಅಸ್ತಿತ್ವ ಮತ್ತು ನಮ್ಮ ಅನುಭವದ ಮೂಲಕ ತಿಳಿಯುವ ಅವುಗಳ ಅಸ್ತಿತ್ವದ ನಡುವೆ ವ್ಯತ್ಯಾಸವನ್ನು ಸೂಚಿಸುತ್ತದೆ. ಅಂದರೆ ವಸ್ತುಗಳು ನಮಗೆ ಹೇಗೆ ಗೋಚರಿಸುವುವೋ ಹಾಗೆ ಅವು ಇವೆಯೋ ಅಥವಾ ಅವುಗಳ ನಿಜವಾದ ಅಸ್ತಿತ್ವ ಬೇರೆ ಇದೆಯೋ ಎನ್ನುವ ವ್ಯತ್ಯಾಸ ಇಲ್ಲಿಯ ಪರಿಣಾಮವಾಗುತ್ತದೆ. ಕ್ಯಾಂಟನ ಪ್ರಕಾರ ಇಂದ್ರಿಯಾನುಭವಗಳನ್ನು ಮನಸ್ಸು ವ್ಯವಸ್ಥಿತವಾಗಿ ವಿವರಿಸದಿದ್ದರೆ ಜ್ಞಾನ ಉಂಟಾ

ಗುವುದಿಲ್ಲ, ಈ ದೃಷ್ಟಿಯಿಂಥ ನಮ್ಮ ಮನಸ್ಸಿನ ತಿಳುವಳಿಕೆಯ ಮೂಲ ಇಂದ್ರಿಯಾನುಭವಗಳಿಂದಾಗುತ್ತದೆ. ಈ ದೃಷ್ಟಿಯಿಂದ ಬಾರ್ಕ್ಲೆ ಮತ್ತು ಹ್ಯೂಮ್ ಹೇಳುವಂತೆ ಹೊರ ಪ್ರಪಂಚದಲ್ಲಿ ಸಿದ್ಧವಸ್ತುಗಳಿಲ್ಲ, ನಾವು ವಸ್ತುಗಳೆಂದು ಕರೆಯುವವುಗಳನ್ನು ಮನಸ್ಸು ಇಂದ್ರಿಯಾನುಭವಗಳನ್ನು ವ್ಯವಸ್ಥೆಗೊಳಿಸಿ ರಚಿಸಿಕೊಳ್ಳುತ್ತದೆ. ಆದುದರಿಂದ ನಾವು ವಸ್ತುಗಳೆಂದು ತಿಳಿದಿರುವವುಗಳೆಲ್ಲವೂ ನಮ್ಮ ಮನಸ್ಸಿನಿಂದಲೇ ರಚಿಸಲ್ಪಟ್ಟವಾಗಿವೆ. ಇದರಿಂದಾಗಿ ನಮಗೆ ವಸ್ತುಗಳ ನಿಜಸ್ಥಿತಿಯು ಅರಿವುಂಟಾಗುವುದಿಲ್ಲ. ಹೆಚ್ಚೆಂದರೆ ಅವುಗಳು ನಮಗೆ ಹೇಗೆ ಗೋಚರಿಸುತ್ತವೋ ಹಾಗಿವೆ ಎಂದು ಮಾತ್ರ ಹೇಳಬಹುದಾಗಿದೆ. ಇಂದ್ರಿಯಾನುಭವಗಳು ಹೊರ ಪ್ರಪಂಚದಿಂದ ಕೇವಲ ಅನುಭವಗಳನ್ನು ತರುತ್ತವೆ ಅಲ್ಲದೆ ವಸ್ತುಗಳನ್ನು ತರುವುದಿಲ್ಲ. ಆದ್ದರಿಂದ ವಸ್ತುಗಳ ನಿಜಸ್ಥಿತಿ ನಮ್ಮ ಜ್ಞಾನದಿಂದ ದೂರ. ಕ್ಯಾಂಟನ ಈ ಅಭಿಪ್ರಾಯವನ್ನು ಸಂದೇಹವಾದದ ಮತ್ತೊಂದು ರೂಪವೆನ್ನಬಹುದು. ಆದರೆ ಕ್ಯಾಂಟನ ಅಭಿಪ್ರಾಯದಲ್ಲಿ ಇಂತಹ ಸಂದೇಹವಾದ ಅನಿವಾರ್ಯ ಇಂದ್ರಿಯಾನುಭವಗಳನ್ನಾಗಲೀ, ಶುದ್ಧ ವಿಚಾರವನ್ನಾಗಲೀ, ಅವಲಂಬಿಸಿದ್ದೇ ಆದರೆ ಸಂದೇಹವಾದಕ್ಕೆ ಬರದೆ ದಾರಿಯಿಲ್ಲ. ಕ್ಯಾಂಟ್ ಹೇಳುವಂತೆ ವಿಜ್ಞಾನವೂ ಕೂಡ ವಸ್ತುಗಳು ಹೇಗೆ ಕಾಣಿಸುತ್ತವೋ ಹಾಗೆಯೇ ವಿವರಿಸುತ್ತದೆ. ಅಲ್ಲದೇ ಅವುಗಳ ನಿಜಸ್ಥಿತಿಯನ್ನು ತಿಳಿಸಲಾರದು ಹಾಗಾದರೆ ಅವುಗಳ ನಿಜತ್ವವನ್ನು ಹೇಗೆ ತಿಳಿಯಬೇಕು? ಈ ಪ್ರಶ್ನೆಗೆ ಉತ್ತರವೇ ಕ್ಯಾಂಟ್ ಬರೆದ ಎರಡನೆಯ ಗ್ರಂಥವಾದ ಪ್ರಾಯೋಗಿಕ ವಿಚಾರದ ವಿಮರ್ಶೆ.

ಪ್ರಾಯೋಗಿಕ ವಿಚಾರ ಮತ್ತು ನೀತಿಶಾಸ್ತ್ರ : ಕ್ಯಾಂಟನು ವಿಚಾರವಾದ ಮತ್ತು ಅನುಭವವಾದಗಳ ನಡುವೆ ಸಿಲುಕಿ ಯಾವುದೇ ನಿರ್ದಿಷ್ಟ ತೀರ್ಮಾನಕ್ಕೆ ಬರಲು ಅಸಮರ್ಥನಾದಾಗ ರೂಸ್ಸೋ ಬರೆದ ''ಎಮಿಲಿ'' ಎಂಬ ಗ್ರಂಥವು ಕ್ಯಾಂಟನ ವಿಚಾರಕ್ರಮಕ್ಕೆ ಒಂದು ನಿರ್ದಿಷ್ಟ ರೂಪ ಬರುವಂತಾಗಲು ಸಹಕರಿಸಿತು. ರೂಸ್ಸೋನ ಪ್ರಕಾರ ಬುದ್ಧಿ ಅಥವಾ ವಿಚಾರ ತತ್ವಶಾಸ್ತ್ರಕ್ಕೆ ಎಷ್ಟೇ ಅವಶ್ಯಕವಾದರೂ ಅದು ನಮ್ಮ ವಾಸ್ತವಿಕ ಜೀವನದಲ್ಲಿ ಪರಮವಾದುದೇನೂ ಅಲ್ಲ, ಮಾನವಜೀವನಕ್ಕೆ ಮಾರ್ಗದರ್ಶನವೀಯುವಲ್ಲಿ ಆತನ ಭಾವನೆಗಳು ವಹಿಸುವಷ್ಟು ಪ್ರಮಾಣದ ಪಾತ್ರವನ್ನು ಆತನ ವಿಚಾರ ವಹಿಸಲಾರದು. ರೂಸ್ಸೋನ ಪ್ರಕಾರ ಮಾನವನ ವಿಚಾರಶಕ್ತಿಯು ಆತನ ಭಾವನೆಗಳೆಂಬ ಸಾಗರದಲ್ಲಿ ಒಂದು ಬಿಂದುಮಾತ್ರ. ರೂಸ್ಸೋನ ಅಭಿಪ್ರಾಯದಿಂದ ಪ್ರಭಾವಿತನಾದ ಕ್ಯಾಂಟ್ ನಮ್ಮ ವಿಚಾರವು ತಾರ್ಕಿಕ ಮತ್ತು ಸಿದ್ಧಾಂತರೂಪದ ಆಲೋಚನೆಯಾಗಿದ್ದು ಅದು ನಮ್ಮ ನಿಜ ಜೀವನಕ್ಕೆ ಮಾರ್ಗದರ್ಶಿಯಾಗುವ ಅರ್ಹತೆಯನ್ನು ಪಡೆದಿಲ್ಲ ಎನ್ನುತ್ತಾನೆ. ವಿಚಾರವು ವಸ್ತುಗಳು ಹೇಗೆ ಗೋಚರಿಸುತ್ತವೋ ಹಾಗಿವೆ ಎಂಬುದನ್ನು ತಿಳಿಸಲಾರವು. ಸತ್ಯದ ಅರಿವನ್ನು ಪಡೆಯಬೇಕಾದರೆ ಭಾವನೆಗಳ ಮಾರ್ಗದರ್ಶನ ಅತ್ಯಾವಶ್ಯ. ಇದನ್ನೇ ಕ್ಯಾಂಟ್ '' ಪ್ರಾಯೋಗಿಕ ವಿಚಾರ'' ಎಂದು ಕರೆಯುತ್ತಾನೆ.

ನಮ್ಮ ಪ್ರತ್ಯಕ್ಷಾನುಭವಕ್ಕೆ ಸಿಗದ ಯಾವವಸ್ತುವಿನ ಬಗ್ಗೆಯೂ ನಮಗೆ ನಿರ್ದಿಷ್ಟವಾಗಿ ತಿಳಿಯದು ಎಂಬ ಮಾತು ಸ್ವಯಂಸಿದ್ಧ. ವಸ್ತುಗಳು ಹೇಗೆ ಕಾಣಿಸುತ್ತವೋ ಹಾಗೆ ಮಾತ್ರವಲ್ಲದೇ ನಮ್ಮಿಂದ ವಸ್ತುಗಳ ನಿಜಸ್ಥಿತಿಯನ್ನು ತಿಳಿಯಲು ಸಾಧ್ಯವಿಲ್ಲ. ಇದೇ ರೀತಿ 'ನಾನು' ಎಂಬುದನ್ನು ನಾನು ಹೇಗೆ ಕಾಣಿಸುವೆನೋ ಹಾಗಲ್ಲದೇ ನಿಜವಾಗಿಯೂ ನನ್ನನ್ನು ನಾನು ತಿಳಿದಿಲ್ಲ. ಇದು ತಾರ್ಕಿಕ ತೀರ್ಮಾನವಾದರೂ ಕ್ಯಾಂಟ್ ಇಷ್ಟಕ್ಕೆ ತೃಪ್ತನಾಗಲಿಲ್ಲ. ವಸ್ತುಗಳ ನಿಜಸ್ಥಿತಿಯನ್ನು ಅರಿಯಲೇಬೇಕು ಮತ್ತು ಅದಕ್ಕೊಂದು ಮಾರ್ಗವನ್ನು ಕಂಡು ಹಿಡಿಯಲೇಬೇಕೆಂದು ಅವನು ನಿರ್ಧರಿಸಿದನು. 'ವಸ್ತುಗಳು' ನಿಜವಾಗಿಯೂ ಅಸ್ತಿತ್ವವನ್ನು ಪಡೆದಿರದಿದ್ದರೆ ಅವುಗಳಿಂದ ಯಾವ ಇಂದ್ರಿಯಾನುಭವವು ಬರಲು ಸಾಧ್ಯವಿಲ್ಲ. ಅಂದರೆ ಮನಸ್ಸಿನ ರಚನೆ ಮತ್ತು ಕಲ್ಪನೆಗಳಿಂದ ಹೊರತಾಗಿ ಆದರೆ ನಮ್ಮ ಇಂದ್ರಿಯಾನುಭವಗಳಿಗೆ ಮೂಲವಾದ ವಸ್ತು ಬಂದಿರಲೇಬೇಕು, ಎಂದು ಕ್ಯಾಂಟನ ದೃಢನಂಬಿಕೆ. ಒಂದು ವಸ್ತುವನ್ನು, ಅಂದರೆ ಅದರ ನಿಜಸ್ಥಿತಿಯನ್ನು ಪ್ರತ್ಯಕ್ಷವಾಗಿಯಾಗಲಿ, ವಿಚಾರದ ಮೂಲಕವಾಗಲಿ ತಿಳಿಯಲಾಗುವುದಿಲ್ಲ ಎಂದ ಮಾತ್ರಕ್ಕೆ ಆ ವಸ್ತು ಅಸ್ತಿತ್ವದಲ್ಲಿಲ್ಲ ಎನ್ನಲಾಗುವುದಿಲ್ಲ. ಸಾಮಾನ್ಯವಾಗಿ ನಮ್ಮ ವಿಚಾರವು ಮಾನಸಿಕ ಕ್ರಿಯೆಗಳನ್ನೆಲ್ಲಾ ಒಟ್ಟುಗೂಡಿಸಿ 'ಆತ್ಮದ ಕಲ್ಪನೆ'ಯನ್ನು ಮಾಡುತ್ತದೆ. ಅಥವಾ ಭೌತಿಕ ವಿಷಯಗಳನ್ನೆಲ್ಲಾ ಒಟ್ಟುಗೂಡಿಸಿ 'ಪ್ರಕೃತಿಯ ಕಲ್ಪನೆ'ಯನ್ನು ಮಾಡುತ್ತದೆ ಅಥವಾ ಈ ಎರಡು ಕಲ್ಪನೆಗಳನ್ನು ಒಟ್ಟುಗೂಡಿಸಿ ಸಾಮಾನ್ಯವಾದ 'ದೇವರ ಕಲ್ಪನೆ'ಯನ್ನು ಮಾಡಬಲ್ಲದು. ಇಲ್ಲಿ ದೇವರ ಕಲ್ಪನೆಯೆ ಅತ್ಯಂತ ಉನ್ನತವಾದುದು, ಏಕೈಕವಾದುದು ಆಗಿದೆ. ಆದರೆ ಈ ಕಲ್ಪನೆಗಳಾವುದನ್ನು ಇಂದ್ರಿಯಾನುಭವಗಳ ಸಹಾಯದಿಂದ ತಿಳಿಯಲು ಸಾಧ್ಯವಿಲ್ಲ. ಇಷ್ಟಾದರೂ ಈ ಕಲ್ಪನೆಗಳು ಅತ್ಯಂತ ಮೌಲ್ಯವುಳ್ಳವಾಗಿದ್ದು ನಮ್ಮ ಸಾಮಾನ್ಯ ತಿಳುವಳಿಕೆಗೆ ಮಾರ್ಗದರ್ಶಿಗಳಾಗಿವೆ.

ಇಂತಹ ಕಲ್ಪನೆಗಳ ಪ್ರಯೋಜನವನ್ನು ನಾವು ನೈತಿಕ ಕ್ಷೇತ್ರದಲ್ಲಿ ಬಹಳ ಸ್ಪಷ್ಟವಾಗಿ ಕಾಣಬಹುದು. ನೀತಿಶಾಸ್ತ್ರವು ವ್ಯಕ್ತಿಗಳ ನಡತೆಯನ್ನು ಮತ್ತು ಸಮಾಜ ಹಾಗೂ ವ್ಯಕ್ತಿಗಳ ಪರಸ್ಪರ ಸಂಬಂಧವನ್ನು ತಿಳಿಸುತ್ತದೆ. ಅಂತೆಯೆ ನಮ್ಮ ದಿನನಿತ್ಯದ ಜೀವನದಲ್ಲಿ ನಾವು ಅನುಸರಿಸಲೇಬೇಕಾದ ಅಥವಾ ತಪ್ಪಿಸಿಕೊಳ್ಳಲು ಸಾಧ್ಯವೇ ಇಲ್ಲದಂತಹ ಕೆಲವು ಅನುಜ್ಞೆಗಳನ್ನು ಪಾಲಿಸುತ್ತೇವೆ. ಉದಾ: ಸುಳ್ಳು ಹೇಳಬೇಡ, ಕದಿಯಬೇಡ, ದ್ರೋಹಮಾಡಬೇಡ, ಕಷ್ಟದಲ್ಲಿರುವವರಿಗೆ ಸಹಾಯ ಮಾಡು ಇತ್ಯಾದಿ. ಈ ಅನುಜ್ಞೆಗಳು ನಮ್ಮನ್ನು ಕರ್ತವ್ಯಪರರಾಗಿರುವಂತೆ ಮಾಡುತ್ತವೆ. ಇವುಗಳು ಎಷ್ಟೊಂದು ಶಕ್ತಿಶಾಲಿಯಾಗಿವೆ ಎಂದರೆ ಅವುಗಳಿಂದ ನಾವು ತಪ್ಪಿಸಿಕೊಳ್ಳಲು ಸಾಧ್ಯವೇ ಇಲ್ಲ ಎಂಬ ಭಾವನೆ ನಮ್ಮಲ್ಲಿ ಬೇರೂರಿದೆ. ಒಂದು ವೇಳೆ ಯಾವುದೋ ಬಲಾತ್ಕಾರಕ್ಕೊಳಗಾಗಿ ಪ್ರೇರಣೆಗಳೊಳಗಾಗಿ ಅಥವಾ

ತಪ್ಪು ವಿಚಾರದಿಂದಾಗಿ ನಾವು ಮಾಡಬಾರದೆಂಬ ಕೆಲಸವನ್ನು ಮಾಡಿದರೆ ಆ ನಂತರದಲ್ಲಿ ನಮ್ಮ ಕೃತ್ಯದ ಬಗ್ಗೆ ನಮ್ಮಲ್ಲಿ ಪಶ್ಚಾತ್ತಾಪವುಂಟಾಗಿ ಪರಿತಪಿಸುತ್ತೇವೆ. ನಮ್ಮ ತಪ್ಪಿನ ಅರಿವು ನಮ್ಮನ್ನು ಜೀವನದುದ್ದಕ್ಕೂ ಪರಿತಪಿಸುವಂತೆ ಮಾಡುವುದಲ್ಲದೆ ನಮಗೆ ಕ್ಷಮೆ ಸಿಗುವವರೆಗೂ ಮನಶ್ಶಾಂತಿ ಇಲ್ಲದಂತೆ ಮಾಡುತ್ತದೆ. ನಾವು ಮಾಡಿದ ತಪ್ಪುಗಳು ನಮ್ಮ ಜೀವನದುದ್ದಕ್ಕೂ ಹೊರೆಯಾಗಿರುವಂತೆ ಭಾಸವಾಗುತ್ತದೆ. ಹೀಗೆ ನೈತಿಕ ಅನುಜ್ಞೆಗಳು ನಮ್ಮ ಮೇಲೆ 'ನಿರಪೇಕ್ಷ ಆಜ್ಞೆ'ಗಳಂತೆ ವರ್ತಿಸುತ್ತವೆ.

ಅನುಜ್ಞೆಗಳು ಸಾಪೇಕ್ಷ ಮತ್ತು ನಿರಪೇಕ್ಷಗಳೆಂಬ ಎರಡು ವಿಧಗಳಲ್ಲಿರುತ್ತವೆ. ಸಾಪೇಕ್ಷ ಅನುಜ್ಞೆಗಳು ವ್ಯಕ್ತಿಯನ್ನು ಬಲಾತ್ಕರಿಸದೇ ಒಂದು ಕೆಲಸವನ್ನು ಮಾಡುವಂತೆ ಪ್ರೇರಣೆಯನ್ನು ಮಾತ್ರ ಕೊಡುತ್ತದೆ. ಉದಾ: ನೀವು ಇತರರ ಸಂಕಷ್ಟದಲ್ಲಿರುವಾಗ ಅವರು ನಿಮಗೆ ಸಹಾಯಮಾಡಬಹುದು. ಆದರೆ ನಿರಪೇಕ್ಷ ಅನುಜ್ಞೆಗಳಲ್ಲಿ ಮಾಡಲೇಬೇಕು ಅಥವಾ ಮಾಡಲೇಬಾರದು ಎಂಬ ಕರ್ತವ್ಯರೂಪದ ಬಲಾತ್ಕಾರವಿರುತ್ತದೆ. ಸಾಮಾನ್ಯವಾಗಿ ನೈತಿಕ ನಿಯಮಗಳೆಲ್ಲವೂ ನಿರಪೇಕ್ಷ ಅನುಜ್ಞೆಗಳಾಗಿದೆ. ನಿನ್ನ ಕರ್ತವ್ಯಗಳನ್ನು ಕರ್ತವ್ಯದ ಸಲುವಾಗಿ ಮಾಡು ಎಂಬ ಅನುಜ್ಞೆಯು ಒಂದು ರೀತಿಯ ನಿರಪೇಕ್ಷ ಅನುಜ್ಞೆಯಾಗಿದೆ. ಇದನ್ನು ಸಂಪೂರ್ಣವಾಗಿ ಅಂಗೀಕರಿಸಿದ ಕ್ಯಾಂಟ್ ನಮ್ಮ ಕರ್ತವ್ಯವನ್ನು ಯಾವ ಭಯದಿಂದಾಗಲೀ, ಫಲಾಪೇಕ್ಷೆಯಿಂದಾಗಲೀ ಮಾಡದೇ ಕರ್ತವ್ಯಕ್ಕೋಸ್ಕರವೇ ಮಾಡಬೇಕೆನ್ನುತ್ತಾನೆ. ಇಂತಹ ನೈತಿಕ ಜೀವನವೇ ಸದ್ಗುಣಭರಿತ ಹಾಗೂ ಸಂತುಷ್ಟ ಜೀವನ ಎನ್ನುತ್ತಾನೆ.

ಆದರೆ ನೀತಿಗೂ, ಸಂತುಷ್ಟಿಗೂ ಇರುವ ಸಂಬಂಧವನ್ನು ಇಂದ್ರಿಯ ಜ್ಞಾನವು ತಿಳಿಸಲಾರದು. ಇಷ್ಟು ಮಾತ್ರವಲ್ಲದೆ ಇಂದ್ರಿಯಾನುಭವ ಪ್ರಧಾನವಾಗಿರುವ ಈ ಪ್ರಪಂಚದಲ್ಲಿ ಫಲಯುಕ್ತ ಅನುಜ್ಞೆಗಳು ಹುಟ್ಟಲು ಸಾಧ್ಯವಿಲ್ಲ, ಆದುದರಿಂದ ನೈತಿಕ ನಿಯಮಗಳ ಆಧಾರವಾಗಿ ಈ ಇಹಪರ ಪ್ರಪಂಚದಿಂದ ಭಿನ್ನವಾದ ಬೇರೊಂದು ಮೂಲವನ್ನು ಒಪ್ಪಲೇಬೇಕು. ಈ ಮೂಲವು ಸರ್ವಶಕ್ತನೂ, ನಿತ್ಯನೂ ಆದ ದೇವರೇ ಆಗಿರಬೇಕು. ಇಡೀ ವಿಶ್ವವೇ ನೈತಿಕ ವಿಶ್ವವಾಗಿದ್ದು ಅದರಲ್ಲಿ ಅಡಗಿರುವ ಸತ್ಯವು ಮಾನವನಿಗೆ ಮಾರ್ಗದರ್ಶಿಯಾಗಿರಬೇಕು. ನಾವು ಸಂಪ್ರದಾಯಗಳಿಂದು ಒಪ್ಪಿರುವ ನೀತಿ ನಿಯಮಗಳು ಈ ಸತ್ಯದ ಮೂಲವನ್ನೇ ಪಡೆದಿರಬೇಕು. ಒಬ್ಬ ವ್ಯಕ್ತಿಯಲ್ಲಿ ಈ ಸತ್ಯದ ಸ್ಥಾನ ಆತನ ಆತ್ಮಸಾಕ್ಷಿಯಲ್ಲಿ ಅಡಗಿದೆ. ಆದುದರಿಂದಲೇ ಆತ್ಮಸಾಕ್ಷಿಯು ಈ 'ಕೆಲಸವನ್ನು ಮಾಡು', 'ಇದನ್ನು ಮಾಡಬೇಡ' ಎಂಬ ಆಜ್ಞಾಪೂರಕವಾದ ಆದೇಶವನ್ನು ನೀಡುವ ಕೇಂದ್ರವಾಗಿದೆ. ಈ ಆತ್ಮಸಾಕ್ಷಿಯನ್ನು ಕ್ಯಾಂಟ್ ನಮ್ಮ ಆತ್ಮದೊಳಗೆ ದೇವರೇ ಉಸುರುವ ಮೃದುವಾಣಿಯಾಗಿದೆ ಎನ್ನುತ್ತಾನೆ.

ಕ್ಯಾಂಟ್ ಪ್ರತಿಪಾದಿಸುವಂತೆ ನೀತಿಶಾಸ್ತ್ರದಲ್ಲಿ 3 ಗೃಹೀತ ತತ್ವಗಳಿವೆ. ಅವುಗಳು :

(1) ವ್ಯಕ್ತಿಯ ಇಚ್ಛಾ ಸ್ವಾತಂತ್ರ್ಯ
(2) ಆತ್ಮದ ಅಮರತ್ವ
(3) ದೇವರ ಇರುವಿಕೆ

ಕ್ಯಾಂಟ್ ಇವುಗಳನ್ನು ವಿಚಾರದ 3 ಕಲ್ಪನೆಗಳೆಂದು ಕರೆದಿದ್ದಾನೆ. ಇಲ್ಲಿ ವಿಚಾರ ಎಂಬ ಪದವು ಮಾನಸಿಕ ಕ್ರಿಯೆಗೆ ಅನ್ವಯವಾದರೆ, ವ್ಯಕ್ತಿಯ ನಿಜ ಜೀವನಕ್ಕೆ ಅಥವಾ ನೈತಿಕ ಜೀವನಕ್ಕೆ ಅನ್ವಯವಾಗಿದೆ. ಅವನ ಪ್ರಕಾರ ಈ 3 ತತ್ವಗಳು ನೈಜ ಜೀವನದ ಸ್ವಯಂಸಿದ್ಧ ತತ್ವಗಳಾಗಿವೆ. ವಿಚಾರದ ಕ್ಷೇತ್ರದಲ್ಲಿ 'ಗೃಹೀತ ತತ್ವಗಳು' ಯಾವ ಪಾತ್ರವನ್ನು ವಹಿಸುತ್ತವೋ ಅಷ್ಟೇ ಪ್ರಾಮುಖ್ಯಪಾತ್ರವನ್ನು ನೈತಿಕ ಕ್ಷೇತ್ರದಲ್ಲಿ ಈ 3 ತತ್ವಗಳು ವಹಿಸುತ್ತವೆ. ಇವುಗಳನ್ನು ಶುದ್ಧ ವಿಚಾರ ದಿಂದಾಗಲೀ ಇಂದ್ರಿಯಾನುಭವದಿಂದಾಗಲಿ ಸಾಧಿಸಲು ಅಸಾಧ್ಯವಾದುದರಿಂದ ಇವುಗಳನ್ನು ನಂಬಿಕೆಯ ಅಥವಾ ವಿಶ್ವಾಸದ ಆಧಾರದಿಂದಲೇ ಒಪ್ಪಬೇಕಾಗಿದೆ.

ವ್ಯಕ್ತಿಯು ಇಚ್ಛಾ ಸ್ವಾತಂತ್ರ್ಯವನ್ನು ಹೊಂದಿರದಿದ್ದರೆ ಆತನು ಕರ್ತವ್ಯ ನಿಷ್ಠನಾಗಲು ಸಾಧ್ಯವಿಲ್ಲ. ನೈತಿಕ ಅನುಜ್ಞೆಗಳು ಅವನನ್ನು ಯಾವ ಕೆಲಸ ಮಾಡ ಬೇಕು, ಯಾವುದನ್ನು ಮಾಡಬಾರದು ಎಂದು ನಿರ್ದೇಶಿಸಿದ್ದರೂ ಆತನಿಗೆ ಆಯ್ಕೆಯ ಸ್ವಾತಂತ್ರ್ಯವಿರಬೇಕು, ಇಲ್ಲದಿದ್ದರೆ ಆತನ ಕೆಲಸಕಾರ್ಯಗಳಲ್ಲಿ ಯಾವುದು ಸರಿ, ಯಾವುದು ತಪ್ಪು ಎಂದು ನಿರ್ಧರಿಸಲು ಸಾಧ್ಯವಿಲ್ಲ. ಆತನ ಇಚ್ಛೆ ಮತ್ತು ಜೀವನವು ಮೊದಲೇ ನಿರ್ಧರಿಸಲ್ಪಟ್ಟಿದ್ದರೆ 'ಆತನ ಕೆಲಸಕಾರ್ಯ'ಗಳು ಎನ್ನುವ ಮಾತು ಅರ್ಥರಹಿತವಾಗುತ್ತದೆ. ಯಾವುದೇ ಪೂರ್ವನಿರ್ಧಾರಕ್ಕೆ ಆತನು ಒಳಗಾದರೆ ತಾನು ಮಾಡಿದ ಕೆಲಸಕ್ಕೆ ಅವನು ಹೊಣೆಯಾಗಲಾರ, ಅವನ ಜೀವನ ಪೂರ್ವ ನಿರ್ಧಾರಿತವಾಗಿದ್ದರೆ ಅಲ್ಲಿ ಅವನು ಕೇವಲ ಒಂದು ಉಪಕರಣವಾಗುತ್ತಾನೆ. ಅಲ್ಲದೇ ಅವನಾಗಿಯೇ ಯಾವ ಕೆಲಸವನ್ನು ಮಾಡಿದಂತಾಗುವುದಿಲ್ಲ. ಆದುದರಿಂದಲೇ ಕ್ಯಾಂಟ್ ನೈತಿಕ ನಿಯಮಗಳನ್ನು ಅಂಗೀಕರಿಸಿದರೂ ಅವುಗಳನ್ನು ಪಾಲಿಸುವಲ್ಲಿ ವ್ಯಕ್ತಿಗೆ ಇಚ್ಛಾ ಸ್ವಾತಂತ್ರ್ಯವಿರಬೇಕು ಎನ್ನುತ್ತಾನೆ. ವ್ಯಕ್ತಿಯು ಕೆಲಸಕಾರ್ಯಗಳಿಗೆ ತಾನೇ ಜವಾಬ್ದಾರನಾಗಿದ್ದು ಅವುಗಳ ಪರಿಣಾಮವನ್ನು ತಾನೇ ಅನುಭವಿಸ ಬೇಕಾದರೆ ಆತನಲ್ಲಿ ಇಚ್ಛಾ ಸ್ವಾತಂತ್ರ್ಯ ಮತ್ತು ಕ್ರಿಯಾಸ್ವಾತಂತ್ರ್ಯವಿರಲೇಬೇಕು.

ವ್ಯಕ್ತಿಯು ಇಚ್ಛಾಸ್ವಾತಂತ್ರ್ಯವನ್ನು ಪಡೆದಿದ್ದರೂ ಆತನು ನೈತಿಕ ನಿಯಮ ಗಳನ್ನು ಪಾಲಿಸಲೇಬೇಕಾದ ಅನುಜ್ಞೆಗೆ ಒಳಗಾಗಿರುತ್ತಾನೆ. ಆತನ ಪ್ರತಿಯೊಂದು ಕೆಲಸವು ಅದಕ್ಕನುಗುಣವಾದ ಪ್ರತಿಫಲವನ್ನು ನೀಡುವುದು ಸರ್ವವಿದಿತ. ನೈತಿಕ ಅನುಜ್ಞೆಗಳಿಗನುಸಾರವಾಗಿ ನಡೆದರೆ ಆತ ಅದರ ಫಲವಾಗಿ ಸುಖಸಂತುಷ್ಟಿಗಳನ್ನು

ಪಡೆಯಲೇಬೇಕು. ಆದರೆ ಈ ಪ್ರಪಂಚದ ಆಗುಹೋಗುಗಳನ್ನು ಪರಿಶೀಲಿಸಿದರೆ ಸದ್ಗುಣಿಗಳು ಮತ್ತು ಕರ್ತವ್ಯಪಾಲಕರು ತಮ್ಮ ಕಾರ್ಯಗಳ ಪ್ರತಿಫಲವನ್ನು ಅರ್ಹವಾಗಿ ಅಥವಾ ಸಂಪೂರ್ಣವಾಗಿ ಪಡೆಯುವುದು ಕಂಡುಬರುವುದಿಲ್ಲ. ಎಷ್ಟೋ ವೇಳೆ ಸದ್ಗುಣಿಗಳು ಸಂಕಷ್ಟಗಳನ್ನನ್ನುಭವಿಸುವುದು, ದುರ್ಗುಣಿಗಳು ಸುಖಸಂತೋಷ ಗಳನ್ನು ಅನುಭವಿಸುತ್ತಿರುವುದು ಈ ಪ್ರಪಂಚದ ಒಂದು ವಿಚಿತ್ರ ಸತ್ಯವಾಗಿದೆ. ಹಾಗಾದರೆ ನಿಜವಾದ ಸದ್ಗುಣಿಗಳು ತಮ್ಮ ಸದ್ಗುಣದ ಪ್ರತಿಫಲವನ್ನು ಅಥವಾ ದುರ್ಗುಣಿಗಳು ತಮ್ಮ ಕೃತ್ಯದ ಅರ್ಹ ಪರಿಣಾಮವನ್ನು ಎಲ್ಲಿ ಪಡೆಯಬೇಕು? ಕಾರ್ಯವು ಅದಕ್ಕೆ ತಕ್ಕ ಪ್ರತಿಫಲವನ್ನು ನೀಡಬೇಕಿದ್ದು ಸದ್ಗುಣವು ಈ ನಿಯಮಕ್ಕೆ ಅಪವಾದವಲ್ಲ. ಸದ್ಗುಣಿಗಳು ಅಥವಾ ದುರ್ಗುಣಿಗಳು ಈ ಪ್ರಪಂಚದಲ್ಲಿ ತಮ್ಮ ಶರೀರವಿರುವವರೆಗೆ ತಮ್ಮ ಕಾರ್ಯಕ್ಕನುಗುಣವಾದ ಪ್ರತಿಫಲವನ್ನು ಅನುಭವಿಸದಿದ್ದರೆ ಬೇರೆ ಕಡೆಯಾದರೂ ಅದನ್ನವರು ಪಡೆಯಲೇಬೇಕು. ವ್ಯಕ್ತಿಯ ಕೃತ್ಯದ ಪ್ರತಿ ಫಲವನ್ನು ಆತನ ಶರೀರ ಅನುಭವಿಸಲಾರದು. ಮಾತ್ರವಲ್ಲದೇ ಶರೀರವು ನಶ್ವರ ವಾದುದರಿಂದ ಅದು ಸಾವಿನೊಡನೆ ಇಹ ಪ್ರಪಂಚದಲ್ಲೇ ಉಳಿಯುತ್ತದೆ. ಹೀಗಿದ್ದೂ ಪ್ರತಿಯೊಬ್ಬನೂ ತನ್ನ ಕೃತ್ಯದ ಪರಿಣಾಮವನ್ನು ಅನುಭವಿಸಬೇಕಾದರೆ ಆತನ ಆತ್ಮ ಅಮರವಾಗಿ ಉಳಿಯಲೇಬೇಕು. ಹಾಗಾದರೆ ಮಾತ್ರ ತನ್ನ ಕರ್ಮದ ಫಲವನ್ನು ಈ ಲೋಕದಲ್ಲಿ ತಪ್ಪಿದರೆ ಬೇರೆ ಕಡೆಯಾದರೂ ಅನುಭವಿಸಲು ಆತ್ಮ ಉಳಿಯಬೇಕು. ಆದುದರಿಂದ ಆತ್ಮವು ಅಮರ.

ವ್ಯಕ್ತಿಯು ಪಾಲಿಸಬೇಕಾದ ನೈತಿಕ ನಿಯಮಗಳು ಆಜ್ಞಾರ್ಥಗಳಂತೆ ಆತನ ಮೇಲೆ ಪ್ರಭಾವವನ್ನು ಬೀರಬೇಕಾದರೆ ಅದರ ಮೂಲವು ಅತ್ಯಂತ ಶಕ್ತಿಯುತವಾಗಿರ ಬೇಕು. ಅಂತಹ ಶಕ್ತಿ ಈ ಪ್ರಪಂಚದಲ್ಲಿ (ಮಾನವನು ಸೇರಿದಂತೆ) ಎಲ್ಲೂ ಕಂಡು ಬಾರದಿರುವುದರಿಂದ ಆ ಮೂಲ ದೇವರೇ ಆಗಿರಬೇಕು. ವ್ಯಕ್ತಿಗೆ ಇಚ್ಛಾಸ್ವಾತಂತ್ರ್ಯ ವಿದ್ದರೂ ಆತನು ನೈತಿಕ ನಿಯಮಗಳನ್ನು ಪಾಲಿಸಲೇಬೇಕೆಂಬ ಅನುಜ್ಞೆಯನ್ನು ದೇವರಿಂದಲ್ಲದೇ ಮತ್ತಾರಿಂದಲೂ ಹೇರಲು ಸಾಧ್ಯವಿಲ್ಲ.

ಎರಡನೆಯದಾಗಿ ಆತ್ಮವು ತನ್ನ ಕಾರ್ಯದ ಪ್ರತಿಫಲವನ್ನು ಪಡೆಯಬೇಕಾದರೆ ಅದರ ಕೆಲಸಕಾರ್ಯಗಳನ್ನು ಗಣನೆಯಲ್ಲಿಟ್ಟು ತಕ್ಕುದಾದ ಪರಿಣಾಮವನ್ನು ನೀಡುವ ಶಕ್ತಿಯೊಂದಿಲ್ಲದಿದ್ದರೆ ಈ ಕರ್ಮಸಿದ್ಧಾಂತ ಸಂಪೂರ್ಣವಾಗಲಾರದು. ವ್ಯಕ್ತಿಯ ಉತ್ತಮ ಅಥವಾ ಕೆಟ್ಟ ಕೆಲಸಗಳಿಗೆ ಅನುಗುಣವಾಗಿ ನ್ಯಾಯವಾದ ತೀರ್ಪನ್ನು ಕೊಡುವ ನ್ಯಾಯಾಧೀಶನೇ ದೇವರು. ವ್ಯಕ್ತಿಗೆ ನಿಷ್ಪಕ್ಷಪಾತ ನ್ಯಾಯ ದೊರಕ ಬೇಕಾದರೆ ಇಂತಹ ಒಂದು ಶಕ್ತಿಯ ಅವಶ್ಯಕತೆ ಇದೆ. ನ್ಯಾಯವಾದ ತೀರ್ಪನ್ನು ಕೊಡುವ ಈ ಶಕ್ತಿಯೊಂದಿಲ್ಲದಿದ್ದರೆ ಸದ್ಗುಣಿಗೆ ಪರಲೋಕದಲ್ಲಿಯೂ ತನ್ನ ಸದ್ಗುಣದ ಪ್ರತಿಫಲ ದೊರಕುವುದು ಅನಿಶ್ಚಿತವಾಗುತ್ತದೆ. ಆದುದರಿಂದ ನಿಷ್ಪಕ್ಷಪಾತಿಯಾದ ದೇವರು ಇರಲೇಬೇಕು. ಆದರೆ ಈ ನ್ಯಾಯಮೂರ್ತಿ ಒಬ್ಬನಲ್ಲದೆ ಹಲವರಿಲ್ಲ.

ಆತನು ಪರಿಪೂರ್ಣನೂ, ವಿವೇಕಿಯೂ, ಸರ್ವಜ್ಞನೂ, ಸರ್ವಾಂತರ್ಯಾಮಿಯೂ ಆಗಿದ್ದು ಎಲ್ಲಾ ಆಗುಹೋಗುಗಳನ್ನು ಅರಿತವನಾದುದರಿಂದ ನ್ಯಾಯ ನೀಡಲು ಆತನೊಬ್ಬನೇ ಸಮರ್ಥ.

ನೀತಿಶಾಸ್ತ್ರಕ್ಕೆ ಪ್ರಾಮುಖ್ಯಸ್ಥಾನವನ್ನು ಕೊಟ್ಟ ಕ್ಯಾಂಟ್ 'ಕರ್ತವ್ಯವನ್ನು ಕರ್ತವ್ಯಕ್ಕೋಸ್ಕರ ಮಾಡು' ಎಂಬ ಮಾತನ್ನು ಅಂಗೀಕರಿಸಿದ್ದನು. ಒಂದು ಕೆಲಸವನ್ನು ನೀನು ಮಾಡಲೇಬೇಕು. ಏಕೆಂದರೆ ಅದು ನಿನ್ನ ಕರ್ತವ್ಯ. ಈ ಅಂಶವನ್ನು ಪ್ರತಿಯೊಬ್ಬರೂ ಗಮನಿಸಬೇಕಾದದ್ದು ಅವಶ್ಯಕ. ಇಂತಹ ಅನುಜ್ಞೆಗಳು ಎಲ್ಲರಿಗೂ ತಿಳಿಯದೇ ಇರಬಹುದಾದರೂ ಜನಸಾಮಾನ್ಯರು ಕೂಡ ಅವುಗಳನ್ನು ಪ್ರಶ್ನಿಸದೇ ಒಪ್ಪಿಕೊಳ್ಳುವಂತಿದೆ, ನೈತಿಕ ನಿರ್ಣಯಗಳನ್ನು ನಿರ್ಧರಿಸುವ ಅನುಜ್ಞೆಗಳು ವ್ಯಕ್ತಿಯ ನಡತೆಯ ಒಳಿತು ಕೆಡುಕುಗಳನ್ನು ಪರೀಕ್ಷಿಸುತ್ತದೆ. ಮಾನವೀಯತೆಯ ಪ್ರಮುಖ ತತ್ವವಾದ "ಬೇರೆಯವರು ನಿನಗೆ ಏನುಮಾಡಬಾರದೆಂದು ಆಶಿಸುವೆಯೋ ಅದನ್ನು ನೀನು ಬೇರೆಯವರಿಗೆ ಮಾಡಬೇಡ" ಎಂಬ ಮಾತನ್ನು ಕ್ಯಾಂಟ್ ತನ್ನ ನೀತಿಶಾಸ್ತ್ರದ ಒಂದು ಪ್ರಧಾನಭಾಗವೆಂದು ಪರಿಗಣಿಸಿದ್ದಾನೆ. ಈ ಹೇಳಿಕೆಯಂತೆ ನಾವು ಮತ್ತೊಬ್ಬ ವ್ಯಕ್ತಿಯನ್ನು ನಮ್ಮ ಸಂತುಷ್ಟಿಯ ಸಾಧನವೆಂದು ಪರಿಗಣಿಸದೆ ಅವನು ಒಬ್ಬ ಸಂಪೂರ್ಣ ವ್ಯಕ್ತಿ ಎಂದು ಭಾವಿಸಬೇಕಾಗಿದೆ. ಇಂತಹ ವಿವೇಕಯುತವಾದ ನಿಯಮವನ್ನು ಸಮಾಜದಲ್ಲಿ ಪ್ರತಿಯೊಬ್ಬರೂ ಪಾಲಿಸಿದರೆ ಆ ಸಮಾಜವು ವಿಚಾರಯುಕ್ತವಾದ ಪರಿಪೂರ್ಣ ಸಮಾಜವಾಗುತ್ತದೆ. ಇಂತಹ ಸಮಾಜದಲ್ಲಿ ಮಾನವನು ತನ್ನ ನಿಜವಾದ ಸ್ವಾತಂತ್ರ್ಯ ಮತ್ತು ವ್ಯಕ್ತಿತ್ವವನ್ನು ಕಾಣುತ್ತಾನೆ. ನಮ್ಮ ಕೆಲಸಕಾರ್ಯಗಳಲ್ಲಿ ಸ್ವಾರ್ಥಪೂರ್ಣ ಆಸೆ ಆಕಾಂಕ್ಷೆಗಳಿಗೆ ದಾರಿಮಾಡಿಕೊಡದೆ ನೈತಿಕ ಅನುಜ್ಞೆಗಳ ಮಾರ್ಗದರ್ಶನವನ್ನು ಪಡೆಯುವುದೇ ಸೂಕ್ತಮಾರ್ಗ. ಯಾವ ವ್ಯಕ್ತಿ ಕೀಳುಮಟ್ಟದ ಸ್ವಾರ್ಥ ಮತ್ತು ಆಸೆ ಆಕಾಂಕ್ಷೆಗಳಿಗೆ ಗುಲಾಮನಾಗುವನೋ ಆತನು ಅವಿವೇಕಿಯೂ, ಅಸ್ವಾತಂತ್ರ್ಯನೂ ಆಗುತ್ತಾನೆ. ಒಬ್ಬ ವ್ಯಕ್ತಿಯು ತನ್ನ ಜೀವನದ ಪರಿಪೂರ್ಣತೆಯನ್ನು ಸಫಲತೆಯನ್ನು ಪಡೆಯಬೇಕಾದರೆ ನೀತಿಮಾರ್ಗದಿಂದಲೇ ನಡೆಯಬೇಕು.

ಬಾ. ರಾ. ಗೋಪಾಲ್

ಪ್ರಾಚೀನ ಭಾರತದಲ್ಲಿ ವೃಕ್ಷ ಸಂರಕ್ಷಣೆ

ವನಖಂಡಗಳಿಂಗ ಕೂಡಿದ, ಒಬ್ಬನ ಯಜಮಾನ್ಯಕ್ಕೆ ಅಥವಾ ಆಡಳಿತಕ್ಕೆ ಸೇರಿರುವ ಪ್ರದೇಶವನ್ನು ಅರಣ್ಯವೆಂದು ಕರೆಯಲಾಗಿದೆ. ಮನುಷ್ಯ ಜೀವನಕ್ಕೆ ಅವಶ್ಯವಾದ ಸೌದೆ, ದಿಮ್ಮಿ ಮರಮುಟ್ಟುಗಳನ್ನು ಅರಣ್ಯ ಒದಗಿಸುತ್ತದೆ. ಮನುಷ್ಯನಿಗೆ ಆಹಾರ ಆನಂದ ಒದಗಿಸುವ ನಿಸರ್ಗದ ಸಮತೋಲನವನ್ನು ಕಾಪಾಡುವ, ಮಣ್ಣಿನ ಫಲವಂತಿಕೆಯನ್ನು ಉಳಿಸುವ ಇಂತಹ ಹಲವಾರು ಪ್ರಯೋಜನಗಳನ್ನು ಪಡೆದಿರುವ ಅರಣ್ಯದ ಬಗೆಗೆ ಪ್ರಾಚೀನ ಭಾರತದಲ್ಲಿ ವಿಶೇಷವಾದ ಗೌರವವಿದ್ದುದನ್ನು ಕಾಣುತ್ತೇವೆ. ವೇದಗಳ ಕಾಲದಲ್ಲಿ ಋಷಿಗಳು ತಪೋವನಗಳಲ್ಲಿ ನೆಲಸಿ ತಪಸ್ಸ್ವಾಧ್ಯಾಯಗಳಲ್ಲಿ, ಅಧ್ಯಯನ ಅಧ್ಯಾಪನಗಳಲ್ಲಿ ನಿರತರಾಗಿರುತ್ತಿದ್ದರು. ಅವರ ವಾಸಸ್ಥಾನಗಳು ಬಿದಿರಿನ ತಡಿಕೆಗಳಿಂದ, ಮರಮುಟ್ಟುಗಳಿಂದ ತಯಾರಾಗುತ್ತಿದ್ದುವು. ಯಜ್ಞಯಾಗಾದಿಗಳಿಗೆ ದೈನಂದಿನ ಅಗ್ನಿಕಾರ್ಯಗಳಿಗೆ ಕುಶ-ದರ್ಭೆಗಳ ಅವಶ್ಯಕತೆ ಇತ್ತು. ಅಲ್ಲದೆ ಔಷಧಿಗಳ, ತಯಾರಿಕೆಗೂ ಮರ-ಬಳ್ಳಿಗಳು ಬೇಕಿದ್ದುವು. ಆದುದರಿಂದ ಅವುಗಳ ಸಂರಕ್ಷಣೆ, ಬೆಳೆಸುವಿಕೆ ಪವಿತ್ರವಾದ ಕೆಲಸವೆಂದೇ ಭಾವಿಸಲಾಗಿತ್ತು.

ಋಗ್ವೇದ ಸಂಹಿತೆಯಲ್ಲಿ ಅರಣ್ಯ ಸೂಕ್ತದ 6 ಋಕ್ಕುಗಳ ಒಂದು ಭಾಗವಿದೆ. ಅದು ಹೀಗಿದೆ :

ಅರಣ್ಯಾನ್ಯರಣ್ಯಾನಸೌ ಯಾ ಪ್ರೇವನಶ್ಯತಿ
ಕಥಾಗ್ರಾಮಂ ನ ಪೃಚ್ಛಸಿ ನತ್ವಾ ಭೀರವ ವಿಂದತೀ ॥
ವೃಷಾರವಾಯ ವದತೇ ಯದುಪಾವತಿ ಚಚ್ಚಿಕಃ
ಆದ್ಯರಿಭಿರಿವ ಧಾವಯನ್ನರಣ್ಯಾನಿ ಮಹೀಯತೇ ॥
ಉತಗಾವ ಇವಾದ್ಯುತ ವೇಶ್ಮೇವ ದೃಶ್ಯತೇ
ಉತೋಅರಣ್ಯಾನಿಃ ಸಾಯಂ ಶಕಟೀರಿವ ಸರ್ಜತಿ ॥
ಗಾಮಂಜೈಷ ಆಹ್ವಯತಿ ದಾರ್ವಜ್ಞೇಷೋ ಉಪಾವಧೀತ್
ವಸನ್ನರಣ್ಯಾನ್ಯಾಂ ಸಾಯಮ ಕ್ರುಕ್ಷದಿತಿ ಮನ್ಯತೇ ॥

ನವಾ ಅರಣ್ಯಾನಿರ್ಹನ್ತ್ಯನ್ಯ ಶ್ಚೇನ್ನಾಭಿಗಚ್ಛತಿ
ಸ್ವಾದೋಃ ಫಲಸ್ಯ ಜಗ್ಧ್ವಾಯ ಯಥಾಕಾಮಂ ನಿಪದ್ಯತೇ ॥
ಆಞ್ಜನ ಗಂಧಿಂ ಸುರಭಿಂ ಬಹ್ವನ್ನಾಮ ಕೃಷೀವಲಾಮ್
ಪ್ರಾಹಂ ಮೃಗಾಣಾಂ ಮಾತರಮ್ ಅರಣ್ಯಾನಿಮ ಶಂಸಿಷಮ್ ॥

ಐರಮ್ಮದ ಎಂಬ ದೇವಮುನಿಯು ಅರಣ್ಯವನ್ನು ಸ್ತುತಿಸಿರುವ ಸೂಕ್ತ ಇದು. ಇಲ್ಲಿ ಅರಣ್ಯಾನೀ ಎಂದು ಅರಣ್ಯವನ್ನೇ ದೇವತೆಯಾಗಿ ಸಂಬೋಧಿಸಿದೆ. ನೀನು ನಮ್ಮ ರಕ್ಷಣೆಗಾಗಿ ಬಂದಿರುವೆ. ಏಕಾಂತದಲ್ಲಿರುವ ನೀನು ಯಾರಿಗೂ ಗೋಚರಿಸುತ್ತಿಲ್ಲ. ಜನಸಂಪರ್ಕವಿಲ್ಲದ ನಿನಗೆ ಯಾವ ಭಯವೂ ಇಲ್ಲವೇ ಎಂದು ಕೇಳಿ ಅರಣ್ಯದ ಒಂದು ಸುಂದರ ಚಿತ್ರಣವನ್ನು ಇನ್ನೊಂದು ಋಕ್ಕಿನಲ್ಲಿ ಕೊಟ್ಟಿದೆ. ಅರಣ್ಯದಲ್ಲಿರುವ ಕೇಳಿಬರುವ ಪ್ರಾಣಿಗಳ ಶಬ್ದವನ್ನು ಋಷಿಯು ಗಾಯಕರ ವೀಣಾವಾದನಕ್ಕೆ ಹೋಲಿಸಿದ್ದಾನೆ. ಚೀಚೀ ಎಂಬ ಶಬ್ದವನ್ನು ಮಾಡುವ ವೃಷಾರವ ಎಂಬ ಜೀರುಂಡೆಯಂತಹ ಪ್ರಾಣಿಯ ಶಬ್ದಕ್ಕೆ ಮತ್ತೊಂದು—ಚಿಚ್ಚಿಕಾ ಎನ್ನಲಾದ ಇನ್ನೊಂದು ಜೀರುಂಡೆ—ಯಾವಾಗ ತಾನೂ ಚೀಚೀ ಎಂದು ಪ್ರತಿಧ್ವನಿಸುವುದೋ ಆವಾಗ ಆ ದೇವತೆ ದೊಡ್ಡ ಬುರುಡೆಗಳ ವೀಣಾವಾದ್ಯಗಳಿಂದ (ಆಘಾಟಿ ಭಿಃ) ನಿಷದಾದಿ ಸಪ್ತ ಸ್ವರಗಳನ್ನು ನುಡಿಸುತ್ತಿರುವಂತಿರುತ್ತದೆ. ಗೋವು ಮುಂತಾದ ಸಾಧು ಮೃಗಗಳು ಅಲ್ಲಿ ಹುಲ್ಲು ಮೇಯುತ್ತಿವೆ. ದೊಡ್ಡ ಲತಾಗುಲ್ಮಾದಿಗಳು–ಗೃಹಗಳಂತೆ ಕಾಣುತ್ತಿವೆ. ಸಾಯಂಕಾಲದಲ್ಲಿ ಸೌದೆ ಮುಂತಾದುವುಗಳಿಂದ ತುಂಬಿದ ಗಾಡಿಗಳನ್ನು ಬಿಚ್ಚಿ ಬಿಟ್ಟಿರುವಂತೆ ತೋರುತ್ತದೆ. ಅರಣ್ಯದಲ್ಲಿ ಒಂದು ಕಡೆ ಗೋಪಾಲನು ಗೋವನ್ನು ಕರೆಯುತ್ತಿದ್ದಾನೆ. ಇನ್ನೊಂದು ಕಡೆ ಇನ್ನೊಬ್ಬ ಸೌದೆಗಾಗಿ ವೃಕ್ಷವನ್ನು ಕಡಿಯುತ್ತಿದ್ದಾನೆ. ಸಂಜೆಯಾದ ಮೇಲೆ ಅರಣ್ಯವಾಸ ಭಯಂಕರ ಎಂದು ಭಾವಿಸಲಾಗಿದೆ. ಆದರೆ ಅರಣ್ಯವು ಯಾರನ್ನೂ ಹಿಂಸಿಸುವುದಿಲ್ಲ. ಹುಲಿ ಮುಂತಾದ ದುಷ್ಟ ಜಂತುಗಳು ಹಾಗೂ ಕಳ್ಳರು ಅಲ್ಲಿ ಹಿಂಸೆಗೆ ಕಾರಣ. ಇವಿಲ್ಲದಿದ್ದರೆ ಸ್ವತಃ ಅರಣ್ಯ ಅಪಾಯಕಾರಿಯಲ್ಲ. ಪ್ರತ್ಯುತ ಅಲ್ಲಿನ ವೃಕ್ಷಗಳಲ್ಲಿರುವ ಸವಿಯಾದ ಹಣ್ಣನ್ನು ತಿಂದು ಇಷ್ಟಬಂದಂತೆ ತಿರುಗಾಡಬಹುದು. ಕಸ್ತೂರಿ ಮುಂತಾದ ಸುಗಂಧ ಪರಿಮಳದಿಂದ ಸುವಾಸನೆ ಬೀರುತ್ತಾ ಪುಷ್ಪಗಳ ಸುರಭಿಯಿಂದ ಘಮಘಮಿಸುತ್ತಾ, ಬೇಸಾಯಗಾರರ ಉಳುಮೆ ಮುಂತಾದ ಕೃಷಿ ಕರ್ಮಗಳಿಂದ ಹೊರತಾಗಿದ್ದರೂ ಫಲವತ್ತಾಗಿದ್ದ ಭಕ್ಷಯೋಗ್ಯವಾದ ನಾನಾವಿಧ ಫಲಮೂಲಗಳಿಂದ ತುಂಬಿರುವ, ಮೃಗಗಳಿಗೆ ಜನನಿಯಂತಿರುವ ಅರಣ್ಯಾನೀ ದೇವತೆಯನ್ನು ನಾನು ಸ್ತುತಿಸುತ್ತೇನೆ ಎಂಬ ಮಾತುಗಳು ಆ ಸೂಕ್ತದ ಅಭಿಪ್ರಾಯ. ಇದರಲ್ಲಿ ಅರಣ್ಯದ ಗಾಢತೆಯ ಪ್ರಯೋಜನಗಳ ಚಿತ್ರಣವಿದೆ. ಅಲ್ಲದೆ ಮರಗಳನ್ನು ಕಡಿದು ಸೌದೆ ಸಾಗಿಸುವವರ ಪ್ರಸ್ತಾಪವೂ ಇದೆ. ಆದರೂ ಗಾಢತೆಯೇ ಇಲ್ಲಿ ವಿಶೇಷ. ಕೃಷಿ ಕರ್ಮಗಳಿಂದ

ಹೊರತಾಗಿದ್ದರೂ ಭೂಮಿ ಫಲವತ್ತಾಗಿದೆ ಎಂಬ ಮಾತನ್ನು ಗಮನಿಸಬೇಕು. ಇದರಿಂದ ಅಂದು ಅರಣ್ಯಗಳನ್ನು ಎಷ್ಟು ಗೌರವದಿಂದ, ಪ್ರೀತಿಯಿಂದ ಕಾಣುತ್ತಿದ್ದರು ಎಂಬುದು ಅರ್ಥವಾಗುತ್ತದೆ.

ಈ ಸಂದರ್ಭದಲ್ಲಿ ರಾಮಾಯಣದಲ್ಲಿನ ಒಂದು ಸನ್ನಿವೇಶ ನೆನಪಿಗೆ ಬರುತ್ತದೆ. ವಸಿಷ್ಠ–ವಿಶ್ವಾಮಿತ್ರರ ನಡುವಣ ಕದನ ಪ್ರಸಂಗವದು. ವಿಶ್ವಾಮಿತ್ರ ಹಲವಾರು ಚೇಷ್ಟೆಗಳಲ್ಲಿ ತೊಡಗಿದ್ದರೂ ವಶಿಷ್ಠ ಬಾಧಿತನಾಗಿರಲಿಲ್ಲ. ಆದರೆ ಆತ ವಸಿಷ್ಠನ ಆಶ್ರಮಕ್ಕೆ ಬಂದು ಅಲ್ಲಿನ ತಪೋವನವನ್ನೇ ಸುಡತೊಡಗಿದಾಗ ವಸಿಷ್ಠನಿಗೆ ಬಹಳ ಕೋಪ ಬರುತ್ತದೆ.

ತತೋಸತ್ವಾಽ ಶ್ರಮ ಪದಂ ಮುಮೋಚಾಸ್ತ್ರಾಣಿ ಪಾರ್ಥಿವಃ
ಯೈಸ್ತತ್ತ ಪೋವನಂ ಸರ್ವಂ ನಿರ್ದಗ್ಧಂ ಚಪ್ರತೇ ಜಸಾ
ವಸಿಷ್ಠಸ್ಯ ಚ ಯೇ ಶಿಷ್ಯಾಃ ತಥೈವ ಮೃಗ ಪಕ್ಷಿಣಃ
ವಿದ್ರುವಂತಿ ಭಯಾದ್ಭೀತಾ ನಾನಾ ದಿಗ್ಭ್ಯಃ ಸಹಶ್ರಸಃ
ವಸಿಷ್ಠ ಸ್ಯಾಶ್ರಮ ನಿಸ್ತರುಗುಲ್ಮ ಮಾಸೀನ್ಮಹಾತ್ಮನಃ

ತಪೋವನವನ್ನೆಲ್ಲಾ ಅಸ್ತ್ರತೇಜಸ್ಸಿನಿಂದ ದಗ್ಧಗೊಳಿಸಿದಾಗ ಅಲ್ಲಿನ ಮೃಗ ಪಕ್ಷಿಗಳು ನಾನಾದಿಕ್ಕುಗಳಿಗೆ ಚದುರಿದುವು. ಆಗ ವಸಿಷ್ಠನಿಗೆ ಕೋಪ ಹೆಚ್ಚಾಗಿ ಈಗ ಗಾಧೇಯನನ್ನು ನಾಶಮಾಡುತ್ತೇನೆ ಎಂದು ನಿರ್ಧರಿಸಿ ವಿಶ್ವಾಮಿತ್ರನನ್ನು ಕುರಿತು

ಆಶ್ರಮಂ ಚಿರಸಂವೃದ್ಧಂ ಯದ್ವಿನಾಶಿತವಾನಸಿ
ದುರಾಚಾರೋಸಿ ತನ್ಮೂಢ ತಸ್ಮಾತ್ವಂ ನ ಭವಿಷ್ಯಸಿ

ಎಂದು ಹೇಳಿ ಬ್ರಹ್ಮದಂಡವನ್ನು ಪ್ರಯೋಗಿಸುತ್ತಾನೆ. ಇಲ್ಲಿ ಗಮನಿಸಬೇಕಾದುದು ವಸಿಷ್ಠರಿಗೆ ತಪೋವನದ ವೃಕ್ಷಗಳ ಕುರಿತಾದ ಕಳಕಳಿ.

ಕಾಳಿದಾಸನ "ರಘುವಂಶ'ದಲ್ಲಿನ ಪ್ರಸಂಗವೊಂದರಲ್ಲಿ ರಘುಕುತ್ಸನನ್ನು ಯೋಗ ಕ್ಷೇಮ ವಿಚಾರಿಸುವಾಗ ಆಶ್ರಮದಲ್ಲಿ ಮಕ್ಕಳನ್ನು ಆರೈಕೆ ಮಾಡುವಂತೆ ಬೆಳಸಿರುವ ತರುಗಳು ಬಾಧೆಗಳಿಲ್ಲದೆ ಚೆನ್ನಾಗಿವೆಯಷ್ಟೆ ಎಂದು ಕೇಳುತ್ತಾನೆ.

ಆಧಾರ ಬಂಧ ಪ್ರಮುಖೈಃ ಪ್ರಯತ್ನೈಃ
ಸಂವರ್ಧಿತಾನಾಮ್ ಸುತ ನಿರ್ವಿಶೇಷಮ್
ಕಚ್ಚಿನ್ನ ವಾಯ್ವಾದಿರು ಪಪ್ಲವೋವಃ
ಶ್ರಮಚ್ಛಿದಾಮಾಶ್ರಮ ಪಾದ ಪಾನಾಮ್

ಪರಮೇಶ್ವರ ಭಟ್ಟರು ಇದನ್ನು ಅನುವಾದ ಮಾಡಿದ್ದಾರೆ. ಅದು ಹೀಗಿದೆ:

ಪಾತೆಗಳ ರಚಿಸುವುದೆ ಮೊದಲಾದ ಯತ್ನದೊಳ
ಮಕ್ಕಳವೊಲಾರೈದು ಬೆಳೆಯಿಸಿರುವ
ಶ್ರಮದ ಪರಿಹರಿಸುತಿರುವಾಶ್ರಮದ ತರುಗಳವು
ಮರುತಾದಿ ಬಾಧೆಗಳ ನಳಿಯುವಲ್ತೆ

'ಅಭಿಜ್ಞಾನ ಶಾಕುಂತಲಾ' ನಾಟಕದಲ್ಲಿ ಶಕುಂತಲೆ ದುಷ್ಯಂತನ ಬಳಿಗೆ ಹೋಗುವಾಗ

ಆಕೆ ಹೋಗುತ್ತಿದ್ದಾಳೆ, ತನಗೆ ಬಾಯಾರಿಕೆಯಾದರೂ ನಿಮ್ಮ ಪಾತಿಗಳಿಗೆ ನೀರುಣಿಸಿ, ತಾನು ಶೃಂಗಾರ ಮಾಡಿಕೊಳ್ಳುವ ಆಸೆ ಇದ್ದರೂ ನೀವು ಪುಷ್ಪಭರಿತವಾಗಿರುವ ಉತ್ಸವವನ್ನು ನೋಡಿ ಸುಖಿಸುವ ಈ ಶಕುಂತಲೆ ಪತಿ ಗೃಹಕ್ಕೆ ತೆರಳಳಿದ್ದಾಳೆ, ಅನುಜ್ಞೆ ನೀಡಿ ಎಂಬ ಭಾವಪೂರಿತವಾದ ಮಾತಿದೆ.

ಪಾತುಂ ನ ಪ್ರಥಮಂ ವ್ಯವಸ್ಯತಿ ಜಲಂ ಯುಷ್ಮಾಸ್ವಪೀತೇಷುಯಾ
ನಾದತ್ತೇ ಪ್ರಿಯಮಣ್ಡನಾನಪಿ ಭವತಾಂ ಸ್ನೇಹೇನ ಯಾ ಪಲ್ಲವಮ್
ಆದ್ಯೇವಃ ಕುಸುಮ ಪ್ರಸೂತಿ ಸಮಯೇ ಯಸ್ಯಾ ಭವತ್ಯುತ್ಸವಃ
ಸೇಯಂ ಯಾತಿ ಶಕುಂತಲಾ ಪತಿಗೃಹಂ ಸರ್ವೈರವನುಜ್ಞಾಯತಾಂ

ಬಸವಪ್ಪ ಶಾಸ್ತ್ರಿಗಳು ಇದನ್ನು ಅನುವಾದಿಸಿರುವುದು ಹೀಗೆ :

ಜಲವನದಾವಳೀಂಟಳಿರೆದಲ್ಲದೆ ನಿಮ್ಮಯ ಪಾತೆಗಂಬುವಂ
ತಳಿಗಗಳ ಕೊಯ್ಯಳಾವಳೊಲವಿಂ ಮಿಗೆ ಸಿಂಗರ ದಾಸೆಯುಳ್ಳೊಡಂ
ಅಲಗಗಳ ತಾಳೆ ನೀವು ಮೊದಲುತ್ಸವವಾಂತಪಳಾವಳಾ ಶಕುಂ
ತಳೆ ಪತಿಸದ ಕೈದಿದಪಳಾಕೆ ಗನುಜ್ಞೆಯ ನೀವುದೆಲ್ಲದುಂ

ಮಹಾಭಾರತದ ವನಪರ್ವದಲ್ಲಿ ದ್ವೈತವನ, ಗಂಧಮಾದನವನ ಮುಂತಾದ ವನಗಳ ವಿವರಣೆ ಇದೆ. ದೇವದಾರು ಹಾಗೂ ರುದ್ರಾಕ್ಷಿ ಮರಗಳ-ವನಗಳ ಪ್ರಸ್ತಾಪ ಬಂದಿದೆ. ಇಂದ್ರಪ್ರಸ್ಥ ರಾಜಧಾನಿಯಲ್ಲಿ ರಾಜಸೂಯ ಯಾಗ ಮಾಡುವಾಗ ಮರಗಳಿಂದ ಮಾಡಿದ ಹಲವಾರು ವಸ್ತುಗಳ, ಆ ಮರಗಳು ಬೆಳೆಯುವ ಪ್ರದೇಶಗಳ ವರ್ಣನೆಗಳು ಕಂಡುಬರುತ್ತವೆ. ಗಂಧಮಾದನವನದ ಸಪ್ತಚ್ಛದ್ಧದ ಪೊದೆಗಳ ನಡುವೆ ಭೀಮಸೇನ ಓಡಾಡುತ್ತಿರುವಾಗ ಅಲ್ಲಿನ ಎಲೆಗಳು, ಹೂವುಗಳಿಂದ ಕೆಂಪು-ಕಪ್ಪು ಬಣ್ಣಗಳಿಂದ ಲೇಪಿತನಾದನಂತೆ.

ಕೌಟಿಲ್ಯ ತನ್ನ ' ಅರ್ಥಶಾಸ್ತ್ರ 'ದಲ್ಲಿ ಅತಿಹೆಚ್ಚು ಉತ್ಪನ್ನ ಪಡೆಯಲು ಯಾವ ಯಾವ ಭೂಮಿಯಲ್ಲಿ ಎಂತೆಂತಹ ಬೆಳೆ ಬಿತ್ತಬೇಕು ಎಂದು ಹೇಳಿದ್ದಾನೆ. ವನಪಾಲಕನಿಗೂ ಹಿರಿಯನಾದ ಅಧಿಕಾರಿಯ ಪ್ರಸ್ತಾಪ ಅರ್ಥಶಾಸ್ತ್ರದಲ್ಲಿ ಬಂದಿದೆ. ಸಾರವುಳ್ಳ ಮರ, ಬಿದಿರು ಮೊದಲಾದವುಗಳ ಸಂಗ್ರಹದಲ್ಲಿ ನಿಯುಕ್ತನಾದವನೀತ. ವನಪಾಲಕರಿಂದ ಮರ ಮುಂತಾದವುಗಳನ್ನು ಸಂಗ್ರಹಿಸಿ ಅವುಗಳಿಂದ ಮನೆ, ಗಾಡಿ ಇಂತಹವುಗಳನ್ನು ತಯಾರಿಸಬೇಕು. ಮರ ಕಡಿದು ಜೀವಿಸುವವರಿಗೆ ಮರ ಕಡಿದು ಸಾಗಿಸುವುದಕ್ಕೆ ಸಂಬಳ ನಿರ್ಣಯಿಸಬೇಕಾದ ಅಧಿಕಾರಿಯೂ ಈತನೇ. ಮರಗಳನ್ನು ಕಡಿಯಲು ಒಪ್ಪಿಗೆ ಪಡೆದಿರಬೇಕು. ಹಾಗೆ ಒಪ್ಪಿಗೆ ಪಡೆಯದೆ ಮರಗಳನ್ನು ಕಡಿದರೆ

ದಂಡವನ್ನು ಹಾಕಿ ಅದನ್ನೂ ವಸೂಲುಮಾಡುವ ಕೆಲಸಗಳೂ ಈತನದೇ ಆಗಿತ್ತು. ಈತನನ್ನೂ ಕೂಪ್ಯಾಧ್ಯಕ್ಷನೆಂದು ಹೆಸರಿಸಲಾಗಿದೆ. ಇದು ಮೌರ್ಯರ ಕಾಲದಲ್ಲಿ.

ಆದರೆ ಇದಕ್ಕೂ ಮೊದಲು ಪಾಣಿನಿ ತನ್ನ ಅಷ್ಟಾಧ್ಯಾಯಿಯಲ್ಲಿ ಅರಣ್ಯಗಳನ್ನು ಉಲ್ಲೇಖಿಸುತ್ತಾ ಪುರಾಗವನ ಮತ್ತು ಮಿಶ್ರಕವನಗಳು ಪ್ರಾಕೃತಿಕ ಅರಣ್ಯಗಳೆಂದೂ ಖದಿರವನ, ಇಕ್ಷುವನ, ಆಮ್ರವನ ಮುಂತಾದವುಗಳು ಮಾನವನಿರ್ಮಿತ ಉದ್ಯಾನಗಳೆಂದೂ ಸೂಚಿಸಿದ್ದಾನೆ. ಬಹಳ ನಂತರದ ಕಾಲದ ಶುಕ್ರನೀತಿಸಾರದಲ್ಲಿ ಅರಣ್ಯಗಳ ರಕ್ಷಣೆ, ಮೇಲ್ವಿಚಾರಣೆಗೆ, ವನಸ್ಪತಿಶಾಸ್ತ್ರ ಕೋವಿದನಾದ ಒಬ್ಬ ಮುಖ್ಯಾಧಿಕಾರಿ ಇರುತ್ತಿದ್ದನೆಂದು ಹೇಳಿದೆ. ಆರು ಯೋಜನೆಗಳ ಸುತ್ತಳತೆಯ ಒಂದೊಂದು ಅರಣ್ಯದಲ್ಲೂ ಒಂದೊಂದು ರಾಜಮಾರ್ಗ ವಿರಬೇಕು. ಅರ್ಥಸಚಿವನು (ಸುಮಂತ) ರಾಜ್ಯದಲ್ಲಿನ ಅರಣ್ಯಗಳ, ಅವುಗಳ ಉತ್ಪನ್ನ, ರಾಜಮಾರ್ಗಗಳು, ಬೇಸಾಯಕ್ಕೆ ಯೋಗ್ಯವಾದ ಭೂಮಿಗಳು–ಇವುಗಳ ವಿವರಗಳನ್ನು ರಾಜನಿಗೆ ಒದಗಿಸಬೇಕಾಗಿತ್ತೆಂದು ಹೇಳಿದೆ. ಅರಣ್ಯಗಳಲ್ಲಿ, ಜನೋಪಯೋಗಿ ಅರಣ್ಯಗಳನ್ನು ರಕ್ಷಿಸಿ, ಬೆಳೆಸಲು, ಸಸ್ಯಶಾಸ್ತ್ರದಲ್ಲಿ, ಪರಿಣತರಾದ, ಪರಿಶ್ರಮವುಳ್ಳ ಅಧಿಕಾರಿಗಳನ್ನು ನೇಮಿಸಬೇಕು ಎಂದು ಹೇಳಿರುವುದೂ ಗಮನಾರ್ಹ. ಅರ್ಥಶಾಸ್ತ್ರದಲ್ಲಿ ತಿರುಳುಳ್ಳ ಮರಗಳು, ಬಳ್ಳಿ, ವಲ್ಕ ಮುಂತಾದವುಗಳಲ್ಲಿನ ಭೇದಗಳನ್ನು ಗುರುತಿಸಲಾಗಿದೆ. ಮುಂಜು, ಬಲ್ಬಜ ಮೊದಲಾದುವು ಹಗ್ಗ ಹೆಣೆಯಲು ಉಪಯುಕ್ತ; ತಾಲೀ, ತಾಲ, ಭೂರ್ಜಗಳು ಪತ್ರಗಳನ್ನು (ತಾಡವೋಲೆ) ಸಿದ್ಧಗೊಳಿಸಲು ಉತ್ತಮವಾದ ದಾರುಗಳೆಂದು ಹೇಳಿದೆ.

ಗುಡಿಸಲು ಮನೆಗಳನ್ನು ಕಟ್ಟಲು, ಯಜ್ಞಯಾಗಾದಿಗಳಲ್ಲಿ, ಉಪಯೋಗಿಸಲು ಅಡಿಗೆಮಾಡಲು ಮುಖ್ಯವಾಗಿ ಮರಗಳು ಬೇಕಿದ್ದುವು, ಆದರೂ ಬೇಕಾದಹಾಗೆಲ್ಲಾ ಮರಗಳನ್ನು ಕಡಿಯಬಾರದೆಂದು ಕೆಲವು ಮರಗಳನ್ನು ಪವಿತ್ರವೆಂದು ಪರಿಗಣಿಸಿ ಅವುಗಳನ್ನು ಕಡಿಯುವುದನ್ನು ನಿಷೇಧಿಸಿದ್ದರು. ಇನ್ನೂ ಕೆಲವು ಮರಬಳ್ಳಿಗಳು ಔಷಧಿಗಳ ತಯಾರಿಕೆಗೆ ಬೇಕಿತ್ತೆಂಬ ನಿಯಮ ಮಾಡಿದರು. ಇನ್ನು ಹಲವು ಕುಲದೇವತೆಗಳ ವೃಕ್ಷಗಳೆಂದು (Totem) ಪರಿಗಣಿಸಿದ್ದರು.

ಪ್ರಾಚೀನ ಸಾಹಿತ್ಯದಲ್ಲಿ ಕಾಣಿಸಿಕೊಳ್ಳುವ ನೂರಾರು ವೃಕ್ಷಗಳಲ್ಲಿ ಕೆಲವನ್ನಾದರೂ ಇಲ್ಲಿ ನೆನೆಯಬೇಕು. ಅವುಗಳಲ್ಲೆಲ್ಲ ಬಹುಶಃ ಅತಿ ಪುರಾತನವಾದುದೂ ಪವಿತ್ರವಾದದೂ ಅಶ್ವತ್ಥ. ಮೊಹೆಂಜೊದಾರೊ–ಹರಪ್ಪಗಳಲ್ಲಿ ದೊರೆತ ಮುದ್ರಿಕೆಗಳು ಕೆಲವಲ್ಲಿ ಇದನ್ನು ಚಿತ್ರಿಸಲಾಗಿದೆ. ವೇದಗಳ ಕಾಲದಲ್ಲಿ ಅಗ್ನಿಯನ್ನು ಸೃಷ್ಟಿಸಲು ಉಪಯೋಗಿಸಲಾದ ಅರಣಿಯ ಕೆಳಭಾಗದ ತುಂಡಿಗೆ ಈ ಮರವನ್ನು ಬಳಸಲಾಗುತ್ತಿತ್ತು.

ಅಂಜನ ಎಂಬ ವೃಕ್ಷವನ್ನು ಬೃಹತ್ಸಂಹಿತೆಯಲ್ಲಿ ವರ್ಣಿಸಿದೆ. ಇದು ಭೂಗರ್ಭದಲ್ಲಿನ ನೀರನ್ನು ಸೂಚಿಸುತ್ತದೆ ಎಂದು ಹೇಳಿದೆ. ಮನೆಗಳ ಸಮೀಪದಲ್ಲಿ ಬೆಳೆಸಲು

ಯೋಗ್ಯವಾದುದು ಈ ಮರ, ಅಂಕೋಲವೃಕ್ಷ ಸಹ ಇದೇ ಗುಣಗಳನ್ನು ಹೊಂದಿದೆ. ಇಂದ್ರಪ್ರಸ್ಥ ನಗರದ ಸುತ್ತ ಬೆಳೆಸಿದ ವೃಕ್ಷಗಳಲ್ಲಿ ಬಕುಳವೂ ಒಂದಾಗಿತ್ತು. ಅಕ್ಷಯ ವಟಕ್ಕೂ ಗಯೆಗೂ ನಿಕಟಸಂಬಂಧವಿರುವುದು ತಿಳಿದದ್ದೇ. ಈ ಮರವನ್ನು ಗ್ರಾಮಗಳ ಮೇರೆಗಳನ್ನು ಸೂಚಿಸಲು ನೆಡಲಾಗುತ್ತಿತ್ತೆಂದು ಹೇಳಲಾಗಿದೆ. ಈ ಮರ ತುಂಬಿ ಬೆಳೆದರೆ ಅದು ಯವ (Barley) ದ ಉತ್ತಮಫಸಲು ಬರುವುದಕ್ಕೆ ಮುನ್ಸೂಚಿ ಎಂದು ಛಾಂದೋಗ್ಯ ಸಂಹಿತದಲ್ಲಿ ಹೇಳಿದೆ. ಬೇವಿನ ಮರ ಆರೋಗ್ಯಕಾರಿ. ಆದರೆ ಅದನ್ನು ಮನೆಕಟ್ಟಲು ಉಪಯೋಗಿಸಬಾರದೆಂದಿದೆ. ಅರ್ಥ ಶಾಸ್ತ್ರದಲ್ಲಿ ಶಿರೀಷ ವೃಕ್ಷದ ದಿಮ್ಮಿಗಳು ಬಹಳ ಬಲವಾದವುಗಳಾಗಿದ್ದು ಮನೆಕಟ್ಟಲು ಯೋಗ್ಯವಾದವು ಗಳೆಂದು ಹೇಳಿದೆ. ಅಥರ್ವವೇದದಲ್ಲಿ, ಯಂತ್ರಗಳಿಗೂ, ಔಷಧಿಗಳಿಗೂ ಉಪಯುಕ್ತ ವಾದ ಮರಗಳ ದೀರ್ಘಪಟ್ಟಿಯೇ ಇದೆ. ಕದಂಬವೃಕ್ಷ ಕರ್ನಾಟಕದ ಅರಸುಮನೆ ತನದವರು ಪೂಜಿಸುತ್ತಿದ್ದ ಮನೆತನದ ವೃಕ್ಷ. ತಾಳಗುಂದದ ಶಾಸನದಲ್ಲಿ ಮಯೂರ ಶರ್ಮನ ವಂಶಸ್ಥರು ಮನೆಯ ಸಮೀಪ ಬೆಳೆದಿದ್ದ ಒಂದೇ ಒಂದು ಕದಂಬ ವೃಕ್ಷವನ್ನು ಪೋಷಿಸಿ ಬೆಳೆಸಿದರಾದ ಕಾರಣ ಆ ಮನೆತನದವರಿಗೆ ಅದೇ ಹೆಸರು ಬಂದಿತೆಂದು ವಿವರಣೆಯನ್ನು ನೀಡಲಾಗಿದೆ. ಮದುವೆಯ ಸಂದರ್ಭಗಳಲ್ಲಿ, ಆಲ, ಹೊಂಗೆ, ಅಶ್ವತ್ಥ ಮುಂತಾದ ವೃಕ್ಷಗಳ ಟೊಂಗೆಗಳನ್ನು ಪೂಜಿಸುವ ಪದ್ಧತಿ ಈಗಲೂ ಇದೆ.

ಅಂದಿನ ಜನಸಂಖ್ಯೆಯನ್ನು ಗಮನದಲ್ಲಿಟ್ಟುಕೊಂಡಲ್ಲಿ, ಅರಣ್ಯನಾಶ ಈಗಿನ ದಿನಗಳಲ್ಲಾಗುತ್ತಿರುವಷ್ಟು ಸಾಧ್ಯತೆ ಇರಲಿಲ್ಲವೆಂದು ವಾದಮಾಡುವುದರಲ್ಲಿ ಅರ್ಥವಿಲ್ಲ. ಅಂದು, ಸುಮಾರು ಕ್ರಿ.ಪೂ. 3ನೆಯ ಶತಮಾನದವರೆವಿಗೂ ಮನೆಗಳನ್ನೂ, ಗುಡಿ ಗಳನ್ನು ಮರದಲ್ಲಿಯೇ ಕಟ್ಟುತ್ತಿದ್ದರು. ಈ ಪದ್ಧತಿ ಸುಮಾರು 14–15ನೆಯ ಶತಮಾನಗಳವರೆಗೂ ಕಾಣಿಸಿತ್ತು ಎಂಬುದನ್ನು ಪರಿಗಣಿಸಿದಾಗ, ಹಾಗೂ ಅಂದೂ ಅನೇಕ ಜನಭರಿತ ನಗರಗಳು ನೂರಾರು–ಇದ್ದುವು ಎಂಬುದನ್ನು ಅರಿತಾಗ ಅರಣ್ಯ ನಾಶ ಪ್ರಮಾಣದಲ್ಲಿ ಹೆಚ್ಚಲೇಬೇಕಿತ್ತು. ಇಂದಿನ ಪ್ರಮಾಣದಷ್ಟಿರಲಾರದಷ್ಟೆ, ಆದರೆ ನಾವು ಗಮನಿಸಬೇಕಾದುದು ಅರಣ್ಯಗಳನ್ನು ಬೆಳೆಸಬೇಕೆಂಬ ಅವರ ನೀತಿ ಅಂದಿನ ಕಾಲದ ಅರಸರು ಮಾಡಿದ ಪುಣ್ಯಕಾರ್ಯಗಳಲ್ಲಿ ಮರಗಳನ್ನು ನೆಡುವುದೂ ಒಂದಾಗಿತ್ತು. ಎಂತಲೇ ಮರಗಳನ್ನು ಬಳಕೆಗೆಂದು ಕಡಿದರೂ ಅವುಗಳ ಸ್ಥಳಗಳಲ್ಲಿ ಹೊಸಮರಗಳನ್ನು ಬೆಳೆಸುತ್ತಲೇ ಇದ್ದರು. ಇದರಿಂದ ಸಮತೋಲನ ಉಳಿಯುತ್ತಿತ್ತು. ಸಂರಕ್ಷಣೆ ಸುಗಮವಾಗುತ್ತಿತ್ತು.

ಗೌತಮಬುದ್ಧ ಒಂದು ಕಡೆ ಪ್ರತಿಯೊಬ್ಬ ಗೃಹಸ್ಥನೂ ಒಂದಾದರೂ ಮರನೆಟ್ಟು ಐದುವರ್ಷಗಳ ಕಾಲ ಅದನ್ನು ಮಗುವಿನಂತೆ ಸಂರಕ್ಷಿಸಬೇಕೆಂದು ಹೇಳಿದ್ದಾನೆ. ಇದು ಇಂದು ನಾವೂ ಆಚರಿಸಬೇಕಾದ ನಿಯಮವಲ್ಲವೇ ?

ಯಮುನಾಬಾಯಿ ಆರ್. ರಾವ್

ಪ್ರಪಂಚದ ಸಂಕ್ಷಿಪ್ತ ಇತಿಹಾಸ (ಮುಂದುವರೆದುದು)

48. ಮಂಗೋಲ್ ದಂಡಯಾತ್ರೆಗಳು

ಆದರೆ 13ನೇ ಶತಮಾನದಲ್ಲಿ ಪೋಪನ ಕೈಕೆಳಗೆ ಕ್ರೈಸ್ತ ಪ್ರಪಂಚವನ್ನು ಒಂದುಗೂಡಿಸಬೇಕೆಂಬ ಈ ವಿಚಿತ್ರವಾದ ಕಡೆಗೂ ಫಲಿಸದೆ ಹೋದ ಪ್ರಯತ್ನ ಯೂರೋಪಿನಲ್ಲಿ ನಡೆಯುತ್ತಿದ್ದಾಗಲೇ ಇದಕ್ಕಿಂತ ವಿಶಾಲವಾದ ಏಷ್ಯದ ರಂಗ ಸ್ಥಲದಲ್ಲಿ ಇನ್ನೂ ಪರಿಣಾಮಕಾರಿಯಾದ ಘಟನೆಗಳು ನಡೆಯುತ್ತಿದ್ದುವು. ಚೀನದ ಉತ್ತರದ ಭೂಪ್ರದೇಶಗಳಿಂದ ಬಂದ ಟಾರ್ಟರ್ ಜನಾಂಗದ ಒಂದು ಗುಂಪಿನ ಜನ ಇದ್ದಕ್ಕಿದ್ದಂತೆ ಪ್ರಪಂಚದ ಕಾರ್ಯರಂಗದಲ್ಲಿ ಪ್ರಮುಖ ಸ್ಥಾನಕ್ಕೆ ಏರಿದರು. ಚರಿತ್ರೆಯಲ್ಲಿ ಮತ್ತೆಲ್ಲೂ ಕಾಣದಂತಹ ವಿಜಯಗಳ ಸರಣಿಯನ್ನೇ ಸಾಧಿಸಿದರು. ಇವರೇ ಮಂಗೋಲರು. 13ನೇ ಶತಮಾನ ಮೊದಲಾದಾಗ ಕುದುರೆ ಸವಾರಿ ಮಾಡುತ್ತಿದ್ದ ಅಲೆಮಾರಿ ತಂಡವಾಗಿದ್ದ ಇವರು ಬಹುಮಟ್ಟಿಗೆ ಇದರ ಪೂರ್ವಗಾಮಿಗಳಾಗಿದ್ದ ಹೂಣರಂತೆಯೇ ಜೀವಿಸುತ್ತಿದ್ದರು. ಮಾಂಸ ಮತ್ತು ಕುದುರೆ ಹಾಲುಗಳು ಇವರ ಆಹಾರ. ವಾಸಿಸುತ್ತಿದ್ದುದು ಫೆಲ್ಟ್ ಬಟ್ಟೆಯ ಗುಡಾರಗಳಲ್ಲಿ. ಚೀನಿ ಪ್ರಭುತ್ವವನ್ನು ಕೊಡವಿಹಾಕಿ ಸ್ವತಂತ್ರರಾದ ಇವರು ಇತರ ಅನೇಕ ತುರುಕ ಕುಲಗಳ ಜನರನ್ನು ಒಂದು ಸೈನಿಕ ಒಕ್ಕೂಟವಾಗಿ ಒಂದುಗೂಡಿಸಿದರು. ಇವರ ಕೇಂದ್ರಠಾಣೆ ಸೈಬೀರಿಯದಲ್ಲಿ ಒನನ್ ನದಿ ತೀರದಲ್ಲಿತ್ತು.

ಆಗ ಚೀನ ಒಡೆದುಹೋಗಿತ್ತು, ಬಲಿಷ್ಠವಾಗಿದ್ದ ಟಾಂಗ್‌ವಂಶ 10ನೇ ಶತಮಾನದ ಹೊತ್ತಿಗೆ ಹೀನಸ್ಥಿತಿಗಿಳಿದಿತ್ತು. ತಮ್ಮ ತಮ್ಮಲ್ಲೇ ಕಾದಾಡುತ್ತಿದ್ದ ಹಲವಾರು ಕಾರ್ಯಗಳಾಗಿ ಚೀನ ಹಂಚಿ ಹೋಯಿತು. ಈ ದಶೆ ಕಳೆದು ಬಳಿಕ ಮೂರು ಮುಖ್ಯ ಸಾಮ್ರಾಜ್ಯಗಳು ಉಳಿದುಕೊಂಡವು ; ಉತ್ತರದಲ್ಲಿ ಪೀಕಿಂಗನ್ನು ರಾಜಧಾನಿಯಾಗುಳ್ಳ ಕಿನ್ ಸಾಮ್ರಾಜ್ಯ, ದಕ್ಷಿಣದಲ್ಲಿ ನ್ಯಾನ್‌ಕಿಂಗ್ ರಾಜಧಾನಿಯಾಗಿದ್ದ

ಸುಂಗ್, ಮತ್ತು ಮಧ್ಯ ಭಾಗದಲ್ಲಿ ಹ್ಸಿಯಂ 1214 ರಲ್ಲಿ ಮಂಗೋಲ್ ಒಕ್ಕೂಟದ ಮುಂದಾಳುವಾದ ಚೆಂಗಿಸ್‌ಖಾನನು ಕಿನ್ಗ್ ಸಾಮ್ರಾಜ್ಯದ ಮೇಲೆ ಯುದ್ಧಮಾಡಿ ಪೀಕಿಂಗನ್ನು ವಶಮಾಡಿಕೊಂಡನು. ಬಳಿಕ ಪಶ್ಚಿಮ ದಿಕ್ಕಿಗೆ ತಿರುಗಿ ಪಶ್ಚಿಮ ತುರ್ಕಿಸ್ತಾನ, ಪರ್ಶಿಯ, ಆರ್ಮೀನಿಯ, ಲಾಹೋರಿನವರೆಗಿನ ಭಾರತ, ಹಂಗೇರಿ ಮತ್ತು ಸೈಲೀಷಿಯಗಳವರೆಗಿದ್ದ ರಷ್ಯದ ದಕ್ಷಿಣ ಭಾಗಗಳನ್ನು ಜಯಿಸಿದನು. ಶಾಂತ ಸಾಗರದಿಂದ ತ್ನೈಪ್ರನದಿವರೆಗೆ ಹರಡಿದ್ದ ವಿಶಾಲ ಸಾಮ್ರಾಜ್ಯದ ಅಧಿಪತಿಯಾಗಿ ಈತ ಮಡಿದನು.

ಇವನ ಉತ್ತರಾಧಿಕಾರಿ ಓಗ್ಡೈಖಾನ್ ಮಂಗೋಲಿಯದ ಕಾರಾಕೊರಂನಲ್ಲಿ ಖಾಯಂ ರಾಜಧಾನಿಯನ್ನು ಸ್ಥಾಪಿಸಿ ಆಶ್ಚರ್ಯಕರವಾದ ಈ ದಂಡಯಾತ್ರೆಗಳ ಜೀವನವನ್ನು ಮುಂದುವರಿಸಿದನು. ಇವನ ಸೈನ್ಯಗಳಲ್ಲಿ ಅತ್ಯುನ್ನತ ಮಟ್ಟದ ಕಾರ್ಯದಕ್ಷತೆಯಿತ್ತು; ಅಲ್ಲದೆ ಚೀನೀಯರು ಕಂಡುಹಿಡಿದಿದ್ದ ಬಂದೂಕಿನ ಮದ್ದು ಇವರಿಗೂ ಗೊತ್ತಿದ್ದು ಹಗುರವಾದ ಸಣ್ಣ ಫಿರಂಗಿಗಳನ್ನು ಇವರು ಉಪಯೋಗಿಸುತ್ತಿದ್ದರು. ಕಿನ್ಗ್ ಸಾಮ್ರಾಜ್ಯವನ್ನು ಪೂರ್ತಿ ಜಯಿಸಿದ ಮೇಲೆ ಇವನು ಏಷ್ಯವನ್ನು ಒಂದೇ ಏಟಿನಲ್ಲಿ ಹಾದುಹೋಗಿ ತನ್ನ ಸೈನ್ಯಗಳನ್ನು ರಷ್ಯಕ್ಕೆ ತಲುಪಿಸಿದನು. (ಕ್ರಿ.ಶ. 1235). ಇದು ಅತ್ಯಂತ ವಿಸ್ಮಯಕರ ಸಾಧನೆ. ಕ್ರಿ.ಶ. 1240 ರಲ್ಲಿ ಕಿಯೆವ್ ನಾಶವಾಯಿತು. ಹೆಚ್ಚು ಕಡಿಮೆ ರಷ್ಯಾ ಎಲ್ಲವೂ ಮಂಗೋಲರಿಗೆ ಕಪ್ಪ ಕೊಡುವ ರಾಜ್ಯವಾಯಿತು. ಪೋಲೆಂಡನ್ನು ಇವರು ಪಾಳುಗೆಡವಿದರು. ಪೋಲ್ ಮತ್ತು ಜರ್ಮನ್ ಜನರ ಸೈನ್ಯವೊಂದು ಕ್ರಿ.ಶ. 1241 ರಲ್ಲಿ ಕೆಳ ಸೈಲೀಷಿಯದ ಲೀಗ್ನಿಟ್ಸ್ ಕದನದಲ್ಲಿ ಧ್ವಂಸವಾಯಿತು. ಮುನ್ನುಗ್ಗುತ್ತಿದ್ದ ಈ ಪ್ರವಾಹವನ್ನು ತಡೆಯಲು ಎರಡನೆಯ ಫ್ರೆಡರಿಕ್ ಅಂತಹದ್ದೇನೂ ಪ್ರಯತ್ನ ಮಾಡಿದಂತೆ ತೋರುವುದಿಲ್ಲ.

ಗಿಬ್ಬನ್ನನ ಗ್ರಂಥ "ರೋಮ್ ಸಾಮ್ರಾಜ್ಯದ ಅವನತಿ ಮತ್ತು ಪತನ"ಕ್ಕೆ ವ್ಯಾಖ್ಯಾನ ಬರೆಯುತ್ತಾ ಬೆರಿರವರು ಹೀಗೆ ತಿಳಿಸುತ್ತಾರೆ. "ಕ್ರಿ.ಶ. 1241 ರ ವಸಂತ ಕಾಲದಲ್ಲಿ ಪೋಲೆಂಡಿನೊಳಗೆ ನುಗ್ಗಿ ಹಂಗೆರಿಯನ್ನು ಆಕ್ರಮಿಸಿದ ಮಂಗೋಲ್ ಸೈನ್ಯಗಳ ಗೆಲುವುಗಳಿಗೆ ಕಾರಣ ಅವರು ಎದುರಿಸಲು ಅಸಾಧ್ಯವಾದಷ್ಟು ಅಧಿಕ ಸಂಖ್ಯೆಯಲ್ಲಿದ್ದುದು ಮಾತ್ರ ಅಲ್ಲ, ಅವರ ಪರಿಪೂರ್ಣ ಯುದ್ಧತಂತ್ರ ಕೂಡ ಎಂದು ಯೂರೋಪಿನ ಚರಿತ್ರೆ ಇತ್ತೀಚೆಗೆ ಅರ್ಥಮಾಡಿಕೊಂಡಿದೆ. ಆದರೆ ಈ ವಿಷಯ ಸಾಮಾನ್ಯವಾಗಿ ಇನ್ನೂ ಎಲ್ಲರಿಗೂ ತಿಳಿದಿಲ್ಲ. ಟಾರ್ಟರರೆಂದರೆ ತಮಗೆ ಎದುರು ಬಂದುದನ್ನೆಲ್ಲ ತಮ್ಮ ಅತ್ಯಧಿಕ ಸಂಖ್ಯಾಬಲವೊಂದರಿಂದಲೇ ಸೋಲಿಸುತ್ತಿದ್ದ ಕಾಡು ಜನರ ಗುಂಪುಗಳು, ಇವರು ಅಡ್ಡಿ ಅಡಚಣೆಗಳನ್ನು ಕುದುರೆಗಳನ್ನು ದೌಡಾಯಿಸಿಕೊಂಡು ಓಡಿ ತಮ್ಮ ಒತ್ತಡದಿಂದಲೇ ನಿವಾರಿಸಿಕೊಳ್ಳುತ್ತಿದ್ದರು ಎಂಬ ಅಭಿಪ್ರಾಯ ಸಾಮಾನ್ಯ ಜನತೆಯಲ್ಲಿ ಇನ್ನೂ ನೆಲಸಿದೆ.

ಕೆಳಗಣ ವಿಶ್ಚುಲದಿಂದ ಟ್ರಾನ್ಸಿಲ್ವೇನಿಯಾದವರೆಗೆ ನಡೆದ ಯುದ್ಧ ಕಾರ್ಯಾಚರಣೆಗಳಲ್ಲಿ ಅವರ ಸಿದ್ಧತೆಗಳು ಅದೆಷ್ಟು ಸಕಾಲಿಕ ಮತ್ತು ಪರಿಣಾಮಕಾರಿಗಳಾಗಿ ನಡೆದುವು ಎನ್ನುವುದು ಆಶ್ಚರ್ಯಕರ. ಅಂದಿನ ಯೂರೋಪಿನ ಸೈನ್ಯಗಳಲ್ಲಿ ಯಾವುದಕ್ಕೂ ಇಂತಹ ದಂಡಯಾತ್ರೆ ನಡೆಸುವ ಶಕ್ತಿಯಿರಲಿಲ್ಲ. ಯಾವ ಯೂರೋಪಿಯನ್ ದಂಡನಾಯಕನಿಗೂ ಅಂತಹ ದೂರದೃಷ್ಟಿಯಿರಲಿಲ್ಲ. ಎರಡನೆ ಫ್ರೆಡರಿಕನಿಂದ ಮೊದಲು ಮಾಡಿ ಕೆಳಗೆ ನೋಡಿಕೊಂಡು ಬಂದರೆ ಅಲ್ಲಿದ್ದ ಪ್ರತಿಯೊಬ್ಬ ದಂಡನಾಯಕನೂ ಸುಬುತಾಯಿ ಖಾನನೊಡನೆ ಹೋಲಿಸಿದಾಗ ಯುದ್ಧತಂತ್ರದಲ್ಲಿ ಅದೇ ತಾನೇ ಕೈ ಹಾಕಿದವನಂತೆ ಕಾಣಿಸಿಕೊಳ್ಳುತ್ತಾನೆ. ಈ ಸಾಹಸಕ್ಕೆ ಇಳಿಯುವ ಮೊದಲು ಹಂಗೇರಿಯ ರಾಜಕೀಯ ಸಂದರ್ಭಗಳು ಮತ್ತು ಪೋಲೆಂಡಿನ ಪರಿಸ್ಥಿತಿಗಳನ್ನು ಮಂಗೋಲರು ಪೂರ್ತಿಯಾಗಿ ತಿಳಿದುಕೊಂಡಿದ್ದರೆಂಬುದನ್ನು ಗಮನಿಸಬೇಕು. ಸುವ್ಯವಸ್ಥಿತ ಗೂಢಚಾರ ವ್ಯೂಹದ ಮೂಲಕ ಅವರು ಇವುಗಳ ಮಾಹಿತಿ ಪಡೆದುಕೊಂಡಿದ್ದರು. ಅದೇ ಹಂಗೇರಿಯನ್ನರು ಮತ್ತು ಇತರ ಕ್ರೈಸ್ತ ಆಧಿಪತ್ಯಗಳ ಜನರಿಗೆ ಬಾಲ್ಯಾವಸ್ಥೆಯ ಅನಾಗರಿಕರಿಗೆ ಹೇಗೋ ಹಾಗೆ ತಮ್ಮ ಶತ್ರುಗಳ ವಿಷಯ ಏನೇನೂ ತಿಳಿದಿರಲಿಲ್ಲ.

ಲೀಗ್ನಿಟ್ಸ್‌ನಲ್ಲಿ ವಿಜಯಗಳಿಸಿದರೂ ಮಂಗೋಲರು ಅಲ್ಲಿಂದ ತಮ್ಮ ದಂಡಯಾತ್ರೆಯನ್ನು ಪಶ್ಚಿಮಾಭಿಮುಖವಾಗಿ ಮುಂದುವರಿಸಲಿಲ್ಲ. ಅದರ ಮುಂದೆ ಸಿಕ್ಕುವ ಗುಡ್ಡಗಳು ಮತ್ತು ಕಾಡುಗಳ ಪ್ರದೇಶ ಅವರ ಯುದ್ಧತಂತ್ರಗಳಿಗೆ ಹೊಂದುತ್ತಿರಲಿಲ್ಲ. ಹೀಗಾಗಿ ಅವರು ದಕ್ಷಿಣಕ್ಕೆ ತಿರುಗಿ ಹಂಗೇರಿಯಲ್ಲಿ ನೆಲಸಲು ಸಿದ್ಧತೆ ಮಾಡಿಕೊಂಡರು. ಮಂಗೋಲರಂತಹವರೇ ಆದ ಮಾಗ್ಯಾರರು ಹಿಂದೆ ತಮಗೆ ಮುಂಚೆ ಇದ್ದ ಸಿಥಿಯನ್, ಆವರ ಮತ್ತು ಹೂಣ ಜನರ ಮಿಶ್ರಜನಾಂಗವನ್ನು ಕಗ್ಗೊಲೆಗಳಿಗೊಳಗುಮಾಡಿ ಬಳಿಕ ತಮ್ಮೊಡನೆ ಸೇರಿಸಿಕೊಂಡಿದ್ದಂತೆಯೇ ಅದೇ ಮಾಗ್ಯಾರರನ್ನು ಈ ಮಂಗೋಲರೂ ತಮ್ಮೊಡನೆ ಸೇರಿಸಿಕೊಳ್ಳಲು ಅನುವಾದರು. ಹಂಗೆರಿಯ ಮೈದಾನ ಪ್ರದೇಶಗಳಿಂದ ಪಶ್ಚಿಮ ಮತ್ತು ದಕ್ಷಿಣ ದಿಕ್ಕುಗಳಿಗೆ ಹಿಂದೆ ಒಂಬತ್ತನೇ ಶತಮಾನದಲ್ಲಿ ಮಾಗ್ಯಾರರೂ, ಏಳನೇ ಮತ್ತು ಎಂಟನೇ ಶತಮಾನಗಳಲ್ಲಿ ಆವರರೂ, ಐದನೇ ಶತಮಾನದಲ್ಲಿ ಹೂಣರೂ ಮಾಡಿದ್ದಂತೆ ಇವರು ಪ್ರಾಯಶಃ ದಾಳಿನಡೆಸುತ್ತಿದ್ದರು. ಆದರೆ ಇದ್ದಕ್ಕಿದ್ದಂತೆ ಓಗ್ಡೈಖಾನ್ ಸತ್ತುಹೋದನು. ಕ್ರಿ.ಶ. 1242ರಲ್ಲಿ ಉತ್ತರಾಧಿಕಾರದ ಬಗ್ಗೆ ತಂಟೆಯಾಯಿತು. ಎಲ್ಲೂ ಸೋಲದೆಯೇ ಇದ್ದ ಮಂಗೋಲ್ ಸೈನ್ಯಗಳೂ ಇದರಿಂದಾಗಿ ಹಿಂದೆ ಹೋಗಬೇಕಾಗಿ ಬಂದು ಹಂಗೆರಿ ಮತ್ತು ರುಮೇನಿಯಗಳ ಮೂಲಕ ಪೂರ್ವಕ್ಕೆ ಧಾವಿಸ ತೊಡಗಿದುವು.

ಇನ್ನು ಮುಂದೆ ಮಂಗೋಲರು ತಮ್ಮ ಗಮನವನ್ನೆಲ್ಲಾ ಏಷ್ಯದ ದಂಡಯಾತ್ರೆಗಳ ಮೇಲೆ ಕೇಂದ್ರೀಕರಿಸಿದರು. ಹದಿಮೂರನೇ ಶತಮಾನದ ಮಧ್ಯಭಾಗದಲ್ಲಿ ಇವರು ಸುಂಗ್ ಸಾಮ್ರಾಜ್ಯವನ್ನು ಗೆದ್ದರು. ಕ್ರಿ.ಶ. 1251ರಲ್ಲಿ ಮಂಗೂಖಾನ್ ಓಗ್ಡೈಖಾನ

ನಂತರ ಪಟ್ಟಕ್ಕೆ ಬಂದು ತನ್ನ ತಮ್ಮ ಕುಬ್ಲೈಖಾನನನ್ನು ಚೀನದ ರಾಜ್ಯ ಪಾಲನನ್ನಾಗಿ ನೇಮಿಸಿದನು. ಕ್ರಿ.ಶ. 1280 ರಲ್ಲಿ ಕುಬ್ಲೈಖಾನ್ ಚೀನದ ಚಕ್ರವರ್ತಿ ಎಂದು ಅಧಿಕೃತವಾಗಿ ಮನ್ನಣೆ ಪಡೆದನು. ಕ್ರಿ.ಶ. 1368 ರ ವರೆಗೆ ಬಾಳಿಕೊಂಡು ಬಂದ ಯುವಾನ್ ಸಂತತಿಯ ಸ್ಥಾಪಕನಾದನು. ಸುಂಗ್ ಆಡಳಿತದ ಅವಶೇಷಗಳು ಚೀನದಲ್ಲಿ ಉರುಳಿ ಬೀಳುತ್ತಿದ್ದ ಸಮಯದಲ್ಲಿಯೇ ಮಂಗೂಖಾನ್‌ನ ಮತ್ತೊಬ್ಬ ತಮ್ಮ ಹಲಾಗುಖಾನನು ಪರ್ಷಿಯ ಮತ್ತು ಸಿರಿಯಗಳನ್ನು ಜಯಿಸುತ್ತಿದ್ದನು. ಆಗ ಮಂಗೋಲರು ಇಸ್ಲಾಂ ಮೇಲೆ ಅತ್ಯಂತ ನಿಷ್ಠುರವಾದ ದ್ವೇಷವನ್ನು ತೋರಿದರು. ಬಾಗ್ದಾದ್ ಪಟ್ಟಣ ವಶವಾದಾಗ ಅಲ್ಲಿನ ಜನರನ್ನು ಕೊಂದುಹಾಕಿ ಸುಮೇರಿಯದ ಮೊದಲ ದಿನಗಳಿಂದ ಆದುವರೆಗೆ ಮೆಸಪೊಟೇಮಿಯ ಒಂದೇ ರೀತಿಯಲ್ಲಿ ಸಂಪದ್ಯುಕ್ತವಾಗಿಯೂ, ಜನಭರಿತವಾಗಿಯೂ ಇರಲು ಅನುಕೂಲಮಾಡಿಕೊಟ್ಟಿದ್ದ ಚಿರಸ್ಮರಣೀಯವಾದ ಅಲ್ಲಿಯ ನೀರಾವರಿ ವ್ಯವಸ್ಥೆಯನ್ನು ನಾಶಮಾಡಿದರು. ಅಂದಿನಿಂದ ಇದುವರೆಗೆ ಮೆಸಪೊಟೇಮಿಯ ಪಾಳುಗಳಿಂದ ಕೂಡಿದ ಕೇವಲ ಕೆಲವೇ ಜನರನ್ನು ಪೋಷಿಸಬಲ್ಲ ಮರುಭೂಮಿಯಾಗಿದೆ. ಮಂಗೋಲರು ಈಜಿಪ್ಟನ್ನು ಯಾವಾಗಲೂ ಪ್ರವೇಶಿಸಲಿಲ್ಲ. ಈಜಿಪ್ಟಿನ ಸುಲ್ತಾನನು ಹಲಾಗುವಿನ ಸೈನ್ಯವನ್ನು ಪ್ಯಾಲೆಸ್ಟೈನಿನಲ್ಲಿ ಕ್ರಿ.ಶ. 1260 ರಲ್ಲಿ ಪೂರ್ತಿಯಾಗಿ ಸೋಲಿಸಿದನು.

ಈ ದುರ್ದೈವದ ನಂತರ ಮಂಗೋಲರ ವಿಜಯದ ಉಬ್ಬರ ಇಳಿದು ಹೋಯಿತು. ಖಾನನ ಸಾಮ್ರಾಜ್ಯ ಅನೇಕ ಬೇರೆ ಬೇರೆ ರಾಜ್ಯಗಳಾಗಿ ಒಡೆದು ಹೋಯಿತು. ಪೂರ್ವದ ಮಂಗೋಲರು ಚೀನೀಯರಂತೆ ಬೌದ್ಧರಾದರು. ಪಶ್ಚಿಮದವರು ಮುಸ್ಲಿಮರಾದರು. ಕ್ರಿ.ಶ. 1368ರಲ್ಲಿ ಚೀನೀಯರು ಯುವಾನ್ ವಂಶವನ್ನು ತಳ್ಳಿಹಾಕಿ ಅಲ್ಲಿಯದೇ ಆದ ಮಿಂಗ್ ವಂಶವನ್ನು ಪಟ್ಟಕ್ಕೆ ತಂದರು. ಈ ವಂಶ ಕ್ರಿ.ಶ. 1368 ರಿಂದ 1644ರ ವರೆಗೆ ನಡೆದು ಬಂದಿತು. ಕ್ರಿ.ಶ. 1480ರಲ್ಲಿ ಮಾಸ್ಕೋವಿನ ಗ್ರಾಂಡ್‌ಡ್ಯೂಕ್ ತನ್ನ ನಿಷ್ಠೆಯನ್ನು ನಿರಾಕರಿಸಿ ನೂತನ ರಷ್ಯಕ್ಕೆ ತಳಹದಿ ಹಾಕುವವರೆಗೆ ಆಗ್ನೇಯ ಸ್ಟೆಪ್ಪಿಗಳಲ್ಲಿ ರಷ್ಯನ್ನರು ಟಾರ್ಟರ್ ತಂಡಕ್ಕೆ ಕಪ್ಪಕಾಣಿಕೆ ಸಲ್ಲಿಸುತ್ತಿದ್ದರು.

ಹದಿನಾಲ್ಕನೆಯ ಶತಮಾನದಲ್ಲಿ ಮಂಗೋಲ್ ಚೈತನ್ಯ ಕೊಂಚಕಾಲದ ಮಟ್ಟಿಗೆ ಚೆಂಗೀಸ್‌ಖಾನನ ವಂಶದವನಾದ ತೈಮೂರ್ ಲೇನನ ಕೆಳಗೆ ಪುನರುಜ್ಜೀವಿತಗೊಂಡಿತು. ಇವನು ಪಶ್ಚಿಮ ತುರ್ಕಿಸ್ತಾನದಲ್ಲಿ ತನ್ನ ಅಧಿಕಾರ ಸ್ಥಾಪನೆ ಮಾಡಿ 1369 ರಲ್ಲಿ ಗ್ರಾಂಡ್‌ಖಾನ್ ಎಂಬ ಬಿರುದನ್ನು ವಹಿಸಿಕೊಂಡು ಸಿರಿಯದಿಂದ ದೆಹಲಿ ವರೆಗಿನ ಪ್ರದೇಶಗಳನ್ನು ಜಯಿಸಿದನು. ಇವನು ಕಟ್ಟಿದ ಸಾಮ್ರಾಜ್ಯ ಇವನ ನಂತರ ಉಳಿಯಲಿಲ್ಲ. ಆದರೆ ಕ್ರಿ.ಶ. 1505 ರಲ್ಲಿ ಇವನ ವಂಶದವನಾದ ಬಾಬರ್ ಎಂಬ ಸಾಹಸಿ ಬಂದೂಕುಗಳಿಂದ ಸಜ್ಜಾಗಿದ್ದ ಸೈನ್ಯವೊಂದನ್ನು ಕಟ್ಟಿ ಇಂಡಿಯದ ಮೈದಾನ ಪ್ರದೇಶಗಳನ್ನು ಆಕ್ರಮಿಸಿದನು. ಇವನ ಮೊಮ್ಮಗ ಅಕ್ಬರ್

(1556-1605) ಈ ವಿಜಯವನ್ನು ಸಂಪೂರ್ಣಗೊಳಿಸಿದನು. ಈ ಮಂಗೋಲ್ ಸಂತತಿ (ಅಥವಾ ಅರಬ್ಬರೆನ್ನುವಂತೆ ಮೊಗಲ್ ಸಂತತಿ) ಇಂಡಿಯದ ಅಧಿಕ ಭಾಗಗಳನ್ನು 18ನೆ ಶತಮಾನದ ವರೆಗೆ ದೆಹಲಿಯಿಂದ ಆಳಿತು.

ಹದಿಮೂರನೆ ಶತಮಾನದ ಮಂಗೋಲರ ಮೊದಲ ದಾಳಿಯ ಪರಿಣಾಮಗಳಲ್ಲೊಂದು ಮುಂದೆ ಆಟೊಮನ್ ತುರುಕರೆಂದು ಹೆಸರಾದ ತುರ್ಕ ಕುಲದವರನ್ನು ತುರ್ಕಿಸ್ತಾನದಿಂದ ಹೊರಗೆ ಏಷ್ಯಾ ಮೈನರಿಗೆ ಓಡಿಸಿದ್ದು. ಇವರು ಅಲ್ಲಿ ತಮ್ಮ ಅಧಿಕಾರವನ್ನು ವಿಸ್ತರಿಸಿ ದೃಢಪಡಿಸಿಕೊಂಡು ಡಾರ್ಡನೆಲ್ಸನ್ನು ದಾಟಿ ಮ್ಯಾಸಿಡೋನಿಯ, ಸರ್ಬಿಯ ಮತ್ತು ಬಲ್ಗೇರಿಯಗಳ ಮೇಲೆ ದಾಳಿ ಮಾಡಿದರು. ಕಡೆಗೆ ಕಾನ್‌ಸ್ಟಂಟಿನೋಪಲ್ ಆಟೊಮನ್ ಸೈನ್ಯಗಳಿಂದ ಸುತ್ತುವರಿಯಲ್ಪಟ್ಟ ದ್ವೀಪದಂತೆ ಆಯಿತು. ಕ್ರಿ.ಶ. 1453 ರಲ್ಲಿ ಆಟೊಮನ್ ಸುಲ್ತಾನ್ ಎರಡನೇ ಮುಹಮ್ಮದ್ ಈ ಪಟ್ಟಣವನ್ನು ಅದರ ಯುರೋಪಿಯನ್ ಪಕ್ಕದಿಂದ ಅನೇಕ ಫಿರಂಗಿಗಳನ್ನುಪಯೋಗಿಸಿ ದಾಳಿಮಾಡಿ ವಶಪಡಿಸಿಕೊಂಡನು. ಕ್ರೂಸೇಡ್ ಮಾಡಬೇಕೆಂಬ ಮಾತೂ ಎದ್ದಿತ್ತು. ಆದರೆ ಕ್ರೂಸೇಡಿನ ದಿನಗಳು ಕಳೆದುಹೋಗಿದ್ದುವು.

ಹದಿನಾರನೇ ಶತಮಾನದಲ್ಲಿ ಆಟೊಮನ್ ಸುಲ್ತಾನರು ಹಂಗೆರಿ, ಈಜಿಪ್ಟ್, ಮತ್ತು ಉತ್ತರ ಆಫ್ರಿಕದ ಅಧಿಕ ಭಾಗಗಳನ್ನು ಗೆದ್ದುಕೊಂಡರು. ತಮ್ಮ ನೌಕಾದಳದ ಬಲದಿಂದ ಇವರು ಭೂಮಧ್ಯ ಸಮುದ್ರದ ಒಡೆಯರಾದರು. ವಿಯೆನ್ನಾ ಇನ್ನೇನು ಇವರ ಕೈಸೇರುವುದರಲ್ಲಿತ್ತು. ಅಲ್ಲಿನ ಚಕ್ರವರ್ತಿಯಿಂದ ಕಾಣಿಕೆ ವಸೂಲು ಮಾಡಿದರು. ಹದಿನೈದನೇ ಶತಮಾನದಲ್ಲಿ ಕ್ರೈಸ್ತ ಪ್ರಭುತ್ವಗಳು ಸಾಮಾನ್ಯವಾಗಿ ಎಲ್ಲಕಡೆ ಇಳಿಕೆ ಹೊಂದುತ್ತಿದ್ದಾಗ ಕೇವಲ ಎರಡು ಸಂಗತಿಗಳು ಕ್ರೈಸ್ತರಿಗೆ ಸಮಾಧಾನಕರವಾಗಿದ್ದುವು; ಒಂದು ಮಾಸ್ಕೊ ತಿರುಗಿ ಸ್ವತಂತ್ರವಾದದ್ದು (ಕ್ರಿ.ಶ. 1480), ಇನ್ನೊಂದು, ನಿದಾನವಾಗಿ ಸ್ಪೇನನ್ನು ಕ್ರೈಸ್ತರು ಪುನಃ ಗೆಲ್ಲುತ್ತಾ ಬಂದದ್ದು. 1492 ರಲ್ಲಿ ಆ ಪರ್ಯಾಯ ದ್ವೀಪದ ಕಡೆಯ ಮುಸ್ಲಿಂ ರಾಜ್ಯವಾದ ಗ್ರನಾಡವನ್ನು ಆರಗನ್ನಿನ ಫರ್ಡಿನಾಂಡ್ ಮತ್ತು ಅವನ ರಾಣಿ ಕಾಸ್ಟಿಲ್‌ನ ಇಸಾಬೆಲ್ಲಾ ವಶಮಾಡಿಕೊಂಡರು.

ಆದರೆ ಕ್ರಿ.ಶ. 1571 ರ ವರೆಗೂ, ಲೆಪಾಂಟೊವಿನ ನೌಕಾಕದನ ಆಟೊಮನ್ನರ ಹಮ್ಮನ್ನು ಮುರಿಯುವವರೆಗೆ ಭೂಮಧ್ಯ ಸಮುದ್ರದಲ್ಲಿ ಕ್ರೈಸ್ತರ ಒಡೆತನ ಪುನಃ ಸ್ಥಾಪಿತವಾಗಲಿಲ್ಲ.

49. ಯುರೋಪಿನ ಬೌದ್ಧಿಕ ಪುನಃಜಾಗೃತಿ

ಹನ್ನೆರಡನೆಯ ಶತಮಾನದಾದ್ಯಂತವೂ ಯುರೋಪಿನ ಜನರ ಪ್ರಜ್ಞೆ ನಿರ್ಭಯತೆ ಮತ್ತು ವಿರಾಮಗಳನ್ನು ಪಡೆದುಕೊಂಡು ಗ್ರೀಕರ ಪ್ರಥಮ ವೈಜ್ಞಾನಿಕ ಶೋಧನೆಗಳಂತಹ ಬೌದ್ಧಿಕ ಸಾಹಸಗಳನ್ನೂ ಇಟಲಿಯ ಲ್ಯೂಕ್ರಿಷಿಯಸ್ಸನ ಚಿಂತನೆ

ಗಳಂತಹ ವಿಚಾರಗಳನ್ನೂ ಕೈಗೆ ತೆಗೆದುಕೊಳ್ಳುವ ಸಿದ್ಧತೆ ನಡೆಸುವುದೆಂಬುದಕ್ಕೆ ಅನೇಕ ಸೂಚನೆಗಳಿದ್ದುವು. ಈ ಪುನಶ್ಚೈತನ್ಯಕ್ಕೆ ಅನೇಕ ಜಟಿಲಕಾರಣಗಳಿದ್ದುವು. ಖಾಸಗಿ ದನಗಳಿಗೆ ಪ್ರತಿಬಂಧ, ಕ್ರೂಸೇಡುಗಳ ಫಲವಾಗಿ ಜನಜೀವನದಲ್ಲಿ ಬಂದ ಹೆಚ್ಚಿನ ಸುರಕ್ಷತೆ ಮತ್ತು ಉನ್ನತ ಮಟ್ಟದ ಜೀವನ ಸೌಕರ್ಯಗಳು. ಈ ದಂಡಯಾತ್ರೆಗಳ ಅನುಭವಗಳಿಂದ ಮಾನವರ ಬುದ್ಧಿಯ ಉತ್ತೇಜನೆ ಇವುಗಳು ನಿಸ್ಸಂದೇಹವಾಗಿ ಇದಕ್ಕೆ ಅವಶ್ಯವಾದ ಪೂರ್ವಭಾವೀ ವಿದ್ಯಮಾನಗಳಾಗಿದ್ದುವು. ವ್ಯಾಪಾರ ತಿರುಗಿ ಊರ್ಜಿತಗೊಳ್ಳುತ್ತಿತ್ತು. ನಗರಗಳಲ್ಲಿ ಸುರಕ್ಷತೆ ಮತ್ತು ಸೌಲಭ್ಯಗಳು ತಿರುಗಿ ಕಾಣಿಸಿಕೊಂಡವು. ಕ್ರೈಸ್ತ ಸಂಘದಲ್ಲಿ ವಿದ್ಯೆಯು ಮಟ್ಟ ಹೆಚ್ಚುತ್ತಿದ್ದ ಲೌಕಿಕ ವರ್ಗದಲ್ಲೂ ಹರಡುತ್ತಿದ್ದಿತು. ಹದಿಮೂರನೇ ಮತ್ತು ಹದಿನಾಲ್ಕನೇ ಶತಮಾನಗಳೆಂದರೆ ಸ್ವತಂತ್ರ ಅಥವಾ ಅರ್ಧ ಸ್ವತಂತ್ರವಾದ ನಗರಗಳ ಕಾಲ; ಉದಾ:- ವೆನಿಸ್, ಫ್ಲಾರೆನ್ಸ್, ಜಿನೋವ, ಲಿಸ್ಬನ್, ಪ್ಯಾರಿಸ್, ಬ್ರೂಜೆಸ್, ಲಂಡನ್, ಆಂಟ್‌ವರ್ಪ್, ಹಾಂಬುರ್ಗ್, ನ್ಯೂರೆಂಬರ್ಗ್, ನೌಗೋರಡ್, ವಿಸ್ಬಿ ಮತ್ತು ಬರ್ಗೆನ್. ಇವೆಲ್ಲ ವಾಣಿಜ್ಯ ನಗರಗಳಾಗಿದ್ದು ಅನೇಕ ಪ್ರಯಾಣಿಕರಿಂದ ತುಂಬಿರುತ್ತಿದ್ದವು. ಪ್ರಯಾಣ ಮಾಡುವ ಜನರಿದ್ದಲ್ಲಿ ಮಾತುಕತೆ ಮತ್ತು ಚಿಂತನೆಗಳು ನಡೆಯುತ್ತವೆ. ಪೋಪ್‌ಗಳ ಮತ್ತು ರಾಜರ ವಾದ ವಿವಾದಗಳು, ಮತ್ತು ಸಂಪ್ರದಾಯ ವಿರೋಧಿಗಳನ್ನು ಹಿಂಸಿಸುತ್ತಿದ್ದವರಲ್ಲಿ ಎದ್ದು ಕಾಣುತ್ತಿದ್ದ ಕ್ರೌರ್ಯ ಮತ್ತು ಕೆಟ್ಟತನಗಳು ಜನರಿಗೆ ಕ್ರೈಸ್ತ ಸಂಘದ ಅಧಿಕಾರದಲ್ಲಿ ಅಪನಂಬಿಕೆ ಹುಟ್ಟಲು ಮತ್ತು ಜನರು ಮೂಲಭೂತ ಸಂಗತಿಗಳನ್ನು ಪ್ರಶ್ನಿಸಿ ಚರ್ಚಿಸಲು ಉತ್ತೇಜಕಗಳಾದುವು.

ಅರಿಸ್ಟಾಟಲ್ ಮತ್ತೊಮ್ಮೆ ಯುರೋಪಿಗೆ ಪರಿಚಿತನಾಗಲು ಅರಬರು ಹೇಗೆ ಕಾರಣರಾದರು, ಅರಬರ ವಿಜ್ಞಾನ ಮತ್ತು ತತ್ವಜ್ಞಾನಗಳ ಪ್ರಭಾವವು ಪುನರುಜ್ಜೀವನಗೊಳ್ಳುತ್ತಿದ್ದ ಯುರೋಪಿನ ಪ್ರಜ್ಞೆಯ ಮೇಲೆ ಹರಿಯಲು ಎರಡನೇ ಫ್ರೆಡರಿಕ್ ರಾಜ ಹೇಗೆ ದಾರಿ ಮಾಡಿಕೊಟ್ಟನು ಎಂದು ನೋಡಿದೆವು. ಮಾನವರ ಭಾವನೆಗಳನ್ನು ಹೊಡೆದೆಬ್ಬಿಸುವುದರಲ್ಲಿ ಯಹೂದ್ಯರು ಇನ್ನೂ ಹೆಚ್ಚಿನ ಪ್ರಭಾವ ಬೀರಿದರು. ಅವರ ಅಸ್ತಿತ್ವವೇ ಕ್ರೈಸ್ತ ಸಂಘದ ಹೇಳಿಕೆಗಳಿಗೆ ಪ್ರಶ್ನಾರ್ಥಕ ಚಿಹ್ನೆಯಾಗಿತ್ತು. ಇವುಗಳಲ್ಲದೆ ಕೊನೆಯದಾಗಿ ರಸವಾದಿಗಳ ನಿಗೂಢವಾದ ಆಕರ್ಷಕ ಸಂಶೋಧನೆಗಳು ಬಹುದೂರ ಪಸರಿಸುತ್ತಿದ್ದುವು ಮತ್ತು ಇದರಿಂದ ಗುಟ್ಟುಗುಟ್ಟಾದ ಅಷ್ಟು ಮುಖ್ಯವಲ್ಲದ ಆದರೂ ಫಲದಾಯಕ ರೀತಿಯಲ್ಲಿ ಪ್ರಾಯೋಗಿಕ ವಿಜ್ಞಾನ ತಿರುಗಿ ಆಚರಣೆಗೆ ಬಂದಿತು.

ಸ್ವತಂತ್ರರಾದವರಿಗೆ ಮತ್ತು ಒಳ್ಳೆಯ ವಿದ್ಯೆ ಪಡೆದವರಿಗೆ ಮಾತ್ರ ಈ ಬುದ್ಧಿ ಪ್ರಚೋದನೆ ಸೀಮಿತವಾಗಿರಲಿಲ್ಲ. ಮಾನವ ವರ್ಗದ ಅನುಭವದಲ್ಲಿಯೇ ಅಭೂತಪೂರ್ವವಾದ ರೀತಿಯಲ್ಲಿ ಸಾಮಾನ್ಯ ಮನುಷ್ಯನ ಮನಸ್ಸು ಎಚ್ಚೆತ್ತಿತ್ತು. ಪಾದ್ರಿಗಳು

ಮತ್ತು ಕ್ರೈಸ್ತ ಸಂಘದ ಹಿಂಸಾಕೃತ್ಯಗಳಿಂದ ಕೂಡಿದ್ದರೂ ಸಹ ಕ್ರೈಸ್ತ ಧರ್ಮ ತಾನು ಕಾಲಿಟ್ಟಲ್ಲೆಲ್ಲಾ ನಿಸ್ಸಂಶಯವಾಗಿಯೂ ಬೌದ್ಧಿಕವಾಗಿ ಒಂದು ಬಗೆ ಹುದುಗೆಬ್ಬಿಸುವ ಪದಾರ್ಥದಂತೆ ಕೆಲಸ ಮಾಡಿತು ಎನಿಸುತ್ತದೆ. ಪ್ರತಿಯೊಬ್ಬ ವ್ಯಕ್ತಿಯ ಆತ್ಮಸಾಕ್ಷಿ ಮತ್ತು ಧರ್ಮ ಪರನಾದ ದೇವರ ನಡುವೆ ನೇರ ಸಂಪರ್ಕವನ್ನು ಈ ಧರ್ಮ ಸ್ಥಾಪಿಸಿತು. ಇದರ ಫಲವಾಗಿ ಆವಶ್ಯಕತೆ ಬಿದ್ದಾಗ ರಾಜನೋ ಮತಾಧಿಪತಿಯೋ ಧಾರ್ಮಿಕ ನಂಬಿಕೆ ಇವು ಏನಾದರೂ ಆಗಿರಲಿ ಅವನ ಅಥವಾ ಅದರ ಮೇಲೆ ತನ್ನದೇ ಆದ ತೀರ್ಮಾನಕ್ಕೆ ಬರುವ ಧೈರ್ಯ ಒಬ್ಬ ವ್ಯಕ್ತಿಯಲ್ಲಿ ಹುಟ್ಟಲು ಸಾಧ್ಯವಾಯಿತು.

ಹನ್ನೊಂದನೇ ಶತಮಾನದ ಹೊತ್ತಿಗಾಗಲೇ ದರ್ಶನ ಶಾಸ್ತ್ರ ಸಂಬಂಧವಾದ ಚರ್ಚೆಗಳು ಯೂರೋಪಿನಲ್ಲಿ ಮೊದಲಾಗಿದ್ದುವು. ಪ್ಯಾರಿಸ್, ಆಕ್ಸ್‌ಫರ್ಡ್, ಬೊಲೋನಾ ಮತ್ತು ಇತರ ಕೇಂದ್ರಗಳಲ್ಲಿ ವರ್ಧಮಾನಕ್ಕೆ ಬರುತ್ತಿದ್ದ ದೊಡ್ಡ ವಿಶ್ವವಿದ್ಯಾಲಯಗಳಿದ್ದುವು. ಅಲ್ಲಿ ಮಧ್ಯಯುಗದ ಪ್ರಾಧ್ಯಾಪಕರು ಪದಗಳ ಅರ್ಥ ಮತ್ತು ಮೌಲ್ಯಗಳಿಗೆ ಸಂಬಂಧಿಸಿದ ಪ್ರಶ್ನೆಗಳ ಸಾಲು ಸಾಲುಗಳನ್ನೇ ಕೂಲಂಕಷವಾಗಿ ಪುನಃ ಪುನಃ ಚರ್ಚಿಸಿ ಅವುಗಳ ನಿರ್ಣಯ ಮಾಡಿದರು. ಇದಾದ ಮೇಲೆ ಬಂದ ವಿಜ್ಞಾನ ಯುಗದ ನಿಷ್ಕೃಷ್ಟ ಚಿಂತನೆಗೆ ಈ ಚರ್ಚೆಗಳು ಆವಶ್ಯಕವಾದ ಪೂರ್ವಸಿದ್ಧತೆಗಳಾದುವು. ಇಲ್ಲಿ ಎದ್ದು ಕಾಣುವ ವ್ಯಕ್ತಿ ರೋಜರ್ ಬೇಕನ್ (1210–1293). ಆಧುನಿಕ ಪ್ರಾಯೋಗಿಕ ವಿಜ್ಞಾನದ ಪಿತಾಮಹನಾದ ಈ ಆಕ್ಸ್‌ಫರ್ಡಿನ ಫ್ರಾನ್ಸಿಸ್ಕನ್ನನದು ವಿಶಿಷ್ಟವಾದ ಪ್ರತಿಭೆ. ಅರಿಸ್ಟಾಟಲನನ್ನು ಬಿಟ್ಟರೆ ಚರಿತ್ರೆಯಲ್ಲಿ ಪ್ರಾಮುಖ್ಯತೆ ಸಲ್ಲುವುದು ಈತನಿಗೇ.

ಈತನ ಬರೆವಣಿಗೆಗಳ ತುಂಬ ಅಜ್ಞಾನದ ವಿರುದ್ಧ ಉದ್ರೇಕಭರಿತ ಆಕ್ಷೇಪಣೆ ತುಂಬಿದೆ. ತನ್ನ ಯುಗ ಅಜ್ಞಾನದ ಯುಗ ಎಂದು ಈತ ಹೇಳಿದನು. ಹೀಗೆ ಹೇಳಲು ಅವನಿಗೆ ಊಹಿಸಲಸಾಧ್ಯವಾದ ಧೈರ್ಯ ಇತ್ತೆನ್ನಬೇಕು. ಈಗಿನ ಕಾಲದಲ್ಲಿ ವ್ಯಕ್ತಿಯೊಬ್ಬನು ಪ್ರಪಂಚ ತಾನು ಅದೆಷ್ಟು ಮಹತ್ತ್ವಪೂರ್ಣ ಎಂದುಕೊಂಡಿದೆಯೋ ಅಷ್ಟೇ ಪೆದ್ದತನದ್ದೂ ಹೌದು, ಅದರಲ್ಲಿ ಬಳಕೆಯಲ್ಲಿರುವ ಮಾರ್ಗಗಳು ಇನ್ನೂ ಮಕ್ಕಳಾಟಿಕೆಯವು ಮತ್ತು ಒಡ್ಡತನದವು, ಅದರ ತತ್ತ್ವಗಳೆಲ್ಲಾ ಬಾಲಿಶ ಕಲ್ಪನೆಗಳು ಎಂದೆಲ್ಲಾ ಹೇಳಬಹುದು. ಅದರಿಂದ ಅವನ ಜೀವಕ್ಕೇನೂ ಅಪಾಯವಿಲ್ಲ. ಆದರೆ ಮಧ್ಯಯುಗಗಳ ಆ ಜನರು ಸಾಮೂಹಿಕ ಹತ್ಯೆ, ಕ್ಷಾಮ, ರೋಗರುಜಿನಗಳೇನನ್ನೂ ಎದುರಿಸುತ್ತಾ ಇಲ್ಲದಿದ್ದಾಗ ತಮ್ಮ ನಂಬಿಕೆಗಳು ಅತ್ಯಂತ ವಿವೇಚನಾಯುತವೂ ಪರಿಪೂರ್ಣವೂ ಆದುವು. ಅವುಗಳ ಮುಂದೆ ಬೇರೆ ಮಾತೇ ಇಲ್ಲ ಎಂದು ಆಳವಾಗಿ ನಂಬಿದ್ದರು, ಈ ನಂಬಿಕೆಗಳನ್ನು ಕುರಿತು ಯಾರಾದರೂ ಬೇರೆ ವಿಧವಾಗಿ ಆಲೋಚಿಸಿದಾಗ ಅದರ ಬಗ್ಗೆ ತೀವ್ರ ಅಸಮಾಧಾನ ತಾಳುತ್ತಿದ್ದರು. ರೋಜರ್ ಬೇಕನ್ನನ ಬರೆವಣಿಗೆಗಳು ಗಾಢವಾದ ಕತ್ತಲೆಯಲ್ಲಿ ಬೆಳಕು ಹೊಳೆ

ದಂತಿದ್ದುವು. ಈತ ತನ್ನ ಯುಗದ ಅಜ್ಞಾನವನ್ನು ಟೀಕಿಸುವದಲ್ಲದೆ ಜ್ಞಾನಾಭಿವೃದ್ಧಿಗಾಗಿ ವಿಪುಲವಾಗಿ ಸಲಹೆ ನೀಡಿದನು. ಪ್ರಯೋಗಗಳನ್ನು ನಡೆಸಬೇಕು, ಜ್ಞಾನವನ್ನು ಸಂಗ್ರಹಿಸಬೇಕು ಎಂದು ಈತ ಅತ್ಯಂತ ಆವೇಶದಿಂದ ಹೇಳುವುದನ್ನು ಗಮನಿಸುವಾಗ ಅರಿಸ್ಟಾಟಲಿನ ಚೇತನ ತಿರುಗಿ ಜೀವ ತಳೆಯಿತೆನ್ನಿಸುತ್ತದೆ. "ಪ್ರಯೋಗ ಮಾಡು, ಪ್ರಯೋಗಮಾಡು" ಇದೇ ರೋಜರ್‌ಬೇಕನ್ ಹಾಡಿದ ಪಲ್ಲವಿ.

ಆದರೂ ರೋಜರ್‌ಬೇಕನ್ ಅರಿಸ್ಟಾಟಲನಿಗೆ ವಿರೋಧವನ್ನು ವ್ಯಕ್ತಪಡಿಸಿದ್ದಾನೆ. ಜನ ಆಗ ಸತ್ಯಾಂಶಗಳನ್ನು ಧೈರ್ಯವಾಗಿ ಎದುರಿಸುವುದರ ಬದಲು ಕೋಣೆಗಳಲ್ಲಿ ಕುಳಿತು ಅರಿಸ್ಟಾಟಲನ ಗ್ರಂಥಗಳ ಕೀಳುದರ್ಜೆಯ ಲ್ಯಾಟಿನ್ ಭಾಷಾಂತರಗಳನ್ನು–(ಆ ಮಹಾಶಯನ ಗುತಾರ್ಗಿ ಸಿಗುತಿದ್ದುದು ಇವುಗಳೇ)–ಸುಮ್ಮನೆ ಮನನ ಮಾಡುತ್ತಿದ್ದರು. ಇದೇ ಬೇಕನ್ನನ ಈ ವಿರೋಧಕ್ಕೆ ಕಾರಣ. ಇದನ್ನು ಕುರಿತು ಈತ ತನ್ನದೇ ಆದ ಅತಿರೇಕದ ಮಾತುಗಳಲ್ಲಿ ಹೀಗೆ ಬರೆದನು "ನನ್ನ ಮಾತೇನಾದರೂ ನಡೆಯುವಂತಿದ್ದರೆ ನಾನು ಅರಿಸ್ಟಾಟಲನ ಪುಸ್ತಕಗಳನ್ನೆಲ್ಲ ಸುಟ್ಟುಹಾಕಿಬಿಡುತ್ತಿದ್ದೆ. ಏಕೆಂದರೆ ಅವುಗಳ ಅಧ್ಯಯನದಿಂದ ಸಮಯ ವ್ಯರ್ಥವಾಗುತ್ತದೆ, ತಪ್ಪು ಅಭಿಪ್ರಾಯಗಳು ಉಂಟಾಗುತ್ತವೆ. ಅಜ್ಞಾನ ವೃದ್ಧಿಯಾಗುತ್ತದೆ." ತನ್ನ ಪುಸ್ತಕಗಳನ್ನು, ಅದೂ ಬೇಕನ್ ತೋರಿಸಿ ಕೊಟ್ಟಂತೆ ಅತ್ಯಂತ ಕೆಟ್ಟ ಭಾಷಾಂತರಗಳನ್ನು, ಓದುವುದಕ್ಕಿಂತ ಹೆಚ್ಚಾಗಿ ಶ್ರದ್ಧೆಯಿಂದ ಪೂಜಿಸುತ್ತಿದ್ದ ಆ ಪ್ರಪಂಚಕ್ಕೆ ಬರಲು ಸಾಧ್ಯವಿದ್ದಿದ್ದರೆ ಅರಿಸ್ಟಾಟಲ್ ಸಹ ಬಹುಶಃ ಬೇಕನ್ನನ ಭಾವನೆಗಳನ್ನು ಪ್ರತಿಧ್ವನಿಸುತ್ತಿದ್ದನೆನ್ನಿಸುತ್ತದೆ.

ತನ್ನ ಪುಸ್ತಕಗಳ ಉದ್ದಕ್ಕೂ ರೋಜರ್ ಬೇಕನ್ ಮಾನವಕುಲವನ್ನುದ್ದೇಶಿಸಿ ಹೀಗೆ ಉದ್ಘೋಷಿಸಿದ್ದಾನೆ "ತರ್ಕಯುತವಲ್ಲದ ಸಿದ್ಧಾಂತಗಳಿಗೆ ಮತ್ತು ಪ್ರಭುತ್ವಕ್ಕೆ ತಲೆಬಾಗುವುದನ್ನು ಬಿಡಿ, ಜಗತ್ತಿನತ್ತ ದೃಷ್ಟಿಕೊಡಿ" ಸಂಪ್ರದಾಯ ಬದ್ಧರನ್ನು ಎದುರುಹಾಕಿಕೊಂಡರೆ ಬಂಧನ ಅಥವಾ ಅದಕ್ಕೂ ಹೆಚ್ಚಿನ ಶಿಕ್ಷೆಯಾದೀತೆಂಬ ಭಯದಿಂದ ಈ ಘೋಷಣೆಗೆ ಈತ ಸ್ವಲ್ಪಮಟ್ಟಿಗೆ ಮುಸುಕು ಹಾಕಿರಬಹುದು. ಇವನು ಅಜ್ಞಾನಕ್ಕೆ ನಾಲ್ಕು ಮೂಲಗಳನ್ನು ಹೇಳಿ ಅವುಗಳನ್ನು ಹೀಗಳೆದನು; ಅಧಿಕಾರ ಮತ್ತು ಸಂಪ್ರದಾಯಗಳಲ್ಲಿ ಮರ್ಯಾದೆ, ಅಜ್ಞಾನಭರಿತವಾದ ಜನಜಂಗುಳಿಯ ಭಾವನೆಗಳು, ನಾವೇನೂ ಕಲಿಯುವುದು ಇಲ್ಲವೆಂದು ತೀರ್ಮಾನಿಸುವ ನಮ್ಮ ಅಹಂಕಾರದ ಸ್ವಭಾವ—ಇವುಗಳನ್ನು ಜಯಿಸಿದರೆ ಸಾಕು, ಮಾನವರ ಬದುಕು ಶಕ್ತಿಪೂರ್ಣವಾಗುತ್ತದೆ :

ಹುಟ್ಟುಹಾಕುವವರಿಲ್ಲದೆಯೇ ಹಡಗು ನಡೆಸಬಲ್ಲ ಯಂತ್ರಗಳನ್ನು ನಿರ್ಮಿಸಲು ಸಾಧ್ಯ. ಇದರಿಂದ ನದಿ ಅಥವಾ ಸಾಗರಗಳ ಮೇಲೆ ಚಲಿಸಬಹುದಾದ ದೊಡ್ಡ ದೊಡ್ಡ ಹಡಗುಗಳನ್ನು ಒಬ್ಬನೇ ಒಬ್ಬನು ಅವುಗಳ ತುಂಬ ಜನರು ತುಂಬಿಕೊಂಡು ನಡೆಸುವುದಕ್ಕಿಂತ ಹೆಚ್ಚು ವೇಗದಿಂದ ನಡೆಸಬಲ್ಲ. ಹಾಗೆಯೇ ಭಾರ ಎಳೆಯುವ

ಪ್ರಾಣಿಗಳಿಲ್ಲದೆಯೇ ಚಲಿಸುವ ಗಾಡಿಗಳನ್ನು-ಪ್ರಾಚೀನ ಕಾಲದಲ್ಲಿ ಕತ್ತಿಯಲಗುಗಳನ್ನು ಜೋಡಿಸಿದ್ದ ಯುದ್ಧ ರಥಗಳು ಇದ್ದುವೆನ್ನುತ್ತಾರೆ-ಅಂತಹುದೇ ಊಹಿಸಲ ಸಾಧ್ಯವಾದ ಚಾಲಕ ಶಕ್ತಿಯಿಂದ ಕೂಡಿದ ಗಾಡಿಗಳನ್ನೂ ಮಾಡಬಹುದು. ಹಾರುವ ಯಂತ್ರಗಳದ್ದೂ ಸಾಧ್ಯತೆಯಿದೆ. ಇಂತಹ ಯಂತ್ರದ ಮಧ್ಯ ಭಾಗದಲ್ಲಿ ಒಬ್ಬ ಕುಳಿತು ಸಾಧನವೊಂದನ್ನು ತಿರುಗಿಸುತ್ತಿದ್ದರೆ ಕೃತಕ ರೆಕ್ಕೆಗಳು ಹಾರುವ ಹಕ್ಕಿಯಲ್ಲಿ ಬಡಿಯುವಂತೆ ಬಡಿದುಕೊಳ್ಳಬಹುದು."

ಹೀಗೆ ರೋಜರ್ ಬೇಕನ್ ಬರೆದನು. ಸಪ್ಪೆಯೆನಿಸುವ ದಿನನಿತ್ಯದ ಮಾನವ ಜೀವನದ ಕೆಳಗೆ ಖಂಡಿತವಾಗಿಯೂ ಶಕ್ತಿ ಮತ್ತು ಕುತೂಹಲಗಳ ಭಂಡಾರವೇ ಅಡಗಿದೆಯೆಂದು ಆತ ಗ್ರಹಿಸಿದ್ದನು. ಆದರೆ ಈ ಸಂಪತ್ತನ್ನು ವ್ಯವಸ್ಥಿತ ರೀತಿಯಲ್ಲಿ ಹುಡುಕಲು ಹೊರಡುವ ಪ್ರಯತ್ನಗಳು ಪ್ರಾರಂಭವಾಗಲೂ ಮತ್ತೆ ಮೂರು ಶತಮಾನಗಳು ಬೇಕಾದುವು.

ತತ್ತ್ವಜ್ಞಾನಿಗಳು ಮತ್ತು ರಸವಾದಿಗಳ ಮೂಲಕ ಪ್ರಚೋದನೆ ಅಷ್ಟೇ ಅಲ್ಲ ಸಾರಸೆನ್ ಪ್ರಪಂಚದಿಂದ ಕ್ರೈಸ್ತಪ್ರಪಂಚಕ್ಕೆ ಸಿಕ್ಕಿದ್ದು, ಸಾರಸೆನ್ನರು ಕಾಗದವನ್ನು ಕ್ರೈಸ್ತ ಪ್ರಪಂಚಕ್ಕೆ ತಂದರು. ಯೂರೋಪಿನ ಬೌದ್ಧಿಕ ಪುನರುಜ್ಜೀವನ ಸಾಧ್ಯವಾದದ್ದು ಕಾಗದದಿಂದಲೇ ಎಂದು ಹೇಳುವುದು ಅತಿಶಯೋಕ್ತಿಯಾಗಲಾರದು. ಕಾಗದದ ಜನ್ಮವಾಗಿದ್ದು ಚೀನದಲ್ಲಿ; ಬಹುಶಃ ಕ್ರಿ.ಶ. 2ನೇ ಶತಮಾನದಲ್ಲಿಯೇ ಕಾಗದ ಅಲ್ಲಿ ಉಪಯೋಗದಲ್ಲಿತ್ತು. ಕ್ರಿ.ಶ. 751ರಲ್ಲಿ ಚೀನೀಯರು ಸಮರಕಂದದ ಅರಬ್ ಮುಸ್ಲಿಮರ ಮೇಲೇರಿ ಹೋದರು. ಅರಬರು ಅವರನ್ನು ಹಿಮ್ಮೆಟ್ಟಿಸಿದರು. ಆಗ ಅರಬರ ವಶವಾದ ಬಂದಿಗಳಲ್ಲಿ ಕೆಲವರು ಕಾಗದದ ತಯಾರಿಕೆಯಲ್ಲಿ ಕೌಶಲ್ಯ ಪಡೆದವರಾಗಿದ್ದರು. ಇವರಿಂದ ಈ ಕಲೆಯನ್ನು ಅರಬರು ಕಲಿತುಕೊಂಡರು. ಒಂಬತ್ತನೇ ಶತಮಾನ ಮತ್ತು ಅದರಿಂದೀಚಿನ ಅರಾಬಿಕ್ ಭಾಷೆಯ ಹಸ್ತಪ್ರತಿಗಳು ಈಗಲೂ ಇವೆ. ಈ ತಯಾರಿಕೆಯ ತಂತ್ರ ಕ್ರೈಸ್ತಪ್ರಪಂಚವನ್ನು ಗ್ರೀಸ್ ಮೂಲಕವೋ ಕ್ರೈಸ್ತರು ಸ್ಪೇನನ್ನು ತಿರುಗಿ ತಮ್ಮ ವಶಪಡಿಸಿಕೊಂಡಾಗ ಅವರಿಗೆ ಸಿಕ್ಕಿದ ಮೂರ್ ಕಾಗದದ ಕಾರ್ಖಾನೆಗಳಿಂದಲೋ ಪ್ರವೇಶಿಸಿರಬೇಕು. ಆದರೆ ಸ್ಪೇನಿನ ಕ್ರೈಸ್ತರ ಕೆಳಗೆ ಈ ಉತ್ಪನ್ನದ ಗುಣಮಟ್ಟ ತುಂಬಾ ಇಳಿದು ಹೋಯಿತು. ಹದಿಮೂರನೇ ಶತಮಾನದ ಕೊನೆಯವರೆಗೆ ಕ್ರೈಸ್ತ ಯೂರೋಪಿನಲ್ಲಿ ಉತ್ತಮವಾದ ಕಾಗದ ತಯಾರಾಗಲಿಲ್ಲ. ಆಗಲೂ ಇದರಲ್ಲಿ ಮುಂದಿದ್ದುದು ಸ್ಪೇನ್ ಅಲ್ಲ, ಇಟಲಿ. ಹದಿನಾಲ್ಕನೇ ಶತಮಾನದವರೆಗೆ ಈ ತಂತ್ರ ಜರ್ಮನಿಯನ್ನು ಮುಟ್ಟಲಿಲ್ಲ. ಆ ಶತಮಾನದ ಕೊನೆಯವರೆಗೂ, ಮುದ್ರಣ ಲಾಭದಾಯಕ ವೃತ್ತಿಯಾಗುವಷ್ಟರ ಮಟ್ಟಿಗೆ ಕಾಗದ ಯಥೇಷ್ಟವಾಗಿ ಅಗ್ಗವಾಗಿ ಸಿಗುತ್ತಿರಲಿಲ್ಲ. ಅಲ್ಲಿಂದೀಚೆಗೆ ಮುದ್ರಣ ಕಾರ್ಯ ಬೆಳೆಯುವುದು ಸಹಜ ಮತ್ತು ಅನಿವಾರ್ಯವಾಯಿತು. ಏಕೆಂದರೆ ಪುಸ್ತಕ ಮುದ್ರಣ ಅಂತಹ ರಹಸ್ಯಪೂರ್ಣ ಸಂಶೋಧನೆಯೇನಲ್ಲ. ಪ್ರಪಂಚದ ಬೌದ್ಧಿಕ

ಜೀವನ ಮೊದಲಿಗಿಂತ ತುಂಬ ಹೆಚ್ಚಿನ ಹುರುಪಿನಿಂದ ಕೂಡಿದ ಒಂದು ನೂತನ ಯುಗವನ್ನು ಪ್ರವೇಶಿಸಿತು. ಒಂದು ವ್ಯಕ್ತಿಯ ಮನದಿಂದ ಮತ್ತೊಂದು ವ್ಯಕ್ತಿಯ ಮನಕ್ಕೆ ತೊಟ್ಟಿಕ್ಕುತ್ತಿದ್ದ ಇದು ಒಂದು ವಿಶಾಲವಾದ ಪ್ರವಾಹವಾಗಿ, ಇದರಲ್ಲಿ ಸಾವಿರಾರು, ಬಳಿಕ ಲಕ್ಷೋಪಲಕ್ಷ ಚೇತನಗಳು ಪಾಲ್ಗೊಂಡವು.

ಮುದ್ರಣ ಸಾಧ್ಯವಾಗುತ್ತಲೂ ಕಂಡುಬಂದ ಒಂದು ಫಲವೆಂದರೆ ಬೈಬಲ್ಲು ಪ್ರತಿಗಳು ಹೇರಳವಾಗಿ ಕಾಣಿಸಿಕೊಂಡದ್ದು. ಮತ್ತೊಂದು ಫಲ ಅಗ್ಗದ ಶಾಲಾ ಪುಸ್ತಕಗಳು. ಅಕ್ಷರಜ್ಞಾನ ಬಹುಬೇಗ ಹರಡಿತು. ಪ್ರಪಂಚದಲ್ಲಿ ಪುಸ್ತಕಗಳ ಸಂಖ್ಯೆ ಹೆಚ್ಚಿದುದೇ ಅಲ್ಲದೆ ಈಗ ಹೊರಬರುತ್ತಿದ್ದ ಪುಸ್ತಕಗಳು ಮೊದಲಿಗಿಂತ ಸರಳವಾಗಿದ್ದು ಸುಲಭವಾಗಿ ಅರ್ಥಮಾಡಿಕೊಳ್ಳುವಂತಿದ್ದುವು. ತೊಡಕು ತೊಡಕಾದ ಬರವಣಿಗೆ ಯನ್ನು ಪ್ರಯಾಸಪಟ್ಟು ಓದಿ ಬಳಿಕ ಅದರ ತಾತ್ಪರ್ಯವೇಸಿರಬಹುದೆಂದು ಚಿಂತಿಸುತ್ತಾ ಕುಳಿತುಕೊಳ್ಳುವುದರ ಬದಲು ಓದುಗರು ಬರವಣಿಗೆಯನ್ನು ಓದುತ್ತಾ ಓದುತ್ತಾ ಹಾಗೆಯೇ ಅದನ್ನು ಕುರಿತು ಚಿಂತಿಸಲೂ ಸಾಧ್ಯವಾಯಿತು. ಓದುವರಲ್ಲಿ ಸೌಲಭ್ಯ ಹೆಚ್ಚಿದಂತೆ ಓದುವವರೂ ಹೆಚ್ಚಾದರು. ಇನ್ನುಮುಂದೆ ಪುಸ್ತಕ ಎಂದರೆ ವಿಶೇಷ ವಾಗಿ ಅಲಂಕೃತವಾದ ಥಳುಕಿನ ಸಾಮಾನೋ ವಿದ್ವಾಂಸರ ರಹಸ್ಯಪೂರ್ಣ ಸ್ವತ್ತೋ ಆಗಬೇಕಾಗಿರಲಿಲ್ಲ. ಸಾಮಾನ್ಯ ಜನರು ಬರಿ ನೋಡುವುದಷ್ಟೇ ಅಲ್ಲದೆ ಓದಲೂ ಬೇಕೆಂಬ ಉದ್ದೇಶದಿಂದ ಪುಸ್ತಕಗಳನ್ನು ಬರಹಗಾರರು ಬರೆಯತೊಡಗಿದರು. ಇವರು ಜನರು ಬಳಸುತ್ತಿದ್ದ ಸಾಮಾನ್ಯ ಭಾಷೆಯಲ್ಲಿ ಬರೆದರು, ಲ್ಯಾಟಿನ್ನಿನಲ್ಲಲ್ಲ. ಯೂರೋಪಿನ ಸಾಹಿತ್ಯದ ನೈಜ ಚರಿತ್ರೆ ಮೊದಲಾಗುವುದು ಹದಿನಾಲ್ಕನೇ ಶತಮಾನದಿಂದ.

ಇದುವರೆಗೂ ಯೂರೋಪಿನ ಪುನರುಜ್ಜೀವನದಲ್ಲಿ ಸಾರಸೆನ್ನರ ಪಾತ್ರವನ್ನಷ್ಟೇ ಕುರಿತು ವಿಚಾರ ಮಾಡಲಾಗಿದೆ. ಈಗ ಮಂಗೋಲ್ ದಂಡಯಾತ್ರೆಗಳ ಪ್ರಭಾವ ವನ್ನು ಗಮನಿಸೋಣ. ಯೂರೋಪಿನ ಜನರ ಕಲ್ಪನಾಶಕ್ತಿಯನ್ನು ಭೌಗೋಳಿಕ ವಾಗಿ ಈದಂಡಯಾತ್ರೆಗಳು ಬಹುವಾಗಿ ಪ್ರಚೋದಿಸಿದುವು. ಖಾನ್ ಚಕ್ರವರ್ತಿಗಳ ಆಡಳಿತದಲ್ಲಿ ಕೆಲವುಕಾಲ ಪಶ್ಚಿಮಯೂರೋಪು ಮತ್ತು ಏಷ್ಯದ ಎಲ್ಲಭಾಗಗಳ ನಡುವೆ ವ್ಯವಹಾರಕ್ಕೆ ಯಾವ ಅಡೆತಡೆಯೂ ಇರಲಿಲ್ಲ. ರಸ್ತೆಗಳೆಲ್ಲಾ ಆ ಕಾಲದ ಮಟ್ಟಿಗೆ ತೆರಪಾಗಿದ್ದುವು. ಕಾರಾಕೊರಮ್ಮಿನ ಆಸ್ಥಾನಕ್ಕೆ ಎಲ್ಲ ಜನಾಂಗಗಳ ಪ್ರತಿನಿಧಿ ಗಳೂ ಬರುತ್ತಿದ್ದರು. ಕ್ರೈಸ್ತಮತ ಮತ್ತು ಇಸ್ಲಾಂಗಳ ಧಾರ್ಮಿಕ ವೈರದಿಂದ ಏರ್ಪಟ್ಟಿದ್ದ ಪ್ರತಿಬಂಧಕಗಳು ಕಳಸರಿದುವು. ಪೋಪ್ ಮತ್ತು ಆತನ ಕಡೆಯವರು ಮಂಗೋಲರನ್ನು ಕ್ರೈಸ್ತರನ್ನಾಗಿ ಪರಿವರ್ತಿಸಬೇಕೆಂದು ಬಹಳ ಆಶೆಯಿಟ್ಟುಕೊಂಡಿ ದ್ದರು. ಅದುವರೆಗೆ ಮಂಗೋಲರ ಮತವೆಂದರೆ ಷಾಮನಿಸಮ್–ಅಂದರೆ ಒಂದು ಬಗೆಯ ಸರಳವಾದ, ಅನೇಕ ದೇವತೆಗಳಲ್ಲಿ ನಂಬಿಕೆಯಿರುವ ಮತವಾಗಿತ್ತು. ಮಂಗೋಲ್ ಆಸ್ಥಾನದಲ್ಲಿ ಪೋಪನ ರಾಯಭಾರಿಗಳು, ಇಂಡಿಯದ ಬೌದ್ಧಭಿಕ್ಷುಗಳು,

ಪ್ಯಾರಿಸ್, ಇಟಲಿ ಮತ್ತು ಚೀನದ ಕುಶಲಕರ್ಮಿಗಳು ಬೈಜಾಂಟಿಯಮ್ ಮತ್ತು ಆರ್ಮೀನಿಯದ ವ್ಯಾಪಾರಿಗಳು, ಅರಬ್ ಅಧಿಕಾರಿಗಳು ಮತ್ತು ಪರ್ಷಿಯದ ಮತ್ತು ಭಾರತದ ಜ್ಯೋತಿಶಾಸ್ತ್ರಜ್ಞರು ಮತ್ತು ಗಣಿತಜ್ಞರು ಎಲ್ಲ ಕಾಣಬರುತ್ತಿದ್ದರು. ಇತಿಹಾಸದಲ್ಲಿ ಮಂಗೋಲರ ದಂಡಯಾತ್ರೆಗಳು ಮತ್ತು ಅವರು ನಡೆಸಿದ ಹತ್ಯಾಕಾಂಡಗಳ ಬಗೆಗೆ ತುಂಬ ಕೇಳಿಬರುತ್ತದೆ. ಆದರೆ ಅವರ ಕುತೂಹಲ ಪ್ರವೃತ್ತಿ ಮತ್ತು ಜ್ಞಾನಾಕಾಂಕ್ಷೆಗಳ ಬಗೆಗೆ ಹೇಳಿರುವುದು ಏನೂ ಸಾಲದು. ಜ್ಞಾನ ಮತ್ತು ತಂತ್ರಗಳ ಮೂಲ ಇವರದಾಗಿಲ್ಲದಿರಬಹುದು, ಆದರೆ ಅವುಗಳು ಒಂದೆಡೆಯಿಂದ ಇನ್ನೊಂದೆಡೆಗೆ ಸಾಗಲು ಅನುಕೂಲ ಮಾಡಿಕೊಟ್ಟ ಇವರ ಪಾತ್ರ ಪ್ರಪಂಚದ ಚರಿತ್ರೆಯಲ್ಲಿ ಬಹಳದೊಡ್ಡದು. ಚೆಂಗಿಸ್ ಮತ್ತು ಕುಬ್ಲೈ ಖಾನರ ವ್ಯಕ್ತಿತ್ವಗಳು ಅಸ್ಪಷ್ಟವಾಗಿ ಕಂಡುಬರುತ್ತಿದ್ದು ಕಟ್ಟುಕತೆಯ ವ್ಯಕ್ತಿತ್ವಗಳಂತೆ ಇವೆ. ಆದರೆ ಇವರನ್ನು ಕುರಿತು ನಮಗೆ ತಿಳಿದಿರುವಷ್ಟು ಸಂಗತಿಗಳೂ ಸಹಾ " ಈ ಮನುಷ್ಯರು ಆಡಂಬರಯುತವಾದ ಆದರೆ ಸ್ವಪ್ರತಿಷ್ಠೆಯಿಂದ ಕೂಡಿದ ಅಲೆಕ್ಸಾಂಡರ್ ಮಹಾಶಯ, ಹಳೆಯ ರಾಜಕೀಯ ಭೂತಗಳನ್ನೆಬ್ಬಿಸಿದ ಉತ್ಸಾಹಪ್ರವೃತ್ತಿಯ, ಹಾಗೇ ನಿರಕ್ಷರಕುಕ್ಷಿಯಾಗಿದ್ದ ಧರ್ಮಶಾಸ್ತ್ರಾಸಕ್ತ ಷಾರ್ಲಮನ್ ಇವರಷ್ಟಾದರೂ ತಿಳಿವಳಿಕೆಯುಳ್ಳವರೂ ರಚನಾಶೀಲ ಪ್ರವೃತ್ತಿಯುಳ್ಳವರೂ ಆಗಿದ್ದಿರಬೇಕು " ಎಂಬ ಭಾವನೆಯನ್ನು ದೃಢಪಡಿಸುತ್ತವೆ.

ಈ ಮಂಗೋಲ್ ಆಸ್ಥಾನಕ್ಕೆ ಬಂದವರಲ್ಲೆಲ್ಲಾ ಅತ್ಯಂತ ಕುತೂಹಲಪೂರ್ಣ ವ್ಯಕ್ತಿಯೆಂದರೆ ಮಾರ್ಕೋಪೋಲೋ ಎಂಬ ವೆನಿಸ್ ಪಟ್ಟಣದ ಮನುಷ್ಯ. ಈತ ಮುಂದೆ ತನ್ನ ಕತೆಯನ್ನು ಒಂದು ಪುಸ್ತಕರೂಪದಲ್ಲಿ ಬರೆದನು. ಕ್ರಿ.ಶ. 1272 ರಲ್ಲಿ ಇವನು ತನ್ನ ತಂದೆ ಮತ್ತು ಚಿಕ್ಕಪ್ಪಂದಿರೊಡನೆ ಚೀನಕ್ಕೆ ಹೋದನು. ಅವರಿಬ್ಬರೂ ಇದಕ್ಕೆ ಮೊದಲೇ ಒಂದು ಸಲ ಅಲ್ಲಿಗೆ ಹೋಗಿ ಬಂದಿದ್ದರು. ಖಾನನಿಗೆ ಅವರ ವಿಷಯದಲ್ಲಿ ತುಂಬ ಒಳ್ಳೆ ಅಭಿಪ್ರಾಯ ಉಂಟಾಗಿತ್ತು. ಆತನು ಕಂಡ ಲ್ಯಾಟಿನ್ ಜನಾಂಗದ ಪ್ರಥಮವ್ಯಕ್ತಿಗಳು ಇವರೇ. ಕ್ರೈಸ್ತಧರ್ಮವನ್ನು ವಿವರಿಸಬಲ್ಲ ಬೋಧಕರು ಮತ್ತು ವಿದ್ವಾಂಸರು, ಅಲ್ಲದೆ ತನಗೆ ಕುತೂಹಲವನ್ನುಂಟು ಮಾಡಿದ್ದ ಇನ್ನೂ ಇತರ ಅನೇಕ ಐರೋಪ್ಯವಸ್ತುಗಳಿಗಾಗಿ ಈತ ಇವರನ್ನು ತಿರುಗಿ ಯೂರೋಪಿಗೆ ಕಳುಹಿಸಿದ್ದನು. ಮಾರ್ಕೋವಿನೊಡನೆ ಅವರು ಚೀನಕ್ಕೆಕೊಟ್ಟಿದ್ದು ಎರಡನೆಯ ಭೇಟಿ.

ಈ ಮೂವರು ಪೋಲೋಗಳೂ ಪ್ಯಾಲೆಸ್ಟೈನಿನ ಮಾರ್ಗವಾಗಿ ಹೋದರು. ಮೊದಲ ಪ್ರವಾಸದಲ್ಲಿ ಮಾಡಿದ್ದಂತೆ ಕ್ರಿಮಿಯಾ ಮಾರ್ಗವಾಗಿ ಹೋಗಲಿಲ್ಲ. ಖಾನನು ಕೊಟ್ಟಿದ್ದ ಬರಹ ಕೆತ್ತಲಾಗಿದ್ದ ಒಂದು ಒಂದು ಚಿನ್ನದ ಹಲಗೆ ಮತ್ತಿತರ ಕುರುಹುಗಳೂ ಇವರ ಬಳಿ ಇದ್ದುವು. ಇವುಗಳಿಂದ ಅವರ ಪ್ರಯಾಣಕ್ಕೆ ಬಹಳ ಅನುಕೂಲವಾಗಿದ್ದಿರಬೇಕು. ಜೆರೂಸಲೆಮ್ಮಿನ ಪವಿತ್ರ ಸಮಾಧಿಯಲ್ಲಿ ಉರಿಯುತ್ತಿರುವ ದೀಪದ ಎಣ್ಣೆ ಸ್ವಲ್ಪ ಬೇಕೆಂದು ಖಾನನು ಕೇಳಿದ್ದನು. ಆದುದರಿಂದ ಇವರು ಮುಂಚೆ

ಅಲ್ಲಿಗೆ ಹೋಗಿ ಅಲ್ಲಿಂದ ಸೈಲೀಷಿಯ ಮಾರ್ಗವಾಗಿ ಆರ್ಮೀನಿಯಕ್ಕೆ ಹೋದರು. ಆಗ ಈಜಿಪ್ಟಿನ ಸುಲ್ತಾನನು ಮಂಗೋಲರ ವಶದಲ್ಲಿದ್ದ ಪ್ರದೇಶಗಳ ಮೇಲೆ ದಾಳಿ ನಡೆಸುತ್ತಿದ್ದುದರಿಂದ ಅವರು ಅಷ್ಟು ಉತ್ತರಕ್ಕೆ ಹೋಗಬೇಕಾಯಿತು. ಅಲ್ಲಿಂದ ಸಮುದ್ರಮಾರ್ಗವಾಗಿ ಪ್ರಯಾಣಮಾಡಲು ಉದ್ದೇಶಿಸಿರುವವರಂತೆ ಮೆಸಪೊಟೇಮಿಯಮಾರ್ಗವಾಗಿ ಪರ್ಷಿಯನ್ ಖಾರಿಯ ಹಾರ್ಮುಜ್ ಗೆಬಂದರು. ಅಲ್ಲಿ ಇವರಿಗೆ ಇಂಡಿಯದಿಂದ ಬಂದ ವ್ಯಾಪಾರಿಗಳ ಭೇಟಿಯಾಯಿತು. ಏಕೋ ಏನೋ, ಇವರು ಹಡಗು ಹತ್ತಲಿಲ್ಲ. ಉತ್ತರಕ್ಕೆ ತಿರುಗಿ ಪರ್ಷಿಯದ ಮರಳುಕಾಡುಗಳ ಮೂಲಕ ಬಾಲ್ಖ್ ಮಾರ್ಗವಾಗಿ ಪಾಮಿರ್ ಮೇಲೆ ಕಾಷ್ಗರಿಗೆ, ಕೋತಾನ್ ಮತ್ತು ಲಾಬ್ ನಾರ್ ಮಾರ್ಗವಾಗಿ ಹ್ವಾಂಗ್ ಹೋ ಕಣಿವೆ ಅಲ್ಲಿಂದ ಪೀಕಿಂಗಿಗೆ ಹೋದರು. ಪೀಕಿಂಗಿನಲ್ಲಿ ಖಾನನು ಇವರನ್ನು ಆದರದಿಂದ ಸತ್ಕರಿಸಿದನು.

ಕುಬ್ಲೈಖಾನನಿಗೆ ಮಾರ್ಕೊವಿನಮೇಲೆ ವಿಶೇಷ ಪ್ರೀತಿ ಉಂಟಾಯಿತು. ಚಿಕ್ಕವಯಸ್ಸಿನ ಮಾರ್ಕೊ ಚತುರನಾಗಿದ್ದನು. ಅವನು ಟಾರ್ಟರ್ ಭಾಷೆಯನ್ನು ಸಂಪೂರ್ಣವಾಗಿ ಕರಗತಮಾಡಿಕೊಂಡಿದ್ದನೆಂಬುದು ಸ್ಪಷ್ಟ. ಇವನಿಗೆ ಸರ್ಕಾರಿ ಹುದ್ದೆಯೊಂದನ್ನು ಕೊಡಲಾಯಿತು. ಅನೇಕ ನಿಯೋಗಗಳ ಮೇಲೆ ಮುಖ್ಯವಾಗಿ ನೈರುತ್ಯಚೀನಕ್ಕೆ ಕಳುಹಿಸಲಾಯಿತು. ಉಲ್ಲಾಸದಿಂದ ತುಂಬಿದ್ದ ಸಂಪದ್ಭರಿತವಾದ ವಿಸ್ತಾರವಾದ ಭೂಭಾಗಗಳು ದಾರಿಯುದ್ದಕ್ಕೂ ಪ್ರಯಾಣಿಕರಿಗಾಗಿ ಅತ್ಯುತ್ತಮ ವಸತಿ ಸೌಕರ್ಯಗಳು. ಉತ್ತಮವಾದ ದ್ರಾಕ್ಷಾರಾಮಗಳು ಹೊಲಗದ್ದೆಗಳು ಮತ್ತು ತೋಟಗಳು, ಅನೇಕ ಬೌದ್ಧಮಠಗಳು, ರೇಷ್ಮೆ, ಬಂಗಾರದ ಜರಿಬಟ್ಟೆ ಮತ್ತು ಟಾಫೆಟಾಗಳ ನೇಕಾರರು, ಒಂದಾದ ಮೇಲೊಂದು ಕಾಣಬರುತ್ತಿದ್ದ ಪಟ್ಟಣಗಳು ಮತ್ತು ಊರುಗಳು ಇತ್ಯಾದಿಗಳನ್ನು ವರ್ಣಿಸಿ ಇವನು ಹೇಳಿದ ಸಂಗತಿಗಳು ಮೊದಲು ಯೂರೋಪಿನ ಜನರಿಗೆ ನಂಬಲು ಅನರ್ಹವಾಗಿ ತೋರಿತು. ಬಳಿಕ ಅವರ ಕಲ್ಪನೆಯನ್ನು ಉದ್ದೀಪನಗೊಳಿಸಿತು. ಬರ್ಮಾದೇಶ, ನೂರಾರು ಆನೆಗಳಿಂದ ಕೂಡಿದ್ದ ಅಲ್ಲಿಯ ದೊಡ್ಡ ಸೈನ್ಯಗಳು, ಈ ಸೈನ್ಯಗಳು ಮಂಗೋಲ್ ಬಿಲ್ಲುಗಾರರಿಂದ ಅನುಭವಿಸಿದ ಸೋಲು, ಪೆಗುವನ್ನು ಮಂಗೋಲರು ಗೆದ್ದುಕೊಂಡದ್ದು ಇವುಗಳನ್ನು ಈತ ವಿವರಿಸಿದನು. ಜಪಾನಿನ ವಿಷಯ ಹೇಳುತ್ತಾ ಇವನು ಅಲ್ಲಿ ಅಗಾಧ ಪ್ರಮಾಣದಲ್ಲಿ ಚಿನ್ನ ಇದೆ ಎಂದು ಉತ್ಪ್ರೇಕ್ಷಿಸಿದನು. ಮೂರುವರ್ಷಗಳು ಮಾರ್ಕೊ ಯಾಂಗಚೌ ಪಟ್ಟಣದ ನಗರಪಾಲನಾಗಿದ್ದನು. ಪ್ರಾಯಶಃ ಅಲ್ಲಿನ ಚೀನೀನಿವಾಸಿಗಳಿಗೆ ಟಾರ್ಟರ್ ವ್ಯಕ್ತಿ ಯಾವನಾದರೂ ರಾಜ್ಯಪಾಲನಾಗಿದ್ದರೆ ಹೇಗೋ ಅದಕ್ಕಿಂತ ಇವನು ಅಂತಹ ಪರಕೀಯನೆನಿಸಲೇ ಇಲ್ಲ. ಇವನನ್ನು ಭಾರತಕ್ಕೂ ನಿಯೋಗಿಯಾಗಿ ಕಳುಹಿಸಿದ್ದಿರಬಹುದು. ಚೀನೀ ದಾಖಲೆಗಳು ಚಕ್ರವರ್ತಿಯ ಮಂತ್ರಾಲೋಚನಾಸಭೆಯಲ್ಲಿ 1277ರಲ್ಲಿ ಪೋಲೊ ಎಂಬೊಬ್ಬಾತನಿದ್ದನೆಂದು ಹೇಳುತ್ತವೆ. ಪೋಲೋಗಳ ಕತೆಯ ಪ್ರಾಮಾಣಿಕತೆಯನ್ನು ಪುಷ್ಟೀಕರಿಸುವ ಅತ್ಯಂತ ಅಮೂಲ್ಯ ಸಂಗತಿ ಇದು.

ಯೂರೋಪಿನ ಜನತೆಯ ಕಲ್ಪನಾಶಕ್ತಿಯಮೇಲೆ "ಮಾರ್ಕೊ ಪೋಲೋವಿನ ಪ್ರಯಾಣಗಳು" ಇದರ ಪ್ರಕಟಣೆ ಅತ್ಯಂತ ಗಾಢವಾದ ಪ್ರಭಾವಬೀರಿತು. ಯೂರೋಪಿನ ಸಾಹಿತ್ಯ–ಅದರಲ್ಲೂ ಹದಿನೈದನೆಯ ಶತಮಾನದ ಯೂರೋಪಿನ ಕಥಾ ಸಾಹಿತ್ಯದಲ್ಲಿ ಮಾರ್ಕೊ ಪೋಲೊವಿನ ಕತೆಯಲ್ಲಿ ಬರುವ ಕ್ಯಾಥೇ (ಉತ್ತರ ಚೀನ) ಮತ್ತು ಕಾಂಬಾಲುಕ್ (ಪೀಕಿಂಗ್) ಮತ್ತು ಅಂತಹುದೇ ಇತರ ಹೆಸರುಗಳು ಮತ್ತೆಮತ್ತೆ ಮಾರ್ದನಿಗೊಟ್ಟಂತೆ ಬರುತ್ತವೆ.

ಎರಡು ಶತಮಾನಗಳನಂತರ ಮಾರ್ಕೊಪೋಲೋವಿನ ಪ್ರಯಾಣಗಳನ್ನು ಓದಿದವರಲ್ಲಿ ಜಿನೋವದ ನಾವಿಕ ಕ್ರಿಸ್ಟೋಫರ್ ಕೊಲಂಬಸ್ ಎನ್ನುವವನೂ ಒಬ್ಬ. ಪಶ್ಚಿಮ ದಿಕ್ಕಿಗೆ ಸಮುದ್ರಯಾನ ಮಾಡಿ ಭೂಮಿಯನ್ನು ಸುತ್ತುವರಿದು ಚೀನವನ್ನು ಮುಟ್ಟಬೇಕೆಂಬ ಒಂದು ಅತ್ಯುತ್ತಮ ಯೋಜನೆ ಇವನ ಮನಸ್ಸಿನಲ್ಲಿ ಹುಟ್ಟಿತು. ಸೆವಿಲ್‌ನಲ್ಲಿರುವ "ಮಾರ್ಕೊಪೋಲೊವಿನ ಪ್ರಯಾಣಗಳು" ಪ್ರತಿಯೊಂದರ ಪುಟಗಳ ಅಂಚುಗಳಲ್ಲಿ ಕೊಲಂಬಸ್‌ನ ಟಿಪ್ಪಣಿಗಳಿವೆ. ಈ ನಿಟ್ಟಿನಲ್ಲಿ ಬುದ್ಧಿ ಓಡಿಸಿದವನು ಜಿನೋವ ಪಟ್ಟಣಿಗನೇ ಆಗಿರಲು ಅನೇಕ ಕಾರಣಗಳಿದ್ದುವು. 1453 ರಲ್ಲಿ ತುರುಕರ ಕೈವಶವಾಗುವವರೆಗೂ ಕಾನ್‌ಸ್ಟಂಟಿನೋಪಲ್ ಪಟ್ಟಣವು ಪಾಶ್ಚಿಮಾತ್ಯ ಮತ್ತು ಪೌರ್ವಾತ್ಯ ಪ್ರಪಂಚಗಳ ಮಧ್ಯೆ ನಿಷ್ಪಕ್ಷಪಾತದಿಂದ ಇದ್ದ ವಾಣಿಜ್ಯ ಕೇಂದ್ರವಾಗಿತ್ತು. ಜಿನೋವದ ನಾಗರಿಕರು ಅಲ್ಲಿ ಯಾವ ನಿರ್ಬಂಧಕ್ಕೂ ಒಳಗಾಗದೆ ವ್ಯಾಪಾರ ಮಾಡುತ್ತಿದ್ದರು. ಆದರೆ ಇವರ ಉಗ್ರ ಪ್ರತಿಸ್ಪರ್ಧಿಗಳಾದ "ಲ್ಯಾಟಿನ್" ವೆನಿಷಿಯನ್ನರು ತುರುಕರಿಗೆ ಗ್ರೀಕರ ಮೇಲಿನ ವೈರದಲ್ಲಿ ಮಿತ್ರರೂ ಸಹಾಯಕರೂ ಆಗಿದ್ದರು. ತುರುಕರು ಗೆದ್ದುಕೊಂಡ ಮೇಲೆ ಕಾನ್‌ಸ್ಟಂಟಿನೋಪಲ್ ಪಟ್ಟಣವು ಜಿನೋವ ಪಟ್ಟಣದ ವ್ಯಾಪಾರವನ್ನು ಸ್ನೇಹಭಾವದಿಂದ ನೋಡುತ್ತಿರಲಿಲ್ಲ. ಭೂಮಿ ಗುಂಡಾಗಿದೆಯೆಂಬ ವಿಷಯ ಎಷ್ಟೋ ಕಾಲ ಮರೆತುಹೋಗಿದ್ದುದು ತಿರುಗಿ ಮೆಲ್ಲ ಮೆಲ್ಲನೆ ಮಾನವರ ಮನಸ್ಸುಗಳ ಮೇಲೆ ಪ್ರಭಾವ ಬೀರತೊಡಗಿತ್ತು. ಪಶ್ಚಿಮಾಭಿಮುಖವಾಗಿ ಹೊರಟು ಚೀನಕ್ಕೆ ಹೋಗಬೇಕೆಂಬ ಯೋಚನೆ ಆದುದರಿಂದ ಅತ್ಯಂತ ಸಹಜವಾದುದಾಗಿತ್ತು. ಈ ಯೋಜನೆಗೆ ಪ್ರೋತ್ಸಾಹ ಕೊಡಲು ಎರಡು ಹೊಸ ಸಂಗತಿಗಳಿದ್ದುವು. ಮೊದಲನೆಯದಾಗಿ ನಾವಿಕರ ದಿಕ್ಸೂಚಿ ಆಗ ತಾನೆ ನಿರ್ಮಿತವಾಗಿತ್ತು; ಮಾನವರು ತಮ್ಮ ನೌಕಾಯಾನದ ದಿಕ್ಕನ್ನು ನಿರ್ಧರಿಸಲು ಸ್ವಚ್ಛ ಆಕಾಶವುಳ್ಳ ರಾತ್ರಿ ಮತ್ತು ಆಗ ಮಾತ್ರ ಕಾಣುವ ನಕ್ಷತ್ರಗಳಿಗಾಗಿ ಕಾದು ಕುಳಿತಿರಬೇಕಾಗಿರಲಿಲ್ಲ. ಮತ್ತೊಂದು ಸಂಗತಿ ಅಷ್ಟು ಹೊತ್ತಿಗಾಗಲೇ ನಾರ್ಮನ್ನರು, ಕ್ಯಾಟಲೋನಿನವರು, ಜಿನೋವದವರು ಮತ್ತು ಪೋರ್ಚುಗೀಸರು ಅಟ್ಲಾಂಟಿಕ್ ಸಾಗರದಲ್ಲಿ ಕ್ಯಾನರಿ ದ್ವೀಪಗಳು, ಮಡೀರ ಮತ್ತು ಅಜೋರ್ ದ್ವೀಪಗಳವರೆಗೂ ಮುನ್ನುಗ್ಗಿ ಹೋಗಿದ್ದುದು.

ಆದರೂ ಕೊಲಂಬಸ್ ತನ್ನ ಯೋಜನೆಗಳನ್ನು ಪ್ರಯೋಗಿಸಲು ಹಡಗು

ಗಳನ್ನು ಸಂಪಾದಿಸುವ ಮೊದಲು ಅನೇಕ ಅಡ್ಡಿಗಳನ್ನೆದುರಿಸಬೇಕಾಯಿತು. ಯುರೋಪಿನಲ್ಲಿ ಒಬ್ಬ ರಾಜನ ಆಸ್ಥಾನದಿಂದ ಮತ್ತೊಂದಕ್ಕೆ ಆತ ತಿರುಗಿದನು. ಮೂರ್ ಜನರಿಂದ ಅದೇ ತಾನೇ ಗೆದ್ದುಕೊಂಡಿದ್ದ ಗ್ರನಾಡಾದಲ್ಲಿ ಕಟ್ಟ ಕಡೆಗೆ ಫರ್ಡಿನಾಂಡ್ ಮತ್ತು ಇಸಾಬೆಲ್ಲಾರ ಆಶ್ರಯ ಇವನಿಗೆ ಸಿಕ್ಕಿ ಅಜ್ಞಾತಸಾಗರವನ್ನು ದಾಟುವುದಕ್ಕಾಗಿ ಮೂರು ಸಣ್ಣ ಹಡಗುಗಳಲ್ಲಿ ಹೊರಡಲು ಸಾಧ್ಯವಾಯಿತು. ಎರಡು ತಿಂಗಳು ಒಂಬತ್ತು ದಿನಗಳ ಯಾನದ ನಂತರ ಇವನು ಒಂದು ಭೂಪ್ರದೇಶವನ್ನು ಮುಟ್ಟಿದನು. ಅದೇ ಇಂಡಿಯ ಎಂದು ಈತ ತಿಳಿದರೂ ನಿಜವಾಗಿಯೂ ಅದು ಒಂದು ಹೊಸ ಭೂಖಂಡವಾಗಿತ್ತು. ಇಂತಹ ಭೂಖಂಡ ಇರಬಹುದೆಂದು ಹಳೆಯ ಭೂಮಿಯೆಂದು ಈಗ ಕರೆಯುವ ಏಷ್ಯ ಯುರೋಪು ಆಫ್ರಿಕಗಳ ಜನ ಅದುವರೆಗೂ ಕನಸು ಮನಸ್ಸಿನಲ್ಲಿಯೂ ಊಹಿಸಿರಲಿಲ್ಲ. ಅಲ್ಲಿಂದ ಕೊಲಂಬಸ್ ಸ್ಪೇನಿಗೆ ಹತ್ತಿ, ಚಿನ್ನ, ಹೊಸಬಗೆಯ ಪ್ರಾಣಿಗಳು, ಮತ್ತು ಕ್ರೈಸ್ತದೀಕ್ಷೆ ಕೊಡಿಸುವುದಕ್ಕಾಗಿ ಕರೆತಂದ ಇಬ್ಬರು ಕೆರಳಿದ ಕಣ್ಣುಗಳ ಬಣ್ಣ ಬಳಿದುಕೊಂಡಿದ್ದ " ಇಂಡಿಯನ್ನ " ರೊಡನೆ ಹಿಂತಿರುಗಿದನು. ಕೊಲಂಬಸ್ ತನ್ನ ಕಡೆಗಾಲದ ವರೆಗೆ ತಾನು ಕಂಡುಹಿಡಿದ ಭೂಮಿ ಇಂಡಿಯ ಎಂದೇ ನಂಬಿದ್ದುದೇ ಇವರನ್ನು ಇಂಡಿಯನ್ನರೆಂದು ಕರೆಯಲು ಕಾರಣ. ಹೊಸ ಭೂಖಂಡ ಒಂದು ಇಡಿಯಾಗಿ ಪ್ರಪಂಚದ ಸಂಪತ್ತಿಗೆ ಸೇರಿಕೊಂಡಿತು ಎಂದು ಜನರು ಗ್ರಹಿಸಿದ್ದು ಹಲವಾರು ವರ್ಷ ಕಳೆಯುತ್ತಾ ಬಂದ ಮೇಲೆಯೇ.

ಕೊಲಂಬಸ್‌ನ ಈ ವಿಜಯ ಸಮುದ್ರಾಂತರದ ಸಾಹಸ ಕಾರ್ಯಗಳಿಗೆ ತುಂಬಾ ಉತ್ತೇಜನ ಕೊಟ್ಟಿತು. 1497 ರಲ್ಲಿ ಪೋರ್ಚುಗೀಸರು ಆಫ್ರಿಕವನ್ನು ಸುತ್ತುವರಿದು ಇಂಡಿಯವನ್ನು ಸೇರಿದರು. 1515 ರಲ್ಲಿ ಜಾವಾದಲ್ಲಿ ಪೋರ್ಚುಗೀಸ್ ಹಡಗುಗಳನ್ನು ಕಾಣಬಹುದಾಗಿತ್ತು. 1519 ರಲ್ಲಿ ಸ್ಪೇನಿನವರಲ್ಲಿ ನೌಕರಿ ಮಾಡುತ್ತಿದ್ದ ಪೋರ್ಚುಗೀಸರವನಾದ ಮ್ಯಾಗೆಲನ್ ಎಂಬಾತನು ಸೆವಿಲ್‌ನಿಂದ ಪಶ್ಚಿಮಾಭಿಮುಖವಾಗಿ ಐದು ಹಡಗುಗಳೊಡನೆ ಹೊರಟನು. ಇವುಗಳಲ್ಲಿ ವಿಕ್ಟೋರಿಯೆಂಬ ಹಡಗು 1522 ರಲ್ಲಿ ಸೆವಿಲ್‌ನ ನದಿ ಮುಖದ ಮಾರ್ಗವಾಗಿ ವಾಪಸಾಯಿತು. ಇದೇ ಭೂಮಿಯನ್ನು ಪ್ರದಕ್ಷಿಣೆ ಮಾಡಿದ ಮೊದಲ ಹಡಗು. ಸೆವಿಲ್‌ನಿಂದ ಹೊರಟಿದ್ದ 280 ನಾವಿಕರಲ್ಲಿ ಉಳಿದುಳಿದ ಮೂವತ್ತೊಂದು ಜನ ಈ ಹಡಗಿನಲ್ಲಿದ್ದರು. ಮ್ಯಾಗೆಲನ್ ಫಿಲಿಪ್ಪೈನ್ಸ್ ದ್ವೀಪಗಳಲ್ಲಿ ಕೊಲೆಯಾಗಿ ಹೋಗಿದ್ದನು.

ಯುರೋಪಿನ ಮಾನವ ಚೇತನದ ಮುಂದೆ ಮುದ್ರಿತ ಕಾಗದದ ಪುಸ್ತಕಗಳು, ಗುಂಡಾಗಿರುವ ಭೂಮಿಯನ್ನೆಲ್ಲಾ ಶೋಧಿಸಲು ಸಾಧ್ಯ ಎನ್ನುವ, ಹೊಸ ಗ್ರಹಿಕೆ, ಹೊಸಹೊಸದಾದ ಭೂಭಾಗಗಳು, ಪ್ರಾಣಿಸಸ್ಯಗಳು, ನಡೆವಳಿಕೆ ನಿಯಮಗಳ ಹೊಸ ನೋಟ, ಸಮುದ್ರಾಂತರದ ಸಂಶೋಧನೆಗಳು, ಆಕಾಶ ಸಂಶೋಧನೆಗಳು, ನೂತನ ಜೀವನ ಸಾಮಗ್ರಿಗಳು ಮತ್ತು ವಿಧಾನಗಳು ಒಂದಾಗುತ್ತಲೊಂದು ಬಹು ಬೇಗನೇ

ಪ್ರತ್ಯಕ್ಷವಾದುವು. ಎಷ್ಟೋ ಕಾಲ ಭೂಗತವಾಗಿ ಮರೆತೇ ಹೋಗಿದ್ದ ಗ್ರೀಕ್ ಗ್ರಂಥಗಳನ್ನು ಬೇಗ ಬೇಗ ಮುದ್ರಿಸಿ ಅಧ್ಯಯನ ಮಾಡುವುದು ಪ್ರಾರಂಭವಾಯಿತು. ಇದರ ಫಲವಾಗಿ ಮಾನವ ಚಿಂತನಕ್ಕೆ ಪ್ಲೇಟೋವಿನ ಕನಸುಗಳು ಮತ್ತು ಪ್ರಜಾ ರಾಜ್ಯದ ಸ್ವಾತಂತ್ರ್ಯ ಮತ್ತು ಘನತೆಗಳ ಆ ಯುಗದ ಸಂಪ್ರದಾಯಗಳ ರಂಗೇರಿತು. ರೋಮಿನ ಆಧಿಪತ್ಯ ಪಶ್ಚಿಮ ಯುರೋಪಿಗೆ ಶಿಸ್ತು ಮತ್ತು ಕಾನೂನುಗಳನ್ನು ತಂದಿತ್ತು. ಲ್ಯಾಟಿನ್ ಕ್ರೈಸ್ತ ಸಂಘ ಅವುಗಳ ಪುನರುದ್ಧಾರ ಮಾಡಿತ್ತು. ಆದರೆ ಕ್ರೈಸ್ತೇತರ ಮತ್ತು ಕ್ಯಾಥೊಲಿಕ್ ರೋಮ್‌ಗಳೆರಡರಲ್ಲೂ ಕುತೂಹಲ ಮತ್ತು ನವೀನತೆಗಳು ವ್ಯವಸ್ಥಿತ ಸಂಸ್ಥೆಗಳಿಗೆ ವಿಧೇಯನಾಗಿದ್ದು ಅವುಗಳಿಂದ ನಿಯಂತ್ರಿತ ವಾಗಿದ್ದುವು. ಲ್ಯಾಟಿನ್ ಚೇತನದ ಆಡಳಿತ ಈಗ ಕೊನೆಯಾಗುವುದರಲ್ಲಿತ್ತು. 13 ಮತ್ತು 16ನೇ ಶತಮಾನಗಳ ನಡುವೆ ಯೂರೋಪಿನ ಆರ್ಯನರು ಗ್ರೀಕ್ ಗ್ರಂಥ ಗಳ ಪುನರುತ್ಥಾನ ಮತ್ತು ಸೆಮೈಟ್ ಮತ್ತು ಮಂಗೋಲರ ಚೈತನ್ಯಕಾರಕ ಪ್ರಭಾವ ಗಳ ಫಲವಾಗಿ ಲ್ಯಾಟಿನ್ ಸಂಪ್ರದಾಯದಿಂದ ಹೊರಬಿದ್ದು ಮತ್ತೆ ಮಾನವರ ಬೌದ್ಧಿಕ ಮತ್ತು ಪ್ರಾಪಂಚಿಕ ಮುಂದಾಳುತನಕ್ಕೇರಿದರು.

50. ಲ್ಯಾಟಿನ್ ಕ್ರೈಸ್ತಸಂಘದ ಸುಧಾರಣೆ

ಈ ಬೌದ್ಧಿಕ ಪುನರ್ಜನ್ಮದಿಂದ ಲ್ಯಾಟಿನ್ ಕ್ರೈಸ್ತಸಂಘವೇ ದೊಡ್ಡ ಬದಲಾವಣೆಗಳಿಗೊಳಗಾಗಿ ತುಂಡಾಗಿ ಹೋಯಿತಲ್ಲದೆ ಆದರಲ್ಲಿ ಉಳಿದುಕೊಂಡ ಭಾಗದಲ್ಲಿ ಆಳವಾದ ಬದಲಾವಣೆಗಳಾದುವು.

ಹನ್ನೊಂದು ಮತ್ತು ಹನ್ನೆರಡನೇ ಶತಮಾನಗಳಲ್ಲಿ ಕ್ರೈಸ್ತಸಂಘವು ಸಮಗ್ರ ಕ್ರೈಸ್ತ ಪ್ರಪಂಚವನ್ನು ಹೆಚ್ಚು ಕಡಿಮೆ ನಿರಂಕುಶವಾಗಿ ಆಳುವಂತೆ ಆಗಿತ್ತೆಂದೂ, ಹದಿನಾಲ್ಕು ಮತ್ತು ಹದಿನೈದನೇ ಶತಮಾನಗಳಲ್ಲಿ ಮಾನವರ ಮನಸ್ಸು ಮತ್ತು ವ್ಯವಹಾರಗಳ ಮೇಲೆ ಅದರ ಹಿಡಿತ ಹೇಗೆ ಸಡಿಲವಾಯಿತೆಂಬುದನ್ನೂ ನೋಡಿದೆವು. ಮೊದಲು ಅದಕ್ಕೆ ಆಧಾರ ಮತ್ತು ಶಕ್ತಿಯಾಗಿದ್ದ ಸಾಮಾನ್ಯ ಜನತೆಯ ಧಾರ್ಮಿಕ ಉತ್ಸಾಹವೇ ಹೇಗೆ ಅದರ ಅಹಂಕಾರ, ಹಿಂಸಾಕೃತ್ಯಗಳು ಮತ್ತು ಅಧಿಕಾರದ ಕೇಂದ್ರೀಕರಣಗಳ ಫಲವಾಗಿ ಅದರ ವಿರುದ್ಧ ತಿರುಗಿ ಬಿದ್ದಿತೆಂಬುದನ್ನೂ ಎರಡನೇ ಫ್ರೆಡರಿಕನ ಗುಪ್ತವಾದ ಸಂದೇಹವಾದದ ಫಲವಾಗಿ ರಾಜರು ಹೇಗೆ ಅದಕ್ಕೆ ಅವಿಧೇಯ ರಾಗುತ್ತಾ ಹೋದರೆಂಬುದನ್ನೂ ವಿವರಿಸಲಾಯಿತು. ಸಂಘದ ಮಹಾಭಿದ್ರದ ನಂತರ ಅವರ ಧಾರ್ಮಿಕ ಮತ್ತು ರಾಜಕೀಯ ಅಂತಸ್ತು ಅತ್ಯಂತ ಕೆಳಮಟ್ಟಕ್ಕಿಳಿದು ಹೋಗಿತ್ತು. ಈ ಜನತೆಯ ಬಂಡಾಯ ಅದಕ್ಕೆ ಎರಡೂ ಪಾರ್ಶ್ವಗಳಿಂದ ಪೆಟ್ಟು ಕೊಟ್ಟಿತು.

ಇಂಗ್ಲೆಂಡಿನ ವೈಕ್ಲಿಫ್ಫನ ಬೋಧನೆಗಳು ಯುರೋಪಿನಾದ್ಯಂತ ಹರಡಿದುವು. 1398ರಲ್ಲಿ ಜಾನ್‌ಹಸ್ ಎಂಬ ಜೆಕ್ ಮನುಷ್ಯನು ಪ್ರಾಹದ ವಿಶ್ವವಿದ್ಯಾನಿಲಯದಲ್ಲಿ

ವೈಕ್ಲಿಫ್ಫನ ಬೋಧನೆಗಳನ್ನು ಕುರಿತು ಭಾಷಣಗಳನ್ನು ಕೊಟ್ಟನು. ಈ ಬೋಧನೆ ವಿದ್ಯೆಯಿಲ್ಲದಿರುವವರನ್ನೂ ಮುಟ್ಟಿ ಶೀಘ್ರವಾಗಿ ಹರಡಿ ಜನತೆಯಲ್ಲಿ ಅದ್ಭುತ ಉತ್ಸಾಹವನ್ನು ತಂದಿತು. 1414–1418ರಲ್ಲಿ ಕಾನ್‌ಸ್ಟನ್ಸ್ ಪಟ್ಟಣದಲ್ಲಿ ಸಮಗ್ರ ಕ್ರೈಸ್ತ ಸಂಘದ ಸಭೆಯನ್ನು ಸಂಘದ ಮಹಾಭಿದ್ರವನ್ನು ಪರಿಹರಿಸಲು ಕರೆಯಲಾಯಿತು. ಚಕ್ರವರ್ತಿಯ ಅಭಯ ವಾಗ್ದಾನದ ಮೇಲೆ ಹಸ್‌ನನ್ನು ಈ ಸಭೆಗೆ ಆಮಂತ್ರಿಸಿ ಅಲ್ಲಿ ಆತನನ್ನು ಹಿಡಿದು ಧರ್ಮಬಾಹಿರತೆಯ ಆರೋಪ ಹೊರಿಸಿ ವಿಚಾರಣೆಗೆ ಗುರಿಮಾಡಿ ಜೀವಂತ ಸುಡಲಾಯಿತು (1415). ಇದರಿಂದೇನೂ ಬೊಹೀಮಿಯದ ಜನರು ತಣ್ಣಗಾಗಲಿಲ್ಲ. ಅದರ ಬದಲು ಇದೇ ಕಾರಣವಾಗಿ ಹಸ್‌ನ ಅನುಯಾಯಿಗಳು ಅಲ್ಲಿ ದಂಗೆಯೆದ್ದರು. ಲ್ಯಾಟಿನ್ ಕ್ರೈಸ್ತಸಂಘದ ಭೇದಕ್ಕೆ ನಾಂದಿಹಾಡಿದ ಧಾರ್ಮಿಕ ಯುದ್ಧಗಳ ಸರಣಿಯಲ್ಲಿ ಇದು ಮೊದಲನೆಯದು. ತಿರುಗಿ ಒಂದಾಗಿದ್ದ ಕ್ರೈಸ್ತ ಪ್ರಪಂಚದ ಮುಖ್ಯಸ್ಥನೆಂದು ಕಾನ್‌ಸ್ಟನ್ಸಿನಲ್ಲಿ ಚುನಾವಣೆಯಾಗಿದ್ದ ಪೋಪ್, ಐದನೆಯ ಮಾರ್ಟಿನ್ ಈ ದಂಗೆಯ ವಿರುದ್ಧ ಕ್ರೂಸೇಡ್ ಹೊರಡಬೇಕೆಂದು ಬೋಧಿಸಿದನು.

ಗಟ್ಟಿಮುಟ್ಟಾದ ಈ ಪುಟ್ಟ ಜನಾಂಗ ಐದು ಕ್ರೂಸೇಡುಗಳನ್ನು ಹೊರಡಿಸಿದರೂ ಅವೆಲ್ಲವೂ ವಿಫಲವಾದುವು. 13ನೇ ಶತಮಾನದಲ್ಲಿ ವಾಲ್ಡೆನ್ಸರ ಮೇಲೆ ಮಾಡಿದ್ದಂತೆ ಕೆಲಸಕಾರ್ಯಗಳಿಲ್ಲದ ಯುರೋಪಿನ ಗೂಂಡಾಗಳೆಲ್ಲರನ್ನೂ 15ನೇ ಶತಮಾನದಲ್ಲಿ ಬೊಹೀಮಿಯದ ಮೇಲೆ ಕಳುಹಿಸಲಾಯಿತು. ಆದರೆ ಬೊಹೀಮಿಯದ ಜೆಕ್ಕರು ವಾಲ್ಡೆನ್ಸರಂತೆ ಅಹಿಂಸಾವಾದಿಗಳಾಗಿರಲಿಲ್ಲ. ಅವರೆಲ್ಲಾ ಸಶಸ್ತ್ರ ಪ್ರತಿಭಟನೆ ನಡೆಸುವವರಾಗಿದ್ದರು. ಕದನರಂಗಗಳಲ್ಲಿ ಹಸ್ಸೈಟರ ಗಾಡಿಗಳ ಶಬ್ದ ಮತ್ತು ಹಸ್ಸೈಟ್ ಸೈನಿಕರ ಜಯಘೋಷಗಳು ದೂರದಿಂದ ಕೇಳಿಸಿದ್ದೇ ತಡ ಬೊಹೀಮಿಯ ಕ್ರೂಸೇಡಿನ ಸೈನ್ಯ ಯುದ್ಧಮಾಡುವುದಕ್ಕೂ ಕಾಯದೆ ಕರಗಿ ಹೋಗುತ್ತಿತ್ತು (ಡೊಮಾಜ್ಲಿಸ್ ಕದನ 1431). 1436ರಲ್ಲಿ ಹಾಗೂ ಹೀಗೂ ಬಾಸ್ಲ್‌ನಲ್ಲಿ ಕ್ರೈಸ್ತಸಂಘದ ಸಮಿತಿ ಮತ್ತು ಹಸ್ಸೈಟ್‌ಗಳ ನಡುವೆ ತೇಪೆಹಾಕಿದಂತೆ ಒಂದು ಒಪ್ಪಂದವಾಯಿತು. ಇದರಲ್ಲಿ ಲ್ಯಾಟಿನ್ ಕ್ರೈಸ್ತಸಂಘದ ರೂಢಿಗಳ ಮೇಲಿನ ಆಕ್ಷೇಪಣೆಗಳನ್ನು ಅನೇಕವನ್ನು ಒಪ್ಪಿಕೊಳ್ಳಬೇಕಾಯಿತು.

ಹದಿನೈದನೇ ಶತಮಾನದಲ್ಲಿ ಯುರೋಪಿನಾದ್ಯಂತ ಒಂದು ಮಹಾಜಾಡ್ಯವು ಸಮಾಜದ ವ್ಯವಸ್ಥೆಯನ್ನು ತುಂಬಾ ಹದಗೆಡಿಸಿತ್ತು. ಸಾಮಾನ್ಯ ಜನರಲ್ಲಿ ವಿಪರೀತ ಕಷ್ಟ ಮತ್ತು ಅಸಮಾಧಾನ ಉಂಟಾಗಿ ಇಂಗ್ಲೆಂಡು ಮತ್ತು ಫ್ರಾನ್ಸುಗಳಲ್ಲಿ ಬಡರೈತರು ಜಮೀನ್ದಾರರು ಮತ್ತು ಹಣವಂತರ ಮೇಲೆ ದಂಗೆಯೆದ್ದಿದ್ದರು. ಹಸ್ಸೈಟ್ ಯುದ್ಧಗಳ ನಂತರ ಈ ರೈತ ಬಂಡಾಯಗಳು ತೀವ್ರವಾಗ ತೊಡಗಿ ಕಡೆಗೆ ಮತೀಯ ರೂಪತಳೆದುವು. ಈ ಬೆಳವಣಿಗೆಯ ಮೇಲೆ ಮುದ್ರಣದ ಪ್ರಭಾವವೂ ಇತ್ತು. ಹದಿನೈದನೇ ಶತಮಾನದ ಮಧ್ಯದಲ್ಲಿ ಹಾಲೆಂಡು ಮತ್ತು ರ್ಹೈನ್‌ಲ್ಯಾಂಡಿನ

ಮುದ್ರಣಕಾರರು ಚಲಿಸಲು ಆಗುವ ಮುದ್ರಣದ ಮೊಳೆಗಳನ್ನು ಉಪಯೋಗಿಸುತ್ತಿದ್ದರು. ಈ ತಂತ್ರ ಇಟಲಿ, ಇಂಗ್ಲೆಂಡ್‌ಗಳಿಗೆ ಹರಡಿ ಇಂಗ್ಲೆಂಡಿನ ವೆಸ್ಟ್ ಮಿನಿಸ್ಟರ್‌ನಲ್ಲಿ 1477ರಲ್ಲಿ ಕ್ಯಾಕ್ಸ್‌ಟನ್ ಮುದ್ರಣಕಾರ್ಯ ನಡೆಸುತ್ತಿದ್ದನು. ಇದರಿಂದ ತಕ್ಷಣ ಬೈಬಲ್ಲು ಪ್ರತಿಗಳ ಸಂಖ್ಯೆ ಮತ್ತು ಹಂಚಿಕೆ ಹೆಚ್ಚಿತು. ಜನತೆಯಲ್ಲಿ ವ್ಯಾಪಕವಾಗಿ ವಿವಾದಗಳು ನಡೆಯಲು ಅವಕಾಶಗಳು ಹೆಚ್ಚಾದುವು. ಇದಕ್ಕೆ ಹಿಂದೆ ಯಾವಾಗಲೂ ಯಾವ ಸಮಾಜದಲ್ಲೂ ಕಂಡಿಲ್ಲದ ಪ್ರಮಾಣದಲ್ಲಿ ಯುರೋಪಿನ ಪ್ರಪಂಚ ಓದುಗರ ಪ್ರಪಂಚವಾಯಿತು. ಹೀಗೆ ಜನತೆಯ ಮನಸ್ಸು ಸ್ಪಷ್ಟವಾದ ಭಾವನೆಗಳು ಮತ್ತು ಸುಲಭ ಗ್ರಾಹ್ಯವಾದ ತಿಳಿವಳಿಕೆಗಳಿಗೆ ಇದ್ದಕ್ಕಿದ್ದಂತೆ ತೆರೆದಾಗಲೇ ಕ್ರೈಸ್ತಸಂಘವೂ ಒಡೆದುಹೋಗಿ ಗೊಂದಲದಲ್ಲಿ ಬಿದ್ದು ತನ್ನ ಪಕ್ಷವನ್ನೂ ಪರಿಣಾಮಕಾರಿಯಾಗಿ ಮುಂದಿಡುವ ಸ್ಥಿತಿಯಲ್ಲಿರಲಿಲ್ಲ. ಇದೇ ಸಮಯದಲ್ಲಿಯೇ ಅನೇಕ ರಾಜರು ತಮ್ಮ ರಾಜ್ಯಗಳಲ್ಲಿ ಈ ಸಂಘವು ಹೊಂದಿದ್ದ ಅಪಾರ ಐಶ್ವರ್ಯವನ್ನು ಅದರ ಹಿಡಿತದಿಂದ ಬಿಡಿಸಿಕೊಳ್ಳುವ ಅವಕಾಶಗಳಿಗಾಗಿ ಕಾಯುತ್ತಿದ್ದರು.

ಜರ್ಮನಿಯಲ್ಲಿ ಕ್ರೈಸ್ತಸಂಘದ ಮೇಲಿನ ಈ ಹೋರಾಟದಲ್ಲಿ ಮಾರ್ಟಿನ್ ಲೂಥರ್ (1483–1546) ಎಂಬ ಮಾಜಿ ಸಂನ್ಯಾಸಿ ಕೇಂದ್ರ ವ್ಯಕ್ತಿಯಾದನು. 1517ರಲ್ಲಿ ಇವನು ಅನೇಕ ಸಾಂಪ್ರದಾಯಿಕ ಸಿದ್ಧಾಂತಗಳು ಮತ್ತು ನಡೆವಳಿಕೆಗಳ ವಿರುದ್ಧ ತನ್ನ ವಾದಗಳನ್ನು ವಿಟೆನ್‌ಬರ್ಗಿನಲ್ಲಿ ಮುಂದಿಟ್ಟನು. ಮೊದಲಿಗೆ ಇವನು ವಿದ್ಯಾವಂತರ ಧಾಟಿಯಲ್ಲಿ ಲ್ಯಾಟಿನ್ನಿನಲ್ಲಿ ವಾದ ನಡೆಸಿದನು. ಬಳಿಕ ಇಂತಹ ವಾದಗಳಲ್ಲಿ ಹೊಸ ಆಯುಧವಾಗಿ ಬಳಸಬಹುದಾಗಿದ್ದ ಮುದ್ರಣದ ಸಹಾಯದಿಂದ ತನ್ನ ಅಭಿಪ್ರಾಯಗಳನ್ನು ಜರ್ಮನ್ ಭಾಷೆಯಲ್ಲಿ ಸಾಮಾನ್ಯ ಜನರನ್ನು ಸಂಬೋಧಿಸಿ ಬಹುದೂರದವರೆಗೆ ಹರಡಿದನು. ಹಸ್‌ನನ್ನು ತುಳಿದುಹಾಕಿದಂತೆ ಇವನನ್ನೂ ತುಳಿಯುವ ಪ್ರಯತ್ನ ನಡೆಯಿತು ಆದರೆ ಮುದ್ರಣಯಂತ್ರದ ಪರಿಣಾಮವಾಗಿ ಪರಿಸ್ಥಿತಿ ಬಹಳ ಬದಲಾಗಿತ್ತು. ಜರ್ಮನ್ ರಾಜರುಗಳಲ್ಲಿ ಕೆಲವರು ಗುಟ್ಟಾಗಿಯೂ ಕೆಲವರು ಎಲ್ಲರಿಗೂ ತಿಳಿದಂತೆಯೂ ಲೂಥರನಿಗೆ ಸ್ನೇಹಿತರಾಗಿದ್ದುದರಿಂದ ಅವನಿಗೆ ಆ ದುರ್ಗತಿ ತಪ್ಪಿತು.

ಈ ಯುಗದಲ್ಲಿ ಮತಶ್ರದ್ಧೆ ಕುಗ್ಗುತ್ತಿತ್ತು, ಹೊಸ ಹೊಸ ಅಭಿಪ್ರಾಯಗಳು ಬೆಳೆಯುತ್ತಿದ್ದುವು. ತಮ್ಮ ಪ್ರಜೆಗಳಿಗೂ ರೋಮಿಗೂ ಇದ್ದ ಧಾರ್ಮಿಕ ಸಂಬಂಧವನ್ನು ಮುರಿದು ಬಿಟ್ಟರೆ ತಮಗೆ ಅನುಕೂಲವಾಗುತ್ತದೆಯೆಂದು ಅನೇಕ ರಾಜರು ತಿಳಿದುಕೊಂಡರು. ರಾಷ್ಟ್ರೀಯ ತಳಹದಿ ಇದಕ್ಕಿಂತ ಬಲವಾಗಿರುವ ಧರ್ಮಕ್ಕೆ ತಾವೇ ವೈಯಕ್ತಿಕವಾಗಿ ಮುಖ್ಯಸ್ಥರಾಗಲು ಅವರು ಪ್ರಯತ್ನ ಪಟ್ಟರು. ಇಂಗ್ಲೆಂಡ್, ಸ್ಕಾಟ್ಲೆಂಡ್, ಸ್ವೀಡನ್, ನಾರ್ವೆ, ಡೆನ್ಮಾರ್ಕ್, ಉತ್ತರ ಜರ್ಮನಿ ಮತ್ತು ಬೊಹೀಮಿಯಗಳು ಒಂದಾಗುತ್ತಲೊಂದು ರೋಮಿನ ಪ್ರಭು ಭೋಜನ ಸಂಸ್ಕಾರದಿಂದ ಬೇರೆಯಾಗಿ ಹೋದುವು. ಇದುವರೆಗೂ ಅವು ಬೇರೆಯಾಗಿಯೇ ಉಳಿದಿವೆ.

ಈ ರಾಜರಿಗೆ ತಮ್ಮ ಪ್ರಜೆಗಳ ನೈತಿಕ ಹಾಗೂ ಬೌದ್ಧಿಕ ಸ್ವಾತಂತ್ರ್ಯದ ವಿಷಯವಾಗಿ ಅಂಥದ್ದೇನೂ ಕಳಕಳಿಯಿರಲಿಲ್ಲ. ಈ ಪ್ರಜೆಗಳ ಧಾರ್ಮಿಕ ಸಂದೇಹಗಳನ್ನೂ ಬಂಡಾಯದ ಪ್ರವೃತ್ತಿಯನ್ನು ರೋಮಿನ ಮೇಲಿನ ಹೋರಾಟದಲ್ಲಿ ತಾವು ಬಲವಾಗಲು ಇವರು ಉಪಯೋಗಿಸಿಕೊಂಡರು ಅಷ್ಟೆ. ಆದರೆ ರೋಮಿನ ಸಂಬಂಧ ಮುರಿದು ರಾಜರ ಹತೋಟಿಯಲ್ಲಿ ರಾಷ್ಟ್ರೀಯ ಕ್ರೈಸ್ತ ಸಂಘಗಳು ಏರ್ಪಟ್ಟ ಮೇಲೆ ಈ ಜನತೆಯ ಚಳುವಳಿಯನ್ನು ಹಿಡಿತದಲ್ಲಿಡಲು ಅವರಿಂದ ಆಗಲಿಲ್ಲ. ಲೌಕಿಕ ಮತ್ತು ಮತೀಯ ಪಾರತಂತ್ರ್ಯ ಮತ್ತು ವಿಧೇಯತೆಗಳನ್ನು ಅತಿಕ್ರಮಿಸಿ ವ್ಯಕ್ತಿಯ ಆತ್ಮಗೌರವ ಮತ್ತು ಧರ್ಮನಿಷ್ಠೆಗಳಿಗೆ ನೇರವಾಗಿ ಸವಾಲು ಹಾಕುವ ಅದೇನೋ ಒಂದು ಬಗೆಯ ಕಸುವು ಯೇಸುವಿನ ಉಪದೇಶದಲ್ಲಿದೆ. ರಾಜರ ಹತೋಟಿಯಲ್ಲಿ ಕ್ರೈಸ್ತ ಸಂಘಗಳು ಮೂಲ ರೋಮನ್ ಸಂಘದಿಂದ ಹೊರ ಬಂದಾಗಲೇ ಜೊತೆ ಜೊತೆಗೆ ಹಲವಾರು ಕ್ರೈಸ್ತ ಉಪಶಾಖೆಗಳೂ ಹೊರಬಂದುವು. ಇವುಗಳು ವ್ಯಕ್ತಿ ಮತ್ತು ದೇವರ ನಡುವೆ ರಾಜನಾಗಲೀ ಪೋಪನಾಗಲೀ ಯಾರೂ ಬರುವುದನ್ನು ಸಹಿಸುವುದಿಲ್ಲ. ಉದಾಹರಣೆಗೆ ಇಂಗ್ಲೆಂಡು ಮತ್ತು ಸ್ಕಾಟ್ಲೆಂಡುಗಳಲ್ಲಿ ತಮ್ಮ ಜೀವನ ಮತ್ತು ಧರ್ಮಗಳಲ್ಲಿ ಬೈಬಲ್ ಒಂದೇ ಮಾರ್ಗದರ್ಶಿ ಎಂದು ದೃಢವಾಗಿ ನಂಬಿದ ಅನೇಕ ಪಂಥಗಳಿದ್ದುವು. ರಾಜ್ಯ ಸ್ಥಾಪಿತ ಮಠದ ಅಂಕೆಯನ್ನು ಇವರು ಒಪ್ಪಿಕೊಳ್ಳುತ್ತಿರಲಿಲ್ಲ. 17 ಮತ್ತು 18ನೇ ಶತಮಾನಗಳಲ್ಲಿ ಇಂಗ್ಲೆಂಡಿನ ರಾಜಕೀಯದಲ್ಲಿ ಮಹತ್ವದ ಪಾತ್ರ ವಹಿಸಿದ ಈ ಅನಂಗೀಕಾರಿಗಳಿಗೆ ನಾನ್‌ಕಾನ್‌ಫರ್ಮಿಸ್ಟ್‌ಗಳು ಎಂಬ ಹೆಸರಿತ್ತು. ಇವರು ಕ್ರೈಸ್ತಸಂಘಕ್ಕೆ ರಾಜನೇ ಮುಖ್ಯಸ್ಥನಾಗಿರುವುದನ್ನು ಎಷ್ಟರ ಮಟ್ಟಿಗೆ ವಿರೋಧಿಸಿದರೆಂದರೆ ಅಲ್ಲಿ 1649ರಲ್ಲಿ ಒಂದನೆ ಚಾರ್ಲ್ಸ್ ರಾಜನ ಶಿರಚ್ಛೇದನವಾಗಿ ಹೋಯಿತು. ಬಳಿಕ ಹನ್ನೊಂದು ವರ್ಷ ಕಾಲ ಇಂಗ್ಲೆಂಡ್ ನಾನ್‌ಕಾನ್‌ಫಾರ್ಮಿಸ್ಟ್‌ಗಳ ಕೈಕೆಳಗೆ ಅಭಿವೃದ್ಧಿ ಹೊಂದುತ್ತಿದ್ದ ಪ್ರಜಾಪ್ರಭುತ್ವವಾಗಿತ್ತು.

ಉತ್ತರ ಯುರೋಪಿನ ದೊಡ್ಡ ಭಾಗ ಲ್ಯಾಟಿನ್ ಕ್ರೈಸ್ತ ಸಂಘದಿಂದ ಹೊರ ಬಂದಿದ್ದನ್ನು ಕ್ರೈಸ್ತಧರ್ಮ ಸುಧಾರಣೆ ಎನ್ನುತ್ತಾರೆ. ಈ ಭಾರೀನಷ್ಟದಿಂದಾದ ಆಘಾತ ಮತ್ತು ಒತ್ತಡಗಳಿಂದ ರೋಮನ್ ಕ್ರೈಸ್ತ ಸಂಘದಲ್ಲಿ ಅಷ್ಟೇ ಆಳವಾದ ಬದಲಾವಣೆಗಳಾದುವು. ಕ್ರೈಸ್ತ ಸಂಘವನ್ನು ಪುನರ್ವ್ಯವಸ್ಥೆಗೊಳಿಸಲಾಯಿತು. ಅದರಲ್ಲಿ ಒಂದು ಹೊಸ ಚೈತನ್ಯ ಬಂದಿತು. ಈ ಪುನಶ್ಚೈತನ್ಯದಲ್ಲಿ ಎದ್ದು ಕಾಣುವ ವ್ಯಕ್ತಿಯೆಂದರೆ ಇನ್ನಿಗೋ ಲೋಪೆಜ್ ಡಿ ರಿಕಾಲ್ಡೆ. ಸಂತ ಇಗ್ನೇಷಿಯಸ್ ಲಯೋಲಾ ಎಂದು ಇವನು ಪ್ರಸಿದ್ಧನಾಗಿದ್ದಾನೆ. ಮೊದಲು ಸಾಹಸ ಜೀವನ ನಡೆಸಿದ ಇವನು 1538ರಲ್ಲಿ ಕ್ರೈಸ್ತಪಾದ್ರಿಯಾದನು. "ಯೇಸುವಿನ ಸಮಾಜ" ಎಂಬ ಸಂಘವನ್ನು ಸ್ಥಾಪಿಸಲು ಇವನಿಗೆ ಅನುಮತಿ ಸಿಕ್ಕಿತು. ವಿಶಾಲ ಮನಸ್ಸು ಮತ್ತು ಆದರ್ಶಪೂರಿತ ಶೌರ್ಯದಿಂದ ಕೂಡಿದ ಸೈನಿಕ ಶಿಸ್ತಿನ ಸಂಪ್ರದಾಯವನ್ನು ಧರ್ಮದ ಸೇವೆಯಲ್ಲಿ ತೊಡಗಿಸಬೇಕೆಂಬ ನೇರ ಪ್ರಯತ್ನ ಇದು. ಈ ಜೀಸಸ್ಸಿನ ಸೊಸೈಟಿ–ಅರ್ಥಾತ್ ಜೆಸೂಟ್ ಸಮಾಜ ಪ್ರಪಂಚ ಕಂಡಿರುವ ಶಿಕ್ಷಣ ನಿರತ ಮಿಷನರಿ

ಸಂಘಗಳಲ್ಲಿಯೇ ದೊಡ್ಡದಾದುದು. ಇಂಡಿಯ ಚೀನ ಮತ್ತು ಅಮೇರಿಕಗಳಿಗೆ ಇದು ಕ್ರೈಸ್ತ ಧರ್ಮವನ್ನು ಕೊಂಡು ಹೋಯಿತು. ರೋಮನ್ ಕ್ರೈಸ್ತ ಸಂಘ ಬೇಗ ಬೇಗ ಒಡೆದು ಹೋಗುವುದನ್ನು ತಪ್ಪಿಸಿತು. ಸಮಗ್ರ ಕ್ಯಾಥೊಲಿಕ್ ಪ್ರಪಂಚದಲ್ಲಿ ಶಿಕ್ಷಣ ಮಟ್ಟವನ್ನು ಹೆಚ್ಚಿಸಿತು. ಕ್ಯಾಥೊಲಿಕ್ ಪ್ರಜ್ಞೆಯ ಮಟ್ಟವನ್ನು ಹೆಚ್ಚಿಸಿ ಎಲ್ಲೆಲ್ಲಿಯೂ ಕ್ಯಾಥೊಲಿಕರ ಆತ್ಮಸಾಕ್ಷಿಯನ್ನು ಚುರುಕುಗೊಳಿಸಿತು. ಪ್ರಾಟೆಸ್ಟಂಟ್ ಯೂರೋಪಿಗೆ ಇದರೊಡನೆ ಶೈಕ್ಷಣಿಕವಾಗಿ ಸ್ಪರ್ಧಿಸಲು ಸ್ಫೂರ್ತಿ ನೀಡಿತು. ಇಂದು ನಾವು ಕಾಣುತ್ತಿರುವ ಚೈತನ್ಯದಿಂದ ತುಂಬಿದ ಕಾರ್ಯೋತ್ಸಾಹಿ ರೋಮನ್ ಕ್ಯಾಥೊಲಿಕ್ ಸಂಘ ಹೆಚ್ಚು ಕಡಿಮೆ ಈ ಜೆಸೂಟ್ ಪುನಶ್ಚೈತನದಫಲ.

51. ಐದನೆಯ ಚಾರ್ಲ್ಸ ಚಕ್ರವರ್ತಿ

ಐದನೆಯ ಚಾರ್ಲ್ಸ ಚಕ್ರವರ್ತಿಯ ಆಳ್ವಿಕೆಯಲ್ಲಿ ಪವಿತ್ರ ರೋಮನ್ ಚಕ್ರಾಧಿಪತ್ಯವು ಒಂದು ರೀತಿಯ ಉತ್ಕಟ ಪರಿಸ್ಥಿತಿಗೆ ಬಂದಿತು. ಯೂರೋಪ್ ಕಂಡ ಅಸಾಧಾರಣ ರಾಜರುಗಳಲ್ಲಿ ಇವನೊಬ್ಬ. ಷಾರ್ಲಮನ್ನನ ನಂತರ ಅತ್ಯಂತ ಮಹತ್ತ್ವದ ರಾಜನೆಂದರೆ ಇವನೇ ಎಂಬ ಸ್ಥಾನ ಕೆಲವು ಕಾಲ ಇವನಿಗಿತ್ತು.

ಈ ದೊಡ್ಡಸ್ತಿಕೆ ಸ್ವಪ್ರಯತ್ನದ್ದಾಗಿರಲಿಲ್ಲ. ಇವನ ಅಜ್ಜ ಒಂದನೆ ಮಾಕ್ಸಿಮಿಲಿಯನ್ ಚಕ್ರವರ್ತಿ (1459-1510) ಇದಕ್ಕೆ ಬಹುಮಟ್ಟಿಗೆ ಕಾರಣ. ಕೆಲವು ವಂಶಗಳು ಹೋರಾಟದಿಂದಲೂ ಕೆಲವು ವಂಶಗಳು ಒಳಸಂಚು ಕಾರಸ್ಥಾನಗಳಿಂದಲೂ ದೊಡ್ಡತನವನ್ನು ಸಂಪಾದಿಸಿಕೊಂಡರೆ ಹಾಬ್ಸ್‌ಬರ್ಗ್ ದೊರೆಗಳು ವಿವಾಹ ಸಂಬಂಧಗಳಿಂದ ದೊಡ್ಡವರಾದರು. ಮಾಕ್ಸಿಮಿಲಿಯನ್ನನ ಅಧಿಕಾರ ಜೀವನ ಅವನ ಪಿತ್ರಾರ್ಜಿತ ಸ್ವತ್ತಾದ ಆಸ್ಟ್ರಿಯ, ಸ್ಟಿರಿಯ, ಅಲ್ಸಾಸಿನ ಸ್ವಲ್ಪ ಭಾಗ ಮತ್ತು ಇತರ ಜಿಲ್ಲೆಗಳಿಂದ ಮೊದಲಾಯಿತು. ನೆದರ್‌ಲ್ಯಾಂಡ್ ಮತ್ತು ಬರ್ಗಂಡಿ ಇವನು ಮದುವೆಯಾದಾಗ– (ಇವನು ಮದುವೆಯಾದ ಮಹಿಳೆ ಯಾರೆಂಬುದು ಇಲ್ಲಿ ಅಷ್ಟು ಮುಖ್ಯವಲ್ಲ) ಬಂದಿತು. ಈ ಮೊದಲ ಹೆಂಡತಿ ತೀರಿಕೊಂಡಾಗ ಬರ್ಗಂಡಿಯ ಹೆಚ್ಚಿನ ಭಾಗ ಇವನ ಕೈ ತಪ್ಪಿದರೂ ನೆದರ್‌ಲ್ಯಾಂಡನ್ನು ಇವನು ಉಳಿಸಿಕೊಂಡನು. ಲಗ್ನ ಸಂಬಂಧದ ಮೂಲಕ ಬ್ರಿಟನಿಯನ್ನು ಗಳಿಸಬೇಕೆಂಬ ಇವನ ಪ್ರಯತ್ನ ನಡೆಯಲಿಲ್ಲ. ತನ್ನ ತಂದೆ ತೀರಿಕೊಂಡ ಮೇಲೆ 1439ರಲ್ಲಿ ಚಕ್ರವರ್ತಿಯಾಗಿ ಎರಡನೆ ಸಲ ಮದುವೆಯಾದಾಗ ಮಿಲಾನ್ ಇವನಿಗೆ ಬಂದಿತು. ಕೊಲಂಬಸನಿಗೆ ಪ್ರೋತ್ಸಾಹ ಕೊಟ್ಟ ಫರ್ಡಿನಾಂಡ್ ಮತ್ತು ಇಸಾಬೆಲ್ಲಾರ ಮಂದಬುದ್ಧಿ ಮಗಳನ್ನು ಕೊನೆಗೆ ತನ್ನ ಮಗನಿಗೆ ತಂದುಕೊಂಡನು. ಫರ್ಡಿನಾಂಡ್–ಇಸಾಬೆಲ್ಲಾರ ಪ್ರಭುತ್ವವು ಹೊಸದಾಗಿ ಐಕಮತ್ಯ ಪಡೆದಿದ್ದ ಸ್ಪೇನು, ಸಾರ್ಡಿನಿಯ, ಮತ್ತು ಸಿಸಿಲಿಯ ಎರಡು ಪ್ರಭುತ್ವಗಳ ಮೇಲೆ ಅಲ್ಲದೆ ಬ್ರೆಜಿಲಿನ ಪಶ್ಚಿಮಕಿದ್ದ ಅಮೇರಿಕದ ಮೇಲೆಲ್ಲಾ ಹರಡಿತ್ತು. ಹೀಗೆ ಇವನ ಮೊಮ್ಮಗ ಚಾರ್ಲ್ಸ್ ಅಮೇರಿಕ ಭೂಖಂಡದ ಅಧಿಕ ಭಾಗಕ್ಕೆ ಮತ್ತು ತುರುಕರು

ಬಿಟ್ಟು ಹೋಗಿದ್ದ ಯೂರೋಪಿನ ಮೂರನೆ ಒಂದರಿಂದ ಅರ್ಧದಷ್ಟು ಭಾಗಕ್ಕೆ ಉತ್ತರಾಧಿಕಾರಿಯಾದನು. ಕ್ರಿ. ಶ. 1506ರಲ್ಲಿ ನೆದರ್‌ಲ್ಯಾಂಡ್ಸ್ ಹೀಗೆ ಇವನಿಗೆ ಬಂದಿತು. ಅವನ ತಾತ ಫರ್ಡಿನಾಂಡ್ ಮರಣ ಹೊಂದಿದಾಗ ತಾಯಿ ಮಂದ ಬುದ್ಧಿಯುಳ್ಳವಳಾದುದರಿಂದ ಸ್ಪ್ಯಾನಿಷ್ ಸಾಮ್ರಾಜ್ಯಗಳೆಲ್ಲ ಬಹುಶೇಕ ಇವನದೇ ಆದುವು. ಇನ್ನೊಬ್ಬ ತಾತ ಮ್ಯಾಕ್ಸಿಮಿಲಿಯನ್ ಕ್ರಿ. ಶ. 1519ರಲ್ಲಿ ತೀರಿಕೊಂಡ ಮೇಲೆ ಕ್ರಿ. ಶ. 1520ರಲ್ಲಿ ಕೇವಲ ಇಪ್ಪತ್ತು ವಯಸ್ಸಿನವನಿದ್ದಾಗ ಇವನು ಚಕ್ರವರ್ತಿಯಾಗಿ ಚುನಾಯಿತನಾದನು.

ಇವನು ತಿಳಿ ಬಣ್ಣದ ತರುಣನಾಗಿದ್ದನು ; ಮುಖ ಚಹರೆಯಲ್ಲಿ ಅಂಥದ್ದೇನೂ ಚುರುಕು ಬುದ್ಧಿಯು ಕಳೆಯಿರಲಿಲ್ಲ; ಮೇಲ್ದುಟಿ ದಪ್ಪವಾಗಿತ್ತು, ಗದ್ದ ಉದ್ದವಾಗಿ ಒಡ್ಡಾಗಿತ್ತು ; ಯೂರೋಪಿನಲ್ಲಿ ಆಗ ಎಲ್ಲ ಕಡೆ ಇದ್ದ ಕಿರಿವಯಸ್ಸಿನ ಶಕ್ತಿಯುಕ್ತ ವ್ಯಕ್ತಿಗಳ ಮಧ್ಯೆ ಇವನು ಸೇರಿದನು. ಅದು ಚಿಕ್ಕವಯಸ್ಸಿನ ತೀಕ್ಷ್ಣ ಬುದ್ಧಿಯ ರಾಜರ ಯುಗವಾಗಿತ್ತು. ಒಂದನೇ ಫ್ರಾನ್ಸಿಸ್ ಕ್ರಿ. ಶ. 1515ರಲ್ಲಿ ತನ್ನ ಇಪ್ಪತ್ತೊಂದನೇ ವಯಸ್ಸಿನಲ್ಲಿ ಫ್ರೆಂಚ್ ಸಿಂಹಾಸನವನ್ನೇರಿದ್ದನು. ಕ್ರಿ. ಶ. 1509ರಲ್ಲಿ ಹದಿನೆಂಟು ವಯಸ್ಸಿನ ಎಂಟನೇ ಹೆನ್ರಿ ಇಂಗ್ಲೆಂಡಿನ ರಾಜನಾದನು. ಅಸಾಧಾರಣ ಸಾಮರ್ಥ್ಯವಿದ್ದವರಾದ ಬಾಬರ್ (1526–30) ಮತ್ತು ವೈಭವಶಾಲಿ ಸುಲೇಮಾನ್ (1520) ಕ್ರಮವಾಗಿ ಇಂಡಿಯ ಮತ್ತು ಟರ್ಕಿಗಳಲ್ಲಿ ಆಳುತ್ತಿದ್ದರು. ಪೋಪ್ ಹತ್ತನೇ ಲಿಯೊ (1513) ಅತ್ಯಂತ ಶ್ರೇಷ್ಠ ವ್ಯಕ್ತಿಯಾಗಿದ್ದನು. ಚಾರ್ಲ್ಸ್ ಚಕ್ರವರ್ತಿಯಾಗಿ ಚುನಾಯಿತನಾಗುವುದನ್ನು ತಪ್ಪಿಸಲು ಪೋಪ್ ಮತ್ತು ಫ್ರಾನ್ಸಿಸ್ ಪ್ರಯತ್ನಪಟ್ಟರು. ಅಷ್ಟೊಂದು ರಾಜಕೀಯ ಶಕ್ತಿ ಒಬ್ಬನೇ ವ್ಯಕ್ತಿಯಲ್ಲಿ ಕೇಂದ್ರೀಕೃತವಾಗುವುದು ಅವರಿಗೆ ಕಳವಳವನ್ನುಂಟುಮಾಡಿತು. ಒಂದನೆಯ ಫ್ರಾನ್ಸಿಸ್ ಮತ್ತು ಎಂಟನೆ ಹೆನ್ರಿ ಇಬ್ಬರೂ ಚಕ್ರವರ್ತಿಯ ಸ್ಥಾನಕ್ಕೆ ತಾವೇ ಸ್ಪರ್ಧಿಗಳಾಗಲು ಸಿದ್ಧರಾದರು. ಆದರೆ ಆಗಲೇ ಬಹುಕಾಲದಿಂದ (1263ರಿಂದ) ಹಾಬ್ಸ್‌ಬರ್ಗ್‌ನವರೇ ಚಕ್ರವರ್ತಿಗಳಾಗಿರುವ ಸಂಪ್ರದಾಯ ಬೇರೂರಿತ್ತು. ಬಲವಾಗಿ ಲಂಚ ತೆತ್ತ ಮೇಲೆ ಚುನಾವಣೆ ಚಾರ್ಲ್ಸನ ಪರವಾಗಿ ನಿರ್ಧಾರವಾಯಿತು.

ಮೊದಲು ಈ ತರುಣ ಮಂತ್ರಿಗಳ ಹತೋಟಿಯಲ್ಲಿದ್ದು ವೈಭವಯುತ ಸೂತ್ರದ ಬೊಂಬೆಯಂತೆ ನಡೆದುಕೊಂಡನು. ಆಮೇಲೆ ನಿಧಾನವಾಗಿ ತನ್ನತನವನ್ನು ತೋರಿಸಲು ಮೊದಲುಮಾಡಿ ಅಧಿಕಾರವನ್ನು ವಶಪಡಿಸಿಕೊಳ್ಳಲು ತೊಡಗಿದನು. ತನ್ನ ಸ್ಥಾನದ ಔನ್ನತ್ಯ, ಅದು ಎದುರಿಸಬೇಕಾಗಿರುವ ಜಟಿಲ ಸಮಸ್ಯೆಗಳ ಅರಿವು ಅವನಿಗಾಯಿತು. ಅವನ ಸ್ಥಾನ ಎಷ್ಟು ಭವ್ಯವಾದುದೋ ಅಷ್ಟೇ ಅಭದ್ರವಾದುದೂ ಆಗಿತ್ತು.

ಇವನು ಆಳ್ವಿಕೆ ಪ್ರಾರಂಭವಾದಾಗಿನಿಂದಲೇ ಜರ್ಮನಿಯಲ್ಲಿ ಲೂಥರನ ಚಳುವಳಿಯಿಂದಾದ ಪರಿಸ್ಥಿತಿಯನ್ನೆದುರಿಸಬೇಕಾಯಿತು. ತನ್ನನ್ನು ಚಕ್ರವರ್ತಿ

ಪದವಿಗೆ ಚುನಾಯಿಸುವುದಕ್ಕೆ ಪೋಪ್ ವಿರೋಧ ಪಡಿಸಿದುದೇ ಕಾರಣವಾಗಿ ಇವನು ಸುಧಾರಕರ ಪರವಹಿಸಬಹುದಾಗಿತ್ತು. ಆದರೆ ಇವನು ಬೆಳೆದಿದ್ದು ಸ್ಪೇನಿನಲ್ಲಿ; ಸ್ಪೇನ್ ಕ್ಯಾಥೊಲಿಕ್ ದೇಶಗಳಲ್ಲೆಲ್ಲಾ ಅತ್ಯಂತ ಸಂಪ್ರದಾಯ ಶರಣವಾದ ದೇಶ. ಹೀಗಾಗಿ ಇವನು ಲೂಥರನನ್ನು ವಿರೋಧಿಸಬೇಕೆಂದು ನಿರ್ಧರಿಸಿದನು. ಇದರಿಂದ ಪ್ರಾಟೆಸ್ಟಂಟ್ ರಾಜರೊಡನೆ ಅದರಲ್ಲೂ ಸ್ಯಾಕ್ಸನಿಯ ಆಯ್ಕೆದಾರನೊಡನೆ ಘರ್ಷಣೆ ಉಂಟಾಯಿತು. ಕ್ರೈಸ್ತ ಪ್ರಪಂಚದ ಹೊರವ್ಯೆಯನ್ನು ಪರಸ್ಪರ ವಿರೋಧಿಗಳಾದ ಎರಡು ಬಣಗಳನ್ನಾಗಿಸೀಳುವ ಒಂದು ಬಿರುಕು ಇವನ ಮುಂದೆ ಕಾಣಿಸಿಕೊಂಡಿತು. ಈ ಬಿರುಕನ್ನು ಮುಚ್ಚಲು ಇವನು ಪ್ರಾಮಾಣಿಕವಾಗಿ ಶ್ರಮಿಸಿ ಪ್ರಯತ್ನಿಸಿದರೂ ಆ ಪ್ರಯತ್ನಗಳು ಸಫಲವಾಗಲಿಲ್ಲ. ಜರ್ಮನಿಯಲ್ಲಿ ವ್ಯಾಪಕವಾಗಿ ರಾಜಕೀಯ ದಂಗೆಯಾಯಿತು. ಇದು ಎಲ್ಲೆಲ್ಲೂ ಕಾಣಿಸಿಕೊಳ್ಳುತ್ತಿದ್ದ ರಾಜಕೀಯ ಮತ್ತು ಧಾರ್ಮಿಕ ದೊಂಬಿಗಳೊಡನೆ ಹಾಸುಹೊಕ್ಕಾಗಿ ಸೇರಿಕೊಂಡು ಬಿಟ್ಟಿತು. ಈ ಆಂತರಿಕ ಕ್ಷೋಭೆಗಳೊಡನೆ ಚಕ್ರಾಧಿಪತ್ಯದ ಮೇಲೆ ಪೂರ್ವ ಮತ್ತು ಪಶ್ಚಿಮ ದಿಕ್ಕುಗಳೆರಡರಿಂದಲೂ ಧಾಳಿಗಳು ನಡೆಯುತ್ತಿದ್ದು ಈ ಒಳಗಿನ ಗಲಭೆಗಳನ್ನೆದುರಿಸುವುದು ಇನ್ನೂ ತೊಡಕಾಯಿತು. ಪಶ್ಚಿಮಕ್ಕೆ ಚಾರ್ಲ್ಸನ ಉತ್ಸಾಹಿ ಪ್ರತಿಸ್ಪರ್ಧಿ ಫ್ರಾನ್ಸಿಸ್ ಇದ್ದರೆ ಪೂರ್ವಕ್ಕೆ ಒಂದೇ ಸಮನೆ ಮುಂದೆ ಬರುತ್ತಿದ್ದ ತುರುಕರಿದ್ದರು. ಇವರು ಆಗ ಹಂಗೆರಿಯಲ್ಲಿದ್ದು ಫ್ರಾನ್ಸಿನೊಡನೆ ಮೈತ್ರಿ ಬೆಳೆಸಿಕೊಂಡು ಆಸ್ಟ್ರಿಯದ ಸ್ವಾಮ್ಯಗಳಿಂದ ತಮಗೆ ಕಪ್ಪಕಾಣಿಕೆಗಳ ಬಾಕಿ ಸಲ್ಲಬೇಕಾಗಿದೆಯೆಂದು ಗಲಾಟೆ ಮಾಡುತ್ತಿದ್ದರು. ಚಾರ್ಲ್ಸನಿಗೆ ಸ್ಪೇನಿನಲ್ಲಿ ಹಣ ಮತ್ತು ಸೈನ್ಯಗಳೆರಡೂ ಇದ್ದುವು. ಆದರೆ ಜರ್ಮನಿಯಲ್ಲಿ ಹಣದ ರೂಪದಲ್ಲಿ ಪರಿಣಾಮಕಾರಿ ಬೆಂಬಲ ಸಿಗುವುದು ತುಂಬಾ ಕಷ್ಟವಾಗಿತ್ತು. ಅವನು ಎದುರಿಸುತ್ತಿದ್ದ ಸಾಮಾಜಿಕ ಮತ್ತು ರಾಜಕೀಯ ಸಮಸ್ಯೆಗಳು ಆರ್ಥಿಕ ಸಮಸ್ಯೆಗಳಿಂದ ಮತ್ತೂ ಗೋಜಾಗಿಬಿಟ್ಟುವು. ಕಡೆಗೆ ಅವನು ಮಿತಿಮೀರಿ ಸಾಲ ಮಾಡಬೇಕಾಯಿತು.

ಆದರೂ ಎಂಟನೇ ಹೆನ್ರಿಯೊಡನೆ ಸಂಧಿಮಾಡಿಕೊಂಡಿದ್ದ ಚಾರ್ಲ್ಸ್ ಒಟ್ಟಿನ ಮೇಲೆ ಒಂದನೇ ಫ್ರಾನ್ಸಿಸ್ ಮತ್ತು ತುರುಕರನ್ನೆದುರಿಸುವುದರಲ್ಲಿ ಯಶಸ್ವಿಯಾದನು. ಉತ್ತರ ಇಟಲಿ ಈ ಹೋರಾಟದ ಮುಖ್ಯರಂಗವಾಗಿತ್ತು. ಸೈನಿಕ ಮುಂದಾಳುತನ ಎರಡು ಕಡೆಯೂ ಅಷ್ಟಷ್ಟರಲ್ಲೇ ಇದ್ದಿತು. ಸೈನ್ಯಗಳು ಮುಂದುವರಿಯುವುದು ಅಥವಾ ಹಿಂಜರಿಯುವುದು ರಣಕ್ಷೇತ್ರಕ್ಕೆ ಒದಗುತ್ತಿದ್ದ ಹೊಸ ಸೈನ್ಯಗಳು ಮತ್ತು ಸಾಮಗ್ರಿಗಳನ್ನು ಅವಲಂಬಿಸುತ್ತಿತ್ತು. ಜರ್ಮನ್ ಸೈನ್ಯ ಮೊದಲು ಫ್ರಾನ್ಸಿನ ಮೇಲೆ ದಂಡೆತ್ತಿಹೋಗಿ ಮಾರ್ಸೇಲ್ಸನ್ನು ವಶಪಡಿಸಿಕೊಳ್ಳಲು ಆಗದೆ ಇಟಲಿಗೆ ಹಿಮ್ಮೆಟ್ಟಿ ಮಿಲಾನನ್ನು ಕಳೆದುಕೊಂಡಿತು. ಪಾವಿಯದಲ್ಲಿ ಶತ್ರು ಸೈನ್ಯ ಇದಕ್ಕೆ ಮುತ್ತಿಗೆ ಹಾಕಿತು. ಒಂದನೆಯ ಫ್ರಾನ್ಸಿಸ್ ಬಹುಕಾಲ ಹೀಗೆ ಪಾವಿಯದ ಮೇಲೆ ಮುತ್ತಿಗೆ ಹಾಕಿದರೂ ಅದನ್ನು ವಶಪಡಿಸಿಕೊಳ್ಳಲು ಆಗಲಿಲ್ಲ. ಹೊಸದಾಗಿ ಬಂದ ಜರ್ಮನ್ ಸೈನ್ಯಗಳು ಇವನನ್ನು ಸೋಲಿಸಿದುವು. ಇವನಿಗೆ

ಗಾಯಗಳಾಗಿ ಜರ್ಮನರ ಬಂದಿಯಾದನು. ಚಾರ್ಲ್ಸನಿಗೆ ಮಿತಿಮೀರಿದ ಪ್ರಾಬಲ್ಯ ಬಂದುಬಿಡುತ್ತದೆಯೆಂದು ಹೆದರಿದ ಪೋಪ್ ಮತ್ತು ಎಂಟನೇ ಹೆನ್ರಿ ಈಗ ಚಾರ್ಲ್ಸನಿಗೆ ಎದುರು ಬಿದ್ದರು. ಬೌರ್ಬನ್ನಿನ ಕಾನ್ಸ್ಟೇಬಲ್ಲನ ಕೈಕೆಳಗೆ ಮಿಲಾನಿನಲ್ಲಿದ್ದ ಜರ್ಮನ್ ಸೈನಿಕರು ತಮ್ಮ ದಳಪತಿಯನ್ನೇ ರೋಮಿನ ಮೇಲೆ ದಂಡೆತ್ತಿ ಹೋಗಲು ಬಲಾತ್ಕರಿಸಿದರು. ಇವರಿಗೆ ಸಂಬಳ ಸಂದಾಯವಾಗಿರಲಿಲ್ಲ. ಇವರು 1527ರಲ್ಲಿ ರೋಮಿನ ಒಳಗೆ ನುಗ್ಗಿ ಲೂಟಿ ಹೊಡೆದರು. ಈ ಲೂಟಿ ಮತ್ತು ಹತ್ಯಾಕಾಂಡ ನಡೆಯುತ್ತಿರುವಾಗ ಪೋಪ್ ಸೆಂಟ್ ಏಂಜೆಲೊ ದುರ್ಗದಲ್ಲಿ ಆಶ್ರಯ ಪಡೆದನು. ಕಡೆಗೆ ನಾಲ್ಕು ಲಕ್ಷ ಡಕಟ್‌ಗಳನ್ನು ತೆತ್ತು ಈ ಜರ್ಮನ್ ತುಕಡಿಗಳ ಕಾಟದಿಂದ ತಪ್ಪಿಸಿಕೊಳ್ಳಬೇಕಾಯಿತು. ಹತ್ತು ವರ್ಷಗಳು ಇದೇ ರೀತಿ ಗೊಂದಲದಿಂದ ಕೂಡಿದ ಹೋರಾಟ ನಡೆದು ಯೂರೋಪೆಲ್ಲ ದಿವಾಳಿಯೆದ್ದು ಹೋಯಿತು. ಅಂತೂ ಕಟ್ಟಕಡೆಗೆ ಚಕ್ರವರ್ತಿ ಇಟಲಿಯಲ್ಲಿ ವಿಜಯಿಯಾದನು. 1530ರಲ್ಲಿ ಇವನಿಗೆ ಪೋಪನಿಂದಲೇ ಕಿರೀಟಧಾರಣೆಯಾಯಿತು. ಬೊಲೋನಾದಲ್ಲಿ ಹೀಗೆ ಕಿರೀಟಧಾರಣೆಯಾದ ಜರ್ಮನ್ ಚಕ್ರವರ್ತಿಗಳಲ್ಲಿ ಇವನೇ ಕಡೆಯವನು.

ಇಷ್ಟರಲ್ಲಿ ತುರುಕರು ಹಂಗರಿಯಲ್ಲಿ ಬಹಳ ಮುಂದೆ ಬಂದು ಬಿಟ್ಟಿದ್ದರು. ಕ್ರಿ.ಶ. 1526ರಲ್ಲಿ ಹಂಗರಿಯ ರಾಜನನ್ನು ಸೋಲಿಸಿ ಕೊಂದು ಹಾಕಿ ಬುಡಾಪೆಸ್ಟನ್ನು ವಶಪಡಿಸಿಕೊಂಡಿದ್ದರು. 1529ರಲ್ಲಿ 'ವೈಭವಶಾಲಿ' ಸುಲೇಮಾನನು ಇನ್ನೇನು ವಿಯೆನ್ನಾವನ್ನು ಗೆದ್ದು ಬಿಡುವುದರಲ್ಲಿದ್ದನು. ಚಕ್ರವರ್ತಿಗೆ ಈ ಮುನ್ನಡೆಯಿಂದ ಬಹಳ ಚಿಂತೆಯಾಗಿ ಅವರನ್ನು ಹಿಂದೆ ಓಡಿಸಲು ತನ್ನ ಕೈಲಾದಷ್ಟೂ ಪ್ರಯತ್ನ ಪಟ್ಟನು. ಆದರೆ ತಮ್ಮ ಎಲ್ಲೆಗಳ ಹತ್ತಿರವೇ ಈ ಬಲವಾದ ಶತ್ರು ಬಂದಿದ್ದಾಗ ಕೂಡ ಜರ್ಮನ್ ರಾಜರು ಒಟ್ಟುಗೂಡಲಿಲ್ಲ. ಇವರನ್ನು ಒಂದು ಗೂಡಿಸುವುದೇ ಚಾರ್ಲ್ಸನಿಗೆ ಎಲ್ಲಕ್ಕಿಂತ ಹೆಚ್ಚು ಕಷ್ಟದ ಕಾರ್ಯವಾಯಿತು. ಫ್ರಾನ್ಸಿಸ್ ಕೆಲವು ಕಾಲ ಕಠಿಣವಾಗಿಯೇ ಉಳಿದನು. ಹೊಸದಾಗಿ ಮತ್ತೊಂದು ಫ್ರೆಂಚ್ ಯುದ್ಧವಾಯಿತು. ಇದರಿಂದ ದಕ್ಷಿಣ ಫ್ರಾನ್ಸಿನಲ್ಲಿ ತುಂಬಾ ಹಾನಿಯಾದ ಮೇಲೆ 1538ರಲ್ಲಿ ಚಾರ್ಲ್ಸನ ಈ ಪ್ರತಿಸ್ಪರ್ಧಿ ಸ್ವಲ್ಪ ಸ್ನೇಹಭಾವವನ್ನು ತೋರತೊಡಗಿದನು. ಫ್ರಾನ್ಸಿಸ್ ಮತ್ತು ಚಾರ್ಲ್ಸ್ ತುರುಕರ ವಿರುದ್ಧ ತಾವಿಬ್ಬರೂ ಸೇರಿಕೊಂಡರು. ಆದರೆ ಪ್ರಾಟೆಸ್ಟಂಟ್ ರಾಜರುಗಳೂ ರೋಮಿನಿಂದ ಬೇರೆಯಾಗಬೇಕೆಂದು ನಿರ್ಧರಿಸಿದ ಜರ್ಮನ್ ರಾಜರೂ ಚಕ್ರವರ್ತಿಯನ್ನು ಎದುರಿಸಲು ಷ್ಮಾಲ್ಕಾಲ್ಡಿಕ್ ಸಂಘ (Schmalkaldic League) ಎಂಬ ಒಂದು ಸಂಘವನ್ನು ಕಟ್ಟಿಕೊಂಡಿದ್ದರು. ತುರುಕರಿಂದ ಹಂಗೆರಿಯನ್ನು ತಿರುಗಿ ಕ್ರೈಸ್ತ ಪ್ರಪಂಚಕ್ಕೆ ಗೆದ್ದುಕೊಳ್ಳುವುದಕ್ಕಾಗಿ ಒಂದು ದಂಡೆಯಾತ್ರೆ ಹೊರಡಿಸುವುದರ ಬದಲು ಚಾರ್ಲ್ಸ್ ಜರ್ಮನಿಯಲ್ಲಿ ಹೆಚ್ಚಾಗುತ್ತಿದ್ದ ಆಂತರಿಕ ಹೋರಾಟವನ್ನು ನಿವಾರಿಸಲು ತನ್ನ ಮನಸ್ಸು ಕೊಡಬೇಕಾಯಿತು. ಈ ಹೋರಾಟದ ಮೊದಲ ಭಾಗವನ್ನು ಮಾತ್ರ ಅವನು ಕಂಡನು.

ರಾಜರೆಲ್ಲರೂ ತಾವೇ ಮೇಲೆ ಬರಬೇಕೆಂದು ಅಸಂಬದ್ಧವಾಗಿ ರೊಚ್ಚಿನಿಂದ ಕಚ್ಚಾಡು ತ್ತಿದ್ದರು. ಒಮ್ಮೆ ಈ ಕಚ್ಚಾಟ ವಿನಾಶಕಾರಕ ಯುದ್ಧದ ರೂಪ ಪಡೆದರೆ ಮತ್ತೊಮ್ಮೆ ಒಳಸಂಚು, ರಾಯಭಾರಗಳ ರೂಪ ತಳೆಯುತ್ತಿತ್ತು. ಹತ್ತೊಂಬತ್ತನೇ ಶತಮಾನದ ಮಧ್ಯದ ವರೆಗೆ ಮುಂದುವರಿದ ಈ ಕಚ್ಚಾಟ ಯಾವ ಪರಿಹಾರವೂ ಇಲ್ಲದೆ ವಿಲಿವಿಲಿ ಒದ್ದಾಡುತ್ತಾ ಬಿದ್ದಿರುವ ಬಾಯಿಕಟ್ಟಿ ಬಿಸಾಕಿದ ಹಾವುಗಳು ತುಂಬಿದ ಚೀಲದಂತೆ ಇಡೀ ಮಧ್ಯಯುರೋಪು ಪದೇ ಪದೇ ಪಾಳುಬೀಳುವಂತೆ ಮಾಡಿತು.

ಹೀಗೆ ಹೆಚ್ಚಾಗುತ್ತಲೇ ಹೋಗುತ್ತಿದ್ದ ಈ ಕಲಹಗಳ ಹಿಂದಿದ್ದ ಪ್ರೇರಕ ಶಕ್ತಿಗಳು ಯಾವುವೆಂದು ಚಕ್ರವರ್ತಿಗೆ ಕಡೆಗೂ ಗ್ರಹಿಕೆಯಾಗಲೇ ಇಲ್ಲವೆನಿಸುತ್ತದೆ. ಆ ಕಾಲ ದೇಶಗಳಿಗೆ ಮೀರಿದ ಗಣ್ಯವಕ್ತಿಯಾಗಿದ್ದ ಈತ ಯುರೋಪನ್ನು ಪರಸ್ಪರ ಹೋರಾಡುತ್ತಿರುವ ಎರಡು ಭಾಗಗಳನ್ನಾಗಿ ಸೀಳಹಾಕುತ್ತಿದ್ದ ಮತೀಯ ಭಿನ್ನಾಭಿ ಪ್ರಾಯಗಳು ನಿಜವಾಗಿಯೂ ದೇವತಾಶಾಸ್ತ್ರದ ಭಿನ್ನಾಭಿಪ್ರಾಯಗಳು ಎಂದೇ ತಿಳಿದಿದ್ದಂತೆ ಕಾಣುತ್ತದೆ. ಈ ಭಾಗಗಳಲ್ಲಿ ರಾಜಿಮಾಡಿಸಲು ಇವನು ಸಭೆಗಳನ್ನೂ ಪರಿಷತ್ತುಗಳನ್ನೂ ಕೂಡಿಸಿದನು. ಅವುಗಳಿಂದ ಏನೂ ಪ್ರಯೋಜನವಾಗಲಿಲ್ಲ. ಸೂತ್ರಗಳು, ಸ್ವಾಭಿಪ್ರಾಯ ಘೋಷಣೆಗಳು ಎಲ್ಲವನ್ನೂ ಪ್ರಯತ್ನಿಸಿ ಆಯಿತು. ಜರ್ಮನ್ ಚರಿತ್ರೆಯನ್ನು ಓದುವವನು ನ್ಯೂರೆಂಬರ್ಗಿನ ಧಾರ್ಮಿಕ ಶಾಂತಿಕೌಲಿನ ವಿವರಗಳು, ರ್‍ಯಾಟಿಸ್ಬನ್ನಿನ ಧಾರ್ಮಿಕ ಪರಿಷತ್ತಿನಲ್ಲಿ ಆದ ನಿರ್ಧಾರ, ಆಗ್ಸ್‌ಬರ್ಗಿನ ತಾತ್ಕಾಲಿಕ ಒಪ್ಪಂದ ಇಂತಹ ಅನೇಕ ಸಂಗತಿಗಳನ್ನು ಕಷ್ಟಪಟ್ಟು ಓದಬೇಕಾಗುತ್ತದೆ. ಅಧಿಕಾರದ ತುತ್ತತುದಿಗೇರಿದ್ದ ಈ ಚಕ್ರವರ್ತಿಯ ಉಪಟಳಗಳಿಂದ ಕೂಡಿದ ಜೀವನಕ್ಕೆ ಸಂಬಂಧಿಸಿದ ವಿವರಗಳೆಂದು ಇಲ್ಲಿ ಇವುಗಳನ್ನು ಹೇಳಬೇಕಾಗಿದೆ ಅಷ್ಟೆ. ನಿಜ ಹೇಳುವುದಾದರೆ ಆಗ ಯುರೋಪಿನಲ್ಲಿದ್ದ ಅನೇಕ ದೊರೆಗಳಲ್ಲಿ ಯಾವನೂ ಕೂಡ ಪ್ರಾಮಾಣಿಕತೆಯಿಂದ ನಡೆದುಕೊಳ್ಳುತ್ತಿರಲಿಲ್ಲವೆನಿಸುತ್ತದೆ. ಪ್ರಪಂಚದಲ್ಲಿ ಎಲ್ಲೆಲ್ಲೂ ಹರಡಿದ್ದ ಧಾರ್ಮಿಕ ಕ್ಷೋಭೆ, ಸತ್ಯ ಮತ್ತು ಸಾಮಾಜಿಕ ನ್ಯಾಯಗಳಿಗಾಗಿ ಜನರ ಹಾತೊರೆಯುವಿಕೆ, ಪ್ರಪಂಚದಲ್ಲಿ ಹರಡುತ್ತಿದ್ದ ಜ್ಞಾನ ಇವೆಲ್ಲವೂ ರಾಜಕೀಯ ತಂತ್ರದ ಚದುರಂಗದಲ್ಲಿ ಉಪಯೋಗಿಸಬಹುದಾದ ಆಟದ ಕಾಯಿಗಳೆಂದು ರಾಜರ ಭಾವನೆಯಾಗಿತ್ತು. ಧರ್ಮಬಾಹಿರತೆಯನ್ನು ಖಂಡಿಸಿ ಒಂದು ಪುಸ್ತಕವನ್ನು ಬರೆದು ತನ್ನ ಅಧಿಕಾರ ಜೀವನವನ್ನು ಮೊದಲುಮಾಡಿ ಪೋಪನಿಂದ ಧರ್ಮಸಂರಕ್ಷಕನೆಂದು ಬಿರುದು ಪಡೆದಿದ್ದ ಎಂಟನೆಯ ಹೆನ್ರಿ ತನ್ನ ಹೆಂಡತಿಯಿಂದ ವಿವಾಹ ವಿಚ್ಛೇದ ಪಡೆದು ಆ್ಯನಿ ಬೊಲೆನ್ ಎಂಬ ತರುಣಿಯನ್ನು ಮದುವೆಯಾಗಬೇಕೆನಿಸಿದಾಗ ಮತ್ತು ಇಂಗ್ಲೆಂಡಿನಲ್ಲಿ ಕ್ರೈಸ್ತಸಂಘ ಪಡೆದಿದ್ದ ಅಗಾಧ ಐಶ್ವರ್ಯವನ್ನು ಕೊಳ್ಳೆಹೊಡೆಯ ಬೇಕೆನಿಸಿದಾಗ 1530ರಲ್ಲಿ ಪ್ರಾಟೆಸ್ಟಂಟ್ ರಾಜರ ಕಡೆ ಸೇರಿದನು. ಸ್ವೀಡನ್, ಡೆನ್‌ಮಾರ್ಕ್ ಮತ್ತು ನಾರ್ವೆ ಆಗಲೇ ಪ್ರಾಟೆಸ್ಟಂಟ್ ಬಣಕ್ಕೆ ಸೇರಿದ್ದುವು.

ಮಾರ್ಟಿನ್ ಲೂಥರ್ ಸತ್ತು ಕೆಲವು ತಿಂಗಳಾದ ಮೇಲೆ 1546ರಲ್ಲಿ ಜರ್ಮನಿಯ ಮತೀಯ ಯುದ್ಧ ಮೊದಲಾಯಿತು. ಈ ಯುದ್ಧದ ಘಟನೆಗಳ ವಿವರ ಇಲ್ಲಿ ಬೇಕಾಗಿಲ್ಲ. ಲೋಕೋವಿನಲ್ಲಿ ಪ್ರಾಟೆಸ್ಟಂಟ್ ಸ್ಯಾಕ್ಸನ್ ಸೈನ್ಯ ಬಲವಾದ ಸೋಲನ್ನನುಭವಿಸಿತು. ನಂಬಿಕೆ ದ್ರೋಹದಿಂದಲೇ ಇರಬಹುದು ಚಕ್ರವರ್ತಿಯು ಕೊಟ್ಟ ಕೊನೆಯ ಪ್ರತಿದ್ವಂದ್ವಿ, ಹೆಸ್‌ನ ಫಿಲಿಪ್ ಸಿಕ್ಕಿಹಾಕಿಕೊಂಡು ಬಂದಿಯಾದನು. ಪ್ರತಿವರ್ಷವೂ ಕಪ್ಪಕೊಡುವ ಆಶ್ವಾಸನೆ ನೀಡಿ ತುರುಕರ ತೊಂದರೆಯನ್ನು ತಪ್ಪಿಸಿಕೊಳ್ಳಲಾಯಿತು. 1547ರಲ್ಲಿ ಒಂದನೇ ಫ್ರಾನ್ಸಿಸ್ ಮರಣಹೊಂದಿದನು. ಚಾರ್ಲ್ಸನ ಮನಸ್ಸು ಎಷ್ಟೋ ಹಗುರವಾಯಿತು. ಹೀಗೆ 1547ರ ಹೊತ್ತಿಗೆ ಚಾರ್ಲ್ಸ್ ಒಂದು ರೀತಿಯ ಸ್ತಿಮಿತಪರಿಸ್ಥಿತಿಯನ್ನು ತಂದು ಶಾಂತಿಯ ಸುಳಿವೇ ಇಲ್ಲದಿದ್ದರೂ ಶಾಂತಿಗಾಗಿ ತನ್ನ ಕೊನೆಯ ಪ್ರಯತ್ನಗಳನ್ನು ನಡೆಸಿದನು. 1552ರಲ್ಲಿ ತಿರುಗಿ ಜರ್ಮನಿಯಾದ್ಯಂತ ಯುದ್ಧ ಪ್ರಾರಂಭವಾಯಿತು. ಶತ್ರುಗಳ ಕೈಸೆರೆಯಾಗುವುದನ್ನು ತಪ್ಪಿಸಿಕೊಳ್ಳಲು ಚಾರ್ಲ್ಸ್ ಇನ್ಸ್‌ಬ್ರುಕ್‌ನಿಂದ ನಿಂತಕಾಲಲ್ಲೇ ಓಡಿಹೋಗಬೇಕಾಯಿತು. 1552ರಲ್ಲಿ ಪಾಸ್ಸೊವಿನ ಕೌಲಿನನಂತರ ತಿರುಗಿ ಹಂಗಾಮಿಯಾಗಿ ಸಮತೂಕದ ಪರಿಸ್ಥಿತಿ ಏರ್ಪಟ್ಟಿತು.

ಇದು ಚಕ್ರಾಧಿಪತ್ಯದ ಮೂವತ್ತೇಳು ವರ್ಷಗಳ ಕತೆಯ ಸ್ಥೂಲರೇಖೆ. ಆಗ ಯೂರೋಪಿನ ಜನರೆಲ್ಲರ ಮನಸ್ಸೂ ಅಧಿಕಾರಕ್ಕೋಸ್ಕರ ಯೂರೋಪಿನಲ್ಲಿ ನಡೆಯುತ್ತಿದ್ದ ಹೋರಾಟದಲ್ಲಿಯೇ ಸಂಪೂರ್ಣವಾಗಿ ಮಗ್ನವಾಗಿತ್ತೆಂಬುದು ಕುತೂಹಲಕರ ಸಂಗತಿ. ಬೃಹದ್ಗಾತ್ರದ ಖಂಡವಾದ ಅಮೆರಿಕ ರಾಜಕೀಯವಾಗಿ ಪ್ರಮುಖವಾದುದು ಎಂದಾಗಲೀ ಆಗ ತಾನೇ ಹೊಸದಾಗಿ ಏಷ್ಯಕ್ಕೆ ಕಂಡುಹಿಡಿದಿದ್ದ ಸಮುದ್ರ ಮಾರ್ಗಗಳು ಮಹತ್ತ್ವಪೂರ್ಣವಾದುವು ಎಂದಾಗಲೀ ತುರುಕರು, ಫ್ರೆಂಚರು, ಇಂಗ್ಲಿಷರು ಮತ್ತು ಜರ್ಮನರಿಗೆ ಇನ್ನೂ ಹೊಳೆದಿರಲೇ ಇಲ್ಲ. ಅಮೆರಿಕದಲ್ಲಿ ಪ್ರಮುಖಘಟನೆಗಳು ನಡೆಯುತ್ತಿದ್ದುವು. ಆಧುನಿಕ ಶಿಲಾಯುಗದಲ್ಲಿದ್ದ ಮೆಕ್ಸಿಕೊ ಸಾಮ್ರಾಜ್ಯವನ್ನು ಸ್ಪೇನಿಗೆ ಕಾರ್ಟೆಸನು ಕೇವಲ ಕೆಲವೇ ಜನರ ಸಹಾಯದಿಂದ ಗೆದ್ದುಕೊಟ್ಟಿದ್ದನು. ಪಿಜಾರೋ ಪನಾಮಾ ಭೂಕಂಠವನ್ನು ದಾಟಿ ಮತ್ತೊಂದು ಅದ್ಭುತವಾದ ದೇಶ ಪೆರುವನ್ನು ಸೋಲಿಸಿದ್ದನು. ಸ್ಪೇನಿನ ಖಜಾನೆಗೆ ಬೇಕಾದಷ್ಟು ಬೆಳ್ಳಿ ಬಂದಿತು. ಆದರಿಂದ ಆ ದೇಶಕ್ಕೆ ತುಂಬ ಅನುಕೂಲವಾಯಿತು, ಉತ್ತೇಜನವೂ ದೊರಕಿತು ಎನ್ನುವುದನ್ನು ಬಿಟ್ಟರೆ ಯೂರೋಪಿನವರಿಗೆ ಮತ್ತೇನೂ ಎನಿಸಲೇ ಇಲ್ಲ.

ಪಾಸ್ಸೊವಿನ ಕೌಲಾದ ಬಳಿಕ ಚಾರ್ಲ್ಸನ ಮನಸ್ಸಿನ ವಿಶಿಷ್ಟ ಕಲ್ಪನಾಶಕ್ತಿ ಬೆಳಕಿಗೆ ಬಂದಿತು. ಇಷ್ಟು ಹೊತ್ತಿಗೆ ತನ್ನಸ್ಥಾನದ ದೊಡ್ಡಸ್ತಿಕೆ ಅವನಿಗೆ ಸಂಪೂರ್ಣ ಬೇಸರ ತಂದಿತ್ತು ಮತ್ತು ಅದರ ಬಗೆಗೆ ಅವನಿಗೆ ಯಾವ ವ್ಯಾಮೋಹವೂ ಉಳಿದಿರಲಿಲ್ಲ. ಜುಗುಪ್ಸೆ ಬರಿಸುತ್ತಿದ್ದ ಯೂರೋಪಿನ ಈ ಹುರುಡುಗಳು ಶುದ್ಧ ಅಪ್ರಯೋಜಕಗಳೆಂದು ಇವನಿಗೆ ಎನ್ನಿಸತೊಡಗಿತು. ಯಾವಾಗಲೂ ಈತ ಅಂತಹ

ದೃಢಕಾಯನಾಗಿರಲಿಲ್ಲ ; ಅಲ್ಲದೆ ಸ್ವಭಾವತಃ ಸೋಮಾರಿಯಾಗಿದ್ದು ಸಂಧಿವಾತದಿಂದ ಬಳಲುತ್ತಿದ್ದನು. ಈಗ ಚಕ್ರವರ್ತಿಪದವಿಯನ್ನು ತ್ಯಜಿಸಿಬಿಟ್ಟು ಜರ್ಮನಿಯಲ್ಲಿನ ತನ್ನ ಸ್ವಾಮ್ಯಗಳನ್ನೆಲ್ಲಾ ತನ್ನ ತಮ್ಮ ಫರ್ಡಿನಾಂಡನಿಗೂ ಸ್ಪೇನ್ ಮತ್ತು ನೆದರ್ ಲ್ಯಾಂಡುಗಳನ್ನು ತನ್ನ ಮಗ ಫಿಲಿಪ್ಪನಿಗೂ ಕೊಟ್ಟುಬಿಟ್ಟನು. ಒಂದು ರೀತಿಯ ಘನತೆಯಿಂದ ಕೂಡಿದ ಅಸಮಾಧಾನ ಮನೋಭಾವದಿಂದ ವಿಶ್ರಾಂತಿ ಜೀವನಕ್ಕಾಗಿ ಟಾಗಸ್ ಕಣಿವೆಯ ಉತ್ತರಕ್ಕಿದ್ದ ಗುಡ್ಡಗಳಲ್ಲಿ ಓಕ್ ಮತ್ತು ಚೆಸ್ಟ್‌ನಟ್ ಮರಗಳ ಅರಣ್ಯದ ಮಧ್ಯೆಇದ್ದ ಯೂಸ್ಟ ಎಂಬಲ್ಲಿದ್ದ ಮಠಕ್ಕೆ ತೆರಳಿದನು. ಅಲ್ಲಿಯೇ 1558 ರಲ್ಲಿ ಇವನ ಮರಣ ಸಂಭವಿಸಿತು.

ಈ ಪದವಿತ್ಯಾಗವನ್ನು ಕುರಿತು ಭಾವಾತಿರೇಕದ ಧಾಟಿಯಲ್ಲಿ ಜನರು " ಆಯಾಸಗೊಂಡ ಈ ಭವ್ಯ ಪ್ರಚಂಡ ವ್ಯಕ್ತಿ ಪ್ರಾಪಂಚಿಕತೆಗೆ ಬೇಸತ್ತು ವೈರಾಗ್ಯದಿಂದ ಕೂಡಿದ ಏಕಾಂತದಲ್ಲಿ ದೇವರೊಡನೆ ಶಾಂತಿಯನ್ನು ಪಡೆಯುಲು ಪದವಿ ತ್ಯಾಗಮಾಡಿ ತೆರಳಿದ"ನೆಂದು ಎಷ್ಟೋ ಬರೆದಿದ್ದಾರೆ. ಆದರೆ ಈ ವಿಶ್ರಾಂತಿ ಜೀವನ ವೈರಾಗ್ಯಪೂರ್ಣವೂ ಆಗಿರಲಿಲ್ಲ. ಏಕಾಂತದ್ದೂ ಆಗಿರಲಿಲ್ಲ. ಇವನೊಡನೆ 150 ಜನ ಅನುಚರರಿದ್ದರು. ಈ ವಾಸಸ್ಥಾನದಲ್ಲಿ ರಾಜಾಸ್ಥಾನದ ಸುಖವೈಭವಗಳೆಲ್ಲ ಇದ್ದುವು. ಅಲ್ಲಿಯ ಕಾರ್ಯಶ್ರಮಮಾತ್ರ ಇರಲಿಲ್ಲ ಮತ್ತು ಇವನ ಮಗ ಎರಡನೇ ಫಿಲಿಪ್ ಪಿತೃಭಕ್ತನಾಗಿದ್ದು ತನ್ನ ತಂದೆಯ ಸಲಹೆಗಳನ್ನು ಆಜ್ಞೆಗಳೆಂದೇ ಭಾವಿಸುತ್ತಿದ್ದನು.

ಯೂರೋಪಿನ ವ್ಯವಹಾರಗಳ ನಿರ್ವಹಣೆಯಲ್ಲಿ ಇವನು ಆಸಕ್ತಿ ಕಳೆದುಕೊಂಡಿದ್ದಿರಬಹುದು. ಆದರೆ ಉತ್ಸಾಹವನ್ನು ತರಿಸಲು ಅವುಗಳಿಗಿಂತ ಇನ್ನೂ ಆತ್ಮೀಯವಾದ ಆಸಕ್ತಿಗಳಿದ್ದುವು ಪ್ರೆಸ್ಕಾಟ್ ಹೇಳುತ್ತಾನೆ :

ಕ್ವಿಹಾಡಾ ಅಥವಾ ಗಾಸ್ಟೆಲು ಮತ್ತು ವಾಲ್ಲಾಡೊಲಿಡ್‌ನಲ್ಲಿದ್ದ ರಾಜ್ಯ ಕಾರ್ಯದರ್ಶಿಯೊಡನೆ ಹೆಚ್ಚುಕಡಿಮೆ ಪ್ರತಿದಿನ ನಡೆಯುತ್ತಿದ್ದ ಪತ್ರವ್ಯವಹಾರದಲ್ಲಿ ಚಕ್ರವರ್ತಿಯ ಊಟ ಅಥವಾ ಅವನ ಅನಾರೋಗ್ಯಗಳ ಪ್ರಸ್ತಾಪವಿಲ್ಲದ ಕಾಗದ ಒಂದೂ ಇಲ್ಲವೆನ್ನಬಹುದು. ವೀಕ್ಷಕವಿವರಣೆಯಂತೆ ಊಟ ಮತ್ತು ಆರೋಗ್ಯಗಳ ಪ್ರಸ್ತಾಪಗಳು ಒಂದನ್ನೊಂದು ಸಹಜವಾಗಿ ಹಿಂಬಾಲಿಸುತ್ತವೆ. ಸರ್ಕಾರೀ ಇಲಾಖೆಯ ಪತ್ರವ್ಯವಹಾರದಲ್ಲಿ ಇಂತಹ ವಿಷಯಗಳು ಮುಖ್ಯ ಸಂಗತಿಗಳಾಗಿರುವುದು ತುಂಬಾ ಅಪೂರ್ವ. ಭೋಜನಕಲೆ ಮತ್ತು ರಾಜಕೀಯಗಳೆರಡೂ ವಿಚಿತ್ರರೀತಿಯಲ್ಲಿ ಸಂಮಿಶ್ರವಾಗಿರುತ್ತಿದ್ದ ಈ ಪತ್ರಗಳನ್ನು ಓದುತ್ತಿದ್ದಾಗ ಗಾಂಭೀರ್ಯವನ್ನುಳಿಸಿಕೊಳ್ಳುವುದು ಕಾರ್ಯದರ್ಶಿಗೆ ತುಂಬ ಕಷ್ಟವಾಗುತ್ತಿದ್ದಿರಬೇಕು. ವಾಲ್ಲಾಡೊಲಿಡ್‌ನಿಂದ ಲಿಸ್ಬನ್ನಿಗೆ ಹೋಗುವ ದೂತ ಚಕ್ರವರ್ತಿಯ ಭೋಜನಕ್ಕೆ ಸಾಮಗ್ರಿಗಳನ್ನು ತರುವುದಕ್ಕಾಗಿ ಬಳಸುದಾರಿ ಹಿಡಿದು ಯಾರಂದಿಲ್ಲಾ (Jarandilla)ಗೆ ಭೇಟಿಕೊಡಬೇಕೆಂದು ಅಪ್ಪಣೆಯಾಗುತ್ತಿತ್ತು. ಗುರುವಾರದ ನಂತರ ಬರುವ ' ಮಾಂಸವಿಲ್ಲದ ದಿನ 'ಕ್ಕಾಗಿ ಮೀನು ತರಬೇಕಾಗಿತ್ತು. ಹತ್ತಿರದಲ್ಲಿ

ಸಿಗುತ್ತಿದ್ದ ಮೀನುಗಳು ಬಹು ಸಣ್ಣವು ಎಂದು ಚಾರ್ಲ್ಸ್‌ನಿಗೆನಿಸುತ್ತಿದ್ದುದರಿಂದ ವಾಲ್ಲಾಡೊಲಿದ್‌ನಿಂದ ದೊಡ್ಡ ದೊಡ್ಡ ಮೀನುಗಳನ್ನು ಕಳುಹಿಸಬೇಕಾಗಿತ್ತು. ಎಲ್ಲ ಬಗೆ ಮೀನುಗಳು, ಏಕೆ ಮೀನಿನಂತಹ ಸ್ವಭಾವ ಅಥವಾ ಜೀವನಕ್ರಮಗಳನ್ನುಳ್ಳ ಆಹಾರ ವಸ್ತುಗಳೆಲ್ಲ ಅವನಿಗೆ ಪ್ರಿಯವಾಗಿದ್ದುವು. ರಾಜನ ಭೋಜನ ಸಾಮಗ್ರಿಗಳ ಪಟ್ಟಿಯಲ್ಲಿ ಈಲ್‌ಮೀನು, ಕಪ್ಪೆ ಹಾಗೂ ಚಿಪ್ಪುಮೀನುಗಳಿಗೆ ಅಗ್ರಸ್ಥಾನವಿತ್ತು. ಮಡಕೆಗಳಲ್ಲಿ ಹಾಕಿ ಕಾದಿರಿಸಿದ ಮೀನುಗಳು ಅದರಲ್ಲಿಯೂ ಆಂಚೊವಿಗಳೆಂದರೆ ಅವನಿಗೆ ತುಂಬಾ ಪ್ರೀತಿ. ನೆದರ್‌ಲ್ಯಾಂಡಿನಿಂದ ಇವುಗಳನ್ನು ಸಾಕಷ್ಟು ತರಲಿಲ್ಲ ನೆಂದು ಇವನಿಗೆ ವಿಷಾದವೆನಿಸಿತ್ತು. ಒಂದು ಬಗೆಯ ಈಲ್‌ಪೇಸ್ಟಿಯೆಂದರೆ ಇವನಿಗೆ ಪ್ರಾಣ.*

1554ರಲ್ಲಿ ತಾನು ಉಪವಾಸ ಮಾಡಬೇಕಾಗಿಲ್ಲ ಮತ್ತು ಪ್ರಭು ಭೋಜನ ಸಂಸ್ಕಾರ ಪಡೆಯುವ ದಿನ ಸಹ ಬೆಳಿಗ್ಗೆ ಬೇಗ ತಿಂಡಿ ತಿನ್ನಬಹುದು ಎಂಬ ಅನುಮತಿ ಪೂರ್ವಕವಾದ ಆಜ್ಞೆಗಳನ್ನು ಪೋಪ್ ಮೂರನೇ ಲಿಯೋವಿನಿಂದ ತರಿಸಿಕೊಂಡನು.

ಭೋಜನ ಮತ್ತು ಚಿಕಿತ್ಸೆ! ಮೂಲಭೂತ ಸಂಗತಿಗಳಿಗೆ ಈತ ಹಿಂದಿರುಗಿದ್ದನು. ಇವನಿಗೆ ಓದುವ ಅಭ್ಯಾಸವಿಲ್ಲೇ ಇಲ್ಲ ಆದರೆ ಷಾರ್ಲಮನ್ನನಂತೆ ಊಟದ ಸಮಯ ದಲ್ಲಿ ಏನನ್ನಾದರೂ ಓದಿಸಿ ಕೇಳುತ್ತಿದ್ದನು. ಆಗ "ಮಧುರವಾಗಿ, ದೈವಿಕವಾಗಿ ಅದರ ಮೇಲೆ ವ್ಯಾಖ್ಯಾನ" ಮಾಡುತ್ತಿದ್ದನೆಂದು ಒಬ್ಬ ಕಥನಕಾರ ಹೇಳಿದ್ದಾನೆ. ಯಂತ್ರ ರಚನೆಯ ಆಟದ ಸಾಮಾನುಗಳನ್ನಿಟ್ಟುಕೊಂಡು ಆಡುವುದು, ಸಂಗೀತ ಮತ್ತು ಧರ್ಮೋಪದೇಶಗಳನ್ನು ಕೇಳುವುದು, ಆಗಲೂ ತನ್ನ ಕಡೆಗೆ ಆಗಿಂದಾಗ ಬರುತ್ತಿದ್ದ ರಾಜಕೀಯ ವ್ಯವಹಾರಗಳ ಕಡೆ ಗಮನ ಕೊಡುವುದು ಇವನಿಗೆ ಹೊತ್ತು ಕಳೆಯುವ ಹವ್ಯಾಸಗಳಾಗಿದ್ದವು. ಇವನು ತುಂಬಾ ಪ್ರೀತಿಸುತ್ತಿದ್ದ ಚಕ್ರವರ್ತಿನಿ ಮರಣಹೊಂದಿದ್ದು ಇವನು ಧಾರ್ಮಿಕ ವಿಷಯಗಳ ಕಡೆ ತಿರುಗುವಂತೆ ಮಾಡಿತು. ಆದರೆ ಧರ್ಮ ಎನ್ನುವುದು ಸಂಪ್ರದಾಯ ಆಚರಣೆಗೆ ಸೂಕ್ಷ್ಮ ಗಮನ, ಬಾಹ್ಯಾಚರಣೆ ಗಳಲ್ಲಿ ನಿಷ್ಠೆಯ ರೂಪ ಪಡೆಯಿತು. ಲೆಂಟ್ ಕಾಲದಲ್ಲಿ ಪ್ರತಿ ಶುಕ್ರವಾರವೂ ಇವನು ಕ್ರೈಸ್ತ ಸಂನ್ಯಾಸಿಗಳೊಡನೆ ಸೇರಿ ರಕ್ತ ಬರುವಷ್ಟರ ಮಟ್ಟಿಗೆ ಚಾವಟಿಯಿಂದ ಹೊಡೆದುಕೊಳ್ಳುತ್ತಿದ್ದನು. ಅದುವರೆಗೆ ವ್ಯವಹಾರ ದೃಷ್ಟಿಯಿಂದ ತಡೆದಿಟ್ಟಿದ್ದ ಅಂಧಮತಾಭಿಮಾನ ಈ ಆಚರಣೆಗಳು ಮತ್ತು ಸಂಧಿವಾತ ರೋಗದಿಂದಾಗ ಹೊರ ಬಂದಿತು. ಅಲ್ಲಿಯೇ ವಾಲಾದೊಲಿದ್‌ನಲ್ಲಿ ಪ್ರಾಟೆಸ್ಟಂಟ್ ಉಪದೇಶ ಪ್ರಾರಂಭ ವಾದುದು ಇವನಲ್ಲಿ ಆಕ್ರೋಶವನ್ನುಂಟುಮಾಡಿತು. "ರೋಮನ್ ಕ್ಯಾಥೊಲಿಕ್ ವಿಚಾರಣಾಧಿಕಾರಿಗೆ ಹೇಳು, ಯಾವಾಗಲೂ ಸಿದ್ಧವಾಗಿದ್ದುಕೊಂಡು ಈ ಅನಿಷ್ಟ

* ರಾಬರ್ಟ್‌ಸನ್ ಬರೆದ "ಐದನೆ ಚಾರ್ಲ್ಸನ ಚರಿತ್ರೆ" ಎಂಬ ಗ್ರಂಥಕ್ಕೆ ಪ್ರೆಸ್ಕಾಟ್ ಬರೆದ ಅನುಬಂಧದಿಂದ.

ಮತ್ತು ಪಟ್ಟ ಹರಡುವಷ್ಟರಲ್ಲೇ ಅದರ ಬೇರಿಗೆ ಕೊಡಲಿ ಹಾಕುವಂತೆ ಹೇಳು ...” ಇಂತಹ ದುಷ್ಕಾರ್ಯ ನಡೆಯುತ್ತಿರುವಾಗ ಸಾಮಾನ್ಯ ಸಂದರ್ಭಗಳಲ್ಲಿ ತೋರಬೇಕಾದ ಕರುಣೆಯನ್ನು ತ್ಯಜಿಸಿ ನಿಷ್ಕಾರುಣ್ಯದಿಂದ ನಡೆಯುವುದೇ ಒಳ್ಳೆಯದಲ್ಲವೇ ಎಂದೂ ಅವನು ಅಭಿಪ್ರಾಯಪಟ್ಟನು. “ಏಕೆಂದರೆ ದುಷ್ಕರ್ಮಿಯನ್ನು ಕ್ಷಮಿಸಿಬಿಟ್ಟರೆ ಅವನು ತಿರುಗಿ ಅದೇ ಪಾಪವನ್ನು ಮಾಡಲು ಅವಕಾಶ ಸಿಗುತ್ತದೆಯಲ್ಲವೇ?” ಇದಕ್ಕಾಗಿ ಅವನು ತಾನು ನೆದರ್‌ಲ್ಯಾಂಡಿನಲ್ಲಿ ಅನುಸರಿಸಿದ ಕ್ರಮವನ್ನು ಶಿಫಾರ್ಸು ಮಾಡಿದನು. “ಮೊಂಡುತನದಿಂದ ತಪ್ಪೊಪ್ಪಿಕೊಳ್ಳದಿದ್ದವರನ್ನೆಲ್ಲಾ ಜೀವಂತ ಸುಡುವುದು, ಪಶ್ಚಾತ್ತಾಪ ಪಟ್ಟವರ ತಲೆ ಕತ್ತರಿಸಿ ಹಾಕುವುದು.”

ಇವನಿಗೆ ಉತ್ತರಕ್ರಿಯೆಗಳೆಂದರೆ ಅದೇನೋ ಒಂದು ಬಗೆಯ ಆಕರ್ಷಣೆ ಇದ್ದಿತು. ಚರಿತ್ರೆಯಲ್ಲಿ ಇವನ ಸ್ಥಾನ ಮತ್ತು ಕಾರ್ಯಗಳಿಗೆ ಬಹುಶಃ ಇದು ಸಾಂಕೇತಿಕವಾಗಿತ್ತು ಎನ್ನಬಹುದು. ಯುರೋಪಿನಲ್ಲಿ ಮಹತ್ತಾದುದು ಏನೋ ಅಳಿದು ಹೋಯಿತು, ಅದನ್ನು ಸಮಾಧಿ ಮಾಡಿ ಅದಕ್ಕೆ ಚರಮಗೀತೆ ಹಾಡುವ ಸಮಯ ಬಂದು ಹೋಗಿದೆ ಎಂಬ ಅರಿವು ಇವನಿಗೆ ಆಗಿತ್ತು ಎನಿಸುತ್ತದೆ. ಯೂಸ್ಟ್‌ನಲ್ಲಿ ನಡೆದ ಪ್ರತಿ ಉತ್ತರಕ್ರಿಯೆಗೂ ಇವನು ಹಾಜರಾಗುತ್ತಿದ್ದನು. ಸತ್ತು ಕಣ್ಮರೆಯಾದವರಿಗೂ ಚರ್ಚಿನಲ್ಲಿ ಪ್ರಾರ್ಥನೆಗಳನ್ನು ನಡೆಸುತ್ತಿದ್ದನು. ತನ್ನ ಪತ್ನಿ ಸತ್ತ ತಾರೀಖಿನ ದಿನ ಪ್ರತಿವರ್ಷವೂ ಅವಳ ಜ್ಞಾಪಕಾರ್ಥವಾಗಿ ಪ್ರಾರ್ಥನೆ ನಡೆಸುತ್ತಿದ್ದುದಲ್ಲದೆ ಕಡೆಗೆ ತನ್ನ ಅಂತ್ಯ ವಿಧಿಗಳನ್ನು ತಾನೇ ಆಚರಿಸಿ ಬಿಟ್ಟನು.

“ಪ್ರಾರ್ಥನಾ ಮಂದಿರದಲ್ಲಿ ಕಪ್ಪು ಪರದೆಗಳನ್ನು ತೂಗುಬಿಟ್ಟಿದ್ದರು. ನೂರಾರು ಮೇಣದ ಬತ್ತಿಗಳು ಉರಿಯುತ್ತಿದ್ದರೂ ಅಲ್ಲಿಯ ಕತ್ತಲೆ ಪೂರ್ತಿ ಹೋಗಿರಲಿಲ್ಲ. ಕ್ರೈಸ್ತ ಪಾದ್ರಿಗಳು ಮಠದ ಸಾಂಪ್ರದಾಯಿಕ ತೊಡಿಗೆ ಧರಿಸಿದ್ದರು. ಚಕ್ರವರ್ತಿಯ ಮನೆವಾರ್ತೆಯವರೆಲ್ಲರೂ ತೀವ್ರ ಶೋಕ ಸೂಚಕ ಉಡುಪುಗಳನ್ನು ತೊಟ್ಟಿದ್ದರು. ಮಂದಿರದ ಮಧ್ಯದಲ್ಲಿ ಎತ್ತರದಲ್ಲಿಡಲಾಗಿದ್ದ ಕಪ್ಪು ಬಟ್ಟೆಯಿಂದ ಮುಚ್ಚಲಾಗಿದ್ದ ಶವ ಸಂಸ್ಕಾರದ ದೊಡ್ಡ ವೇದಿಕೆಯ ಸುತ್ತಲೂ ಎಲ್ಲರೂ ಸೇರಿದರು. ಸತ್ತವರನ್ನು ಸಮಾಧಿ ಮಾಡುವಾಗ ಹೇಳುವ ಪ್ರಾರ್ಥನೆ ಆಯಿತು; ಅನುಗೃಹೀತರಾದವರ ಆವಾಸ ಸ್ಥಾನದಲ್ಲಿ ಈ ಆತ್ಮಕ್ಕೂ ನೆಲೆ ಸಿಗಲಿ ಎಂದು ಇಲ್ಲಿಂದ ತೆರಳಿದ ಆತ್ಮಕ್ಕಾಗಿ ಪ್ರಾರ್ಥನೆ ವಿಷಾದ ಸೂಚಕವಾಗಿ ಗೋಳಿಡುತ್ತಿದ್ದ ಪಾದ್ರಿಗಳ ನಡುವಿನಿಂದ ಮೇಲೇರಿತು. ದುಃಖಿಸುತ್ತಿದ್ದ ಸೇವಕರು ತಮ್ಮ ಒಡೆಯನ ಸಾವಿನ ಈ ಚಿತ್ರ ಮುಂದೆ ಬರುತ್ತಲೂ ಕಣ್ಣೀರು ಕರೆದರು — ಅಥವಾ ಶೋಚನೀಯವಾದ ಈ ಮನೋದೌರ್ಬಲ್ಯದ ಪ್ರದರ್ಶನದಿಂದ ಅವರಿಗೆ ಕನಿಕರ ಹುಟ್ಟಿ ಹಾಗೆ ಮಾಡಿರಬಹುದು. ಕಪ್ಪು ಮೇಲಂಗಿಯಿಂದ ಮುಸುಕು ಹಾಕಿಕೊಂಡು ಕೈಯಲ್ಲಿ ಉರಿಯುತ್ತಿದ್ದ ಮೇಣದ ಬತ್ತಿ ಹಿಡಿದ ಚಾರ್ಲ್ಸ್ ತನ್ನ ಮನೆವಾರ್ತೆಯವರೊಂದಿಗೆ ತನ್ನದೇ ಉತ್ತರಕ್ರಿಯೆಯ ಪ್ರೇಕ್ಷಕನಾದನು. ತನ್ನ ಆತ್ಮವನ್ನು ಸರ್ವಶಕ್ತನಾದ ದೇವರಿಗೆ ಅರ್ಪಿಸುವ

ಚಿಹ್ನೆಯಾಗಿ ತನ್ನ ಕೈಯ್ಯಲ್ಲಿದ್ದ ಮೇಣದ ಬತ್ತಿಯನ್ನು ಪಾದ್ರಿಯ ಕೈಯ್ಯಲ್ಲಿಡುವ ಸಾಂಕೇತಿಕ ಕ್ರಿಯೆಯಿಂದ ಈ ಗೋಳು ಕರೆಯ ಕಾರ್ಯಕ್ರಮ ಕೊನೆಗಂಡಿತು."

ಈ ನಾಟಕ ನಡೆದ ಮೇಲೆ ಎರಡು ತಿಂಗಳಲ್ಲೇ ಇವನು ತೀರಿಕೊಂಡನು. ಪವಿತ್ರ ರೋಮನ್ ಸಾಮ್ರಾಜ್ಯದ ಅಲ್ಪಕಾಲಿಕ ವೈಭವ ಇವನೊಡನೆ ಕೊನೆಗೊಂಡಿತು. ಆಗಲೇ ಇವನ ರಾಜ್ಯ ಇವನ ಮಗ ಮತ್ತು ತಮ್ಮಂದಿರ ನಡುವೆ ವಿಭಾಗವಾಗಿತ್ತು. ಒಂದನೇ ನೆಪೋಲಿಯನ್ನನವರೆಗೂ ಈ ಸಾಮ್ರಾಜ್ಯ ಹಾಗೂ ಹೀಗೂ ಗುದ್ದಾಡಿಕೊಂಡು ಬಂದರೂ ಅದು ಸಾವನ್ನೆದುರು ನೋಡುತ್ತಿರುವ ರೋಗಿಯ ಸ್ಥಿತಿಯಲ್ಲಿತ್ತು. ಇದಕ್ಕೆ ಸಂಬಂಧ ಪಟ್ಟ ಭಾವನೆಗಳು ಈಗಲೂ ಇದ್ದುಕೊಂಡು ಇಂದಿನ ರಾಜಕೀಯದಲ್ಲಿಯೂ ವಿಷ ತುಂಬುತ್ತಿವೆ.

ವೈ. ಎಸ್. ಸಿದ್ಧೇಗೌಡ

ದೈಹಿಕ ಅಂಗವಿಕಲ ಮತ್ತು ಸಮಾಜಕಾರ್ಯಕರ್ತ

ಯಾವ ವ್ಯಕ್ತಿ ಕುರುಡ, ಕಿವುಡ, ಮೂಗ, ಹೆಳವ ಅಥವಾ ದೇಹದ ಯಾವುದಾದ ರೊಂದು ಅಂಗವನ್ನು ಕಳೆದುಕೊಂಡಿದ್ದಾನೊ ಅಂತಹವನನ್ನು ದೈಹಿಕ ಅಂಗವಿಕಲ ಎಂದು ಸಾಮಾನ್ಯವಾಗಿ ಹೇಳಬಹುದು.

ನಿಜ ಸಂಗತಿ ಎಂದರೆ ಇಂತಹ ತೊಂದರೆಗೆ ಒಳಗಾದ ವ್ಯಕ್ತಿ ಇತರ ಸಾಮಾನ್ಯ ಜನರ ರೀತಿ ತನ್ನ ಕೆಲಸವನ್ನು ಇತರರಂತೆ ನಿರ್ವಹಿಸಲಾರ, ಈ ನಿರ್ವಹಿಸ ಲಾರದಿರುವಿಕೆ ಇವನಲ್ಲಿ ಅನೇಕ ದೈಹಿಕ ಮತ್ತು ಮಾನಸಿಕ ಅಘಾತಕ್ಕೆ ಈಡುಮಾಡು ತ್ತದೆ. ತನ್ನ ದೈನಂದಿನ ಜೀವನದಲ್ಲಿ ಅನೇಕ ಸಂಕಷ್ಟಗಳಿಗೆ ಈಡಾಗುತ್ತಾನೆ, ಈ ನ್ಯೂನತೆಯು ಅವನ ಮಾನಸಿಕ ಬೆಳವಣಿಗೆಯ ಮೇಲೆ ತೀವ್ರ ಪರಿಣಾಮ ಬೀರುವು ದರಲ್ಲಿ ಸಂಶಯವಿಲ್ಲ, ಕೀಳರಿಮೆ ಮನೋಭಾವ, ಉದ್ವಿಗ್ನತೆ, ಕಿನ್ನತೆ, ಮುಂತಾದ ಮನೋ ವ್ಯಾಕುಲತೆಗೆ ಒಳಗಾಗುತ್ತಾನೆ.

ಇತ್ತೀಚಿಗೆ ಅನೇಕ ವೈಜ್ಞಾನಿಕ ಸಲಕರಣೆಗಳನ್ನು ಅಳವಡಿಸಿ ನ್ಯೂನತೆಯನ್ನು ಹೋಗಲಾಡಿಸಿ ಇತರ ಜನಸಾಮಾನ್ಯರಂತೆ ಜೀವಿಸಲು ಅನುವು ಮಾಡಿಕೊಟ್ಟಿದ್ದರೂ, ಹೆಚ್ಚು ವೇಳೆ ಈ ಸಲಕರಣೆಗಳೇ ಸಮಾಜದ ಜನರ ಟೀಕೆಗೆ ಗುರಿಯಾಗಿರುವ ನಿದರ್ಶನ ಗಳು ಅನೇಕ. ದೈಹಿಕ ಅಂಗವಿಕಲರ ಸಮಗ್ರ ಬದಲಾವಣೆಗೆ ಒಂದು ತಜ್ಞರ ತಂಡವೇ ತಮ್ಮ ಕಾರ್ಯವನ್ನು ನಿರ್ವಹಿಸಬೇಕಾಗುತ್ತವೆ. ಅಂದರೆ ತಜ್ಞವೈದ್ಯರು, ಮನೋ ಶಾಸ್ತ್ರಜ್ಞರು, ಮನೋವಿಶ್ಲೇಷಕರು, ವೃತ್ತಿಮಾರ್ಗದರ್ಶಕರು, ಸಂದರ್ಶಕರು, ಸಮಾಜ ಕಾರ್ಯಕರ್ತರು ಹೀಗೆ ಇಡೀ ಸಮೂಹವೇ ಅಂಗವಿಕಲನ ಪುನರ್‌ವ್ಯವಸ್ಥೆಗೆ ದುಡಿಯುತ್ತದೆ, ಆದರೆ ಈ ಎಲ್ಲಾ ತಜ್ಞರ ಪಾತ್ರಕ್ಕಿಂತ ಸಮಾಜಕಾರ್ಯಕರ್ತನ ಪಾತ್ರ ಅತಿಪ್ರಮುಖ ಮತ್ತು ಅತ್ಯಾವಶ್ಯಕ, ಏಕೆಂದರೆ ಇವನು ಅಂಗವಿಕಲನ ದೈಹಿಕ ಮತ್ತು ಮಾನಸಿಕ ಸ್ಥಿತಿಗಳ ಜೊತೆಗೆ ಸ್ಪಂದಿಸಿ ಅವನ ಸಮಗ್ರ ಬದಲಾವಣೆಗೆ ಬೇರೆ ಯಾವ ತಜ್ಞರೂ ಸಲ್ಲಿಸಲಾರದ ಕಾಣಿಕೆಯನ್ನು ಸಲ್ಲಿಸುವುದೇ ಕಾರಣ. ವ್ಯಕ್ತಿಯ ದೈಹಿಕ ಮತ್ತು ಮಾನಸಿಕಸ್ಥಿತಿಗಳು ಬೇರೆ ಬೇರೆಯಲ್ಲ. ಬದಲಾಗಿ ಒಂದಕ್ಕೊಂದು

ಪೂರಕ. ಒಂದರ ಬೆಳವಣಿಗೆ ಮತ್ತೊಂದರ ಮೇಲೆ ನೇರ ಪರಿಣಾಮ ಬೀರುತ್ತದೆ. ಆದ್ದರಿಂದ ಈ ವಿಷಯವನ್ನು ಗಮನದಲ್ಲಿಟ್ಟುಕೊಂಡು ಸಮಾಜದಲ್ಲಿರುವ ಅಸಂಖ್ಯಾತ ಅಂಗವಿಕಲರ ಸಮಸ್ಯೆಗಳನ್ನು ತಮ್ಮ ವೃತ್ತಿಪರ ತಂತ್ರ, ಕೌಶಲ್ಯ ಮತ್ತು ಜ್ಞಾನವನ್ನು ಅಳವಡಿಸಿ ಅವರ ಪುನರ್ವಸತಿಗೆ ಹೇಗೆ ಕಾರಣಕರ್ತರಾಗುತ್ತಾರೆ ಎಂಬುವನ್ನು ಅವರ ಪಾತ್ರವನ್ನು ಅವಲೋಕಿಸುವುದರಿಂದ ತಿಳಿಯಬಹುದು.

ಸಮಾಜಕಾರ್ಯಕರ್ತನ ಕಾರ್ಯಕ್ಷೇತ್ರವನ್ನು ಮೂರು ಹಂತದಲ್ಲಿ ವಿಸ್ತರಿಸಬಹುದು:—

1. ಅಂಗವಿಕಲನ ಜೊತೆ
2. ಊನಶಕ್ತರ ಕುಟುಂಬದ ಸದಸ್ಯರೊಡನೆ, ಕೊನೆಯದಾಗಿ,
3. ಸಮುದಾಯದ ಸದಸ್ಯರೊಡನೆ,

(1) ಅಂಗವಿಕಲನ ಜೊತೆ ಸಮಾಜಕಾರ್ಯಕರ್ತ ತನ್ನ ಸಂಬಂಧವನ್ನು ವೃದ್ಧಿಸಿ ಅವನನ್ನು ಪ್ರಚಲಿತದಲ್ಲಿ ಸಿಕ್ಕಿ ಅನುಭವಿಸುತ್ತಿರುವ ತೊಂದರೆಯಿಂದ ಬಿಡುಗಡೆ ಮಾಡುವುದು ಅವನ ಆದ್ಯ ಕರ್ತವ್ಯವಾಗಿರುತ್ತದೆ. ಅಂಗವಿಕಲನ ದೈಹಿಕ ಮಾನಸಿಕ, ಬೆಳವಣಿಗೆಯ ಸಂಪೂರ್ಣ ಜವಾಬ್ದಾರಿ ಅವನದಾಗಿರುತ್ತದೆ. ಅವನನ್ನು ಸರಿಯಾದ ಪರಿಸರಕ್ಕೆ ಹೊಂದಿಸಿ ಅವನಲ್ಲಿ ಹುದುಗಿರುವ ಕೀಳರಿಮೆ, ಅನಿಶ್ಚಿತತೆ, ಉದ್ವಿಗ್ನತೆ, ಮನೋವ್ಯಾಕುಲತೆ, ಅವ್ಯವಸ್ಥಿತ ಅಭಿವೃತ್ತಿಯನ್ನು ಹೋಗಲಾಡಿಸಿ ಮನೋಸ್ಥೈರ್ಯ ತುಂಬ ವುದು, ಇದಕ್ಕಾಗಿ ಸಮಾಜ ಕಾರ್ಯಕರ್ತ ತನ್ನ ವೃತ್ತಿಯ ಕುಶಲ್ಯತೆ, ತಂತ್ರ ಪ್ರಮುಖವಾಗಿ ವ್ಯಕ್ತಿಗತ ಸಮಾಜಕಾರ್ಯದ ಜ್ಞಾನವನ್ನು ಉಪಯೋಗಿಸಿ ಅವನನ್ನು ಮಾನಸಿಕವಾಗಿ ಆರೋಗ್ಯವಾಗುವಂತೆ ಮಾಡುತ್ತಾನೆ. ಇಷ್ಟೆಲ್ಲ ಕಾರ್ಯಕ್ಕೆ ಅರ್ಥಿಯು ಅಂದರೆ ದೈಹಿಕ ಅಂಗವಿಕಲನ ಸಹಕಾರ ಪ್ರಮುಖ ಪಾತ್ರವಹಿಸುತ್ತದೆ. ಏಕೆಂದರೆ ಸಮಾಜಕಾರ್ಯದ ಗುರಿ ವ್ಯಕ್ತಿಯ ಸಮಸ್ಯೆಗಳನ್ನು ಅವನಿಂದಲೇ ಬಗೆಹರಿಸಲು ಬೇಕಾದ ಪರಿಸರವನ್ನು ಒದಗಿಸುವುದೇ ಆಗಿದೆ.

ಅಂಗವಿಕಲನ ಸಮಸ್ಯೆಯನ್ನು ಅವನಿಗೆ ಮನದಟ್ಟಾಗುವಂತೆ ವಿವರಿಸಿ ಅವನ ಇತಿಮಿತಿಗಳನ್ನು ಅರಿಯುವಂತೆ ಮಾಡುವುದು, ಇದರಿಂದ ತನ್ನ ಸಾಮರ್ಥ್ಯಕ್ಕಿಂತ ಹೆಚ್ಚು ಆಸೆಯನ್ನು ಜೀವನದಲ್ಲಿ ಇಟ್ಟುಕೊಳ್ಳುವುದನ್ನು ತಡೆಯಬಹುದಾದ್ದರಿಂದ ಅವನಲ್ಲಿ ಕೀಳರಿಮೆ ಮತ್ತು ಜೀವನದ ಸೋಲುಗಳನ್ನು ಕಡಿಮೆ ಮಾಡಬಹುದು. ಅವನ ಸಾಮರ್ಥ್ಯದ ಬಗ್ಗೆ ಅವನಿಗೆ ಹೆಚ್ಚು ಜ್ಞಾನ ಕೊಡಬೇಕು ಮತ್ತು ಅವನಿಂದ ಸಾಧಿಸಲಾಗುವ ಕೆಲಸಗಳನ್ನು ಮಾತ್ರ ಅವನಿಗೆ ಬಿಡಬೇಕು. ಇದರಿಂದ ಅವನಲ್ಲಿ ಬೆಳೆದಿರುವ ಕೀಳರಿಮೆ ಮನೋಭಾವನೆಯನ್ನು ಹೋಗಲಾಡಿಸಿ ಎಲ್ಲರಂತೆ ನಾನೂ ಕೆಲಸಗಳನ್ನು ನಿರ್ವಹಿಸಬಲ್ಲೆ ಎಂಬ ಭಾವನೆ ಬೆಳೆಸಬಹುದು.

(2) ಅಂಗವಿಕಲನ ಕುಟುಂಬದ ಸದಸ್ಯರೊಡನೆ: ಅಂಗವಿಕಲನ ಪುನರ್ವಸತಿಗೆ, ದೃಢಸಂಕಲ್ಪ ಮನೋಸ್ಥೈರ್ಯ ಮತ್ತು ಅಭಿರುಚಿ ಎಷ್ಟು ಮುಖ್ಯವೋ ಅಷ್ಟೇ ಅವನ ಕುಟುಂಬದ ಸದಸ್ಯರ ಸಹಕಾರ ಅವಶ್ಯಕ. ಸಮಾಜಕಾರ್ಯಕರ್ತ ಅಂಗವಿಕಲನ ನ್ಯೂನತೆಯ ಬಗ್ಗೆ ಮತ್ತು ಅವನ ಮಾನಸಿಕ ಸ್ಥಿತಿಯ ವಿಚಾರಗಳಲ್ಲಿ ಕುಟುಂಬದ ಎಲ್ಲಾ ಸದಸ್ಯರಿಗೂ ಮನದಟ್ಟಾಗುವಂತೆ ಮಾಡಬೇಕು. ಏಕೆಂದರೆ ಕುಂಟ, ಕುರುಡ, ಹೆಳವ ಮುಂತಾದ ಮಕ್ಕಳನ್ನು ಹೊಂದಿರುವ ತಂದೆತಾಯಿಗಳು ಅವರ ಬಗ್ಗೆ ನಿರುತ್ಸಾಹಹೊಂದಿರುವುದು ಹೆಚ್ಚು. ಕೆಲವು ವೇಳೆ ಅವರು ಸಮಾಜದಲ್ಲಿ ಗೌರವ ಕಡಿಮೆಯಾಗುತ್ತದೆ ಮತ್ತು ತಮ್ಮ ಕುಟುಂಬದ ಶ್ರೇಯೋಭಿವೃದ್ಧಿಗೆ ಅಂಗವಿಕಲ ಅಡ್ಡಿ ಎಂಬ ಮನೋಭಾವ ಬೆಳೆಸಿಕೊಂಡಿದ್ದಾರೆ. ಖಂಡಿತ ಅಂಗವಿಕಲ ಅನೇಕ ಸಂಕಷ್ಟಗಳಿಗೆ ಸಿಕ್ಕಿ ನರಳುವುದನ್ನು ನೋಡಬಹುದು, ಅವನಲ್ಲಿ ನಾನು ಒಂಟಿ, ನನಗೆ ಯಾರೂ ಮನ್ನಣೆಕೊಡುವುದಿಲ್ಲ, ಬೇರೆ ಮಕ್ಕಳಂತೆ ನನ್ನ ಕ್ಷೇಮವನ್ನು ನೋಡಿಕೊಳ್ಳುವುದಿಲ್ಲ ಎಂಬ ಭಾವನೆ ಬೆಳೆದರೆ ಅವನು ದೈಹಿಕವಾಗಿ ಅವರ ಜೊತೆ ಜೀವಿಸುತ್ತಿದ್ದರೂ ಮಾನಸಿಕವಾಗಿ ಬಹು ದೂರ ಸರಿದಿರುತ್ತಾನೆ, ಒಂದು ರೀತಿ ವ್ಯತಿರಿಕ್ತ ಮನೋಭಾವ ಉದ್ಭವವಾಗಿರುತ್ತದೆ. ಇದನ್ನು ಹೋಗಲಾಡಿಸಲು ಸಮಾಜಕಾರ್ಯಕರ್ತ ಕುಟುಂಬದ ಎಲ್ಲಾ ಸದಸ್ಯರನ್ನು ಸಂದರ್ಶಿಸಿ ಅದರಲ್ಲಿ ಉಂಟಾಗಿರುವ ಕ್ಷೋಭೆಯನ್ನು ದಮನ ಮಾಡಬೇಕು, ಅಂದರೆ ಅಂಗವಿಕಲನ ಸಮಸ್ಯೆಯನ್ನು ನಿವಾರಿಸಲು ಕುಟುಂಬದ ಎಲ್ಲಾ ಸದಸ್ಯರ ಸಹಕಾರ ಪಡೆದುಕೊಳ್ಳಬೇಕು. ಅವನಲ್ಲಿ ಸರಿಯಾದ ಜ್ಞಾನಬೆಳೆಸಿ, ಪ್ರಚಲಿತದಲ್ಲಿ ಸಿಕ್ಕಿ ನರಳುತ್ತಿರುವ ಮಾನಸಿಕ ಸಂಕಷ್ಟದಿಂದ ಪಾರುಮಾಡಿ ಅಂಗವಿಕಲನನ್ನು ಇತರ ಕುಟುಂಬದ ಸದಸ್ಯರ ರೀತಿಯಲ್ಲಿ ನಡೆಸಿಕೊಳ್ಳುವಂತೆ ಮಾಡುವುದರ ಮುಖಾಂತರ ಅಂಗವಿಕಲನ ಸಮಸ್ಯೆಯನ್ನು ಜೊತೆಗೆ ಕುಟುಂಬದ ಸದಸ್ಯರಲ್ಲಿ ಉಂಟಾಗಿರುವ ಮಾನಸಿಕ ಗೊಂದಲವನ್ನು ನಿವಾರಿಸಲು ಸಮಾಜಕಾರ್ಯಕರ್ತ ಶ್ರಮವಹಿಸುತ್ತಾನೆ.

(3) ಸಮುದಾಯದ ಜನರ ಜೊತೆ: ಕೊನೆಯದಾಗಿ ಸಮುದಾಯದ ಹಂತದಲ್ಲಿ ಸಮಾಜಕಾರ್ಯಕರ್ತ ಅತಿ ಪ್ರಮುಖ ಪಾತ್ರವಹಿಸುತ್ತಾನೆ. ದೈಹಿಕ ಅಂಗವಿಕಲನು ಇತರ ಸಮುದಾಯದ ಜನರ ರೀತಿ ಸಮಾಜದ ಸದಸ್ಯ, ಅವನಿಗೆ ಇತರರಿಗೆ ಸಿಗುವ ಸ್ಥಾನ ಮತ್ತು ಸವಲತ್ತುಗಳು ಅನಿವಾರ್ಯ ಮತ್ತು ಅವನ್ನು ಅವನಿಗೆ ದೊರಕಿಸಿ ಕೊಡುವುದು ಸಮಾಜದ ಕರ್ತವ್ಯ. ವಾಸ್ತವಸ್ಥಿತ ಎಂದರೆ ಈ ಅಂಗವಿಕಲನ ಸ್ಥಾನಮಾನ ಸಮಾಜದಲ್ಲಿ ಅಷ್ಟು ಪ್ರಮುಖವಾಗಿರುವುದಿಲ್ಲ ಮತ್ತು ಅವನಿಗೆ ಬೇರೆಯವರಿಗೆ ಕೊಡುವಷ್ಟು ಮನ್ನಣೆ ಸಿಗುವುದಿಲ್ಲ. ಕಾರಣ ಅವನ ದೈಹಿಕ ಅಂಗವಿಕಲತೆ ಎಂದು ಮತ್ತೊಮ್ಮೆ ಹೇಳಬೇಕಾಗಿಲ್ಲ.

ಸಮಾಜಕಾರ್ಯಕರ್ತ ಅಂಗವಿಕಲನ ಸಂಗಡ ಮತ್ತು ಅವನ ಕುಟುಂಬದ ಸದಸ್ಯರೊಡನೆ ನಿರ್ವಹಿಸಿದ ಪಾತ್ರಕ್ಕಿಂತ ಭಿನ್ನ ಮತ್ತು ಪ್ರಮುಖವಾದ ಪಾತ್ರವನ್ನು

ಸಮುದಾಯದ ಹಂತದಲ್ಲಿ ವಹಿಸುತ್ತಾನೆ. ಏಕೆಂದರೆ ಸಮುದಾಯ ಹೆಚ್ಚು ಜನರನ್ನೊಳಗೊಂಡಿರುತ್ತದೆ. ಆದ್ದರಿಂದ ಇಲ್ಲಿ ಸಮಾಜಕಾರ್ಯಕರ್ತ ವ್ಯಕ್ತಿಗತ ಅಧ್ಯಯನಕ್ಕಿಂತ ಭಿನ್ನವಾದ ವಿಧಾನವನ್ನು ಅಳವಡಿಸುವುದು ಅನಿವಾರ್ಯ. ಇದರಲ್ಲಿ ಸಂಪರ್ಕ ಸಾಧನಗಳಾದ ರೇಡಿಯೋ, ದೂರದರ್ಶನ, ಪತ್ರಿಕೆಗಳು ಪ್ರಮುಖ ಪಾತ್ರವಹಿಸುತ್ತವೆ. ಇವುಗಳ ಮುಖಾಂತರ ಅಂಗವಿಕಲನ ಅಭಿವೃದ್ಧಿಯ ಬಗ್ಗೆ ಮತ್ತು ಸಮಾಜದ ಜವಾಬ್ದಾರಿಯ ಬಗ್ಗೆ ಹೆಚ್ಚು ಹಾಗೂ ಶೀಘ್ರವಾಗಿ ಪರಿಣಾಮ ಬೀರುವ ರೀತಿಯಲ್ಲಿ ಈ ಮಾಧ್ಯಮಗಳನ್ನು ಅಳವಡಿಸುವುದು ಸಮಾಜಕಾರ್ಯಕರ್ತನ ಕರ್ತವ್ಯವಾಗಿರುತ್ತವೆ. ಇದಲ್ಲದೆ ಅಂಗವಿಕಲತೆಯ ಬಗ್ಗೆ ಬೆಳಕು ಚೆಲ್ಲಲು ಮತ್ತು ಅವರ ಪುನರ್ವಸತಿಗಾಗಿ ಸಮ್ಮೇಳನ ಮತ್ತು ವಿಚಾರಗೋಷ್ಠಿಗಳನ್ನು ಏರ್ಪಡಿಸಿ ತಜ್ಞರ ಅಮೂಲಾಗ್ರ ಸಲಹೆಯನ್ನು ಪಡೆದು ಅವರ ಸಮಸ್ಯೆಯನ್ನು ನಿವಾರಿಸಲು ಸಮಾಜ ಕಾರ್ಯಕರ್ತ ಈ ದಿಶೆಯಲ್ಲಿ ಹೆಚ್ಚು ಕಾರ್ಯಪ್ರವೃತ್ತನಾಗುತ್ತಾನೆ. ಆದರಿಂದ ಸಮುದಾಯದ ಜನ ಅಂಗವಿಕಲನನ್ನು, ಹಿಂದೆ ಬೆಳೆಸಿಕೊಂಡಿದ್ದ ಕನಿಷ್ಠ ಭಾವನೆಯನ್ನು ಬಿಟ್ಟು ಸರಿಯಾಗಿ ಮನ್ನಣೆ ಕೊಡುವಂತೆ ಮಾಡಿ, ಅವನಲ್ಲಿ ಎಲ್ಲರಂತೆ ನಾನೂ ಸರಿಸಮಾನ ಎಂಬ ಭಾವನೆಯನ್ನು ಬೆಳೆಸುವುದರ ಮುಖಾಂತರ ಅನೇಕ ಸಮಸ್ಯೆಗಳನ್ನು ನಿವಾರಿಸಲು ಸಮಾಜ ಕಾರ್ಯಕರ್ತನಿಂದ ಮಾತ್ರ ಸಾಧ್ಯ.

ಈ ಮೇಲೆ ಹೇಳಿದ ರೀತಿ ಸಮಾಜಕಾರ್ಯಕರ್ತ ಅಂಗವಿಕಲನ ಕುಟುಂಬದ ಮತ್ತು ಸಮುದಾಯದೊಡನೆ ತನ್ನ ವೃತ್ತಿಪರ ತಂತ್ರ, ಕೌಶಲ್ಯ ಮತ್ತು ಜ್ಞಾನವನ್ನು ಉಪಯೋಗಿಸಿ ಬೇರೆ ಯಾವ ತಜ್ಞರೂ ಅಂಗವಿಕಲನ ಪುನರ್ವಸತಿಯ ಬಗ್ಗೆ ಸಲ್ಲಿಸಲಾರದ ಸೇವೆಯನ್ನು ಸಲ್ಲಿಸುತ್ತಾನೆ ಎಂದು ಹೇಳಬಹುದು.

ಪುಸ್ತಕ ವಿಮರ್ಶೆ

ಶಾಸನಗಳಲ್ಲಿ ಕರ್ನಾಟಕದ ವರ್ತಕರು; ಲೇ ಬಿ. ಆರ್. ಹಿರೇಮಠ: ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ : 1986, 38 ರೂ. ಪುಟ xiv + 198.

ಇತ್ತೀಚಿನ ವರ್ಷಗಳಲ್ಲಿ ಕರ್ನಾಟಕದ ಸಾಂಸ್ಕೃತಿಕ ಇತಿಹಾಸ ರಚನೆಗೆ ಮಹತ್ವ ಕೊಡುತ್ತಿರುವುದು ಸಮಾಧಾನದ ಸಂಗತಿ. ಕನ್ನಡನಾಡಿನ ಜನಜೀವನದ ವಿವಿಧ ಮುಖಗಳನ್ನು ಪರಿಚಯಿಸುವಲ್ಲಿ ಶಾಸನಗಳು ಉಪಯುಕ್ತವಾದ ಸಾಮಗ್ರಿಗಳು ಎಂಬುದನ್ನು ಪದೇ ಪದೇ ಹೇಳುತ್ತಿದ್ದರೂ, ಅವುಗಳ ಪೂರ್ಣ ಉಪಯೋಗವನ್ನು ಮಾಡಿಕೊಳ್ಳುವ ಗ್ರಂಥಗಳು ವಿರಳವೆಂದೇ ಹೇಳಬೇಕು. ಈ ದೃಷ್ಟಿಯಿಂದ ನೋಡಿದಾಗ ಪ್ರಸ್ತುತ ಗ್ರಂಥ ಶಾಸನಗಳನ್ನು ಸಂಪೂರ್ಣವಾಗಿ ಅವಲಂಬಿಸಿರುವ ಉತ್ತಮ ಗ್ರಂಥ. ಶಾಸನಗಳು ಯಾವ ರೀತಿಯ ವೈವಿಧ್ಯಪೂರ್ಣ ಮಾಹಿತಿಗಳನ್ನು ನೀಡಬಲ್ಲುದು ಎಂಬುದಕ್ಕೆ ಇದೊಂದು ಉತ್ತಮ ಉದಾಹರಣೆ.

ಕನ್ನಡ ನಾಡಿನ ವಾಣಿಜ್ಯ-ವ್ಯಾಪಾರಗಳ ವಿವಿಧ ಮುಖಗಳನ್ನು ತೋರಿಸುವ ಶಾಸನಗಳು ಅಪಾರ. ಆದರೂ ಕೂಡ ಪ್ರಾಚೀನ ಕರ್ನಾಟಕದ ವಾಣಿಜ್ಯವನ್ನು ಕುರಿತು ಗ್ರಂಥಗಳನ್ನು ರಚಿಸಿಲ್ಲದೇ ಇರುವುದು ಸೋಜಿಗದ ಸಂಗತಿ. ಆಯಾ ರಾಜವಂಶಗಳ ಇತಿಹಾಸವನ್ನು ಬರೆದಾಗ ಆ ಕಾಲದ ವರ್ತಕರು, ಅವರ ವ್ಯಾಪಾರ ಮುಂತಾದ ಸಂಗತಿಗಳನ್ನು ಕುರಿತು ಒಂದೆರಡು ಪುಟಗಳಲ್ಲಿ ಈ ವಿಷಯವನ್ನು ವಿಶ್ಲೇಷಿಸಿರುವುದು ನಮ್ಮ ಗಮನಕ್ಕೆ ಬರುತ್ತದೆ ಆದರೆ ಕರ್ನಾಟಕದ ವರ್ತಕರನ್ನು ಕುರಿತು ರಚಿಸಲಾದ ಮೊದಲನೆಯ ಗ್ರಂಥ ಇದೆಂದು ಹೇಳಬಹುದು ಪ್ರಾಚೀನ ಕಾಲದಿಂದ ಹಿಡಿದು ವಿಜಯನಗರದವರೆಗಿನ ವರ್ತಕರ ಇತಿಹಾಸವನ್ನು ಶಾಸನಗಳ ಮೂಲಕ ನೋಡುವ ಪ್ರಯತ್ನವನ್ನು ಲೇಖಕರು ಚೆನ್ನಾಗಿ ನೆರವೇರಿಸಿದ್ದಾರೆ.

ಈ ಗ್ರಂಥದಲ್ಲಿ ಆರು ಅಧ್ಯಾಯಗಳಿವೆ. ಮೊದಲನೆಯ ಅಧ್ಯಾಯದಲ್ಲಿ ಅಧ್ಯಯನದ ಮಹತ್ವ, ಸ್ವರೂಪ, ವೃತ್ತಿ ಪ್ರಕಾರಗಳು ಮುಂತಾದ ವಿಷಯಗಳನ್ನು ಪೀಠಿಕೆಯ ರೂಪದಲ್ಲಿ ಚರ್ಚಿಸಲಾಗಿದೆ. ಎರಡನೆಯ ಅಧ್ಯಾಯದಲ್ಲಿ ವರ್ತಕ ಪ್ರಕಾರಗಳನ್ನು ಅಧ್ಯಯನಮಾಡಲಾಗಿದೆ. ವಿನಿಮಯ ವರ್ತಕರು ಕೇವಲ ವ್ಯಾಪಾರವನ್ನು ಮಾಡುವ ಶುದ್ಧ ವರ್ತಕರು. ಅಯ್ಯಾವೊಳೆಯ ಐನೂರ್ವರು, ಗವರೆ, ಸೆಟ್ಟಿಗುತ್ತ, ನಕರ ಎಂಬ ವಿವಿಧ ರೀತಿಯ ವರ್ತಕರನ್ನು ಇಲ್ಲಿ ಚರ್ಚಿಸಲಾಗಿದೆ. ಮೂರನೆಯ ಅಧ್ಯಾಯದಲ್ಲಿ ವರ್ತಕ ಸಂಘಗಳ ವಿಷಯ ಪ್ರಸ್ತಾಪಿತವಾಗಿದೆ. ವಿನಿಮಯ ಸಂಘ, ಉತ್ಪಾದಕ-ವಿನಿಮಯ ಸಂಘ ಎಂದು ವಿಭಾಗಿಸಿ ಈ ಸಂಘಗಳ ಸ್ವರೂಪ, ಕಾರ್ಯ,

ಪ್ರಾಚೀನತೆ ಸಂಬಂಧ ಮುಂತಾದ ವಿಷಯಗಳನ್ನು ಇಲ್ಲಿ ವಿವೇಚಿಸಲಾಗಿದೆ. ಅನಂತರದ ಅಧ್ಯಾಯದಲ್ಲಿ ವರ್ತಕರ ವ್ಯಾಪಾರ ಸ್ವರೂಪ ಹಾಗೂ ಅಧಿಕಾರ ಸ್ವರೂಪವನ್ನು ಗುರುತಿಸಲಾಗಿದೆ. ಸಂತೆ, ಅಂಗಡಿ, ಪೇಟೆ, ಪಟ್ಟಣ, ವ್ಯಾಪಾರ ಎಂಬ ವಿಭಾಗಗಳನ್ನು ಇಲ್ಲಿ ಮಾಡಿಕೊಳ್ಳಲಾಗಿದೆ. ಇವರು ಉಪಯೋಗಿಸುತ್ತಿದ್ದ ತೂಕ, ಅಳತೆ, ನಾಣ್ಯ ಮುಂತಾದವುಗಳ ಕೋಷ್ಟಕವನ್ನೂ ಇಲ್ಲಿ ಕೊಡಲಾಗಿದೆ. ಆದರೆ ವರ್ತಕರ ಸಂಘಗಳಿಗೆ ನಾಣ್ಯಗಳನ್ನು ಟಂಕಿಸುವ ಹಕ್ಕಿನ ವಿಷಯವನ್ನು ಚರ್ಚಿಸಿಲ್ಲ. ವರ್ತಕರ ಅಧಿಕಾರ ಸ್ವರೂಪದ ಅಡಿಯಲ್ಲಿ ಪಟ್ಟಣಸ್ವಾಮಿ, ಮಂಡಸ್ವಾಮಿ, ನಾಡಸ್ವಾಮಿ ಮುಂತಾದ ಅಧಿಕಾರಿಗಳ ವಿಷಯವೂ ಇದೆ. ಐದನೆಯ ಅಧ್ಯಾಯದಲ್ಲಿ ವರ್ತಕರ ಸಾಮಾಜಿಕ ಹಾಗೂ ಧಾರ್ಮಿಕ ಜೀವನದ ವಿಶ್ಲೇಷಣೆ ಇದೆ. ಆರನೆಯ ಅಧ್ಯಾಯದಲ್ಲಿ ಸಮಾರೋಪವಿದೆ. ಒಂದನೆಯ ಅನುಬಂಧದಲ್ಲಿ ಕೊಟ್ಟಿರುವ ಪದಸೂಚಿ ಬಹು ಉಪಯುಕ್ತವಾಗಿದೆ. ಗ್ರಂಥದ ಪ್ರಾರಂಭದಲ್ಲಿ ಡಾ. ಎಂ. ಎಂ. ಕಲಬುರ್ಗಿಯವರು ವಿಚಾರಪೂರಿತವಾದ ಮುನ್ನುಡಿಯನ್ನು ಬರೆದಿದ್ದಾರೆ. ಮುದ್ರಣ ಚೆನ್ನಾಗಿದೆ. ಈ ಗ್ರಂಥವನ್ನು ಕರ್ನಾಟಕ ಇತಿಹಾಸದ ಎಲ್ಲ ವಿದ್ಯಾರ್ಥಿಗಳೂ ಸ್ವಾಗತಿಸ ಬೇಕಾದ ಗ್ರಂಥ. ಡಾ. ಬಿ. ಆರ್. ಹಿರೇಮಠ ಹಾಗೂ ಕರ್ನಾಟಕ ವಿಶ್ವವಿದ್ಯಾಲಯವನ್ನು ಈ ಒಳ್ಳೆಯ ಗ್ರಂಥಕ್ಕಾಗಿ ಅಭಿನಂದಿಸಬೇಕು.

ಡಾ. ಎ. ವಿ. ನರಸಿಂಹಮೂರ್ತಿ

ಕೆ.ಸಂ. ೨೮೨೨೫—ಎಂಯುಪಿಎಂ—೩.೨೫ ಪ್ರತಿಗಳು—೮-೭-೮೭

ಮಾನವಿಕ ಕರ್ಣಾಟಕ

ವಿಷಯ ಸೂಚಿಕೆ

ಸಂಪುಟ ೧೬

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೮೫–೮೬

ವಿಷಯ ಸೂಚಿ

ಲೇಖನಗಳು

ಪುಸ್ತಕ ವಿಮರ್ಶೆ

ಲೇಖಕ ಸೂಚಿ

ರಿಜಿಸ್ಟ್ರೇಷನ್ ಆಫ್ ನ್ಯೂಸ್‌ಪೇಪರ್ಸ್ (ಸೆಂಟ್ರಲ್) 1956ರ 8ನೇ ನಿಯಮದ 4ನೇ ಫಾರಂಗೆ ಸಂಬಂಧಿಸಿದಂತೆ 'ಮಾನವಿಕ ಕರ್ನಾಟಕ' ತ್ರೈಮಾಸಿಕ ಪತ್ರಿಕೆಯ ಸ್ವಾಮಿತ್ವ ಮತ್ತು ಇತರ ವಿಷಯಗಳ ಬಾಬ್ತು ವಿವರ :

1.	ಪ್ರಕಾಶನ ಸ್ಥಳ	ಪ್ರಸಾರಾಂಗ, ಮಾನಸಗಂಗೋತ್ರಿ ಮೈಸೂರು–6
2.	ನಿಯತಕಾಲಿಕತೆ	ತ್ರೈಮಾಸಿಕ
3.	ಮುದ್ರಕರು	ಎನ್. ಹನುಮಯ್ಯ ನಿರ್ದೇಶಕ, ವಿಶ್ವವಿದ್ಯಾನಿಲಯ ಮುದ್ರಣಾಲಯ, ಮಾನಸಗಂಗೋತ್ರಿ ಮೈಸೂರು–6
	ರಾಷ್ಟ್ರೀಯತೆ	ಭಾರತೀಯ
	ವಿಳಾಸ	ವಿಶ್ವವಿದ್ಯಾನಿಲಯ ಮುದ್ರಣಾಲಯ ಮಾನಸಗಂಗೋತ್ರಿ, ಮೈಸೂರು-6
4.	ಪ್ರಕಾಶಕರ ಹೆಸರು	ಕೆ.ಟಿ. ವೀರಪ್ಪ, ನಿರ್ದೇಶಕ, ಪ್ರಸಾರಾಂಗ ಮಾನಸಗಂಗೋತ್ರಿ, ಮೈಸೂರು–6
	ರಾಷ್ಟ್ರೀಯತೆ	ಭಾರತೀಯ
	ವಿಳಾಸ	ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು-6
5.	ಸಂಪಾದಕರ ಹೆಸರು	ಡಾ॥ ಬಿ. ಕೆ. ಗುರುರಾಜರಾವ್
	ರಾಷ್ಟ್ರೀಯತೆ	ಭಾರತೀಯ
	ವಿಳಾಸ	ಮೈಸೂರು ವಿಶ್ವವಿದ್ಯಾನಿಲಯ ಮೈಸೂರು–6
6.	ಪತ್ರಿಕಾಸ್ವಾಮಿತ್ವ ಮತ್ತು ವಿಳಾಸ, ಬಂಡವಾಳದಲ್ಲಿ ನೂರಕ್ಕೆ 1ಕ್ಕಿಂತ ಹೆಚ್ಚು ಹಣ ಹಾಕಿರುವವರ ವಿವರ	ಮೈಸೂರು ವಿಶ್ವವಿದ್ಯಾನಿಲಯ ಮೈಸೂರು–5

ಕೆ.ಟಿ. ವೀರಪ್ಪನಾದ ನಾನು ಮೇಲಿನ ವಿವರಗಳಲ್ಲಿಯ ಎಲ್ಲ ವಿಷಯಗಳೂ ನನಗೆ ತಿಳಿದ ಮಟ್ಟಿಗೆ ಸತ್ಯವೆಂದು ಈ ಮೂಲಕ ಘೋಷಿಸುತ್ತೇನೆ.

(ಸಹಿ) ಕೆ. ಟಿ. ವೀರಪ್ಪ
ನಿರ್ದೇಶಕ ಹಾಗೂ ಪ್ರಕಾಶಕ, ಪ್ರಸಾರಾಂಗ, ಮೈಸೂರು–6.

ಮೈಸೂರು ವಿಶ್ವವಿದ್ಯಾನಿಲಯದ ತ್ರೈಮಾಸಿಕಗಳು

★ ಪ್ರಬುದ್ಧ ಕರ್ಣಾಟಕ

★ ಮಾನವಿಕ ಕರ್ಣಾಟಕ

★ ವಿಜ್ಞಾನ ಕರ್ಣಾಟಕ

ವಾರ್ಷಿಕ ಚಂದಾ

(ಪ್ರತಿಯೊಂದಕ್ಕೂ ಅಂಚೆ ವೆಚ್ಚ ಸೇರಿ)

ವಿದ್ಯಾರ್ಥಿಗಳಿಗೆ	....	ಐದು ರೂಪಾಯಿ
ಇತರರಿಗೆ	....	ಹತ್ತು ರೂಪಾಯಿ
ಸಂಸ್ಥೆಗಳಿಗೆ	....	ಹದಿನೈದು ರೂಪಾಯಿ

(ಆಜೀವ ಸದಸ್ಯತ್ವ: ನೂರು ರೂಪಾಯಿಗಳು)
(ಪ್ರತಿಯೊಂದಕ್ಕೂ)

ಡೈರೆಕ್ಟರ್
'ಪ್ರಸಾರಾಂಗ'
ಮಾನಸಗಂಗೋತ್ರಿ, ಮೈಸೂರು-೫೭೦ ೦೦೬